ಎ.ನ.ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯ
-ತೌಲನಿಕ ಅಧ್ಯಯನ

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ

ಮಹಾಪ್ರಬಂಧ

ಸಂಶೋಧಕರು

ಶಿವಕುಮಾರ್ ಎಂ. ಕೆ.

ನೋಂದಣಿ ಸಂಖ್ಯೆ: 141101020010

ಮಾರ್ಗದರ್ಶಕರು

ಡಾ. ನಿಕೇತನ

ಸಹ ಪ್ರಾಧ್ಯಾಪಕರು

ಕನ್ನಡ ವಿಭಾಗ

ಸರಕಾರಿ ಪ್ರಥಮ ದರ್ಜೆ ಕಾಲೇಜು

ಹಿರಿಯಡ್ಕ, ಉಡುಪಿ

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ-೫೮೩ ೨೭೬

ಮಾನ್ಯತಾ ಕೇಂದ್ರ

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು

೨೦೧೮

ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯ – ತೌಲನಿಕ ಅಧ್ಯಯನ

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್. ಡಿ. ಪದವಿಗಾಗಿ ಸಲ್ಲಿಸಿದ
ಮಹಾಪ್ರಬಂಧ

ಸಂಶೋಧಕರು
ಶಿವಕುಮಾರ್ ಎಂ. ಕೆ.
ನೋಂದಣಿ ಸಂಖ್ಯೆ: 141101020010

ಮಾರ್ಗದರ್ಶಕರು
ಡಾ. ನಿಕೇತನ
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರಕಾರಿ ಪ್ರಥಮ ದರ್ಜೆ ಕಾಲೇಜು
ಹಿರಿಯಡ್ಕ, ಉಡುಪಿ

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ – ೫೮೩ ೨೭೬.

ಮಾನ್ಯತಾ ಕೇಂದ್ರ
ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

೨೦೧೮

ಸಂಶೋಧಕರ ಘೋಷಣಾ ಪತ್ರ

ಡಾ. ನಿಕೇತನ ಅವರ ಮಾರ್ಗದರ್ಶನದಲ್ಲಿ **ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯ – ತೌಲನಿಕ ಅಧ್ಯಯನ** ಎಂಬ ಸಂಶೋಧನಾ ಮಹಾಪ್ರಬಂಧವನ್ನು ಪಿಎಚ್. ಡಿ. ಪದವಿಗಾಗಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿ ಅಥವಾ ಡಿಪ್ಲೊಮಾ ಪದವಿಗಳಿಗಾಗಿ ಬಳಕೆಯಾಗಿರುವುದಿಲ್ಲ. ಇದರ ಯಾವುದೇ ಭಾಗವನ್ನು ಎಲ್ಲಿಯೂ ಪ್ರಕಟಗೊಳಿಸಿಲ್ಲ. ಇದು ನನ್ನ ಸ್ವತಂತ್ರವಾದ ಸಂಶೋಧನಾ ಅಧ್ಯಯನವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ: ಮಂಗಳೂರು

ದಿನಾಂಕ: ೨೨/೦೮/೨೦೧೮

ಸಂಶೋಧಕರು

(ಶಿವಕುಮಾರ್ ಎಂ. ಕೆ.)
ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

ಮಾರ್ಗದರ್ಶಕರ ದೃಢೀಕರಣ ಪತ್ರ

ಶಿವಕುಮಾರ್ ಎಂ. ಕೆ. ಅವರು ನನ್ನ ಮಾರ್ಗದರ್ಶನದಲ್ಲಿ **ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯ – ತೌಲನಿಕ ಅಧ್ಯಯನ** ಎಂಬ ಸಂಶೋಧನಾ ಮಹಾಪ್ರಬಂಧವನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್. ಡಿ. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿ ಅಥವಾ ಡಿಪ್ಲೊಮಾ ಇಲ್ಲವೇ ಪ್ರಕಟಣೆಗಾಗಿ ಸಲ್ಲಿಸಲ್ಪಟ್ಟಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ಉಡುಪಿ

ದಿನಾಂಕ: 21/08/2018

ಮಾರ್ಗದರ್ಶಕರು

(ಡಾ. ನಿಕೇತನ)
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರಕಾರಿ ಪ್ರಥಮ ದರ್ಜೆ ಕಾಲೇಜು
ಹಿರಿಯಡ್ಕ, ಉಡುಪಿ

ಪರಿವಿಡಿ

ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯ – ತೌಲನಿಕ ಅಧ್ಯಯನ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಪ್ರಸ್ತಾವನೆ

ಮನುಷ್ಯ ಬುದ್ಧಿವಂತ ಪ್ರಾಣಿ, ಅವನ ಬುದ್ಧಿವಂತಿಕೆಯಿಂದಲೇ ಅನೇಕ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಸಾಮಾಜಿಕ ಜೀವಿಯಾಗಿರಲು ಸಾಧ್ಯವಾಯಿತು. ಆತನು ನಡೆಸುವ ಬದುಕು ಬುದ್ಧಿವಂತಿಕೆಯಿಂದ ಕೂಡಿರುವುದರಿಂದ ಮತ್ತು ತನ್ನ ವೈಚಾರಿಕ ಪ್ರಜ್ಞೆಯ ಮೇಲೆ ಬಾಳನ್ನು ನಡೆಸ ಬೇಕಾಗಿರುವುದರಿಂದ ಆತನಲ್ಲಿ ವೈಚಾರಿಕತೆ ಮೂಡುವುದು ಸಹಜ. ಈ ವೈಚಾರಿಕತೆಯಿಂದಲೇ ಮಾನವನು ಇತರ ಪ್ರಾಣಿಗಳಿಗಿಂತ ಭಿನ್ನವಾಗಿದ್ದಾನೆ. ವಿಚಾರವೆಂದರೆ ವೈಜ್ಞಾನಿಕ ತಳಹದಿಯ ಮೇಲೆ ವ್ಯಾಖ್ಯಾನಿಸುವುದಲ್ಲ, ಪ್ರಾಚೀನ ಕಾಲದಿಂದಲೂ ಸಾಹಿತ್ಯ, ಕಲೆ ಮುಂತಾದ ಅನೇಕ ಬಗೆಯ ಪುರಾಣ ಕಾವ್ಯಗಳಲ್ಲಿ ಈ ಬಗೆಯ ವೈಚಾರಿಕ ಮನೋಭಾವ ಮೂಡಿದೆ. ಅದರಂತೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ವೈವಿಧ್ಯಮಯ ಸಾಹಿತ್ಯ ಕೃತಿಗಳು ಸೃಷ್ಟಿಯಾಗುತ್ತಿವೆ. ಹೊಸ ಹೊಸ ಸಾಹಿತ್ಯ ಪ್ರಕಾರಗಳು ರೂಪುಗೊಳ್ಳುತ್ತಿವೆ. ಅದರಲ್ಲಿ ವಿಚಾರ ಸಾಹಿತ್ಯವು ಕೂಡ ಒಂದು.

ವಿಚಾರ ಸಾಹಿತ್ಯವೆಂಬುದಕ್ಕೆ ಇಂಥದೆ ಎಂಬ ಸಿದ್ಧ ವಸ್ತುವಿಲ್ಲ, ಸರಿಯಾಗಿ ಹೇಳಲು ವ್ಯಾಖ್ಯಾನವಿಲ್ಲ. ಇದರ ವಿಷಯ ವ್ಯಾಪ್ತಿ ಹಿರಿದಾದುದು, ಆದ್ದರಿಂದ ಈ ವಿಚಾರ ಸಾಹಿತ್ಯವೆಂಬುದು ಕನ್ನಡದ ಬುದ್ಧಿಜೀವಿಗಳು ಆರಿಸಿಕೊಂಡ ಅಭಿವ್ಯಕ್ತಿಯಾಗಿದೆ ಎನ್ನಬಹುದು. ಸಾಹಿತ್ಯ ಮನುಷ್ಯನ ಜೀವನವನ್ನು ಪ್ರತಿನಿಧಿಸುತ್ತದೆ. ಸಮಾಜದಲ್ಲಿರುವ ಮನುಷ್ಯ ಸಾಹಿತ್ಯದ ಕೇಂದ್ರ ಬಿಂದು. ಸಾಹಿತ್ಯ ಸಮಾಜದ ಕನ್ನಡಿಯೂ ಆಗಿದೆ. ಈ ಕಾರಣದಿಂದ ಸಮಾಜದಲ್ಲಿನ ಮನುಷ್ಯ ತಾನು ಪಡೆದಂಥ ಅನುಭವ, ಕಲ್ಪನೆ, ಜ್ಞಾನ ಮೊದಲಾದವುಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸುತ್ತಾನೆ. ಆ ಮೂಲಕ ಬರಹಗಾರ ತನ್ನ ವೈಚಾರಿಕ ಅಥವಾ ವಿಚಾರದ ನಿಲುವಿನಿಂದಾಗಿ ಹಾಗೂ ಬರವಣಿಗೆಯಿಂದ ಇದೇ ಸಮಾಜಕ್ಕೆ ವೈಚಾರಿಕ ಮನೋಭಾವನೆಯನ್ನು ಬೆಳೆಸಲು ಪ್ರಯತ್ನಿಸುತ್ತಾನೆ.

ಈ ವೈಚಾರಿಕ ಭಾವನೆ ಬೆಳೆದು ಸಮಾಜದ ಸಮಸ್ಯೆಗಳನ್ನು ಪರಿಹರಿಸಲು ಪ್ರೇರೇಪಿಸುತ್ತದೆ. ವಿಚಾರ ಸಾಹಿತ್ಯಕ್ಕೆ ತನ್ನದೇಯಾದ ಅನನ್ಯತೆಯಿದೆ. ಅದ್ದರಿಂದಲೇ ಇದರ ವಿಸ್ತಾರವು ಬಹುದೊಡ್ಡದು. ಇಲ್ಲಿ ವಿಷಯವನ್ನು ನೇರ ಮತ್ತು ಸುಲಭವಾಗಿ ಸಂವಹನ ಮಾಡಲು ಸಾಧ್ಯ. ಇತ್ತೀಚಿನ ದಿನಗಳಲ್ಲಿ ಕಾವ್ಯಾತ್ಮಕವಾಗಿ ಇರುವ ಸಾಹಿತ್ಯಕ್ಕಿಂತ ನೇರವಾಗಿ ಮಾತನಾಡುವ ವಿಚಾರ ಸಾಹಿತ್ಯವು ಎಲ್ಲರಿಗೂ ಅರ್ಥವಾಗುವಂತದ್ದು ಆಗಿದೆ.

ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಘಟ್ಟಗಳಲ್ಲಿ ಪ್ರಗತಿಶೀಲ ಸಾಹಿತ್ಯವು ಕೂಡ ಪ್ರಮುಖವಾದ ಘಟ್ಟವಾಗಿದೆ. ೧೯೪೩ ರಿಂದ ೧೯೪೭ರವರೆಗಿನ ಕೇವಲ ಐದಾರು ವರ್ಷಗಳಲ್ಲಿ ಕಾಣಿಸಿಕೊಂಡು ಸಮಾಜದಲ್ಲಿನ ಎಲ್ಲ ವರ್ಗದ ಓದುಗರ ಗಮನವನ್ನು ಸೆಳೆದ ಸಾಹಿತ್ಯ ಪಂಥವಾಗಿದೆ. ಹೊಸಗನ್ನಡ ಸಾಹಿತ್ಯದ ಬೆಳವಣಿಗೆಗೆ ಅದರಲ್ಲಿಯೂ ಕಥೆ, ಕಾದಂಬರಿ ಪ್ರಕಾರ ಬೆಳೆಯಲು ತನ್ನದೆಯಾದ ಕೊಡುಗೆಯನ್ನು ನೀಡಿದೆ, 'ಕಲೆಗಾಗಿ ಕಲೆಯಲ್ಲ, ಮಾನವನ ಬದುಕಿಗಾಗಿ ಕಲೆ' ಎಂಬ ತತ್ವವನ್ನು ಪಾಲಿಸಿಕೊಂಡು ಬಂದು, ಸಮಾಜದಲ್ಲಿನ ಅಸ್ಪೃಶ್ಯತೆ, ದಬ್ಬಾಳಿಕೆ,

ವರ್ಗತಾರತಮ್ಯ, ಕಾರ್ಮಿಕ ವರ್ಗದವರ ಬದುಕಿನ ಬವಣೆಗಳು ಮೊದಲಾದವುಗಳನ್ನು ತಮ್ಮ ಸೃಜನಶೀಲ ಬರವಣಿಗೆಯಲ್ಲಿ ದಾಖಲಿಸಿದರು. ಈ ಪ್ರಗತಿಶೀಲ ಚಳುವಳಿಯಲ್ಲಿ ಪ್ರಮುಖವಾಗಿ ಕಾಣಿಸಿಕೊಂಡ ಲೇಖಕರೆಂದರೆ ಅ.ನ.ಕೃ. ಮತ್ತು ನಿರಂಜನ. ಕಾದಂಬರಿಗಳ ಸಾರ್ವಭೌಮನೆಂದು ಅರಕಲಗೂಡು ನರಸಿಂಗ ರಾವ್ ಕೃಷ್ಣರಾಯರನ್ನು ಕರೆಯವರು. ಇವರು ಅ.ನ.ಕೃ. ಹೆಸರಿನಿಂದಲೇ ಚಿರಪರಿಚಿತರು. ಈ ನಿಬಂಧದಲ್ಲಿ ಇವರನ್ನು 'ಅನಕೃ' ಎಂಬ ಹೆಸರಿನಿಂದಲೇ ಸಂಬೋಧಿಸಲಾಗಿದೆ. ಅದರಂತೆ ಕುಳಕುಂದ ಶಿವರಾಯ ಎಂಬ ಹೆಸರನ್ನು ಪಡೆದಿದ್ದು ಕಾಲಕ್ರಮೇಣ 'ನಿರಂಜನ' ಎಂಬ ಹೆಸರು ಪಡೆದು ಪ್ರಗತಿಶೀಲ ಸಾಹಿತ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರಾಗಿದ್ದಾರೆ. ನಿರಂಜನ ಎಂಬ ಶಬ್ದಕ್ಕೆ ದೇವರು ಮತ್ತು ನಿಷ್ಕಳಂಕ ಎನ್ನುವ ಅರ್ಥವಿದೆ. ಅದರೆ ಮಾರ್ಕ್ಸ್‌ವಾದಿಯಾಗಿದ್ದ ನಿರಂಜನರಿಗೆ ದೇವರ ಮೇಲೆ ನಂಬಿಕೆಯಿಲ್ಲದೆ ಇದ್ದರು ಇನ್ನೊಬ್ಬರ ನಂಬಿಕೆಗಳನ್ನು ಗೌರವಿಸುವ ಮತ್ತು ನಿಷ್ಕಳಂಕ ದೃಷ್ಟಿಯಲ್ಲಿ ಜೀವನವನ್ನು ನಡೆಸುವ ದೃಷ್ಟಿಕೋನ ಅವರದಾಗಿತ್ತು.

ಕನ್ನಡದ ಪ್ರಗತಿಶೀಲ ಪಂಥದ ಬರಹಗಾರರಾದ ಅ.ನ.ಕೃ. ಮತ್ತು ನಿರಂಜನರವರು ತಮ್ಮ ಅನೇಕ ವಿಚಾರಗಳ ಬಗ್ಗೆ ತಮ್ಮ ವಿಚಾರ ಸಾಹಿತ್ಯದ ಮೂಲಕ ಸಮಾಜ, ಸಂಸ್ಕೃತಿ, ಸಮುದಾಯದ ಭವಿಷ್ಯವನ್ನು ರೂಪಿಸಲು ಆಧುನಿಕ ಯುಗದ ಸವಾಲುಗಳಿಗೆ ಪ್ರತಿಕ್ರಿಯಿಸುತ್ತಾ ಸಮಾಜದ ಬೆಳವಣಿಗೆಗೆ ಸಾಹಿತ್ಯ ರಚನೆ ಸಹಕಾರಿಯಾಗುತ್ತದೆ ಎಂಬುದನ್ನು ದಾಖಲಿಸಿದ್ದಾರೆ. ಯಾವುದೇ ಭಾಷೆಯ ಸೃಜನ ಶೀಲ ಸಾಹಿತ್ಯದ ಸೃಷ್ಟಿಯ ಜೊತೆಗೆ ಸೃಜನೇತರ ಬರವಣಿಗೆಗಳು ಕೂಡಾ ಬೆಳೆದು ಬಂದಿವೆ. ಅದರಲ್ಲಿ ಈ ವಿಚಾರ ಸಾಹಿತ್ಯವು ಒಂದಾಗಿದೆ. ವಿಚಾರ ಸಾಹಿತ್ಯ ಅನೇಕ ವಿಷಯಗಳನ್ನು ಒಳಗೊಂಡಿದೆ. ಸಮಾಜದ ವಾಸ್ತವತೆಯನ್ನು ಈ ವೈಚಾರಿಕ ಬರಹಗಳು ತೆರೆದಿಡುತ್ತವೆ. ಸಮಾಜದ ಮತ್ತು ಸಮುದಾಯದ ಸಂಸ್ಕೃತಿಯ ನಡವಳಿಕೆಗಳನ್ನು, ಅವುಗಳ ಆಧಾರದ ಮೇಲೆ ಕಟ್ಟಿಕೊಂಡ ಜೀವನ ಮೌಲ್ಯಗಳನ್ನು ಪ್ರತಿಪಾದಿಸುವ ದೃಷ್ಟಿಕೋನವನ್ನು ತಿಳಿಯುವುದು ಇದರಿಂದ ಸಾಧ್ಯವಾಗುತ್ತದೆ.

ಎರಡು ಕೃತಿಗಳನ್ನು ಹೋಲಿಸಿ ಅವುಗಳ ಮೌಲ್ಯಮಾಪನ ಮಾಡುವುದನ್ನು ತೌಲನಿಕ ಅಧ್ಯಯನ ಎನ್ನಬಹುದು. ಟಿ. ಎಸ್. ಎಲಿಯಟ್ ಹೇಳುವಂತೆ 'ತುಲನೆ ಮತ್ತು ವಿಶೇಷಣೆ' ವಿಮರ್ಶಕನಿಗೆ ಎರಡು ಸಾಧನಗಳಾಗಿವೆ. ಆದ್ದರಿಂದ ಇಂಥ ಅಧ್ಯಯನದಿಂದ ಕೃತಿಯ ಸತ್ವವನ್ನು ನಾವು ಹೆಚ್ಚು ಹೆಚ್ಚು ಗ್ರಹಿಸಬಹುದಾಗಿರುತ್ತದೆ. ಎಲ್ಲಾ ಸೃಜನಶೀಲ ಕೃತಿಗಳು ಮತ್ತು ಸೃಜನೇತರ ಬರಹಗಳು ಬಂದರ್ಥದಲ್ಲಿ ವಿಶಿಷ್ಟವಾದವುಗಳೇ, ಆದರೆ ಯಾವುದು ಯಾವುದಕ್ಕಿಂತ ಹೆಚ್ಚು ಎಂಬ ಮಾತಂತೂ ಇದ್ದೆ ಇರುತ್ತದೆ. ಜೊತೆಗೆ ಅದರ ಸಾಮ್ಯತೆ ಮತ್ತು ಭಿನ್ನತೆಗಳೇನು ಎಂಬ ನಿರ್ಣಯಕ್ಕೆ ಬರುವ ಒಂದು ಅಧ್ಯಯನ ಪ್ರಕ್ರಿಯೆಯನ್ನು ನಾವು ತೌಲನಿಕ ಅಧ್ಯಯನ ಎಂದು ಕರೆಯಬಹುದು. ಆದರೆ ತುಲನೆಯೊಂದಿಗೆ ವರ್ಣನೆ, ಚಿತ್ರಣ, ವ್ಯಾಖ್ಯಾನ, ನಿರೂಪಣೆ, ಇವೆಲ್ಲದರ ಜೊತೆಗೆ ಮಾಹಿತಿ ಸಂಗ್ರಹ, ಸೋಸುವಿಕೆ, ದಾಖಲೆಗಳ ವ್ಯಾಖ್ಯಾನ ಇವುಗಳಿಗೆ ಸಾಹಿತ್ಯದ ಮೂಲ ನಿಯಮಗಳು ಇಲ್ಲಿಗೆ ಅನ್ವಯಿಸುತ್ತವೆ. ಆದರೆ ಎರಡು ಸಾಹಿತ್ಯಗಳು ಅಥವಾ ಸಾಹಿತಿಗಳ ಸಂದರ್ಭ ನೆಲೆಯಲ್ಲಿ ಈ ಅಧ್ಯಯನವನ್ನು ಕೈಗೊಳ್ಳಬಹುದು.

ಸಾಹಿತ್ಯ ಸಮಾಜವನ್ನು ಪುನರ್ ಸೃಷ್ಟಿಸುತ್ತದೆ. ಅದರಂತೆ ವಿಚಾರ ಸಾಹಿತ್ಯವು ಕೂಡಾ. ವಿಚಾರ ಸಾಹಿತ್ಯದ ಮೂಲಕ ಬರಹಗಾರ ಸಮಾಜದ ಸಮಸ್ಯೆಗಳಿಗೆ ಹೇಗೆ ಪ್ರತಿಕ್ರಿಯಿಸುತ್ತಾನೆ. ಹೇಗೆ

ಸಮಾಜದ ಸಮಸ್ಯೆಗಳಿಗೆ ಪರಿಹಾರಗಳನ್ನು, ವಿವಿಧ ರೀತಿಯ ಸಲಹೆಗಳನ್ನು ಸೂಚಿಸಬಹುದು, ಅದು ಲೇಖಕನ ಅಭಿವ್ಯಕ್ತಿಯ ಮೇಲೆ ಅವಲಂಬಿತವಾಗಿರುತ್ತದೆ. ಆದ್ದರಿಂದ ಕನ್ನಡದ ಪ್ರಗತಿಶೀಲ ಬರಹಗಾರರಾದ ಅ.ನ.ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯದ ಸ್ವರೂಪ, ತಾತ್ವಿಕತೆ ಮತ್ತು ನೆಲೆಗಳನ್ನು ತೌಲನಿಕವಾಗಿ ಶೋಧಿಸುವ ಮತ್ತು ವಿಶ್ಲೇಷಿಸುವ ಉದ್ದೇಶದೊಂದಿಗೆ ಪ್ರಸ್ತುತ ಅಧ್ಯಯನಕ್ಕೆ ತೊಡಗಲಾಗಿದೆ.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅ. ನ. ಕೃ. ಮತ್ತು ನಿರಂಜನರ ವಿಚಾರ ಸಾಹಿತ್ಯ ಕೃತಿಗಳನ್ನು ಇಟ್ಟುಕೊಂಡು ತೌಲನಿಕ ಅಧ್ಯಯನದ ಮೂಲಕ ಇವರಿಬ್ಬರ ವಿಚಾರಸಾಹಿತ್ಯದಲ್ಲಿ ವ್ಯಕ್ತವಾಗಿರುವ ನಿಲುವುಗಳನ್ನು ಗುರುತಿಸುವುದು ಮತ್ತು ವಿವೇಚಿಸುವುದು ಪ್ರಸ್ತುತ ಅಧ್ಯಯನದ ಪ್ರಧಾನ ಉದ್ದೇಶವಾಗಿದೆ. ಈ ಉದ್ದೇಶಕ್ಕೆ ಪೂರಕವಾಗಿ ಈ ಕೆಳಗಿನ ಸಂಶೋಧನಾ ಪ್ರಶ್ನೆಗಳನ್ನು ರೂಪಿಸಿಕೊಳ್ಳಲಾಗಿದೆ.

- ಪ್ರಗತಿಶೀಲ ಪಂಥದ ವಿಚಾರಸಾಹಿತ್ಯದ ನಿಲುವೇನು? ಮತ್ತು ಅದರ ಸ್ವರೂಪಗಳೇನು?
- ಅನಕೃ ಮತ್ತು ನಿರಂಜನರ ವಿಚಾರ ಸಾಹಿತ್ಯದ ತಾತ್ವಿಕತೆಯೇನು? ಮತ್ತು ಅದರ ಸ್ವರೂಪಗಳೇನು?
- ಅನಕೃ ಮತ್ತು ನಿರಂಜನರವರ ವಿಚಾರ ಸಾಹಿತ್ಯ ಏನನ್ನು ಧ್ವನಿಸುತ್ತದೆ?
- ಅನಕೃ ಮತ್ತು ನಿರಂಜನರವರ ವಿಚಾರ ಸಾಹಿತ್ಯದ ಸಾಮ್ಯತೆಗಳೇನು? ಭಿನ್ನತೆಗಳೇನು?

ವಿಚಾರ ಸಾಹಿತ್ಯ ಮನುಷ್ಯನ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವನ್ನು ನೀಡುತ್ತದೆಯೇ, ಇಲ್ಲವೇ? ಎಂಬುದನ್ನು ಹಾಗೂ ಸಾಹಿತ್ಯ ಮತ್ತು ಸಮಾಜ, ಕಲೆ ಮತ್ತು ಸಂಸ್ಕೃತಿ, ಕನ್ನಡ ಭಾಷೆ ಮತ್ತು ಏಕೀಕರಣದ ಸಂಬಂಧ ಮತ್ತು ಪರಿಣಾಮಗಳನ್ನು ಅಧ್ಯಯನ ಮಾಡುವ ಉದ್ದೇಶವಿದೆ.

ಪ್ರಸ್ತುತ ನಿಬಂಧವು ನಿರ್ಧಿಷ್ಟವಾಗಿ ಅನಕೃ ಮತ್ತು ನಿರಂಜನರವರ ವಿಚಾರ ಸಾಹಿತ್ಯ ತೌಲನಿಕ ಅಧ್ಯಯನ ಕುರಿತು ಅಧ್ಯಯನವಾಗಿದೆ. ಇತರ ಪ್ರಗತಿಶೀಲ ಬರಹಗಾರರು ಹಲವು ವಿಚಾರಗಳನ್ನು ತಮ್ಮ ವಿಚಾರ ಸಾಹಿತ್ಯದಲ್ಲಿ ಪ್ರತಿಪಾದಿಸಿದ್ದಾರೆ. ಪ್ರಾಚೀನ ಕಾಲದಿಂದಲೂ ಸಾಹಿತ್ಯ ಮುಂತಾದ ಅನೇಕ ಬಗೆಯ ಕಾವ್ಯಗಳಲ್ಲಿ ವೈಚಾರಿಕ ಮನೋಭಾವನೆ ಮೂಡಿ ಬಂದಿರುವುದು. ಅದರಂತೆ ಕನ್ನಡ ಸಾಹಿತ್ಯದಲ್ಲಿ ೨೦ನೇ ಶತಮಾನದ ಆರಂಭದಿಂದಲು ವಿಚಾರ ಸಾಹಿತ್ಯ ಬೆಳೆದು ಬಂದಿದೆ. ಈ ವಿಚಾರ ಸಾಹಿತ್ಯದಿಂದ ಕನ್ನಡದ ಓದುಗರ ಅರಿವು ಮತ್ತು ಗ್ರಹಿಕೆಯನ್ನು ವಿಸ್ತರಿಸಿದೆ.

ಅದರಲ್ಲಿ ಮುಖ್ಯವಾಗಿ ಆಧುನಿಕ ಕನ್ನಡ ಸಾಹಿತ್ಯದ ಪಂಥಗಳಲ್ಲಿ ಪ್ರಗತಿಶೀಲ ಕಾಲಘಟ್ಟದಲ್ಲಿ ಅನಕೃ ಮತ್ತು ನಿರಂಜನರವರ ವಿಚಾರ ಸಾಹಿತ್ಯಗಳು ಪ್ರಗತಿಶೀಲ ಪಂಥಕ್ಕೆ ಮತ್ತು ಕನ್ನಡದ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅತ್ಯಂತ ಪ್ರಮುಖವಾಗಿದೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಪ್ರಗತಿಶೀಲ ಪಂಥದ ಬರಹಗಾರರಾದ 'ಅನಕೃ ಮತ್ತು ನಿರಂಜನರವರ ವಿಚಾರ ಸಾಹಿತ್ಯ – ತೌಲನಿಕ ಅಧ್ಯಯನ'ದ ವಿಶ್ಲೇಷಣೆಗೆ ಸೀಮಿತಗೊಳಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಅನಕೃ ರವರು

ಬರೆದಿರುವ ಪ್ರಬಂಧ, ಭಾಷಣ, ವ್ಯಕ್ತಿ ಚಿತ್ರಣಗಳನ್ನು ಮತ್ತು ನಿರಂಜನರವರು ಬರೆದಿರುವ ಪ್ರಬಂಧ ವಿಮರ್ಶೆ, ಅಂಕಣ ಬರಹಗಳು, ರಾಜಕೀಯ ಬರಹಗಳೊಡನೆ ವಿವೇಚಿಸುವುದು ಈ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಇವುಗಳಲ್ಲಿ ಮುಖ್ಯವಾಗಿ ಅನಕೃ ರವರ ಹೊಸಹುಟ್ಟು, ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ, ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ಬಸವಣ್ಣನವರ ಅಮೃತವಾಣಿ, ಸಾಹಿತ್ಯ ಮತ್ತು ಜೀವನ, ನನ್ನನ್ನು ನಾನೇ ಕಂಡೆ, ಪೊರಕೆ, ಸಜೀವ ಸಾಹಿತ್ಯ, ಕನ್ನಡ ದಾರಿ ಮತ್ತು ಅಖಂಡ ಕರ್ನಾಟಕ, ಕರ್ನಾಟಕದ ಕಲಾವಿದರು ಭಾಗ ೧ ಮತ್ತು ಭಾಗ ೨, ಕರ್ನಾಟಕದ ಹಿತ ಚಿಂತನೆ, ನಿಡುಮಾಮಿಡಿ ಸನ್ನಿಧಿಯವರು, ಕನ್ನಡದ ಕುಲರಸಿಕರು, ಸಾಹಿತ್ಯ ಮತ್ತು ಯುಗಧರ್ಮ, ಬಳ್ಳಾರಿಯ ಸಮಸ್ಯೆ ಮತ್ತು ಕರ್ನಾಟಕ ಪ್ರಾಂತ್ಯ, ಸಂಸ್ಕೃತಿಯ ವಿಶ್ವರೂಪ, ಸಮದರ್ಶನ, ಸಾಹಿತ್ಯ ಮತ್ತು ಕಾಮಪ್ರಚೋದನೆ, ನಾಟಕಕಲೆ, ಸಾಹಿತ್ಯ ಸಮಾರಾಧನೆ, ಸಾರ್ಥಕ ಸಾಹಿತ್ಯ, ಚಿತ್ರಕಲೆ, ಕೈಲಾಸಂ, ಕೃತಿಗಳನ್ನು ಮಾತ್ರ ಗಮನಿಸಲಾಗಿದೆ.

ನಿರಂಜನರವರ ವಿಚಾರ ಸಾಹಿತ್ಯದ ಕೃತಿಗಳಿಗೆ ಸಂಬಂಧಿಸಿದಂತೆ ಐದು ನಿಮಿಷ, ಸಾಧನಾ, ಕಾಲಕ್ಷೇಪ, ಪುಷ್ಪಹಾರ, ಹಿಮಾಲಯದ ದಳ್ಳುರಿ, ದಿನಚರಿಯಿಂದ, ರಾಜಧಾನಿಯಿಂದ, ಅಂಕಣ, ಬುದ್ಧಿ ಭಾವ ಬದುಕು, ನಡೆ ಚೆನ್ನ ನುಡಿ ಚೆನ್ನ, ನಿರಂಜನವಾಚಿಕೆ ಪ್ರತಿಧ್ವನಿ ಕೃತಿಯಲ್ಲಿರುವ ಈ ಪುಸ್ತಕ ಓದಿದ್ದೀರಾ? ಕೆಲವು ಲೇಖನಗಳು, ನಾಡಿ: ನಿರಂಜನರವರ ಆಯ್ದು ಪತ್ರಗಳ ಸಂಕಲನ, ಮುಖತಃ ಕೃತಿಗಳನ್ನು ಮಾತ್ರ ಗಮನಿಸಲಾಗಿದೆ. ಪ್ರಗತಿಶೀಲ ಪಂಥದ ಬರಹಗಾರರಾದ ಅನಕೃ ಮತ್ತು ನಿರಂಜನರವರ ವಿಚಾರ ಸಾಹಿತ್ಯವನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗುವುದು, ಸಮಾಜದಲ್ಲಿ ಅನೇಕ ವಿಚಾರಗಳ ಬಗ್ಗೆ ಈ ಬರವಣಿಗೆಗಳು ವಾಸ್ತವ ನೆಲೆಗಟ್ಟಿನಲ್ಲಿ ಉತ್ತರ ಕೂಡುವುದರಿಂದ ನಾಡು ನುಡಿಯ ಚಿಂತನೆ, ಸಾಹಿತ್ಯ ಮತ್ತು ಸಮಾಜ, ಸಂಸ್ಕೃತಿ, ಸಾಮಾಜಿಕ ಬದಲಾವಣೆಗೆ ಸ್ಪಂದನೆಯಾಗುವುದರಿಂದ ಈ ವಿಚಾರ ಸಾಹಿತ್ಯದ ತೌಲನಿಕ ಅಧ್ಯಯನವು ಸಮಾಜದ ಅಧ್ಯಯನಯಾಗುತ್ತದೆ. ಈ ಕಾರಣದಿಂದ 'ಅ.ನ.ಕೃ ಮತ್ತು ನಿರಂಜನರವರ ವಿಚಾರ ಸಾಹಿತ್ಯ-ತೌಲನಿಕ ಅಧ್ಯಯನ' ಎನ್ನುವ ಈ ಅಧ್ಯಯನವು ಮಹತ್ವ ಪಡೆದಿದೆ.

ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ

ಅ.ನ.ಕೃ ಮತ್ತು ನಿರಂಜನರವರ ವಿಚಾರ ಸಾಹಿತ್ಯದ ತುಲನೆ ಮತ್ತು ವಿಶ್ಲೇಷಣೆ ಈ ಅಧ್ಯಯನದ ಮುಖ್ಯ ತಾತ್ವಿಕತೆಯಾಗಿದೆ. ಈ ಹಿನ್ನಲೆಯಲ್ಲಿ ಪ್ರಗತಿಶೀಲ ಪಂಥದ ವಿಚಾರ ಸಾಹಿತ್ಯದ ತಿಳುವಳಿಕೆಯೊಂದಿಗೆ, ಅ.ನ.ಕೃ ಮತ್ತು ನಿರಂಜನರವರ ವಿಚಾರ ಸಾಹಿತ್ಯದ ತೌಲನಿಕ ವಿಶ್ಲೇಷಣೆಯ ನೆಲೆಯಿಂದ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ವಿಚಾರ ಸಾಹಿತ್ಯವೆಂಬುದು ಸಮಾಜದಲ್ಲಿನ ಅರಿವು ಮತ್ತು ತಿಳುವಳಿಕೆಯನ್ನು ನೀಡುತ್ತದೆ. ಈ ನಿಟ್ಟಿನಲ್ಲಿ ವಿಚಾರ ಸಾಹಿತ್ಯ ಸಮಾಜದಲ್ಲಿನ ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತದೆಯೇ ಅಥವಾ ಇಲ್ಲವೇ ಅನ್ನುವ ಮೂಲಕ, ಅ.ನ.ಕೃ ಮತ್ತು ನಿರಂಜನರವರ ವಿಚಾರ ಸಾಹಿತ್ಯ ಏನನ್ನು ತಿಳಿಸುತ್ತದೆ. ಏನನ್ನು ವ್ಯಾಖ್ಯಾನಿಸುವುದು ಎಂಬ ಗ್ರಹಿಕೆಯನ್ನು ಇರಿಸಿಕೊಳ್ಳಲಾಗಿದೆ. ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯವು ಸಾಹಿತ್ಯ ಮತ್ತು ಸಮಾಜ, ಕಲೆ ಮತ್ತು ಸಂಸ್ಕೃತಿ ಮೊದಲಾದವುಗಳನ್ನು ನೋಡುವ ಕ್ರಮ, ಹಾಗೆಯೇ ಅ.ನ.ಕೃ ಮತ್ತು ನಿರಂಜನರವರ ವಿಚಾರ ಸಾಹಿತ್ಯ ಬೇರೊಂದು ರೀತಿಯಲ್ಲಿ ನೋಡುವ ಕ್ರಮ ಮತ್ತು ವ್ಯತ್ಯಾಸಗಳನ್ನು ಗುರುತಿಸಿಕೊಳ್ಳಲಾಗಿದೆ. ವಿಚಾರ ಸಾಹಿತ್ಯ

ವಿವರಣೆ, ವಿಶ್ಲೇಷಣೆಯ ಜೊತೆಗೆ ತೌಲನಿಕ ಅಧ್ಯಯನ, ಅದರ ವಿವರಣೆ, ವಿಶ್ಲೇಷಣೆಯನ್ನು ಮಾಡಲಾಗಿದೆ.

ವಿಚಾರ ಸಾಹಿತ್ಯದ ಒಂದು ಪ್ರಧಾನ ಅಭಿವ್ಯಕ್ತಿಯಾಗಿ ಸಾಹಿತ್ಯ, ಸಮಾಜ, ಸಂಸ್ಕೃತಿ, ಸಮುದಾಯ ಮೊದಲಾದವುಗಳನ್ನು ಯಾವ ರೀತಿ ಗ್ರಹಿಸಿದೆ. ಮತ್ತು ವ್ಯಾಖ್ಯಾನಿಸಿದೆ ಎಂಬುದನ್ನು ವಿಶ್ಲೇಷಿಸುವ ದೃಷ್ಟಿಯಿಂದ ಇಲ್ಲಿನ ಅಧ್ಯಯನದ ವಿನ್ಯಾಸ ಮತ್ತು ವಿಧಾನಗಳನ್ನು ರೂಪಿಸಲಾಗಿದೆ.

ಅ.ನ.ಕೃ ಮತ್ತು ನಿರಂಜನರವರ ವಿಚಾರ ಸಾಹಿತ್ಯಗಳನ್ನು ಸಮಗ್ರವಾಗಿ ಅವಲೋಕಿಸಿ ಒಂದೆಡೆ ದಾಖಲಿಸಿ, ವಿಶ್ಲೇಷಿಸಿ, ವರದಿ ಮಾಡುವುದು ಇಲ್ಲಿನ ಅಧ್ಯಯನದ ವಿಧಾನವಾಗಿದೆ. ವ್ಯಕ್ತಿ ಅಧ್ಯಯನ, ವಿಶ್ಲೇಷಣಾತ್ಮಕ ಮತ್ತು ತೌಲನಿಕ ಹೀಗೆ ಬಹುಶಿಸ್ತೀಯ ಮಾದರಿಯಲ್ಲಿ ಈ ಅಧ್ಯಯನದ ವಿನ್ಯಾಸವನ್ನು ರೂಪಿಸಲಾಗಿದೆ. ಈ ಚಿಂತನೆಯನ್ನು ಆಧಾರವಾಗಿಟ್ಟುಕೊಂಡು ಪ್ರಸ್ತುತ ನಿಬಂಧದಲ್ಲಿ ಕ್ರಮವಾಗಿ ಈ ಕೆಳಗಿನ ಅಧ್ಯಾಯಗಳಿವೆ.

ಮೊದಲನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯನ್ನು ಕುರಿತಂತೆ ತಿಳಿಸಲಾಗಿದೆ.

ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯಗಳಿಗೆ ಸಂಬಂಧಿಸಿದಂತೆ 'ಇದುವರೆಗಿನ ಅಧ್ಯಯನಗಳ ವಿಮರ್ಶಾತ್ಮಕ ಸಮೀಕ್ಷೆ' ಎಂಬ ಎರಡನೆಯ ಅಧ್ಯಾಯದಲ್ಲಿ ಅ. ನ. ಕೃ. ರವರ ವಿಚಾರ ಸಾಹಿತ್ಯದ ವಿಮರ್ಶಾತ್ಮಕ ಸಮೀಕ್ಷೆ ಎಂಬಲ್ಲಿ ಅ. ನ. ಕೃ. ರವರ ಸಮಗ್ರ ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸ್ವತಂತ್ರವಾದ ಕೃತಿಗಳು ಪ್ರಕಟಗೊಂಡಿಲ್ಲ. ಆದರೆ ಅವರ ಬದುಕು ಬರಹಗಳಿಗೆ ಸಂಬಂಧಿಸಿದಂತೆ ಅ. ನ. ಕೃ. ರವರ ಸಮಕಾಲೀನರಾದ ತ. ರಾ. ಸು. ರವರು ಬರೆದ 'ಅ. ನ. ಕೃ.' ಎಂಬ ಜೀವನ ಚರಿತ್ರೆಯಲ್ಲಿ ವಿಮರ್ಶಕ ಎಂಬ ಭಾಗದಲ್ಲಿ ಅವರ ವಿಚಾರ ಸಾಹಿತ್ಯದ ಕೆಲವೊಂದು ಕೃತಿಗಳ ವಾಕ್ಯಗಳನ್ನು ಉದಾಹರಿಸುತ್ತಾರೆ. ಜಿ. ಎಸ್. ಅಮೂರರವರು ಬರೆದ 'ಅ. ನ. ಕೃಷ್ಣರಾಯ ಎಂಬ ಕೃತಿಯಲ್ಲಿ ಅವರ ಬದುಕು ಬರಹವನ್ನು ಕುರಿತಂತೆ ಹೆಚ್ಚು ಚರ್ಚಿಸುತ್ತಾರೆ. ಅವರ ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದಂತೆ 'ನಾಟಕ ಕಲೆ' ಎಂಬ ಕೃತಿಯನ್ನು ಕುರಿತಂತೆ, ಆ ನಾಟಕ ಕಲೆ ಕೃತಿಯ ವಿಚಾರ ಸಾಹಿತ್ಯದಲ್ಲಿನ 'ನಾಟಕ ಮತ್ತು ರಂಗಭೂಮಿ', 'ಕಳೆದ ಕನ್ನಡ ನಾಟಕಗಳು' ಜೊತೆಗೆ ಅ. ನ. ಕೃ. ರವರ ಗದ್ಯ ಸಾಹಿತ್ಯಕ್ಕೆ ಸಂಬಂಧಿಸಿದಂತೆ 'ಸಂಸ್ಕೃತಿಯ ವಿಶ್ವ ಸ್ವರೂಪ' ಕೃತಿಯ ಕೆಲವೊಂದು ಲೇಖನಗಳನ್ನು ವಿಮರ್ಶಿಸುತ್ತಾರೆ. ಇದೇ ಮಾದರಿಯಲ್ಲಿ ನರಹಳ್ಳಿ ಬಾಲಸುಬ್ರಮಣ್ಯಂರವರು ಬರೆದಿರುವ 'ಅ. ನ. ಕೃ. ಮತ್ತು ಕನ್ನಡ ಸಂಸ್ಕೃತಿ' ಎಂಬ ಗ್ರಂಥದಲ್ಲಿ 'ವಿಮರ್ಶಕ' ಭಾಗದಲ್ಲಿ ಅವರ ವಿಚಾರ ಸಾಹಿತ್ಯದ ತಾತ್ವಿಕತೆಯನ್ನು ಕುರಿತಂತೆ ಚರ್ಚಿಸುತ್ತಾರೆ. ಎಸ್. ವಿದ್ಯಾಶಂಕರ್‌ರವರು ಬರೆದ 'ಅ. ನ. ಕೃ. ಬದುಕು-ಬರಹ' ಎಂಬ ಕೃತಿಯಲ್ಲಿ ಸಂಕೀರ್ಣ ಕೃತಿಗಳು ಎಂಬ ಭಾಗದಲ್ಲಿ ಅ. ನ. ಕೃ. ರ ಸ್ವತಂತ್ರ ಚಿಂತನಪರತೆಯನ್ನು ಅವರ ವಿಚಾರ ಸಾಹಿತ್ಯದಲ್ಲಿ ಗುರುತಿಸಿದ್ದಾರೆ. ಹೀಗೆ ಸ್ವತಂತ್ರ ಕೃತಿಗಳು ಪ್ರಕಟವಾಗಿಲ್ಲವಾದರೂ ಅವರ ಬದುಕು ಬರಹದಲ್ಲಿ ಅವರ ವಿಚಾರ ಸಾಹಿತ್ಯದ ಕೃತಿಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಸಂಪಾದನೆಗಳಿಗೆ ಸಂಬಂಧಿಸಿದಂತೆ ಶಾ. ಮಂ. ಕೃಷ್ಣರಾಯರ ಸಂಪಾದಕತ್ವದಲ್ಲಿ ಹೊರಬಂದ 'ಅಮರ ಚೇತನ' ಎಂಬ ಗ್ರಂಥದಲ್ಲಿ ಅಭಿವ್ಯಕ್ತಿ ಎಂಬ ಭಾಗದಲ್ಲಿ ಕೋ. ಚೆನ್ನಬಸಪ್ಪರವರ 'ಶರಣ ಸಾಹಿತ್ಯಕ್ಕೆ ಕೊಡುಗೆ', ಎಂ. ಎಸ್. ನರಸಿಂಹಮೂರ್ತಿಯವರ 'ಹರಟೆಮಲ್ಲರು', ನಿರಗುಂದ ಕೇಶವಮೂರ್ತಿಯವರ 'ಪೊರಕೆ' ಮೊದಲಾದ ವೈಚಾರಿಕ ಸಾಹಿತ್ಯ

ಕೃತಿಗಳನ್ನು ಕುರಿತಂತೆ ಬರೆದ ಲೇಖನಗಳನ್ನು ನೋಡಬಹುದು. ಗೌರಿ ಸುಂದರ್‌ರವರ ಸಂಪಾದಕತ್ವದಲ್ಲಿ 'ಅ. ನ. ಕೃ. ಕಾದಂಬರಿಗಳನ್ನು ಕುರಿತು' ಎಂಬ ಕೃತಿಯಲ್ಲಿಯೂ ಅ. ನ. ಕೃ. ರವರ ವಿಚಾರ ಸಾಹಿತ್ಯ ಕೃತಿಗಳ ಹೆಸರಿನಲ್ಲಿ ದೊಡ್ಡ ರಂಗೇಗೌಡ, ಬಾಬು ಕೃಷ್ಣಮೂರ್ತಿ, ಕೆ. ಎಸ್. ಭಗವಾನ್ ಮೊದಲಾದವರು ಲೇಖನಗಳನ್ನು ಬರೆದಿದ್ದಾರೆ. ಅ. ನ. ಕೃ. ರವರ ಅಭಿನಂದನಾ ಗ್ರಂಥ 'ರಸಚೇತನ' ದಲ್ಲಿ ಕೆ. ಪುಟ್ಟರಾಜುರವರು 'ಸಾಹಿತ್ಯ ಮತ್ತು ಕಾಮಪ್ರಚೋದನೆ', ತದ್ದಲಸೆ ವಿಘ್ನೇಶ್ವರ ಶರ್ಮಾರವರು 'ಗದ್ಯಸಾಹಿತ್ಯಕ್ಕೆ ಅ. ನ. ಕೃ. ಕೊಡುಗೆ' ಎಂಬ ಲೇಖನಗಳನ್ನು ಬರೆದಿರುವುದನ್ನು ಸಂಕ್ಷಿಪ್ತವಾಗಿ ಕಾಣಬಹುದು.

ನಿರಂಜನರವರ ವಿಚಾರ ಸಾಹಿತ್ಯದ ವಿಮರ್ಶಾತ್ಮಕ ಸಮೀಕ್ಷೆ ಎಂಬ ಭಾಗದಲ್ಲಿ ನಿರಂಜನರವರ ವಿಚಾರ ಸಾಹಿತ್ಯವನ್ನು ಕುರಿತಂತ ಪ್ರತ್ಯೇಕವಾದ ಯಾವುದೇ ಕೃತಿಗಳು ಇದುವರೆಗೆ ಪ್ರಕಟಗೊಂಡಿಲ್ಲ. ಬೊಳಂತಕೋಡಿ ಈಶ್ವರ ಭಟ್ಟರು ಸಂಪಾದಿಸಿದ ಅಭಿನಂದನ ಗ್ರಂಥ 'ನಿರಂಜನ' ದಲ್ಲಿ ಅವರ ಅಂಕಣ ಸಾಹಿತ್ಯವನ್ನು ಕುರಿತು, ಎ. ವಿ. ನಾವಡರವರು ಬರೆದ 'ಅಂಕಣಕಾರ ನಿರಂಜನ', ವಿವೇಕ ರೈ ಬಿ. ಎ. ಯವರು ಬರೆದ 'ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಅಮೂಲ್ಯ ಕೋಡುಗೆ' ಹಾಗೂ ಬಿ. ಸಿ. ರಾಮಚಂದ್ರ ಶರ್ಮರರು ಬರೆದ 'ನಿರಂಜನರ ಬುದ್ಧಿ-ಭಾವ-ಬದುಕು' ಹಾಗೂ ಹೊಸ ದಿಗಂತ ಪತ್ರಿಕೆಗಾಗಿ ವಿ. ಬಿ. ಅರ್ತಿಕಜೆಯವರು ಬರೆದ 'ಹೀಗೊಂದು ವೃತ್ತಾಂತ' ಕೃತಿಯಲ್ಲಿ ಕೆಲವೊಂದು ನಿರಂಜನರ ವಿಚಾರ ಸಾಹಿತ್ಯದ ಕೃತಿಗಳಿಗೆ ಸಂಬಂಧಿಸಿದಂತೆ ಮಾಹಿತಿಗಳಿವೆ. ಜೊತೆಗೆ ಹಾ. ಮಾ. ನಾಯಕ್, ಬಸವರಾಜ ಸಬರದ ಅವರ ಕೆಲವೊಂದು ಲೇಖನಗಳನ್ನು ನೋಡಬಹುದು. ಅ.ನ.ಕೃ ಮತ್ತು ನಿರಂಜನರವರ ವಿಚಾರ ಸಾಹಿತ್ಯ ಕುರಿತು ನಡೆದಿರುವ ಇದುವರೆಗಿನ ಅಧ್ಯಯನಗಳನ್ನು ಮತ್ತು ನನ್ನ ಸಂಶೋಧನ ವಿಷಯದ ಬಗೆಗೆ ಬರೆದಿರುವ ಅಧ್ಯಯನಗಳನ್ನು ವಿವರವಾಗಿ ಪರಿಶೀಲಿಸಲಾಗಿದೆ. ಹೀಗೆ ಪರಿಶೀಲಿಸುವುದರ ಮೂಲಕ ಈ ನಿಬಂಧವನ್ನು ರೂಪಿಸಬೇಕಾದ ಹೊಸ ಚಿಂತನಾ ಕ್ರಮದ ಅಗತ್ಯವನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

'ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯ' ಎಂಬ ಮೂರನೇ ಅಧ್ಯಾಯದಲ್ಲಿ ವಿಚಾರ ಪ್ರಜ್ಞೆಯೆಂಬುದು ಮನುಷ್ಯನಲ್ಲಿ ಮೂಡಿ, ಅದು ವಿಚಾರವಾದ ಬೆಳೆಯಲು ಕಾರಣವಾದ ಅಂಶ, ಮನುಷ್ಯನ ತರ್ಕಬದ್ಧವಾದ ಅಲೋಚನೆಯಿಂದ, ಸತ್ಯಾಸತ್ಯತೆಯ ವಿಶ್ಲೇಷಣೆಯಿಂದ ಅದನ್ನು ಪರೀಕ್ಷಿಸುವ ಬುದ್ಧಿ ಪ್ರವೃತ್ತಿಯಿಂದಾಗಿ ಬೆಳೆದ ಬಗೆಯನ್ನು, ಮುಂದೆ ಈ ವಿಚಾರವಾದ ಬೆಳೆದು ಬರಹ ರೂಪ ಪಡೆದು ವಿಚಾರ ಸಾಹಿತ್ಯ ನಿರ್ಮಾಣವಾದ ರೀತಿಯನ್ನು, ವಿಚಾರ ಸಾಹಿತ್ಯವನ್ನು ಕುರಿತಂತೆ ಅನೇಕ ಬರಹಗಾರರು ತಿಳಿಸಿದ ವ್ಯಾಖ್ಯೆಯೊಂದಿಗೆ ವಿಚಾರ ಸಾಹಿತ್ಯದ ಸ್ವರೂಪವನ್ನು ಚರ್ಚಿಸಲಾಗಿದೆ. ಇದೇ ಭಾಗದಲ್ಲಿ ಪ್ರಗತಿಶೀಲ ಕಾಲಘಟ್ಟದಲ್ಲಿ ನಾಡಿಗೇರ ಕೃಷ್ಣರಾವ್, ದ.ಬಾ ಕುಲಕರ್ಣಿ, ಅರ್ಚಕ ವೆಂಕಟೇಶ್, ಸೇವ ನೇಮಿರಾಜ ಮಲ್ಲ, ಬಿ.ಎಂ ಇದಿನಬ್ಬ, ತಿ.ತಾ ಶರ್ಮ, ಹಿರೇಮಲ್ಲೂರು ಈಶ್ವರನ್, ಕುಮಾರ ವೆಂಕಣ್ಣ, ಪಾಟೀಲ್ ಪುಟ್ಟಪ್ಪ, ವಿ.ಎಮ್ ಇನಾಂದಾರ್, ಶ್ರೀರಂಗ, ಎಸ್. ಅನಂತನಾರಾಯಣ, ದೊಡ್ಡೇರಿ ವೆಂಕಟಗಿರಿರಾವ್, ದೇವುಡು, ಎಚ್ಚೆಸ್ಕೆ, ಅನಂತ ಪದ್ಮನಾಭ ಸೋಗಾಲ್, ಮೊದಲಾದವರು ಕಾಣಿಸಿಕೊಂಡಿದ್ದರು. ಸರಜೂ ಕಾಟ್ಕರ್‌ರವರ ಮಾತಿನಲ್ಲಿ ಹೇಳುವುದಾದರೆ ಈ ಎಲ್ಲಾ ಬರಹಗಾರರಿಗೂ ಕಮ್ಯೂನಿಸ್ಟ್ ಸಿದ್ದಾಂತ ಅಥವಾ ಮಾರ್ಕ್ಸ್‌ವಾದದ ಮೇಲೆ ಯಾವುದೇ ಬಗೆಯ ಪ್ರೀತಿ ಇರಲಿಲ್ಲ. ಆದರೆ ನಿರಂಜನ ಮತ್ತು ಬಸವರಾಜ ಕಟ್ಟೀಮನಿಯವರಿಗೆ ಈ ಸಿದ್ದಾಂತದಲ್ಲಿ ನಂಬಿಕೆ ಇತ್ತು. ಇನ್ನು ಕೆಲವರಿಗೆ ಇದರ ಮೇಲೆ ಅಭಿಮಾನ

ಇದ್ದಿರಬಹುದು. ಆದರೆ ಅವರ ಬರವಣಿಗೆಯಿಂದ ಪ್ರಗತಿಶೀಲ ಕಾಲಘಟ್ಟ ವೈಚಾರಿಕ ಸಾಹಿತ್ಯ ಬೆಳೆಯಿತು. ಈ ದೃಷ್ಟಿಯಿಂದ ಪ್ರಗತಿಶೀಲ ಕಾಲಘಟ್ಟದಲ್ಲಿ ಗುರುತಿಸಿಕೊಂಡಿದ್ದ ಶ್ರೀರಂಗರವರ 'ಜಾತೀಯ ಸಮಸ್ಯೆ', 'ನಲ್ವತ್ತೆರಡರ ಚಲೇ ಜಾವ್ ಚಳುವಳಿ', 'ಸ್ವತಂತ್ರ ಭಾರತದ ಗಣರಾಜ್ಯ', 'ನಮ್ಮ ನೆಚ್ಚಿನ ನೆಹರೂ', 'ತರುಣ ತುರ್ಕಸ್ಥಾನ ಅರ್ಥಾತ್ ಕೆಮಾಲ್ ಪಾಶಾ' ಕೃತಿಗಳನ್ನು ಹಾಗೂ 'ನಮ್ಮದಿನ್ನೂ ಜಮೀನ್ದಾರಿಕೆ ಮನಃಸ್ಥಿತಿಯೇ?', 'ನಮಗೊಂದು ಸಂಸ್ಕೃತಿ ಇದೆಯೇ?', 'ಗಾಂಧಿ ಜೀವನ', 'ನರಸಿಂಹಾವಲೋಕನ ೩', 'ಸಾಹಿತ್ಯ ಮತ್ತು ಶೃಂಗಾರ', 'ಸಾಹಿತ್ಯ ಮತ್ತು ಪ್ರಗತಿ' ಮೊದಲಾದ ಲೇಖನಗಳು, ತ. ರಾ. ಸು. ರವರು ಬರೆದ 'ಅ. ನ. ಕೃ.', 'ರೇಖಾ ಚಿತ್ರಗಳು', 'ಸ್ನೇಹ ಸಮನ್ವಯ' ಕೃತಿಗಳೊಂದಿಗೆ 'ಸಾಹಿತ್ಯದಲ್ಲಿ ಕಾಣದ ಸಂಕೋಲೆ' ಎಂಬ ಲೇಖನ, ಬಸವರಾಜ ಕಟ್ಟೀಮನಿಯವರು ಬರೆದ ಎರಡು ಜೀವನ ಚರಿತ್ರೆಗಳಾದ 'ಕ್ರಾಂತಿವೀರ ಚೆನ್ನಪ್ಪ ವಾಲಿ', 'ಪ್ರಿಯದರ್ಶಿನಿ: ಮಾರ್ಗದರ್ಶಿನಿ ಇಂದಿರಾ ಗಾಂಧಿ', ಅಖಿಲ ಭಾರತ ೫೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣ, ನಾಡಿಗೇರ ಕೃಷ್ಣರಾಯರು ಬರೆದ ಜೀವನ ಚರಿತ್ರೆ, 'ವಿ. ವಿ. ಗಿರಿ', ವೈ. ಎನ್. ಗುಂಡೂ ರಾವ್ ಮತ್ತು ಕೃಷ್ಣ ಸುಬ್ಬರಾವ್ ಸಂಪಾದಿಸಿದ 'ಬೆಸ್ಟ್ ಆಫ್ ನಾಡಿಗೇರ್' ನಗೆ ಲೇಖನ, ನಾಡಿಗೇರ್ ಕೃಷ್ಣರಾಯರ ಲೇಖನ 'ನಮ್ಮ ಸಾಹಿತ್ಯ – ಅದರ ಗುರಿ', ತಿ. ತಾ. ಶರ್ಮರು ಬರೆದ 'ವಿಚಾರ ಕರ್ನಾಟಕ' ಮತ್ತು 'ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಜೀವನ ಚರಿತ್ರೆ', 'ಅಶ್ಲೀಲ ಸಾಹಿತ್ಯ' ಎಂಬ ಲೇಖನ, ಅ. ನ. ಕೃಷ್ಣರಾಯರು ಸಂಪಾದಿಸಿದ 'ಪ್ರಗತಿಶೀಲ ಸಾಹಿತ್ಯ' ಕೃತಿಯಲ್ಲಿ ಕುಮಾರ ವೆಂಕಣ್ಣನವರು ಬರೆದ 'ಕನ್ನಡ ಸಾಹಿತಿಗಳೆಲ್ಲಿ?' ಹಾಗೂ 'ಜನತೆ ಮತ್ತು ಕಲೆ', ಅರ್ಚಕ ವೆಂಕಟೇಶರವರ 'ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲತೆ', ಎಸ್. ಅನಂತ ನಾರಾಯಣರು ಬರೆದ 'ಸಾಹಿತ್ಯದಲ್ಲಿ ಜನತಾ ದೃಷ್ಟಿ' ಹಾಗೂ ದೊಡ್ಡೇರಿ ವೆಂಕಟಗಿರಿರಾಯರು ಬರೆದ 'ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ಲೈಂಗಿಕ ಶಿಕ್ಷಣದ ಸ್ಥಾನ' ಎಂಬ ಲೇಖನಗಳನ್ನು ಅಧ್ಯಯನಕ್ಕೆ ಒಳಪಡಿಸಿ ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯದ ನಿಲುವು ಮತ್ತು ಅದರ ಸ್ವರೂಪವನ್ನು ಕುರಿತಂತೆ ಚರ್ಚಿಸಲಾಗಿದೆ. ಇದೇ ಅಧ್ಯಾಯದ ಕೊನೆಯ ಭಾಗದಲ್ಲಿ ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯದ ಸ್ವರೂಪವನ್ನು ಚರ್ಚಿಸಲಾಗಿದೆ.

'ಅ.ನ.ಕೃ ಮತ್ತು ನಿರಂಜನರವರ ವಿಚಾರ ಸಾಹಿತ್ಯ–ತಾತ್ವಿಕತೆ ಮತ್ತು ಸ್ವರೂಪ' ಎಂಬ ನಾಲ್ಕನೇ ಅಧ್ಯಾಯದಲ್ಲಿ ೨ ಭಾಗಗಳಿದ್ದು, ಮೊದಲನೇಯ ಭಾಗದಲ್ಲಿ ಅ.ನ.ಕೃ ರವರ ವಿಚಾರ ಸಾಹಿತ್ಯದ ತಾತ್ವಿಕತೆ ಮತ್ತು ಸ್ವರೂಪವನ್ನು ಚರ್ಚಿಸಲಾಗಿದೆ. ಎರಡನೇಯ ಭಾಗದಲ್ಲಿ ನಿರಂಜನರವರ ವಿಚಾರ ಸಾಹಿತ್ಯದ ತಾತ್ವಿಕತೆ ಮತ್ತು ಸ್ವರೂಪವನ್ನು ಚರ್ಚಿಸಲಾಗಿದೆ. ಈ ಎರಡು ಭಾಗದಲ್ಲಿ ಅ.ನ.ಕೃ ಮತ್ತು ನಿರಂಜನರ ವಿಚಾರ ಸಾಹಿತ್ಯದ ತಾತ್ವಿಕತೆ, ಸ್ವರೂಪ, ನಿಲುವುಗಳನ್ನು ತಿಳಿಯಲು ಸಹಕಾರಿಯಾಗಿದೆ. ಅ.ನ.ಕೃರವರ ವಿಚಾರ ಸಾಹಿತ್ಯದಲ್ಲಿ ದೇಶಿಯ ಚಿಂತನೆಗಳು ಭಾರತೀಯ ಸಂಸ್ಕೃತಿಯ ಹಿನ್ನಲೆಯಲ್ಲಿ ತಿಳಿಸಿರುವುದನ್ನು ಕಾಣಬಹುದು. ನಿರಂಜನರವರ ವಿಚಾರ ಸಾಹಿತ್ಯ ಅಂದಿನ ಸಮಾಜದ ವಾಸ್ತವಾಂಶವನ್ನು ತಿಳಿಸುವುದನ್ನು ಚರ್ಚಿಸಲಾಗಿದೆ.

'ಅ. ನ. ಕೃ. ಮತ್ತು ನಿರಂಜನ ಅವರ ಸಾಹಿತ್ಯಕ ಹಾಗೂ ಸಾಮಾಜಿಕ ಚಿಂತನೆಗಳ ಅನನ್ಯತೆ' ಎಂಬ ಐದನೇ ಅಧ್ಯಾಯದಲ್ಲಿ ಬಹಳ ಮುಖ್ಯವಾಗಿ ಸಾಹಿತ್ಯ ಮತ್ತು ಸಮಾಜವನ್ನು ಕುರಿತಂತೆ ಅ. ನ. ಕೃ. ಮತ್ತು ನಿರಂಜನರವರ ನಿಲುವುಗಳನ್ನು ದಾಖಲಿಸಲಾಗಿದೆ. ಅ. ನ. ಕೃ. ಕನ್ನಡ ಸಾಹಿತಿಯ ಗಮನವು ಇಡೀ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪರಿಚಯಿಸಿ ಕನ್ನಡ ಸಾಹಿತಿಗಳು

ಧರ್ಮದ ಕಡೆಗೆ ಹೆಚ್ಚು ಗಮನವನ್ನು ಕೊಟ್ಟಿದ್ದರಿಂದಾಗಿ ನಮ್ಮಲ್ಲಿ ಜನತೆಯನ್ನು ಹೆಚ್ಚು ವಿಚಾರ ಪರರನ್ನಾಗಿ ಮಾಡಲಿಲ್ಲವೆಂದು, ನಿರಂಜನರು ಸಾಹಿತಿಗಳು ತಮ್ಮ ಸಾಹಿತ್ಯದ ಮೂಲಕ ಮಾನವೀಯ ಸ್ಫೂರ್ತಿಗಳನ್ನು ತುಂಬವರೆಂದು, ಸಾಹಿತ್ಯದ ಧೋರಣೆಯೆಂಬುದು ಯುಗಧರ್ಮದ ಅನುಗುಣವಾಗಿಯೇ ಇರುವುದೆಂದು, ಅ. ನ. ಕೃ. ರವರು ಸಾಹಿತ್ಯದಲ್ಲಿ ವ್ಯಷ್ಟಿ ಮತು ಸಮಷ್ಟಿ ವಾದಗಳು ಬೆಳೆದು ಜಗತ್ತಿನಲ್ಲಿ ಯುದ್ಧಗಳು ನಡೆಯಲು ಕಾರಣವಾಯಿತೆಂದು, ಈ ರೀತಿಯ ವಿಶ್ವನಾಶದಿಂದ ಹೊರ ಬರಬೇಕಾದರೆ ಭಾರತೀಯ ವಾದವೇ ಮುಖ್ಯವೆಂಬ ತಿರುಳನ್ನು ಪ್ರತಿಪಾದಿಸುತ್ತಾರೆ.

ಕಥೆ, ಕಾದಂಬರಿಗಳಲ್ಲಿರುವ ಭಾವ ಪ್ರವಾಹ, ವಾಸ್ತವಿಕತೆ, ವೀರಶೈವ ಸಾಹಿತ್ಯದ ಸ್ವರೂಪ, ದೃಷ್ಟಿಕೋನ, ಸಾಹಿತಿಕ ವಿಚಾರಗಳು, ವಿಮರ್ಶಕನ ಧೋರಣೆ ಮೊದಲಾದವುಗಳನ್ನು ಚರ್ಚಿಸಲಾಗಿದೆ. ಅದರಂತೆ ನಿರಂಜನರವರ ಸಾಹಿತಿಕ ಅನನ್ಯತೆಗೆ ಸಂಬಂಧಿಸಿದಂತೆ, ಕಮಿಟ್‌ಮೆಂಟ್‌ಗೆ ಸಂಬಂಧಿಸಿದಂತೆ, ಭಾರತೀಯ ಸಾಹಿತ್ಯವಾದ, ಸ್ಮಾರಕ ರಚನೆಯ ಬಗ್ಗೆ, ಪಠ್ಯ ಪುಸ್ತಕಗಳ ಬಗ್ಗೆ ಪ್ರಕಾಶಕರ ಮನಃಸ್ಥಿತಿ, ಚಲನಚಿತ್ರ, ನಾಟಕ, ಬರಹಗಾರನ ವಸ್ತುವಿನ ಬಗ್ಗೆ ಮೊದಲಾದ ಅನೇಕ ವಿಚಾರಗಳಲ್ಲಿನ ಅನನ್ಯತೆಯನ್ನು ಚರ್ಚಿಸಲಾಗಿದೆ.

ಪ್ರಗತಿಶೀಲ ಕಾಲಘಟ್ಟದ ಸಾಹಿತ್ಯವನ್ನು ಅಂದಿನ ನವೋದಯ ಕಾಲಘಟ್ಟದ ಸಾಹಿತಿಗಳು ಅಶ್ಲೀಲ ಸಾಹಿತ್ಯ, ಕಾಮಪ್ರಚೋದಕ ಸಾಹಿತ್ಯವೆಂದು ಜರೆದಿದ್ದ ಆ ವಿಚಾರಕ್ಕೆ ವಾಗ್ವಾದಗಳು ನಡೆದ ಸಂದರ್ಭಕ್ಕೆ ಅನುಗುಣವಾಗಿ 'ಸಾಹಿತ್ಯದಲ್ಲಿ ಶೀಲ–ಅಶ್ಲೀಲ ವಿವೇಚನೆ' ಎಂಬ ಭಾಗದಲ್ಲಿ ಅ. ನ. ಕೃ. ಮತ್ತು ನಿರಂಜನರವರು ಶೀಲ–ಅಶ್ಲೀಲ ವಿವೇಚನೆಗೆ ನೀಡಿದ ಸಮರ್ಥನೆಗಳು ವಿಚಾರಗಳನ್ನು ವಿವರಿಸಲಾಗಿದೆ. ಯಾವುದು ಶೀಲ, ಯಾವುದು ಅಶ್ಲೀಲ ಎಂಬ ದೃಷ್ಟಿಕೋನವನ್ನು ಚರ್ಚಿಸಲಾಗಿದೆ.

ಮೂರನೆಯ ಉಪಶೀರ್ಷಿಕೆಯಲ್ಲಿ ಸ್ತ್ರೀ ಮತ್ತು ಜಾತಿಯ ವಿಚಾರಗಳು ಎಂಬಲ್ಲಿ ಅ.ನ.ಕೃ ಮತ್ತು ನಿರಂಜನರವರು ಸ್ತ್ರೀ ಮತ್ತು ಜಾತಿಯ ವಿಚಾರಗಳನ್ನು ವಿಚಾರ ಸಾಹಿತ್ಯದಲ್ಲಿ ಹೇಗೆ ನೋಡಿದ್ದಾರೆ ಎಂದು ಚರ್ಚಿಸಲಾಗಿದೆ. ಸ್ತ್ರೀ ವಿಚಾರಕ್ಕೆ ಸಂಬಂಧಿಸಿದಂತೆ ಅ.ನ.ಕೃರವರ ಧೋರಣೆಯು ಭಾರತೀಯ ಸಂಸ್ಕೃತಿಯ ಹಿನ್ನಲೆಯಲ್ಲಿ ದಾಖಲಿಸುತ್ತಾರೆ. ಉಪನಿಷತ್ತುಗಳ ಕಾಲಘಟ್ಟದಲ್ಲಿ ಸ್ತ್ರೀಯು ಉನ್ನತ ಸ್ಥಾನಮಾನಗಳನ್ನು ಪಡೆದಿದ್ದು, ಕಾಲಕ್ರಮೇಣ ಪುರುಷ ಪ್ರಧಾನ ವ್ಯವಸ್ಥೆಯು ಸ್ತ್ರೀಯರನ್ನು ಶೋಷಣೆ ಮಾಡಿ, ನಿಯಂತ್ರಿಸುವ ಮೂಲಕ ಸ್ತ್ರೀಯನ್ನು ನಾಶಗೊಳಿಸದ್ದಲ್ಲದೇ, ಪುರುಷನು ಕೂಡ ತನ್ನ ಏಳ್ಗೆಯನ್ನು ನಾಶ ಮಾಡಿಕೊಂಡಿದ್ದಾರೆ ಎಂದು ಸ್ತ್ರೀ ವಿಚಾರಗಳನ್ನು ಭಾರತೀಯ ಪರಂಪರೆಯ ಹಿನ್ನಲೆ ತಿಳಿಸಿದ್ದನ್ನು ಚರ್ಚಿಸಲಾಗಿದೆ. ನಿರಂಜನರವರು ಸ್ತ್ರೀ ವಿಚಾರಗಳಿಗೆ ಸಂಬಂಧಿಸಿದಂತೆ ವರದಕ್ಷಿಣೆ ನಿಷೇದದ ಬಗ್ಗೆ, ಭಾರತೀಯರಲ್ಲಿ ಮಾತ್ರ ಸ್ತ್ರೀ ಶೋಷಣೆ ಎಂಬುದಿಲ್ಲ ಅದು ವಿಶ್ವದಾದ್ಯಂತವಿದೆ ಎಂದು ಲಾರ್ಡ್ ಟೆನಿಸನ್‌ನ ಒಂದು ಪದ್ಯದ ಸಾಲುಗಳನ್ನು ಉದಾಹರಿಸುತ್ತಾರೆ. ಮುಂದುವರಿದು 'ಸುಶಿಕ್ಷಿತ ಸಮಾಜ'ವಾದ ಇಂಗ್ಲೆಂಡಿನಲ್ಲಿಯೇ ಈ ರೀತಿಯ ಸ್ತ್ರೀ ಶೋಷಣೆಯನ್ನು ಕಾಣಬಹುದು. ಹಾಗಾಗಿ ಸ್ತ್ರೀ ಶೋಷಣೆಯೆಂಬುದು ವಿಶ್ವದಾದ್ಯಂತಯಿದೆ ಎಂಬುದನ್ನು ಚರ್ಚಿಸುತ್ತಾರೆ. ಅ.ನ.ಕೃ ಜಾತಿಯ ವಿಚಾರಗಳಿಗೆ ಸಂಬಂಧಿಸಿದಂತೆ 'ಅಸ್ಪೃಶ್ಯತೆಯ ನಿರ್ಮೂಲನ' ಎಂಬ ಪ್ರಬಂಧದಲ್ಲಿ ಅಸ್ಪೃಶ್ಯತೆಯ ನಿರ್ಮೂಲನೆಗೆ ಸಂಬಂಧಿಸಿದಂತೆ ಚರ್ಚಿಸುತ್ತಾರೆ. ನಿರಂಜನರು ಭಾರತೀಯ ಸಮಾಜದಲ್ಲಿನ ಜಾತೀಯ ವಿಚಾರಗಳಿಗಿಂತ ದಕ್ಷಿಣ

ಆಫ್ರಿಕಾದಲ್ಲಿದ್ದ ವರ್ಣ ತಾರತಮ್ಯ ಸ್ಥಿತಿಯನ್ನು ಕುರಿತಂತೆ ತಿಳಿಸುತ್ತಾರೆ. ಹೀಗೆ ಅವರ ವಿಚಾರ ಸಾಹಿತ್ಯ ಸಾಮ್ಯತೆಗಿಂತ ಭಿನ್ನ ಭಿನ್ನವಾದ ಧೋರಣೆ ನಿಲುವುಗಳನ್ನು ಹೊಂದಿರುವುದನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

'ಅ. ನ. ಕೃ. ಮತ್ತು ನಿರಂಜನ ಅವರ ವಿಚಾರ ಸಾಹಿತ್ಯದಲ್ಲಿ ಕಲೆ, ಸಂಸ್ಕೃತಿ ಹಾಗು ನಾಡು ನುಡಿ ಚಿಂತನೆಗಳು' ಎಂಬ ಆರನೇ ಅಧ್ಯಾಯವು ಎರಡು ಉಪಶೀರ್ಷಿಕೆಗಳನ್ನು ಹೊಂದಿದೆ. ಕಲೆ ಮತ್ತು ಸಂಸ್ಕೃತಿಯ ಕುರಿತ ಚಿಂತನೆಗಳು ಎಂಬ ಭಾಗದಲ್ಲಿ ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯದಲ್ಲಿ ವ್ಯಕ್ತವಾದ, ಕಲೆ ಮತ್ತು ಸಂಸ್ಕೃತಿಯ ಚಿಂತನೆಗಳನ್ನು, ಧೋರಣೆಗಳಲ್ಲಿ ಹಾಗೂ ನಿಲುವುಗಳಲ್ಲಿ ಭಿನ್ನವಾದ ಅಂಶಗಳನ್ನು ಗುರುತಿಸಲಾಗಿದೆ. ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಕಲೆಗಳು ಬೆಳೆದಿವೆ ಎಂಬುದಾಗಿ ಅ.ನ.ಕೃ ವಿವರಿಸಿದ್ದಾರೆ. ಅವರ ನಾಟಕ ಕಲೆ, ಚಿತ್ರಕಲೆ ಮೊದಲಾದ ಕೃತಿಗಳಲ್ಲಿ ಕಲೆಗಳನ್ನು ಪರಿಚಯಾತ್ಮಕವಾಗಿ ವಿವರಿಸುತ್ತಾರೆ. ನಿರಂಜನರವರು ಕಲೆಗಳು ಭಾರತೀಯ ಸಂಸ್ಕೃತಿಯೊಂದಿಗೆ ಸಹಬಾಳ್ವೆ, ವಿಶ್ವಪ್ರಜ್ಞೆ, ರಾಷ್ಟ್ರೀಯ ಭಾವೈಕ್ಯತೆಯನ್ನು ಉಂಟು ಮಾಡಲು ಹೇಗೆ ಸಹಕಾರಿಯಾಗಿವೆ ಎಂಬುದನ್ನು ವಿವರಿಸಲಾಗಿದೆ. ಭಾರತೀಯ ಸಂಸ್ಕೃತಿಯ ಶ್ರೇಷ್ಠತೆಯನ್ನು ಅ.ನ.ಕೃ ಪ್ರತಿಪಾದಿಸಿದರೆ ನಿರಂಜನರು ಭಾರತೀಯ ಶ್ರೇಷ್ಠವಾದ ಅಂಶಗಳ ಹಿನ್ನೆಲೆಯಲ್ಲಿ ಅದು ಮುಂದಿನ ಪೀಳಿಗೆಗೆ ಹೇಗೆ ಸಾಗಬೇಕು ಎಂಬ ದೃಷ್ಟಿಯಲ್ಲಿ ವಿವರಿಸಲಾಗಿದೆ. ಚಲನಚಿತ್ರಗಳ ಉಗಮದಿಂದಾಗಿ ನಾಟಕ ಕಲೆ ಅವನತಿಯನ್ನು ಹೊಂದಿತ್ತು ಎಂದು ಅ.ನ.ಕೃ ಪ್ರತಿಪಾದಿಸಿದ್ದಾರೆ. ನಿರಂಜನರವರು ಚಲನಚಿತ್ರಗಳಿಂದ ನಮ್ಮ ಕಲೆಗಳನ್ನು ನಾಶ ಮಾಡಲು ಸಾಧ್ಯವಿಲ್ಲ. ಜನತೆಯು ಬೇರೆ ಬೇರೆ ಭಾಷೆಗಳ ಚಲನಚಿತ್ರ, ಸಂಗೀತ, ಕಲೆಗಳ ವ್ಯಾಮೋಹಕ್ಕೆ ಒಳಗಾಗಿ ಕನ್ನಡನಾಡಿನ ಸಾಂಸ್ಕೃತಿಕ ಪರಂಪರೆಗೆ ಕಾಣಿಕೆ ನೀಡಿದ ಕಲೆಗಳ ಬಗ್ಗೆ ಅನಾದರ, ಅನಾಸಕ್ತಿಯನ್ನು ಬೆಳೆಸಿಕೊಂಡಿದ್ದರಿಂದ ಕಲೆಗಳು ಅವನತಿಯ ಹಾದಿ ಹಿಡಿದವು ಎಂಬುದಾಗಿ ಕಲೆಗಳ ಅವನತಿಯ ಬಗ್ಗೆ ಚರ್ಚಿಸುತ್ತಾರೆ. ಅ.ನ.ಕೃರವರು ಕಲೆಗಳ ಉಳಿವಿಗಾಗಿ ತಮಿಳುನಾಡಿನಲ್ಲಿ ಆರಂಭಿಸಿದ 'ಈಸೈ' ಚಳುವಳಿಯ ಮಾದರಿಯಲ್ಲಿ ಕನ್ನಡದಲ್ಲಿಯೂ ಚಳುವಳಿ ನಡೆಯಬೇಕೆಂಬ ಅಪೇಕ್ಷೆಯನ್ನು ಹೊಂದಿದ್ದಾರೆ. ಅ. ನ. ಕೃ. ಮತ್ತು ನಿರಂಜನರವರು ನಾಟಕ, ಚಿತ್ರಕಲೆ, ಸಂಗೀತ, ಚಲನಚಿತ್ರ, ಯಕ್ಷಗಾನ ಮೊದಲಾದ ಕಲೆಗಳನ್ನು ಯಾವ ರೀತಿಯಲ್ಲಿ ತಮ್ಮ ವಿಚಾರ ಸಾಹಿತ್ಯದಲ್ಲಿ ವಿಶ್ಲೇಷಿಸಿದ್ದಾರೆ ಎಂಬುದಾಗಿ ಚರ್ಚಿಸಲಾಗಿದೆ.

ಇದೇ ಅಧ್ಯಾಯದ ಎರಡನೇ ಉಪ ಶೀರ್ಷಿಕೆಯಲ್ಲಿ ನಾಡು ನುಡಿ ಕುರಿತ ಚಿಂತನೆಗಳಿಗೆ ಸಂಬಂಧಿಸಿದಂತೆ ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯದಲ್ಲಿ ವ್ಯಕ್ತವಾದ ಬಗೆಯನ್ನು ಚರ್ಚಿಸಲಾಗಿದೆ. ೧೯೪೩ರಿಂದ ೧೯೪೭ರವರೆಗೆ ನಡೆದ ಪ್ರಗತಿಶೀಲ ಚಳುವಳಿಯ ಕಾಲಘಟ್ಟದಲ್ಲಿ, ಪ್ರಮುಖವಾಗಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ, ಅನೇಕ ಲೇಖಕರು ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಪಾಲ್ಗೊಂಡವರಾಗಿದ್ದಾರೆ. ಅದರಂತೆ ಕರ್ನಾಟಕ ಏಕೀಕರಣವನ್ನು ಕುರಿತಂತೆ ಅಂದಿನ ಅನೇಕ ಬರಹಗಾರರಲ್ಲಿ ತಮ್ಮದೇಯಾದ ನಿಲುವುಗಳನ್ನು ಹೊಂದಿದ್ದರು. ಅ.ನ.ಕೃ ಮತ್ತು ನಿರಂಜನರವರು ಕರ್ನಾಟಕ ಏಕೀಕರಣದ ಅಗತ್ಯತೆಯನ್ನು ಅವರ ವಿಚಾರ ಸಾಹಿತ್ಯದಲ್ಲಿ ಚರ್ಚಿಸಿದ್ದಾರೆ. ಅದರಂತೆ ಅ.ನ.ಕೃರವರು ತಮ್ಮ ಕನ್ನಡ ದಾರಿ ಮತ್ತು ಅಖಂಡ ಕರ್ನಾಟಕ ಹಾಗೂ ಬಳ್ಳಾರಿಯ ಸಮಸ್ಯೆ ಮತ್ತು ಕರ್ನಾಟಕ ಪ್ರಾಂತ್ಯ ಮೊದಲಾದ ಕೃತಿಗಳಲ್ಲಿ ಮತ್ತು ಲೇಖನಗಳಲ್ಲಿ

ಕರ್ನಾಟಕ ಪ್ರಾಂತ್ಯ ರಚನೆಯ ಅಗತ್ಯತೆಯನ್ನು, ಬಳ್ಳಾರಿಯ ಪ್ರಾಂತ್ಯದ ಸಮಸ್ಯೆಯನ್ನು ಬಿಡಿಬಿಡಿಯಾಗಿ ತಿಳಿಸಿದ್ದಾರೆ.

ನಿರಂಜನರವರು ಕೂಡ ಕರ್ನಾಟಕ ಏಕೀಕರಣದ ಅಗತ್ಯತೆಯನ್ನು ತಮ್ಮ ವಿಚಾರ ಸಾಹಿತ್ಯದಲ್ಲಿ ದಾಖಲಿಸಿದ್ದಾರೆ. ಕರ್ನಾಟಕ ಏಕೀಕರಣಕ್ಕೆ ತೊಡಕಾದ ಅನೇಕ ಸಂಗತಿಗಳನ್ನು ಅ.ನ.ಕೃ ತಿಳಿಸುವುದರೊಂದಿಗೆ ಅದಕ್ಕೆ ಉತ್ತರವನ್ನು ನೀಡುತ್ತಾರೆ. ಅದೇ ಮಾದರಿಯಲ್ಲಿ ನಿರಂಜನರು ಕೂಡ ಕರ್ನಾಟಕ ಏಕೀಕರಣ ಅಗತ್ಯತೆಯನ್ನು ಪ್ರತಿಪಾದಿಸುತ್ತಾರೆ. ಜೊತೆಗೆ ಭಾಷಾವಾರು ಪ್ರಾಂತ್ಯದ ರಚನೆಯ ಬಗ್ಗೆ ದೇಶದ ನಾಯಕರ ವಿವಿಧ ದೃಷ್ಟಿಕೋನಗಳನ್ನು ಖಂಡಿಸುತ್ತಾ, ಪ್ರಾಂತೀಯ ಸರಕಾರಗಳ ರಚನೆಗೆ ಮುಂದಾದ ಬಗೆಯನ್ನು, ಮಹಾಜನ್ ವರದಿಯನ್ನು ಕರ್ನಾಟಕದ ಗಡಿ ಪ್ರದೇಶಗಳ ಸಮಸ್ಯೆಗೆ ನೇಮಿಸಿದ ಆಯೋಗದ ಸದಸ್ಯರ ಪ್ರಾಮಾಣಿಕ ಪ್ರಯತ್ನದ ಕೆಲಸ, ಕನ್ನಡ ನಾಡಿನ ಗಡಿ ಪ್ರದೇಶಗಳ ರಕ್ಷಣೆಗಾಗಿ ಮೈಸೂರು ಸರಕಾರ ಮಾಡಬೇಕಾದ ಕಾರ್ಯಗಳನ್ನು ವಿವರಿಸಲಾಗಿದೆ. ಆ ಮೂಲಕ ಇವರಿಬ್ಬರ ವಿಚಾರ ಸಾಹಿತ್ಯದಲ್ಲಿ ಕನ್ನಡ ಮತ್ತು ಕರ್ನಾಟಕ ಏಕೀಕರಣದ ವಿಚಾರವಾಗಿ ಸಾಮ್ಯತೆಯೊಂದಿಗೆ ಭಿನ್ನತೆಯನ್ನು ಕೂಡ ಚರ್ಚಿಸಲಾಗಿದೆ.

'ಅ. ನ. ಕೃ. ಮತ್ತು ನಿರಂಜನ ಅವರ ಸಂಕೀರ್ಣ ವಿಚಾರ ಸಾಹಿತ್ಯದ ತೌಲನಿಕ ವಿವೇಚನೆ' ಎಂಬ ಏಳನೇ ಅಧ್ಯಾಯದಲ್ಲಿ ತೌಲನಿಕ ಸಾಹಿತ್ಯ ಎಂದರೇನು? ಎಂಬುದನ್ನು ತಿಳಿಸಲಾಗಿದೆ. ಇದರಲ್ಲಿ ಎರಡು ಉಪ ಶೀರ್ಷಿಕೆಗಳಿವೆ. ಮೊದಲನೆಯದರಲ್ಲಿ ಅ. ನ. ಕೃ. ಮತ್ತು ನಿರಂಜನರವರ ಸಂಕೀರ್ಣ ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವ್ಯಕ್ತಿ ಚಿತ್ರಣ ಮತ್ತು ಜೀವನ ಚರಿತ್ರೆಗಳು ಹಾಗೂ ಎರಡನೇ ಉಪ ಶೀರ್ಷಿಕೆಯಲ್ಲಿ ಅವರಿಬ್ಬರ ಸಂದರ್ಶನಗಳನ್ನು ಕುರಿತಂತೆ ತೌಲನಿಕವಾಗಿ ವಿವೇಚಿಸಲಾಗಿದೆ.

ವ್ಯಕ್ತಿ ಚಿತ್ರಣಗಳನ್ನು ಕುರಿತಂತೆ ಅ.ನ.ಕೃ ಕನ್ನಡ ಕುಲ ರಸಿಕರು, ಕರ್ನಾಟಕದ ಕಲಾವಿದರು ಭಾಗ ೧ ಮತ್ತು ಭಾಗ ೨ ಇವುಗಳ ಜೊತೆಗೆ ಜೀವನ ಚರಿತ್ರೆಗೆ ಸಂಬಂಧಿಸಿದಂತೆ ಕೈಲಾಸಂ, ನಿಡುಮಾಮಿಡಿ ಸನ್ನಿಧಿಯವರು, ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ ಕೃತಿಗಳನ್ನು ಬರೆದು ಅಲ್ಲಿ ಅವರ ವ್ಯಕ್ತಿತ್ವವನ್ನು ವಿಚಾರಗಳನ್ನು ಚರ್ಚಿಸಿದ್ದಾರೆ. ಆದರೆ ನಿರಂಜನರು ನಡೆ ಚೆನ್ನ - ನುಡಿ ಚೆನ್ನ ಎಂಬ ವ್ಯಕ್ತಿ ಚಿತ್ರಣಗಳ ಸಂಕಲನ ಹೊರ ತಂದರು. ಅವರು ಬರೆದ ದಿನಚರಿಯಿಂದ, ರಾಜಧಾನಿಯಿಂದ, ಅಂಕಣ ಎಂಬ ಪತ್ರಿಕಾ ಅಂಕಣ ಸಂಕಲನದಲ್ಲಿ ಕನ್ನಡನಾಡಿಗೆ ಸೇವೆ ನೀಡಿದ ಅನೇಕ ಮಹನೀಯರುಗಳ ವ್ಯಕ್ತಿತ್ವವನ್ನು ಸಾಹಿತ್ಯಕ್ಕೆ ಕೊಟ್ಟ ಕೊಡುಗೆಗಳನ್ನು ಚಿತ್ರಿಸುತ್ತಾರೆ. ಈ ನಿಟ್ಟಿನಲ್ಲಿ ಇವರಿಬ್ಬರ ವ್ಯಕ್ತಿ ಚಿತ್ರಣಗಳನ್ನು ಕುರಿತಂತೆ ಪ್ರತ್ಯೇಕವಾದ ಭಾಗದಲ್ಲಿ ತೌಲನಿಕ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಆ ಮೂಲಕ ಹೇಗೆ ಅ.ನ.ಕೃ ಮತ್ತು ನಿರಂಜನರವರು ವ್ಯಕ್ತಿಗಳ ವ್ಯಕ್ತಿತ್ವವನ್ನು ಭಿನ್ನವಾಗಿ ನೋಡಿದ್ದಾರೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

'ಸಂದರ್ಶನಗಳು' ಎಂಬ ಭಾಗದಲ್ಲಿ ಅ.ನ.ಕೃ ಬರೆದ ನನ್ನನ್ನು ನಾನೇ ಕಂಡೇ ಮತ್ತು ನಿರಂಜನರವರು ವಿವಿಧ ಸಂದರ್ಶಕರೊಡನೆ ನಡೆಸಿದ ಸಂದರ್ಶನ ಗ್ರಂಥ ಮುಖತಃ ಇವೆರಡು ಕೃತಿಗಳನ್ನು ತೌಲನಿಕವಾಗಿ ತೆಗೆದುಕೊಳ್ಳಲಾಗಿದೆ. ಆ ಮೂಲಕ ಅ.ನ.ಕೃ ಮತ್ತು ನಿರಂಜನರವರ ಸಂದರ್ಶನದಲ್ಲಿ ವ್ಯಕ್ತವಾಗುವ ಭಿನ್ನವಾದ ಅಂಶಗಳನ್ನು ವಿವರಿಸಲಾಗಿದೆ. ಇಲ್ಲಿ ಅನಕೃರವರು ನನ್ನನ್ನು ನಾನೇ ಕಂಡೇ ಎಂಬ ಕೃತಿಯಲ್ಲಿ ಸ್ವ-ವಿಮರ್ಶೆಯನ್ನು ಮಾಡಿಕೊಳ್ಳುತ್ತಾರೆ. ಜೊತೆಗೆ ಅನೇಕ

ವಿಚಾರಗಳಿಗೆ ತನನ್ನು ತಾನೇ ವಿಮರ್ಶಿಸಿಕೊಂಡು, ತನ್ನ ನಿಲುವುಗಳನ್ನು ಪ್ರಕಟಪಡಿಸುತ್ತಾರೆ. ನಿರಂಜನರವರು 'ಮುಖತಃ', ಕೃತಿಯಲ್ಲಿ ವಿವಿಧ ಸಂದರ್ಶಕರೊಡನೆ ನಡೆಸಿದ ಪ್ರಶ್ನಾವಳಿ ಮಾದರಿಯ ಸಂದರ್ಶನದ ರೂಪದಲ್ಲಿ ಪ್ರಗತಿ ಪಂಥ, ಒಕ್ಕೂಟ ಇವುಗಳ ಸ್ಥಾಪನೆಗೆ ಕಾರಣವಾದ ಅಂಶ, ತಮ್ಮ ಕಾದಂಬರಿಗಳಲ್ಲಿನ ಸ್ತ್ರಿ ಪಾತ್ರಗಳಲ್ಲಿ ಪ್ರಗತಿಶೀಲ ಕಾಲಘಟ್ಟದ ಸಾಹಿತಿಗಳಿಗಿಂತ ತನ್ನ ಬರಹದಲ್ಲಿ ಭಿನ್ನವಾಗಿರಲು ತಾವು ಬಾಲ್ಯದಲ್ಲಿ ಪಡೆದ ಅನುಭವಗಳಾಗಿವೆ. ಸಾಹಿತಿಯು ರಾಜಕೀಯ ಪಕ್ಷದ ಸದಸ್ಯನಾದರೆ ಅಂತವರಿಂದ ಉತ್ತಮ ಸಾಹಿತ್ಯ ಕೃತಿ ಹೊರ ಬರುವುದಿಲ್ಲ. ಕಾರಣವೆಂದರೆ ಆ ರಾಜಕೀಯ ಪಕ್ಷವು ಆತನ ಸತ್ವವನ್ನು ನಾಶಗೊಳಿಸುತ್ತವೆ ಎಂಬುದನ್ನು ತಮ್ಮ ಸ್ವಂತ ಅನುಭವದ ಹಿನ್ನಲೆಯಲ್ಲಿ ವಿವರಿಸುವ ರೀತಿಯನ್ನು ವಿಶ್ಲೇಷಿಸಲಾಗಿದೆ.

ಅ.ನ.ಕೃ ರವರು 'ಸಾಹಿತ್ಯ ರತ್ನ' ಎಂಬ ಸಂದರ್ಶನದಲ್ಲಿ ತನ್ನ ಕೃತಿಗಳಾದ 'ಉದಯರಾಗ', 'ಆಹುತಿ', 'ರಾಜಾರವಿವರ್ಮ' ಮೊದಲಾದವುಗಳ ಮೇಲೆ ಬಂದ ಟೀಕೆಗಳನ್ನು ಕುರಿತಂತೆ ತನ್ನ ಬರಹಗಳು ಮಡಿವಂತ ಮನೋಭಾವದವರಿಗೆ ಹಿಡಿಸುವುದಿಲ್ಲ. ತಾನು ವಿಚಾರವಂತರಿಗಾಗಿ ಬರೆದ ಕೃತಿಗಳಾಗಿವೆ, ತನ್ನದು ವಿಚಾರವಂತರ ಕೃತಿಗಳೆಂದು ತಿಳಿಸುತ್ತಾರೆ. ನಿರಂಜನರು ಸಂದರ್ಶನ ಎಂಬುದು ಪಶ್ಚಿಮದಿಂದ ಬಂದ ಪ್ರಕಾರ ಇದನ್ನು ಮೊದಲು ಪತ್ರಕರ್ತರು ನಡೆಸುತ್ತಿದ್ದರು. ಕಾಲಕ್ರಮೇಣ ಸಾಹಿತ್ಯ ವಲಯಕ್ಕೂ ಸಂದರ್ಶನವೆಂಬುದು ಬೆಳೆದು ಬಂದಿದೆ. ಸಂದರ್ಶನಿಗೆ ಇರಬೇಕಾದ ಗುಣಗಳನ್ನು ಉಲ್ಲೇಖಿಸುತ್ತಾರೆ. ಕೊನೆಗೂ ತಾನು ಕೂಡ ಪತ್ರಕರ್ತನಾಗಿದ್ದಾಗ ಸಂದರ್ಶಕರಿಗೆ ಪ್ರಶ್ನೆ ಕೇಳಿ ಉತ್ತರವನ್ನು ಪಡೆದುಕೊಳ್ಳುತ್ತಿದ್ದ ರೀತಿಯನ್ನು ಸ್ಮರಿಸುತ್ತಾರೆ. ಈ ರೀತಿಯ ಅನೇಕ ವಿಚಾರಗಳನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ.

ಸಮಾರೋಪ ಅಧ್ಯಾಯ ಎಂಟರಲ್ಲಿ ಪ್ರಸ್ತುತ ನಿಬಂಧದ ಒಟ್ಟಾರೆ ಫಲಿತಗಳ ಸಾರ ಸಂಗ್ರಹವನ್ನು ನೀಡಲಾಗಿದೆ.

ಅಧ್ಯಾಯ ೨

ಇದುವರೆಗಿನ ಅಧ್ಯಯನಗಳ ವಿಮರ್ಶಾತ್ಮಕ ಸಮೀಕ್ಷೆ

ಪೀಠಿಕೆ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲ ಕಾಲಘಟ್ಟವು ಒಂದು. ಪ್ರಗತಿಶೀಲ ಸಾಹಿತಿಗಳು ಬರವಣಿಗೆಗಳ ಮೂಲಕ ಅನೇಕ ವಿಷಯಗಳನ್ನು ಈ ಸಾಹಿತ್ಯ ಚಳುವಳಿಯ ಹಿನ್ನೆಲೆಯಲ್ಲಿ ವ್ಯಕ್ತಪಡಿಸಿದ್ದಾರೆ. ಪ್ರಗತಿಶೀಲ ಲೇಖಕರಲ್ಲಿ ಅ. ನ. ಕೃ. ಮತ್ತು ನಿರಂಜನರು ಪ್ರಮುಖರಾದವರು. ಇವರು ತಮ್ಮ ಸೃಜನಶೀಲ ಸಾಹಿತ್ಯದ ಜೊತೆಗೆ ಅನೇಕ ವಿಚಾರಗಳನ್ನು ವಿಚಾರ ಸಾಹಿತ್ಯದ ಮೂಲಕ ದಾಖಲಿಸಿದ್ದಾರೆ. ಅದರಂತೆ ಇವರಿಬ್ಬರ ಸೃಜನಶೀಲ ಬರವಣಿಗೆಯನ್ನು ಕುರಿತಂತೆ ಕೆಲವು ಅಧ್ಯಯನಗಳು ನಡೆದಿವೆ. ಆದರೆ ಅವರ ವಿಚಾರ ಸಾಹಿತ್ಯವನ್ನು ಸೂಕ್ಷ್ಮವಾಗಿ ಗಮನಿಸಿರುವಂತಹ ಬರಹಗಳು ಬಂದಿರುವುದು ತೀರಾ ವಿರಳ ಎನ್ನಬಹುದು. ಪ್ರಗತಿಶೀಲ ಸಾಹಿತ್ಯ ಚಳುವಳಿಯ ಪ್ರಮುಖ ಲೇಖಕರಾದ ಇವರಿಬ್ಬರ ವಿಚಾರ ಸಾಹಿತ್ಯವನ್ನು ಕುರಿತಂತೆ ಕೆಲವು ವಿಮರ್ಶಕರು, ಚಿಂತಕರು, ಬರಹಗಾರರು, ಅವರ ಬರವಣಿಗೆಯನ್ನು ವೈಚಾರಿಕ ಮತ್ತು ವಿಮರ್ಶಾತ್ಮಕ ಧಾಟಿಯಲ್ಲಿ ಗುರುತಿಸಿದ್ದಾರೆ. ಈ ರೀತಿ ನಡೆದ ಅಧ್ಯಯನಗಳನ್ನು ವಿಮರ್ಶಾತ್ಮಕವಾಗಿ ಗಮನಿಸಿರುವುದನ್ನು ಈ ಕೆಳಕಂಡಂತೆ ತಿಳಿಯಬಹುದು.

ಅ. ನ. ಕೃ. ರವರ ವಿಚಾರ ಸಾಹಿತ್ಯದ ವಿಮರ್ಶಾತ್ಮಕ ಸಮೀಕ್ಷೆ

ಸ್ವತಂತ್ರ ಕೃತಿಗಳು

ಅ. ನ. ಕೃ. ರವರ ಸಮಗ್ರ ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸ್ವತಂತ್ರ ಕೃತಿಗಳು ಹೊರ ಬಂದಿಲ್ಲ. ಆದರೆ ಬದುಕು-ಬರಹಗಳನ್ನು ಕುರಿತಂತೆ ತ. ರಾ. ಸು. ರವರು 'ಅ. ನ. ಕೃ.', ಜಿ. ಎಸ್. ಅಮೂರರವರ 'ಅ. ನ. ಕೃಷ್ಣರಾಯ', ಎಸ್. ವಿದ್ಯಾಶಂಕರರವರು 'ಅ. ನ. ಕೃ. ಬದುಕು-ಬರಹ', ನರಹಳ್ಳಿ ಬಾಲಸುಬ್ರಮಣ್ಯನವರು 'ಅ. ನ. ಕೃ. ಮತ್ತು ಕನ್ನಡ ಸಂಸ್ಕೃತಿ' ಎಂಬ ಕೃತಿಗಳನ್ನು ನೋಡಬಹುದು. ಈ ರೀತಿಯ ಕೃತಿಗಳಲ್ಲಿ ಅ. ನ. ಕೃ. ಬರೆದಿರುವ ಜೀವನ ಚರಿತ್ರೆ, ಪ್ರಬಂಧ, ವೀರಶೈವ ಸಾಹಿತ್ಯ, ನಾಟಕ ಕಲೆ, ಕನ್ನಡ-ಕರ್ನಾಟಕದ ವಿಚಾರಗಳು, ಮೊದಲಾದ ಅವರ ವಿಚಾರ ಸಾಹಿತ್ಯಕ್ಕೆ ಕೆಲವೊಂದು ವಿಮರ್ಶೆಗಳು ಬಂದಿರುವುದನ್ನು ಗಮನಿಸಬಹುದು.

ಪ್ರಗತಿಶೀಲ ಕಾಲಘಟ್ಟದಲ್ಲಿನ ಲೇಖಕರಲ್ಲಿ ಪ್ರಮುಖರು, ಅ. ನ. ಕೃ. ರವರ ಸಮಕಾಲೀನರು, ಸ್ನೇಹಿತರಾದ ತ. ರಾ. ಸು. ರವರು, 'ಅ. ನ. ಕೃ.' ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಈ ಗ್ರಂಥದಲ್ಲಿ ಒಂಭತ್ತು ಅಧ್ಯಾಯಗಳಿವೆ. ತ. ರಾ. ಸು. ರವರು ಕಥೆಗಾರರಾಗಿ, ಕಾದಂಬರಿಕಾರರಾಗಿ, ನಾಟಕಕಾರರಾಗಿ, ಪ್ರಗತಿಶೀಲ ಸಾಹಿತ್ಯ ಚಳುವಳಿಯ ನೇತಾರರಾಗಿ ಗುರುತಿಸಿದ್ದಾರೆ ಮತ್ತು ಅವರ ಸಾಹಿತ್ಯದ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಅಧ್ಯಾಯ ೬ ರಲ್ಲಿ ವಿಮರ್ಶಕ ಎಂಬ ಭಾಗದಲ್ಲಿ ತ. ರಾ. ಸು. ರವರು "ಕೃಷ್ಣರಾಯರ ವಿಮರ್ಶಾರಂಗ ವಿಸ್ತಾರವಾದುದು, ರೀತಿಯೂ ವೈವಿಧ್ಯವಾದುದು. ಕಾದಂಬರಿ, ಕಥೆ, ನಾಟಕ, ಹರಟೆ, ಜೀವನ ಚರಿತ್ರೆ, ವ್ಯಕ್ತಿಚಿತ್ರ, ನೇರವಾದ ವಿಮರ್ಶೆ, ಹೀಗೆ

ಹಲವಾರು ರೂಪದಲ್ಲಿ ತಮ್ಮ ದೇಶ, ದೇಶದ ಜನ, ಸಮಾಜ, ಆಚಾರ ವಿಚಾರಗಳು, ಕಲೆಗಳು ಎಲ್ಲವನ್ನೂ ವಿಮರ್ಶೆ ಮಾಡಿದ್ದಾರೆ"[7] ಎಂದಿದ್ದಾರೆ. ಅ. ನ. ಕೃಷ್ಣರಾಯರು ಬರೆದ 'ಸಾಹಿತ್ಯ ಮತ್ತು ಜೀವನ' ಎಂಬ ಗ್ರಂಥದ ಅನೇಕ ವಾಕ್ಯಗಳನ್ನು ಉದಾಹರಿಸುತ್ತಾರೆ. ವಿಮರ್ಶಕ ಎಂದರೆ ಯಾರು, ಆತನ ಕರ್ತವ್ಯಗಳೇನು, ಕನ್ನಡ ನಾಡಿಗೆ ಬೇಕಾದ ಸಾಹಿತ್ಯ ಯಾವುದು, ಕನ್ನಡ ಲಲಿತ ಕಲೆಗಳು, ಅವುಗಳ ಪರಿಸ್ಥಿತಿ, ಪರಿಣಾಮಗಳನ್ನು ದಾಖಲಿಸಿದ್ದಾರೆ. ಹಲವಾರು ಕನ್ನಡ ಕಲಾವಿದರ ಬಗ್ಗೆ ವ್ಯಕ್ತಿಚಿತ್ರಣವನ್ನು 'ಕರ್ನಾಟಕದ ಕಲಾವಿದರು' ಎಂಬ ಗ್ರಂಥದಲ್ಲಿ ನೀಡಿದ್ದಾರೆ. ಕನ್ನಡ ನಾಡಿನಲ್ಲಿ ಕರ್ನಾಟಕದ ನಾಟಕ, ಸಂಗೀತ ಮತ್ತು ಕಲೆಗಳ ಹೀನ ಸ್ಥಿತಿ, ಅವುಗಳ ಮೇಲೆ ಪರಕೀಯರ ಅಭಿಮಾನದ ಮುದ್ರೆ, ಕನ್ನಡಿಗರ ಆಲಸ್ಯ ಇವೆಲ್ಲಾ ಕನ್ನಡ ನಾಡಿನ ಕಲೆ ಮತ್ತು ಕಲಾವಿದರ ಮೇಲೆ ಮಾಡಿದ ಪರಿಣಾಮವನ್ನು ವಾಸ್ತವ ನೆಲೆಯಲ್ಲಿ ಚಿತ್ರಿಸಿದ್ದಾರೆ ಎಂಬುದಾಗಿ ತ. ರಾ. ಸು. ರವರು ತಿಳಿಸಿದ್ದಾರೆ.

ಮುಂದುವರೆದು ಅ. ನ. ಕೃ. ಬರೆದ 'ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ' ಎಂಬ ಕೃತಿಯ ಅನೇಕ ವಾಕ್ಯಗಳನ್ನು ಉದಾಹರಣೆಯಾಗಿ ನೀಡಿ ಕಲೆಯನ್ನು ಕುರಿತ ರಾಜಾ ರವಿವರ್ಮನನ್ನು ವಿಶ್ಲೇಷಿಸಿದ್ದಾರೆ.

"ಅ. ನ. ಕೃ. ರವರ ನನ್ನನ್ನು ನಾನೇ ಕಂಡೆ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಬಗೆಯ ಗ್ರಂಥ. ಇದರಲ್ಲಿ ಸ್ವ-ಸಂದರ್ಶನದ ದಾರಿಯಲ್ಲಿ ನಮ್ಮ ಜೀವನ, ಸಾಹಿತ್ಯ, ಸಮಾಜದ ಸಮಸ್ಯೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಜನತೆಯ ಮುಂದೆ ಮಂಡಿಸಿದ ವ್ಯಕ್ತಿ"[8] ಎಂದು ವ್ಯಾಖ್ಯಾನಿಸಿದ್ದಾರೆ. ಹಾಗೂ ಈ ಕೃತಿಯ ಅನೇಕ ಸಾಲುಗಳನ್ನು ಉದಾಹರಿಸುತ್ತಾರೆ. ಜೊತೆಗೆ ಅ. ನ. ಕೃ. ರವರ ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ ಗ್ರಂಥದ ಅನೇಕ ಸಾಲುಗಳನ್ನು ಕೂಡಾ ಇಲ್ಲಿ ಉದಾಹರಿಸಿದ್ದಾರೆ. ಅಂದರೆ, ತ. ರಾ. ಸು. ರವರು ವಿಮರ್ಶಕ ಎಂಬ ಅಧ್ಯಾಯದ ಶೀರ್ಷಿಕೆಗೆ ಅನುಗುಣವಾಗಿ ಅ. ನ. ಕೃ. ರವರ ಅನೇಕ ವಿಚಾರ ಸಾಹಿತ್ಯದ ಕೆಲವೊಂದು ಸಾಲುಗಳನ್ನು ಉದಾಹರಣೆಯಾಗಿ ಕೊಟ್ಟು ಅವರ ವೈಚಾರಿಕ ನಿಲುವು ಯಾವ ಬಗೆಯದು ಎಂಬುದಾಗಿ ಸೂಚ್ಯವಾಗಿ ತಿಳಿಸುತ್ತಾರೆ ಹೊರತು ತ. ರಾ. ಸು. ರವರು ಅವುಗಳನ್ನು ಹೆಚ್ಚು ವಿಶ್ಲೇಷಿಸುವ ಹಂತಕ್ಕೆ ಹೋಗಿಲ್ಲ ಎನ್ನಬಹುದು.

ಇದೇ ಮಾದರಿಯಲ್ಲಿ ನರಹಳ್ಳಿ ಬಾಲಸುಬ್ರಮಣ್ಯರವರು ಬರೆದಿರುವ 'ಅ. ನ. ಕೃ. ಮತ್ತು ಕನ್ನಡ ಸಂಸ್ಕೃತಿ' ಎಂಬ ಗ್ರಂಥದಲ್ಲಿ ಕಥೆಗಾರರಾಗಿ, ಕಾದಂಬರಿಕಾರರಾಗಿ, ಪ್ರಗತಿಶೀಲ ಸಾಹಿತಿಯಾಗಿ, ನಾಟಕಕಾರರಾಗಿ, ವಿಮರ್ಶಕರಾಗಿ ಅ. ನ. ಕೃ. ರವರನ್ನು ಚಿತ್ರಿಸಿದ್ದಾರೆ. ಏಳನೆಯ ಅಧ್ಯಾಯದಲ್ಲಿ ವಿಚಾರ-ವಿಮರ್ಶೆ ಎಂಬಲ್ಲಿ ಅ. ನ. ಕೃ. ರವರು ಬರೆದ ಹೊಸ ಹುಟ್ಟು, ಸಜೀವ ಸಾಹಿತ್ಯ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, ಸಾಹಿತ್ಯ ಮತ್ತು ಕಾಮ ಪ್ರಚೋದನೆ, ಸಾರ್ಥಕ ಸಾಹಿತ್ಯ ಮೊದಲಾದ ಕೃತಿಗಳಲ್ಲಿ ಸಾಹಿತ್ಯಕ್ಕೆ ಸಂಬಂಧಿಸಿದಂತೆ ತಮ್ಮ ನಿಲುವುಗಳನ್ನು ಅ. ನ. ಕೃ. ವ್ಯಕ್ತಪಡಿಸಿರುವ ರೀತಿಯನ್ನು ತಿಳಿಸುತ್ತಾರೆ.

"ಇವುಗಳಲ್ಲಿ ಬಹುಪಾಲು ಪ್ರಗತಿಶೀಲ ಸಾಹಿತ್ಯದ ಸ್ವರೂಪವನ್ನು ವಿವರಿಸುವ, ಸಮರ್ಥಿಸುವ ಸ್ವರೂಪದಲ್ಲಿವೆ. ಅನೇಕ ಸಂದರ್ಭಗಳಲ್ಲಿ ಇವು ಸ್ವ-ಸಮರ್ಥನೆಯ ಧಾಟಿಯನ್ನು ಹಿಡಿದಿವೆ"[9] ಎಂದಿದ್ದಾರೆ. ಪ್ರಗತಿಶೀಲ ಚಳುವಳಿಯ ಸಂದರ್ಭದಲ್ಲಿ ಆ ಸಾಹಿತ್ಯದ ಸ್ವರೂಪ ವನ್ನು ವಿವರಿಸಿ.

ಪ್ರತಿಪಾದಿಸುವ ಸಮರ್ಥ ವಿಮರ್ಶಕರ ಕೊರತೆಯಿತ್ತು, ಅದನ್ನು ಲೇಖಕರೇ ನಿರ್ವಹಿಸುವ ಹೊಣೆಗಾರಿಕೆಯು ಇತ್ತು. ಈ ನಿಟ್ಟಿನಲ್ಲಿ ಅ. ನ. ಕೃ. ರವರು ಅವರ ಸೃಜನಶೀಲ ಬರವಣಿಗೆಯ ಜೊತೆಗೆ ಅದರ ಸ್ವರೂಪ ಮತ್ತು ಅದರ ಅಗತ್ಯಗಳನ್ನು ಕೂಡಾ ವಿವರಿಸಿ ಬರೆದರು ಎಂಬ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಲೇಖಕರು ಅ. ನ. ಕೃ. ರವರು ವೀರಶೈವ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳಲ್ಲಿ ಒಂದಾದ 'ಬಸವಣ್ಣನವರ ಅಮೃತವಾಣಿ' ಕೃತಿಯನ್ನು "ಬಸವಣ್ಣನ ಸಾಮಾಜಿಕ, ಸಾಂಸ್ಕೃತಿಕ ವ್ಯಕ್ತಿತ್ವವನ್ನು ಗುರುತಿಸುವ ಕನ್ನಡದ ಅಪರೂಪದ ಮೊದಲ ಕೃತಿಗಳಲ್ಲಿ ಒಂದಾಗಿದೆ"[೪] ಎಂದಿದ್ದಾರೆ. ಜಾತಿ ಧರ್ಮಗಳನ್ನು ಮೀರಿ ಒಬ್ಬ ಮಹಾನ್ ವ್ಯಕ್ತಿಯ ವ್ಯಕ್ತಿತ್ವವನ್ನು ತಿಳಿದುಕೊಳ್ಳುವುದು ಹೇಗೆ ಎಂಬುದನ್ನು ಈ ಪುಸ್ತಕ ನಮಗೆ ತೋರಿಸಿಕೊಡುತ್ತದೆ ಎಂದು ತಿಳಿಸಿದ್ದಾರೆ. ಅ. ನ. ಕೃ. ರವರು ಬರೆದ 'ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ' ಎಂಬ ಕೃತಿಯಲ್ಲಿರುವ ಏಳು ಲೇಖನಗಳ ವಿಷಯವನ್ನು ಸಂಕ್ಷಿಪ್ತವಾಗಿ ದಾಖಲಿಸುತ್ತಾರೆ. 'ಚಿತ್ರಕಲೆ', 'ನಾಟಕ ಕಲೆ', 'ಕರ್ನಾಟಕದ ಕಲಾವಿದರು ಭಾಗ ೧ ಮತ್ತು ಭಾಗ ೨' ಮೊದಲಾದ ಕೃತಿಗಳಲ್ಲಿರುವ ಕೆಲವು ವಿಷಯಗಳನ್ನು ಪ್ರಸ್ತಾಪಿಸುತ್ತಾರೆ.

"ಅ. ನ. ಕೃ. ಸಮಗ್ರ ಗದ್ಯ ಬರಹಗಳನ್ನು ಅವಲೋಕಿಸಿದರೆ, ತಮ್ಮ ಸಾಹಿತ್ಯ ಮಾರ್ಗವನ್ನು ಸಮರ್ಥಿಸಿಕೊಳ್ಳುವ ಸ್ವರೂಪದ ಬರವಣಿಗೆ ಒಂದು ಧಾರೆಯಾಗಿ ಕಂಡು ಬಂದರೆ, ಕನ್ನಡ ಸಂಸ್ಕೃತಿ ಚರಿತ್ರೆಯನ್ನು ರೂಪಿಸುವ ಬರಹಗಳು ಮತ್ತೊಂದು ಧಾರೆಯಾಗಿ ನಮಗೆ ಕಾಣಿಸುತ್ತವೆ. ಮೊದಲ ಧಾರೆಗಿಂತ ಎರಡನೆಯ ಧಾರೆಯ ಬರಹ ಸಹಜವಾಗಿಯೇ ಸಾಂಸ್ಕೃತಿಕವಾಗಿ ಹೆಚ್ಚು ಮಹತ್ವದ್ದಾಗಿದೆ"[೫] ಎಂದು ಹೇಳಿದ್ದಾರೆ. ಲೇಖಕರು ಇಲ್ಲಿ ಅ. ನ. ಕೃ. ರವರ ಬರವಣಿಗೆಯನ್ನು ಅದರಲ್ಲಿಯೂ ಅವರ ವಿಚಾರ ಸಾಹಿತ್ಯವು ಕನ್ನಡ ಸಂಸ್ಕೃತಿ ಚರಿತ್ರೆಯನ್ನು ರೂಪಿಸುವ ಬರಹಗಳಾಗಿ ಎಷ್ಟು ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ ಎಂಬುದನ್ನು ತಿಳಿಸಿದ್ದಾರೆ. ಇವುಗಳ ಅಧ್ಯಯನ ಎಷ್ಟು ಪ್ರಾಮುಖ್ಯತೆ ಪಡೆದುಕೊಂಡಿದೆ ಎಂಬುದನ್ನು ಈ ಸಾಲುಗಳ ಹಿನ್ನೆಲೆಯಲ್ಲಿ ತಿಳಿಯಬಹುದು.

ಎಸ್. ವಿದ್ಯಾಶಂಕರರವರು ಬರೆದಿರುವ 'ಅ. ನ. ಕೃ. ಬದುಕು-ಬರಹ' ಎಂಬ ಗ್ರಂಥದಲ್ಲಿ ಅ. ನ. ಕೃ. ರವರ ಸಮಗ್ರ ಸಾಹಿತ್ಯವನ್ನು ಕುರಿತಂತೆ ಚರ್ಚಿಸಲಾಗಿದೆ. ಸಂಕೀರ್ಣ ಕೃತಿಗಳು ಎಂಬ ಭಾಗದಲ್ಲಿ ಅ. ನ. ಕೃ. ರವರು ಬರೆದಿರುವ ಕರ್ನಾಟಕದ ಕಲಾವಿದರು, ಸಾಹಿತ್ಯ ಮತ್ತು ಯುಗಧರ್ಮ, ಸಜೀವ ಸಾಹಿತ್ಯ, ವಿಶ್ವಬಂಧು ಬಸವೇಶ್ವರ, ಅಲ್ಲಮ ಪ್ರಭು ಮೊದಲಾದ ಕೃತಿಗಳನ್ನು ಕುರಿತಂತೆ ಆ ಗ್ರಂಥದಲ್ಲಿರುವ ವಿಷಯಗಳನ್ನು ಸಂಕ್ಷಿಪ್ತವಾಗಿ ತಿಳಿಸುತ್ತಾರೆ. ಅ. ನ. ಕೃ. ರವರು ತಮ್ಮ ವಿಚಾರ ಸಾಹಿತ್ಯದ ಅನೇಕ ಪ್ರಬಂಧಗಳಲ್ಲಿ ವೈಚಾರಿಕ ಮನೋಭಾವದ ಮೂಲಕ ಸ್ವತಂತ್ರ ಚಿಂತನಪರತೆಯನ್ನು ಪ್ರಕಟಿಸುವುದು ಒಂದು ವಿಶೇಷ ಎಂಬುದಾಗಿ ಪ್ರತಿಪಾದಿಸುತ್ತಾರೆ.

ಜಿ. ಎಸ್. ಅಮೂರರವರ 'ಅ. ನ. ಕೃಷ್ಣರಾಯರು' ಎಂಬ ಕೃತಿಯಲ್ಲಿ 'ನಾಟಕ ಮತ್ತು ರಂಗಭೂಮಿ' ಎಂಬ ಮೂರನೇ ಅಧ್ಯಾಯದಲ್ಲಿ ಅ. ನ. ಕೃ. ರವರ ನಾಟಕಗಳನ್ನು ಕುರಿತಂತೆ ತಿಳಿಸುವ ಸಂದರ್ಭದಲ್ಲಿ ನಾಟಕಗಳು ಸಮಾಜದಲ್ಲಿ ಹೇಗೆ ಪಾತ್ರವನ್ನು ವಹಿಸುತ್ತವೆ ಎಂಬುದರ ಹಿನ್ನೆಲೆಯಲ್ಲಿ 'ನಾಟಕ ಕಲೆ' ಎಂಬ ಪುಸ್ತಕದ ಬಗ್ಗೆ ವಿವೇಚಿಸುತ್ತಾರೆ. 'ಕನ್ನಡ ರಂಗಭೂಮಿಯ ಆಗು ಹೋಗುಗಳು' ಮತ್ತು 'ಕಳೆದ ಕನ್ನಡ ನಾಟಕ' ಎಂಬ ಲೇಖನದಲ್ಲಿ ಸ್ವಾತಂತ್ರ್ಯೋತ್ತರ ಕಾಲದಲ್ಲಿ ರಂಗಭೂಮಿಯ ಅವನತಿಗೆ ಕಾರಣಗಳನ್ನು ಹುಡುಕುವ ಪ್ರಯತ್ನವನ್ನು ಮಾಡಿದ್ದಾರೆ. ಸಮಾಜದ

ಸ್ವಾಸ್ಥ್ಯವನ್ನು ಕಾಪಾಡುವಂತಹ ದೊಡ್ಡ ಹೊಣೆ ನಾಟಕಗಳದ್ದಾಗಿತ್ತು ಎಂಬ ಅ. ನ. ಕೃ. ರವರ ವಿಚಾರದ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾರೆ.

ಲೇಖಕರು 'ಗದ್ಯ ಸಾಹಿತ್ಯ' ಎಂಬ ಭಾಗದಲ್ಲಿ "ಕನ್ನಡ ಸಾಹಿತ್ಯದ ಮುಖ್ಯ ಅಂಗಗಳಲ್ಲೊಂದಾದ ವೀರಶೈವ ಸಾಹಿತ್ಯಕ್ಕೆ ಅ. ನ. ಕೃ. ರವರ ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ ಉತ್ತಮ ಪ್ರವೇಶಿಕೆಯಾಗಿದೆ"[೬] ಎಂದಿದ್ದಾರೆ. ಬಸವಣ್ಣನಿಂದ ಷಡಕ್ಷರದೇವನವರೆಗೆ ವೀರಶೈವ ಸಾಹಿತ್ಯದ ಅನೇಕ ವಿಚಾರಗಳನ್ನು ಅ. ನ. ಕೃ. ರವರು ಚರ್ಚಿಸಿರುವುದನ್ನು ತಿಳಿಸುತ್ತಾರೆ. ಅ. ನ. ಕೃ. ರವರು ಬರೆದ 'ಸಂಸ್ಕೃತಿಯ ವಿಶ್ವರೂಪ' ಎಂಬ ಗ್ರಂಥದಲ್ಲಿರುವ 'ಸಾಹಿತ್ಯದಲ್ಲಿ ವಾಸ್ತವಿಕತೆಯ ಸ್ಥಾನ' ಮತ್ತು 'ಕಾದಂಬರಿಯಲ್ಲಿ ವಾಸ್ತವಿಕತೆ' ಎಂಬ ಎರಡು ವಿಚಾರಗಳನ್ನು ಅ. ನ. ಕೃ. ರವರ ಹಿನ್ನೆಲೆಯಲ್ಲಿಯೇ ಜಿ. ಎಸ್. ಅಮೂರರವರು ವಿಶ್ಲೇಷಿಸುತ್ತಾರೆ. ಅ. ನ. ಕೃ. ರವರು ಬರೆದ 'ಬೆಳೆಯುತ್ತಿರುವ ಕನ್ನಡ ಸಾಹಿತ್ಯ' ಮತ್ತು 'ಸಾರ್ಥಕ ಸಾಹಿತ್ಯ' ದಂತಹ ಲೇಖನಗಳಲ್ಲಿ ಅವರು ಕನ್ನಡ ಸಾಹಿತ್ಯದ ನಿಲುವುಗಳ ಬಗ್ಗೆ ವಿವಿಧ ಸಾಹಿತಿಗಳ ಬಗ್ಗೆ ತುಂಬಾ ತಿಳುವಳಿಕೆಯಿಂದ ಬರೆದಿರುವ ವಿಚಾರವನ್ನು ಹೇಳುತ್ತಾರೆ.

ಅ. ನ. ಕೃ. ರವರು ಬರೆದ ಜೀವನ ಚರಿತ್ರೆಗಳಲ್ಲಿ ಒಂದಾದ 'ಕೈಲಾಸಂ' ಎಂಬ ಗ್ರಂಥದಲ್ಲಿ ಅ. ನ. ಕೃ. ರವರು ಕೈಲಾಸಂರವರು ಸ್ನೇಹಿತರಾಗಿದ್ದರೂ ಅವರ ಮೇಲಿನ ಯಾವುದೇ ಭಾವಾವೇಶಕ್ಕೆ ಒಳಗಾಗದೆ ಕನ್ನಡ ನಾಟಕ ಸಾಹಿತ್ಯಕ್ಕೆ ಕೈಲಾಸಂರವರ ಕೊಡುಗೆ ಮತ್ತು ಅವರ ಹಾಸ್ಯ ಪ್ರವೃತ್ತಿ, ಸ್ತ್ರೀ ಪಾತ್ರಗಳನ್ನು ಕುರಿತಂತೆ ಕೈಲಾಸಂರವರ ನಿಲುವು ಇವುಗಳನ್ನು ಗ್ರಂಥದ ಹಿನ್ನೆಲೆಯಲ್ಲಿ ಅಮೂರರವರು ಅ. ನ. ಕೃ. ರವರ ವಿಮರ್ಶಾ ನಿಲುವುಗಳನ್ನು ತಿಳಿಸುತ್ತಾರೆ.

ಲೇಖಕರು ಇದೇ ಲೇಖನದಲ್ಲಿ "ಸಾಹಿತ್ಯ ಮತ್ತು ಕಾಮ ಪ್ರಚೋದನೆಯಲ್ಲಿ ತನ್ನ ವಸ್ತುವಿನ ಆಯ್ಕೆಯಲ್ಲಿ ಸಾಹಿತಿಗಿರುವ ಸ್ವಾತಂತ್ರ್ಯದ ಬಲವಾದ ಸಮರ್ಥನೆಯ ಪ್ರಯತ್ನವಿದೆ. ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಶೋಷಣೆಯ ಮೇಲೆಯೇ ನಿಂತಿದ್ದ, ಸ್ತ್ರೀಯರ ವಿಷಯದಲ್ಲಿ ಅದು ವಿರುದ್ಧ ಧೋರಣೆಯನ್ನು ಹೊಂದಿದೆ ಎಂದು ಈ ಪುಸ್ತಕದಲ್ಲಿ ಅ. ನ. ಕೃ. ವಾದಿಸುತ್ತಾರೆ. ಹಳೆಯ ಸಾಹಿತ್ಯದಿಂದ ಅವತರಣಿಕೆಗಳನ್ನಾಯ್ದು ಸ್ತ್ರೀ ಕೇವಲ ಭೋಗ ವಸ್ತುವಾಗಿ ಮಾತ್ರ ಚಿತ್ರಿತಳಾಗಿದ್ದಾಳೆ ಎಂಬ ತರ್ಕವನ್ನು ಅವರು ಮುಂದಿಡುತ್ತಾರೆ. ಸ್ತ್ರೀ ಪುರುಷರ ಸಮಾನತೆ, ಲೈಂಗಿಕ ಶಿಕ್ಷಣದ ಅವಶ್ಯಕತೆ ಇವು ಈ ಪುಸ್ತಕದಲ್ಲಿ ಬರುವ ಇನ್ನಿತರ ವಿಷಯಗಳು. ಈ ದೀರ್ಘ ಪ್ರಬಂಧ ಕಾಮುಕತೆ ಮತ್ತು ಅಶ್ಲೀಲತೆಗಳ ವಿವೇಚನೆಯೊಂದಿಗೆ ಮುಕ್ತಾಯವಾಗುತ್ತದೆ. ಈ ಪುಸ್ತಕ ಅವರು ಆರಿಸಿಕೊಂಡ ವಿಷಯಕ್ಕೆ ಸಂಬಂಧಪಟ್ಟ ಕೋಶದಂತಿದೆ. ಆದರೆ ಅದರಲ್ಲಿ ಸುಸಂಬದ್ಧವಾದ ತರ್ಕಶುದ್ಧ ವಿಚಾರ ಸರಣಿಯನ್ನು ನಾವು ಕಾಣಲಾರೆವು. ಸಡಿಲವಾದ ರಚನೆ ಮತ್ತು ಶಬ್ದಾಡಂಬರಗಳಿಂದಾಗಿ ಪುಸ್ತಕ ಇನ್ನಷ್ಟು ದುರ್ಬಲವಾಗಿದೆ"[೭] ಎಂದು ಅಭಿಪ್ರಾಯಿಸುತ್ತಾರೆ. ಅ. ನ. ಕೃ. ರವರು ಬರೆದ ಸಾಹಿತ್ಯ ಮತ್ತು ಕಾಮಪ್ರಚೋದನೆ ಎಂಬ ಗ್ರಂಥವನ್ನು ವಿಶ್ಲೇಷಿಸುತ್ತಾರೆ. ಅ. ನ. ಕೃ. ರವರು ಆಯ್ದುಕೊಂಡ ವಿಷಯದ ಬಗ್ಗೆ ಸಮರ್ಥನೆ ಕೊಡುವ ಮತ್ತು ಅಸ್ಪಷ್ಟ ಬರಹದ ಧಾಟಿಯನ್ನು ಚರ್ಚಿಸುತ್ತಾರೆ.

ಅ. ನ. ಕೃ. ರವರ ಕಲಾವಿಮರ್ಶೆಯ ಮೇಲೆ ಆನಂದ ಕುಮಾರ ಸ್ವಾಮಿಯವರ ಪ್ರಭಾವ, ಕನ್ನಡದ ಕೆಲವೇ ಕಲಾವಿಮರ್ಶಕರಲ್ಲಿ ಅ. ನ. ಕೃ. ಹೇಗೆ ಮುಖ್ಯರು ಎಂಬ ವಿಷಯವನ್ನು

'ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ' ಎಂಬ ಅ. ನ. ಕೃ. ರವರ ಗ್ರಂಥದಲ್ಲಿ ಅನೇಕ ಚಿತ್ರಕಲೆಯ ಲೇಖನಗಳನ್ನು ಪರಿಚಯಾತ್ಮಕವಾಗಿ ಲೇಖಕರು ಚರ್ಚಿಸಿದ್ದಾರೆ.

"ಅ. ನ. ಕೃ. ರವರ 'ನನ್ನನ್ನು ನಾನೇ ಕಂಡೆ' ಮತ್ತು 'ಹೊಸಹುಟ್ಟು' ಎಂಬ ಇವೆರಡು ಪುಸ್ತಕಗಳು ಕೂಡಾ ಅವರ ನಂಬಿಕೆಯ ಧೋರಣೆಗಳಾಗಿವೆ. ಜಾತಿ, ಧರ್ಮ, ರಾಷ್ಟ್ರೀಯ ಐಕ್ಯ, ಪ್ರಾದೇಶಿಕತೆ, ಆರ್ಥಿಕತೆ, ಸಾಹಿತ್ಯದಲ್ಲಿ ಪ್ರಗತಿ, ಶಿಕ್ಷಣ ಮಾಧ್ಯಮದಂತಹ ಅನೇಕ ವಿಷಯಗಳ ಬಗ್ಗೆ ಅ. ನ. ಕೃ. ವಿಚಾರ, ಅಭಿಪ್ರಾಯಗಳು ಇಲ್ಲಿ ನಮಗೆ ನೋಡ ಸಿಗುತ್ತವೆ"[6] ಎಂದು ಅಭಿಪ್ರಾಯಿಸುತ್ತಾರೆ. ಇಲ್ಲಿ ಲೇಖಕರು ಅ. ನ. ಕೃ. ರವರ ಒಟ್ಟಾರೆ ವಿಚಾರಧಾರೆಗಳು ಏನು ಎಂಬುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ.

ಜಿ. ಎಸ್. ಅಮೂರರವರು 'ಕರ್ನಾಟಕದ ಕಲಾವಿದರು' ಗ್ರಂಥದ ಎರಡು ಸಂಪುಟಗಳು ಕೂಡಾ ವ್ಯಕ್ತಿ ಚಿತ್ರಣಗಳನ್ನು ಒಳಗೊಂಡಿದೆ. ಅ. ನ. ಕೃ. ರವರ 'ಕನ್ನಡ ಕುಲರಸಿಕರು' ಸ್ವಲ್ಪ ಮಟ್ಟಿಗೆ ಭಿನ್ನವಾಗಿದ್ದು ತಮ್ಮ ಸಮಕಾಲೀನ ಬರಹಗಾರರ ಬಗ್ಗೆ ಮುಕ್ತ ಮನಸ್ಸಿನಿಂದ ಬರೆದಿಲ್ಲ ಹಾಗೂ ಒಬ್ಬರ ವ್ಯಕ್ತಿ ಚಿತ್ರದಂತೆ ಇನ್ನೊಬ್ಬರ ವ್ಯಕ್ತಿ ಚಿತ್ರಗಳು ಆರಂಭವಾಗುವುದಿಲ್ಲ. ಪುಸ್ತಕದ ವಿನ್ಯಾಸವೇ ಭಿನ್ನವಾಗಿದ್ದು, ಬಿ. ಎಂ. ಶ್ರೀ, ತೀ. ನಂ. ಶ್ರೀ., ಮಾಸ್ತಿ, ಕುವೆಂಪು, ಶಿವರಾಮ ಕಾರಂತ ಮೊದಲಾದವರ ವಿಮರ್ಶೆಯನ್ನು ಕಾಣುವುದಿಲ್ಲ ಎಂದು ಇಡೀ ಕೃತಿಯನ್ನು ವಿಶ್ಲೇಷಿಸುತ್ತಾರೆ. ಸಾಹಿತಿಗಳ ಬದುಕು ಮತ್ತು ಬರಹಗಳನ್ನು ಒಂದು ರೀತಿಯಲ್ಲಿ ಓದುಗರಿಗೆ ಪರಿಚಯಿಸುವ ಪ್ರಯತ್ನವು ಇಲ್ಲಿದೆ ಎಂಬುದನ್ನು ಗ್ರಹಿಸುತ್ತಾರೆ.

ಅ. ನ. ಕೃ. ರವರು ಬರೆದ 'ಕನ್ನಡದ ದಾರಿ' ಮತ್ತು 'ಅಖಂಡ ಕರ್ನಾಟಕ' ಕೃತಿಗಳನ್ನು ಕುರಿತಂತೆ ಅಮೂರರವರು ಕರ್ನಾಟಕದ ಅನೇಕ ಸಮಸ್ಯೆಗಳ ಬಗ್ಗೆ, ಸಾಮಾಜಿಕ, ಸಾಂಸ್ಕೃತಿಕ ಇತಿಹಾಸ ಬರೆಯುವವರಿಗೆ ಉಪಯುಕ್ತವಾಗಿದ್ದು ಉತ್ತಮ ಭಾಷಣಕಾರರಾದ ಅ. ನ. ಕೃ. ಯಾವುದೇ ಅಂಜಿಕೆ-ಅಳುಕಿಲ್ಲದೆ ತಮ್ಮ ಅಭಿಪ್ರಾಯಗಳನ್ನು ಜನರೆದುರು ಹೇಳುತ್ತಿದ್ದರು. ನೇರ ನಡೆ, ನೇರ ನುಡಿಯ ವ್ಯಕ್ತಿತ್ವ ಅವರದಾಗಿತ್ತು ಎಂದು ಈ ಲೇಖನದಲ್ಲಿ ಹೇಳುತ್ತಾರೆ.

ಅ. ನ. ಕೃ. ರವರ ಸಮಗ್ರ ಸಾಹಿತ್ಯವನ್ನು ಅಭ್ಯಸಿಸಿ ವಿಮರ್ಶಾತ್ಮಕವಾಗಿ ವಿಶ್ಲೇಷಿಸುವ ಸಮಗ್ರ ಸಾಹಿತ್ಯವನ್ನು ಸಂಪಾದಿಸಿರುವ ಶಾ. ಮಂ. ಕೃಷ್ಣರಾಯರು ಬರೆದಂತಹ 'ಪ್ರತಿಭಾವಂತರು' (ಅ. ನ. ಕೃ.-ನಿರ್ಮಾಣ ಪ್ರಶಸ್ತಿ ಪುರಸ್ಕೃತರು) ಎಂಬ ಗ್ರಂಥದಲ್ಲಿ ಅ. ನ. ಕೃ. ಪ್ರಶಸ್ತಿ ಪಡೆದವರ ಬಗ್ಗೆ ಬರೆಯುವ ಈ ಗ್ರಂಥದಲ್ಲಿ ಮುಮ್ಮಾತು (ಮುನ್ನುಡಿ) ಯಲ್ಲಿ ಅ. ನ. ಕೃ. ರವರ ಸಮಗ್ರ ಸಾಹಿತ್ಯವನ್ನು ದೀರ್ಘ ಪುಟಗಳಲ್ಲಿ ಚರ್ಚಿಸಿದ್ದಾರೆ. ಕಥೆ, ಕಾದಂಬರಿ, ನಾಟಕ, ಸಾಹಿತ್ಯದ ಜೊತೆಗೆ ವಿಮರ್ಶೆ ಎಂಬ ಉಪಶೀರ್ಷಿಕೆಯಲ್ಲಿ ಕೈಲಾಸಂರವರೊಂದಿಗೆ ನಾಟಕಗಳನ್ನು ನೋಡುವಾಗಲೂ ವಿಮರ್ಶಿಸುತ್ತಿದ್ದರು. ಅವರ ವಿಮರ್ಶಾ ಪ್ರಜ್ಞೆಯನ್ನು ಅರಿಯಬೇಕಾದರೆ ರಾಜಾ ರವಿವರ್ಮನ ಸ್ಥಾನ, ಕೈಲಾಸಂ, ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ಸಾಹಿತ್ಯ ಮತ್ತು ಯುಗಧರ್ಮ, ಸಾಹಿತ್ಯ ಮತ್ತು ಕಾಮಪ್ರಚೋದನೆ, ಸಾರ್ಥಕ ಸಾಹಿತ್ಯ ಗ್ರಂಥಗಳನ್ನು ಓದಬೇಕು ಎನ್ನುತ್ತಾರೆ. ಅವರಲ್ಲಿ ಒಬ್ಬ ಸಹೃದಯ ವಿಮರ್ಶಕ ಇದ್ದಾನೆಂದು ಬರೆಯುತ್ತಾರೆ. ಅ. ನ. ಕೃ. ಬರೆದ ಜೀವನ ಚರಿತ್ರೆಗಳು ಕೂಡಾ ವಿಮರ್ಶಾ ಗ್ರಂಥವಾಗಿದೆ ಎಂದು ಗ್ರಹಿಸುತ್ತಾರೆ. ವಿಮರ್ಶಾ ಕ್ಷೇತ್ರಕ್ಕೆ ಅ. ನ. ಕೃ. ರವರ ಕೊಡುಗೆಗಳನ್ನು ಅವರ ಗದ್ಯ ಬರಹಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾರೆ.

ಸಂಪಾದನೆಗಳು

ಶಾ. ಮಂ. ಕೃಷ್ಣರಾಯರ ಸಂಪಾದಕತ್ವದಲ್ಲಿ ಹೊರಬಂದ 'ಅಮರ ಚೇತನ' ಗ್ರಂಥ ಪ್ರಮುಖವಾದುದು. ಈ ಗ್ರಂಥ ವ್ಯಕ್ತಿ ಮತ್ತು ಅಭಿವ್ಯಕ್ತಿ ಎಂಬ ಎರಡು ಭಾಗಗಳಿಂದ ಕೂಡಿದ್ದು. ಅಭಿವ್ಯಕ್ತಿ ಭಾಗದಲ್ಲಿ ಅ. ನ. ಕೃ. ರವರ ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಬೆಳಕು ಚೆಲ್ಲುವ ಅನೇಕ ಲೇಖಕರ ವಿಮರ್ಶಾ ಲೇಖನಗಳಿವೆ.

ಕೋ. ಚೆನ್ನಬಸಪ್ಪನವರು 'ಶರಣ ಸಾಹಿತ್ಯಕ್ಕೆ ಕೊಡುಗೆ' ಎಂಬ ಲೇಖನದಲ್ಲಿ ಅ. ನ. ಕೃ ರವರ ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ಅಲ್ಲಮ ಪ್ರಭು, ಬಸವಣ್ಣನವರ ಅಮೃತವಾಣಿ, ವಿಶ್ವ ಬಂಧು ಬಸವೇಶ್ವರರ ಮೂಲಕ ವೀರಶೈವ ಸಾಹಿತ್ಯವನ್ನು ನೋಡುವ ಕ್ರಮ ಭಿನ್ನವಾದುದು ಎಂದು ತಿಳಿಸುತ್ತಾರೆ. ಬಸವಣ್ಣನವರ ಅಮೃತವಾಣಿ ಎಂಬ ಗ್ರಂಥದಲ್ಲಿ ೬೦ ಪುಟಗಳಿಗಿಂತಲೂ ಹೆಚ್ಚು ಬಸವಣ್ಣನವರ ಜೀವನ ಚರಿತ್ರೆಯನ್ನು ಬರೆದದ್ದಲ್ಲದೆ "ಬಸವಣ್ಣನವರು ಧರ್ಮವನ್ನು ಸ್ಥಾಪಿಸಿದರೇ? ಎಂಬ ಪ್ರಶ್ನೆಯನ್ನೆತ್ತಿ ಧರ್ಮವೆಂದರೆ ಮತವೆಂಬ ಸಂಕುಚಿತಾರ್ಥವನ್ನು ಮಾಡದೆ ಮನುಷ್ಯ ಜೀವದೊಂದಿಗೆ ಅಖಂಡವಾಗಿ, ಅನಂತವಾಗಿ, ಅವ್ಯಕ್ತ ಮಧುರವಾಗಿ ಬೆಳೆದು ಬಂದ ಮಾನವಧರ್ಮವೆಂಬ ವಿಶಾಲಾರ್ಥವನ್ನು ಗ್ರಹಿಸಿ – ಬಸವಣ್ಣನವರ ಕಾಲದಲ್ಲಿ ಜನತೆಯ ಅಧ್ಯಾತ್ಮಿಕ ಜೀವನದ ಮೇಲೆ ಬಂಡಿಗಟ್ಟಲೆ ಧೂಳು ಪರಂಪರಿತವಾಗಿ ತುಂಬಿ ತುಳುಕುತ್ತಿತ್ತು. ಅದನ್ನು ತೊಡೆಯುವ ಕೆಲಸವನ್ನು ಬಸವಣ್ಣನವರು ದಿಟ್ಟತನದಿಂದ ಕೈಗೊಂಡರು"[೯] ಎಂದು ಬಸವಣ್ಣನವರ ಮಾನವ ಧರ್ಮ ಕಾರ್ಯವನ್ನು ಈ ಗ್ರಂಥದಲ್ಲಿ ಗ್ರಹಿಸಿದ್ದಾರೆ ಎಂದು ಚೆನ್ನಬಸಪ್ಪನವರು ವ್ಯಾಖ್ಯಾನಿಸಿದ್ದಾರೆ. ಈ ಲೇಖನದಲ್ಲಿ ಲೇಖಕರು ಅ. ನ. ಕೃ. ರವರು ವೀರಶೈವ ಸಾಹಿತ್ಯದ ವಿಚಾರವನ್ನು ಹೇಗೆ ಗ್ರಹಿಸಿದ್ದಾರೆ ಎಂಬುದನ್ನು ವಿಶ್ಲೇಷಿಸಿದ್ದಾರೆ.

'ಹರಟೆ ಮಲ್ಲರು' ಎಂಬ ಲೇಖನದಲ್ಲಿ ಎಂ. ಎಸ್. ನರಸಿಂಹ ಮೂರ್ತಿಯವರು ನಾಡಿಗೇರ ಕೃಷ್ಣರಾಯರ ಒತ್ತಾಯಕ್ಕೆ ಮಣಿದು ಹರಟೆ ಬರೆಯಲು ಪ್ರಾರಂಭಿಸಿದ ಬಗೆ, ಮತ್ತು ಅ. ನ. ಕೃ. ರವರ ಹರಟೆಯ ಸಂಕಲನ 'ಪೊರಕೆ' ಯ ಅನೇಕ ಪ್ರಬಂಧಗಳಲ್ಲಿನ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ. 'ಹಳೆಯದು–ಹೊಸತು' ಎಂಬ ಹರಟೆಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿನ ಮನೋಭಾವ, ಹಳೆಯದರ ಬಗ್ಗೆ ಹೆಚ್ಚಿನ ವ್ಯಾಮೋಹ, ಒಳ್ಳೆಯದು ಎಂದು ಹೇಳಲಾಗದ ಅಂಶವನ್ನು ನಾನಾ ಬಗೆಯಲ್ಲಿ ಲೇಖಕರು ವಿಶ್ಲೇಷಿಸಿರುವ, ಅ. ನ. ಕೃ. ರವರ ವೈಚಾರಿಕ ಅಂಶಗಳನ್ನು ನರಸಿಂಹ ಮೂರ್ತಿಗಳು ವಿಶ್ಲೇಷಿಸುತ್ತಾರೆ. "ರೋಗ ಎಂಬ ಹರಟೆಯಲ್ಲಿ ರೋಗಗಳ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ಇದನ್ನು ಕೇವಲ ದೈಹಿಕವಾಗಿ ಬರುವ ರೋಗ ಮಾತ್ರವಲ್ಲ, ಮಾನಸಿಕವಾಗಿ ಬರುವ ರೋಗ, ಅಧಿಕಾರಕ್ಕಾಗಿ ಬರುವ ರೋಗ, ಪ್ರೀತಿಗಾಗಿ ಬರುವ ರೋಗ, ಹೀಗೆ ಬೇರೆ ರೀತಿಯ ರೋಗಗಳನ್ನು ಸಹ ಅವರು ಹಾಸ್ಯಮಯವಾಗಿ ಚಿತ್ರಿಸುತ್ತಾರೆ"[೧೦] ಎಂದಿದ್ದಾರೆ. ಇಲ್ಲಿ ಲೇಖಕರು ರೋಗದ ವಿವಿಧ ಮಾದರಿಗಳು, ಅದರ ಮಜಲುಗಳನ್ನು ವಿಶ್ಲೇಷಿಸಿರುವುದನ್ನು ಕಾಣಬಹುದು. ಅ. ನ. ಕೃ. ರವರ ಒಂದು ವಿಷಯವನ್ನು ನಾನಾ ರೀತಿಯಲ್ಲಿ ಗ್ರಹಿಸುವ ಪರಿ ಮೊದಲಾದವುಗಳನ್ನು ತಿಳಿಸಿದ್ದಾರೆ. 'ಪೊರಕೆ' ಎಂಬ ಹರಟೆಯ ಮೂಲಕ ಅ. ನ. ಕೃ. ಸಮಾಜದಲ್ಲಿರುವ ಸಣ್ಣ ಪುಟ್ಟ ವಿಷಯಗಳನ್ನು ತನ್ನ ಲೇಖನಿಯಿಂದ ಚುಚ್ಚಲು ಪ್ರಯತ್ನಿಸಿರುವುದನ್ನು ಲೇಖಕರು ವಿಶ್ಲೇಷಿಸಿದ್ದಾರೆ.

ನೀರಗುಂದ ಕೇಶವಮೂರ್ತಿ ರಾವ್‌ರವರು 'ಪೊರಕೆ' ಎಂಬ ಲೇಖನದಲ್ಲಿ ಅ. ನ. ಕೃ. ರವರು ಬರೆದಿರುವ ಹರಟೆಗಳ ಸಂಕಲನ 'ಪೊರಕೆ' ಯಲ್ಲಿರುವ ಲೇಖನಗಳನ್ನು ಪರಿಚಯ ಮಾಡುವುದೇ ನನ್ನ ಉದ್ದೇಶ ಎಂದು ನೇರವಾಗಿ ಹೇಳುತ್ತಾರೆ. ಅಲ್ಲಿರುವ ಹರಟೆಯ ವಿಷಯಗಳನ್ನು ಮಾತ್ರ ಪ್ರಸ್ತಾಪಿಸುತ್ತಾರೆ. ಈ ಹರಟೆಗಳಲ್ಲಿ ಕೆಲವು ಹಾಸ್ಯಗಳಿದ್ದರೂ, ವೈಚಾರಿಕ ಪ್ರಬಂಧಗಳಿದ್ದು ಅದು ಅವರ ವೈಚಾರಿಕತೆಯನ್ನು, ವಿಮರ್ಶಾ ಧಾಟಿಯನ್ನು, ಅದಕ್ಕೆ ಪರಿಹಾರ ನೀಡುವ ಮಾರ್ಗವನ್ನು ದಾಖಲಿಸಿದ್ದಾರೆ.

ಮೈಲಹಳ್ಳಿ ರೇವಣ್ಣನವರು 'ಕೈಲಾಸಂ' ಎಂಬ ಲೇಖನದಲ್ಲಿ ಅ. ನ. ಕೃ. ರವರು ಬರೆದಿರುವ ಜೀವನ ಚರಿತ್ರೆಗಳಲ್ಲಿ ಒಂದಾದ 'ಕೈಲಾಸಂ' ಕೃತಿಯನ್ನು ವಿಶ್ಲೇಷಿಸಿದ್ದಾರೆ. ಅ. ನ. ಕೃ. ರವರು ಕೈಲಾಸಂರವರ ಜೀವನ ಮತ್ತು ನಾಟಕಗಳನ್ನು ವಿಮರ್ಶಿಸಿದ್ದಾರೆ. 'ನಗೆಗಾರಿಕೆ' ಮತ್ತು 'ವಿಚಾರಲಹರಿ' ಶೀರ್ಷಿಕೆಗಳ ಮೂಲಕ ಕೈಲಾಸಂರವರ ವ್ಯಕ್ತಿತ್ವ, ಕನ್ನಡ ನಾಟಕಗಳ ಪ್ರಾಚೀನತೆ, ಕೈಲಾಸಂರವರ ವೈಚಾರಿಕತೆಯನ್ನು ಅ. ನ. ಕೃ. ಪ್ರಶ್ನಿಸಿರುವ ಬಗೆಯನ್ನು ದಾಖಲಿಸಿದ್ದಾರೆ. ಕೈಲಾಸಂ ಅವರಿಗೆ ಸ್ತ್ರೀಯರ ಬಗೆಗಿದ್ದ ಧೋರಣೆಯನ್ನು, ವೇಶ್ಯೆ ಕುರಿತಾದ ವಿಚಾರಗಳು, ಶಿಕ್ಷಣ ವ್ಯವಸ್ಥೆ ಮೊದಲಾದ ಅಂಶಗಳ ಬಗ್ಗೆ ಅ.ನ. ಕೃ. ರವರು ಕೈಲಾಸಂರವರ ಸ್ನೇಹಿತರಾಗಿದ್ದರೂ ವಿಮರ್ಶಕರಾಗಿ ನೇರವಾಗಿ ವಿಶ್ಲೇಷಿಸಿರುವ ಅವರ ಧೋರಣೆಯನ್ನು ತಿಳಿಸಿದ್ದಾರೆ.

ಎಸ್. ಎಸ್. ಕೋಟಿನರವರು ಬರೆದಿರುವ 'ಜೀವನ ಚರಿತ್ರೆ, ಆತ್ಮಚರಿತ್ರೆ, ವ್ಯಕ್ತಿ ಚಿತ್ರಣಗಳು' ಎಂಬ ಲೇಖನದಲ್ಲಿ ಅ. ನ. ಕೃ. ರವರು ಬರೆದ ಕೈಲಾಸಂ, ನಿಡುಮಾಮಿಡಿ ಸನ್ನಿಧಿಯವರು ಮೊದಲಾದ ಜೀವನ ಚರಿತ್ರೆಗಳು, ವ್ಯಕ್ತಿ ಚಿತ್ರಣಗಳನ್ನು ನಿರೂಪಿಸುವ ಕರ್ನಾಟಕದ ಕಲಾವಿದರು ಭಾಗ ೧ ಮತ್ತು ಭಾಗ ೨, ಕನ್ನಡ ಕುಲರಸಿಕರು, ಮೊದಲಾದ ಕೃತಿಗಳನ್ನು ಪರಿಚಯಿಸಲಾಗಿದೆ. ಈ ಎಲ್ಲಾ ಕೃತಿಗಳಲ್ಲಿ ಇನ್ನಿತರ ಕೃತಿಗಳ ಕೆಲವೊಂದು ಲೇಖನಗಳು ದೊರೆಯುವುದರಿಂದ ಪುನರಾವೃತ್ತಿಯೇ ಕಾಣಿಸಿಕೊಂಡು, ಕೃತಿಗಳು ತಮ್ಮ ತಾಜಾತನವನ್ನು ಕಳೆದುಕೊಂಡಿವೆ ಎಂದು ವಿಶ್ಲೇಷಿಸುತ್ತಾರೆ. ಅ. ನ. ಕೃ. ರವರು ಒಂದೆರಡು ಹೊಸ ಲೇಖನಗಳನ್ನು ಸೇರಿಸಿ ಹಳೆಯ ಪುಸ್ತಕದ ಲೇಖನದೊಟ್ಟಿಗೆ ಹೊಸ ಪುಸ್ತಕ ಪ್ರಕಟಿಸುವ ಅವರ ಮನೋಧೋರಣೆಯನ್ನು ಈ ಲೇಖನದ ಮೂಲಕ ಲೇಖಕರು ಪ್ರಶ್ನಿಸುತ್ತಾರೆ.

ತಿ. ತಾ. ಶರ್ಮರವರು ಬರೆದಿರುವ 'ಹೊಸಹುಟ್ಟು' ಎಂಬ ಲೇಖನದಲ್ಲಿ ಅ. ನ. ಕೃ. ರವರು ಬರೆದಿರುವ ಹೊಸಹುಟ್ಟು ಎಂಬ ಪ್ರಬಂಧದಲ್ಲಿನ ಹದಿನಾರು ವಿಷಯಗಳ ಬಗ್ಗೆ ಪ್ರಸ್ತಾಪಿಸುತ್ತಾರೆ. ಈ ಹೊಸಹುಟ್ಟು ಪ್ರಬಂಧದಲ್ಲಿ ಪ್ರಮುಖ ಏಳು ಸಂದೇಶಗಳಿರುವುದನ್ನು ಲೇಖಕರು ವಿಶ್ಲೇಷಿಸಿದ್ದಾರೆ. ಒಟ್ಟಿನಲ್ಲಿ ಈ ಪುಸ್ತಕ ಪರಿಚಯದ ಹಿನ್ನೆಲೆಯಲ್ಲಿ ತಿ. ತಾ. ಶರ್ಮರವರು ಲೇಖನವನ್ನು ಬರೆದಿದ್ದಾರೆ.

'ಸಾಹಿತ್ಯಕ್ಕೆ ಹೊಸಹುಟ್ಟನ್ನು ಕೊಟ್ಟವರು' ಎಂಬ ಲೇಖನದಲ್ಲಿ ಹಾ. ಮಾ. ನಾ. ರವರು ಅ. ನ. ಕೃ. ರವರು ಪ್ರಕಟಿಸಿದ ಹೊಸಹುಟ್ಟು ಎಂಬ ಪುಸ್ತಕವನ್ನು ವಿಶ್ಲೇಷಿಸುತ್ತಾರೆ. ಅವರ ಕಾದಂಬರಿಗಳಿಗೆ ಕೊಟ್ಟ ಗಮನವನ್ನು ವೈಚಾರಿಕ ಬರಹಗಳಿಗೆ ಕೊಡುವವರು ಯಾರು? ಎಂದು ಪ್ರಶ್ನಿಸುತ್ತಾರೆ. ಅ. ನ. ಕೃ. ರವರ ವೈಚಾರಿಕ ಬರಹಗಳು ಕೂಡಾ ಅವರ ಸೃಜನಶೀಲ ಬರವಣಿಗೆಯಂತೆ ಹೆಚ್ಚು ಮಹತ್ವವಾದುದು. ಅದರ ಕಡೆ ಕನ್ನಡ ಸಾಹಿತ್ಯ ವಿಮರ್ಶಕರು ಗಮನ ಹರಿಸದಿದ್ದರ ಬಗೆಯನ್ನು, ಪ್ರಗತಿಶೀಲ ಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯ ಪರಂಪರೆಗೆ ಹೊಸ

ವೈಚಾರಿಕತೆಯನ್ನು ನೀಡಿದ್ದರೂ, ಅದನ್ನು ನೇರವಾಗಿ ಸೂಚಿಸದೇ ಇವರ ವಿಚಾರ ಸಾಹಿತ್ಯದ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯಕ್ಕೆ ಹೊಸಹುಟ್ಟನ್ನು ಕೊಟ್ಟರು ಎಂಬುದಾಗಿ ಪರೋಕ್ಷವಾಗಿ ಚರ್ಚಿಸಿದ್ದಾರೆ.

ಲಕ್ಷ್ಮೀನಾರಾಯಣ ಭಟ್ಟ ತೆಪ್ಪರವರು ಬರೆದಿರುವ 'ಭುವನದ ಭಾಗ್ಯ' ಎಂಬ ಲೇಖನದಲ್ಲಿ ಅ. ನ. ಕೃ. ರವರ 'ಸಂಸ್ಕೃತಿಯ ವಿಶ್ವರೂಪ' ಕೃತಿಯನ್ನು ವಿಮರ್ಶಿಸಿದ್ದಾರೆ. ಸಂಸ್ಕೃತಿಯ ವಿಶ್ವರೂಪ ಪುಸ್ತಕದಲ್ಲಿ ಅವರು ಬೇರೆ ಬೇರೆ ಕಡೆಗಳಲ್ಲಿ ಮಾಡಿದ ಭಾಷಣಗಳನ್ನು ಕೂಡಾ ಇಲ್ಲಿ ಸಂಗ್ರಹಿಸಿದ್ದರ ಬಗ್ಗೆ ಇಲ್ಲಿ ಚರ್ಚಿಸುತ್ತಾರೆ. ಸಂಸ್ಕೃತಿ ಎಂದರೇನು? ಎಂದು ಒಂದು ವಾಕ್ಯದಲ್ಲಿ ಉತ್ತರಿಸದೇ ಅನೇಕ ವಿಷಯಗಳೊಂದಿಗೆ ತಿಳಿಸುತ್ತಾ ಇದೇ ನೋಡಿ ಸಂಸ್ಕೃತಿ ಎಂಬ ಅರಿವನ್ನು ಮೂಡಿಸುತ್ತಾರೆ ಎಂದು ವಿಶ್ಲೇಷಿಸುತ್ತಾರೆ. ಅಂದರೆ ಅ. ನ. ಕೃ. ರವರು ಒಂದು ವಿಷಯವನ್ನು ನೇರವಾಗಿ ತಿಳಿಸದೆ, ಅದಕ್ಕೆ ಹಲವಾರು ಆಯಾಮಗಳಲ್ಲಿನ ವಿಚಾರಗಳು ವಿಷಯಗಳನ್ನು ತಿಳಿಸುತ್ತ, ತಾವು ಹೇಳಬೇಕಾದ ವಿಚಾರಗಳನ್ನು ಓದುಗರಿಗೆ ಅರ್ಥೈಸುವ ಬರವಣಿಗೆಯ ಶೈಲಿ ಭಿನ್ನವಾದುದ್ದು ಎಂದು ಲೇಖಕರು ತಿಳಿಸುತ್ತಾರೆ.

ಆ. ಲ. ನರಸಿಂಹನ್‌ರವರು ಬರೆದಿರುವ 'ಅ. ನ. ಕೃಷ್ಣರಾಯರು ಮತ್ತು ಚಿತ್ರಕಲೆ' ಎಂಬ ಲೇಖನದಲ್ಲಿ ಕೃಷ್ಣರಾಯರು ಹೊರತಂದಿರುವ 'ಚಿತ್ರಕಲೆ', 'ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ' ಈ ಕೃತಿಗಳನ್ನು ವಿಮರ್ಶಿಸಿದ್ದಾರೆ. "ಶಾಸ್ತ್ರ ಗ್ರಂಥಗಳಲ್ಲಿ ಚಿತ್ರಕಲೆಯ ಕುರಿತ ಅಂಶಗಳು ಪ್ರಾಯಶಃ ಪ್ರಥಮ ಬಾರಿಗೆ ಎಂಬಂತೆ ಕನ್ನಡದಲ್ಲಿ ರಚಿತವಾದ ಲೇಖನ"[೧೧] ಎಂದಿದ್ದಾರೆ. ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ ಕೃತಿಯಲ್ಲಿ ಚಿತ್ರಗಳ ಸಹಿತ ವಿಮರ್ಶಿಸುವ ಅ. ನ. ಕೃ. ರವರ ವಿಮರ್ಶಕನ ಮನಃಸ್ಥಿತಿಯನ್ನು ಲೇಖಕರು ಈ ಲೇಖನದಲ್ಲಿ ದಾಖಲಿಸಿದ್ದಾರೆ.

ಗೌರಿ ಸುಂದರ್‌ರವರ ಸಂಪಾದಕತ್ವದಲ್ಲಿ 'ಅ. ನ. ಕೃ. ಕಾದಂಬರಿಗಳನ್ನು ಕುರಿತು...' ಎಂಬ ಗ್ರಂಥ ಪ್ರಮುಖವಾದುದು. ಈ ಕೃತಿಯ ಹೆಸರೇ ಹೇಳುವಂತೆ ಇದರಲ್ಲಿ ಅ. ನ. ಕೃ. ರವರ ಕಾದಂಬರಿಗಳನ್ನು ಕುರಿತಂತೆ ಬರೆದ ವಿಮರ್ಶಾ ಲೇಖನಗಳ ಸಂಗ್ರಹವಾಗಿದ್ದರೂ ಕನ್ನಡ ನಾಡಿನ ಪ್ರಮುಖ ವಿಮರ್ಶಕರು, ಚಿಂತಕರು ಬರೆದ ವಿಮರ್ಶಾ ಲೇಖನವಿದೆ. ಈ ಗ್ರಂಥದ ಕೆಲವೊಂದು ಲೇಖನಗಳು ಬೇರೆ ಬೇರೆ ವೃತ್ತ ಪತ್ರಿಕೆ, ಸಾಹಿತ್ಯ ಪತ್ರಿಕೆ, ಗ್ರಂಥಗಳಲ್ಲಿಯೂ ಪ್ರಕಟವಾಗಿವೆ. ಈ ಲೇಖನಗಳಲ್ಲಿ ಅ. ನ. ಕೃ. ರವರ ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿಮರ್ಶಾ ಬರಹಗಳಿವೆ. ಈ ಕೃತಿಯಲ್ಲಿರುವ ಹೆಚ್ಚಿನ ವಿಮರ್ಶಾ ಲೇಖನಗಳು ಅ. ನ. ಕೃ. ರವರ ವಿಚಾರ ಸಾಹಿತ್ಯದ ಗ್ರಂಥದ ಹೆಸರಿನಲ್ಲಿಯೇ ವಿಮರ್ಶೆಗಳು ಇಲ್ಲಿ ಪ್ರಕಟವಾಗಿರುವುದು ವಿಶೇಷವಾಗಿದೆ.

'ಕರ್ನಾಟಕದ ಹಿತಚಿಂತನೆ' ಅ. ನ. ಕೃ. ರವರು ಬರೆದ ಹದಿನೈದು ಲೇಖನಗಳ ಗದ್ಯ ಕೃತಿ. ದೊಡ್ಡ ರಂಗೇಗೌಡರು ಇದೇ ಹೆಸರಿನ ಲೇಖನದಲ್ಲಿ ಅ. ನ. ಕೃ. ರವರ ಗದ್ಯ ಬರಹದ ಶೈಲಿಯು ತಿಳಿಯಾದುದು, ಸರಳವೂ, ವಿಚಾರ ಪರ, ತರ್ಕಬದ್ಧ ವೈಚಾರಿಕ ಧಾರೆಯಾದ ರೀತಿಯಲ್ಲಿ ಇರುವುದನ್ನು ಈ ಗ್ರಂಥದ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಕರ್ನಾಟಕ ಏಕೀಕರಣ ಹೇಗಾಗಬೇಕು ಎಂಬುದನ್ನು ಅ. ನ. ಕೃ. ರವರ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ದೇಸೀ ಚಿಂತಕರಾಗಿ ಅ. ನ. ಕೃ. ರವರನ್ನು ಗುರುತಿಸಿದ್ದಾರೆ. ಈ ಲೇಖನದಲ್ಲಿ ನಿಜಾಮರ ದಬ್ಬಾಳಿಕೆಯನ್ನು ವಿರೋಧಿಸಿದ ಅ. ನ. ಕೃಷ್ಣರಾಯರಂತಹ ಲೇಖಕರ ನಿಷ್ಠುರವಾದಿತನವನ್ನು ಚರ್ಚಿಸಿದ್ದಾರೆ.

ಬಾಬು ಕೃಷ್ಣಮೂರ್ತಿಯವರು ಬರೆದ ವಿಮರ್ಶಾ ಲೇಖನ 'ಸಾರ್ಥಕ ಸಾಹಿತ್ಯ'. ಇದು ಅ. ನ. ಕೃ. ರವರ ಕೆಲವು ಬಿಡಿ ಲೇಖನಗಳ ಸಂಗ್ರಹವಾದ ಸಾರ್ಥಕ ಸಾಹಿತ್ಯದ ಲೇಖನಗಳ ಹಿನ್ನೆಲೆಯಲ್ಲಿ ಪರಿಚಯ ಮಾಡಲಾಗಿದೆ. ೧೯೬೦ರಲ್ಲಿ ಮಣಿಪಾಲದಲ್ಲಿ ನಡೆದ ೪೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಮಾಡಿದ ಭಾಷಣ ಕನ್ನಡ ನಾಡು ನುಡಿಗಳಿಗೆ ಅಂದು ಮುತ್ತಿದ್ದ ಸಮಸ್ಯೆಗಳನ್ನು ವಿಶ್ಲೇಷಿಸಿ ಸೂಕ್ತ ಪರಿಹಾರಗಳನ್ನು ಸೂಚಿಸಿರುವ ಕಾರಣಗಳನ್ನು ತಿಳಿಸಿದ್ದಾರೆ. ವ್ಯಕ್ತಿ ಕೇಂದ್ರಿತ ಲೇಖನದೊಂದಿಗೆ ಅ. ನ. ಕೃ. ರವರ ಸ್ವಯಂ ಸಂದರ್ಶನ ಮಾಡಿಕೊಳ್ಳುವ ಅವರ ವಿಚಾರ ಬರವಣಿಗೆಯ ವೈಶಿಷ್ಟ್ಯವನ್ನು, ಕನ್ನಡಿಗರ ಸ್ವಾಭಿಮಾನವನ್ನು, ಕನ್ನಡ ಪ್ರೇಮವನ್ನು ಭದ್ರಗೊಳಿಸುವ ನೆಲೆಗಟ್ಟಿನಲ್ಲಿ ಅವರ ಬರಹವನ್ನು ವಿಮರ್ಶಿಸಿದ್ದಾರೆ.

ಎ. ಎಂ. ಪ್ರಕಾಶ್‌ರವರು 'ಚಿತ್ರಕಲೆ' ಎಂಬ ಲೇಖನದಲ್ಲಿ ಅ. ನ. ಕೃ. ರವರು ಕಲೆಯನ್ನು ಕುರಿತು ಬರೆದ ಗ್ರಂಥ 'ಚಿತ್ರಕಲೆ', 'ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ' ಕೃತಿಯಲ್ಲಿ ಕಲಾವಿದ ರವಿವರ್ಮನ ಕಲಾಕೃತಿಗಳು ಯಾವ ಕಾರಣಕ್ಕೂ ಒಪ್ಪಿತವಲ್ಲ ಎಂಬ ಅ. ನ. ಕೃ. ರವರ ಧೋರಣೆಯನ್ನು ಚರ್ಚಿಸಿದ್ದಾರೆ. ಸ್ವಾತಂತ್ರ್ಯಾನಂತರದ ಕಲಾ ಬೆಳವಣಿಗೆ ಕುರಿತ ಲೇಖನದಲ್ಲಿ ಮಡಿವಂತಿಕೆ ಇರುವುದು, ೧೯೭೦ರ ಪೂರ್ವದಲ್ಲಿ ಬರೆದ ಈ ಲೇಖನಗಳು ನವೋದಯ ಕಾಲದ ಚಿಂತನೆ, ಆಲೋಚನೆಗಳೂ ಪ್ರಮುಖವಾಗಿ ಇಲ್ಲಿ ಕಂಡು ಬರುತ್ತವೆ ಎಂದು ಲೇಖಕರು ವಿಮರ್ಶಿಸುತ್ತಾರೆ. ಆ ಕಾಲಘಟ್ಟಕ್ಕೆ ಅ. ನ. ಕೃ. ರವರ ಕಲಾ ಚಿಂತನೆಗಳು, ಕಲಾಬರಹಗಳು, ಸರಿಯಿದ್ದಿರಬಹುದು ಎಂದು ಭಾವಿಸುತ್ತಾರೆ. ಅ. ನ. ಕೃ. ರವರು ಪ್ರಗತಿಶೀಲ ಸಾಹಿತಿಯಾಗಿದ್ದರು, ಅವರು ನವೋದಯ ಕಾಲಘಟ್ಟದ ಗದ್ಯ ಬರಹಗಳಿಂದ ಪ್ರಭಾವಿತರಾಗಿದ್ದರೇನೋ ಎಂಬ ಸಂಶಯವನ್ನು ಈ ಲೇಖನವು ನೀಡುತ್ತದೆ.

ಶೀಲ–ಅಶ್ಲೀಲ ಸಾಹಿತ್ಯದ ಕುರಿತಂತೆ ಚರ್ಚೆ ನಡೆದ ಸಂದರ್ಭದಲ್ಲಿ ಅ. ನ. ಕೃ. ಬರೆದ 'ಸಾಹಿತ್ಯ ಮತ್ತು ಕಾಮ ಪ್ರಚೋದನೆ' ಎಂಬ ಗ್ರಂಥವನ್ನು ಕುರಿತು ಕೆ. ಎಸ್. ಭಗವಾನ್‌ರವರು ಆ ಕೃತಿಯ ಶೀರ್ಷಿಕೆಯ ಹಿನ್ನೆಲೆಯಲ್ಲಿ ವಿಮರ್ಶಾ ಲೇಖನವನ್ನು ಬರೆದಿದ್ದಾರೆ. ಅ. ನ. ಕೃ. ಕೃತಿಯನ್ನು ಬರೆಯಲು ಕಾರಣವಾದ ಅಂಶಗಳು, ಪ್ರತಿರೋಧಕ್ಕೆ ಉತ್ತರ ಕೊಡುವ ಧಾಟಿ, ವೇದಕಾಲದಿಂದ ಹಿಡಿದು ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವ್ಯಕ್ತವಾಗಿರುವ ಕಾಮಕೇಂದ್ರಿತ ವಿಚಾರಗಳನ್ನು, ಆಧುನಿಕ ಕಾಲಘಟ್ಟದ ಬರಹಗಾರರಾದ ಮಾಸ್ತಿ, ಕುವೆಂಪುರವರ ಸಾಹಿತ್ಯದ ಸಾಲುಗಳನ್ನು ಉದಾಹರಣೆ ಕೊಟ್ಟು ಅವುಗಳಿಗೆ ಪ್ರತಿಕ್ರಿಯಿಸುವ ಅ. ನ. ಕೃ. ರವರ ರೀತಿಯನ್ನು ಚರ್ಚಿಸಿದ್ದಾರೆ. ಭಾರತದಲ್ಲಿ ಪರಂಪರಾಗತವಾಗಿ ಬಂದ ಊಳಿಗಮಾನ್ಯ ಪದ್ಧತಿಯು ಸ್ತ್ರೀಯನ್ನು ಅತ್ಯಂತ ಹೀನಾಯ ಸ್ಥಿತಿಯಲ್ಲಿಟ್ಟು ತನ್ನ ಲಾಲಸೆಗಾಗಿ ವೇಶ್ಯಾವೃತ್ತಿಗೆ ಹೇಗೆ ದಾರಿ ಮಾಡಿ ಕೊಟ್ಟಿತು ಎಂಬ ವಿಚಾರವನ್ನು ಅ. ನ. ಕೃ. ರವರ ಕೃತಿಯ ಬರವಣಿಗೆಯ ಹಿನ್ನೆಲೆಯಲ್ಲಿ ಭಗವಾನ್‌ರವರು ವಿಮರ್ಶಿಸಿದ್ದಾರೆ.

ಅಶೋಕ್ ಕುಮಾರ್ ಡಿಸಿಲೆಯವರು ಬರೆದಿರುವ 'ಪೊರಕೆ' ಎಂಬ ವಿಮರ್ಶಾತ್ಮಕ ಲೇಖನವಿದೆ. ಇದು ಅ. ನ. ಕೃ. ರವರು ಬರೆದ ಹರಟೆಗಳ ಸಂಕಲನ ಗ್ರಂಥ 'ಪೊರಕೆ' ಯನ್ನು ಕುರಿತಾಗಿದೆ. ಇಲ್ಲಿರುವ ಹರಟೆಗಳನ್ನು ಕುರಿತಂತೆ ವಿಮರ್ಶಿಸುತ್ತಾರೆ. ಪ್ರಸ್ತುತ ದೆಹಲಿ ಮುಖ್ಯಮಂತ್ರಿಯಾಗಿರುವ ಅರವಿಂದ ಕೇಜ್ರಿವಾಲ್‌ರವರು ಈ ಲೇಖನವನ್ನು ಓದಿಯೇ ತಮ್ಮ ಪಕ್ಷದ ಚಿಹ್ನೆಯಾಗಿ ಪೊರಕೆಯನ್ನು ಇಟ್ಟು ಕೊಂಡಿರಬೇಕು ಎಂದು ಭಾವಿಸುತ್ತಾರೆ. ಪೊರಕೆ ಎಂಬುದು ಕಸ

ಗುಡಿಸುವ ಸಾಧನವಲ್ಲ, ಸಮಾಜದ ಸಮಸ್ಯೆಗಳನ್ನು ಗುಡಿಸಿ, ಪರಿಹರಿಸುವ ಹಲವಾರು ವಿಚಾರಗಳನ್ನು ಈ ಪೊರಕೆ ಹರಟೆಯಲ್ಲಿ ಅ. ನ. ಕೃ. ರವರು ತಿಳಿಸಿರುವುದನ್ನು ಚರ್ಚಿಸುತ್ತಾರೆ.

ಅ. ನ. ಕೃಷ್ಣರಾಯರ ಸಾಹಿತ್ಯ ಶ್ರೇಣಿ ಎಂಬ ಗ್ರಂಥಗಳ ಮೂಲಕ ಅವರ ಇಡೀ ಸಾಹಿತ್ಯವನ್ನು ಸಂಪಾದನೆ ಮಾಡಿ ಹಲವು ಸಂಪುಟಗಳಲ್ಲಿ ಹೊರತಂದವರು ಶಾ. ಮಂ. ಕೃಷ್ಣರಾಯರು. ವಿಮರ್ಶಾ ಸಾಹಿತ್ಯ ಸಂಪುಟ ೪ರ ಮುನ್ನುಡಿಯಲ್ಲಿ ಸಂಪಾದಕರು ಅ. ನ. ಕೃಷ್ಣರಾಯರು ಬರೆದ ಹೊಸಹೂಟ್ಟು, ಬಳ್ಳಾರಿಯ ಸಮಸ್ಯೆ, ಅಖಂಡ ಕರ್ನಾಟಕ, ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ಸಜೀವ ಸಾಹಿತ್ಯ ಮೊದಲಾದ ವಿಚಾರ ಸಾಹಿತ್ಯವನ್ನು ಕುರಿತ ಪ್ರತಿಯೊಂದು ಗ್ರಂಥವನ್ನು ಪರಿಚಯ ಮಾಡಲಾಗಿದೆ. ಅ. ನ. ಕೃ. ರವರ ವೈಚಾರಿಕತೆ, ಚಿಂತನೆ, ವಿಮರ್ಶಕತನ ಹೇಗೆ ಭಿನ್ನವಾದದ್ದು ಎಂಬುದನ್ನು ದಾಖಲಿಸುತ್ತಾರೆ.

ಲೇಖನಗಳು/ಉಪನ್ಯಾಸಗಳು

ಕನ್ನಡ ಜನಮನವನ್ನು ಸೆಳೆದ ಲೇಖಕರನ್ನು ಕುರಿತಂತೆ ಎಚ್ಚೆಸ್ಕೆಯವರು ಬರೆದ 'ಹೊನ್ನ ಬಿತ್ತಿ ಬೆಳೆದವರು' ಕೃತಿಯು ಪ್ರಮುಖವಾದುದು. ಇದರಲ್ಲಿ 'ಅ. ನ. ಕೃಷ್ಣರಾವ್' ಎಂಬ ಲೇಖನವಿದೆ. ಇಲ್ಲಿ ಅ. ನ. ಕೃ. ರವರ ಸೃಜನಶೀಲ ಬರವಣಿಗೆಯನ್ನು ಪರಿಚಯಿಸುವಾಗ ಅವರ ವೈಚಾರಿಕ ಸಾಹಿತ್ಯ ವಿಷಯಗಳಾದ ಜೀವನ ಚರಿತ್ರೆ, ವೀರಶೈವ ಸಾಹಿತ್ಯ, ಕಲೆ, ಸಂಸ್ಕೃತಿ, ಕರ್ನಾಟಕ ಏಕೀಕರಣ ಮೊದಲಾದ ವಿಚಾರಗಳನ್ನು ದಾಖಲಿಸಿದ್ದಾರೆ. ಇದೊಂದು ಪರಿಚಯಾತ್ಮಕ ಲೇಖನವಾಗಿದೆ. ಇಲ್ಲಿ ಅ. ನ. ಕೃ. ರವರನ್ನು ಪರಿಚಯಿಸಿದ್ದಾರೆ ಹೊರತು ಕೃತಿಗಳನ್ನು ವಿಮರ್ಶಿಸಿಲ್ಲ.

ಹಾ. ಮಾ. ನಾಯಕ್‌ರವರು ಬರೆದ 'ಭಾರತ ಧರ್ಮ' (ಸ್ವಗತ ಅಂಕಣ ಬರಹಗಳ ಸಂಪುಟ ೨) ಪ್ರಮುಖ ಕೃತಿ. ಇದರಲ್ಲಿ ೭೦ನೇ ಕ್ರಮಸಂಖ್ಯೆಯಲ್ಲಿ 'ಅ. ನ. ಕೃ. ಸ್ಮರಣೆ' ಎಂಬ ಲೇಖನವಿದೆ. ಈ ಲೇಖನದಲ್ಲಿ ಲೇಖಕರು ಅ. ನ. ಕೃ. ರವರನ್ನು ಸ್ಮರಿಸುತ್ತಾ ಅವರು ಕನ್ನಡ ನಾಡಿಗೆ ನೀಡಿದ ಕೃತಿಗಳನ್ನು ಪರಿಚಯಿಸಿದ್ದಾರೆ. ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದಂತೆ 'ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ' ಎಂಬ ಪುಸ್ತಕವನ್ನು ನೋಡುವುದು ಕಷ್ಟವಾಗಿದೆ. 'ಹೊಸಹುಟ್ಟು' ಎಂಬ ಪ್ರಬಂಧಗಳ ಸಂಕಲನ ಇಂದೂ ಸಹ ಅಪರೂಪದ ಪುಸ್ತಕವಾಗಿದೆ ಎಂದು ಭಾವಿಸುತ್ತಾರೆ. ಈ ರೀತಿಯ ಕೃತಿಗಳು ಓದುಗರಿಗೆ ದೊರಕಬೇಕು ಎಂಬ ಧೋರಣೆ ಲೇಖಕರದಾಗಿದೆ. ಕರ್ನಾಟಕದ ಸಮಸ್ಯೆಗಳನ್ನು ಅರಿಯಲು ಆಸಕ್ತರಾದವರಿಗೆ ಕರ್ನಾಟಕದ ಕಲಾವಿದರು ಭಾಗ ೧, ಅಖಂಡ ಕರ್ನಾಟಕ, ಕರ್ನಾಟಕ ದಾರಿ, ಕರ್ನಾಟಕದ ಹಿತಚಿಂತನೆ, ಬಳ್ಳಾರಿಯ ಸಮಸ್ಯೆ ಮತ್ತು ಕರ್ನಾಟಕ ಪ್ರಾಂತ್ಯ ಮೊದಲಾದ ಅ. ನ. ಕೃ. ಬರಹಗಳು ಉಪಯುಕ್ತವಾಗುವ ನೆಲೆಗಟ್ಟಿನಲ್ಲಿ ವಿಶ್ಲೇಷಿಸಿದ್ದಾರೆ. ಅ. ನ. ಕೃ. ಪ್ರತಿಷ್ಠಾನ ಉದ್ದೇಶ ಈಡೇರಬೇಕಾದರೆ ಅವರ ಸೃಜನಶೀಲ ಬರಹಗಳ ಜೊತೆಗೆ ಸೃಜನೇತರ ಬರಹಗಳು, ಗದ್ಯಬರಹಗಳು ಹಾಗೂ ವಿಚಾರಶೀಲ ಸಾಹಿತ್ಯ, ವಿಮರ್ಶೆ ಮೊದಲಾದ ಎಲ್ಲಾ ಕೃತಿಗಳು ಕನ್ನಡಿಗರಿಗೆ ದೊರಕಬೇಕು ಎಂಬುದಾಗಿ ಚರ್ಚಿಸಿದ್ದಾರೆ. ಅ. ನ. ಕೃ. ರವರ ವಿಚಾರ ಸಾಹಿತ್ಯದ ಕೃತಿಗಳು ಓದುಗರಿಗೆ ದೊರಕುವ ಮೂಲಕ ಕನ್ನಡ ನಾಡು ನುಡಿಗೆ ಸಂಬಂಧಿಸಿದಂತೆ ಕನ್ನಡಿಗರಲ್ಲಿ ಅರಿವು ಮೂಡಿಸಲು ಈ ಕೃತಿಗಳು ಹೆಚ್ಚು ಪೂರಕವಾದವುಗಳು ಎಂಬ ಭಾವನೆಯನ್ನು ಈ ಲೇಖನದಲ್ಲಿ ವ್ಯಕ್ತಪಡಿಸುತ್ತಾರೆ.

ಜಿ. ಎಸ್. ಅಮೂರರವರ 'ಸಮಾರಾಧನ' ಎಂಬ ನಾಟ್ಯ ವಿಮರ್ಶೆಯನ್ನು ಕುರಿತು ಬರೆದ ಕೃತಿಯಾಗಿದೆ. ಇಲ್ಲಿ 'ಅ. ನ. ಕೃ. ನಾಟಕ ಮತ್ತು ರಂಗಭೂಮಿ' ಎಂಬ ಲೇಖನವನ್ನು ಭಾಗ ೨ರಲ್ಲಿ ಕಾಣಬಹುದು. ಲೇಖಕರು ಅ. ನ. ಕೃ. ರವರ ನಾಟಕಗಳನ್ನು ಪರಿಚಯಿಸುವುದರೊಂದಿಗೆ, ಅವರ ನಾಟಕ ಸಾಹಿತ್ಯವನ್ನು ಕುರಿತಂತೆ ಬರೆದ ವಿಮರ್ಶಾತ್ಮಕ ಗ್ರಂಥ 'ನಾಟಕ ಕಲೆ' ಯನ್ನು ಉಲ್ಲೇಖಿಸುತ್ತಾರೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ರಂಗಭೂಮಿಯ ಅವನತಿಗೆ ಕಾರಣಗಳನ್ನು ಹುಡುಕುವ ಪ್ರಯತ್ನವನ್ನು ಲೇಖಕರು ಚರ್ಚಿಸಿದ್ದಾರೆ.

'ನಿಮಿತ್ತ ಅನಿಮಿತ್ತ' ಎಂಬ ವ್ಯಕ್ತಿ ವಿಚಾರ ವಿಮರ್ಶೆಯ ನೂರೊಂದು ಲೇಖನಗಳು ಎಂಬ ಗ್ರಂಥದಲ್ಲಿ ಜಿ. ಎಸ್. ಅಮೂರರವರು 'ಅ. ನ. ಕೃ. ಮತ್ತು ಉತ್ತರ ಕರ್ನಾಟಕ' ಎಂಬ ಲೇಖನದಲ್ಲಿ ಅ. ನ. ಕೃ. ರವರಿಗೆ ಕಲಾವಿದರ ಬಗ್ಗೆ ಇದ್ದ ಅಭಿಮಾನ, ಅವರ ವೀರಶೈವ ಸಾಹಿತ್ಯದ ಒಲವು ಮೊದಲಾದವುಗಳನ್ನು ವಿಶ್ಲೇಷಿಸಿದ್ದಾರೆ.

ಚೆನ್ನವೀರ ಕಣವಿಯವರು ಬರೆದ 'ಸಮಾಹಿತ' ಎಂಬ ವಿಮರ್ಶಾತ್ಮಕ ಲೇಖನಗಳ ಸಂಕಲನದಲ್ಲಿ 'ಹಲವು ಹೋರಾಟಗಳ ಕಲಿ ಅ. ನ. ಕೃ.' ಎಂಬ ವಿಮರ್ಶಾತ್ಮಕ ಲೇಖನವಿದೆ. ಅ. ನ. ಕೃ. ರವರನ್ನು ಸಮಗ್ರವಾಗಿ ಪರಿಚಯಿಸುವ ಈ ವಿಮರ್ಶಾತ್ಮಕ ಲೇಖನ ಅವರ ವೈವಿಧ್ಯ ಬರವಣಿಗೆಗಳ ಸ್ವರೂಪ, ವ್ಯಕ್ತಿಚಿತ್ರಗಳ ಲಕ್ಷಣ, ವೀರಶೈವ ಸಾಹಿತ್ಯ, ಕನ್ನಡ, ಕರ್ನಾಟಕ ಕಲಾವಿದರ ಕುರಿತು ಅವರಿಗಿದ್ದ ಅಪಾರ ಆಸಕ್ತಿ ಇವೆಲ್ಲವುಗಳನ್ನು ಚರ್ಚಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಂಗ ಪ್ರಕಟಿಸಿರುವ 'ಅ. ನ. ಕೃ. ಸಾಹಿತ್ಯ ಸಮೀಕ್ಷೆ' ಏಳು ಉಪನ್ಯಾಸಗಳಲ್ಲಿ ವಿವಿಧ ಲೇಖಕರು ನೀಡಿದ ಉಪನ್ಯಾಸಗಳಿವೆ. ಅದರಲ್ಲಿ ಅ. ನ. ಕೃ. ರವರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಎಸ್. ಜಿ. ಲೋಕೂರರವರು 'ಅ. ನ. ಕೃ. ಅವರ ಇತರ ಕೃತಿಗಳು' ಎಂಬ ಲೇಖನದಲ್ಲಿ ಅ. ನ. ಕೃ. ರವರ ವಿಮರ್ಶಾ ಕೃತಿಗಳಾದ ಸಾಹಿತ್ಯ ಮತ್ತು ಜೀವನ, ಸಜೀವ ಸಾಹಿತ್ಯ, ಸಾರ್ಥಕ ಸಾಹಿತ್ಯ, ಮೊದಲಾದ ಕೃತಿಗಳನ್ನು ವಿಮರ್ಶಿಸಿ ಅ. ನ. ಕೃ. ರವರ ವೈಚಾರಿಕ ನಿಲುವುಗಳನ್ನು ಈ ಕೃತಿಗಳಲ್ಲಿ ಸ್ಪಷ್ಟವಾಗಿ ಕಾಣಬಹುದು ಎಂದು ತಿಳಿಸುತ್ತಾರೆ.

ಮಲ್ಲೇಪುರಂ ಜಿ. ವೆಂಕಟೇಶ್‌ರವರು ಸಂಪಾದಿಸಿರುವ ದೇವುಡು ಲೇಖನ ಸಂಪುಟದಲ್ಲಿ ಅ. ನ. ಕೃ. ರವರ 'ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ' ಕೃತಿಯ ಬಗ್ಗೆ ಒಬ್ಬ ಕಲಾವಿದನ ಯೋಗ್ಯತೆಯನ್ನು, ಸಾಮರ್ಥ್ಯವನ್ನು ಅಳೆಯಬಹುದಾದ ಮಾನದಂಡಗಳನ್ನು ಸಿದ್ಧಪಡಿಸಿಕೊಂಡು ರಾಜಾ ರವಿವರ್ಮನ ಸ್ಥಾನವನ್ನು ವಿಮರ್ಶಿಸಿದ್ದಾರೆ ಎಂದು ಲೇಖಕರು ತಿಳಿಸುತ್ತಾರೆ. ಪರೀಕ್ಷೆ, ನಿಷ್ಠುರತೆಯು ಹೆಚ್ಚಾಗಿರುವುದರಿಂದ ಅ. ನ. ಕೃ. ರವರ ಸಿದ್ಧಾಂತಗಳು, ಚಿಂತನೆಗಳು ಈ ಗ್ರಂಥದಲ್ಲಿ ಸಮರ್ಪಕವಾಗಿ ತೋರುವುದಿಲ್ಲ ಎಂಬುದಾಗಿ ವಿಶ್ಲೇಷಿಸುತ್ತಾರೆ.

ಅಭಿನಂದನ ಗ್ರಂಥ

ಅ. ನ. ಕೃ. ಅವರ ಬದುಕು-ಬರಹದ ಬಗ್ಗೆ ಹೆಚ್ಚು ಮಾಹಿತಿಯನ್ನು ನೀಡುವ ಮತ್ತೊಂದು ಕೃತಿ ಅವರ ಅಭಿನಂದನ ಗ್ರಂಥ ಪ್ರಮುಖವಾದುದು. ಶಾ. ಮಂ. ಕೃಷ್ಣರಾಯರ ಸಂಪಾದಕತ್ವದಲ್ಲಿ ಬಂದಿರುವ 'ರಸಚೇತನ' ದಲ್ಲಿ ಅನೇಕ ಬರಹಗಾರರು ಬರೆದಿರುವ ಲೇಖನಗಳಿವೆ. ಈ ಕೃತಿಯಲ್ಲಿ

ಒಟ್ಟು ಮೂರು ವಿಭಾಗಗಳಿವೆ. ರಸಚೇತನ ವಿಭಾಗದಲ್ಲಿ ಅ. ನ. ಕೃ. ರವರ ವ್ಯಕ್ತಿತ್ವದ ಬಗ್ಗೆ ಬೆಳಕು ಚೆಲ್ಲುತ್ತವೆ. ಕೆಲವೊಂದು ಲೇಖನಗಳು ಅವರನ್ನು ವೈಭವೀಕರಿಸಿವೆ ಎನ್ನಬಹುದು. ಸಾಹಿತ್ಯಚೇತನ ಎಂಬ ಎರಡನೆಯ ಭಾಗದಲ್ಲಿ ಅ. ನ. ಕೃ. ರವರ ಸಾಹಿತ್ಯವನ್ನು ಕುರಿತಂತೆ ವಿಮರ್ಶಾ ಲೇಖನಗಳಿವೆ. ಇಲ್ಲಿ ಅ. ನ. ಕೃ. ರವರ ಕಥೆ, ಕಾದಂಬರಿಗಳನ್ನು ಸೇರಿದಂತೆ ಅವರ ವಿಚಾರಸಾಹಿತ್ಯವನ್ನು ಅನುಲಕ್ಷಿಸಿ ಗೌರೀಶ ಕಾಯ್ಕಿಣಿ, ಶಿ. ಶು. ಬಸವನಾಳ, ಕೆ. ಪುಟ್ಟರಾಜು,ಕೃಷ್ಣಮೂರ್ತಿ ಕಿತ್ತಾರ ಮೊದಲಾವರ ಲೇಖನಗಳು ಪ್ರಮುಖವಾಗಿವೆ. ಮೂರನೆಯ ಸಂದರ್ಶನ ವಿಭಾಗದಲ್ಲಿ ಅ. ನ. ಕೃ. ರವರ ಒಡನಾಟದಿಂದ ಇದ್ದ ಅನೇಕ ಲೇಖಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನವ್ಯ ಕಾಲಘಟ್ಟದ ಲೇಖಕರಾದ ಗೌರೀಶ ಕಾಯ್ಕಿಣಿಯವರು ಅ. ನ. ಕೃ. ರವರ ಸಾಹಿತ್ಯ ಮತ್ತು ವಿಚಾರವನ್ನು ಪ್ರತಿನಿಧಿಸುವ 'ರಸಾರ್ದ್ರ ವಿಮರ್ಶಕ' ಎಂಬ ಲೇಖನದಲ್ಲಿ ಅ. ನ. ಕೃ. ರವರ ವಿಚಾರ ಸಾಹಿತ್ಯವನ್ನು ಮಾತ್ರ ಪರಿಗಣಿಸಿ ಬರೆದಿದ್ದಾರೆ. ಅವರ ವೈಚಾರಿಕ ಸಾಹಿತ್ಯದ ಧೋರಣೆಗಳನ್ನು ಚರ್ಚಿಸಿದ್ದಾರೆ. ವಿಮರ್ಶಕರಾಗಿ ಅ. ನ. ಕೃ. ರವರನ್ನು ನೋಡಿದ್ದಾರೆ. 'ವಿಮರ್ಶಕ ಮತ್ತು ವಿಮರ್ಶಕನ ಹಾದಿ' ಎಂಬ ಅ. ನ. ಕೃ. ರವರ ಎರಡು ಲೇಖನಗಳನ್ನು ಗಮನಿಸಿ, ವಿಮರ್ಶಕನ ದೃಷ್ಟಿಕೋನ, ವಿಮರ್ಶಕನ ವಿಧಾನದ ಬಗ್ಗೆ ಚರ್ಚಿಸಿದ್ದಾರೆ. ಅ. ನ. ಕೃ. ರವರ ವೈಚಾರಿಕತೆಯ ವೈಖರಿಯಲ್ಲಿ ವೀರಶೈವ ಮತಕ್ಕೂ, ಸೂಫಿ ಮತಕ್ಕೂ ಸಾಮ್ಯತೆ ತೋರಿ ಬಂದಿರುವ ರೀತಿಯನ್ನು ವಿಶ್ಲೇಷಿಸಿದ್ದಾರೆ. "ಸಾಹಿತ್ಯದಲ್ಲಿ, ಕಾದಂಬರಿಯಲ್ಲಿ ವಾಸ್ತವಿಕತೆಯನ್ನು ಒತ್ತಿ ಹೇಳುವ ಕೃಷ್ಣರಾಯರು ವಿಮರ್ಶೆಯಲ್ಲಿ ಆದರ್ಶಕತೆಯಿಂದಲೇ ವ್ಯವಹರಿಸಿದ್ದಾರೆ"[೧೨] ಎಂದು ಅಭಿಪ್ರಾಯಿಸುತ್ತಾರೆ.

ಅ. ನ. ಕೃ. ರವರು ಪ್ರಗತಿಶೀಲ ಕಾಲಘಟ್ಟದ ಸಾಹಿತ್ಯದ ರೂಪಗಳಲ್ಲಿ ಒಂದಾದ ಕಾದಂಬರಿ, ಕಥೆ, ನಾಟಕದಲ್ಲಿ ವಾಸ್ತವಿಕತೆಯನ್ನು ವ್ಯಕ್ತಪಡಿಸುತ್ತಾರೆ. ಆದರೆ ವಿಮರ್ಶೆಯಲ್ಲಿ ಆದರ್ಶಕತೆಗಳ ಹಿನ್ನೆಲೆಯಲ್ಲಿ ವ್ಯವಹರಿಸುತ್ತಾರೆ. ಈ ರೀತಿಯ ಎರಡು ಭಿನ್ನ ಮನೋಧರ್ಮದ ಬರವಣಿಗೆಯನ್ನು ಕಾಣಬಹುದು ಎಂಬ ಅಂಶವನ್ನು ಲೇಖಕರು ಚರ್ಚಿಸಿದ್ದಾರೆ.

ವಚನ ಸಾಹಿತ್ಯದ ಅಧ್ಯಯನಕಾರರಲ್ಲಿ ಒಬ್ಬರಾದ ಶಿ. ಶು. ಬಸವನಾಳರವರು 'ಬಸವಣ್ಣನವರ ಅಮೃತವಾಣಿ' ಎಂಬ ಅ. ನ. ಕೃ. ರವರ ವಿಚಾರ ಸಾಹಿತ್ಯದ ಕೃತಿಯ ಹೆಸರಿನಿಂದಲೇ ಇರುವ ವಿಮರ್ಶಾ ಲೇಖನವಿದೆ. "ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ ಹಾಗೂ ವೀರಶೈವ ಮಹಾಪುರುಷರು ಈ ಮೊದಲಾದ ವಿಷಯಗಳನ್ನು ಕುರಿತು ಅಧಿಕಾರವಾಣಿಯಿಂದ ಮಾತನಾಡಬಲ್ಲ ಪ್ರಮಾಣ ಗ್ರಂಥಗಳನ್ನು ಬರೆಯಬಲ್ಲ ಕೆಲ ಕನ್ನಡಿಗರಲ್ಲಿ ಶ್ರೀ ಅ. ನ. ಕೃಷ್ಣರಾಯರು ಒಬ್ಬರು, ಗಣ್ಯರು"[೧೩] ಎಂದಿದ್ದಾರೆ. ಅ. ನ. ಕೃ. ರವರ ವೀರಶೈವ ಸಾಹಿತ್ಯದ ಆಳವಾದ ಅಧ್ಯಯನ, ವಚನಗಳಲ್ಲಿರುವ ಮಾನವಧರ್ಮ, ಸಾಮಾಜಿಕ ಸುಧಾರಣೆ ಮೊದಲಾದ ಅಂಶಗಳನ್ನು ಲೇಖಕರು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

ಈ ಅಭಿನಂದನದಲ್ಲಿರುವ ಮತ್ತೊಂದು ಲೇಖನ ಕೆ. ಪುಟ್ಟರಾಜುರವರು ಬರೆದಿರುವ 'ಸಾಹಿತ್ಯ ಮತ್ತು ಕಾಮಪ್ರಚೋದನೆ' ಪ್ರಮುಖವಾದುದು. ಕೆಲವು ಲೇಖಕರು ಪ್ರಗತಿಶೀಲ ಸಾಹಿತ್ಯದ ಮೇಲೆ ಮಾಡಿದ ಅಶ್ಲೀಲದ ಆಪಾದನೆಗೆ ಉತ್ತರ ಕೊಡಲು ಈ ಗ್ರಂಥ ಬರೆದರು ಎನ್ನುವುದಕ್ಕಿಂತ ಇಲ್ಲಿ

ಅವರ ವಿಮರ್ಶಕ ದೃಷ್ಟಿಕೋನ, ಸಂಶೋಧನಾ ಧಾಟಿಯಲ್ಲಿ ವಿಶ್ಲೇಷಿಸಿರುವ ಅ. ನ. ಕೃ. ರವರನ್ನು ಚರ್ಚಿಸಿದ್ದಾರೆ. ಸಾಹಿತ್ಯ ಮತ್ತು ಕಾಮಗಳಿಗೆ ಸಂಬಂಧಪಡುವ ಸಾಮೀಪ್ಯ ವಸ್ತುಗಳ ಸ್ಥೂಲ ವಿವೇಚನೆ. ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ವಿಶ್ಲೇಷಣಾತ್ಮಕವಾಗಿ ವ್ಯವಹರಿಸುವ ರೀತಿಯನ್ನು ಚರ್ಚಿಸಿದ್ದಾರೆ. ಈ ಲೇಖನದಲ್ಲಿ ಕೆ. ಪುಟ್ಟರಾಜುರವರು ಬಹಳ ಮುಖ್ಯವಾಗಿ ಅ. ನ. ಕೃ. ರವರ ವೈಚಾರಿಕ ಮುನ್ನೋಟ, ಅಧ್ಯಯನ, ವಿಚಾರದ ಮಂಡನೆ, ವೈಚಾರಿಕ ನಿಲುವು, ಅವರಿಗಿರುವ ಪ್ರಗತಿಶೀಲ ನಿಷ್ಠೆ, ಕೆಲವರು ಅಶ್ಲೀಲ ಸಾಹಿತ್ಯದ ಮುದ್ರೆಯನ್ನು ಒತ್ತುವವರಿಗೆ ಉತ್ತರಿಸುವ ರೀತಿಯನ್ನು ಈ ಕೃತಿಯ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ.

ತದ್ದಲಸೆ ವಿಘ್ನೇಶ್ವರ ಶರ್ಮಾರವರು ಬರೆದ 'ಗದ್ಯ ಸಾಹಿತ್ಯಕ್ಕೆ ಅ. ನ. ಕೃ. ಕೊಡುಗೆ' ಎಂಬ ಲೇಖನದಲ್ಲಿ ಅ. ನ. ಕೃ. ರವರ ಕಾದಂಬರಿಗಳನ್ನು ಪರಿಚಯಿಸಿದ್ದಾರೆ. ಹೊಸ ವಿಷಯ, ಹೊಸ ರೀತಿ, ಹೊಸ ವಿಚಾರಗಳ ಪ್ರಯೋಗದಿಂದಲೇ ಅವರ ಸಾಹಿತ್ಯ ಸೃಷ್ಟಿಗೊಂಡಿರುವ ರೀತಿಯಲ್ಲಿ ವಿಮರ್ಶಿಸಿದ್ದಾರೆ. ಅ. ನ. ಕೃ. ರವರು ಬರೆದ ಜೀವನ ಚರಿತ್ರೆ, ವೀರಶೈವ ಸಾಹಿತ್ಯ, ಕಲೆಯನ್ನು ಕುರಿತ ಬರವಣಿಗೆ ಮೊದಲಾದ ವಿಮರ್ಶಾತ್ಮಕ, ಸಂಶೋಧನಾತ್ಮಕ ಗ್ರಂಥಗಳ ಭಿನ್ನ ಭಿನ್ನ ಬರಹಗಳ ದೃಷ್ಟಿಯನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

ಅ. ನ. ಕೃ. ರವರ 'ನನ್ನನ್ನು ನಾನೇ ಕಂಡೆ' ಎಂಬ ಸ್ವ-ಸಂದರ್ಶನದ ಕೃತಿಯನ್ನು ಕುರಿತು ಎಂ. ವಿ. ಶರ್ಮಾ ತದ್ದಲಸೆಯವರು ಅದೇ ಹೆಸರಿನಲ್ಲಿ ಲೇಖನವನ್ನು ಬರೆದಿದ್ದಾರೆ. ಅ. ನ. ಕೃ. ರವರ ಒಲವು-ನಿಲುವು, ಆಳವಾದ ಅಧ್ಯಯನ, ಚಿಂತನೆಗಳು, ಬದುಕು, ಸಮಾಜದ ಒಳಿತು ಮೊದಲಾದ ಅಂಶಗಳ ಬಗ್ಗೆ ಚರ್ಚಿಸಿದ್ದಾರೆ.

ನಿರಂಜನರವರ ವಿಚಾರ ಸಾಹಿತ್ಯದ ವಿಮರ್ಶಾತ್ಮಕ ಸಮೀಕ್ಷೆ

ಸ್ವತಂತ್ರ ಕೃತಿಗಳು

ನಿರಂಜನರವರ ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸ್ವತಂತ್ರ ಕೃತಿಗಳು ಹೊರಬಂದಿರುವುದು ಅತ್ಯಲ್ಪವಾದ ಬರಹಗಳು. ಅದರಲ್ಲಿ ಬಸವರಾಜ ಸಬರದರವರು ಬರೆದ 'ನಿರಂಜನ' ಎಂಬ ವಿಮರ್ಶಾತ್ಮಕ ಕೃತಿಯು ನಿರಂಜನರ ವ್ಯಕ್ತಿ ಜೀವನ, ಸಾಂಸ್ಕೃತಿಕ ಸಂದರ್ಭ, ಸಮಕಾಲೀನ ಸಾಹಿತಿಯೊಂದಿಗೆ, ಒಟ್ಟು ವಿಚಾರ ಧಾರೆಗಳ ಹಿನ್ನೆಲೆಯಲ್ಲಿ ಚರ್ಚಿಸುತ್ತಾರೆ. ವೈವಿಧ್ಯಮಯ ರಚನೆಗಳು ಎಂಬ ಭಾಗದಲ್ಲಿ ನಿರಂಜನರ ಕಥೆ, ಕಾದಂಬರಿಗಳನ್ನು ಸೂಚಿಸಿದ್ದಾರೆ. ಅಂಕಣ ಬರಹಗಾರರಾದ ನಿರಂಜನರವರು ಹೊರತಂದ ಕೃತಿಗಳಾದ ಸಾಧನಾ, ಕಾಲಕ್ಷೇಪ, ಪುಷ್ಪಹಾರ, ದಿನಚರಿಯಿಂದ, ರಾಜಧಾನಿಯಿಂದ ಇವು ವೈಚಾರಿಕತೆಯನ್ನು ಮೂಡಿಸುವ ಬರಹಗಳಾಗಿ ವಿಶ್ಲೇಷಿಸಿದ್ದಾರೆ. "ಹೀಗಾಗಿ ಇವು ಟೈಂಪಾಸ್ ಬರಹಗಳಾಗಿರದೆ ಬರೀ ವಿವರಗಳ ಸಂಗ್ರಹವಾಗಿರದೆ ಸೃಜನಶೀಲ ಆಲೋಚನೆಗಳಾಗಿವೆ"[೧೪] ಎಂದಿದ್ದಾರೆ. ಅಂಕಣ ಸಾಹಿತ್ಯದಲ್ಲಿ ನಿರಂಜನರವರ ಹೊಸ ಪ್ರಗತಿಶೀಲ ಆಲೋಚನಾ ಕ್ರಮಗಳನ್ನು ಲೇಖಕರು ಚರ್ಚಿಸಿದ್ದಾರೆ.

"ವಿಶ್ವ ಸಾಹಿತ್ಯದ ಸಾಹಿತಿ ಕಲಾವಿದರಿಗೆ ಸಂಬಂಧಿಸಿದಂತೆ, ಸಮಕಾಲೀನ ರಾಜಕೀಯ ಧೋರಣೆಗಳನ್ನು ಕುರಿತಂತೆ, ವೈಚಾರಿಕತೆಯನ್ನು ಮೂಡಿಸುವ ವಿಚಾರ ಕಿಡಿಗಳಾಗಿ,

ಮಾನವೀಯತೆಯನ್ನು ಬೆಳೆಸುವ ಅಂತಃಕರಣದ ನುಡಿಗಳಾಗಿ ನಿರಂಜನರ ಅಂಕಣ ಬರಹಗಳು ಗಮನ ಸೆಳೆಯುತ್ತವೆ"[೧೫] ಎಂದಿದ್ದಾರೆ. ಲೇಖಕರು ನಿರಂಜನರ ಅಂಕಣಗಳ ಸ್ವರೂಪ, ತಾತ್ವಿಕತೆ, ಪ್ರಗತಿಶೀಲ ಆಶಯ, ಸಮಾಜವನ್ನು ಗ್ರಹಿಸಿದ ರೀತಿ ಇವುಗಳನ್ನು ತಿಳಿಸಿದ್ದಾರೆ.

ನಿರಂಜನರವರ ಬದುಕು-ಬರಹವನ್ನು ದಾಖಲಿಸುವ ಮತ್ತೊಂದು ಕಿರುಪುಸ್ತಕ ಧನಂಜಯ ಕುಂಬ್ಳೆಯವರು ಬರೆದ 'ಪ್ರಗತಿಪಥ ತೋರಿದ ಸೃಜನಶೀಲ ಚಿಂತಕ ನಿರಂಜನ' ಎಂಬುದಾಗಿದೆ. ಈ ಕೃತಿ ನಿರಂಜನರ ಜೀವನ ಬರಹವನ್ನು ಕುರಿತಂತೆ ಸಂಕ್ಷಿಪ್ತವಾಗಿ ದಾಖಲಿಸುತ್ತದೆ. 'ಪತ್ರಿಕೋದ್ಯಮ ಮತ್ತು ಅಂಕಣಕಾರ ನಿರಂಜನ' ಎಂಬ ಉಪಶೀರ್ಷಿಕೆಯಲ್ಲಿ ನಿರಂಜನರ ಅಂಕಣ ಸಾಹಿತ್ಯದ ಬಹು ನೆಲೆಗಳನ್ನು, ಸಂಗತಿಗಳನ್ನು ದೃಷ್ಟಿಕೋನಗಳನ್ನು ಚರ್ಚಿಸಿದ್ದಾರೆ.

ನಿರಂಜನರ ಮೊದಲ ಅಂಕಣ ಸಂಗ್ರಹ ಸಾಧನಾ ಪತ್ರ ರೂಪದಲ್ಲಿದ್ದು "ಈ ಪತ್ರ ಅಂಕಣಗಳಿಗೆ ಭಾವಗೀತೆಯ ಕಳೆಯಿದೆ"[೧೬] ಎಂದಿದ್ದಾರೆ. ಅಂಕಣ ಬರಹಗಳ ಶೈಲಿ, ಆತ್ಮೀಯ ಸಂಬೋಧನೆ, ನೇರವಾಗಿ, ನಿಷ್ಠುರವಾಗಿ, ಗುಣಗ್ರಾಹಿಯಾಗಿ ಹೇಳುವ ನಿರಂಜನರ ಧಾಟಿಯನ್ನು 'ಅಂಕಣ' ಎಂಬ ಅಂಕಣ ಬರಹಗಳ ಸಂಕಲನದಲ್ಲಿನ ಬರಹಗಳಲ್ಲಿ ಮಾರ್ಕ್ಸ್‌ವಾದಿ, ಸಮಾಜವಾದಿ ನೆಲೆಯಿಂದ ಕಮ್ಯೂನಿಸ್ಟ್ ಚಿಂತನೆಯನ್ನು ವಿಮರ್ಶೆಗೆ ಒಡ್ಡಿರುವುದನ್ನು ಲೇಖಕರು ವಿಶ್ಲೇಷಿಸಿದ್ದಾರೆ.

ಈ ರೀತಿಯ ಒಂದೆರಡು ಕೃತಿಗಳಲ್ಲಿ ಅವರ ವಿಚಾರ ಸಾಹಿತ್ಯವನ್ನು ಕುರಿತಂತೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ ಹೊರತು ಹೆಚ್ಚು ಸ್ವತಂತ್ರ ಕೃತಿಗಳು ಅವರ ವಿಚಾರ ಸಾಹಿತ್ಯವನ್ನು ಕುರಿತಂತೆ ಅಧ್ಯಯನಗಳೇ ನಡೆದಿಲ್ಲ ಎನ್ನಬಹುದು.

ಲೇಖನಗಳು (ಇತರ ಪುಸ್ತಕಗಳು)

ಎನ್. ಗಾಯತ್ರಿಯವರ 'ಮುಖಾಮುಖಿ' ಕೃತಿ ಸಂದರ್ಶನ ಲೇಖನಗಳ ಸಂಗ್ರಹ. ಇಲ್ಲಿ ಲೇಖಕಿಯ 'ನಿರಂಜನರ ಮುಖಾಮುಖಿ' ಎಂಬ ಸಂದರ್ಶನ ಸಂಕಲನವನ್ನು ನೋಡಬಹುದು. ಹೆಸರೇ ಸೂಚಿಸುವಂತೆ ನಿರಂಜನರ ಜೊತೆ ಲೇಖಕಿಯು ಮುಖಾಮುಖಿಯಾಗಿ ನಿರಂಜನರ ಸಾಹಿತ್ಯ, ಕಥೆ, ಕಾದಂಬರಿಗಳಲ್ಲಿ, ಸ್ತ್ರೀ ಪಾತ್ರಗಳ ಚಿತ್ರಣ, ಸಾಹಿತಿಗೆ ಸಂಘಟನೆ ಬೇಕೇ, ಕಥೆ ಕಾದಂಬರಿಯ ಬಗ್ಗೆ ಪ್ರಶ್ನೆಯನ್ನು ಕೇಳುತ್ತಾ, ಉತ್ತರ ಪಡೆದುಕೊಂಡ ಸಂಕಲನವಾಗಿದೆ. ಇಲ್ಲಿ ಅವರ ವೈಚಾರಿಕ ನಿಲುವುಗಳನ್ನು ನೇರವಾಗಿ ಗ್ರಹಿಸಬಹುದೇ ಹೊರತು, ಅವರ ವಿಚಾರ ಸಾಹಿತ್ಯಗಳಾದ ಅಂಕಣ, ವ್ಯಕ್ತಿ ಚಿತ್ರಣ, ಭಾಷಣ ಸಂಕಲನ, ಮೊದಲಾದವುಗಳ ಬಗ್ಗೆ ಚರ್ಚೆಯೇ ನಡೆದಿಲ್ಲ. ಈ ಸಂದರ್ಶನದ ಕೆಲವು ಪ್ರಶ್ನೆಗಳು ನಿರಂಜನರವರ ಕೃತಿ ಮುಖತಃದಲ್ಲಿಯೂ ಪ್ರಕಟವಾಗಿದೆ.

ನಿರಂಜನರವರ ಆಪ್ತರಲ್ಲಿ ಒಬ್ಬರಾದ ಹಾ. ಮಾ. ನಾಯಕ್‌ರವರು ನಿರಂಜನರ 'ನಾಡಿ' ಎಂಬ ಲೇಖನವು 'ಪುಸ್ತಕ ಸಂಸ್ಕೃತಿ' (ಒಂದು ನೂರು ಪುಸ್ತಕಗಳ ಪರಿಚಯ) ಎಂಬ ಕೃತಿಯಲ್ಲಿದೆ. ಇಲ್ಲಿ ಲೇಖಕರು ನಿರಂಜನರ ಪತ್ರಗಳನ್ನು ಐದು ಭಾಗಗಳಾಗಿ ವಿಂಗಡಿಸಿದ ಕಾರಣ, ಈ ಕೃತಿಯ ಸಂಪಾದಕರ ನಿಲುವು, ಬಿಡುಗಡೆಯ ಕಾರಣ, ಕೆಲವು ಪತ್ರ ಸಂಕಲನಗಳ ಪಟ್ಟಿ ಇವುಗಳನ್ನು ಕುರಿತಂತೆ ಚರ್ಚಿಸಿದ್ದಾರೆ. ಒಬ್ಬ ಲೇಖಕನ ನಾಡಿಯ ಬಡಿತವನ್ನು ವಿಶ್ಲೇಷಿಸಿದ್ದಾರೆ.

ಬಿ. ಎ. ವಿವೇಕ ರೈಯವರು ಬರೆದ 'ಕನ್ನಡ ನುಡಿ-ನಡೆಯ ಬರಹಗಳು' ಎಂಬ ಕೃತಿಯಲ್ಲಿ ನಿರಂಜನರ 'ಬುದ್ಧಿ ಭಾವ ಬದುಕು' ಎಂಬ ಲೇಖನವೊಂದಿದೆ. ಇದು ನಿರಂಜನರ ವಿಚಾರ ಸಾಹಿತ್ಯವನ್ನು ಕುರಿತು ಬರೆದ 'ಬುದ್ಧಿ ಭಾವ ಬದುಕು' ಕೃತಿಯನ್ನು ಪರಿಚಯಿಸುವ ಲೇಖನವಾಗಿದೆ. ಲೇಖಕರು ಕೃತಿಯಲ್ಲಿರುವ ಕೆಲವೊಂದು ಲೇಖನಗಳನ್ನು ವಿಮರ್ಶಿಸುತ್ತಾರೆ. ಲೇಖಕರ ವೈಚಾರಿಕ ನಿಲುವು, ಸಾಹಿತ್ಯದ ಕುರಿತ ಆತನ ಧೋರಣೆಗಳು, ಸಂಗತಿಗಳು, ಸಾಹಿತ್ಯ ಪ್ರೇರಣೆಯ ಮೂಲಗಳನ್ನು ಕುರಿತಂತೆ ಚರ್ಚಿಸಿದ್ದಾರೆ. ಇದೇ ಲೇಖನ ನಿರಂಜನರವರ ಅಭಿನಂದನ ಗ್ರಂಥದಲ್ಲಿ 'ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಅಮೂಲ್ಯ ಕೊಡುಗೆ' ಎಂಬ ಶೀರ್ಷಿಕೆಯೊಂದಿಗೆ ಪ್ರಕಟಗೊಂಡಿದೆ.

ಅಂಕಣ ಸಾಹಿತ್ಯ ಕೃತಿ

ವಿ. ಬಿ. ಅರ್ತಿಕಜೆಯವರು 'ಹೀಗೊಂದು ವೃತ್ತಾಂತ' ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಇದು ಹೊಸ ದಿಗಂತ ಪತ್ರಿಕೆಗೆ ಬರೆದ ಅಂಕಣಗಳ ಸಂಗ್ರಹ ಕೃತಿಯಾಗಿದೆ. ಈ ಕೃತಿಯಲ್ಲಿ ನಿರಂಜನರವರ ವಿಚಾರ ಸಾಹಿತ್ಯವನ್ನು ಕುರಿತಂತೆ ಈ ಅಂಕಣ ಸಾಹಿತ್ಯದ ಕೃತಿಯಲ್ಲಿ ಕೆಲವೊಂದು ಲೇಖನಗಳಿವೆ.

'ನಿರಂಜನ ಅಭಿನಂದನ' ಎಂಬ ಲೇಖನದಲ್ಲಿ ನಿರಂಜನರವರ ಅಭಿನಂದನ ಗ್ರಂಥದ ಬಿಡುಗಡೆಯನ್ನು ಕುರಿತಂತೆ ಪ್ರಸ್ತಾಪಿಸಿದ್ದಾರೆ. ನಿರಂಜನರವರ ಒಟ್ಟು ಸಾಹಿತ್ಯವನ್ನು ಸಂಕ್ಷಿಪ್ತವಾಗಿ ದಾಖಲಿಸಿ, ಪತ್ರಕರ್ತರಾಗಿ, ಅಂಕಣಕಾರರಾಗಿ, ಏಳು ಸಂಪುಟಗಳನ್ನು ಹೊರತಂದ ವಿಷಯವನ್ನು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ. 'ವ್ಯಕ್ತಿ-ಕೃತಿ-ವ್ಯಾಪ್ತಿ' ಎಂಬ ಅಂಕಣದಲ್ಲಿ ನಿರಂಜನರವರ ಅಭಿನಂದನ ಗ್ರಂಥವನ್ನು ಪರಿಚಯಿಸುತ್ತಾರೆ ಮತ್ತು ಬಿಡುಗಡೆಯ ಸಮಾರಂಭದ ಬಗ್ಗೆ ತಿಳಿಸುತ್ತಾರೆ.

ಹೊಸದಿಗಂತದಲ್ಲಿ ೬.೧೨.೧೯೮೬ರಲ್ಲಿ 'ಮೃತ್ಯುಂಜಯ ಸಾಹಿತಿಗೆ ನಮನ' ಎಂಬ ಲೇಖನದಲ್ಲಿ ಕನ್ನಡ ಸಾಹಿತ್ಯದಲ್ಲಿ ನಿರಂಜನರವರನ್ನು ಸರಿಯಾಗಿ ಗುರುತಿಸದಿದ್ದಕ್ಕೆ ಕಾರಣಗಳನ್ನು ಬೊಳಂತಕೋಡಿ ಈಶ್ವರ ಭಟ್ಟರು ಚರ್ಚಿಸಿದ್ದಾರೆ. ನವೋದಯ ಮತ್ತು ಪ್ರಗತಿಶೀಲ ಕಾಲಘಟ್ಟದ ಕೆಲವು ಲೇಖಕರು ಶಿಷ್ಯವೃಂದವನ್ನು ಕಟ್ಟಿಕೊಂಡಿದ್ದರು. ನಿರಂಜನರವರು ಈ ರೀತಿಯ ಯಾವುದೇ ಬಳಗವನ್ನು ಕಟ್ಟಿಕೊಳ್ಳದೆ ಹೋಗದಿದ್ದದ್ದು ಕೂಡಾ, ಇವರ ಸಾಹಿತ್ಯವನ್ನು ಕುರಿತಂತೆ ವಿಮರ್ಶಾ ಬರಹಗಾರರು, ಅಧ್ಯಯನಕಾರರು ಅವರನ್ನು ಕಡೆಗಣಿಸಿದ ಬಗೆಯನ್ನು ಕುರಿತಂತೆ ಚರ್ಚಿಸಿದ್ದಾರೆ. ಇಲ್ಲಿ ಲೇಖಕರು ನಿರಂಜನರ ವ್ಯಕ್ತಿತ್ವ, ಸಾತ್ವಿಕ ಛಲ, ಅವರನ್ನು ಕನ್ನಡದ ವಿಮರ್ಶಕ ಲೋಕ ಕಡೆಗಣಿಸಿದರ ಕಾರಣವನ್ನು ತಿಳಿಸುತ್ತಾರೆ.

ಇದೇ ಲೇಖನದಲ್ಲಿ 'ನಡೆ ಚೆನ್ನ ನುಡಿ ಚೆನ್ನ' ಎಂಬ ಉಪಶೀರ್ಷಿಕೆಯಲ್ಲಿ ನಿರಂಜನರವರು ಬರೆದ ವ್ಯಕ್ತಿ ಚಿತ್ರಗಳ ಸಂಕಲನ 'ನಡೆ ಚೆನ್ನ-ನುಡಿ ಚೆನ್ನ' ಕೃತಿಯನ್ನು ವಿಮರ್ಶಿಸಲಾಗಿದೆ. ಈ ಕೃತಿಯನ್ನು ಕವಿ ವಿ. ಜಿ. ಭಟ್ಟರು ಬಿಡುಗಡೆಗೊಳಿಸಿದ್ದು ಮತ್ತು ನಿರಂಜನರವರ ವ್ಯಕ್ತಿತ್ವವನ್ನು ಚರ್ಚಿಸಿದ್ದಾರೆ.

ಹೊಸದಿಗಂತದಲ್ಲಿ ೨೮.೦೧.೧೯೯೧ ರಂದು ಬರೆದ 'ಇರುವುದು ಒಂದು ಬದುಕು' ಎಂಬ ಲೇಖನದಲ್ಲಿ ಅರ್ತಿಕಜೆಯವರು 'ನಾಡಿ' ನಿರಂಜನರ ಆಯ್ದ ಕೆಲವು ಪತ್ರಗಳು ಕೃತಿಯ ಬಿಡುಗಡೆ, ಆ

ಪತ್ರಗಳ ಸಂಕಲನವನ್ನು ಕುರಿತಂತೆ ನಿರಂಜನರ ಅಭಿನಂದನದಲ್ಲಿ ಕೆಲವು ಪತ್ರಗಳನ್ನು ಸೇರಿಸಬೇಕೆಂಬ ಆಶಯ, ಈ ನಾಡಿ ಪತ್ರಗಳ ಸಂಕಲನದಲ್ಲಿನ ಐದು ಭಾಗಗಳಾದ ಸಾಧನ, ಪಯಣ, ಕವಿ ಕಲ್ಪನೆಯ ಪುನರುತ್ಥಾನ, ಹೆಜ್ಜೆ, ಅದು ಇದೂ... ಇವುಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ.

'ನಿರಂಜನರ ನೆನಪಿಗಾಗಿ' ಎಂಬ ಲೇಖನದಲ್ಲಿ "ಸಾಹಿತಿಯಾದವನು ಎಷ್ಟೇ ಸಾಧನೆ ಮಾಡಿದರೂ ತನ್ನದೇಯಾದ ಬಳಗವೊಂದನ್ನು ಕಟ್ಟಿಕೊಂಡು ಪ್ರಚಾರ, ಸಂಘಟನೆ ನಡೆಸದಿದ್ದರೆ ಆತನ ಹೆಸರು ಕೂಡಾ ಕಣ್ಮರೆಯಾಗಿ ಹೋಗುತ್ತದೆ ಎನ್ನುವುದಕ್ಕೆ ನಿರಂಜನರದ್ದು ಒಂದು ನಿದರ್ಶನ"[೧೭] ಎಂದು ಅಭಿಪ್ರಾಯಿಸುತ್ತಾರೆ. ವಿ. ಬಿ. ಅರ್ತಿಕಜೆಯವರ ಈ ಮಾತು ಸಾಹಿತಿಯಾದವನಿಗೆ ಅವನದೇಯಾದ ಬಳಗ, ಶಿಷ್ಯವೃಂದ ಇಲ್ಲವೆಂದರೆ ಆತ ಹೇಗೆ ವಿಮರ್ಶಕರ ವಲಯದಲ್ಲಿ ಸಾಹಿತ್ಯ ಪರಿಧಿಗಳಲ್ಲಿ ನಗಣ್ಯನಾಗುತ್ತಾನೆ ಎಂಬುದನ್ನು ಸೂಚಿಸುತ್ತದೆ. ಕನ್ನಡದ ವಿಮರ್ಶಕ ಯಾವ ಹಾದಿಯಲ್ಲಿ ನಡೆಯುತ್ತಿದ್ದಾನೆ ಎಂಬುದನ್ನು ಇದರಿಂದ ತಿಳಿಯಬಹುದು.

ಅಭಿನಂದನ ಗ್ರಂಥ

ನಿರಂಜನರವರ ಸಮಗ್ರ ಬದುಕು-ಬರಹ-ವ್ಯಕ್ತಿತ್ವದ ಬಗ್ಗೆ ಹೆಚ್ಚು ಮಾಹಿತಿಯನ್ನು ನೀಡುವ ಅಭಿನಂದನ ಗ್ರಂಥ 'ನಿರಂಜನ' ಬಹು ಮುಖ್ಯವಾದದ್ದು. ಬೊಳಂತಕೋಡಿ ಈಶ್ವರ ಭಟ್ಟ ಪ್ರಧಾನ ಸಂಪಾದಕರಾಗಿದ್ದು ಸಹಸಂಪಾದಕರಾಗಿ ವಿ. ಬಿ. ಮೊಳೆಯಾರ, ವಿ. ಬಿ. ಅರ್ತಿಕಜೆಯವರು ಸಂಪಾದಿಸಿದ್ದಾರೆ. ನಿರಂಜನರ ಸಮಕಾಲೀನ ಬರಹಗಾರರು, ವಿಮರ್ಶಕರು ಬರೆದ ಅನೇಕ ಲೇಖನಗಳಿವೆ. ಈ ಅಭಿನಂದನ ಗ್ರಂಥದಲ್ಲಿ ವ್ಯಕ್ತಿ-ಕೃತಿ-ವ್ಯಾಪ್ತಿ ಎಂಬ ಮೂರು ವಿಭಾಗಗಳಿದ್ದು ವ್ಯಕ್ತಿ ಎಂಬ ಭಾಗದಲ್ಲಿ ನಿರಂಜನರವರ ವ್ಯಕ್ತಿತ್ವ ಅನಾವರಣವನ್ನು ಕಾಣಬಹುದು. ಕೃತಿ ಎಂಬ ಭಾಗದಲ್ಲಿ ಅವರ ಕೃತಿಗಳನ್ನು, ವೈವಿಧ್ಯ ಬರಹಗಳನ್ನು ಕುರಿತ ವಿಮರ್ಶಾ ಲೇಖನಗಳಿವೆ.

'ಪ್ರಗತಿಶೀಲ ಸಾಹಿತಿಯಾಗಿ ನಿರಂಜನ' ಎಂಬ ಲೇಖನದಲ್ಲಿ ಪಿ. ವಿ. ವಜ್ರಮಟ್ಟರವರು ಪ್ರಗತಿಶೀಲ ಸಾಹಿತಿಯಾಗಿ ನಿರಂಜನರವರು "ಸಾಹಿತ್ಯವನ್ನು ವಾಸ್ತವತೆ ಮತ್ತು ನೈಜ ವಿಚಾರಗಳ ಕಲೆ ಎಂದು ನಂಬಿದವರು. ಸಾಹಿತ್ಯ ಕಲೆಗಳಲ್ಲಿ ಹುಟ್ಟಿದ ದುಡಿಮೆಯ ಜೊತೆಯಲ್ಲಿ ಮಾನವನ ಕಾರ್ಯದಲ್ಲೇ ಎಂದು ಭಾವಿಸಿದವರು"[೧೮] ಎಂದಿದ್ದಾರೆ. ಪ್ರಗತಿಶೀಲ ಸಾಹಿತಿಯ ಸೈದ್ಧಾಂತಿಕತೆ, ಚಿಂತನೆಯ ಪರತೆ-ಯಾವ ದಿಕ್ಕಿನಲ್ಲಿ ಸಾಗಬೇಕು ಎಂಬುದನ್ನು ವಿಶ್ಲೇಷಿಸಿದ್ದಾರೆ. ನಿರಂಜನರವರ 'ಬುದ್ಧಿ ಭಾವ ಬದುಕು' ಕೃತಿಯಲ್ಲಿರುವ ಪ್ರಗತಿಶೀಲ ಸಾಹಿತ್ಯದ ಬಗೆಗಿನ ವ್ಯಾಖ್ಯಾನ, ಸಾಹಿತ್ಯ ಯಾರ ಪರ ಎಂಬ ನಿಲುವು, ಮೊದಲಾದವುಗಳನ್ನು ಲೇಖಕರು ಚರ್ಚಿಸಿದ್ದಾರೆ.

ನಿರಂಜನರ ಸಮಕಾಲೀನರಲ್ಲಿ ಮತ್ತೊಬ್ಬರಾದ ಬಿ. ಸಿ. ರಾಮಚಂದ್ರ ಶರ್ಮರವರು 'ನಿರಂಜನರ ಬುದ್ಧಿ-ಭಾವ-ಬದುಕು' ಎಂಬ ಲೇಖನ ನಿರಂಜನರವರು ಸಾಹಿತ್ಯದ ಬಗ್ಗೆ ಬರೆದ ಭಾಷಣಗಳ ಸಂಕಲನ ಗ್ರಂಥವನ್ನು ಕುರಿತಾಗಿದೆ. ಬುದ್ಧಿ-ಭಾವ-ಬದುಕಿನಲ್ಲಿ ಹೃದಯಗೀತೆಯ ಕವನ ಸಂಕಲನವನ್ನು ವಿಮರ್ಶಕರಾಗಿ ವಿಮರ್ಶಿಸಿದ ನಿರಂಜನರ ಧೋರಣೆಯನ್ನು ಪ್ರಶ್ನಿಸಿದ್ದಾರೆ. "ನಿರರ್ಥಕ ಸಾಹಿತ್ಯ ಸೃಷ್ಟಿಯಲ್ಲಿ ನವ್ಯತೆಯಿಂದ ಆಕರ್ಷಿತರಾದ ಬರಹಗಾರರು ನಿರತರಾದರು ಅಥವಾ ಕಾಮಕೇಂದ್ರಿತ ವಸ್ತುಗಳಲ್ಲಿ ಪ್ರಾಧಾನ್ಯ ಕಂಡರು ಅನ್ನುವಂತಹ ಮಾತುಗಳು ಉಪೇಕ್ಷಿತ ರೀತಿಯವು"[೧೯] ಎಂದು ಬಿ. ಸಿ. ರಾಮಚಂದ್ರ ಶರ್ಮರು ವ್ಯಾಖ್ಯಾನಿಸಿದ್ದಾರೆ. ನವ್ಯ ಸಾಹಿತ್ಯ ಕುರಿತ

ನಿರಂಜನರ ಧೋರಣೆಗಳು ಸಾಹಿತ್ಯದಲ್ಲಿ ಹೊಸತಕ್ಕೆ ಬಾಗಿಲು ತೆರೆಯುವ ಮನಸ್ಸು ನಿರಂಜನರಂತಹ ಕಮಿಟೆಡ್ ಸಾಹಿತಿಗೆ ಸಾಧ್ಯವಾಗುವುದಿಲ್ಲ ಎಂಬುದಾಗಿ ಚರ್ಚಿಸಿದ್ದಾರೆ.

ನಿರಂಜನರವರ ಅಂಕಣ ಸಾಹಿತ್ಯವನ್ನು ಕುರಿತಂತೆ ಎ. ವಿ. ನಾವಡರು 'ಅಂಕಣಕಾರ ನಿರಂಜನ' ಎಂಬ ಲೇಖನ ಬಹು ಮುಖ್ಯವಾದದ್ದು. ನಿರಂಜನರ ಅಂಕಣಗಳನ್ನು ಕುರಿತಂತೆ ಬರೆದ ಲೇಖನಗಳಲ್ಲಿ ಇದು ಪ್ರಮುಖವಾದುದು. ನಿರಂಜನರವರ ಸಮಗ್ರ ಅಂಕಣಗಳನ್ನು ಪರಿಚಯಿಸುವುದರೊಂದಿಗೆ ಅಂಕಣ ಸಾಹಿತ್ಯದಲ್ಲಿರುವ ಹತ್ತು ಹಲವು ವಿಭಿನ್ನ ವಿಷಯಗಳು, ವಿಚಾರಗಳು, ಆಶಯಗಳು, ತಾತ್ವಿಕತೆಯನ್ನು, ದೃಷ್ಟಿಕೋನಗಳನ್ನು, ಧೋರಣೆಗಳನ್ನು ವಿಶ್ಲೇಷಿಸಿದ್ದಾರೆ. 'ಪುಷ್ಪಹಾರ' ಸಂಕಲನದ ಕೆಲವೊಂದು ಲೇಖನಗಳಲ್ಲಿ ಕಮ್ಯೂನಿಸಂನ ಅವರ ಧೋರಣೆಯನ್ನು ಚರ್ಚಿಸಿದ್ದಾರೆ. ನಿರಂಜನರವರ 'ಅಂಕಣ', 'ರಾಜಧಾನಿಯಿಂದ', 'ಸಾಧನಾ', 'ಕಾಲಕ್ಷೇಪ' ಮೊದಲಾದವುಗಳಲ್ಲಿ ಕಂಡು ಬರುವ ಕನ್ನಡ ಸಾಹಿತಿ, ಕಲೆ, ರಾಜಕಾರಣಿಗಳ ಸಾಹಿತ್ಯಕ ರಾಜಕೀಯ ಧೋರಣೆ, ಮಾನವೀಯತೆ, ವೈಚಾರಿಕತೆಯನ್ನು ಒಳಗೊಂಡಿರುವ ಅಂಶಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಇದೇ ಲೇಖನ ೨೦೧೫ರಲ್ಲಿ ಪ್ರಕಟವಾದ ಎ. ವಿ. ನಾವಡರ 'ಸಾಹಿತ್ಯ ಶೋಧ' ಎಂಬ ಸಾಹಿತ್ಯವನ್ನು ಕುರಿತು ಬರೆದ ಸಂಕಲನ ಗ್ರಂಥದಲ್ಲಿಯೂ 'ಅಂಕಣಕಾರ ನಿರಂಜನ' ಎಂಬ ಶೀರ್ಷಿಕೆಯಲ್ಲಿಯೂ ಪ್ರಕಟಗೊಂಡಿದೆ.

ಎಂ. ಫಿಲ್./ಪಿಹೆಚ್. ಡಿ. ಪ್ರಬಂಧಗಳು

ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯವನ್ನು ಕುರಿತಂತೆ ಯಾವುದೇ ಎಂ. ಫಿಲ್. ಮತ್ತು ಪಿಹೆಚ್. ಡಿ. ಪ್ರಬಂಧಗಳು ಪ್ರಕಟಗೊಂಡಿಲ್ಲ ಮತ್ತು ಆ ಮಟ್ಟದಲ್ಲಿ ಅಧ್ಯಯನಗಳೇ ನಡೆದಿಲ್ಲ ಎನ್ನಬಹುದು.

ಈ ಎಲ್ಲಾ ಅಧ್ಯಯನಗಳನ್ನು ಗಮನಿಸಿದರೆ ಅ. ನ. ಕೃ. ರವರ ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಜಿ. ಎಸ್. ಅಮೂರರವರ 'ಅ. ನ. ಕೃಷ್ಣರಾಯ', ನರಹಳ್ಳಿ ಬಾಲಸುಬ್ರಮಣ್ಯರ 'ಅ. ನ. ಕೃ. ಮತ್ತು ಕನ್ನಡ ಸಂಸ್ಕೃತಿ', ದೇವುಡುರವರ 'ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ' ದಲ್ಲಿನ ಲೇಖನ, ತ. ರಾ. ಸು. ರವರು ಬರೆದ 'ಅ. ನ. ಕೃ.' ಕೃತಿಗಳಲ್ಲಿ ಅವರ ವಿಚಾರ ಸಾಹಿತ್ಯವನ್ನು ಕುರಿತಂತೆ ಕೆಲವೊಂದು ಚರ್ಚೆಗಳು ಸಣ್ಣ ಅಧ್ಯಯನಗಳು ನಡೆದಿವೆ. ಅ. ನ. ಕೃ. ಅಭಿನಂದನ ಗ್ರಂಥದಲ್ಲಿ ಕೆಲವೊಂದು ಲೇಖನಗಳಲ್ಲಿ ಜೀವನ ಚರಿತ್ರೆ, ವೀರಶೈವ ಸಾಹಿತ್ಯ, ನಾಟಕ ಕಲೆ, ಕನ್ನಡ–ಕರ್ನಾಟಕ ಕುರಿತ ಚಿಕ್ಕ ಚಿಕ್ಕ ಲೇಖನಗಳನ್ನು ಬಿಟ್ಟರೆ ಅ. ನ. ಕೃ. ರವರ ಸಮಗ್ರ ವಿಚಾರ ಸಾಹಿತ್ಯವನ್ನು ಕುರಿತಂತೆ ಅಧ್ಯಯನ ಮಾಡಿರುವುದು ಇಲ್ಲವೇ ಇಲ್ಲ.

ಅದರಂತೆ ನಿರಂಜನರವರ ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಾ. ಮಾ. ನಾಯಕರು ಬರೆದ ನಿರಂಜನರ 'ನಾಡಿ', ಅಭಿನಂದನ ಗ್ರಂಥದಲ್ಲಿ ಪ್ರಕಟವಾದ ಬಿ. ಸಿ. ರಾಮ ಚಂದ್ರ ಶರ್ಮರ 'ಬುದ್ಧಿ ಭಾವ ಬದುಕು', ಎ. ವಿ. ನಾವಡರ 'ಅಂಕಣಕಾರ ನಿರಂಜನ', ಬಿ. ಎ. ವಿವೇಕ ರೈಯವರ 'ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಅಮೂಲ್ಯ ಕೊಡುಗೆ' ಎಂಬ ಲೇಖನಗಳನ್ನು ಬಿಟ್ಟರೆ ನಿರಂಜನರ ವಿಚಾರ ಸಾಹಿತ್ಯವನ್ನು ಕುರಿತ ಅಧ್ಯಯನವೇ ನಡೆದಿಲ್ಲ.

ಈ ಮೇಲಿನ ಎಲ್ಲಾ ಸಂಶೋಧಕರು ಮತ್ತು ವಿಮರ್ಶಕರ ದೃಷ್ಟಿಯಲ್ಲಿ ಅ. ನ. ಕೃ. ಮತ್ತು ನಿರಂಜನರ ವಿಚಾರ ಸಾಹಿತ್ಯ ಧನಾತ್ಮಕವಾಗಿಯೂ ಮತ್ತು ಋಣಾತ್ಮಕವಾಗಿಯೂ ಕಂಡು ಬರುತ್ತದೆ. ಪ್ರಗತಿಶೀಲ ಕಾಲಘಟ್ಟದ ಪ್ರಮುಖ ಲೇಖಕರಾದ ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯದ ಧೋರಣೆಗಳು, ತಾತ್ವಿಕತೆ, ಸ್ವರೂಪ, ಸಾಮ್ಯತೆ, ಭಿನ್ನತೆ ಮೊದಲಾದವುಗಳನ್ನು ನಿರ್ದಿಷ್ಟ ಚೌಕಟ್ಟಿಗೆ ಒಳಪಡಿಸಿ ಅಧ್ಯಯನ ಮಾಡಿರುವುದು ಈ ಸಮೀಕ್ಷೆಯಿಂದ ಕಂಡು ಬರುವುದಿಲ್ಲ. ಆದ್ದರಿಂದ ಮೇಲೆ ಹೇಳಿದ ಎಲ್ಲಾ ವಿಚಾರಗಳನ್ನು ನಿರ್ದಿಷ್ಟ ಚೌಕಟ್ಟಿನೊಳಗೆ ತಿಳಿಯಲು, ಇವರಿಬ್ಬರ ವಿಚಾರ ಸಾಹಿತ್ಯದಲ್ಲಿ ಹೇಗೆ ಸಾಮ್ಯತೆ-ಭಿನ್ನತೆ ಇದೆ ಎಂದು ತಿಳಿಯಲು ಮುಂದಿನ ಅಧ್ಯಾಯದಲ್ಲಿ ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯದ ತಾತ್ವಿಕತೆ ಮತ್ತು ಸ್ವರೂಪದ ಅವಲೋಕನವನ್ನು ವಿವರವಾಗಿ ನೋಡಬಹುದು.

ಕೊನೆ ಟಿಪ್ಪಣಿಗಳು

೧. ತ. ರಾ. ಸು., ಅ. ನ. ಕೃ., ಪುಟ ೧೨೦.

೨. ಅದೇ, ಪುಟ ೧೩೦.

೩. ನರಹಳ್ಳಿ ಸುಬ್ರಮಣ್ಯ, ಅ. ನ. ಕೃ. ಮತ್ತು ಕನ್ನಡ ಸಂಸ್ಕೃತಿ, ಪುಟ ೮೪.

೪. ಅದೇ, ಪುಟ ೮೫.

೫. ಅದೇ, ಪುಟ ೯೧.

೬. ಜಿ. ಎಸ್. ಅಮೂರ, ಅ. ನ. ಕೃಷ್ಣರಾಯರು, ಪುಟ ೬೨.

೭. ಅದೇ, ಪುಟ ೬೪.

೮. ಅದೇ, ಪುಟ ೬೫.

೯. ಶಾ. ಮಂ. ಕೃಷ್ಣರಾಯರು (ಸಂ), ಅಮರ ಚೇತನ (ಅ. ನ. ಕೃ. ವ್ಯಕ್ತಿ, ಅಭಿವ್ಯಕ್ತಿ), ಪುಟ ೪೪೫, (ಲೇಖನ: ಕೋ. ಚೆನ್ನಬಸಪ್ಪ, ಶರಣ ಸಾಹಿತ್ಯಕ್ಕೆ ಕೊಡುಗೆ).

೧೦. ಅದೇ, ಪುಟ ೪೪೬, (ಲೇಖನ: ಎಂ. ಎಸ್. ನರಸಿಂಹಮೂರ್ತಿ, ಹರಟೆಮಲ್ಲರು).

೧೧. ಅದೇ, ಪುಟ ೭೦೭, (ಲೇಖನ: ಡಾ. ಅ. ಲ. ನರಸಿಂಹನ್, ಅ. ನ. ಕೃಷ್ಣರಾಯರು ಮತ್ತು ಚಿತ್ರಕಲೆ).

೧೨. ಶಾ. ಮಂ. ಕೃಷ್ಣರಾಯರು (ಸಂ), ರಸಚೇತನ, ಪುಟ ೨೯೬, (ಲೇಖನ: ಗೌರೀಶ್ ಕಾಯ್ಕಿಣಿ, ರಸಾರ್ದ್ರ ವಿಮರ್ಶಕ).

೧೩. ಅದೇ, ಪುಟ ೩೫೦, (ಲೇಖನ: ಶಿ. ಶಿ. ಬಸವನಾಳ, ಬಸವಣ್ಣನವರ ಅಮೃತವಾಣಿ).

೧೪. ಬಸವರಾಜ ಸಬರದ, ನಿರಂಜನ, ಪುಟ ೨೩.

೧೫. ಅದೇ, ಪುಟ ೨೩.

೧೬. ಧನಂಜಯ ಕುಂಬ್ಳೆ, ಪ್ರಗತಿಪಥ ತೋರಿದ ಸೃಜನಶೀಲ ಚಿಂತಕ ನಿರಂಜನ, ಪುಟ ೩೪–೩೫.

೧೭. ವಿ. ಬಿ. ಅರ್ತಿಕಜೆ, ಹೀಗೊಂದು ವೃತ್ತಾಂತ, ಪುಟ ೨೯೯.

೧೮. ಈಶ್ವರಭಟ್ಟ ಬೊಳಂತಕೋಡಿ (ಸಂ), ನಿರಂಜನ ಅಭಿನಂದನ, ಪುಟ ೨೦೩, (ಲೇಖನ: ಪಿ. ವಿ. ವಜ್ರಮಟ್ಟ, ಪ್ರಗತಿಶೀಲ ಸಾಹಿತಿಯಾಗಿ ನಿರಂಜನ).

೧೯. ಅದೇ, ಪುಟ ೩೦೭, (ಲೇಖನ: ಬಿ. ಸಿ. ರಾಮಚಂದ್ರ ಶರ್ಮ, ನಿರಂಜನರವರ 'ಬುದ್ಧಿ ಭಾವ ಬದುಕು').

ಅಧ್ಯಾಯ ೩

ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯ

ಪ್ರವೇಶಿಕೆ

ಮಾನವ ಇತರ ಪ್ರಾಣಿಗಳಿಗಿಂತ ಭಿನ್ನವಾಗಿದ್ದಾನೆ. ಅವನ ಬುದ್ಧಿಶಕ್ತಿಯೇ ಮಾನವನನ್ನು ಇತರ ಪ್ರಾಣಿಗಳಿಗಿಂತ ಭಿನ್ನವಾಗಿ ನಿಲ್ಲಿಸಿದೆ. ಈ ಬುದ್ಧಿಶಕ್ತಿಯಿಂದ ಮನುಷ್ಯ ಭೂಮಿಯ ಮೇಲೆ ಪ್ರಭುತ್ವವನ್ನು ಸಾಧಿಸುತ್ತಾ ಬಂದಿದ್ದಾನೆ. ತನ್ನ ಬುದ್ಧಿಶಕ್ತಿಯಿಂದ ಸಮಾಜ, ಕುಟುಂಬ, ನಾಡು, ದೇಶಗಳು ಮೊದಲಾದವುಗಳನ್ನು ರೂಪಿಸಿಕೊಂಡು ನಾಗರಿಕ ಜೀವನ ನಡೆಸುತ್ತಿದ್ದಾನೆ. ಈ ರೀತಿಯ ಬುದ್ಧಿಶಕ್ತಿಯಿಂದ ಮನುಷ್ಯ ಅನೇಕ ರೀತಿಯ ಮಜಲುಗಳಲ್ಲಿ ಬೆಳೆದಿದ್ದಾನೆ ಮತ್ತು ಬೆಳೆಯುತ್ತಿದ್ದಾನೆ. ಬುದ್ಧಿಶಕ್ತಿಯಿಂದ ವಿಚಾರಗಳು ರೂಪುಗೊಂಡು, ಆಲೋಚನೆಗಳು, ಭಾವನೆಗಳು, ಯೋಜನೆಗಳು ತನ್ಮೂಲಕ ಹೊಮ್ಮುವ ಹೊಸ ವಿಚಾರಗಳು ಮನುಷ್ಯನ ಮೇಲೆ ಪ್ರಭಾವ ಬೀರಿ ಹೊಸದನ್ನು ನಿರ್ಮಿಸುವಲ್ಲಿ ಸಹಕಾರಿಯಾಗಿವೆ.

ಮಾನವನು ಸಾಮಾಜಿಕ ಜೀವಿಯಾಗಿರುವುದರಿಂದಲೇ 'Man is a rational animal' ಎಂದು ಕರೆಯುತ್ತಾರೆ. ಆತನ ಬುದ್ಧಿಶಕ್ತಿ, ಜ್ಞಾನ, ಆಲೋಚನಾ ಪ್ರಜ್ಞೆ ಇವೆಲ್ಲವೂ ಮನುಷ್ಯನನ್ನು ಅನಾಗರಿಕನಿಂದ ನಾಗರಿಕನವರೆಗೂ, ಪ್ರಾಣಿಯಿಂದ ಮಾನವನವರೆಗೂ, ವಿಕಾಸವನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ವಿಚಾರಶಕ್ತಿಯಿಂದ ಮಾನವನು ನವಸಮಾಜಗಳ ನಿರ್ಮಾಣ ಹಾಗೂ ಆ ಸಮಾಜಗಳಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ, ಸಮಾಜದಲ್ಲಿನ ಹಲವು ವಿಚಾರಗಳಿಗೆ ತನ್ನದೇಯಾದ ರೀತಿಯಲ್ಲಿ ಪ್ರತಿಕ್ರಿಯಿಸುವ, ಯಾವುದು ಸರಿ, ಯಾವುದು ತಪ್ಪು ಎಂಬುದರ ಪ್ರಜ್ಞೆ ಮೊದಲಾದವುಗಳೆಲ್ಲವೂ ಮೂಡಲು ಕಾರಣವಾಯಿತು.

೩.೧ ವಿಚಾರವಾದ, ವಿಚಾರ ಸಾಹಿತ್ಯ ಮತ್ತು ಸ್ವರೂಪ

ವಿಚಾರವಾದ

ಅನುಭವಗಳು ಮಾನವನನ್ನು ರೂಪಿಸುವ ಹಾಗೆಯೇ, ವಿಚಾರಗಳು ಮನುಷ್ಯನನ್ನು ರೂಪಿಸುತ್ತವೆ. ಅಂದರೆ ಮನುಷ್ಯನಲ್ಲಿ ಆಲೋಚನೆಗಳು, ಭಾವನೆಗಳು, ಯೋಚನೆಗಳು, ಹೊಸ ವಿಚಾರಗಳನ್ನು ಹೊಮ್ಮುವಂತೆ ಮಾಡಿ ಅದು ಮಾನವನ ಮೇಲೆ ಪ್ರಭಾವ ಬೀರುತ್ತವೆ. ವಿಚಾರ ಪ್ರಜ್ಞೆಯು ನಿಂತ ನೀರಾಗದೇ ಸದಾ ಅರ್ಥಪೂರ್ಣವಾದ ಬದುಕಿನ ಕಡೆ ಸಾಗುವ ನಿರಂತರ ಕ್ರಿಯೆಯಾಗಿದೆ. ಸಾಮಾನ್ಯವಾಗಿ ಅನೇಕ ಪ್ರಶ್ನೆಗಳನ್ನು ಪ್ರೇರೇಪಿಸಿ, ಮುಕ್ತ ಚರ್ಚೆಯನ್ನು ಅಪೇಕ್ಷಿಸುವ, ತರ್ಕಿಸುವ, ಮನೋಭಾವದ ವಿಚಾರಗಳ ಮಂಥನವನ್ನೇ ವಿಚಾರವಾದ ಎನ್ನಬಹುದು. ಯಾವ ವ್ಯಕ್ತಿಯಲ್ಲಿ ವಿಚಾರ ಪ್ರಜ್ಞೆಯಿದ್ದು, ತರ್ಕಿಸುವ, ಒರೆಗೆ ಹಚ್ಚುವ, ಪ್ರಶ್ನಿಸುವ ಮನಸ್ಸು ಅವನಲ್ಲಿದ್ದರೆ ಅವನು ಮನುಷ್ಯನೆನಿಸಿಕೊಳ್ಳುತ್ತಾನೆ ಎಂಬುದು ತತ್ವಜ್ಞಾನಿಗಳ ಹೇಳಿಕೆಯಾಗಿದೆ. ಆದ್ದರಿಂದಲೇ ಸದಾ ಮನುಷ್ಯ ಒಂದಲ್ಲ ಒಂದು ವಿಚಾರ ಮಾಡುತ್ತಾ, ತನ್ನಲ್ಲಿರುವ ವಿಚಾರ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಸದಾ ತುಡಿಯುತ್ತಿರುತ್ತಾನೆ.

ವಿಚಾರ ಪ್ರಜ್ಞೆಯೊಂದೇ ಮನುಷ್ಯನನ್ನು ಸರ್ವತೋಮುಖವಾಗಿ ಮೇಲಕ್ಕೆತ್ತುವ ಪ್ರಮುಖ ಸಾಧನವಾಗಿದೆ. ಯಾವ ವ್ಯಕ್ತಿ ವಿಚಾರವಂತನಾಗಿರುತ್ತಾನೋ ಆತ ಯಾವುದೇ ಒಂದು ವಿಷಯವನ್ನು ಒಂದೇ ಬಾರಿಗೆ ಒಪ್ಪಿಕೊಳ್ಳಲಾರ. ಏಕೆಂದರೆ ಅದರ ಸತ್ಯಾಸತ್ಯತೆಗಳ ಬಗ್ಗೆ ಅವನ ವಿಚಾರ ಪ್ರಜ್ಞೆಯು ಹಂಬಲಿಸುತ್ತಿರುತ್ತದೆ. ಇಡೀ ಸಮಾಜವೇ ಅದು ಸರಿ ಎಂದು ಹೇಳಿದರೂ, ವಿಚಾರವಂತನು ಅದನ್ನು ಒಪ್ಪಲಾರ, ಅದು ಅವನ ಪ್ರಜ್ಞೆಗೆ ಸರಿಯಾದದ್ದು ಎಂದು ಒಪ್ಪಿದರೆ ಮಾತ್ರ ಒಪ್ಪಿಕೊಳ್ಳುತ್ತಾನೆ. ಇಡೀ ಲೋಕವೇ ಅಲ್ಲಗಳೆದರೂ, ತನ್ನ ನಿಲುವನ್ನು ಬದಲಿಸಲಾರ. ಇದು ವಿಚಾರವಾದದ ಒಂದು ಮುಖ್ಯ ಅಂಶವಾಗಿದೆ. ಜೊತೆಗೆ ತನ್ನ ವಿಚಾರ ಪ್ರಜ್ಞೆಯಿಂದ ಸಮಾಜದ ನಿಲುವನ್ನು ಬದಲಿಸುವ ಮಟ್ಟಿಗೆ ವಿಚಾರವಂತ ಕಾರ್ಯಪ್ರವೃತ್ತನಾಗುತ್ತಾನೆ.

“ವಿಚಾರವಾದವನ್ನು ನಿಜವಾಗಿ ಯತಾರ್ಥವಾಗಿ ಕರೆಯುವುದು ಬುದ್ಧಿ ಪ್ರಾಮಾಣ್ಯವೆಂದು. ಎಂದಿನಿಂದಲೂ ನಮ್ಮ ಪೂರ್ವಿಕರು ಒಂದು ಘಟನೆಯ, ವಿಧಾನದ, ಅಭಿಪ್ರಾಯದ ಸತ್ಯಾಸತ್ಯತೆಯನ್ನು ಅರಿಯಲು ಮೂರು ಪ್ರಮಾಣಗಳನ್ನು ಅವಲಂಬಿಸುತ್ತಾ ಬಂದಿದ್ದರೆ. ಆ ಮೂರು ಪ್ರತ್ಯಕ್ಷ ಶಬ್ದ ಮತ್ತು ಅನುಮಾನ ಪ್ರಯೋಗಿಸಿ, ಪರೀಕ್ಷಿಸಿ ಕಣ್ಣಾರೆ ಕಂಡು ತಿಳಿದು ನೋಡುವುದು – ಪ್ರತ್ಯಕ್ಷ ಪ್ರಾಮಾಣ್ಯ, ಇದು ಸಾಧ್ಯವಾಗದೇ ಇದ್ದಾಗ, ಬಲ್ಲವರ, ಅನುಭವಿಕರ, ಪೂರ್ವಿಕರ ಅಥವಾ ತಜ್ಞರೆಂಬುವವರ ಮಾತನ್ನು ನಂಬುವುದು. ಶಬ್ದ ಪ್ರಾಮಾಣ್ಯ, ಇದನ್ನು ಆಪ್ತವಾಕ್ಯ ಪ್ರಾಮಾಣ್ಯವೆಂದು ಕರೆಯುತ್ತಾರೆ. ಬಹುಶಃ ಎಲ್ಲಾ ಧರ್ಮಶ್ರದ್ಧೆ ಇಂತಹ ಶಾಸ್ತ್ರ ವಚನದ ಪ್ರಾಮಾಣ್ಯದ ಮೇಲೆಯೇ ನೆಲೆಗೊಂಡಿರುತ್ತದೆ. ಈ ಪ್ರಾಮಾಣ್ಯವು ಕಷ್ಟವಾದಲ್ಲಿ, ಕಷ್ಟವೆನಿಸಿದಲ್ಲಿ ಕೊನೆಗೆ ನಾವು ಸತ್ಯಾಸತ್ಯತೆಯನ್ನು ತೀರ್ಮಾನಿಸಲು ನಮ್ಮ ಬುದ್ಧಿಯನ್ನೇ ಪ್ರಮಾಣವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಈ ಬುದ್ಧಿಯ ಕಾರಣವೇ ಅನುಮಾನ. ‘ಇನ್‌ಫರೆನ್ಸ್’ ಒಪ್ಪಿಕೊಂಡ ತತ್ವದ ಒರೆಗಲ್ಲಿಗೆ ತರ್ಕದ ತೆಕ್ಕೆಗೆ ನಿಲ್ಲಬಲ್ಲ ವಿಚಾರವನ್ನೋ, ಹೇಳಿಕೆಯನ್ನೋ, ಸಂಗತಿಯನ್ನೋ, ಸರಿಯೆಂದು ಇತ್ಯರ್ಥ ಮಾಡುವ ಪದ್ಧತಿಯೇ ಇದು”[7] ಎಂಬುದಾಗಿ ಗೌರೀಶ ಕಾಯ್ಕಿಣಿಯವರು ಅಭಿಪ್ರಾಯಿಸುತ್ತಾರೆ.

ಅಂದರೆ ವಿಚಾರವಾದವು ಹುಟ್ಟುವುದು ಮನುಷ್ಯನ ತರ್ಕಬದ್ಧವಾದ ಆಲೋಚನೆಯಿಂದ, ಸತ್ಯಾಸತ್ಯತೆಯ ವಿಶ್ಲೇಷಣೆಯಿಂದ, ಒರೆಗೆ ಹಚ್ಚುವ ಆತನ ಬುದ್ಧಿ ಪ್ರವೃತ್ತಿಯಿಂದಾಗಿ ಎನ್ನಬಹುದು. ವಿಚಾರವಾದವು ಮನುಷ್ಯನಲ್ಲಿ ಒಂದು ವಿಚಾರದ ಬಗ್ಗೆ ಅನುಮಾನ ಮೂಡಿ ಆ ವಿಚಾರವನ್ನು ಕುರಿತಂತೆ ತನ್ನಲ್ಲಿಯೇ ಆಲೋಚನೆಗಳನ್ನು ಕೇಂದ್ರೀಕರಿಸಿ ಅದರ ಸತ್ಯಾಸತ್ಯತೆಗಳನ್ನು ನಿರ್ಧರಿಸುವ ಮೂಲಕ ಒಂದು ವಿಚಾರ ರೂಪು ಪಡೆಯುತ್ತದೆ. ಇದೇ ವಿಚಾರವಾದದ ಹುಟ್ಟಲು ಕಾರಣವಾಗಿದೆ.

ವಿಚಾರವಾದವೆಂಬುದು ಕಷ್ಟದ ದಾರಿಯಾಗಿದೆ. ಈ ದಾರಿಯಲ್ಲಿ ನಡೆಯಬೇಕಾದಾಗ ಅನೇಕ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಆದರೆ ಈ ದಾರಿಯಲ್ಲಿ ನಡೆದಂತೆ ಹಾಗೂ ವಿಚಾರವಾದವು ಬೆಳೆದಂತೆ ಒಂದು ಪ್ರಜ್ಞಾವಂತ ಸಮಾಜ ನಿರ್ಮಾಣವಾಗುತ್ತದೆ. ಸಮಾಜವನ್ನು ತಿದ್ದುವ, ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವನ್ನು ನೀಡುವ ಒಂದು ಪ್ರಬಲ ಅಸ್ತ್ರವಾಗಿ ವಿಚಾರವಂತಿಕೆ ಮತ್ತು ವಿಚಾರವಾದವು ಕಾರ್ಯ ನಿರ್ವಹಿಸುತ್ತದೆ.

ವಿಚಾರ ಪ್ರಜ್ಞೆಯೆಂಬುದು ಇತ್ತೀಚಿನದಲ್ಲ, ಮಾನವನಲ್ಲಿ ಅದು ಎಂದೆಂದಿಗೂ ಜಾಗೃತವಾಗಿರುತ್ತದೆ. ಏಕೆ? ಹೇಗೆ? ಮೊದಲಾದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳದ ವಿನಹ. ಮಾನವಕುಲ ಶಾಂತಿ, ಸಹಾಭಾಳ್ವೆಯ, ನೆಮ್ಮದಿಯ ಬದುಕನ್ನು ಕಂಡುಕೊಳ್ಳಲಾಗುವುದಿಲ್ಲ. ಇಡೀ

ಮಾನವ ಕುಲದ ಭಯ, ಸಂಶಯ, ದುಗುಡ, ಸಂಘರ್ಷ, ಸಾಮಾಜಿಕ ಸಮಸ್ಯೆಗಳ ನಿವಾರಣೆಗೆ ಇರುವ ಒಂದೇ ಸಾಧನ ಅದು ವಿಚಾರವಾದ.

ವಿಚಾರವಾದವು ತನ್ನದೇಯಾದ ತಾತ್ವಿಕತೆ ಮತ್ತು ತಂತ್ರವನ್ನು ಹೊಂದಿದೆ ಎಂಬುದಕ್ಕೆ ವಿಚಾರವಾದಿಗಳಾದ ಗೌರೀಶ್ ಕಾಯ್ಕಿಣಿಯವರು ಈ ರೀತಿ ವ್ಯಾಖ್ಯಾನಿಸಿದ್ದಾರೆ "ಮನುಷ್ಯನ ಆತ್ಮ ಸ್ವಾತಂತ್ರ್ಯಕ್ಕೆ ಆಧಾರವಾದ ಸತ್ಯಗಳು ಮೂರು. ಅದೇ ವಿಚಾರವಾದದ ತ್ರಿಪೀಠಿಕೆ. ಕ್ಲಾಯಿವ್ಹ್ ಬೆಲ್ ತನ್ನ 'ಸಿವಿಲೈಸೇಶನ್' ಎಂಬ ಸುಪ್ರಸಿದ್ಧ ಪುಸ್ತಕದಲ್ಲಿ ಅದನ್ನು ಈ ರೀತಿ ಸಾರಿದ್ದಾನೆ.

೧. ನಾವು ನಂಬಿದ್ದೆಲ್ಲಾ ನಿಜವಿರಬೇಕೆಂದಿಲ್ಲ.

೨. ನಾವು ಮೆಚ್ಚಿದ್ದೆಲ್ಲ ಒಳಿತಿರಬೇಕೆಂದಿಲ್ಲ.

೩. ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸಿಕ್ಕಿದೆಯೆಂದಿಲ್ಲ.

ಅಂದರೆ ಎಲ್ಲಾ ಪ್ರಶ್ನೆಗಳು ಎಂದಿಗೂ ಮುಂದಿನ ಹೆಚ್ಚಿನ ವಿಚಿಕಿತ್ಸೆ-ಚರ್ಚೆಗಳಿಗೆ ತೆರೆದವೆ ಇರುತ್ತವೆ. ನಾಗರಿಕತೆಯ ಮೂಲವೇ ಕುತೂಹಲ, ಕುತೂಹಲಕ್ಕೆ ಅಡಿಗಲ್ಲೇ ಈ ಮೂರು ತತ್ವಗಳು. ಇದರ ಇನ್ನೊಂದು ಮೈಯೇ ಸಂಸ್ಕೃತಿ. ಅಂದರೆ ಒಟ್ಟಾರೆ ವಿಚಾರವಾದವು ಬುದ್ಧಿ ಪ್ರಾಮಾಣ್ಯವೂ, ಸ್ವಾತಂತ್ರ್ಯಕ್ಕೂ, ಸಂಸ್ಕೃತಿಗೂ, ನಾಗರಿಕತೆಗೂ, ಮಾನವನ ಸುಖಶಾಂತಿಗೂ ಕೂಡಿಯೇ ಬೀಜಮಂತ್ರವೆಂದಾಯಿತು.

ಒಂದು ಚೀನೀ ಗಾದೆ ಹೇಳುತ್ತದೆ – ಪ್ರತಿಯೊಂದು ಪ್ರಶ್ನೆಗೂ ಮೂರು ಬದಿಗಳು, ಒಂದು ನನ್ನ ಬದಿ, ಇನ್ನೊಂದು ನಿನ್ನ ಬದಿ, ಮತ್ತೊಂದು ನಿಜವಾದ ಬದಿ. ಈ 'ಮೂರನೇ ಪರಿಮಾಣ' ನೋಡುವ ಕಣ್ಣು ನಮ್ಮ ತಿಳಿಗಣ್ಣು... ಅಂತೂ ನಾವು ಕಂಡಷ್ಟೂ ಸತ್ಯವನ್ನು ನಂಬುವಾಗ ನಾವು ಕಂಡದ್ದೇ ಸತ್ಯವೆಂಬ ಹಟ, ಅನ್ಯರು ಕಂಡದ್ದರ ಕುರಿತು ಹೇವ ನಮಗೆ ಬೇಡ. ಈ ಪ್ರತಿಜ್ಞೆ ವಿಚಾರವಾದದ ಪ್ರಥಮ ದೀಕ್ಷೆ. ಈ ದೀಕ್ಷೆಯ ಮಂತ್ರವೇ ಮೇಲಿನ ಮೂರು ಸೂತ್ರಗಳು"[೨] ಎಂಬುದಾಗಿ ಅಭಿಪ್ರಾಯಿಸಿದ್ದಾರೆ.

ಪ್ರತಿಯೊಬ್ಬ ವ್ಯಕ್ತಿಯಲ್ಲಿನ ಕುತೂಹಲ, ತನ್ನದೇಯಾದ ಆಲೋಚನಾ ಕ್ರಮ, ಸತ್ಯವನ್ನು ಹೇಳುವ ನಿಷ್ಠುರತನ, ಬೇರೆಯವರ ವಿಚಾರಗಳನ್ನು ಗೌರವಿಸುವ, ಸರಿ-ತಪ್ಪುಗಳ ವಿಶ್ಲೇಷಣೆ, ಸಮಸ್ಯೆಯನ್ನು ಪರಿಹರಿಸುವ ಸಂಯಮ, ವಿಮರ್ಶಾತ್ಮಕ ಜಾಣ್ಮೆ, ಲೋಕವನ್ನು ಗ್ರಹಿಸುವ ಪರಿ, ಮೊದಲಾದವು ವಿಚಾರವಾದದ ಗುಣ ಲಕ್ಷಣಗಳಾಗಿವೆ.

"ಮನುಷ್ಯ ತಾನು ಕಂಡ, ಕೇಳಿದ, ಮೂಸಿದ, ಮುಟ್ಟಿದ, ಸವಿದ ನೂರಾರು ವಸ್ತುಗಳ ನೆನಪೆನ್ನಿಸಲು ಶಬ್ದಗಳನ್ನು ನಿರ್ಮಿಸಿದ. ಅವುಗಳ ಕ್ರಿಯೆ, ಗುಣಗಳನ್ನು ತಿಳಿಯಲು ಶಬ್ದಗಳನ್ನು ನಿರ್ಮಿಸಿದ, ಕೆಲವೊಂದು ಅನುಭವಗಳನ್ನು ಸುಸ್ಪಷ್ಟವಾಗಿ ತಿಳಿಯಲು ಬಾರದಾಗ ಇತರ ಅನುಭವಗಳೊಡನೋ, ಗುಣಗಳೊಡನೋ ಹೋಲಿಸಿ ಹೇಳಲು ಕಲಿತ ಪ್ರತ್ಯಕ್ಷ ಸಂವೇದನೆಗಳನ್ನು ತಿಳಿಯಲು ಬೇಕಾಗುವ ಪದ ಸಮುದಾಯದಂತೆಯೇ, ಪರೋಕ್ಷ ಅನುಭವಗಳ ಸಲುವಾಗಿಯೇ ಹೊಸ ಮಾತುಗಳನ್ನು ಆತ ಬಳಸುತ್ತಾ ಬರಬೇಕಾಯಿತು".[೩] ಇದರ ಪರಿಣಾಮವಾಗಿ ಮಾನವನು

ಸಹಜವಾದ ಆಲೋಚನೆಗಳಲ್ಲಿ ತೊಡಗಿದನು. ಈ ಆಲೋಚನೆಗಳ ಕ್ರಮದಿಂದ ವಿಚಾರಗಳು ಅವನಲ್ಲಿ ಮೂಡಿದವು. ಈ ವಿಚಾರಗಳ ಸರಣಿಯೇ ವಿಚಾರವಾದದ ಉಗಮಕ್ಕೆ ಕಾರಣವಾಯಿತು.

ಮುಂದೆ ಲಿಪಿಯು ಬೆಳೆದು ಬಂದಿದ್ದರಿಂದ ಮಾನವನು ನಾಗರಿಕನಾಗುತ್ತಾ ಹೋದಂತೆ ಅವನು ಕಲ್ಲಿನ ಮೇಲೆ, ಲೋಹದ ಮೇಲೆ, ಇಟ್ಟಿಗೆಯ ಮೇಲೆ ಬರೆಯತೊಡಗಿದನು. ಬರಹ ಸ್ಪಷ್ಟ ರೂಪ ಪಡೆದ ನಂತರ ತಾಳೆಗರಿಯ ಮೇಲೆ ತನ್ನ ಮತಧರ್ಮದ ವಿಷಯಗಳನ್ನು, ರಾಜಕೀಯ ಮತ್ತು ಚರಿತ್ರೆಯ ವಿಷಯಗಳನ್ನು ದೀರ್ಘವಾಗಿ ಬರೆಯಲು ಪ್ರಾರಂಭಿಸಿದನು. ಇದರ ಪರಿಣಾಮವಾಗಿ ಬರಹ ರೂಪದ ಸಾಹಿತ್ಯವು ನಿರ್ಮಾಣವಾಯಿತು. ಈ ಬರಹ ರೂಪದ ಸಾಹಿತ್ಯದಲ್ಲಿ ತನ್ನ ವಿಚಾರಗಳನ್ನು ದಾಖಲಿಸಿದನು. ಇದರೊಂದಿಗೆ ವಿಚಾರ ಸಾಹಿತ್ಯವು ಉಗಮವಾಯಿತು ಎನ್ನಬಹುದು.

ವಿಚಾರ ಸಾಹಿತ್ಯ

ಸಾಹಿತ್ಯದಲ್ಲಿ ವಿಚಾರ ಸಾಹಿತ್ಯ ಅಥವಾ ವೈಚಾರಿಕ ಸಾಹಿತ್ಯ ಎನ್ನುವ ಪ್ರಕಾರವೊಂದಿದೆ ಎಂಬುದು ಬಹು ಮಂದಿಗೆ ತಿಳಿದು ಬಂದುದು ಇತ್ತೀಚೆಗೆ ಎನ್ನಬಹುದು. ಈ ಮುಂಚೆ ಸೃಜನಶೀಲ ಸಾಹಿತ್ಯದ ಕೃತಿಗಳಲ್ಲಿ ವೈಚಾರಿಕ ಅಂಶಗಳನ್ನು ಗುರುತಿಸುವ, ಅದನ್ನು ವಿಶ್ಲೇಷಿಸುವುದನ್ನು ನಾವು ಕಾಣಬಹುದು. ಸಾಮಾನ್ಯವಾಗಿ ವಿಚಾರವುಳ್ಳ ಅಂಶಗಳನ್ನು ಹೊಂದಿರುವುದೆಲ್ಲಾ ವಿಚಾರ ಸಾಹಿತ್ಯವೆನ್ನಬಹುದೇನೋ, ಆದರೆ ವಿಚಾರ ಸಾಹಿತ್ಯ ಎಂದರೇನು ಎಂಬುದಕ್ಕೆ ಕೆಲವು ವಿದ್ವಾಂಸರ ಮಾತುಗಳನ್ನು ಇಲ್ಲಿ ಗಮನಿಸಬಹುದಾಗಿದೆ.

“ವೈಚಾರಿಕ ಸಾಹಿತ್ಯ ಎಂಬುದು ದೈವ–ಧರ್ಮ, ಶಾಸ್ತ್ರ–ಸಾಹಿತ್ಯ, ಶಿಕ್ಷಣ–ದರ್ಶನ, ಪಂಥ–ಪದ್ಧತಿ, ಪುರಾಣ–ಪವಾಡ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಒಂದು ಋಜು ವಿವೇಚನೆ, ತಾರ್ಕಿಕ ತಳಹದಿಯ ಮೇಲೆ ನಿರ್ಮಿತವಾದ ಒಂದು ವಿಚಾರಸಾಹಿತ್ಯ”[೬] ಸಾ. ಶಿ. ಮರುಳಯ್ಯ.

“ವಿಚಾರಪೂರಿತ ಮತ್ತು ಸತ್ಯ ನಿಷ್ಠ ಮನೋಭಾವನೆಯನ್ನು ವೈಜ್ಞಾನಿಕ ಮನೋಭಾವ ಎನ್ನುತ್ತೇವೆ. ಇದು ಒಂದು ಮನಸ್ಸಿನ ಸ್ಥಿತಿ. ಮನಸ್ಸಿನ ಈ ಸ್ಥಿತಿ ಸತ್ಯಾನ್ವೇಷಣೆಯ ಶಿಸ್ತು ಆಗಿರುತ್ತದೆ. ಏಕೆ? ಹೇಗೆ? ಎನ್ನುವ ಪ್ರಶ್ನೆಗಳೇ ಇದರ ಲಕ್ಷಣ. ಈ ಪ್ರಶ್ನೆಗಳನ್ನು ಓದುಗನಲ್ಲಿ ಉಂಟು ಮಾಡಿದಾಗಲೇ ಆ ಸಾಹಿತ್ಯ ವೈಚಾರಿಕತೆಯಿಂದ ಕೂಡಿದೆ ಎನ್ನಬಹುದು”[೭] ಯಳನಾಡು ಅಂಜನಪ್ಪ.

“ಒಂದು ಸಾಹಿತ್ಯ ಕೃತಿಗೆ ನಮ್ಮ ಎಲ್ಲ ಗಮನವನ್ನು ಹರಿಸಬೇಕೆಂದು ಇಚ್ಛಿಸುವಾಗ ನಾವು ಗಮನಿಸುವ ಅನೇಕ ಸಂಗತಿಗಳಲ್ಲಿ ವಿಚಾರವೂ ಒಂದು. ಆದರೆ ಈ ವಿಚಾರ ಸಾಹಿತ್ಯದ ಅಸಂಖ್ಯ ಹಾಸುಹೊಕಿನಲ್ಲಿ ಸಿಕ್ಕಿರುವ ಒಂದು ಎಳೆ ಎನ್ನುವುದು ನಾವು ಮರೆಯಕೂಡದು”[೮] ವೆಲೆಕ್ ಮತ್ತು ವಾರೆನ್. ಇವರ ಮಾತಿನಲ್ಲಿ ಸಾಹಿತ್ಯ ಕೃತಿಯ ಅಡಿಗಲ್ಲು ನಿಂತಿರುವುದೆ ವಿಚಾರ ಅಥವಾ ವಿಚಾರ ಸಾಹಿತ್ಯದ ಎಳೆಯಿಂದ ಎಂಬುದಾಗಿದೆ.

“ವಿಚಾರ ಸಾಹಿತ್ಯವೆಂದಾಗ ಬರವಣಿಗೆ ವೈಚಾರಿಕವಾಗಿರಬೇಕು ಮತ್ತು ಸಾಹಿತ್ಯವೂ ಆಗಿರಬೇಕು ಎಂಬ ಆಗ್ರಹ ಮತ್ತು ಈ ವಿಚಾರ ಸಾಹಿತ್ಯ ಮನರಂಜನೆಯೇ ಪ್ರಧಾನವಾಗಿರುವ ಲಲಿತ

ಸಾಹಿತ್ಯಕ್ಕಿಂತ ಒಳ್ಳೆಯದು ಎಂಬ ಸೂಚನೆ 'ವಿಚಾರಸಾಹಿತ್ಯ' ಎಂಬ ಪದಪುಂಜದಲ್ಲಿದೆ"[೭] ಎಂದು ಕೀರ್ತಿನಾಥ್ ಕುರ್ತುಕೋಟಿಯವರು ವ್ಯಾಖ್ಯಾನಿಸಿದ್ದಾರೆ.

"ವಿಚಾರ ಸಾಹಿತ್ಯವನ್ನು ಜ್ಞಾನ ಸಾಹಿತ್ಯವೆಂದು ಕರೆಯಬಹುದು. ಆದರೆ ಜ್ಞಾನ ಸಾಹಿತ್ಯವೆಲ್ಲಾ ವಿಚಾರ ಸಾಹಿತ್ಯವೆನ್ನುವಂತಿಲ್ಲ... ಜ್ಞಾನ ಸಾಹಿತ್ಯವೆಲ್ಲವೂ ವಿಚಾರ ಸಾಹಿತ್ಯವೆಂದರೆ ಅತಿವ್ಯಾಪ್ತಿ ದೋಷವನ್ನು ಅಪ್ಪಿಕೊಂಡಂತೆ. ಇತಿಹಾಸ, ಭೂಗೋಳ, ವಿಜ್ಞಾನ, ಗಣಿತ, ವೈದ್ಯ, ಕಾಯಿದೆ, ವಾಣಿಜ್ಯ, ಅರ್ಥಶಾಸ್ತ್ರ, ವೇದಾಂತ, ಜ್ಯೋತಿಷ್ಯ, ಕೈಗಾರಿಕೆ, ಕಲೆ ಇತ್ಯಾದಿ, ಇತ್ಯಾದಿ ಎಲ್ಲ ವಿಷಯಗಳ ವಿವೇಚನೆಯನ್ನು ವಿಚಾರ ಸಾಹಿತ್ಯವೆನ್ನಬೇಕಾದೀತು. ಇವೆಲ್ಲವೂ ವಿಚಾರ ಸಾಹಿತ್ಯಕ್ಕೆ ಪೀಠಿಕೆ ಒದಗಿಸುವ ವಸ್ತುನಿಷ್ಠ ಸಾಹಿತ್ಯ, ಅದುವೇ ಜ್ಞಾನ ಸಾಹಿತ್ಯ.

ಇಲ್ಲಿ ಹೇಳಿದ ಪ್ರತಿಯೊಂದು ವಿಷಯದಲ್ಲಿ ಹುಟ್ಟುವ ಪ್ರಶ್ನೆ, ಶಂಕೆ, ಪ್ರಮೇಯ, ಸಮಸ್ಯೆಗಳ ಬಗೆಹರಿಕೆ, ವಾದ ವಿವಾದಕ್ಕೆ ಆಸ್ಪದ ಕೊಡುವ ಹೊಸ ತರ್ಕ, ಸರಣಿ, ವಿಚಾರ ಧೋರಣೆಗಳ ಮಸೆತಕ್ಕೆ ಹೊಸ ಹೊಸೆತಕ್ಕೆ ಮೀಸಲಾಗಿ ಹುಟ್ಟುವ ಸಾಹಿತ್ಯವೇ ವಿಚಾರ ಸಾಹಿತ್ಯ"[೮] ಎಂದು ಗೌರೀಶ್ ಕಾಯ್ಕಿಣಿಯವರು ವ್ಯಾಖ್ಯಾನಿಸಿದ್ದಾರೆ.

ಈ ಹೇಳಿಕೆಯನ್ನು ಮುಂದುವರೆಸುವುದಾದರೆ ಲಲಿತ ಸಾಹಿತ್ಯದಲ್ಲಿ ಶೈಲಿಗೆ, ರೀತಿಗೆ, ರೂಪಕ್ಕೆ ಹೆಚ್ಚು ಒತ್ತನ್ನು ಕೊಡಲಾಗುವುದು, ಜ್ಞಾನ ಸಾಹಿತ್ಯದಲ್ಲಿ ವಿಷಯಕ್ಕೆ ಅದರ ಆಶಯಕ್ಕೆ ಹೆಚ್ಚಿನ ಪ್ರಾಶಸ್ತ್ಯ. ಇನ್ನು ವಿಚಾರ ಸಾಹಿತ್ಯದಷ್ಟು ವಿಷಯ ಪ್ರಧಾನವೇ ಸರಿ. ಆದರೆ ಜ್ಞಾನ ಸಾಹಿತ್ಯದಲ್ಲಿ ನಿರೂಪಕತೆ ಹೆಚ್ಚು ಮಾತ್ರವಿದ್ದರೆ, ವಿಚಾರ ಸಾಹಿತ್ಯದಲ್ಲಿ ನಿಯಾಮಕತೆ ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ. ಅಲ್ಲಿ ಪ್ರತಿಪಾದನೆಗೆ ಇರುವ ಮಹತ್ವ ಇಲ್ಲಿ ಪ್ರಚೋದನೆಗೆ ಇರುತ್ತದೆ. ಅಲ್ಲಿ ವಿವೇಚನೆಗೆ ಇರುವ ಪಟ್ಟ ಇಲ್ಲಿ ವಿಶ್ಲೇಷಣೆಗೆ, ಅಲ್ಲಿ ಉತ್ತರಕ್ಕೆ ಇರುವ ಪ್ರಾಶಸ್ತ್ಯ ಇಲ್ಲಿ ಪ್ರಶ್ನೆಗೆ ಇರುತ್ತದೆ.

ವಿಚಾರ ಸಾಹಿತ್ಯದ ರೀತಿ ೨ ವಿಧಗಳಿಂದ ಕೂಡಿದೆ:

೧. ಮನಗಾಣಿಸುವಂಥದ್ದು – ಅದನ್ನು ಬೋಧಕವೆಂತಲೂ

೨. ಮನವೊಲಿಸುವಂಥದ್ದು – ವೇದಕವೆಂತಲೂ

ಗೌರೀಶ್ ಕಾಯ್ಕಿಣಿಯವರು ವಿಂಗಡಿಸಿದ್ದಾರೆ ಹಾಗೂ ಮಾದರಿಯಾಗುವ ವಿಚಾರ ಸಾಹಿತ್ಯದಲ್ಲಿ ಬೋಧಕ ಮತ್ತು ವೇದಕಗಳ ಸಮತೂಕ, ಸಮಪಾಕವಿರುತ್ತದೆ ಎಂಬುದಾಗಿ ಸೂಚಿಸಿದ್ದಾರೆ.

"ವಿಚಾರ ಸಾಹಿತ್ಯ ಎನ್ನುವುದಕ್ಕೆ ವ್ಯಾಪಕವಾದ ಅರ್ಥವನ್ನು ಕಲ್ಪಿಸುವುದು ಅಗತ್ಯ. ವಿಚಾರಶೀಲವಾದ ವಿಚಾರವನ್ನುಳ್ಳ ಸಾಹಿತ್ಯವೆಲ್ಲ ವಿಚಾರ ಸಾಹಿತ್ಯವೇ"[೯] ಎಂದೂ ನಿರಂಜನರವರು ವ್ಯಾಖ್ಯಾನಿಸಿದ್ದಾರೆ.

"ವಿಚಾರ ಸಾಹಿತ್ಯ ಎನ್ನುವುದು ವಿಚಾರ ಪ್ರಚೋದನೆ, ಅರಿವಿನ ಸ್ಫೋಟ ಮತ್ತು ಸಮಾಜ-ವ್ಯಕ್ತಿಗಳ ಮೇಲೆ ಅವುಗಳ ಪ್ರಭಾವ, ಪರಿಣಾಮಗಳನ್ನು ಒಳಗೊಂಡಿದೆ"[೧೦] ಎಂದು ತಾರಿಣಿ ಶುಭದಾಯಿನಿಯವರು ಅಭಿಪ್ರಾಯಿಸಿದ್ದಾರೆ.

ಮನುಷ್ಯನಲ್ಲಿರುವ ವಿಚಾರವನ್ನು ಪ್ರಚೋದಿಸಿ ಆತನ ತಿಳುವಳಿಕೆಯನ್ನು ಮತ್ತಷ್ಟು ಹೆಚ್ಚಿಸಿ ಆ ವಿಚಾರಗಳೊಂದಿಗೆ ವ್ಯಕ್ತಿ ಮತ್ತು ಸಮಾಜ, ಸಮುದಾಯಗಳ ಮೇಲೆ ಪರಿಣಾಮ ಬೀರುವಂಥದ್ದು ವಿಚಾರ ಸಾಹಿತ್ಯವಾಗಿದೆ.

ಈ ಮೇಲ್ಕಂಡ ಎಲ್ಲಾ ವಿದ್ವಾಂಸರ ಹೇಳಿಕೆಗಳನ್ನು ಗಮನಿಸಿದಾಗ ವಿಚಾರ ಸಾಹಿತ್ಯದ ಸ್ವರೂಪವನ್ನು ಈ ಕೆಳಗಿನ ಅಂಶಗಳಂತೆ ತಿಳಿಯಬಹುದು:

- ಬುದ್ಧಿ ಪ್ರಧಾನವಾದುದು ಈ ವಿಚಾರ ಸಾಹಿತ್ಯ.
- ತಾರ್ಕಿಕ ತಳಹದಿಯ ಮೇಲೆ ನಿರ್ಮಿತವಾದುದು ಈ ವಿಚಾರ ಸಾಹಿತ್ಯ.
- ಸತ್ಯನಿಷ್ಠ, ವಿಚಾರಪೂರಿತ, ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸುವುದು.
- ಏಕೆ? ಹೇಗೆ? ಯಾವುದು? ಏನು? ಎಂಬ ಪ್ರಶ್ನೆಗಳನ್ನು ಓದುಗನಲ್ಲಿ ಮೂಡಿಸಬಹುದು.
- ಸಾಹಿತ್ಯ ಕೃತಿಗೆ ವಿಚಾರವು ತಳಹದಿಯಾಗಿರುತ್ತದೆ, ವಿಚಾರವಿಲ್ಲದ ಸಾಹಿತ್ಯ ಕೃತಿಯು ಗೌಣವಾಗುತ್ತದೆ.
- ವೈಚಾರಿಕವಾಗಿರಬೇಕು ಮತ್ತು ಸಾಹಿತ್ಯವು ಆಗಿರಬೇಕು ಎಂಬ ಎರಡು ಅಂಶಗಳನ್ನು ಒಳಗೊಂಡಿದೆ.
- ಹೊಸತನವನ್ನು ಮತ್ತು ಹೊಸ ಆಲೋಚನಾ ಕ್ರಮವನ್ನು ಸೃಷ್ಟಿಸುವಂಥದ್ದು ವಿಚಾರ ಸಾಹಿತ್ಯ.
- ಪರಲೋಕದ ವಿಚಾರಕ್ಕಿಂತ, ಇಹಲೋಕದ ವಿಚಾರದ ಬಗ್ಗೆ ಕಣ್ಣು ತೆರೆಸುವ ಸಾಹಿತ್ಯವಾಗಿದೆ.
- ಬೋಧನೆಗಿಂತ ಶೋಧಿಸುವ ಗುಣ ಇದೆ.
- ವಿಚಾರ ಸಾಹಿತ್ಯವೆಂಬುದು ವ್ಯಾಪಕತೆಯನ್ನು ಮತ್ತು ವಿಶಾಲಾರ್ಥವನ್ನು ಹೊಂದಿದೆ.
- ಮನುಷ್ಯನಲ್ಲಿರುವ ವಿಚಾರಗಳನ್ನು ಪ್ರಚೋದಿಸುವುದು.
- ಒಮ್ಮೆ ಓದಿದ್ದು ನೇರವಾಗಿ ಅರ್ಥವಾಗುವಂತಹ ಸ್ವರೂಪವನ್ನು ಒಳಗೊಂಡಿದೆ.

೩.೨ ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯ

ಆಧುನಿಕ ಕನ್ನಡ ಸಾಹಿತ್ಯವು ಭಿನ್ನ ವಸ್ತು, ತಂತ್ರ, ಸ್ವರೂಪ, ಅಭಿವ್ಯಕ್ತಿಗಳ ಹಿನ್ನೆಲೆಯಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಎಂಬ ನಾಲ್ಕು ಘಟ್ಟಗಳನ್ನು ಕಾಣಬಹುದು. ಅದರಲ್ಲಿ ೧೯೪೩ ರಿಂದ ೧೯೪೭ ರವರೆಗೂ ಅಂದರೆ ಹೊಸಗನ್ನಡದ ಕಾಲಘಟ್ಟದಲ್ಲಿ ಐದಾರು ವರ್ಷ ಪ್ರಗತಿಶೀಲ ಸಾಹಿತ್ಯವು ಕಾಣಿಸಿಕೊಂಡು ಎಲ್ಲರ ಗಮನ ಸೆಳೆದು ಸಂಕ್ಷಿಪ್ತಗೊಂಡಿದ್ದು ಮಾತ್ರವಲ್ಲದೆ "ಕಲೆಗಾಗಿ ಕಲೆಯಲ್ಲ, ಮಾನವೀಯತೆಗಾಗಿ ಕಲೆ, ಸಮಾಜಕ್ಕಾಗಿ ಕಲೆ" ಎಂಬ ದೃಷ್ಟಿಕೋನದಿಂದ ಈ ಪ್ರಗತಿಶೀಲ ಸಾಹಿತ್ಯ ಚಳುವಳಿ ಕಾಣಿಸಿಕೊಂಡಿದೆ.

ಪಾಶ್ಚಾತ್ಯ ದೇಶಗಳಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿಯಿಂದಾಗಿ ರಾಜಕೀಯ, ಧಾರ್ಮಿಕ ಸ್ಥಿತ್ಯಂತರಗಳ ಪರಿಣಾಮವಾಗಿ ಯುರೋಪಿನಲ್ಲಿ ಬಂಡವಾಳಶಾಹಿ ಮತ್ತು ಶ್ರಮಿಕ ವರ್ಗ ಎಂಬ ಎರಡು ಪ್ರಬಲ ವರ್ಗಗಳು ಕಾಣಿಸಿಕೊಂಡವು. ಇದರಿಂದ ಉಂಟಾದ ಆರ್ಥಿಕ ಅಸಮಾನತೆ, ಸಮಾಜದಲ್ಲಿ ಅನೇಕ ಸಮಸ್ಯೆಗಳನ್ನು ಹುಟ್ಟಿ ಹಾಕಿತು. ಇಂತಹ ಸಂದರ್ಭದಲ್ಲಿ ವರ್ಗರಹಿತವಾದ ಸಮಾಜದ ನಿರ್ಮಾಣವನ್ನು ಕಾಣಲು ಕಾರ್ಲ್ ಮಾರ್ಕ್ಸ್‌ನ ಬರಹಗಳು ಪ್ರೇರಣೆ ಪಡೆದುಕೊಂಡವು. ಇದರಿಂದ ಹೊಸ ಸಾಮಾಜಿಕ ಪ್ರಜ್ಞೆ ಚಿಗುರೊಡೆಯಿತು. ಅಂದಿನ ಯುರೋಪಿನಲ್ಲಿ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಹೋರಾಟದ ಹಿನ್ನೆಲೆಯಲ್ಲಿ ೧೯೩೪ರಲ್ಲಿ ಪ್ಯಾರಿಸ್‌ನಲ್ಲಿ ಸಂಸ್ಕೃತಿಯ ರಕ್ಷಣೆಗಾಗಿ ವಿಶ್ವ ಸಾಹಿತಿಗಳ ಸಮಾವೇಶ ಜರುಗಿತು. ಅದರಲ್ಲಿ ಸಜ್ಜದ್ ಬಾಹಿರ್ ಭಾಗವಹಿಸಿದರು.

ಮುಲ್ಕ್‌ರಾಜ್ ಆನಂದ್‌ರವರು ಭಾರತದಲ್ಲಿ ಪ್ರಗತಿಶೀಲ ಲೇಖಕರ ಸಂಘದ ಅಧಿವೇಶನವನ್ನು ೧೯೩೬ರಲ್ಲಿ ಲಖನೌದಲ್ಲಿ ನಡೆಸಿದರು. ಇದರಲ್ಲಿ ಕರ್ನಾಟಕದಿಂದ ಶ್ರೀರಂಗರು ಭಾಗವಹಿಸಿದರು. ಕನ್ನಡ ನಾಡಿನಲ್ಲಿ ೧೯೪೩ರ ಡಿಸೆಂಬರಿನಲ್ಲಿ ಕನ್ನಡ ನಾಡಿನ ಪ್ರಗತಿಶೀಲ ಲೇಖಕರ ಸಂಘ ಅಸ್ತಿತ್ವಕ್ಕೆ ಬಂದಿತ್ತು. ಅ. ನ. ಕೃ. ರವರು ಅದರ ಅಧ್ಯಕ್ಷರಾಗಿ ಆಯ್ಕೆಯಾದರು. ಕನ್ನಡ ನಾಡಿನಲ್ಲಿ ಬೀಸಿದ ಈ ಪ್ರಗತಿಶೀಲ ಸಾಹಿತ್ಯದ ಹೊಸ ಗಾಳಿಯು ಅನೇಕ ಲೇಖಕರನ್ನು ಆಕರ್ಷಿಸಿತು.

ಪ್ರಗತಿಶೀಲ ಸಾಹಿತ್ಯದ ಉದ್ದೇಶ ಜನರನ್ನು ಎಚ್ಚರಿಸುವುದು. ಈ ನಿಟ್ಟಿನಲ್ಲಿ ಪ್ರಗತಿಶೀಲ ಸಾಹಿತಿಗಳು ಮುಖ್ಯವಾಗಿ ಆರಿಸಿಕೊಂಡ ಸಾಹಿತ್ಯ ಮಾಧ್ಯಮವೆಂದರೆ ಸಣ್ಣ ಕಥೆ ಮತ್ತು ಕಾದಂಬರಿ. ಜನರಿಗೆ ಹತ್ತಿರವಾಗಿ ಅವರಿಗೆ ಅರ್ಥವಾಗುವ ಸರಳ ಭಾಷೆಯಲ್ಲಿ ತಾವು ಬಯಸಿದ, ನಂಬಿದ ವಿಚಾರಗಳನ್ನು ಪ್ರಚಾರ ಮಾಡುವುದು. ಸೃಜನಶೀಲ ಬರವಣಿಗೆಯ ಮುಖಾಂತರ ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಕೊಡುವುದು ಅದರ ಮೂಲ ಉದ್ದೇಶವಾಗಿತ್ತು. ಸೃಜನಶೀಲ ಬರವಣಿಗೆಯ ಮೂಲಕವಲ್ಲದೇ ಪ್ರಬಂಧ, ವಿಮರ್ಶೆ, ಜೀವನಚರಿತ್ರೆ ಮೊದಲಾದ ಸೃಜನೇತರ ಬರವಣಿಗೆಯ ಮೂಲಕವೂ ಅಂದರೆ ತಮ್ಮ ವಿಚಾರ ಸಾಹಿತ್ಯದಲ್ಲಿಯೂ ತಮ್ಮ ವಿಚಾರಗಳನ್ನು ತಿಳಿಸಿದರು.

ಸರಜೂ ಕಾಟ್ಕರ್‌ರವರ ಮಾತಿನಂತೆ ಹೇಳುವುದಾದರೆ ಪ್ರಗತಿಶೀಲ ಬರಹಗಾರರಿಗೆ ಕಮ್ಯುನಿಸ್ಟ್ ಸಿದ್ಧಾಂತದ ನಿಷ್ಠೆಯಾಗಲೀ ಅಥವಾ ಮಾರ್ಕ್ಸ್‌ವಾದದ ಬಗ್ಗೆ ಪ್ರೀತಿ ಇತ್ತೆಂದಾಗಲೀ ಹೇಳಲಾಗದು. ಆದರೆ ಹೊಸ ಸಮಾಜವನ್ನು ನಿರ್ಮಾಣ ಮಾಡುವ, ಆ ಮೂಲಕ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ದೊರಕಿಸಿ ಕೊಡುವ, ಉತ್ತಮ ಸಮಾಜವನ್ನು, ವರ್ಗರಹಿತ ಸಮಾಜವನ್ನು

ನಿರ್ಮಾಣ ಮಾಡುವ ಒಂದು ಪ್ರಾಮಾಣಿಕ ಪ್ರಯತ್ನವು ಪ್ರಗತಿಶೀಲ ಕಾಲಘಟ್ಟದ ಬರಹಗಾರರಲ್ಲಿ ಇತ್ತು ಎನ್ನಬಹುದು.

ಪ್ರಗತಿಶೀಲ ಕಾಲಘಟ್ಟದಲ್ಲಿ ಕಾಣಿಸಿಕೊಂಡ ಶ್ರೀರಂಗರವರ 'ಜಾತೀಯ ಸಮಸ್ಯೆ', 'ನಲ್ವತ್ತೆರಡರ ಚಲೇ ಜಾವ್ ಚಳುವಳಿ', 'ಸ್ವತಂತ್ರ ಭಾರತದ ಗಣರಾಜ್ಯ', 'ನಮ್ಮ ನೆಚ್ಚಿನ ನೆಹರೂ', 'ತರುಣ ತುರ್ಕಸ್ಥಾನ ಅರ್ಥಾತ್ ಕೆಮಾಲ್ ಪಾಶಾ' ಕೃತಿಗಳನ್ನು ಹಾಗೂ 'ನಮ್ಮದಿನ್ನೂ ಜಮೀನ್ದಾರಿಕೆ ಮನಃಸ್ಥಿತಿಯೇ?', 'ನಮಗೊಂದು ಸಂಸ್ಕೃತಿ ಇದೆಯೇ?', 'ಗಾಂಧಿ ಜೀವನ', 'ನರಸಿಂಹಾವಲೋಕನ ೩', 'ಸಾಹಿತ್ಯ ಮತ್ತು ಶೃಂಗಾರ', 'ಸಾಹಿತ್ಯ ಮತ್ತು ಪ್ರಗತಿ' ಮೊದಲಾದ ಲೇಖನಗಳು, ತ. ರಾ. ಸು. ರವರು ಬರೆದ 'ಅ. ನ. ಕೃ.', 'ರೇಖಾ ಚಿತ್ರಗಳು', 'ಸ್ನೇಹ ಸಮನ್ವಯ' ಕೃತಿಗಳೊಂದಿಗೆ 'ಸಾಹಿತ್ಯದಲ್ಲಿ ಕಾಣದ ಸಂಕೋಲೆ' ಎಂಬ ಲೇಖನ, ಬಸವರಾಜ ಕಟ್ಟೀಮನಿಯವರು ಬರೆದ ಎರಡು ಜೀವನ ಚರಿತ್ರೆಗಳಾದ 'ಕ್ರಾಂತಿವೀರ ಚೆನ್ನಪ್ಪ ವಾಲಿ', 'ಪ್ರಿಯದರ್ಶಿನಿ: ಮಾರ್ಗದರ್ಶಿನಿ ಇಂದಿರಾ ಗಾಂಧಿ', ಅಖಿಲ ಭಾರತ ೫೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣ, ನಾಡಿಗೇರ ಕೃಷ್ಣರಾಯರು ಬರೆದ ಜೀವನ ಚರಿತ್ರೆ, 'ವಿ. ವಿ. ಗಿರಿ', ವೈ. ಎನ್. ಗುಂಡೂ ರಾವ್ ಮತ್ತು ಕೃಷ್ಣ ಸುಬ್ಬರಾವ್ ಸಂಪಾದಿಸಿದ 'ಬೆಸ್ಟ್ ಆಫ್ ನಾಡಿಗೇರ್' ನಗೆ ಲೇಖನ, ನಾಡಿಗೇರ್ ಕೃಷ್ಣರಾಯರ ಲೇಖನ 'ನಮ್ಮ ಸಾಹಿತ್ಯ – ಅದರ ಗುರಿ', ತಿ. ತಾ. ಶರ್ಮರು ಬರೆದ 'ವಿಚಾರ ಕರ್ನಾಟಕ' ಮತ್ತು 'ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಜೀವನ ಚರಿತ್ರೆ', 'ಅಶ್ಲೀಲ ಸಾಹಿತ್ಯ' ಎಂಬ ಲೇಖನ, ಅ. ನ. ಕೃಷ್ಣರಾಯರು ಸಂಪಾದಿಸಿದ 'ಪ್ರಗತಿಶೀಲ ಸಾಹಿತ್ಯ' ಕೃತಿಯಲ್ಲಿ ಕುಮಾರ ವೆಂಕಣ್ಣನವರು ಬರೆದ 'ಕನ್ನಡ ಸಾಹಿತಿಗಳೆಲ್ಲಿ?' ಹಾಗೂ 'ಜನತೆ ಮತ್ತು ಕಲೆ', ಅರ್ಚಕ ವೆಂಕಟೇಶರವರ 'ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲತೆ', ಎಸ್. ಅನಂತ ನಾರಾಯಣರು ಬರೆದ 'ಸಾಹಿತ್ಯದಲ್ಲಿ ಜನತಾ ದೃಷ್ಟಿ' ಹಾಗೂ ದೊಡ್ಡೇರಿ ವೆಂಕಟಗಿರಿರಾಯರು ಬರೆದ 'ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ಲೈಂಗಿಕ ಶಿಕ್ಷಣದ ಸ್ಥಾನ' ಈ ಗ್ರಂಥಗಳನ್ನು ಮತ್ತು ಲೇಖನಗಳನ್ನು ಈ ಅಧ್ಯಾಯದ ವ್ಯಾಪ್ತಿಗೆ ಒಳಪಡಿಸಿ ಪ್ರಗತಿಶೀಲ ಕಾಲಘಟ್ಟದ ಪ್ರಮುಖ ಲೇಖಕರ ವಿಚಾರ ಸಾಹಿತ್ಯ ಏನನ್ನು ಧ್ವನಿಸುತ್ತದೆ ಮತ್ತು ಆ ಕಾಲಘಟ್ಟದ ವಿಚಾರ ಸಾಹಿತ್ಯದ ತಾತ್ವಿಕತೆ ಮತ್ತು ಸ್ವರೂಪವನ್ನು ನೋಡುವುದಾಗಿದೆ.

ಶ್ರೀರಂಗರು ಪ್ರಗತಿಶೀಲ ಸಾಹಿತ್ಯದಲ್ಲಿ ಕಾಣಿಸಿಕೊಂಡ ಪ್ರಮುಖ ನಾಟಕಕಾರರೆಂದೇ ಅವರನ್ನು ಹೆಚ್ಚು ಗುರುತಿಸುತ್ತಾರೆ. ಆದರೆ ಸೃಜನಶೀಲ ಸಾಹಿತ್ಯವಲ್ಲದೆ ಲಲಿತ ಹಾಗೂ ವೈಚಾರಿಕ ಪ್ರಬಂಧ, ವಿಮರ್ಶೆ, ಜೀವನ ಚರಿತ್ರೆ, ಸಂಶೋಧನೆಗಳಂಥ ಅನೇಕ ಸಾಹಿತ್ಯ ಪ್ರಕಾರಗಳಲ್ಲಿ ಆಧುನಿಕ ಕನ್ನಡ ಸಾಹಿತ್ಯಕ್ಕೆ ಕೊಡುಗೆಯನ್ನು ನೀಡಿದ್ದಾರೆ. ಇಲ್ಲಿ ಅವರ ವೈಚಾರಿಕ ಸಾಹಿತ್ಯಗಳನ್ನಷ್ಟೇ ಚರ್ಚಿಸಲಾಗುವುದು. ಆ ಮೂಲಕ ಶ್ರೀರಂಗರ ವೈಚಾರಿಕ ಸಾಹಿತ್ಯದ ತಾತ್ವಿಕತೆ ಮತ್ತು ಸ್ವರೂಪದೊಂದಿಗೆ ಪ್ರಗತಿಶೀಲ ಕಾಲಘಟ್ಟದ ವೈಚಾರಿಕ ಸಾಹಿತ್ಯದ ತಾತ್ವಿಕತೆಯನ್ನು ತಿಳಿಯಬಹುದು.

ಭಾರತದಲ್ಲಿ ಸಾವಿರಾರು ವರ್ಷಗಳಿಂದಲೂ ಜಾತಿಯ ಸಮಸ್ಯೆಯನ್ನು ಕಾಣಬಹುದು. ಈ ಜಾತಿಯ ಸಮಸ್ಯೆಗಳನ್ನು ಕುರಿತಂತೆ ೧೯೪೪ರಲ್ಲಿ ಶ್ರೀರಂಗರು ಬರೆದ ವೈಚಾರಿಕ ಪ್ರಬಂಧ ಜಾತಿಯ ಸಮಸ್ಯೆ ಪ್ರಮುಖವಾದುದು. ಜಾತಿಯ ಸಮಸ್ಯೆಯನ್ನು ಕುರಿತಂತೆ ಶ್ರೀರಂಗರು ಪ್ರತಿಯೊಬ್ಬ ವ್ಯಕ್ತಿ ಶಾಲೆಗೆ ಸೇರಿದಾಗ ಅರ್ಜಿಯಲ್ಲಿ ತನ್ನ ಹೆಸರು ಬರೆದಾಗಿನಿಂದ ಹಿಡಿದು ಪ್ರತಿಯೊಬ್ಬ ಭಾರತೀಯನು ಕೂಡಾ ಜಾತಿಯಿಂದ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತಾನೆ. ವಿಕ್ಟೋರಿಯಾ ಮಹಾರಾಣಿಯವರ

ಜಾಗೀರ್‌ನಾಮೆಯಿಂದ ಹಿಡಿದು ಪ್ರಾರಂಭವಾಗಿ ಇಂದಿನವರೆಗೆ ಎಲ್ಲಾ ಸರಕಾರಿ ಅಧಿಕೃತ ಪ್ರಕಟಣೆಗಳಲ್ಲಿ ಜಾತಿಯ ಸಮಸ್ಯೆಯಿದೆ. ಮಹಾತ್ಮಾ ಗಾಂಧೀಜಿಯವರು ತಮ್ಮ ಉಪವಾಸಗಳಿಂದ ಜಾತಿಯ ಅಸ್ತಿತ್ವವನ್ನು ಒಪ್ಪಿಕೊಂಡಿದ್ದು, ಭಾರತಾದ್ಯಂತ ಈ ಜಾತಿಯ ಪ್ರಶ್ನೆ ವ್ಯಾಪಿಸಿದೆ. ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಜಾತೀಯತೆ ಎಂಬುದು ಇದೆ. ಜಾತಿಗಳಿದ್ದ ಮಾತ್ರಕ್ಕೆ ಜಾತಿಯ ಸಮಸ್ಯೆಯು ಇದ್ದಿತು ಅಥವಾ ಇಲ್ಲವೇ ಇರಬೇಕು ಎಂಬುದಲ್ಲ, ಎಲ್ಲಾ ಕಾಲದಲ್ಲಿಯೂ ದೇಶಗಳಲ್ಲಿಯೂ ಜಾತಿ ಪದ್ಧತಿ ಇತ್ತು. ಆದರೆ ಸಾವಿರಾರು ವರ್ಷಗಳ ತರುವಾಯ ಜಾತಿಯ ಸಮಸ್ಯೆ ಎದ್ದಿದೆ. ಶ್ರೀರಂಗರ ಈ ದೃಷ್ಟಿಕೋನವನ್ನು ಗಮನಿಸಿದರೆ ನಮ್ಮಲ್ಲಿ ರೂಢಿಯಲ್ಲಿದ್ದ ಜಾತಿ ಪದ್ಧತಿಗೂ ಇಂದು ಇರುವ ಜಾತಿಯ ಸಮಸ್ಯೆಗೂ ಸಂಬಂಧವಿಲ್ಲ ಎಂಬುದಾಗಿ ಜಾತಿಯ ಸಮಸ್ಯೆಯನ್ನು ಭಿನ್ನ ದೃಷ್ಟಿಕೋನದಲ್ಲಿ ನೋಡಿದ್ದಾರೆ.

ಜಾತಿ ಪದ್ಧತಿಯ ಮೂಲ ಸ್ವರೂಪ ವರ್ಣದಿಂದಲೇ ಕಾಣಬಹುದು. ವರ್ಣ ಎಂದರೆ ಬಣ್ಣ ಎಂದರ್ಥ. ಹಾಗೆಯೇ ವರ್ಣ ಶಬ್ದದ ಅರ್ಥವು ಉದ್ಯೋಗವೇ ಆಗಿದೆ. ಹಿಂದಿನಿಂದಲೂ ತಂದೆಯಿಂದಲೇ ವಿದ್ಯೆ ಕಲಿಯುವುದು. ಅಂದರೆ ತಂದೆಗೆ ಗೊತ್ತಿದ್ದ ವಿದ್ಯೆ ಕಲಿಯುವುದು, ತಂದೆಯ ಉದ್ಯೋಗವೇ ಮಗನಿಗೆ ಅನಿವಾರ್ಯವಾಗಿತ್ತು. ಉದ್ಯೋಗಕ್ಕೂ ಮತ್ತು ಹುಟ್ಟಿಗೂ ಕಾರ್ಯ ಕಾರಣ ಸಂಬಂಧವಿತ್ತು. ಇದು ಮುಂದೆ ಜಾತಿಯಾಗಿ ರೂಪು ಪಡೆಯಲು ಕಾರಣವಾಯಿತು. ಆದರೆ ಇಂದು ಕೂಡಾ ಸಮಾಜದಲ್ಲಿನ ವ್ಯಕ್ತಿಗಳು ಬೇರೆ ಬೇರೆ ಉದ್ಯೋಗವನ್ನು ಮಾಡಿದರೂ ಹುಟ್ಟಿನಿಂದಲೇ ಜಾತಿಯನ್ನು ನಿರ್ಧರಿಸುವುದನ್ನು ಕಾಣಬಹುದು. ಜಾತಿಯ ಹುಟ್ಟಿಗೆ ಮೊದಲಿಗೆ ಉದ್ಯೋಗ ಅಥವಾ ಕುಲಕಸುಬು ಕಾರಣವಾದರೆ ಮುಂದೆ ಉದ್ಯೋಗ ಮುಖ್ಯವಲ್ಲ, ಜಾತಿಯಿಂದ ವ್ಯಕ್ತಿಯನ್ನು ಗುರುತಿಸುವುದು. ಹುಟ್ಟು ಹೇಗೆ ಜಾತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದನ್ನು ಉದ್ಯೋಗದ ಹಿನ್ನೆಲೆಯಲ್ಲಿ ವಿವರಿಸುತ್ತಾರೆ.

ಜಾತಿಯ ಸಮಸ್ಯೆಗಳು ಉಲ್ಬಣಗೊಳ್ಳಲು ಕಾರಣವೆಂದರೆ ಸ್ವಾರ್ಥ, ಸಮಾಜ, ವ್ಯವಹಾರದ ವಂಚನೆ, ಶಿಕ್ಷಣ ವಂಚಿತ ಸಮಾಜ ಮೊದಲಾದವುಗಳೆಲ್ಲವೂ ಕಾರಣವಾಗಿವೆ. ಜಾತಿಯ ರೀತಿಯೇ ಭಾರತ ದೇಶಕ್ಕೆ ತಳಹದಿಯಾಗಿರುವುದರಿಂದ ದೇಶದ ಪ್ರಗತಿ ಕುಂಠಿತವಾಗಿದೆ. ದೇಶದ ಪ್ರಗತಿಯ ಕುಂಠಿತಕ್ಕೆ ಜಾತಿಯ ಸಮಸ್ಯೆಗಳೇ ಕಾರಣವೆಂಬ ಶ್ರೀರಂಗರ ಧೋರಣೆಯು ಬಹಳ ಪ್ರಮುಖವಾದುದಾಗಿದೆ. ಪಾಶ್ಚಾತ್ಯ ದೇಶಗಳಲ್ಲಿಯೂ ಕೂಡಾ ಸಮಾಜ ಜೀವನದಲ್ಲಿ ಒಂದು ರೀತಿಯ ಕಪ್ಪು ಅಥವಾ ಬಿಳುಪು ಎಂಬ ವರ್ಗೀಕರಣ ನಡೆದಿದೆ. ಆದರೆ ಆ ದೇಶಗಳು ಪ್ರಗತಿಯನ್ನು ಕಂಡಿವೆ. ಆದರೆ ಭಾರತದಲ್ಲಿ ಜಾತಿಯ ಸಮಸ್ಯೆಗಳು ಸಾಮಾಜಿಕ ಸಮಸ್ಯೆಗಳು ಮಾತ್ರವಲ್ಲದೆ ದೇಶದ ಪ್ರಗತಿಯನ್ನು ಕುಂಠಿತಗೊಳಿಸುವ ಪ್ರಮುಖ ಸಮಸ್ಯೆಯಾಗಿ ಪರಿಣಮಿಸಿದ ರೀತಿಯನ್ನು ವಿಶ್ಲೇಷಿಸುತ್ತಾರೆ.

ಜಾತಿ ಜಾತಿಗಳ ವೈಮನಸ್ಸು ಬೆಳೆಯದಿದ್ದದ್ದು ನಮ್ಮ ಹಳ್ಳಿಗಳಲ್ಲಿ ಮಾತ್ರ, ಏಕೆಂದರೆ ಹಳ್ಳಿಗಳಲ್ಲಿದ್ದ ಸಾಮೂಹಿಕ ಜೀವನವೇ ಕಾರಣವಾಗಿತ್ತು. ಕಾಲ ಕ್ರಮೇಣ ಶ್ರೀಮಂತರ ಉದ್ಯೋಗಗಳು ಮತ್ತು ಶಿಕ್ಷಣದ ಕೇಂದ್ರೀಕರಣದಿಂದಾಗಿ ಹಳ್ಳಿಯ ಸಾಮಾಜಿಕ ಜೀವನವು ಸಡಿಲಗೊಂಡು ಜಾತಿಯ ಸಮಸ್ಯೆಗಳೂ ಮತ್ತಷ್ಟು ದೊಡ್ಡದಾಗಿ ಬೆಳೆದುಕೊಂಡವು. ನಗರ ಸಂಸ್ಕೃತಿಗಳು ಬೆಳೆದು ಬಂದ ಹಾಗೆ ಜಾತಿಯ ವೈಮನಸ್ಸು, ಜಾತಿಯ ಸಮಸ್ಯೆಗಳು ಮತ್ತಷ್ಟು ಬೆಳವಣಿಗೆಯನ್ನು ಕಂಡವು. ಈ ನಗರ

ಸಂಸ್ಕೃತಿಯ ಪ್ರಭಾವಕ್ಕೆ ಸಿಲುಕಿದ ಗ್ರಾಮೀಣ ಭಾರತದ ಜನರಿಗೂ ಕೂಡಾ ಜಾತಿಯ ವೈಮನಸ್ಸು, ಜಾತಿಯ ಸಂಘರ್ಷಗಳು ಬೆಳೆಯಲು ದಾರಿ ಮಾಡಿ ಕೊಟ್ಟಿತು. ಈ ರೀತಿಯಾಗಿ ಜಾತೀಯತೆ ಸಮಸ್ಯೆಗಳ ವಿಭಿನ್ನ ಆಯಾಮಗಳನ್ನು ಶ್ರೀರಂಗರು ಈ ಪ್ರಬಂಧದಲ್ಲಿ ಚರ್ಚಿಸಿದ್ದಾರೆ.

ಹಳ್ಳಿಗಳಲ್ಲಿ ಒಂದು ಕಾಲದಲ್ಲಿ ಜಾತೀಯತೆ ಎಂಬುದು ಇತ್ತು. ಅದು ಕಸುಬುಗಳ ಮೇಲೆ ಅವಲಂಬಿಸಿತ್ತು. ಒಂದು ಸಮುದಾಯ ಮತ್ತೊಂದು ಸಮುದಾಯವನ್ನು ಅವಲಂಬಿಸಿಯೇ ನಡೆಯುತ್ತಿತ್ತು. ಹಾಗಾಗಿ ಗ್ರಾಮ ಸಮಾಜದಲ್ಲಿ ಜಾತಿಯ ಸಮಸ್ಯೆಗಳು ಉಲ್ಬಣಗೊಂಡಿರಲಿಲ್ಲ. ಆದರೆ ಇಂದು ಶಿಕ್ಷಣ ಪಡೆದ ವಿದ್ಯಾವಂತರೇ ಮೊದಲಿಗೆ ತಮ್ಮ ಜಾತಿಯ ಸಂಘದ ಸದಸ್ಯರಾಗುತ್ತಿರುವ ಈ ಕಾಲಘಟ್ಟದಲ್ಲಿ ಜಾತಿಯ ಸಮಸ್ಯೆಗಳು ಮತ್ತಷ್ಟು ಉಲ್ಬಣಗೊಂಡು ಇಡೀ ಸಮಾಜವೇ ಸಾಮಾಜಿಕ ಸಂಘರ್ಷಗೊಂಡು ಅಶಾಂತಿಗಳು ಏರ್ಪಡುವ ಕಾಲ ದೂರ ಉಳಿದಿಲ್ಲವೇನೋ ಎಂಬ ಸಂಶಯ ಮೂಡುತ್ತದೆ.

ಒಂದು ಕಾಲದಲ್ಲಿ ಸಮಾಜಕ್ಕೆ ಪೋಷಕವಾದ ಯೋಗ್ಯತೆಯನ್ನು ತಂದು ಕೊಡುವ ಸಾಧನವಾಗಿದ್ದ ಜಾತಿಯು ಇಂದು ಯೋಗ್ಯತೆಯಿಲ್ಲದವನಿಗೆ ಹೊಟ್ಟೆ ಹೊರೆಯುವ ಶಕ್ತಿಯಾಯಿತು. ಸ್ವಾರ್ಥ ಸಾಧುವಿನ ಕೈಯೊಳಗೆ ಆಯುಧವಾದ ಜಾತಿಯ ಒಡಲಿನಿಂದ ಯುವ ಸಮುದಾಯ ಹೊರ ಬರಬೇಕು. ಸಮಾಜಕ್ಕೆ ಪೋಷಕವಾಗುವಂತಹ, ಸಮಾಜದ ಏಳ್ಗೆಗೆ ಸಹಕಾರಿಯಾಗುವಂತಹ ಉದ್ಯೋಗ, ಶಿಕ್ಷಣ ಮೊದಲಾದ ಮೂಲಭೂತ ಅವಶ್ಯಕತೆಗಳೆಲ್ಲಾ ಲಭಿಸುವಂತಾಗಬೇಕು. ಆಗ ಅಯೋಗ್ಯರ ಮುಂದಾಳುತನಗಳೆಲ್ಲ ಮಾಯವಾಗಿ ಜಾತಿಯ ಸಮಸ್ಯೆಯೂ ಮಾಯವಾಗುತ್ತದೆ ಎಂಬ ಪರಿಹಾರವನ್ನು ಶ್ರೀರಂಗರು ನೀಡುತ್ತಾರೆ.

ಪ್ರಗತಿಶೀಲ ಕಾಲಘಟ್ಟದ ಸೃಜನಶೀಲ ಬರವಣಿಗೆಯಲ್ಲಿ ಜಾತಿಯ ಸಮಸ್ಯೆಗಳನ್ನು ಕುರಿತಂತೆ ಅನೇಕ ಕಥೆ, ಕಾದಂಬರಿಗಳನ್ನು ಕಾಣಬಹುದು. ಶ್ರೀರಂಗರ ಈ ವೈಚಾರಿಕ ಪ್ರಬಂಧ 'ಜಾತಿಯ ಸಮಸ್ಯೆಗಳು' ಎಂಬ ಪ್ರಬಂಧದಲ್ಲಿ ಜಾತಿಯ ಸಮಸ್ಯೆಗಳು ಬೆಳೆದು ಬಂದ ಬಗೆಯನ್ನು ತಿಳಿಸುವುದು ಮಾತ್ರವಲ್ಲದೆ ಜಾತಿಯ ಸಮಸ್ಯೆ ನಿವಾರಣೆಯಾಗಬೇಕು ಎಂಬ ಹಂಬಲವಿದೆ. ಜಾತಿಯ ಸಮಸ್ಯೆಗಳು ಹೀಗೆ ಮುಂದುವರೆದರೆ ದೇಶವು ಸಾಮಾಜಿಕವಾಗಿ ಅಥವಾ ಆರ್ಥಿಕವಾಗಿ ಪ್ರಗತಿ ಕಾಣಲು ಸಾಧ್ಯವಿಲ್ಲ ಎಂಬ ನಿಲುವನ್ನು ಹೊಂದಿದ್ದಾರೆ.

ಶ್ರೀರಂಗರು ೧೯೭೨ರ ಸುಮಾರಿನಲ್ಲಿ ರಚಿಸಿದ ಕೃತಿ 'ನಲ್ವತ್ತೆರಡರ ಚಲೇ ಜಾವ್ ಚಳುವಳಿ'. ಇದು ಭಾರತದಲ್ಲಿ ಬ್ರಿಟಿಷರ ವಿರುದ್ಧ ನಡೆದ ಸ್ವಾತಂತ್ರ್ಯ ಚಳುವಳಿಯಾದ 'ಕ್ವಿಟ್ ಇಂಡಿಯಾ ಚಳುವಳಿ'ಯನ್ನು ಕುರಿತಂತೆ ಬರೆದ ಕೃತಿಯಾಗಿದೆ. ಗಾಂಧಿಯವರು ಕರೆಕೊಟ್ಟ 'ಮಾಡು ಇಲ್ಲವೇ ಮಡಿ' ಘೋಷಣೆಯಾದ ಈ ಚಳುವಳಿಯ ಸಂದರ್ಭದಲ್ಲಿ ಶ್ರೀರಂಗರು ಮೂರು ಆಯಾಮಗಳಲ್ಲಿ. ಅಂದರೆ ಜಾಗತಿಕ ಹಿನ್ನೆಲೆ, ದ್ವಿತೀಯ ಮಹಾಯುದ್ಧದ ಸಂದರ್ಭ, ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಮತ್ತು ಕರ್ನಾಟಕದಲ್ಲಿ ಸಂಘಟನೆಯ ಹಿನ್ನೆಲೆಯಲ್ಲಿ ಚರ್ಚಿಸುತ್ತಾರೆ. ದ್ವಿತೀಯ ಮಹಾಯುದ್ಧದ ನಂತರ ಬ್ರಿಟಿಷರು ದೇಶ ಬಿಟ್ಟು ಹೋಗಬೇಕು ಎಂಬ ಗಾಂಧೀಜಿಯವರ ನಿಲುವು, ಇದಕ್ಕೆ ಬ್ರಿಟಿಷರಿಂದ ದೊರಕದ ಉತ್ತರ, ಅದರ ವಿರುದ್ಧ ನಡೆದ ಭಾವನಾತ್ಮಕವಾದ ಘೋಷಣೆಯಾಗದೇ ನೈಜ ಸ್ವಾತಂತ್ರ್ಯದ ಕಹಳೆ, ಈ ಹೋರಾಟಕ್ಕೆ ಕರ್ನಾಟಕದಲ್ಲಿ ಜಾತಿ, ಮತ ಬೇಧವಿಲ್ಲದೆ ಒಂದುಗೂಡಿದ್ದು, ಈ ಚಳುವಳಿಯಲ್ಲಿ ಹೆಣ್ಣು ಮಕ್ಕಳು, ಮಹಿಳೆಯರು ಧೈರ್ಯದಿಂದ ಲಾಠಿ ಏಟು

ತಿಂದದ್ದು, ಗೋಲಿಬಾರನ್ನು ಎದುರಿಸಿದ್ದು, ೧೯೪೨ರ ಆಗಸ್ಟ್ ೯ ರಿಂದ ಐದು ತಿಂಗಳು ಕರ್ನಾಟಕದಲ್ಲಿ ಜನತೆಯ ಸಹಾಯ-ಸಹಕಾರ-ಸಹಾನುಭೂತಿಗಳಿಂದ ಚಳುವಳಿ ನಡೆದದ್ದು, ಯುವಕರು ಭಾಗವಹಿಸಿದ್ದು, 'ಮಾಡು ಇಲ್ಲವೇ ಮಡಿ' ಘೋಷಣೆಯು ಹೇಗೆ ಕಾರ್ಯ ನಿರ್ವಹಿಸಿತು ಎಂಬುದನ್ನು ವಿಶ್ಲೇಷಿಸಿದ್ದಾರೆ.

ಕ್ವಿಟ್ ಇಂಡಿಯಾ ಚಳುವಳಿ ಯಶಸ್ವಿಯಾಗಲು ಕಾರಣ ಇದರಲ್ಲಿ ಜಾತಿ, ಮತ, ಧರ್ಮ ಬೇಧವಿಲ್ಲದೆ ಎಲ್ಲ ಭಾರತೀಯರು ಒಂದಾಗಿದ್ದು, ಸ್ವದೇಶಿ ವಸ್ತುಗಳ ಉತ್ಪಾದನೆಗೆ ಹೆಚ್ಚು ಆದ್ಯತೆ ಕೊಟ್ಟದ್ದು, ಕರ್ನಾಟಕದಲ್ಲಿ ಅದಕ್ಕೆ ಬಂದ ಪ್ರತಿಕ್ರಿಯೆ, ಸಹಕರಿಸಿದ ಪರಿ, ಕನ್ನಡಿಗರ ಹೋರಾಟದ ಗುಣ, ಸಂಘಟಿಸಿದ ಕೌಶಲ, ವಿಧ್ವಂಸಕವಲ್ಲದ ರೀತಿಯಲ್ಲಿ ಅನೇಕ ಎಡರು-ತೊಡರುಗಳನ್ನು ಎದುರಿಸಿದ್ದು, ವಿದ್ಯಾರ್ಥಿಗಳ ಭಾಗವಹಿಸುವಿಕೆ ದೊಡ್ಡದಾಗಿದ್ದು ಮೊದಲಾದ ಅಂಶಗಳು ಚಳುವಳಿ ಯಶಸ್ವಿಯಾಗಲು ಹತ್ತು ಹಲವು ವಿಚಾರಗಳು ಸಹಕಾರಿಯಾದವು.

ಇಂದಿನ ಯುವ ಸಮೂಹ ಸಂಘಟಿತ ಹೋರಾಟದಿಂದ ಇಂದಿನ ಸಾಮಾಜಿಕ ಪಿಡುಗುಗಳಾದ ಜಾತೀಯತೆ, ಭ್ರಷ್ಟಾಚಾರ, ಸೈದ್ಧಾಂತಿಕವಲ್ಲದ ರಾಜಕಾರಣದ ವಿರುದ್ಧ, ಅಸಮಾನತೆಯ ವಿರುದ್ಧ, ಸಾಮಾಜಿಕ ಶೋಷಣೆಯ ವಿರುದ್ಧ ಹೋರಾಡುವ ಗುಣಗಳಿಗೆ ಪ್ರೇರಣೆ ನೀಡುವಂಥದ್ದು. ಅಂದು ಬ್ರಿಟಿಷರ ವಿರುದ್ಧ ನಡೆದ ಚಳುವಳಿ ಇಂದು ಕೂಡಾ ನಡೆದು ಭಾರತದಲ್ಲಿರುವ ಅಸ್ಪೃಶ್ಯತೆ, ಬಡತನ, ಸ್ತ್ರೀಶೋಷಣೆ, ಅಸಮಾನತೆ ಮೊದಲಾದ ಪಿಡುಗುಗಳು ಭಾರತ ಬಿಟ್ಟು ತೊಲಗಲಿ ಎಂಬ ಧೋರಣೆಯನ್ನು ಈ ಕೃತಿಯ ಹಿನ್ನೆಲೆಯನ್ನು ತಿಳಿಯಬಹುದು. ಮುಂದುವರೆದು ನೋಡಿದರೆ ಇಂದಿನ ಉದಾರೀಕರಣ, ಜಾಗತೀಕರಣ, ನಗರೀಕರಣ ಇವುಗಳಿಂದ ಬಿಡುಗಡೆಗೊಳ್ಳಲು ಇನ್ನೊಂದು ಕ್ವಿಟ್ ಇಂಡಿಯಾ ಚಳುವಳಿ ಮಾದರಿಯ ಚಳುವಳಿಯು ನಡೆಯಬೇಕು ಎಂಬ ಆಶಯವನ್ನು ಇಲ್ಲಿ ಕಾಣಬಹುದು.

ಸ್ವತಂತ್ರ ಭಾರತದ ಗಣರಾಜ್ಯ ಘಟನೆ ಎಂಬುದು ಶ್ರೀರಂಗರು ಬರೆದ ರಾಜಕೀಯ ವೈಚಾರಿಕ ಪ್ರಜ್ಞೆಯನ್ನು ಮೂಡಿಸುವ ಕೃತಿಯಾಗಿದೆ. ಬ್ರಿಟಿಷರು ವ್ಯಾಪಾರಕ್ಕೆ ಬಂದಾಗಿನಿಂದ ಹಿಡಿದು ಸಾಮ್ರಾಜ್ಯಶಾಹಿ ಆಡಳಿತ ವ್ಯವಸ್ಥೆಗೆ ಭಾರತವನ್ನು ಒಳಪಡಿಸಿಕೊಂಡದ್ದು, ೧೯೪೭ ಆಗಸ್ಟ್ ೧೫ ರಂದು ಬ್ರಿಟಿಷರ ವತಿಯಿಂದ ಭಾರತೀಯರಿಗೆ ಅಧಿಕಾರ ಒಪ್ಪಿಸಿ ಸ್ವತಂತ್ರ ರಾಷ್ಟ್ರವಾದುದರ ಬಗ್ಗೆ, ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡದ್ದು, ಒಕ್ಕೂಟ ವ್ಯವಸ್ಥೆಗೆ ಒಳಪಟ್ಟಿದ್ದು, ತನ್ನದೇಯಾದ ಸಂವಿಧಾನ ರಚಿಸಿಕೊಂಡದ್ದು, ಆ ಮೂಲಕ ಪ್ರಜೆಯು ಪಡೆದ ಸಾಂವಿಧಾನಿಕ ಅಧಿಕಾರಗಳು, ಶಾಸನಾಧಿಕಾರದಲ್ಲಿ ರಾಷ್ಟ್ರಾಧ್ಯಕ್ಷ, ಪ್ರಧಾನಮಂತ್ರಿಯವರ ಅಧಿಕಾರ, ಕಾರ್ಯಗಳು, ಲೋಕಸಭೆ, ರಾಜ್ಯಸಭೆ ಮೊದಲಾದವುಗಳ ಬಗ್ಗೆ, ರಾಜ್ಯಗಳಲ್ಲಿ ರಾಜ್ಯಪಾಲರು, ವಿಧಾನಸಭೆ, ವಿಧಾನಪರಿಷತ್ತು, ಅದರ ಸಾಮಾನ್ಯ ಕಾರ್ಯಗಳು, ನ್ಯಾಯಾಧಿಕರಣ, ಆಡಳಿತ ನಿಯಂತ್ರಣಗಳು, ಅದರ ಕಾರ್ಯಕ್ಷೇತ್ರ, ನಾಗರಿಕರ ಹಕ್ಕುಗಳು ಮೊದಲಾದವುಗಳನ್ನು ಪರಿಚಯಾತ್ಮಕವಾಗಿ ವಿವರಿಸಿದ್ದಾರೆ. ಸಾಮಾನ್ಯ ಓದುಗನಿಗೆ ಸರಕಾರದ ಕಾರ್ಯಗಳೇನು? ಅವರ ಅಧಿಕಾರಗಳೇನು? ಮೊದಲಾದವುಗಳನ್ನು ಪರಿಚಯಿಸುವುದು, ಆ ಮೂಲಕ ಸಾಂವಿಧಾನಿಕ ಹುದ್ದೆಗಳ ಬಗ್ಗೆ ರಾಜಕೀಯ ಪ್ರಜ್ಞೆಯನ್ನು ಮೂಡಿಸುವುದು ಈ ಕೃತಿಯ ಆಶಯವಾಗಿದೆ.

ನಾಗರಿಕನಿಗೆ ಶಿಕ್ಷಣವನ್ನು ಸಾರ್ವತ್ರಿಕವಾಗಿ ಮಾಡಿದರೆ ಜನತೆಯಲ್ಲಿ ಶಿಕ್ಷಣ ದೊರೆತು ಜಾತಿಯ ಅಭಿಮಾನ ನಾಶವಾಗಿ, ದೇಶಾಭಿಮಾನ ಜಾಗೃತವಾಗುತ್ತದೆ ಎಂದು ೧೯೫೨ರ ಈ ಕೃತಿಯಲ್ಲಿ ತಿಳಿಸಿದ್ದಾರೆ. ಜಾತಿಯೆಂಬ ಪಿಡುಗು ನಾಶಗೊಳ್ಳಲು ಶಿಕ್ಷಣವೇ ಸಾಧನ ಎಂಬ ನಿಲುವು ಅವರದಾಗಿತ್ತು. ೬ ರಿಂದ ೧೪ ವರ್ಷಗಳ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಇತ್ತೀಚಿನಲ್ಲಿ ಸರಕಾರವು ಜಾರಿಗೆ ತಂದು, ಆ ಮೂಲಕ ಶಿಕ್ಷಿತ ವಲಯವನ್ನು ಹೆಚ್ಚು ಮಾಡಿದೆ. ಶ್ರೀರಂಗರು ೧೯೫೨ ರಲ್ಲಿಯೇ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ನೀಡುವ ಮಂತ್ರವೇ ಶಿಕ್ಷಣ. ಆ ಶಿಕ್ಷಣವನ್ನು ಸರಕಾರವೇ ಎಲ್ಲರಿಗೂ ನೀಡುವ ಅವಶ್ಯಕತೆಯನ್ನು ಅಂದೇ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಪ್ರಗತಿಶೀಲ ಕಾಲಘಟ್ಟದ ಸಾಹಿತಿಯ ಸಾಮಾಜಿಕ ಜವಾಬ್ದಾರಿಯನ್ನು ತಿಳಿಯಬಹುದು.

ಶ್ರೀರಂಗರ ಮತ್ತೊಂದು ವೈಚಾರಿಕ ಲೇಖನ ಏಕೀಕರಣವನ್ನು ಕುರಿತಾಗಿದೆ. ಏಕೀಕರಣ ಚಳುವಳಿಯನ್ನು ಕೆಲವರು ಒಕ್ಕೂಟ ವ್ಯವಸ್ಥೆಗೆ ಧಕ್ಕೆ, ರಾಷ್ಟ್ರದ ಅಭಿವೃದ್ಧಿಗೆ ಮಾರಕವೆಂದು ಅಲ್ಲಗಳೆದಾಗ ಅದಕ್ಕೆ ಉತ್ತರವಾಗಿ ಸ್ವಾತಂತ್ರ್ಯ ಚಳುವಳಿಯ ಸ್ಫೂರ್ತಿ ಪಡೆದೇ ಏಕೀಕರಣ ಚಳುವಳಿಯು ಮೊದಲಿಗೆ ರೂಪುಗೊಂಡಿತು. ಪಾಕಿಸ್ತಾನ ಚಳುವಳಿ ನಡೆದಿದ್ದು ಜಾತಿ ಧರ್ಮದ ಆಧಾರದ ಮೇಲೆ, ಆದರೆ ಏಕೀಕರಣ ಚಳುವಳಿ ಪ್ರಾದೇಶಿಕ ಅಭಿಮಾನದ ಮೇಲೆ ನಿಂತಿದೆ. ಜಾತಿಯನ್ನಾಗಲೀ, ಧರ್ಮವನ್ನಾಗಲೀ, ಜೀವನವನ್ನಾಗಲೀ ಮನುಷ್ಯ ಬದಲಾಯಿಸಿಕೊಳ್ಳಬಹುದು, ಹಾಗಾಗಿ ಇವು ಸಾಪೇಕ್ಷ ಭಾವನೆಗಳು. ಪ್ರದೇಶಾಭಿಮಾನವೂ ಮೈಗೆ ಅಂಟಿಕೊಂಡಿರುವುದು ವಾಸ್ತವತೆ ಆಗಿದೆ. ವಾಸ್ತವತೆಯನ್ನು ಬದಲಾಯಿಸಲು ಸಾಧ್ಯವಿಲ್ಲ, ಹಾಗಾಗಿ ಅದನ್ನು ಒಪ್ಪಬೇಕು ಅಷ್ಟೇ ಎಂಬುದಾಗಿ ವಿಮರ್ಶಿಸುತ್ತಾರೆ. ಕನ್ನಡಿಗರ ಸಂಸ್ಕೃತಿ ಭಾರತಕ್ಕೆ ಪೂರಕವಾಗುವುದು ಏಕೆಂದರೆ ಕನ್ನಡಿಗರ ಪ್ರಜ್ಞೆ, ಜ್ಞಾನ, ಶಿಕ್ಷಣ ವಿಶಾಲ ದೃಷ್ಟಿಕೋನದ್ದಾಗಿದೆ. ರಾಷ್ಟ್ರೀಯತೆಯೊಂದಿಗೆ ಕನ್ನಡತನವನ್ನು ಉಳಿಸುವ, ಪೋಷಿಸುವ ಹಂಬಲವನ್ನು ಹೊಂದಿದೆ. ಕರ್ನಾಟಕ ಏಕೀಕರಣದ ಅಗತ್ಯತೆಯನ್ನು ಪ್ರತಿಪಾದಿಸುವ ದೃಷ್ಟಿಯನ್ನು ಇಲ್ಲಿ ಕಾಣಬಹುದು.

'ನಮಗೊಂದು ಸಂಸ್ಕೃತಿ ಇದೆಯೇ?' ಎಂಬ ವೈಚಾರಿಕ ಲೇಖನದಲ್ಲಿ ಸಂಸ್ಕೃತಿಯು ಒಂದೇ ಆಗಿರುವುದಿಲ್ಲ, ಅದು ಬದಲಾವಣೆಯಾಗುತ್ತಲೇ ಇರುತ್ತದೆ. ಹಾಗಾಗಿ ಒಂದೇ ಸಂಸ್ಕೃತಿ ಎಂಬುದು ಇರುವುದಿಲ್ಲ, ಪಾಶ್ಚಾತ್ಯ ವಿದ್ವಾಂಸರ ಅಧ್ಯಯನದಿಂದ ಭಾರತೀಯ ವಿದ್ವಾಂಸರು ಕೂಡಾ ಸಂಸ್ಕೃತಿಯನ್ನು ಕುರಿತಂತೆ ಅಧ್ಯಯನದಲ್ಲಿ ತೊಡಗಿದರು, ಬ್ರಿಟಿಷ್ ವಿರೋಧಿ ಚಳುವಳಿ ರೂಪು ಪಡೆದುಕೊಂಡಿದ್ದು ದೇಶಭಕ್ತಿಯಿಂದಲೇ ಹೊರತು ಸಂಸ್ಕೃತಿ, ನಾಗರಿಕತೆಗೂ ಯಾವ ಸಂಬಂಧವಿಲ್ಲ ಎಂಬುದಾಗಿ ವಿಶ್ಲೇಷಿಸುತ್ತಾರೆ.

"ಸಂಸ್ಕೃತಿಯು ಒಂದು ವಸ್ತುವಲ್ಲ! ಮನೆ, ಜಮೀನು ಅಥವಾ ಬ್ಯಾಂಕಿನಲ್ಲಿರುವ ಹಣದ ಹಾಗೆ ಅದನ್ನು ವಂಶಪಾರಂಪರ್ಯವಾಗಿ ಪಡೆಯಲು ಸಾಧ್ಯವಿಲ್ಲ. ಅದು ನಾಗರಿಕತೆಯ ರೋಗರುಜಿನಗಳನ್ನು ಸರಿಪಡಿಸಲು, ಪರಿಹರಿಸಲು ಬಳಸಬಹುದಾದ ಬೌದ್ಧಿಕ ವಿಧಾನ. ಮನೋಧರ್ಮ. ಅದು ಕೇವಲ ವೈಚಾರಿಕ ಮನೋಧರ್ಮವಲ್ಲ, ಮನಸ್ಸಿನ ಶೀಲ ಹಾಗೂ ನೈತಿಕ ಧೈರ್ಯಗಳನ್ನು ಒಳಗೊಳ್ಳುತ್ತದೆ"[೧೧] ಎಂದು ಶ್ರೀರಂಗರು ಅಭಿಪ್ರಾಯಪಟ್ಟಿದ್ದಾರೆ.

ಸಂಸ್ಕೃತಿಯು ಬೌದ್ಧಿಕ ವಿಧಾನವಾಗಿ ಕಾರ್ಯನಿರ್ವಹಿಸುವಂಥದ್ದು. ಅದು ವೈಚಾರಿಕತೆಯ ಮನೋಧರ್ಮವಲ್ಲ, ಕಾಲದಿಂದ ಕಾಲಕ್ಕೆ, ನಾಗರಿಕತೆಯಿಂದ ಉಂಟಾದ ಅನೇಕ ರೋಗಗಳಿಗೆ ಔಷಧಿಯನ್ನು ಮನಸ್ಸಿನ ಮೂಲಕ ನೈತಿಕ ಸ್ಥೈರ್ಯವನ್ನು ನೀಡುವಂಥದ್ದು ಆಗಿದೆ. ಇಲ್ಲಿ ಶ್ರೀರಂಗರು ಸಂಸ್ಕೃತಿಯನ್ನು ಧಾರ್ಮಿಕ ಚೌಕಟ್ಟಿನಲ್ಲಿ ನೋಡುವ ಕ್ರಮಕ್ಕೆ ವಿರುದ್ಧವಾದ ಧೋರಣೆಯನ್ನು ಪ್ರತಿಪಾದಿಸುತ್ತಾರೆ.

ಶ್ರೀರಂಗರು ಇದೇ ಲೇಖನದಲ್ಲಿ ಮರಳಿ ನಾವು ಉಪನಿಷತ್ತಿನ ಕಾಲಘಟ್ಟಕ್ಕೆ ಮರಳಬೇಕು. ಅಲ್ಲಿ ಸ್ತ್ರೀ-ಪುರುಷರಿಬ್ಬರೂ ಸಮಾನವಾಗಿ ತತ್ವಶಾಸ್ತ್ರದ ವಿಷಯಗಳಲ್ಲಿ ವಾದ-ವಿವಾದ ಮಾಡುವ, ಜಾರಪುತ್ರನನ್ನು (ಸತ್ಯಕಾಮ) ಬ್ರಾಹ್ಮಣ ವಿದ್ಯಾರ್ಥಿಯೆಂದು ಪರಿಗ್ರಹಿಸುವ, ಬ್ರಾಹ್ಮಣರು ಆಸ್ತಿಪಾಸ್ತಿಗಳನ್ನು ಹೊಂದಿರಬಾರದು ಎಂಬ ಕಟ್ಟುಪಾಡುಗಳನ್ನು ಮರೆತು ಬಿಟ್ಟಿದ್ದೇವೆ ಎನ್ನುವ ಶ್ರೀರಂಗರು ಜಾತ್ಯಾತೀತತೆ, ಸ್ತ್ರೀಯರನ್ನು ಗೌರವಿಸುವ, ಅಕ್ಷರವಂಚಿತ ಸಮುದಾಯಗಳಿಗೆ ಶಿಕ್ಷಣವನ್ನು ನೀಡುವ, ಸ್ತ್ರೀ ಶೋಷಣೆಯ ವಿರುದ್ಧ ಸಮಾನತೆಯ ಸಮಾಜವನ್ನು ಕಾಣುವ ಪ್ರಗತಿಶೀಲ ಕಾಲಘಟ್ಟದ ಧೋರಣೆಯನ್ನು ಸಂಸ್ಕೃತಿಯ ಹಿನ್ನೆಲೆಯಲ್ಲಿ ಪ್ರತಿಪಾದಿಸಿದ್ದಾರೆ.

ಜಾತಿಯ ಸಮಸ್ಯೆಗಳನ್ನು ಕುರಿತಂತೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಸ್ಪೃಶ್ಯ ಎಂಬ ಹಳೆಯ ಜಾತಿ ಪದ್ಧತಿಯ ವಿರುದ್ಧವಾಗಿ ಹೋರಾಡುತಿದ್ದೇವೆಯೇ ಹೊರತು ಇದರ ಒಳಗೆ ಇರುವ ಜಾತಿ ಪದ್ಧತಿಯ ವಿರುದ್ಧವಾಗಿ ನಮ್ಮ ಹೋರಾಟಗಳಿಲ್ಲ ಎಂಬ ವಾಸ್ತವತೆಯನ್ನು ತೆರೆದಿಡುತ್ತಾರೆ. 'ಜಾತಿಯ ಸಮಸ್ಯೆಗಳು' ಎಂಬ ಪ್ರಬಂಧದಲ್ಲಿ ಶ್ರೀರಂಗರು ನಗರ ಸಂಸ್ಕೃತಿಯು ಬೆಳೆಯುತ್ತಿದ್ದ ಹಾಗೆ ಜಾತಿಯ ಸಮಸ್ಯೆಗಳು ಉಲ್ಬಣಗೊಂಡವು ಎಂದು ಪ್ರತಿಪಾದಿಸುತ್ತಾರೆ. ಈ ಲೇಖನದಲ್ಲಿ ಜಾತಿ ವ್ಯವಸ್ಥೆಯಲ್ಲಿ ಒಂದು ಜಾತಿಯಲ್ಲೇ ಎಷ್ಟೊಂದು ಒಳ ಜಾತಿಗಳಿವೆ. ಆ ಜಾತಿಗಳಲ್ಲಿರುವ ಮೇಲು-ಕೀಳು, ಶೋಷಣೆ-ಅಸಮಾನತೆಯ ವಿರುದ್ಧ ಹೋರಾಡಬೇಕು ಎಂಬ ಸೂಕ್ಷ್ಮ ವಿಚಾರವನ್ನು ಚರ್ಚೆಗೆ ಎತ್ತಿದ್ದಾರೆ. ಆ ಮೂಲಕ ಜಾತಿಮುಕ್ತ ಮತ್ತು ವರ್ಗಮುಕ್ತ ಸಮಾಜ ನಿರ್ಮಾಣವಾಗಬೇಕು ಎಂಬ ಆಶಯವಿದೆ.

'ನಮ್ಮದಿನ್ನೂ ಜಮೀನ್ದಾರಿಕೆ ಮನೋವೃತ್ತಿಯೇ?' ಎಂಬ ಲೇಖನದಲ್ಲಿ ದೇಶದ ಜನರ ವಿಶ್ವಾಸ-ವಿಚಾರಗಳಲ್ಲಿ ತೀವ್ರತರವಾದ ಬದಲಾವಣೆಗಳಾದರೂ ನಮ್ಮ ದೇಶದಲ್ಲಿ ಜಮೀನ್ದಾರಿಕೆಯ ಸಂಸ್ಕೃತಿಯನ್ನು ಉಳಿಸಿಕೊಂಡಿದ್ದಾರೆ. ಇಸ್ಲಾಂ ಧರ್ಮ ಮತ್ತು ಕ್ರೈಸ್ತ ಪಂಗಡಗಳಲ್ಲಿಯ ಧಾರ್ಮಿಕ ಯುದ್ಧಗಳು ಉಂಟಾಗಿದ್ದರಿಂದ ಧಾರ್ಮಿಕ ಏಕತೆ, ರಾಜಕೀಯ ಏಕತೆ ಅವರಲ್ಲಿ ಮೂಡಿತ್ತು. ವಸಾಹತುಶಾಹಿ ಮತ್ತು ಕೈಗಾರಿಕಾ ಕ್ರಾಂತಿಯಿಂದ ಉಂಟಾದ ಸಮಸ್ಯೆಗಳ ಅರಿವಿದ್ದ ಸುಶಿಕ್ಷಿತರು ಕಳೆದ ಶತಮಾನದಲ್ಲಿ ದೇಶಾಭಿಮಾನದ ಬೀಜ ಬಿತ್ತಿದರು. ಇವು ಶಿಕ್ಷಣ ಮತ್ತು ಭಾಷೆಯ ಅಭಾವಗಳಿಂದಾಗಿ ಇತರ ಕೆಲವು ಸಮುದಾಯಗಳಿಗೆ ತಲುಪಲಿಲ್ಲ. ಅವರು ಜಮೀನ್ದಾರಿಕೆಯ (feudal) ಮನೋವೃತ್ತಿಯವರೇ ಆಗಿದ್ದಾರೆ. ಸ್ವಾತಂತ್ರ್ಯ ನಂತರವೂ ಅದೇ ಮುಂದುವರೆಯಿತು. ಅಂದು ರಾಜ, ಅವನ ನಂತರ ಮಗ, ಆಡಳಿತವೆಂಬುದು ಅನುವಂಶಿಕವಾಗಿಯೇ ಉಳಿದು ಬಂದಿತ್ತು. ಸ್ವಾತಂತ್ರ್ಯ ನಂತರ ಅಧಿಕಾರ ಹಿಡಿದವನು ನಾಯಕ ಅಥವಾ ಮುಂದಾಳುವಾಗಿ, ನಂತರ ಅವನ ಮಗ, ಮೊಮ್ಮಗ ಹೀಗೆ ಮುಂದುವರೆದರೂ ಜನಸಾಮಾನ್ಯರು ಯಾವುದೇ ಗೊಡವೆಗೆ ಹೋಗಿಲ್ಲ.

ಅದೇ ಜಮೀನ್ದಾರಿಕೆಯ ಮನಃಸ್ಥಿತಿಗೆ ಒಳಗಾಗಿದ್ದಾರೆ ಎಂಬ ನಿಲುವನ್ನು ಹಾಗೂ ಜಮೀನ್ದಾರಿಕೆಯ ಮನೋಸ್ಥಿತಿಯ ಇನ್ನೊಂದು ಆಯಾಮವನ್ನು ತೆರೆದಿಡುತ್ತಾರೆ.

ಪ್ರಸ್ತುತ ರಾಜಕೀಯ, ಆರ್ಥಿಕ ಮೊದಲಾದ ಕ್ಷೇತ್ರಗಳನ್ನು ನೋಡಿದರೆ ವಂಶಪಾರಂಪರ್ಯವಾಗಿ ತಮ್ಮ ಪಾರುಪತ್ಯವನ್ನು ಸ್ಥಾಪಿಸಿದವರು ಒಂದು ಕಡೆಯಾದರೆ, ಮತ್ತೊಂದು ಕಡೆ ಆ ರೀತಿಯ ಮನಃಸ್ಥಿತಿಗೆ ಜನಸಾಮಾನ್ಯರು ಒಳಗಾಗಿದ್ದು ಇದರಿಂದ ಹೊರಬರಲಾಗದ ಸ್ಥಿತಿಯಲ್ಲಿ ಜನರಿದ್ದಾರೆ. ಇದರಿಂದ ಬಿಡುಗಡೆಯಾಗದೆ ಇರುವುದರಿಂದ ಪ್ರಜಾಪ್ರಭುತ್ವ ವ್ಯವಸ್ಥೆಗೆ ದೊಡ್ಡ ಹೊಡೆತವೇ ಬಿದ್ದಿದೆ.

ಸ್ವಾತಂತ್ರ್ಯ ಪೂರ್ವದಲ್ಲಿದ್ದ ಜಮೀನ್ದಾರಿಕೆಯ ಪದ್ಧತಿಯೇ ಬೇರೆ, ಸ್ವಾತಂತ್ರ್ಯ ನಂತರದ ಜಮೀನ್ದಾರಿಕೆಯ ಮನೋವೃತ್ತಿಯೇ ಭಿನ್ನವಾಗಿದೆ. ಪದ್ಧತಿಯನ್ನು ಹೋಗಲಾಡಿಸಲು ಕಾನೂನುಗಳು ಸಹಕಾರಿಯಾಗುತ್ತವೆ. ಆದರೆ ಮನೋವೃತ್ತಿಯನ್ನು ಬದಲಾಯಿಸಲು ಸರಿಯಾದ ಶಿಕ್ಷಣ ದೊರಕಬೇಕು. ಶಿಕ್ಷಣ ವ್ಯವಸ್ಥೆಯೇ ಪರೋಕ್ಷವಾಗಿ ಈ ರೀತಿಯ ಜಮೀನ್ದಾರಿಕೆಯ ಮನೋವೃತ್ತಿಯನ್ನು ಬೆಳೆಸುತ್ತಿದೆ ಎಂದರೆ ತಪ್ಪಾಗಲಾರದು. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಕಾಲಘಟ್ಟದ ಜಮೀನ್ದಾರಿಕೆ ಪದ್ಧತಿಯ ನಿರ್ಮೂಲನೆ, ಸಮಾನತೆಯ ಸಮಾಜದ ನಿರ್ಮಾಣ, ಬಡವ-ಶ್ರೀಮಂತ, ಮಾಲೀಕ-ಕಾರ್ಮಿಕ, ಜಮೀನ್ದಾರ-ಶ್ರಮಿಕ ಈ ರೀತಿಯ ವರ್ಗನಾಶದ ಪರಿಕಲ್ಪನೆಯನ್ನು ವೈಚಾರಿಕ ಬರಹದ ಮೂಲಕ ಸೂಚಿಸಿದ್ದಾರೆ. ಇಂದಿಗೂ ಈ ಜಮೀನ್ದಾರಿಕೆಯ ಮನೋಸ್ಥಿತಿಗೆ ಒಗ್ಗಿರುವ ಸಾಮಾನ್ಯ ಜನರನ್ನು ಎಚ್ಚರಿಸುವ ಕಾರ್ಯವನ್ನು ಸಮಕಾಲೀನ ಸಾಹಿತ್ಯವು ಮಾಡಬೇಕಾಗಿದೆ.

ಜಯಂತಿ ಮಾಸ ಪತ್ರಿಕೆಯಲ್ಲಿ ಸುದೀರ್ಘ ಒಂದು ದಶಕದ ಕಾಲ ತಮ್ಮ ವೈಚಾರಿಕತೆಯ ನಿಲುವನ್ನು ಪ್ರಕಟಪಡಿಸಿದ ಶ್ರೀರಂಗರು ಮುಂದೆ ರಘುನಾಥ ನಾಡಿಗೇರರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ 'ನರಸಿಂಹ' ಎಂಬ ಅಂಕಣ ಅವರ ವಿಚಾರ ಸಾಹಿತ್ಯದ ಮಾಧ್ಯಮವಾಗಿತ್ತು. ಗಾಂಧಿ ಜೀವನ (ನರಸಿಂಹಾವಲೋಕ ೨) ದಲ್ಲಿ ಗಾಂಧಿ ಚರಿತ್ರೆಯಲ್ಲಿ ಕಾಂಗ್ರೇಸ್ ಸಂಸ್ಥೆ ಹೇಗೆ ಪ್ರಭಾವ ಬೀರಿದೆ ಎಂಬುದಕ್ಕೆ ಗಾಂಧೀಜಿ ೧೫ ವರ್ಷದ ತರುಣನಿದ್ದಾಗ ಕಾಂಗ್ರೇಸ್ ಸಂಸ್ಥೆ ಹುಟ್ಟಿಕೊಂಡದ್ದು. ಅದು ಒಂದು ರೀತಿ ಗಾಂಧೀಜಿಗೆ ಪ್ರೇರಣೆಯನ್ನು ನೀಡಿದೆ. ಪ್ರಾರಂಭದಲ್ಲಿ ಕಾಂಗ್ರೇಸ್ ಸಂಸ್ಥೆಗೆ ರಾಜಕಾರಣದ ವಿಷಯಕ್ಕೆ ಸಂಬಂಧವೇ ಇರಲಿಲ್ಲ. "ವರ್ಷಕ್ಕೊಮ್ಮೆ ಸಾಮಾಜಿಕ ವಿಷಯಗಳನ್ನು ಚರ್ಚಿಸುವುದಕ್ಕೂ, ಪರಸ್ಪರ ಪರಿಚಯವನ್ನು ಮಾಡಿಕೊಳ್ಳುವುದಕ್ಕೂ, ಇಂಗ್ಲೀಷ್ ಭಾಷೆಯನ್ನು ಚೆನ್ನಾಗಿ ಬಲ್ಲ ದೇಶದ ಮುಂದಾಳುಗಳು ಒಂದೆಡೆ ಸೇರಬೇಕು"[೧೨] ಎಂಬುದು ಕಾಂಗ್ರೇಸ್‌ನ ಪ್ರಮುಖ ಉದ್ದೇಶವಾಗಿತ್ತು.

ವಿದ್ಯಾಭ್ಯಾಸವನ್ನು ಪಡೆದ ಸಮೂಹಕ್ಕೆ ಸಂಸ್ಥೆಯಲ್ಲಿ ರಾಜಕೀಯಕ್ಕಿಂತ ಸಾಮಾಜಿಕ ವಿಚಾರವೇ ಹೆಚ್ಚು ಪ್ರಮುಖವಾಗಿತ್ತು. ದಕ್ಷಿಣ ಆಫ್ರಿಕಾದಿಂದ ಆಗಮಿಸಿದ ಗಾಂಧೀಜಿಗೆ ಬ್ರಿಟಿಷರಿಂದ ನ್ಯಾಯ ದೊರಕಿಸಬೇಕೆಂಬ ಹಂಬಲವಿತ್ತೇ ಹೊರತು ಸ್ವರಾಜ್ಯವಾಗಿರಲಿಲ್ಲ. ಗೋಪಾಲಕೃಷ್ಣ ಗೋಖಲೆ ಮತ್ತು ಬಾಲ ಗಂಗಾಧರ ತಿಲಕರ ನಂತರ ಗಾಂಧೀಜಿಯವರ ಕೈಗೆ ಕಾಂಗ್ರೇಸ್ ಸಂಸ್ಥೆ ಬಂದ ಮೇಲೆ ಅಸ್ಪೃಶ್ಯತಾ ನಿವಾರಣೆಗಾಗಿ, ಹಿಂದು-ಮುಸ್ಲಿಂ ಐಕ್ಯತೆಗಾಗಿ, ಎಷ್ಟೋ ಸಲ ಉಪವಾಸ ಕುಳಿತರೇ ವಿನಃ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಅಲ್ಲ. ಸತ್ಯ-ನ್ಯಾಯ-ಅಹಿಂಸೆಗಳ ರಾಮರಾಜ್ಯ ನಿರ್ಮಾಣ ಅವರದು. ಪ್ರತಿಯೊಬ್ಬನ ಹೃದಯದಲ್ಲಿ ಪರಿವರ್ತನೆಯಾಗಬೇಕು, ಆ ದೃಷ್ಟಿಯಲ್ಲಿ ನಿಜವಾದ

ಸಮಾಜ ಸುಧಾರಕರಾದರು ಮತ್ತು ಮಹಾತ್ಮರೇ ಆದರು ಎಂಬುದಾಗಿ ಶ್ರೀರಂಗರು ಗಾಂಧೀಜಿಯ ವ್ಯಕ್ತಿತ್ವ ಮತ್ತು ಕಾಂಗ್ರೇಸ್ ಸಂಸ್ಥೆಯ ಉದ್ದೇಶಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಗಾಂಧೀಜಿಯವರನ್ನು ರಾಜಕೀಯ ನೇತಾರನಾಗಿ ನೋಡದೆ ಸಾಮಾಜಿಕ ಪರಿವರ್ತನೆಯ ಹರಿಕಾರನಾಗಿ ನೋಡಿದ್ದಾರೆ.

ನರಸಿಂಹವಲೋಕ ೩ ರಲ್ಲಿ ಸಾಹಿತ್ಯವನ್ನು ಮತ್ತು ಅದರ ಧೋರಣೆಯನ್ನು ಕುರಿತಂತೆ ಚರ್ಚಿಸಿದ್ದಾರೆ. ಪ್ರಗತಿಶೀಲ ಕಾಲಘಟ್ಟದ ಸೃಜನಶೀಲ ಮತ್ತು ವಿಚಾರ ಸಾಹಿತ್ಯದ ಧೋರಣೆಗಳಿಗೆ ಸಂಬಂಧಿಸಿದ್ದು ಸಮಾಜಕ್ಕಾಗಿ ಕಲೆಯೇ ಹೊರತು ಕಲೆಗಾಗಿ ಕಲೆಯಲ್ಲ ಎಂಬ ತಾತ್ವಿಕ ನಿಲುವನ್ನು ಈ ಕೆಳಗಿನ ಸಾಹಿತ್ಯದ ವಿಚಾರವಾಗಿ ಸಂಗ್ರಹಿಸಬಹುದು:

- ವ್ಯಾವಹಾರಿಕ ಜೀವನದ ಕಟ್ಟುನಿಟ್ಟುಗಳನ್ನು ಸಾಹಿತ್ಯವು ಮೀರಿ ನಿಲ್ಲಬೇಕು.
- ಸಾಮಾಜಿಕ ಜೀವನದ ಕಟ್ಟುನಿಟ್ಟುಗಳನ್ನು ಸಾಹಿತಿಯು ಮೀರಬೇಕು.
- ಸಾಹಿತ್ಯವು ಜೀವನಕ್ಕೆ ಸಂಬಂಧಿಸಿದೆ.
- ಮಾನವನ ವ್ಯವಹಾರದಲ್ಲಿ ರಾಜಕಾರಣಕ್ಕೆ ಮಹತ್ವವಿರುವ ಹಾಗೆ ಸಾಹಿತ್ಯವು ರಾಜಕಾರಣದ ಸಂಬಂಧವನ್ನು ತಪ್ಪಿಸಲಾಗದು.
- ದೇಶದ ಸ್ವಾತಂತ್ರ್ಯದ ಸಂಪಾದನೆಯಲ್ಲಿ ಮಿಕ್ಕ ಎಲ್ಲಾ ಕಲೆಗಳು ಯಾವ ಪಾತ್ರವನ್ನು ವಹಿಸಿವೆಯೋ ಅದೇ ಪಾತ್ರವನ್ನು ಸಾಹಿತ್ಯವು ವಹಿಸಿದೆ.
- ಸಾಹಿತ್ಯವು ಪ್ರತಿಬಿಂಬವಲ್ಲ, ಸಾಹಿತ್ಯವು ಸ್ಫೂರ್ತಿಯೂ ಅಲ್ಲ, ಮನುಷ್ಯನ ಇತರ ಚಟುವಟಿಕೆಗಳಂತೆಯೇ ಸಾಹಿತ್ಯವೂ ಕೂಡಾ.
- ಸಾಹಿತ್ಯದ ವಿಷಯವು ವ್ಯಕ್ತಿಯ ಪರಿಪೂರ್ಣ ಜೀವನಕ್ಕೆ ಸಂಬಂಧಿಸಿದೆ ಹೊರತು ವ್ಯಕ್ತಿಗಲ್ಲ.
- ಸಾಹಿತ್ಯ ಕಲೆಯಾಗಿದೆ, ಓದುಗನನ್ನು ಜೀವನ ಪರಿಪೂರ್ಣತೆಗೆ ಇಳಿಸಿದರೆ ಅದು ಕಲೆ, ಪರಿಪೂರ್ಣತೆಗೆ ಇಳಿಸದ ಸಾಹಿತ್ಯ ಮಾದಕ ದ್ರವ್ಯದ ಒಂದು ಮಾದರಿ. ಇವೆರಡನ್ನು ಗುರುತಿಸುವ ಕೆಲಸ ವಿಮರ್ಶಕನದಾಗಿದೆ.

ಶ್ರೀರಂಗರು ಬರೆದ ಜೀವನ ಚರಿತ್ರೆಗಳೂ ಎರಡು. ೧೯೩೦ರಲ್ಲಿ ಬರೆದ ಜೀವನ ಚರಿತ್ರೆ ತರುಣ ತುರ್ಕಸ್ತಾನ ಅರ್ಥಾತ್ ಕೆಮಾಲ್ ಪಾಶಾ, ಮತ್ತೊಂದು ನಮ್ಮ ನೆಚ್ಚಿನ ನೆಹರೂ. ಪ್ರಗತಿಶೀಲ ಧೋರಣೆಯನ್ನು ಹೊಂದಿದ್ದ ಶ್ರೀರಂಗರು ಸರ್ವಾಧಿಕಾರಿಯಾಗಿದ್ದ ಕೆಮಾಲ್ ಪಾಶಾನ ಜೀವನಚರಿತ್ರೆ ಬರೆಯಲು ಕಾರಣವೇನೆಂದು ತಿಳಿಸಿದ್ದಾರೆ. ರಾಜಕೀಯ ಸ್ವಾತಂತ್ರ್ಯದಿಂದ ದೇಶ ಅಭಿವೃದ್ಧಿ ಕಾಣಲು ಸಾಧ್ಯವಿಲ್ಲ. ತುರ್ಕಸ್ತಾನ ದಾರಿದ್ರ್ಯ, ಅಜ್ಞಾನ, ಮೌಢ್ಯ, ಧಾರ್ಮಿಕತೆಗಳ ಮೇಲೆ ವಿಜಯ ಸ್ಥಾಪಿಸಿ ೨೦

ವರ್ಷಗಳಲ್ಲಿ ಅಭಿವೃದ್ಧಿ ಕಂಡ ರಾಷ್ಟ್ರವಾಗಿರುವುದರಿಂದ ಭಾರತೀಯರಿಗೆ ಒಂದು ಮಾದರಿಯಾಗಬಹುದೇನೋ ಎಂಬ ವಿಶ್ವಾಸ ಅವರಿಗಿದೆ.

ಈ ಜೀವನ ಚರಿತ್ರೆಯಲ್ಲಿ ಕಲ್ಪಾಂತ ಪ್ರಲಯ, ನವಯುಗ ನಿರ್ಮಾಣ, ವಿರಾಟ ಪುರುಷ ಎಂಬ ಮೂರು ಭಾಗಗಳಿದ್ದು ಮೊದಲನೆಯ ಭಾಗ ಕೆಮಾಲ ಪಾಶಾ ಬಾಲ್ಯ, ಶಿಕ್ಷಣ, ಹೋರಾಟ, ಗ್ರೀಕರನ್ನು ಓಡಿಸಿ ಅಧಿಕಾರಕ್ಕೆ ಬಂದದ್ದು. 'ಐಕ್ಯ ಮತ್ತು ಪ್ರಗತಿ' 'ಮಾತೃ ಭೂಮಿ' ಎಂಬ ಗುಪ್ತ ಸಂಸ್ಥೆಗಳ ಜೊತೆಗಿನ ಒಡನಾಟ ನ್ಯಾಷನಲ್ ಪಾರ್ಟಿ ಸಂಘಟನೆಯ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಎರಡನೆಯ ಅಧ್ಯಾಯದಲ್ಲಿ 'ನವಯುಗ ನಿರ್ಮಾಣ' ದಲ್ಲಿ ಕೆಮಾಲನು ತುರ್ಕಸ್ತಾನಕ್ಕೆ ತಂದ ಕ್ರಾಂತಿಕಾರಕ ಬದಲಾವಣೆಗಳನ್ನು ವಿವರಿಸಿದ್ದಾರೆ. ಪ್ರಜಾ ಪ್ರಭುತ್ವ ಮತ್ತು ಸರ್ವಾಧಿಕಾರತ್ವ ಎಂಬ ತಾತ್ವಿಕ ಕಲ್ಪನೆಗಳಿಗೆ ಜರ್ಮನಿಯ ಹಿಟ್ಲರ್ ಮತ್ತು ಇಟಲಿಯ ಮುಸಲೋನಿ ಸುಶಿಕ್ಷಿತರಾಗಿದ್ದರೂ ಸರ್ವಾಧಿಕಾರಿಯಾಗಿದ್ದರು. ಕೆಮಾಲ ಪಾಶಾ ಅಷ್ಟು ಸುಶಿಕ್ಷಿತನಲ್ಲದಿದ್ದರೂ ಸರ್ವಾಧಿಕಾರಿಯಾಗಿರಲಿಲ್ಲ. ಪ್ರಜಾಪ್ರಭುತ್ವ ಮಾದರಿಯಲ್ಲಿ ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಸ್ತ್ರೀಯರಿಗೆ ಶಿಕ್ಷಣ, ಸ್ಥಾನಮಾನ ನೀಡುವ ಮೂಲಕ ರಾಷ್ಟ್ರ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಸರ್ವಾಧಿಕಾರಿ ಧೋರಣೆಗೆ ಸುಶಿಕ್ಷಿತ ಅಥವಾ ಸುಶಿಕ್ಷಿತನಲ್ಲ ಎಂಬುದು ಮುಖ್ಯವಲ್ಲ, ಅದು ಒಂದು ಮನೋಧೋರಣೆಯಾಗಿದೆ, ಅನಕ್ಷರಸ್ಥನಾದರೂ ಪ್ರಜಾಪ್ರಭುತ್ವ ಮಾದರಿಯ ದೃಷ್ಟಿಕೋನವನ್ನು ಕೆಮಾಲ್ ಪಾಶಾ ಹೊಂದಿದ್ದ ಎಂಬುದಾಗಿ ಚರ್ಚಿಸಿದ್ದಾರೆ. ಈ ಜೀವನ ಚರಿತ್ರೆಯು ಕೆಮಾಲ್ ಪಾಶಾ ಬದುಕಿದ್ದಾಗ ಬರೆದ ಜೀವನಚರಿತ್ರೆಯಾಗಿದೆ. ಕೆಮಾಲ ಪಾಶಾನನ್ನು ಸರ್ವಾಧಿಕಾರಿಯಾಗಿ ನೋಡದೆ ಅಭಿವೃದ್ಧಿಯ ಹರಿಕಾರನೆಂದೇ ಶ್ರೀರಂಗರು ನೋಡಿದ್ದಾರೆ.

ಶ್ರೀರಂಗರು ೧೯೬೭ರಲ್ಲಿ ಬರೆದ ಮತ್ತೊಂದು ಜೀವನಚರಿತ್ರೆ ನಮ್ಮ ನೆಚ್ಚಿನ ನೆಹರೂ. ಇದೊಂದು ಚಿಕ್ಕ ಕೃತಿಯಾಗಿದ್ದರೂ ನೆಹರೂರವರ ವ್ಯಕ್ತಿತ್ವವನ್ನು ಅನಾವರಣ ಮಾಡುವ ಕೃತಿಯಾಗಿದೆ. ೧೯೨೦ರಲ್ಲಿ ಗಾಂಧೀಜಿಯವರು ಅಸಹಕಾರ ಚಳುವಳಿಯಿಂದ ನೆಹರೂರವರಿಗೆ ದೇಶದ ವಾಸ್ತವ ಚಿತ್ರಣ ಗೊತ್ತಾಗಿದ್ದು, ಶ್ರೀಮಂತ ಕುಟುಂಬದಲ್ಲಿ ಬೆಳೆದು, ೧೬ನೇ ವಯಸ್ಸಿನಲ್ಲಿ ಇಂಗ್ಲೆಂಡಿನಲ್ಲಿ ಶಿಕ್ಷಣ ಪಡೆದ, ದೇಶದ ಕಲ್ಪನೆ ಗೊತ್ತಿಲ್ಲದ ನೆಹರೂರವರಿಗೆ ಹೇಗೆ ದೇಶಾಭಿಮಾನ ಮೂಡಬೇಕು? ಎಂದು ಪ್ರಶ್ನಿಸುತ್ತಾರೆ. ಅಸಹಕಾರ ಚಳುವಳಿಯಲ್ಲಿ ಭಾಗವಹಿಸುವ ಮೂಲಕ ನೆಹರೂರವರಿಗೆ ದೇಶದ ಸಂಚಾರದಿಂದಾಗಿ ಅವರಿಗೆ ದೇಶದ ಮೇಲೆ ಅಭಿಮಾನ ಚಿಗುರೊಡೆಯಿತು.

ಭಾರತೀಯ ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯಲ್ಲಿ ೧೯೨೦ರಿಂದ ೧೯೪೮ರವರೆಗೆ ಗಾಂಧಿಯುಗ ಎಂದು ಇತಿಹಾಸಕಾರರು ಕರೆಯುತ್ತಾರೆ. ಆದರೆ ಈ ಜೀವನ ಚರಿತ್ರೆಯಲ್ಲಿ ೧೯೨೦ ರಿಂದ ೧೯೪೮ರವರೆಗಿನ ಕಾಲಘಟ್ಟವನ್ನು ಗಾಂಧಿ-ನೆಹರೂ ಯುಗವೆಂದು ಗುರುತಿಸಿರುವುದು ಒಂದು ವಿಶೇಷವಾಗಿದೆ. ಗಾಂಧಿ ಮತ್ತು ಜವಾಹರಲಾಲ್ ನೆಹರೂರವರ ಒಡನಾಟದ ವಸ್ತುವೇ ಈ ಕೃತಿಯಲ್ಲಿದೆ. ೧೯೧೮ರಲ್ಲಿ ಗಾಂಧಿಯ ಪರಿಚಯವಾದಾಗಿನಿಂದ ಹಿಡಿದು ಅವರೊಡನೆ ಹಳ್ಳಿಗಳ ಸಂಚಾರದಿಂದ ಆರಂಭವಾಗಿ, ಅಸಹಕಾರ ಚಳುವಳಿ, ಚೌರಿಚೌರ ಘಟನೆ, ರೌಲೆಟ್ ಕಾಯಿದೆಯ ವಿರುದ್ಧ ಚಳುವಳಿ, ಜೈಲುವಾಸ, ಸ್ವಾತಂತ್ರ್ಯ ನಂತರ ಮೊದಲ ಪ್ರಧಾನಿಯಾಗುವವರೆಗಿನ ನೆಹರೂರವರ ವ್ಯಕ್ತಿತ್ವವನ್ನು ಪರಿಚಯಿಸುತ್ತದೆಯೇ ಹೊರತು ನೆಹರೂ ಸಮಕಾಲೀನರಾದ ಸುಭಾಷ್‌ಚಂದ್ರ ಬೋಸ್, ವಲ್ಲಭಭಾಯಿ ಪಟೇಲ್ ಮೊದಲಾದವರ ನಡುವಿನ ಸಂಬಂಧ,

ಧೋರಣೆಯನ್ನು ತಿಳಿಸುವುದಿಲ್ಲ. ಕಾಂಗ್ರೆಸ್ ಪಕ್ಷ ಬಿಟ್ಟರೆ ಬೇರೆ ಯಾವ ಸಂಘ ಸಂಸ್ಥೆಗಳ ನಾಯಕರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವಿಚಾರಗಳು ತಿಳಿಯುವುದಿಲ್ಲ. ನೆಹರೂರವರಿಗೆ ಮಾತ್ರ ಸೀಮಿತವಾದ ಕೃತಿಯಾಗಿದೆ.

ಸಾಹಿತ್ಯ ಮತ್ತು ಶೃಂಗಾರ ಎಂಬ ಲೇಖನದಲ್ಲಿ ಶ್ರೀರಂಗರು ಮಿಕ್ಕ ಪ್ರಾಣಿಗಳಲ್ಲಿ ಬಹಿರಂಗವಾಗಿ ನಡೆಯುವ ಕಾಮದಾಟವು ಮನುಷ್ಯನಲ್ಲಿ ರಹಸ್ಯವಾಗಿ ನಡೆಯುತ್ತಿರುವಾಗ ಶ್ರೇಷ್ಠವಾದರೂ ಅದನ್ನು ವಿವರವಾಗಿ ನಮ್ಮ ಕಣ್ಣೆದುರೇ ನೀಡುತ್ತದೆ ಎಂದು ಯಾವ ಮಡಿವಂತ ಲೇಖಕ ಅದರ ವಿರುದ್ಧ ಸಿಡಿದೆದ್ದ. ಅಶ್ಲೀಲವೆಂದರೆ ಅದು ಸಹಜ ಪ್ರತಿಕ್ರಿಯೆ ಎನ್ನಬಹುದು. ಸಾಹಿತ್ಯವು ಇಟ್ಟುಕೊಂಡ ಧೋರಣೆಯನ್ನು ಅದರ ಹಿನ್ನೆಲೆಯ ತತ್ವವನ್ನು ಅರಿಯದವರು ಹೇಗೆ ಕರೆಯುತ್ತಾರೆ ಎಂದು ಪ್ರಗತಿಶೀಲ ಕಾಲಘಟ್ಟದ ಸಾಹಿತ್ಯದಲ್ಲಿ ಬಂದ ಅನೇಕ ವಿಚಾರಗಳನ್ನು ಅಶ್ಲೀಲ ಸಾಹಿತ್ಯವೆಂದು ಜರಿದ ಮಡಿವಂತ ಸಾಹಿತಿಗಳನ್ನು ಕುರಿತಂತೆ ಸಾಹಿತ್ಯದ ಧೋರಣೆಯಲ್ಲಿ ಯಾವುದೇ ರೀತಿಯ ಶೀಲಾಶ್ಲೀಲ ಎಂಬ ಮಡಿವಂತಿಕೆ ಇರುವುದಿಲ್ಲ. ಅದು ಸಮಾಜವನ್ನು ನೋಡುವ, ಅರ್ಥೈಸುವ ಕ್ರಮದ ಮೇಲೆ ಅವಲಂಬಿತವಾಗಿದೆ ಎಂಬ ಧೋರಣೆಯನ್ನು ಕಾಣಬಹುದು. "ಪಶು-ಪಕ್ಷಿಗಳಲ್ಲಿ ಕಾಮ ಪ್ರವೃತ್ತಿಯನ್ನು ಸೃಷ್ಟಿಯು ನಿಯತಕಾಲಿಕವಾಗಿ ನಿಯಂತ್ರಿಸುತ್ತದೆ. ಆ ನಿಯಂತ್ರಣ ಮಾನವನ ಸಂದರ್ಭದಲ್ಲಿ ಇಲ್ಲ. ಅದಕ್ಕಾಗಿ ಈ ಬಗ್ಗೆ ಸರಿಯಾದುದನ್ನು ಮಾನವರು ಅರಿತುಕೊಳ್ಳುವುದು ಅಗತ್ಯ ಎಂಬುದಕ್ಕಾಗಿ ನಾನು ಕಾಮಸೂತ್ರ ರಚಿಸಿದ್ದೇನೆ ಎಂದು ವಾತ್ಸ್ಯಾಯನನೇ ಹೇಳುತ್ತಾನೆ"[೧೩] ಎಂದು ಅಭಿಪ್ರಾಯಿಸುತ್ತಾರೆ.

ಈ ಹೇಳಿಕೆಯನ್ನು ಗಮನಿಸಿದರೆ ಗೊತ್ತಿಲ್ಲದ ವಿಚಾರಗಳನ್ನು ಸ್ಪಷ್ಟವಾಗಿ ತಿಳಿಯುವ, ಯಾವುದೇ ಮುಜುಗರಕ್ಕೆ ಒಳಪಡದ, ಬದುಕಿನ ವಿವಿಧ ಜ್ಞಾನಗಳ ತಿಳುವಳಿಕೆ, ಇತರ ವಿಷಯಗಳಂತೆ ಮನುಷ್ಯನ ಪ್ರವೃತ್ತಿಗಳಲ್ಲಿ ಕಾಮವು ಸಹಜವೆಂದು ಭಾವಿಸಬೇಕು. ಅದರಲ್ಲಿ ಶೀಲ-ಅಶ್ಲೀಲ ಎಂಬ ವಿಂಗಡಣೆ ಸರಿಯಾದುದಲ್ಲ ಎಂಬುದಾಗಿದೆ.

'ಸಾಹಿತ್ಯ ಮತ್ತು ಪ್ರಗತಿ' ಎಂಬ ಲೇಖನದಲ್ಲಿ ಪ್ರಗತಿಶೀಲ ಎಂಬುದು ಪ್ರತಿಭೆಯಿಂದ ಹೊರಹೊಮ್ಮಿದ ವಿಚಾರವಲ್ಲ, ಅದು ಒಂದು ದರ್ಶನ ಮಾತ್ರ, ದೃಷ್ಟಿಕೋನ ಆಗಿದೆ.

- ಸಾಹಿತ್ಯದಲ್ಲಿರುವಂತೆ ಕಲೆಗಳಲ್ಲಿ ಮತ್ತು ಸಾಮಾಜಿಕ ಜೀವನದಲ್ಲಿ ಹಾಗೂ ರಾಜಕಾರಣದಲ್ಲಿಯೂ ಪ್ರಗತಿ ಪಂಥವನ್ನು ಗುರುತಿಸಬೇಕು.

- ವ್ಯಕ್ತಿ, ವ್ಯಕ್ತಿಗಳಲ್ಲಿ ಸಮಾನತೆ ಇದೆ. ವ್ಯಕ್ತಿ ಪೂಜೆಗೆ ಅವಕಾಶವಿಲ್ಲ. ಇಲ್ಲಿ ವಿಚಾರ ಸ್ವಾತಂತ್ರ್ಯವಿದೆ. ವಿಚಾರ ವಿಧೇಯತೆ ಇಲ್ಲ.

ಎಂಬ ಅಂಶಗಳು ಪ್ರಗತಿ ಕಾಲಘಟ್ಟದ ವಿಚಾರ ಸಾಹಿತ್ಯದ ನಿಲುವುಗಳನ್ನು ಕಾಣಬಹುದಾಗಿದೆ.

ತ. ರಾ. ಸು. ಎಂಬ ಸಂಕ್ಷಿಪ್ತ ಹೆಸರಿನಿಂದ ಪ್ರಗತಿಶೀಲ ಸಾಹಿತ್ಯದ ಮೂಲಕ ಕನ್ನಡ ನಾಡಿನಲ್ಲಿ ಚಿರಪರಿತರಾದ ತಳುಕಿನ ರಾಮಸ್ವಾಮಯ್ಯ ಸುಬ್ಬಣ್ಣನವರು. ಕಾದಂಬರಿಗಳ ಮೂಲಕ

ತನ್ನದೇಯಾದ ರೀತಿಯಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಮುಖ್ಯ ಅಂಶವಾಗಿಸಿಕೊಂಡು ಬರೆದವರಲ್ಲಿ ಪ್ರಮುಖರು. ಸಮಾಜದ ಪ್ರಗತಿಯನ್ನು ಮುಖ್ಯ ವಸ್ತುವಾಗಿಟ್ಟುಕೊಂಡು ಬರೆದ ಅವರ ಸೃಜನಶೀಲ ಬರವಣಿಗೆಯಲ್ಲಿ ವೇಶ್ಯಾ ಸಮಸ್ಯೆ, ಬಡತನ ಸಮಸ್ಯೆ, ಹಸಿವಿನ ಸಮಸ್ಯೆ, ಜಾತಿಯ ಸಮಸ್ಯೆ, ರಾಜಕೀಯ ರಂಗದ ಮೋಸ, ದ್ರೋಹ ವಂಚನೆಗಳನ್ನು ಅರ್ಥಪೂರ್ಣವಾಗಿ ತಿಳಿಸಿದ್ದಾರೆ. ಕಲೆ, ಸಂಗೀತ, ನಾಟ್ಯಗಳ ಉಳಿವನ್ನು ಕುರಿತಂತೆ ಅವರ ಬರವಣಿಗೆಯ ಆಶಯಗಳಲ್ಲಿ ಸೇರಿವೆ.

ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ತ. ರಾ. ಸು. ರವರು ಬರೆದ ಜೀವನ ಚರಿತ್ರೆ ಅ. ನ. ಕೃ., ರೇಖಚಿತ್ರಗಳು, ಸ್ನೇಹಸಮನ್ವಯ ಪ್ರಮುಖವಾದವು. ಅ. ನ. ಕೃ. ಎಂಬ ಜೀವನಚರಿತ್ರೆಯಲ್ಲಿ ತಮ್ಮ ಸಮಕಾಲೀನರಾದ ಮಾರ್ಗದರ್ಶಿಯೂ, ಸ್ನೇಹಿತರೂ, ಗುರುವೂ ಆಗಿದ್ದ ಅ. ನ. ಕೃ. ರವರ ಬದುಕಿನ ಬಗ್ಗೆ ತಿಳಿಸುವಂತಹ ಕೃತಿಯಾಗಿದೆ. ಅ. ನ. ಕೃ. ರವರ ಜೀವನದೊಂದಿಗೆ ಅವರು ಬರೆದ ನಾಟಕ, ಕಾದಂಬರಿಗಳು, ಸಣ್ಣಕತೆಗಳನ್ನು ವಿಶ್ಲೇಷಣೆ ಮಾಡಿದ್ದಾರೆ. ಈ ಕೃತಿಯಲ್ಲಿ ತ. ರಾ.. ಸು. ರವರ ವಿಮರ್ಶಕನ ದೃಷ್ಟಿಕೋನವನ್ನು ಅರಿಯಬಹುದು.

ಸಮಕಾಲೀನ ಸಾಹಿತ್ಯ ಜೀವನಚರಿತ್ರೆಯನ್ನು ಬರೆಯಬೇಕಾದಾಗ ಕೆಲವೊಮ್ಮೆ ವ್ಯಕ್ತಿಪೂಜೆಯು ಮೂಡುವುದು ಸಹಜ. ಅದರೆ ತ. ರಾ. ಸು. ಬರೆದ ಅ. ನ. ಕೃ. ಕೃತಿಯಲ್ಲಿ ಸಮಕಾಲೀನ ಸಾಹಿತಿಯ ವ್ಯಕ್ತಿತ್ವವನ್ನು ನಿರೂಪಿಸುತ್ತಾರೆ. ೧೯೪೭೦ರಲ್ಲಿ ರಚಿಸಿರುವ ಈ ಕೃತಿಯಲ್ಲಿ ಸಮಕಾಲೀನ ಲೇಖಕರ ಕೃತಿಗಳನ್ನು ಆಳವಾಗಿ ಅಭ್ಯಾಸ ಮಾಡಿ ಅವುಗಳ ವಿಶ್ಲೇಷಣೆ ಮಾಡಿರುವುದು ಒಂದು ವಿಶೇಷವಾದ ಅಂಶವಾಗಿದೆ. ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಆ ಕಾಲಘಟ್ಟದಲ್ಲಿ ಎದ್ದಿದ್ದ ಶೀಲ-ಅಶ್ಲೀಲ ಎಂಬ ಸಾಹಿತ್ಯ ಧೋರಣೆಯನ್ನು ಕುರಿತಂತೆ ಪ್ರಗತಿಶೀಲ ಎಂಬ ಸಂಕ್ಷಿಪ್ತ ಅಧ್ಯಾಯದಲ್ಲಿ ಈ ರೀತಿ ಚರ್ಚಿಸಿದ್ದಾರೆ:

"ಲೈಂಗಿಕ ವಿಚಾರವನ್ನು ಸಾಹಿತ್ಯದ ವಲಯದಲ್ಲಿ ಮುಚ್ಚುಮರೆ ಮಾಡಬಾರದು. ಇಂತಹ ಮುಚ್ಚುಮರೆಯೇ ವಿಕೃತ ಕಾಮದ ತಾಯಿಯೆಂದು, ಆದ್ದರಿಂದ ಈ ವಿಷಯದಲ್ಲಿ ಜನರಿಗೆ ಸ್ಪಷ್ಟವಾದ ತಿಳುವಳಿಕೆಯನ್ನು ಕೊಡಬೇಕು. ಮಕ್ಕಳಿಗೆ ಬುದ್ಧಿಶಕ್ತಿಯು ಬೆಳೆಯುವ ಕಾಲದಲ್ಲಿಯೇ ತಾಯಿಯೇ ಅವರಿಗೆ ತಿಳಿಸಬೇಕೆಂದು ಕೆನೆತ್ ವಾಕರ್, ಸಿಗ್ಮಂಡ್ ಫ್ರಾಯ್ಡ್, ಹೆವಲಾಕ್ ಎಲ್ಲಿಸ್ ಮೊದಲಾದ ಲಿಂಗಶಾಸ್ತ್ರದ ವಿಜ್ಞಾನಿಗಳು ಹೇಳುತ್ತಾರೆ. ಹಾಗಾಗಿ ತಾಯಿ ಮಾಡಬೇಕಾದ ಕೆಲಸವನ್ನು ಪ್ರಗತಿಶೀಲ ಸಾಹಿತ್ಯ ಮಾಡುತ್ತಿದೆ. ಇದು ತಪ್ಪೇ?"[೧೪] ಎಂದು ಕೆಲವು ಮಡಿವಂತ ಸಾಹಿತಿಗಳಿಗೆ ಪ್ರಶ್ನಿಸುತ್ತಾರೆ.

ಪ್ರಸ್ತುತ ಕಾಲಘಟ್ಟದಲ್ಲಿಯೂ ಅನೇಕ ಶೈಕ್ಷಣಿಕ ತಜ್ಞರು, ಮನೋವಿಜ್ಞಾನಿಗಳು, ಬುದ್ಧಿಜೀವಿಗಳು ಹದಿಹರೆಯದವರಿಗೆ ಲೈಂಗಿಕ ಶಿಕ್ಷಣ ಪ್ರೌಢ ಶಿಕ್ಷಣ ಹಂತದಲ್ಲಿಯೇ ನೀಡಬೇಕು ಎಂಬ ವಾದವನ್ನು ಗಮನಿಸಿದರೆ ತ. ರಾ. ಸು. ಮೊದಲಾದ ಪ್ರಗತಿಶೀಲ ಕಾಲಘಟ್ಟದ ಲೇಖಕರು ಅಂದೇ ಸಾಹಿತ್ಯದ ಮೂಲಕ ಜನರಿಗೆ ಲೈಂಗಿಕ ಶಿಕ್ಷಣದ ಸ್ಪಷ್ಟ ತಿಳುವಳಿಕೆ ನೀಡುವ ಪ್ರಯತ್ನದಲ್ಲಿ ತೊಡಗಿದರು. ಈ ಬಗ್ಗೆ ಜನತೆಗೆ ಶಿಕ್ಷಣ ಕೊಡುವಲ್ಲಿ ಸಾಹಿತಿಗೆ ಜವಾಬ್ದಾರಿಯಿದೆ ಮತ್ತು ಈ ಕರ್ತವ್ಯವನ್ನು ಮಾಡಬೇಕೆಂಬುದೇ ಅ. ನ. ಕೃಷ್ಣರಾಯರ ನಂಬಿಕೆಯೂ ಆಗಿತ್ತು ಎಂಬುದಾಗಿ ದಾಖಲಿಸಿದ್ದಾರೆ.

ಅ. ನ. ಕೃ. ರವರ ವಿಚಾರ ಸಾಹಿತ್ಯವನ್ನು 'ವಿಮರ್ಶಕ' ಎಂಬ ಅಧ್ಯಾಯದಲ್ಲಿ ಕನ್ನಡ-ಕನ್ನಡಿಗ-ಕರ್ನಾಟಕದ ಹಿನ್ನೆಲೆಯಲ್ಲಿ ಅವರ ಕೆಲವು ಕೃತಿಗಳ ಹೇಳಿಕೆಯಲ್ಲಿ ವಿಶ್ಲೇಷಿಸಿದ್ದಾರೆ. ಅವರಿಗಿದ್ದ ಕನ್ನಡಪರ ಕಾಳಜಿ, ಕನ್ನಡವನ್ನು ಕನ್ನಡನಾಡಿನಲ್ಲಿ ಗಟ್ಟಿಗೊಳಿಸುವ ಧೋರಣೆಯನ್ನು ವಿಮರ್ಶಿಸಿದ್ದಾರೆ. ಅ. ನ. ಕೃ. ಜೀವನ ಚರಿತ್ರೆಯಲ್ಲಿ ತ. ರಾ. ಸು. ರವರು ಅ. ನ. ಕೃಷ್ಣರಾಯರ ವ್ಯಕ್ತಿತ್ವವನ್ನು ವೈಭವೀಕರಿಸದೆ ವಿಶ್ಲೇಷಿಸಿರುವುದು ಮತ್ತು ವಿಮರ್ಶಿಸಿರುವುದು ಅವರ ವಿಮರ್ಶಾ ದೃಷ್ಟಿಕೋನವನ್ನು ತಿಳಿಸುತ್ತದೆ. ಇದೇ ಮಾದರಿಯಲ್ಲಿ ನರಹಳ್ಳಿ ಬಾಲಸುಬ್ರಮಣ್ಯಂರವರ 'ಅ. ನ. ಕೃ. ಮತ್ತು ಕನ್ನಡ ಸಂಸ್ಕೃತಿ' ಎಂಬ ಕೃತಿಯು ತ. ರಾ. ಸು. ಬರೆದ ಅ. ನ. ಕೃ. ಜೀವನಚರಿತ್ರೆಯ ಮಾದರಿಯ ರೂಪದಲ್ಲಿಯೇ ಇರುವುದನ್ನು ಗಮನಿಸಿದರೆ ನರಹಳ್ಳಿ ಬಾಲಸುಬ್ರಮಣ್ಯಂರವರಿಗೆ ಈ ಗ್ರಂಥವೇ ಪ್ರಭಾವ ಬೀರಿರಬಹುದು.

ತ. ರಾ. ಸು. ಅವರ ವೈಚಾರಿಕತೆ ಮತ್ತು ವೈಜ್ಞಾನಿಕ ದೃಷ್ಟಿಕೋನದಿಂದ ಸಮಾಜವನ್ನು ನೋಡುವ, ನೈತಿಕತೆಯನ್ನು ಎತ್ತಿ ಹಿಡಿಯುವ ವಸ್ತು ಪಾತ್ರಗಳನ್ನು ತಮ್ಮ ಬರಹದಲ್ಲಿ ಅಳವಡಿಸಿಕೊಂಡವರು. ಸಮಾಜದ ಆರೋಗ್ಯಕರ ಬೆಳವಣಿಗೆಗೆ ಜೀವನ ಆದರ್ಶವಾಗಿಸಿಕೊಂಡವರನ್ನು ಕುರಿತಂತೆ ದೇಶದ ರಾಜಕೀಯ ಕ್ಷೇತ್ರದ ಮಹಾನ್ ವ್ಯಕ್ತಿಗಳ ಕುರಿತು ಬರೆದ ಬರಹ ರೂಪದ ಕೃತಿಯೇ ರೇಖಾಚಿತ್ರ. ರೇಖಾಚಿತ್ರ ಎಂಬ ಹೆಸರಿದ್ದರೂ ಇವುಗಳನ್ನು ಲೇಖನಗಳೆಂದು ಕರೆಯಬಹುದು. ಈ ಗ್ರಂಥದಲ್ಲಿ ನೇತಾಜಿ, ವಲಭಭಾಯಿ ಪಟೇಲರು, ಮದನಮೋಹನ ಮಾಳವೀಯ, ಅಸಫ್ ಆಲಿಯವರನ್ನು ಕುರಿತು ಬರೆದ ವ್ಯಕ್ತಿ ಚಿತ್ರಗಳಾಗಿವೆ.

ಪ್ರಸ್ತುತ ರಾಜಕೀಯ ವ್ಯಕ್ತಿಗಳ ಕೆಸರೆರಚಾಟ, ದೂರದೃಷ್ಟಿತನವಿಲ್ಲದ, ಜಾತೀಯತೆ, ಮತೀಯತೆ, ಸ್ವಾರ್ಥ, ಕುಟುಂಬ ರಾಜಕಾರಣ ಇವುಗಳನ್ನು ಗಮನಿಸಿದಾಗ ತ. ರಾ. ಸು. ರವರು ಬರೆದ ರೇಖಾ ಚಿತ್ರದಲ್ಲಿನ ವ್ಯಕ್ತಿಗಳು ತಮ್ಮ ಜೀವನದಲ್ಲಿ ಸಾಧಿಸಿದ ಸಾಧನೆಯ ಚಿತ್ರದ ಜೊತೆಗೆ ಈ ಮಾದರಿಯ ವ್ಯಕ್ತಿಗಳ ಬದುಕು ಮುಂದಿನ ಪೀಳಿಗೆಯ ಮೇಲೆ ಪ್ರಭಾವ ಬೀರಲೆಂದು ಬರೆದ ಕೃತಿಯಾಗಿದೆ. ಹೊಸ ನಾಡನ್ನು, ಹೊಸ ಸಮಾಜವನ್ನು ಕಟ್ಟುವಲ್ಲಿ ಈ ರೀತಿಯ ನಾಯಕರು ಪ್ರಸ್ತುತ ಸಮಾಜಕ್ಕೆ ಅವಶ್ಯಕ ಎಂಬ ಭಾವನೆಯನ್ನು ಅಂದೇ ತ. ರಾ. ಸು. ರವರು ಕಂಡಿದ್ದಾರೆ. ಆ ರೀತಿಯ ವ್ಯಕ್ತಿಗಳ ವ್ಯಕ್ತಿತ್ವವು ಪ್ರಭಾವ ಬೀರುವಂತಾಗಬೇಕು ಎಂಬ ಆಶಯವು ಈ ವ್ಯಕ್ತಿ ಚಿತ್ರಗಳಲ್ಲಿ ಅಡಗಿದೆ.

'ಸ್ನೇಹ ಸಮನ್ವಯ' ಎಂಬ ಕೃತಿಯು ಕೂಡಾ ವ್ಯಕ್ತಿ ಚಿತ್ರಗಳಾಗಿದ್ದು ಸಿದ್ಧವನಹಳ್ಳಿ ನಿಜಲಿಂಗಪ್ಪನವರ ಸರಳ ವ್ಯಕ್ತಿತ್ವವನ್ನು ವಿಶ್ಲೇಷಿಸುತ್ತಾರೆ. ಎಸ್. ನಿಜಲಿಂಗಪ್ಪನವರು ಮೈಸೂರು ರಾಜ್ಯದ ರಾಜಕೀಯದಲ್ಲಿ ಗುರುತಿಸಿಕೋಂಡಿದ್ದು ಮೈಸೂರು ರಾಜ್ಯಕ್ಕೆ ಲಾಭ, ಚಿತ್ರದುರ್ಗಕ್ಕೆ ನಷ್ಟ ಎಂದು ಪರಿಭಾವಿಸುವ ಅವರು ಕಾಂಗ್ರೇಸಿನ ವಿಶಾಲ ರಾಜಕಾರ್ಯ, ಹತ್ತು ಹಲವು ಕಡೆಯು ಹರಿದು ಹಂಚಿ ಹೋಗುವುದಕ್ಕಿಂತ ಚಿತ್ರದುರ್ಗ ಜಿಲ್ಲೆಗೆ ಕೇಂದ್ರೀಕೃತವಾಗಿದ್ದರೆ ಮಾದರಿ ಜಿಲ್ಲೆಯಾಗುತ್ತಿತ್ತು ಎಂದು ತ. ರಾ. ಸು. ಭಾವಿಸುತ್ತಾರೆ. ರಾಜಕೀಯದ ಕಾರಣದಿಂದ ಅವರ ಕನ್ನಡ ಭಾಷಾ ಪ್ರೇಮ, ಸಾಹಿತ್ಯ ಅಭಿರುಚಿ, ಹೊರ ಪ್ರಪಂಚಕ್ಕೆ ತೆರೆದುಕೊಳ್ಳಲಿಲ್ಲ ಎಂಬುದಾಗಿ ಒಬ್ಬ ವ್ಯಕ್ತಿಯ ವ್ಯಕ್ತಿತ್ವವು ಒಂದೇ ವಲಯದಲ್ಲಿ ವಿಸ್ತರಿಸಿಕೊಂಡಾಗ ಇನ್ನಿತರ ವ್ಯಕ್ತಿತ್ವದ ಮಜಲುಗಳು ಹೇಗೆ ಗೌಣವಾಗುತ್ತವೆ ಎಂಬುದನ್ನು ವಿಷಾದಿಸುತ್ತಾರೆ.

ಕನ್ನಡದಲ್ಲಿ ಕಣ್ವ ಋಷಿ – ಬಿ. ಎಂ. ಶ್ರೀ ಎಂಬಲ್ಲಿ ಬಿ. ಎಂ. ಶ್ರೀಕಂಠಯ್ಯನವರ ಮರಣದ ವಿಷಯವನ್ನು ಕನ್ನಡದ ಶಕುಂತಲೆ ಕಣ್ವರನ್ನು ಕಳೆದುಕೊಂಡು ತಬ್ಬಲಿಯಾಗಿದೆ ಎಂದು ಮಾರ್ಮಿಕವಾಗಿ ತಿಳಿಸುತ್ತಾರೆ. ಶಕುಂತಲೆಯು ಕಣ್ವರ ಆಶ್ರಯದಲ್ಲಿ ಬೆಳೆದ ಹಾಗೆ ಆಧುನಿಕ ಕನ್ನಡ ಸಾಹಿತ್ಯಕ್ಕೆ ಭಿನ್ನ ಮಾರ್ಗದಲ್ಲಿ ಬೆಳೆಯಲು ಕಾರಣಕರ್ತರಲ್ಲಿ ಒಬ್ಬರಾದ ಬಿ. ಎಂ. ಶ್ರೀ ಯವರನ್ನು ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸುತ್ತಾರೆ.

ತ. ರಾ. ಸು. ರವರು ಕೂಡಾ ಒಬ್ಬ ಗದ್ಯ ಬರಹಗಾರರಾಗಿದ್ದರು. ಗದ್ಯ ಶಿಲ್ಪಿ – ವಿ. ಸೀ. ಎಂಬ ವ್ಯಕ್ತಿ ಚಿತ್ರದಲ್ಲಿ ವಿ. ಸೀತಾರಾಮಯ್ಯನವರು ಗದ್ಯಕಾರರಲ್ಲಿ ಬಹುಮುಖ ಪ್ರತಿಭೆಯಿದೆ. ಪದ್ಯ, ನಾಟಕ, ಶಾಸ್ತ್ರೀಯ, ಅರ್ಥಶಾಸ್ತ್ರ ಹೀಗೆ ಹತ್ತು ಹಲವು ಕೃತಿಗಳನ್ನು ರಚಿಸಿದ್ದಾರೆ. ಕೆಲವು ವಿಶ್ವ ಸಾಹಿತ್ಯ ಮಟ್ಟಕ್ಕೆ ನಿಲ್ಲಬಲ್ಲ ಶಕ್ತಿಯಿದೆ ಎಂದು ಭಾವಿಸುತ್ತಾರೆ. ಒಬ್ಬ ಬರಹಗಾರರನನ್ನು ಒಂದು ಸೀಮಿತ ಸಾಹಿತ್ಯ ಪ್ರಕಾರಕ್ಕೆ ಗೌಣ ಮಾಡಬಾರದು ಎಂಬ ನಿಲುವನ್ನು ಇಲ್ಲಿ ಕಾಣಬಹುದು.

ದೇ. ಜವರೇಗೌಡರನ್ನು ಕುರಿತು ಅವರ ಕನ್ನಡ ಪ್ರೇಮವನ್ನು ಕುರಿತು, ಕರ್ನಾಟಕದ ಆಸ್ತಿ – ಬದಲಿ ನಾರಾಯಣ್ ಎಂಬ ವ್ಯಕ್ತಿಚಿತ್ರದಲ್ಲಿ ದೇವರಾಜ ಅರಸ್‌ರವರ ಮಂತ್ರಿ ಮಂಡಲದಲ್ಲಿ ಶಿಕ್ಷಣ ಮಂತ್ರಿಯಾಗಿದ್ದವರ ಶಿಕ್ಷಣ ಪ್ರೇಮ, ಕನ್ನಡ ಪ್ರೇಮ ಮೊದಲಾದವುಗಳನ್ನು ವಿವರಿಸಿದ್ದಾರೆ. ಮಣಿಪಾಲದ ಮಣಿಫಲ–ಮಾಧವ ಪೈಗಳವರು ಶಿಕ್ಷಣಕ್ಕೆ ಕೊಟ್ಟ ಪ್ರಾಮುಖ್ಯತೆ, ಬ್ಯಾಂಕುಗಳ ಸ್ಥಾಪನೆ ಆ ಮೂಲಕ ನವ ಕರ್ನಾಟಕದ ಅಭಿವೃದ್ಧಿಗೆ ನೀಡಿದ ಕೊಡುಗೆಯನ್ನು ನೆನೆಯುತ್ತಾರೆ. ಶಿಕ್ಷಣವಲಯದಲ್ಲಿ ನೀಡಿದ ವ್ಯಕ್ತಿಗಳ ಕೊಡುಗೆಯನ್ನು ಕುರಿತು ಬರೆದ ಈ ಲೇಖನಗಳಲ್ಲಿ ಶಿಕ್ಷಣದ ಅವಶ್ಯಕತೆಯು ಹೇಗೆ ಮುಖ್ಯ ಎಂಬುದನ್ನು ಪರೋಕ್ಷವಾಗಿ ಸೂಚಿಸಿದ್ದಾರೆ.

ಮಾನವೀಯತೆಯ ಮೂರ್ತಿ ಲೇಖನದಲ್ಲಿ ಮಲ್ಲಾಡಿ ಹಳ್ಳಿಯ ಅನಾಥ ಸೇವಾಶ್ರಮದ ಸ್ವಾಮೀಜಿ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳ ಸೇವಾ ಕಾರ್ಯಗಳು, ಬಂಗಾಳಿ ಹಾಡುಗಾರರಾದ ರವೀಂದ್ರನಾಥ ಟಾಗೋರರ ಹಲವು ಗೀತೆಗಳಿಗೆ ಧ್ವನಿಯಾದ ಪಂಕಜ್ ಮಲ್ಲಿಕ್‌ರವರನ್ನು ಕುರಿತಂತೆ ಮಧು ಸ್ಮೃತಿಯಾದ ಪಂಕಜ್ ಮಲ್ಲಿಕ್‌ರವರು ಗಾನಯೋಗದಲ್ಲಿ ಉತ್ತುಂಗದ ಮಟ್ಟಕ್ಕೇರಿದರು. ಸರಳ ವ್ಯಕ್ತಿತ್ವ, ವಿನಯ–ಸಾಹಸಗಳ ಮಧುರ ಸಮನ್ವಯದ ವ್ಯಕ್ತಿತ್ವವಾಗಿ ಶ್ರೀ ವೀರೇಂದ್ರ ಹೆಗ್ಗಡೆಯವರನ್ನು ಕುರಿತಂತೆ, ಸಮಾನತೆ, ಸಮಾಜವಾದ, ಸಾಮಾಜಿಕ ನ್ಯಾಯದ ಪ್ರತಿಪಾದಕರಾದ ಗೋಪಾಲ ಗೌಡರು, ಸುಸಂಸ್ಕೃತ ಚೇತನವೆಂದು ಹಾ. ಮಾ. ನಾಯಕರ ತಂದೆ ಶ್ರೀನಿವಾಸ ನಾಯಕರ ಪರಿಚಯ, ಚಿತ್ರದುರ್ಗ ಜಿಲ್ಲೆಗೆ ಹೆಸರು ತಂದು ಕೊಟ್ಟವರ ಪಟ್ಟಿ ಹೀಗೆ ದಾಖಲಿಸಿದ್ದಾರೆ.

ಈ ವ್ಯಕ್ತಿ ಚಿತ್ರಗಳಲ್ಲಿ ಕೆಲವು ಪರಿಚಿತರ ಇನ್ನು ಕೆಲವು ಅಪರಿಚಿತರ ಕುರಿತಂತೆ ಸ್ವಾರಸ್ಯವಾಗಿ, ಸ್ಪಷ್ಟವಾಗಿ ಅವರ ವ್ಯಕ್ತಿತ್ವಗಳನ್ನು ಓದುಗರಿಗೆ ತಿಳಿಸಿದ್ದಾರೆ. ವ್ಯಕ್ತಿ ಚಿತ್ರಗಳಲ್ಲಿ ವ್ಯಕ್ತಿತ್ವವನ್ನು ಪರಿಚಯಿಸುವುದು ಮಾತ್ರವಲ್ಲದೆ ಕನ್ನಡ ನಾಡಿನ ಏಳ್ಗೆಗೆ ಕಾರಣರಾದವರ ವ್ಯಕ್ತಿತ್ವವು ನಾಡಿನ ಎಲ್ಲಾ ಕಡೆಯೂ ಪ್ರಭಾವ ಬೀರಲಿ ಎಂಬ ಆಶಯವನ್ನು ಹೊಂದಿದೆ.

'ಸಾಹಿತ್ಯದಲ್ಲಿ ಕಾಣದ ಸಂಕೋಲೆ' ಎಂಬ ವೈಚಾರಿಕ ಲೇಖನದಲ್ಲಿ ತ. ರಾ. ಸುಬ್ಬರಾವ್‌ರವರು ಕನ್ನಡ ಸಾಹಿತ್ಯದಲ್ಲಿ ಸಣ್ಣ ಕಥೆ, ಕವಿತೆ, ಕಾದಂಬರಿ, ವಿಚಾರ ಸಾಹಿತ್ಯ ಮೊದಲಾದವುಗಳೆಲ್ಲಾ ವಸ್ತುಗಳಲ್ಲಿ ಮತ್ತು ವಿಚಾರದಲ್ಲಿ ಯಾವುದೇ ರೀತಿಯಲ್ಲಿ ವೈವಿಧ್ಯತೆ

ವೈಶಿಷ್ಟ್ಯತೆಯನ್ನು ಇಲ್ಲವೆನ್ನಬಹುದು. ವಿಚಾರ ಸಾಹಿತ್ಯ ಬರೆಯಲು ವಸ್ತುವಿನ ಸಮಸ್ಯೆಯೇ ಇಲ್ಲ. ಆದರೂ ಸಾಹಿತ್ಯದಲ್ಲಿ ಒಂದು ರೀತಿಯ ಸಂಕೋಲೆಯಿದೆ. ಅದು ರಾಜಕೀಯ ಸಂಕೋಲೆ ಮತ್ತು ಸಾಮಾಜಿಕ ದಾಸ್ಯ.

ರಾಜಕೀಯ ಸಂಕೋಲೆಗೆ ಸಂಬಂಧಿಸಿದಂತೆ ತ. ರಾ. ಸು. ರವರು ಜನತೆಯು ಅಜ್ಞಾನದಲ್ಲಿರುವಾಗ ಪರದೇಶಿಯ ಪ್ರಭುತ್ವಗಳು, ಜನತೆಯ ಕಣ್ಣು ತೆರೆಸುವ ಸಾಹಿತ್ಯ ಸೃಷ್ಟಿಸಿದರೆ ಸುಮ್ಮನೆ ಬಿಡುವುದೇ? ಶತಮಾನಗಳಿಂದ ಈ ರೀತಿಯ ರಾಜಕೀಯ ದಾಸ್ಯದಿಂದಲೇ ಏನು ಬರೆದರೂ ಅದರ ಪರಿಣಾಮವೇನು? ಸಾಹಿತಿಗಳಾದವರು ಪ್ರತಿಭೆ, ಶಕ್ತಿಗಳನ್ನು ಬರೀ ಹೊಟ್ಟೆ ತುಂಬಿಸಿಕೊಳ್ಳಲು ಉಪಯೋಗಿಸಬೇಕಾಗಿದೆ. ಸರಕಾರಿ ನೌಕರಿ ಹಿಡಿದು ಸರಕಾರಕ್ಕೆ ಹೆದರಿ ಅಧಿಕಾರಕ್ಕೆ ಸಿಕ್ಕಿ ಸತ್ತು ನಿರ್ಜೀವ ಪ್ರತಿಭೆಯಿಂದ ಇನ್ಯಾವ ಬಗೆಯ ಸಾಹಿತ್ಯ ಸೃಷ್ಟಿಸಬೇಕು? ಎಂಬ ಪ್ರಶ್ನೆಯನ್ನು ಸಾಹಿತಿಗಳ ಮನಃಸ್ಥಿತಿಯ ಹಿನ್ನೆಲೆಯಲ್ಲಿ ಎತ್ತುತ್ತಾರೆ.

ಪ್ರಕಾಶನ ಮತ್ತು ಪ್ರಕಾಶಕರ ಮನಃಸ್ಥಿತಿಗೆ ಸಂಬಂಧಿಸಿದಂತೆ ತ. ರಾ. ಸು. ರವರು ಬರಹಗಾರರು ಬರೆದಿದ್ದು ಕಡಿಮೆ, ಬರೆದರೂ ಅದು ಜನತೆಗೆ ಬೇಡವಾದ ಸಾಹಿತ್ಯವಾಗಿದೆ. ಪ್ರಕಾಶಕರಿಗೆ ತಾವು ಹಾಕಿದ ಬಂಡವಾಳ ಪುನಃ ಬರುವುದೇ ಎಂಬ ಚಿಂತೆ. ಈ ಚಿಂತೆಯಿಂದ ಯಾವ ಪ್ರಕಾಶಕರು ಕೇಳಿದರೂ ಪಠ್ಯಪುಸ್ತಕವಾಗುವ ಪುಸ್ತಕ ಬರೆದುಕೊಡಿ ಎನ್ನುವ ಧೋರಣೆ. ಈ ಧೋರಣೆಗೆ ಅನುಗುಣವಾಗಿ ಈ ರೀತಿ ಪುಸ್ತಕವನ್ನೆಲ್ಲಾ ಬರೆದವರು ಜರತಾರಿ ಪೇಟದವರೆಂದು ಜರಿಯುತ್ತಾರೆ. ನವೋದಯ ಕಾಲಘಟ್ಟದ ಕೆಲವು ಸಾಹಿತಿಗಳು ಹೊಟ್ಟೆ ತುಂಬಿಸಿಕೊಳ್ಳಲು ಈ ರೀತಿಯ ಸಾಹಿತ್ಯ ಬರೆದರು. ಅದೊಂದು ಸಾಹಿತ್ಯವೇ ಎಂಬ ಮಾತಿನಲ್ಲಿ ನವೋದಯ ಕಾಲಘಟ್ಟದ ಕೆಲವು ಸಾಹಿತಿಗಳ ಮನಃಸ್ಥಿತಿ ಆರ್ಥಿಕ ದಾಸ್ಯದ ಧೋರಣೆಯನ್ನು ವಿಮರ್ಶಿಸುತ್ತಾರೆ.

ತ. ರಾ. ಸು. ರವರು ಸ್ವಾತಂತ್ರ್ಯ ಪೂರ್ವದ ಪ್ರಕಾಶಕರ ಮನೋಧೋರಣೆಯನ್ನು ವಾಸ್ತವವಾಗಿ ವಿಮರ್ಶಿಸುವುದನ್ನು ನೋಡಿದರೆ ಇಂದು ಕೂಡಾ ಅನೇಕ ಪ್ರಕಾಶನಗಳು ಮತ್ತು ಪ್ರಕಾಶಕರು ಸಾಹಿತ್ಯದ ಪ್ರಚಾರದೊಂದಿಗೆ ಜನತೆಯಲ್ಲಿ ಸಾಹಿತ್ಯದ ಮೂಲಕ ಜಾಗೃತಿ ಉಂಟು ಮಾಡುವುದಕ್ಕಿಂತ ಹಣ ಮಾಡುವುದೇ ತಮ್ಮ ಕಾಯಕ ಮಾಡಿಕೊಂಡ ಬಗೆಯನ್ನು ನೆನೆಯಬಹುದು. ಇತ್ತೀಚಿನ ಅನೇಕ ಪ್ರಕಾಶನಗಳು ಅಥವಾ ಸಂಸ್ಥೆಗಳು ಪಠ್ಯಪುಸ್ತಕವನ್ನು ಮುದ್ರಿಸಲು ತೋರಿಸುವ ಆಸಕ್ತಿಯನ್ನು ಉತ್ತಮ ಸಾಹಿತ್ಯದ ಪುಸ್ತಕಗಳಿಗೆ ಗಮನ ಹರಿಸದೇ ಇರುವುದನ್ನು ನೋಡಬಹುದು. ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದ ಪ್ರಕಾಶನದ ಪ್ರಕಾಶಕರ ಮನಃಸ್ಥಿತಿಯೇ ಇಂದು ಕೂಡಾ ಭಿನ್ನವಾಗಿಯೇನೂ ಉಳಿದಿಲ್ಲ.

ಸಾಹಿತ್ಯವು ಕೂಡಾ ಸಾಮಾಜಿಕ ಸಂಕೋಲೆ ಅಥವಾ ದಾಸ್ಯದಲ್ಲಿ ಸಿಲುಕಿಕೊಂಡಿದೆ. ನಮ್ಮಲ್ಲಿರುವ ನೂರಾರು ಕುಲ, ಮತ, ಸಾವಿರಾರು ಸಂಪ್ರದಾಯಗಳು ಸಾಹಿತಿಯನ್ನು ನಿಯಂತ್ರಿಸುತ್ತವೆ. ಇದರಿಂದ ಸಾಹಿತ್ಯದಲ್ಲಿ ವಾಸ್ತವತೆಯೇ ಇಲ್ಲವಾಗಿದೆ. ಸಾಮಾಜಿಕ ಸಮಸ್ಯೆಗಳನ್ನು ಕಾಣದ, ಅನುಭವಿಸದ ವ್ಯಕ್ತಿ ಬರೆಯಲು ಹೊರಟರೆ ಆ ಸಾಹಿತ್ಯದಿಂದ ಸಮಾಜಕ್ಕೆ ಯಾವುದೇ ಪ್ರಯೋಜನವಿಲ್ಲ. ಸಮಾಜವನ್ನು ಬಿಂಬಿಸಿ, ವಿಮರ್ಶಿಸಿ, ಬದುಕಿಗೆ ಬೇಕಾದ ಸಾರ್ಥಕ ಸಾಹಿತ್ಯವನ್ನು ನಿರ್ಮಾಣ ಮಾಡಬೇಕಾದರೆ ಸಾಹಿತಿಯದವನು ರಾಜಕೀಯ ದಾಸ್ಯ ಮತ್ತು ಸಾಮಾಜಿಕ ಸಂಕೋಲೆಗಳಿಂದ ಹೊರಬರಬೇಕು. ಅಧಿಕಾರಸ್ಥರ ಕೃಪಾಕಟಾಕ್ಷಕ್ಕೆ ಒಳಗಾಗದೆ, ಸಾಮಾಜಿಕ

ಸಂಕೋಲೆಗೆ ಸಿಲುಕದೆ ಸಾಹಿತಿಯಾದವನು ಜನತೆಗಾಗಿ, ಜನತೆಯ ಉದ್ಧಾರಕ್ಕಾಗಿ ಸಾಹಿತ್ಯವನ್ನು ನಿರ್ಮಾಣ ಮಾಡಬೇಕು ಎಂಬ ನಿಲುವುಗಳು ಪ್ರಗತಿಶೀಲ ಕಾಲಘಟ್ಟದ ಸಾಹಿತ್ಯ ಧೋರಣೆಯನ್ನು ಪ್ರತಿಪಾದಿಸುತ್ತದೆ. ಅದೇ ರೀತಿಯಲ್ಲಿ ಪ್ರಗತಿಶೀಲ ಲೇಖಕರು ತಮ್ಮದೇಯಾದ ಪ್ರಕಾಶನ ಸಂಸ್ಥೆಯನ್ನು ಹುಟ್ಟು ಹಾಕಿದರು. ಆ ಪ್ರಕಾಶನದ ಉದ್ದೇಶ ಹಣ ಮಾಡುವುದಲ್ಲ, ಸಾಹಿತ್ಯದ ಮೂಲಕ ಜನತೆಗೆ ವಾಸ್ತವ ಸಮಾಜದ ಚಿತ್ರಣವನ್ನು ನೀಡಿ ಸಮಾಜದ ಪರಿವರ್ತನೆಗೆ ಮತ್ತು ಪ್ರಗತಿಗೆ ಕಡಿಮೆ ಬೆಲೆಯಲ್ಲಿ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವ ಜವಾಬ್ದಾರಿಯನ್ನು ಹೊತ್ತಿದ್ದನ್ನು ಕಾಣಬಹುದು.

ಪ್ರಗತಿಶೀಲ ಕಾಲಘಟ್ಟದ ಕಥೆಗಳಲ್ಲಿ, ಕಾದಂಬರಿಗಳಲ್ಲಿ ಸಮಾಜವಾದದ ನಿಲುವನ್ನು ತಿಳಿಸಿದವರಲ್ಲಿ ಬಸವರಾಜ ಕಟ್ಟಿಮನಿಯವರು ಒಬ್ಬರು. ಅವರು ಬರೆದ ಜೀವನ ಚರಿತ್ರೆಗಳು ಎರಡು. ಮೊದಲನೆಯದು ಕ್ರಾಂತಿವೀರ ಚೆನ್ನಪ್ಪ ವಾಲಿ, ಎರಡನೆಯದು ಪ್ರಿಯದರ್ಶಿನಿ: ಮಾರ್ಗದರ್ಶಿನಿ ಇಂದಿರಾ ಗಾಂಧಿ.

'ಕ್ರಾಂತಿವೀರ ಚೆನ್ನಪ್ಪ ವಾಲಿ' ಕೃತಿಯನ್ನು ೧೯೫೦ರಲ್ಲಿ ಪ್ರಕಟಿಸಿದರು. ಗಾಂಧೀಜಿಯವರು ಕರೆಕೊಟ್ಟ 'ಮಾಡು ಇಲ್ಲವೇ ಮಡಿ' ಎಂಬ ಘೋಷಣೆಯಿಂದ ೧೯೪೨ ಆಗಸ್ಟ್ ೯ ರಂದು ಆರಂಭಗೊಂಡ ಕ್ವಿಟ್ ಇಂಡಿಯಾ ಚಳುವಳಿ ಅಥವಾ ಭಾರತ ಬಿಟ್ಟು ತೊಲಗಿ, ಬ್ರಿಟಿಷ್ ವಿರೋಧಿ ಹೋರಾಟದಲ್ಲಿ ಭಾಗವಹಿಸಿದ ಚೆನ್ನಪ್ಪ ವಾಲಿಯವರ ಹೋರಾಟ, ಜೀವನ ಹಿನ್ನೆಲೆಯನ್ನು ವ್ಯಕ್ತಿತ್ವವನ್ನು ತಿಳಿಸುವ ಕೃತಿಯಾಗಿದೆ. ಶ್ರೀರಂಗರು ಬರೆದ ನಲ್ವತ್ತೆರಡರ ಚಲೇ ಜಾವ್ ಚಳುವಳಿ ಎಂಬ ಕೃತಿಯಲ್ಲಿ ಕರ್ನಾಟಕದಲ್ಲಿ ಒಟ್ಟಾರೆ ಚಳುವಳಿಯ ರೂಪುರೇಷೆ, ಹೋರಾಟ, ಸಂಘಟಿತ ಪ್ರಯತ್ನ ಇವುಗಳನ್ನು ದಾಖಲಿಸುತ್ತಾರೆ. ಈ ಅಹಿಂಸಾತ್ಮಕ ಹೋರಾಟದ ಸಂಗ್ರಾಮದಲ್ಲಿ ಸಮಾಜವಾದಿ ನಿಲುವಿನ ರಾಮಮನೋಹರ ಲೋಹಿಯಾ, ಅರುಣಾ ಅಸಫ್ ಆಲಿ, ಜಯಪ್ರಕಾಶ್ ನಾರಾಯಣ್, ಅಚ್ಯುತ ಪಟವರ್ಧನ್ ಮೊದಲಾದವರು ಜನಮನ್ನಣೆ ಗಳಿಸಿದರು. ಅದರಂತೆಯೇ ಕರ್ನಾಟಕದಲ್ಲಿ ಸಮಾಜವಾದಿ ತತ್ವದ ಹಿನ್ನೆಲೆಯಲ್ಲಿ ಜನಪ್ರಿಯತೆ ಗಳಿಸಿ ಉತ್ತರ ಕರ್ನಾಟಕದಲ್ಲಿ ಆಧುನಿಕ ರಾಯಣ್ಣ ಎಂಬ ಬಿರುದು ಪಡೆದ ಚೆನ್ನಪ್ಪ ವಾಲಿಯವರು ಕೂಡಾ ಒಬ್ಬರು.

ಚೆನ್ನಪ್ಪ ವಾಲಿ ತಮ್ಮ ಜಾತಿಗೆ ಸೇರಿದವರಲ್ಲ ಎಂಬ ಭಾವನೆಯಿಂದ ಅವರನ್ನು ಅವರ ತತ್ವ ಸಿದ್ಧಾಂತಗಳನ್ನು, ಹೋರಾಟವನ್ನು ದ್ವೇಷಿಸುವ ಒಂದು ಗುಂಪು ಇರುವುದನ್ನು ಕಂಡರೆ, ಸ್ವಾತಂತ್ರ್ಯ ಹೋರಾಟಗಾರರನ್ನು ಕೂಡಾ ಜಾತಿಯ ಹಿನ್ನೆಲೆಯಲ್ಲಿ ಗುರುತಿಸುವ ಭಾರತೀಯರ ಮನೋಧರ್ಮವನ್ನು ತೀಕ್ಷ್ಣವಾಗಿ ಕಟ್ಟಿಮನಿಯವರು ಖಂಡಿಸುತ್ತಾರೆ. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ತಾವು ಕೂಡಾ ಭಾಗವಹಿಸಿದ್ದನ್ನು ಸಂಕ್ಷಿಪ್ತವಾಗಿ ಈ ಜೀವನ ಚರಿತ್ರೆಯಲ್ಲಿ ತಿಳಿಸಿದ್ದಾರೆ.

ಶ್ರೀರಂಗ, ಬಸವರಾಜ ಕಟ್ಟಿಮನಿ, ಮೊದಲಾದ ಪ್ರಗತಿಶೀಲ ಚಳುವಳಿಯ ಲೇಖಕರು ನೇರವಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದವರು. ನವೋದಯ ಕಾಲಘಟ್ಟದ ಕವಿಗಳು, ಬರಹಗಾರರು ತಮ್ಮ ಬರವಣಿಗೆಯ ಮೂಲಕ ಸ್ವಾತಂತ್ರ್ಯ ಚಳುವಳಿಗೆ ಪ್ರೇರಣೆಯನ್ನು ನೀಡಿದರೆ, ಪ್ರಗತಿಶೀಲ ಚಳುವಳಿಯ ಲೇಖಕರು ಬರಹದ ಜೊತೆಗೆ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದದ್ದನ್ನು ಗಮನಿಸಬಹುದು.

೧೯೪೨ರ ಚಳುವಳಿಯ ವಸ್ತುವನ್ನು ಕೇಂದ್ರವಾಗಿಟ್ಟುಕೊಂಡು ಬಸವರಾಜ ಕಟ್ಟಿಮನಿಯವರು 'ಮಾಡಿ ಮಡಿದವರು' ಎಂಬ ಕಾದಂಬರಿಯನ್ನು ಬರೆದಿದ್ದಾರೆ. ಈಕಾದಂಬರಿಯ ಮಹತ್ವ ಸನ್ನಿವೇಶಗಳು, ಘಟನೆಗಳು ಚೆನ್ನಪ್ಪ ವಾಲಿ ಮತ್ತು ಅವರ ಗುಂಪಿನವರಿಗೆ ಸಂಬಂಧಪಟ್ಟಿದ್ದು ಆಗಿರುವುದು ಒಂದು ವಿಶೇಷವೇ ಆಗಿದೆ. ಬ್ರಿಟಿಷರ ವಿರುದ್ಧವಾಗಿ ಅವರ ಬಂಗಲೆಯನ್ನು ಸುಡುವುದು, ಬಂದೂಕನ್ನು ಕಸಿದುಕೊಳ್ಳುವುದು, ತಾಲೂಕು ಕಛೇರಿಗೆ ದಾಳಿ ಮಾಡುವುದು ಇವೆಲ್ಲವೂ ಬ್ರಿಟಿಷರ ವಿರುದ್ಧ ಮಾಡಿದ್ದ ಯುದ್ಧವೇ ಆಗಿತ್ತು ಎಂದು ಹೇಳುವ ಅವರು ಕ್ವಿಟ್ ಇಂಡಿಯಾ ಚಳುವಳಿಯ ಹೋರಾಟದಲ್ಲಿ ಭಾಗವಹಿಸಿದ ಅನುಭವವನ್ನು ವಿವರಿಸುತ್ತಾರೆ. ಸಾಮಾಜಿಕ ಅಸಮಾನತೆಯ ವಿರುದ್ಧ ಮಾತ್ರವಲ್ಲದೆ ಬ್ರಿಟಿಷರ ವಿರುದ್ಧ ಕೆಲವು ಪ್ರಗತಿಶೀಲ ಲೇಖಕರು ಕ್ರಾಂತಿಕಾರಿ ಧೋರಣೆಯನ್ನು ಹೊಂದಿದ್ದರು.

ಈ ಜೀವನ ಚರಿತ್ರೆಯ ಮೊದಲ ಭಾಗದಲ್ಲಿ ಚೆನ್ನಪ್ಪ ವಾಲಿಯವರ ಹೋರಾಟದ ಮನೋಭಾವನೆಯನ್ನು ತಿಳಿಸಿದರೆ, ಎರಡನೆಯ ಭಾಗದಲ್ಲಿ ಸ್ವಾತಂತ್ರ್ಯಾನಂತರದ ಘಟನೆಗಳನ್ನು ದಾಖಲಿಸಿದ್ದಾರೆ. ಹಂಪೆಯಲ್ಲಿ ನಡೆದ ಸಮ್ಮೇಳನದಲ್ಲಿ ಚೆನ್ನಪ್ಪ ವಾಲಿಯವರು, ರಾಯನಗೌಡರು, ಗೋಪಾಲಗೌಡರು, ಮುರಗೋಡು ಮಹಾದೇವಪ್ಪ ಮೊದಲಾದವರೆಲ್ಲರೂ ಕರ್ನಾಟಕ ಏಕೀಕರಣಕ್ಕಾಗಿ ಸಂಕಲ್ಪ ಮಾಡಿದರು ಮತ್ತು ಕರ್ನಾಟಕದ ಏಕೀಕರಣದ ಅಗತ್ಯತೆಯನ್ನು ಕನ್ನಡಿಗರಿಗೆ ತಿಳಿಸುವ ಮೂಲಕ ಏಕೀಕರಣ ಚಳುವಳಿಗೆ ಒಂದು ರೂಪುರೇಷೆಯನ್ನು ನೀಡಿದವರಲ್ಲಿ ಚೆನ್ನಪ್ಪ ವಾಲಿಯವರು ಕೂಡ ಒಬ್ಬರಾಗಿದ್ದಾರೆ.

ಪೋರ್ಚುಗೀಸರ ಅಧೀನದಲ್ಲಿದ್ದ ಗೋವಾ ರಾಜ್ಯವನ್ನು ಭಾರತಕ್ಕೆ ಸೇರಿಸಲು ರಾಮ ಮೋಹನ ಲೋಹಿಯಾರವರು ಸತ್ಯಾಗ್ರಹ ಹೂಡಿದಾಗ ಆ ಹೋರಾಟಕ್ಕೆ ಸಾಕ್ಷಿಯಾದವರು ಚೆನ್ನಪ್ಪ ವಾಲಿ. ೧೯೬೧ರಲ್ಲಿ ಗೋವಾ ವಿಮೋಚನಾ ಚಳುವಳಿ ತೀವ್ರ ಸ್ವರೂಪ ಪಡೆಯಲು ಕಾರಣಕರ್ತರಲ್ಲಿ ಒಬ್ಬರಾಗಿದ್ದಾರೆ. ಆ ಮೂಲಕ ಬ್ರಿಟಿಷರ ವಿರುದ್ಧ ಮಾತ್ರವಲ್ಲದೆ ಪೋರ್ಚುಗೀಸರ ವಿರುದ್ಧವೂ ಕೂಡಾ ಚಳುವಳಿ ನಡೆಸಿ ಭಾರತದ ಒಂದು ಸಣ್ಣ ಪ್ರದೇಶವು ಬೇರೆಯವರ ಹಿಡಿತದಲ್ಲಿ ಇರಬಾರದು, ಸರ್ವ ಸ್ವತಂತ್ರವಾಗಿರಬೇಕು ಎಂಬ ಧೋರಣೆಯನ್ನು ಹೊಂದಿದ್ದವರು ಚೆನ್ನಪ್ಪ ವಾಲಿ.

ರೈತ ಸಂಘವನ್ನು ಸ್ಥಾಪಿಸುವ ಮೂಲಕ ಚೆನ್ನಪ್ಪ ವಾಲಿಯವರು ರೈತರನ್ನು ಶೋಷಿಸುತ್ತಿದ್ದ ಜಮೀನ್ದಾರರು, ವ್ಯಾಪಾರಿಗಳ ವಿರುದ್ಧ ಸಿಡಿದೆದ್ದು ಹೋರಾಡಿದವರು. ಮೊರಾರ್ಜಿ ದೇಸಾಯಿಯವರು ಗೋಕಾಕ್‌ನ ರೈತ ಪರಿಷತ್ತಿಗೆ ಬಂದಾಗ ರೈತ ಸಂಘಟನೆಯನ್ನು ಅದರ ಉತ್ತಮ ಕಾರ್ಯಗಳನ್ನು ನೋಡಿದ ಮೊರಾರ್ಜಿಯವರು ಮುಂದೆ ಪ್ರಧಾನ ಮಂತ್ರಿಗಳಾದಾಗ ಭೂ ಮಸೂದೆಯನ್ನು ಜಾರಿಗೆ ತಂದರು. ಕರ್ನಾಟಕ ಅಂದಿನ ಮುಖ್ಯಮಂತ್ರಿಗಳಾದ ದಿವಂಗತ ದೇವರಾಜ ಅರಸುರವರು ಉಳುವವನೇ ಭೂಮಿಯ ಒಡೆಯ ಕಾನೂನನ್ನು ತಂದಿದ್ದರ ಹಿಂದೆ ಚೆನ್ನಪ್ಪ ವಾಲಿಯವರ ಪ್ರೇರಣೆಯೇ ಆಗಿದೆ ಎನ್ನಬಹುದು.

ಚೆನ್ನಪ್ಪ ವಾಲಿಯವರ ಜೀವನ ಚರಿತ್ರೆಯ ಹಿನ್ನೆಲೆಯಲ್ಲಿ ರೈತ ಚಳುವಳಿ, ಸ್ವಾತಂತ್ರ್ಯ ಹೋರಾಟ, ಕರ್ನಾಟಕ ಏಕೀಕರಣ ಚಳುವಳಿ ಮೊದಲಾದವುಗಳಲ್ಲಿ ವಾಲಿಯವರ ವ್ಯಕ್ತಿತ್ವವನ್ನು ಹೋರಾಟದ ಮನೋಭಾವನೆಯನ್ನು ಕಟ್ಟೀಮನಿಯವರು ದಾಖಲಿಸಿದ್ದಾರೆ. ಈ ಸಮಾಜಕ್ಕೆ ತಮ್ಮನ್ನು

ತಾವೇ ಅರ್ಪಣೆ ಮಾಡಿದ ವ್ಯಕ್ತಿಗಳನ್ನು ಓದುಗರಿಗೆ ಪರಿಚಯಿಸಿ ಸಮಾಜಮುಖಿಯಾಗಿ ಇರಬೇಕು ಎಂಬ ಆಶಯವನ್ನು ಈ ಜೀವನಚರಿತ್ರೆ ವ್ಯಕ್ತಪಡಿಸುತ್ತದೆ.

ಬಸವರಾಜ ಕಟ್ಟೀಮನಿಯವರು ೧೯೭೫ರಲ್ಲಿ ಪ್ರಕಟಿಸಿದ ಮತ್ತೊಂದು ಜೀವನ ಚರಿತ್ರೆ ಪ್ರಿಯದರ್ಶಿನಿ: ಮಾರ್ಗದರ್ಶಿನಿ ಇಂದಿರಾ ಗಾಂಧಿಯಾಗಿದೆ. ಇದು ಇಂದಿರಾ ಗಾಂಧಿಯವರ ಜೀವನವನ್ನು ತಿಳಿಸುವ ಸಣ್ಣ ಕೃತಿಯಾಗಿದೆ. ಇಂದಿರಾ ಗಾಂಧಿಯನ್ನು ಈ ಕೃತಿಯಲ್ಲಿ ಪ್ರಿಯದರ್ಶಿನಿ ಎಂದು ಕರೆದಿರುವುದು ಬಡವರು, ದೀನದಲಿತರು, ಅಲ್ಪಸಂಖ್ಯಾತರು, ರೈತರಿಗಾಗಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೆ ತಂದಿದ್ದರ ಪರಿಣಾಮವಾಗಿಯೇ ಶೋಷಿತ ವರ್ಗದವರ ಪ್ರಿಯದರ್ಶಿನಿಯಾಗಿದ್ದಳು, ಭಾರತವನ್ನು ಜಾತ್ಯಾತೀತತೆಯ ತತ್ವದ ಮೂಲಕ ಮುನ್ನಡೆಸಲು ತೆಗೆದುಕೊಂಡ ನಿರ್ಧಾರಗಳು, ೧೪ ಬ್ಯಾಂಕುಗಳ ರಾಷ್ಟ್ರೀಕರಣ, ಕಾರ್ಮಿಕರ ಕನಿಷ್ಠ ವೇತನದ ನಿರ್ಧಾರ, ೨೦ ಅಂಶಗಳನ್ನು ಜಾರಿಗೆ ತಂದಿದ್ದು, ಗರೀಬಿ ಹಟಾವೊ ಮೊದಲಾದವುಗಳ ಮೂಲಕ ದೇಶದ ಮಾರ್ಗದರ್ಶಿಯು ಆಗಿದ್ದಳು. ಅದರಿಂದಾಗಿ ಕಟ್ಟೀಮನಿಯವರು ಇಂದಿರಾಗಾಂಧಿಯವನ್ನು ಪ್ರಿಯದರ್ಶಿನಿಯಾಗಿ, ಮಾರ್ಗದರ್ಶಿನಿಯಾಗಿಯೂ ಈ ಜೀವನ ಚರಿತ್ರೆಯಲ್ಲಿ ತಿಳಿಸಿದ್ದಾರೆ.

ಇಂದಿರಾ ಗಾಂಧಿಯವರನ್ನು ಕಟ್ಟೀಮನಿಯವರು ಹುಲಿಯ ಮಗಳು ಎಂದು ಕರೆದಿದ್ದಾರೆ. ಅವರು ದೇಶವನ್ನು ಮುನ್ನಡೆಸಲು ತೆಗೆದುಕೊಂಡ ದಿಟ್ಟ ಕ್ರಮಗಳ ಹಿನ್ನೆಲೆಯಲ್ಲಿ ಲೇಖಕರು ಪರಿಭಾವಿಸಿದ್ದಾರೆ. ಇಂದಿರಾ ಗಾಂಧಿಯವರು ಹುಟ್ಟಿದ ೧೯ ನವೆಂಬರ್ ೧೯೧೭ ರಂದು ಪ್ರಥಮ ಮಹಾಯುದ್ಧ ಮುಗಿಯುವ ಸಂದರ್ಭ, ರಷ್ಯಾದಲ್ಲಿ ಅಂತರಿಕ ಕ್ರಾಂತಿ ಮುಗಿದು ಕಾರ್ಮಿಕ ಆಡಳಿತ ಸ್ಥಾಪನೆಯಾಗಿದ್ದು, ಗಾಂಧೀಜಿಯವರು ನೇತೃತ್ವದಲ್ಲಿ ಭಾರತದಲ್ಲಿ ಅಸಹಕಾರ ಚಳುವಳಿಯು ಪ್ರಾರಂಭಗೊಂಡಿದ್ದು ಇವೆಲ್ಲಾ ಚಾರಿತ್ರಿಕ ಘಟನೆಗಳ ಹಿನ್ನೆಲೆಯಲ್ಲಿ ಕ್ರಾಂತಿಯ ಕೂಸು ಎಂದು ಕರೆದಿದ್ದಾರೆ. ಈ ಕ್ರಾಂತಿಯ ಕೂಸು ಸ್ವಾತಂತ್ರ್ಯ ನಂತರ ಪ್ರಧಾನಿ ಪಟ್ಟಕ್ಕೇರಿದ ನಂತರ ದೇಶದ ಅಭಿವೃದ್ಧಿಗಾಗಿ ಕ್ರಾಂತಿಕಾರಕ ನಿರ್ಧಾರಗಳನ್ನು ತೆಗೆದುಕೊಂಡಿದ್ದು ಇವೆಲ್ಲವನ್ನು ಆ ದೃಷ್ಟಿಯ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸುತ್ತಾರೆ.

ಇಂದಿರಾ ಗಾಂಧಿಯವರ ಬಾಲ್ಯ, ವಿವಾಹ, ಸಂಸಾರ, ಫಿರೋಜ್ ಗಾಂಧಿಯವರ ಅಕಾಲಿಕ ಮರಣ, ಚಲೇ ಜಾವ್ ಚಳುವಳಿಯಲ್ಲಿ ಲಾಠಿಯೇಟು ತಿಂದಿದ್ದು, ಸೆರೆಮನೆವಾಸ, ಕಾಂಗ್ರೇಸ್ ಅಧ್ಯಕ್ಷತೆ, ಲಾಲ್ ಬಹಾದ್ದೂರ್ ಶಾಸ್ತ್ರಿಯವರ ಮಂತ್ರಿಮಂಡಲದಲ್ಲಿ ವಾರ್ತ ಮಂತ್ರಿಯಾಗಿ ದೇಶದಲ್ಲಿ ಟೆಲಿವಿಜನ್ ಕಾರ್ಯಕ್ರಮ ಆರಂಭಿಸಿದ್ದು, ಪ್ರಧಾನ ಮಂತ್ರಿಯಾಗಿದ್ದು ಮೊದಲಾದವುಗಳನ್ನು ತಿಳಿಸುತ್ತಾರೆ. ಚೀನಾ ೧೯೬೧ರಲ್ಲಿ ಭಾರತದ ಮೇಲೆ ಏಕಾಏಕಿ ದಾಳಿ ಮಾಡಿದ್ದರಿಂದ ನೊಂದುಕೊಂಡಿದ್ದ ನೆಹರೂರವರನ್ನು ಸಮಾಧಾನಗೊಳಿಸಿದ್ದನ್ನು ಆ ಮೂಲಕ ತಂದೆಗೆ ಸಾಂತ್ವನವನ್ನು ಹೇಳುವ ಅವರ ವ್ಯಕ್ತಿತ್ವವನ್ನು ತಿಳಿಸುತ್ತಾರೆ. ೧೯೬೧ರ ಚೀನಾ ಭಾರತದ ಯುದ್ಧವನ್ನು ಕುರಿತಂತೆ ಪ್ರಗತಿಶೀಲ ಕಾಲಘಟ್ಟದ ಮತ್ತೊಬ್ಬ ಲೇಖಕರಾದ ಬಸವರಾಜ ಕಟ್ಟೀಮನಿಯವರ ಸ್ನೇಹಿತರು, ಕಮ್ಯುನಿಸ್ಟ್ ಸಿದ್ಧಾಂತದ ಪ್ರತಿಪಾದಕರಾದ ನಿರಂಜನರು 'ಹಿಮಾಲಯದ ದಳ್ಳುರಿ' ಎಂಬ ರಾಜಕೀಯ ಬರಹವನ್ನು ಬರೆದಿದ್ದಾರೆ. ನಿರಂಜನರ ವಿಚಾರ ಸಾಹಿತ್ಯದ ತಾತ್ವಿಕತೆಯಲ್ಲಿ ಈ ಕೃತಿಯನ್ನು ಚರ್ಚಿಸಲಾಗುವುದು. ಬಹುಪಾಲು ಲೇಖಕರು ಅಂದಿನ ಕಾಲಘಟ್ಟದ ಘಟನೆಗಳನ್ನೇ

ತಮ್ಮ ಬರಹದ ವಸ್ತುವಾಗಿ ಮಾಡಿಕೊಂಡಿರುವುದು ಕೂಡಾ ಆ ಕಾಲಘಟ್ಟ ವಿಚಾರ ಸಾಹಿತ್ಯದ ತಾತ್ವಿಕತೆಯನ್ನು ಪ್ರತಿನಿಧಿಸುವಂತದ್ದು ಆಗಿದೆ.

ನೆಹರೂ ಕುಟುಂಬದ ಮೇಲೆ ಅತಿ ಅಭಿಮಾನವಿಟ್ಟುಕೊಂಡಿದ್ದ ಬಸವರಾಜ ಕಟ್ಟಿಮನಿಯವರು ಇಂದಿರಾ ಗಾಂಧಿಯವರು ಜಾರಿಗೆ ತಂದ ಬ್ಯಾಂಕ್‌ಗಳ ರಾಷ್ಟ್ರೀಕರಣ, ನಗರ ಆಸ್ತಿಯ ಮೇಲೆ ಮಿತಿ, ಸಾಮಾನ್ಯ ವಿಮೆಯ ರಾಷ್ಟ್ರೀಕರಣ, ಔದ್ಯೋಗಿಕ ಲೈಸನ್ಸ್‌ಗಳ ನೀತಿ, ಕಾರ್ಮಿಕರ ಕನಿಷ್ಠ ವೇತನದ ನಿರ್ಧಾರ ಮೊದಲಾದ ಸಮಾಜವಾದಿ ಕ್ರಮಗಳನ್ನು ಜಾರಿಗೆ ತಂದರು. ಹೀಗಾಗಿ ಕಟ್ಟೀಮನಿಯವರಿಗೆ ಇಂದಿರಾ ಗಾಂಧಿಯವರ ಬಗ್ಗೆ ವಿಶೇಷ ಒಲವು, ಅಭಿಮಾನ ಸಹಜವೇ ಆಗಿದೆ.

ಕೃತಿಯ ಕೊನೆಯಲ್ಲಿ ಜಯಪ್ರಕಾಶ ನಾರಾಯಣರಿಗೆ ದಲಿತ ಜನತೆಯ ಬೆಂಬಲ, ಸಹಾನುಭೂತಿ ದೊರಕಲಿಲ್ಲ. ಆದರೆ ಇಂದಿರಾಗಾಂಧಿಯವರು ಸಮಾಜವಾದದ ತಳಹದಿಯ ಮೇಲೆ ದೇಶವನ್ನು ಕೊಂಡೊಯ್ಯುವ ನಿರ್ಧಾರದಲ್ಲಿನ ಅವರ ಮಹತ್ವದ ಕಾರ್ಯಗಳಿಂದಾಗಿ ರಾಷ್ಟ್ರದ ಸಾಮಾನ್ಯ ಜನತೆಯ ಸಂಪೂರ್ಣ ಬೆಂಬಲವನ್ನು ಗಳಿಸಿದವರಲ್ಲಿ ಇಂದಿರಾ ಗಾಂಧಿಯವರಂತೆ ಮತ್ತೊಬ್ಬರಿಲ್ಲ ಎಂಬ ನಿಲುವಿನೊಂದಿಗೆ ಇಂದಿರಾ ಗಾಂಧಿಯವರನ್ನು ಕಟ್ಟೀಮನಿಯವರು ಬೆಂಬಲಿಸಿದ್ದಾರೆ. ಇಂದಿರಾ ಗಾಂಧಿಯವರ ಜೀವನ ಚರಿತ್ರೆಯ ಹಿನ್ನೆಲೆಯಲ್ಲಿ ದೇಶವು ಅಭಿವೃದ್ಧಿಯಾಗಬೇಕಾದರೆ ಸಮಾಜವಾದದ ತತ್ವ ಮತ್ತು ಸಿದ್ಧಾಂತದಿಂದಲೇ ಎಂಬುದಾಗಿ ವ್ಯಕ್ತಪಡಿಸುತ್ತಾರೆ. ಬಸವರಾಜ ಕಟ್ಟೀಮನಿಯವರು ಪ್ರಗತಿಶೀಲ ಸಾಹಿತಿಯಾಗಿ ತಾವು ನಂಬಿದ್ದ ಸಮಾಜವಾದದ ಧೋರಣೆ ಅದನ್ನು ಅಳವಡಿಸಿಕೊಂಡಿದ್ದ ವ್ಯಕ್ತಿಯಾಗಿ ಇಂದಿರಾ ಗಾಂಧಿಯವರನ್ನು ಕಂಡಿದ್ದಾರೆ.

ಇಂದಿರಾ ಗಾಂಧಿ ಜನಿಸಿ ೧೯ ನವೆಂಬರ್ ೨೦೧೭ ರಂದು ನೂರು ವರ್ಷ ತುಂಬಿದೆ. ಈ ನೂರು ವರ್ಷಗಳಲ್ಲಿ ದೇಶ ಪ್ರಗತಿಯನ್ನು ಕಂಡಿದೆ. ದೇಶದ ಉಕ್ಕಿನ ಮಹಿಳೆಯಾಗಿ, ಶತಮಾನದ ಸಿಂಹಿಣಿಯಾಗಿ, ದೇಶದ ಪ್ರಗತಿಗೆ ಸಮಾಜವಾದದ ತಳಹದಿಯಾಗಿ ದೇಶ ಕಟ್ಟುವ ನೆಹರೂರವರ ಚಿಂತನೆಯಿಂದ ಮೊಳಕೆ ಒಡೆದ ಇಂದಿರಾರವರು ಸಮಾಜವಾದಿ ನೆಲೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದರು. ದೇಶದ ಮೂರನೇ ಪ್ರಧಾನಿಯಾಗಿ ದೇಶವನ್ನು ಮುನ್ನಡೆಸಿದವರು. ಈ ಜೀವನ ಚರಿತ್ರೆ ಪ್ರಕಟವಾಗಿ ಕೆಲವೇ ದಿನಗಳಲ್ಲಿ ೧೯೭೫ರಿಂದ ೧೯೭೭ರ ವರೆಗೂ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಧಕ್ಕೆ ತಂದು ತುರ್ತು ಪರಿಸ್ಥಿತಿಯನ್ನು ಹೇರಿದರು. ಪ್ರಜಾಪ್ರಭುತ್ವದ ನಾಲ್ಕನೆಯ ಅಂಗವಾದ ಪತ್ರಿಕಾ ಸ್ವಾತಂತ್ರ್ಯವನ್ನು ಕಸಿದುಕೊಂಡು ಮಾಧ್ಯಮ ಪ್ರತಿನಿಧಿಗಳನ್ನು ಸೆರೆವಾಸದಲ್ಲಿಟ್ಟದ್ದು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿಯಂತ್ರಿಸಿದ್ದು ಇಂದಿರಾ ಗಾಂಧಿಯವರ ಮತ್ತೊಂದು ವ್ಯಕ್ತಿತ್ವವೇ ಆಗಿದೆ.

ಬಸವರಾಜ ಕಟ್ಟೀಮನಿಯವರಿಗೆ ಜವಾಹರಲಾಲ್ ನೆಹರೂ ಮತ್ತು ಇಂದಿರಾ ಗಾಂಧಿಯವರು ಹೊಂದಿದ್ದ ಸಮಾಜವಾದದ ದೃಷ್ಟಿಕೋನದ ಮೇಲೆ ಪ್ರೀತಿ, ಆಸಕ್ತಿ ಇತ್ತು ಎನ್ನಬಹುದು. ಹಾಗಾಗಿ ಅವರನ್ನು ಅಭಿಮಾನದಿಂದ ಕಾಣುವುದು ಸಹಜವಾಗಿದೆ.

ಪಿ. ವಿ. ವಜ್ರಮಟ್ಟಿ ಮತ್ತು ಎಂ. ಎಂ. ಬ್ಯಾಲಾಳರು ಸಂಪಾದಿಸಿದ ಪ್ರಗತಿಪಂಥ ಸಾಹಿತ್ಯ ದರ್ಶನ ಗ್ರಂಥದಲ್ಲಿ ಲೇಖಕರು ಕೇಳಿದ ಎಸ್ಟಾಬ್ಲಿಶ್‌ಮೆಂಟ್ ಎಂದರೇನು? ಎಂಬ ಪ್ರಶ್ನೆಗೆ ಬಸವರಾಜ

ಕಟ್ಟೀಮನಿಯವರು ೨೦ ಅಂಶಗಳ ತ್ವರಿತ ಕಾರ್ಯಾಚರಣೆಯಿಂದಾಗಿ ಅಭೂತ ಕ್ರಾಂತಿಯನ್ನುಂಟು ಮಾಡುತ್ತಿರುವ ಇಂದಿರಾ ಗಾಂಧಿಯವರ ಆಡಳಿತವು ಪ್ರಗತಿಶೀಲವಾಗಿದೆ ಎಂದು ಉತ್ತರಿಸುತ್ತಾರೆ. ಆ ಮೂಲಕ ಆಡಳಿತ, ಅಧಿಕಾರ, ರಾಜಕೀಯ ಪಕ್ಷಗಳು ಪ್ರಗತಿಶೀಲ ಧೋರಣೆಯನ್ನು ಹೊಂದಿರುವುದರಿಂದ ರಾಷ್ಟ್ರ ನಿರ್ಮಾಣ ಮಾಡಲು ಸಾಧ್ಯ ಎಂದು ಪರಿಭಾವಿಸಿದ್ದಾರೆ. ಪ್ರಗತಿಶೀಲ ಎಂಬುದು ಸಾಹಿತ್ಯಕ್ಕೆ ಮಾತ್ರ ಸೀಮಿತವಾದುದಲ್ಲ, ಅದು ಎಲ್ಲಾ ವಲಯಗಳಲ್ಲಿಯೂ ಇರಬೇಕಾದುದು ಎಂಬ ಆಶಯವನ್ನು ಇದು ವ್ಯಕ್ತಪಡಿಸುತ್ತದೆ.

ಸಾಹಿತ್ಯವೆಂದರೆ ಅದು ಜನರಿಗೆ ತಿಳಿಯಬೇಕಾದುದು, ಸಾಮಾನ್ಯ ಜನರಿಗೆ ತಿಳಿಯದ ಸಾಹಿತ್ಯ ಸತ್ತ ಸಾಹಿತ್ಯವಾಗಿದೆ. ನವ್ಯ ಸಾಹಿತ್ಯದವರು ಅರ್ಥವಾಗದ ರೀತಿಯಲ್ಲಿ ಬರೆದದ್ದೇ ಸಾಹಿತ್ಯ ಎಂದು ಭಾವಿಸಿರುವುದನ್ನು ಕಟ್ಟೀಮನಿಯವರು ಅಲ್ಲಗಳೆಯುತ್ತಾರೆ. ಜನತೆಗೆ ಸಾಹಿತ್ಯದ ಮೂಲಕ ಲೋಕವನ್ನು, ಸಮಾಜವನ್ನು ಗ್ರಹಿಸುವ, ಸಮಾಜದ ಸಮಸ್ಯೆಗಳಿಗೆ ಪ್ರತಿಸ್ಪಂದಿಸುವ ರೀತಿಯಲ್ಲಿ ಸಾಹಿತ್ಯ ಬೆಳೆಯಬೇಕಾಗಿದೆ. ಅದು ಪ್ರಗತಿಶೀಲ ಸಾಹಿತ್ಯದ ದೃಷ್ಟಿಕೋನವು ಆಗಿದೆ. ಪ್ರಗತಿಶೀಲ ಕಾಲಘಟ್ಟದ ಲೇಖಕರು ನವ್ಯ ಕಾಲಘಟ್ಟದ ಸಾಹಿತ್ಯವನ್ನು ಇದೇ ಕಾರಣಕ್ಕೆ ಅಲ್ಲಗಳೆಯುತ್ತಾರೆ.

ಅಖಿಲ ಭಾರತ ೫೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮಾಡಿದ ಭಾಷಣದಲ್ಲಿ ಇವರ ವೈಚಾರಿಕ ಪ್ರಜ್ಞೆಯನ್ನು ತಿಳಿಯಬಹುದು. ಅದರಲ್ಲಿ ಪ್ರಮುಖವಾಗಿ ಕನ್ನಡ ನಾಡಿನ ಗಡಿ ಪ್ರದೇಶಗಳ ಸಾಂಸ್ಕೃತಿಕ ಚರಿತ್ರೆಯನ್ನು ತಿಳಿಯಲು ಸಹಕಾರಿಯಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಬೆಳಗಾವಿಯ ಸೀಮೆಯಲ್ಲಿ ಕನ್ನಡ–ಮರಾಠಿ ಭಾಷೆಗಳ ಸಾಂಸ್ಕೃತಿಕ ವಿಚಾರಗಳಲ್ಲಿ ಯಾವುದೇ ಜಗಳ ಇಲ್ಲದೇ ಇರುವುದು ಇವೆರಡು ಭಾಷಾ ಪರಿವಾರಗಳಲ್ಲಿ ಸಹಬಾಳ್ವೆ, ಉತ್ತಮ ಬಾಂಧವ್ಯವಿದ್ದದ್ದು, ಸ್ವಾತಂತ್ರ್ಯಾನಂತರ ಅಧಿಕಾರದ ರಾಜಕೀಯ ಪ್ರವೇಶಿಸಿದಂತೆ ಭಾಷಾ ಚಳುವಳಿಯು ತೀವ್ರ ಸ್ವರೂಪ ಪಡೆದದ್ದು, ಮಹಾಜನ್ ವರದಿಯನ್ನು ಮರಾಠಿಗರು ಕೆಲವು ಪಟ್ಟಭದ್ರ ಹಿತಾಸಕ್ತಿಗಾಗಿ ತಿರಸ್ಕರಿಸಿ ಬೆಳಗಾವಿಯಲ್ಲಿ ಕನ್ನಡ–ಮರಾಠಿ ಭಾಷಿಕರ ನಡುವೆ ಸಂಘರ್ಷ ಏರ್ಪಟ್ಟದ್ದು, ಅಧಿಕಾರ ರಾಜಕೀಯದ ಕುತಂತ್ರವೇ ಆಗಿದೆ ಎಂಬುದನ್ನು ದಾಖಲಿಸಿದ್ದಾರೆ. ಭಾಷೆಯ ವಿಚಾರಕ್ಕೆ ಬಂದಾಗ ಮರಾಠಿಗರೆಲ್ಲಾ ಒಂದುಗೂಡುತ್ತಾರೆ. ಆದರೆ ಕನ್ನಡಿಗರು ಬ್ರಾಹ್ಮಣ, ಲಿಂಗಾಯತ, ಬಣಜಿಗ, ಕುರುಬ, ರೆಡ್ಡಿ ಇನ್ನಿತರ ಜಾತಿಗಳ ಸಂಕುಚಿತ ಹಿತಾಸಕ್ತಿಗಳಿಗೆ ಒಳಗಾಗಿ ಭಾಷಾ ಪ್ರೇಮವನ್ನು ಮರೆಯುವಂತಹ ಸ್ಥಿತಿಯನ್ನು ಕಟ್ಟೀಮನಿಯವರು ತಮ್ಮ ಭಾಷಣದಲ್ಲಿ ಖಂಡಿಸುತ್ತಾರೆ. ಕನ್ನಡಿಗರಿಗೆ ಅದರಲ್ಲೂ ಪ್ರಮುಖವಾಗಿ ಗಡಿನಾಡ ಕನ್ನಡಿಗರಲ್ಲಿ ಐಕ್ಯತೆ ಇಲ್ಲದೇ ಇರುವುದು ಭಾಷಾ ಪ್ರೇಮಕ್ಕಿಂತ ಜಾತಿ ಪ್ರೇಮವೇ ಸಂಪೂರ್ಣವಾಗಿ ಅವರಲ್ಲಿ ಆವರಿಸಿಕೊಂಡಿದೆ. ಈ ಜಾತಿ ಪ್ರೇಮದಿಂದ ಹೊರಬಂದು ನಾವೆಲ್ಲರೂ ಕನ್ನಡಿಗರು ಎಂಬ ಮನಃಸ್ಥಿತಿ ಬರಬೇಕಾದ ವಿಚಾರವನ್ನು ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಾರೆ. ಕನ್ನಡವನ್ನು ಕಟ್ಟುವ ಕೆಲಸದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಅಧ್ಯಯನ ಕೇಂದ್ರಗಳು, ಗ್ರಂಥಾಲಯ ಇಲಾಖೆಗಳು ನಡೆಸುತ್ತಿರುವ ಕಾರ್ಯಗಳು ಸ್ತುತ್ಯರ್ಹವೆಂದು ಭಾವಿಸುತ್ತಾರೆ. ಸರ್ಕಾರದ ಅಧೀನದಲ್ಲಿರುವ ಸಂಘ ಸಂಸ್ಥೆಗಳು ಮಾತ್ರ ಕನ್ನಡ ಕಟ್ಟುವ ಕಾರ್ಯದಲ್ಲಿ ತೊಡಗಿವೆ, ಎಲ್ಲಾ ಸರ್ಕಾರೇತರ ಸಂಸ್ಥೆಗಳು, ಕನ್ನಡಿಗರು ಒಟ್ಟಾಗಿ ಸೇರಿ ಭಾಷೆಯ ಉಳಿವಿಗಾಗಿ ಕಟಿಬದ್ಧರಾಗಿರಬೇಕೆಂದು ಕರೆ ಕೊಡುವ ಕಟ್ಟೀಮನಿಯವರ ಕನ್ನಡ ಭಾಷಾ ಪ್ರೇಮವನ್ನು ಅರಿಯಬಹುದು.

ಹಿಂದಿ ಭಾಷೆಯನ್ನು ಕನ್ನಡ ಪ್ರಾದೇಶಿಕ ಭಾಷೆಯ ಮೇಲೆ ಒತ್ತಾಯವಾಗಿ ಹೇರುವ ಕೇಂದ್ರ ಸರಕಾರದ ಅಧೀನ ಇಲಾಖೆಗಳು ನಡೆಸುವ ದಬ್ಬಾಳಿಕೆಯನ್ನು ಖಂಡಿಸಬೇಕು ಎಂಬ ಬಸವರಾಜ ಕಟ್ಟೀಮನಿಯವರ ನಿಲುವನ್ನು ಗಮನಿಸಿದಾಗ ಕನ್ನಡ ಭಾಷೆಯ ಮೇಲೆ ಇದ್ದ ಪ್ರೀತಿ ವ್ಯಕ್ತವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಕನ್ನಡ ನಾಡಿನ ರಾಜಧಾನಿಯಾದ ಬೆಂಗಳೂರಿನ ಮೆಟ್ರೋದಲ್ಲಿ ಹಿಂದಿ ಫಲಕಗಳನ್ನು ಕಡ್ಡಾಯವಾಗಿ ಹೇರಿ ಕನ್ನಡದ ಪ್ರಾದೇಶಿಕ ಭಾಷೆಗಳಿಗೆ ಕೊಡಲಿ ಪೆಟ್ಟು ಕೊಡಲು ಬಂದಿದ್ದನ್ನು ಇಲ್ಲಿ ನೆನೆಯಬಹುದು. ಕನ್ನಡಿಗರ ಒಗ್ಗಟ್ಟಿನ ಹೋರಾಟದಿಂದ ಅದರಲ್ಲಿ ಯಶಸ್ಸನ್ನು ಗಳಿಸುವಂತಾಯಿತು. ಇತರ ಭಾಷೆಗಳನ್ನು ತುಳಿದು ಹಿಂದಿಯನ್ನು ಮಾತ್ರ ಮೆರೆಯಿಸುವ ಸ್ವಾರ್ಥಿಗಳನ್ನು ಸದೆಬಡಿಯಬೇಕು. ಅದರಲ್ಲಿ ಕನ್ನಡಿಗರು ಕಾರ್ಯಪ್ರವೃತ್ತರಾಗಬೇಕೆಂಬ ಕಟ್ಟೀಮನಿಯವರ ನಿಲುವು ಕನ್ನಡ ಭಾಷೆಯ ಉಳಿವಿಗಾಗಿ ಯಾವ ರೀತಿ ಕನ್ನಡಿಗರು ನಡೆಯಬೇಕು ಎಂದು ತಿಳಿಸಿರುವುದು ಔಚಿತ್ಯವೇ ಸರಿ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರತಿಭಟನೆ ಯುಗ ಪ್ರಾರಂಭವಾದುದು ಕುವೆಂಪುರವರ ಕಾಲಘಟ್ಟದಲ್ಲಿ. ಹಾಗಾಗಿ ಕುವೆಂಪುರವರನ್ನು ಪ್ರಗತಿಶೀಲ ಧೋರಣೆಯ ಕವಿಯಾಗಿ ಬಸವರಾಜ ಕಟ್ಟೀಮನಿಯವರು ಗುರುತಿಸುತ್ತಾರೆ. ಅಂದರೆ ಸಮಾಜದ ಪ್ರಗತಿಗಾಗಿ, ಸಾಮಾಜಿಕ ವ್ಯವಸ್ಥೆಯನ್ನು ಸರಿಪಡಿಸುವ, ಬ್ರಾಹ್ಮಣ–ಶೂದ್ರ–ಅಸ್ಪೃಶ್ಯ ಎಂಬ ಜಾತೀಯತೆಯನ್ನು ಹೋಗಲಾಡಿಸುವ, ಸಾಮಾಜಿಕ ಸಮಸ್ಯೆಗಳಿಗೆ ಪ್ರತಿಕ್ರಿಸುವ ಮನೋಧರ್ಮವನ್ನು ಹೊಂದಿರುವ ಕುವೆಂಪುರವರು ಪ್ರಗತಿಶೀಲರು ಎಂಬ ಕಟ್ಟೀಮನಿಯವರ ಮಾತಿನಲ್ಲಿ ಪ್ರಗತಿಶೀಲತೆ ಎಂಬುದು ಪಂಥವಾಗಿಲ್ಲ, ಅದು ಮನೋಧರ್ಮವಾಗಿದೆ ಎಂಬ ಆಶಯವಿದೆ.

ನವೋದಯ ಕಾಲಘಟ್ಟದ ಕೆಲವು ಬರಹಗಾರರಲ್ಲೂ ಪ್ರಗತಿಶೀಲ ಧೋರಣೆಯನ್ನು ಗುರುತಿಸಿದ ಕಟ್ಟೀಮನಿಯವರು ಕವಿತೆ ಎಂಬುದು ವೈಯಕ್ತಿಕ ಕಸರತ್ತಾಗಿಲ್ಲ, ಅದು ಜನಸಾಮಾನ್ಯರಿಗೆ ತಿಳಿಯಬೇಕಾಗಿದೆ. ನವ್ಯ ಕಾವ್ಯವನ್ನು ತಿರಸ್ಕರಿಸುವ ಮೂಲಕ ಬಸವರಾಜ ಕಟ್ಟೀಮನಿಯವರು ಜನರಿಗೆ ಅರ್ಥವಾಗುವ, ತಿಳಿಯುವ ರೀತಿಯಲ್ಲಿ ಇರುವುದೇ ನಿಜವಾದ ಸಾಹಿತ್ಯವೆಂದು, ಪ್ರಗತಿಶೀಲ ಸಾಹಿತ್ಯದ ಧ್ಯೇಯೋದ್ದೇಶಗಳು, ಸ್ಫೂರ್ತಿಯ ನೆಲೆಗಳು ಬಂಡಾಯ ಸಾಹಿತ್ಯದಲ್ಲೂ ಇರುವುದರಿಂದ ಪ್ರಗತಿಶೀಲ ಸಾಹಿತ್ಯದ ಮತ್ತೊಂದು ಘಟ್ಟವಾಗಿ ಬಂಡಾಯ ಸಾಹಿತ್ಯವನ್ನು ಗುರುತಿಸುತ್ತಾರೆ.

ಕಮ್ಯುನಿಸ್ಟ್ ಪಕ್ಷದಲ್ಲಿ ಹತ್ತು ವರ್ಷ ಇದ್ದು ಶ್ರಮಜೀವಿಗಳ ಆಂದೋಲನದಲ್ಲಿ ಭಾಗವಹಿಸಿದ ಸ್ನೇಹಿತರೊಬ್ಬರು ಅದರಿಂದ ದೂರಿವುಳಿದವರು ಎಂದು ಮಾರ್ಮಿಕವಾಗಿ ನಿರಂಜನರ ಹೆಸರನ್ನು ಸೂಚಿಸದೇ ತಿಳಿಸುತ್ತಾರೆ. "ಕಮ್ಯುನಿಸ್ಟ್ ಪಕ್ಷ ಬಿಟ್ಟ ಬಳಿಕ ಅವರು ಬಂಡವಾಳವಾದಿಯು ಆಗಲಿಲ್ಲ, ಸಮಾಜವಾದದ ವಿರೋಧಿಯೂ ಆಗಲಿಲ್ಲ ನಿಜ, ಅದರೆ ಪಾರ್ಟಿಯನ್ನು ಬಿಟ್ಟು ಬಂದರಲ್ಲ? ಏಕೆ? ಎಂದು ಯೋಚಿಸಬೇಕು"[೧೫] ಎಂದು ಪ್ರಶ್ನಿಸುತ್ತಾರೆ. ಎಡ ಪಂಥೀಯರೆಲ್ಲರೂ ಒಂದುಗೂಡಿ ಹೋರಾಟ ಮಾಡುವುದು ಅಷ್ಟು ಸುಲಭವಲ್ಲ. ಅದರಲ್ಲಿಯೂ ಹಲವು ಬಲಪಂಥೀಯರು ಇರುವುದು, ಸಮಾಜವಾದಿ ಚಳುವಳಿಯನ್ನು ದಾರಿ ತಪ್ಪಿಸುವವರು ಇರುತ್ತಾರೆ ಎಂದು ಮಾರ್ಮಿಕವಾಗಿ ಸಾಹಿತ್ಯ ವಲಯದ ಪಂಥಗಳಲ್ಲಿಯೂ ಈ ರೀತಿಯ ಒಳಗೊಳಗೆ ಸುರಂಗ ತೋಡುವ ಮನಃಸ್ಥಿತಿಯ ಲೇಖಕರು ಇರುವುದು, ಪ್ರಗತಿಶೀಲ ಕಾಲಘಟ್ಟದ ಕೆಲವು ಲೇಖಕರು ಈ ಪಂಥದಲ್ಲಿ ಗುರುತಿಸಿಕೊಂಡಿದ್ದರೂ ಸಮಾಜವಾದದ ದೃಷ್ಟಿಕೋನ ಇಲ್ಲದವರನ್ನು ಕುರಿತಂತೆ

ಪರೋಕ್ಷವಾಗಿ ಎಚ್ಚರಿಸುವುದು ಹಾಗೂ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಇದ್ದವರನ್ನು ಈ ರೀತಿಯವರು ದಾರಿ ತಪ್ಪಿಸುವ ಸ್ಥಿತಿಯನ್ನು ಚರ್ಚಿಸುತ್ತಾರೆ.

ಹಾಸ್ಯ ಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡ ಬರಹಗಾರರಲ್ಲಿ ನಾಡಿಗೇರ ಕೃಷ್ಣರಾಯ ಪ್ರಮುಖರು. ೧೦ ಹಾಸ್ಯ ಸಂಕಲನ, ೪೨ ಕಾದಂಬರಿಗಳನ್ನು ಬರೆದರು, ಹಾಸ್ಯದ ಮೂಲಕವೇ ಅನೇಕ ವಿಚಾರಗಳನ್ನು ತಿಳಿಸಿದವರು. ಅ. ನ. ಕೃ. ರವರ ಸಹಾಯ ಪ್ರೇರಣೆಯಿಂದ ಕನ್ನಡದಲ್ಲಿ ಬರಹ ಆರಂಭಿಸಿದ ಇವರು ಕಾರ್ಮಿಕ ನಾಯಕನಾಗಿ, ರಾಜಕೀಯ ಜೀವನ ಆರಂಭಿಸಿ ದೇಶದ ರಾಷ್ಟ್ರಪತಿಯಾದ ವಿ. ವಿ. ಗಿರಿ ಎಂದೇ ಹೆಸರಾದ ವರಾಹಗಿರಿ ವೆಂಕಟಗಿರಿಯವರನ್ನು ಕುರಿತಂತೆ ಜೀವನ ಚರಿತ್ರೆಯನ್ನು ಬರೆದಿದ್ದಾರೆ.

ಈ ಕೃತಿಯಲ್ಲಿ ವಿ. ವಿ. ಗಿರಿಯವರ ಜೀವನ, ಜೋಗಯ್ಯ ಪಂತಲು ಕುಟುಂಬ, ಪರಿಸರದ ಜೊತೆಗೆ ದೇಶದ ಸ್ವಾತಂತ್ರ್ಯವೇ ಅಂತಿಮವಾಗಿ ಕಾರ್ಮಿಕ ಸಂಘಗಳು ರಾಜಕೀಯವಾಗಿ ಭಾಗವಹಿಸಬಹುದು, ದೇಶೀ ಕಾರ್ಮಿಕ ಸಂಘಟನೆಗಳು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿದರು. ರೈಲ್ವೇ ನೌಕರರ ಸಂಘವನ್ನು ೧೯೩೦ರ ಉಪ್ಪಿನ ಸತ್ಯಾಗ್ರಹದಲ್ಲಿ ಕ್ರಾಂತಿಕಾರಕವಾಗಿ ಭಾಗವಹಿಸುವಂತೆ ಮಾಡಿದರ ಜೊತೆಗೆ ಸೋಷಿಯಲಿಸ್ಟರು ಮತ್ತು ಕಮ್ಯುನಿಸ್ಟರು ಶಕ್ತಿಯುತ ಕ್ರಿಯೆಗಳಿಂದ ಮಾತ್ರ ಬ್ರಿಟಿಷರನ್ನು ಈ ದೇಶದಿಂದ ಹೊರದೂಡಬೇಕೆಂದು ನಂಬಿದ್ದವರು, ಅದಕ್ಕೆ ಒತ್ತಾಸೆಯಾಗಿ ವಿ. ವಿ. ಗಿರಿಯವರು ಕಾರ್ಮಿಕ ಸಂಘಟನೆಗಳಿಗೆ ಪ್ರೇರಣೆ ನೀಡಿದರು. ಬೊಬ್ಬಲಿರಾಜರನ್ನು ಮತ್ತು ಜಸ್ಟಿಸ್ ಪಾರ್ಟಿಯನ್ನು ಸೋಲಿಸಿ ಮದ್ರಾಸ್ ಸರಕಾರದಲ್ಲಿ ಕಾರ್ಮಿಕ ಸಚಿವರಾದವರು.

ಇಂಗ್ಲೆಂಡಿನಲ್ಲಿ ವಕೀಲ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಗಾಂಧಿಯ ಪ್ರಭಾವಕ್ಕೆ ಒಳಗಾಗಿ ರೆಡ್‌ಕ್ರಾಸ್‌ನಲ್ಲಿ ಸೇರಿ ನಂತರ ಅದರಿಂದ ಹೊರ ಬಂದರು. ಬ್ರಿಟಿಷರ ಶೈಲಿಯ ಉಡುಪುಗಳನ್ನು ವಿರೋಧಿಸಿದರು. ೧೯೧೬ರಲ್ಲಿ ನಡೆದ ಈಸ್ಟರ್ ದಂಗೆಯಿಂದ ಐರ್ಲೆಂಡಿನ ಕೆಲಸಗಾರರು, ಕಲ್ಲಿದ್ದಲು ಗಣಿ ಕೆಲಸಗಾರರು, ರೈಲ್ವೇ ನೌಕರರು, ಸಾರಿಗೆ ಕಾರ್ಮಿಕರು ದಂಗೆಯಿಂದ ಏನೆಲ್ಲಾ ಸಾಧಿಸಿರುವ ಹಿನ್ನೆಲೆಯಲ್ಲಿ ಭಾರತದಲ್ಲಿ ಏನು ಸಾಧಿಸಬಹುದು ಎಂದು ಆಲೋಚಿಸಿದರು. ಭಾರತದಲ್ಲಿ ಕಾರ್ಮಿಕ ಸಂಘಟನೆಗಳನ್ನು ಸಂಘಟಿಸುವುದು, ಕನಿಷ್ಠ ವೇತನಕ್ಕಾಗಿ ಹೋರಾಟ ರೂಪಿಸುವುದು, ಸಂಘಟನೆಗಳಲ್ಲಿ ರಾಜಕೀಯ ಬೆರೆಸದ ರೀತಿಯಲ್ಲಿ ನಿಯಮಾವಳಿಗಳನ್ನು ರೂಪಿಸಿಕೊಂಡರು. ಇವೆಲ್ಲಾ ಇಂದಿನ ಕಾರ್ಮಿಕ ಸಂಘಟನೆಗಳಿಗೆ ಮಾದರಿಯಾಗಿಯೇ ಇವೆ.

ಇಂದಿನ ಅನೇಕ ಕಾರ್ಮಿಕ ಸಂಘಟನೆಗಳ ಸ್ಥಾಪನೆಗೆ ಪ್ರೇರಣೆ ನೀಡಿದ ವಿ. ವಿ. ಗಿರಿಯವರು ಕಾರ್ಮಿಕ ಸಂಘಟನೆಗಳು ರಾಜಕೀಯದಿಂದ ದೂರ ಉಳಿಯಬೇಕು ಎಂಬ ಹಂಬಲವನ್ನು ಹೊಂದಿದ್ದರು. ಆದರೆ ಪ್ರಸ್ತುತ ಅನೇಕ ಕಾರ್ಮಿಕ ಸಂಘಟನೆಗಳಲ್ಲಿ ರಾಜಕೀಯ, ಜಾತೀಯತೆ, ಸ್ವಾರ್ಥ, ಅಧಿಕಾರ ಮೊದಲಾದ ಮೋಹಗಳಿಂದ ಕಾರ್ಮಿಕ ಚಳುವಳಿಗಳು ಯಶಸ್ವಿಯಾಗದೆ ಇರುವುದು ಒಂದು ದೌರ್ಭಾಗ್ಯವೇ ಸರಿ.

ರಾಜಕೀಯ ಪ್ರವೇಶಿಸಿದ ವಿ. ವಿ. ಗಿರಿಯವರು ಆಂಧ್ರಪ್ರದೇಶದ ಪ್ರಕಾಶಂರಿಂದ ಪ್ರಭಾವಿತರಾಗಿ ಮುಂದೆ ಕಾರ್ಮಿಕ ನಾಯಕರಾದರು. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಅಥವಾ

ವಿಕೇಂದ್ರೀಕೃತ ವ್ಯವಸ್ಥೆ ರೂಪುಗೊಳ್ಳುವ ಮೊದಲೇ ಹಳ್ಳಿಗಳ ಅಭಿವೃದ್ಧಿಗಾಗಿ ವಿ. ವಿ. ಗಿರಿಯವರು ಮಾಡಿದ ಯೋಜನೆಯು ಪ್ರಮುಖವಾದುದು. ಹಳ್ಳಿಗಳ ಅಭಿವೃದ್ಧಿಯಾಗದೆ ದೇಶದ ಆರ್ಥಿಕ, ಸಾಮಾಜಿಕ ಅಭಿವೃದ್ಧಿ ಅಸಾಧ್ಯವೆಂದು ನಂಬಿದವರು. ಸರಕಾರವು ಮುಂದೆ ಕಾರ್ಮಿಕ ನೀತಿ ರೂಪಿಸಲು ವಿ. ವಿ. ಗಿರಿಯವರೇ ಕಾರಣಕರ್ತರು. ೧೯೩೭ರಲ್ಲಿಯೇ ಕೈಗಾರಿಕೆಯ ಸಂಬಂಧ ಹೇಗಿರಬೇಕೆಂದು ಮಾಲೀಕರ–ಕಾರ್ಮಿಕರ ಹೊಣೆಗಾರಿಕೆಯನ್ನು ತಿಳಿಸಿದ್ದು ಪ್ರಮುಖವಾದುದು. ನಂತರ ಉತ್ತರ ಪ್ರದೇಶದ ರಾಜ್ಯಪಾಲರಾದುದು, ಮೈಸೂರು ರಾಜ್ಯದ ರಾಜ್ಯಪಾಲರಾದ ನಂತರ ಉಪರಾಷ್ಟ್ರಪತಿಯಾಗಿ, ರಾಷ್ಟ್ರಪತಿಯಾಗಿ ತಮ್ಮದೇಯಾದ ಕೊಡುಗೆಯನ್ನು ಕಾರ್ಮಿಕ ನಾಯಕನಾಗಿ ದೇಶದ ಒಳಿತಿಗಾಗಿ ದುಡಿದವರು.

ರಾಷ್ಟ್ರಪತಿಯಾಗಿ ವಿ. ವಿ. ಗಿರಿಯವರು ಮಾಡಿದ ಭಾಷಣದ ಹಿನ್ನೆಲೆಯಲ್ಲಿ ನಾಡಿಗೇರ ಕೃಷ್ಣರಾಯರು ಭಾಷಣದ ತುಣುಕುಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಅವುಗಳನ್ನು ಸಂಕ್ಷಿಪ್ತವಾಗಿ ಈ ಕೆಳಕಂಡ ಪ್ರಮುಖ ಅಂಶಗಳನ್ನು ಕಾಣಬಹುದು:

- ಮಾನವರಲ್ಲಿ ಅಸಮಾನತೆಯನ್ನು ಹೋಗಲಾಡಿಸಲು ಸಾಮಾಜಿಕ ಶಿಸ್ತು ಸಂಯಮ ಬೇಕು.
- ಜನತೆಗೆ ವಾಸಿಸಲು ಯೋಗ್ಯವಾದ ಆಶ್ರಯವನ್ನು ಕಲ್ಪಿಸಬೇಕು.
- ಆರ್ಥಿಕ ಪ್ರಗತಿಯ ಹೊಣೆ ಪ್ರತಿಯೊಬ್ಬ ನಾಗರಿಕನ ಮೇಲೆ ಇದೆ.
- ನಗರ–ಗ್ರಾಮೀಣ ಪ್ರದೇಶದಲ್ಲಿನ ಬಡವ–ಶ್ರೀಮಂತ ಎಂಬ ಅಂತರ ಕಡಿಮೆಯಾಗಬೇಕು.
- ವಿಶ್ವವಿದ್ಯಾಲಯಗಳು ಸಮಾಜದ ಅಗತ್ಯ ಬದಲಾವಣೆಗೆ ಪ್ರಯತ್ನಿಸಬೇಕು.
- ದೇಶದಾದ್ಯಂತ ನೈಜ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸಿ ಜನತೆಯ ಅಭಿವೃದ್ಧಿಗೆ ಕಂಕಣಬದ್ಧರಾಗಬೇಕು.
- ಜನಾಂಗ ಮತ್ತು ಜಾತಿ ಬೇಧಗಳನ್ನು ತೊಡೆದು ಹಾಕಲು ಮುಂದಾಗಬೇಕು.
- ಭಾರತದ ಆರ್ಥಿಕತೆಯು ಕೃಷಿಯ ಮೇಲೆ ಅವಲಂಬಿತವಾಗಿದ್ದು ಕೃಷಿ ಅಭಿವೃದ್ಧಿಗಾಗಿ ಮಹತ್ತರ ಯೋಜನೆಗಳನ್ನು ಕೈಗೊಳ್ಳಬೇಕು.
- ಸಮಾಜವಾದದ ತಳಹದಿಯ ಮೇಲೆ ಸಮಾಜವನ್ನು ನಿರ್ಮಾಣ ಮಾಡೋಣ.
- ೧೯೬೯ ಅಕ್ಟೋಬರ್ ೨ ರಂದು ಗಾಂಧಿಯವರ ೧೦೦ನೇ ಹುಟ್ಟು ಹಬ್ಬದಲ್ಲಿ ಅವರ ಬೋಧನೆಗಳನ್ನು ಅನುಷ್ಠಾನದ ಮುಖಾಂತರ ಮಹತ್ವದ ಹೆಜ್ಜೆ ಇಡೋಣ. ೨೦೧೯ ಅಕ್ಟೋಬರ್ ೨ ಗಾಂಧೀಜಿಯವರ ೧೫೦ನೇ ವರ್ಷದ ಆಚರಣೆಯ ಸಲುವಾಗಿ ಅವರ ಬೋಧನೆಯಲ್ಲಿ ಒಂದಾದ ಸ್ವಚ್ಛ ಭಾರತದ ಕನಸನ್ನು ನನಸಾಗಿಸುವ ಒಂದು ಪ್ರಯತ್ನವನ್ನು

ಈಗಿನ ಕೇಂದ್ರ ಸರಕಾರ ಇಟ್ಟುಕೊಂಡಿದೆ. ೧೦೦ನೇ ವರ್ಷದ ಆಚರಣೆಯ ಸಂದರ್ಭದಲ್ಲಿ ವಿ. ವಿ. ಗಿರಿಯವರು ನೀಡಿದ ಸಂದೇಶದ ಫಲವೇ ಇರಬಹುದೇನೋ.

- ಪ್ರಗತಿಪರ ರಾಷ್ಟ್ರವಾಗಿ ಮುನ್ನಡೆಸಲು ಜನಸಂಖ್ಯೆಯನ್ನು ನಿಯಂತ್ರಿಸಬೇಕು. ಮಿತ ಸಂತಾನದ ಬಗ್ಗೆ ಯುವಕ-ಯುವತಿಯರಲ್ಲಿ ಅರಿವು ಮೂಡಿಸಬೇಕು.

ಹೀಗೆ ವಿ. ವಿ. ಗಿರಿಯವರು ರಾಷ್ಟ್ರಪತಿಯಾಗಿದ್ದಾಗ ಮಾಡಿದ ಭಾಷಣದ ಹಿನ್ನೆಲೆಯನ್ನು ಗಮನಿಸಿದರೆ ನಾಡಿಗೇರ ಕೃಷ್ಣರಾಯರು ಸಮಾಜವಾದಿಯಾಗಿ ಕಾರ್ಮಿಕ ವಾದಿಯಾಗಿ ಗಿರಿಯವರು ಹೊಂದಿದ್ದ ತತ್ವಗಳು, ಪ್ರಗತಿಶೀಲ ಕಾಲಘಟ್ಟದ ಸಾಹಿತ್ಯದ ಧೋರಣೆಗಳು ಕೂಡಾ ಆಗಿದ್ದವು. ವಿ. ವಿ. ಗಿರಿಯವರ ಜೀವನ ಚರಿತ್ರೆಯೊಂದಿಗೆ ನಾಡಿಗೇರ ಕೃಷ್ಣರಾಯರು ಪ್ರಗತಿಶೀಲ ಕಾಲಘಟ್ಟದ ಆಶಯಗಳನ್ನು ಮತ್ತು ವಿಚಾರಗಳನ್ನು ಅವರ ಬದುಕಿನ ಹಿನ್ನೆಲೆಯಲ್ಲಿ ಸಮಾಜ ನಿರ್ಮಾಣಗೊಳ್ಳಬೇಕು ಎಂಬ ನೈಜ ಕಾಳಜಿ ನಾಡಿಗೇರರ ಬರಹದಲ್ಲಿದೆ.

ವೈ. ಎನ್. ಗುಂಡೂರಾವ್ ಮತ್ತು ಕೃಷ್ಣ ಸುಬ್ಬರಾವ್‌ರವರು ಸಂಪಾದಿಸಿರುವ 'ಬೆಸ್ಟ್ ಆಫ್ ನಾಡಿಗೇರ್' ಎಂಬ ನಗೆ ಲೇಖನದಲ್ಲಿ ನಾಡಿಗೇರ ಕೃಷ್ಣರಾಯರ ವೈಚಾರಿಕತೆಯ ಸ್ವರೂಪವನ್ನು ತಿಳಿಯಬಹುದು.

'ಶಿಫಾರಸು ಪತ್ರ' ಎಂಬ ನಗೆ ಲೇಖನದಲ್ಲಿ ವರ್ಣಾಶ್ರಮ ಕಾಲದಲ್ಲಿ ವಿದ್ಯಾರ್ಥಿ ಗುರುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ನಂತರ ಮನೆಗೆ ಬಂದು ತನ್ನ ಕುಲಕಸುಬು ಮಾಡುತ್ತಿದ್ದ. ಆದರೆ ಪ್ರಸ್ತುತ ಕಾಲಘಟ್ಟದಲ್ಲಿ ಶಿಫಾರಸು ಪತ್ರವಿಲ್ಲದೆ ಹೋದರೆ ಶಾಲಾ-ಕಾಲೇಜುಗಳಿಗೆ ಸೇರುವುದು ಕಷ್ಟವಾಗಿದೆ. ಶಿಕ್ಷಣವೆಂಬುದು ಹಣ ಉಳ್ಳವರಿಗೆ, ಶಿಫಾರಸು ತಂದವರಿಗೆ, ಅಯೋಗ್ಯನಿಗೆ ಉದ್ಯೋಗ ದೊರಕುವ ದುಃಸ್ಥಿತಿ ಮೊದಲಾದ ಸಾಮಾಜಿಕ ವಿಷಯಗಳನ್ನು ವಿಡಂಬಿಸುತ್ತಾರೆ.

'ನಾನು ಹಲ್ಲು ಕೀಳಿಸಿದ್ದು' ಎಂಬ ನಗೆ ಲೇಖನದಲ್ಲಿ ಹಲ್ಲು ಕೀಳಿಸುವ ಸಂದರ್ಭವನ್ನು ಗಮನಿಸಿದಾಗ ಇತ್ತೀಚಿನ ದಿನದ ಹಲ್ಲು ವೈದ್ಯನ ಮನೋವೃತ್ತಿ, ರೋಗಿಯ ಪರದಾಟ, ವೈದ್ಯನ ಹಣ ಮಾಡುವ ಧಾವಂತ ಎಲ್ಲವನ್ನೂ ವಿಡಂಬಿಸುತ್ತದೆ. 'ಮುನ್ನುಡಿಗಳು' ಎಂಬ ನಗೆ ಲೇಖನದಲ್ಲಿ ಮುನ್ನುಡಿಗಳು ಇಂದೂ ವ್ಯಾಧಿಯಾಗಿದೆ ಎಂದು ಭಾವಿಸುತ್ತಾರೆ. ಕಥೆ, ಕವಿತೆ, ಕಾದಂಬರಿ, ವಿಚಾರ ವಿಮರ್ಶೆ ಯಾವುದೇ ಆದರೂ ಗ್ರಂಥಕ್ಕೆ ಮುನ್ನುಡಿ ಇರುತ್ತದೆ. 'ಗ್ರಂಥಕ್ಕಾಗಿ ಮುನ್ನುಡಿಯೇ, ಮುನ್ನುಡಿಗಾಗಿ ಗ್ರಂಥವೋ' ಎಂಬ ಅವರ ಮಾತಿನಲ್ಲಿ ಮುನ್ನುಡಿಗಳು ಕೆಲವೊಮ್ಮೆ ದೀರ್ಘವಾಗುವುದು ಅಥವಾ ಗ್ರಂಥಕಾರನನ್ನು ಹೊಗಳಲ್ಪಟ್ಟಿರುವ, ಕೃತಿಕಾರನ ಪರಿಚಯವೇ ಇಲ್ಲದ ಪ್ರಸಂಗ ಎಲ್ಲವನ್ನೂ ವಿಮರ್ಶಿಸುತ್ತಾರೆ. ಮುನ್ನುಡಿಗಳು ಇಂದಿನ ಕಾಲಘಟ್ಟದಲ್ಲಿ ಸತ್ವಹೀನವಾಗಿರುವ ಪ್ರಸಂಗವನ್ನು ಸ್ಪಷ್ಟವಾಗಿ ಚರ್ಚಿಸುತ್ತಾರೆ.

'ಖೋಟಾ ನಾಣ್ಯ' ಎಂಬ ಲೇಖನದಲ್ಲಿ ನಾಣ್ಯಕ್ಕೆ ಮಾತ್ರವಲ್ಲ ವ್ಯಕ್ತಿ, ವಿಚಾರಗಳು, ತತ್ವಗಳಿಗೂ ಅನ್ವಯಿಸುತ್ತದೆ. ಖೋಟಾ ನೋಟುಗಳ ಚಲಾವಣೆ ಜಪಾನ್, ಚೀನಾ ಖೋಟಾ ನಾಣ್ಯಗಳನ್ನು ಟಂಕಿಸಿದವು. ಆ ಮೂಲಕ ಚೀನಾದ ಆರ್ಥಿಕತೆಯು ಬುಡಮೇಲಾಗಿದ್ದು ಇವೆಲ್ಲವನ್ನು ಗಮನಿಸಿದಾಗ ಇಂದಿನ ಅನೇಕ ದೇಶಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಖೋಟಾ ನೋಟನ್ನು

ಚಲಾವಣೆಗೆ ತಂದು ಆ ದೇಶಗಳ ಆರ್ಥಿಕ ಸ್ಥಿತಿಯನ್ನು ಬುಡಮೇಲು ಮಾಡುವ, ಅಭಿವೃದ್ಧಿ ಹೊಂದಿರುವ ದೇಶಗಳ ಆರ್ಥಿಕ ಯುದ್ಧದ ತಂತ್ರವನ್ನು ಇಂದೂ ಕಾಣಬಹುದು. ನಾಣ್ಯಗಳಿಗೆ ಒಂದು ದೇಶದಲ್ಲಿ ಇರುವ ಬೆಲೆಯು ಖೋಟಾ ನಾಣ್ಯಗಳಿಗೆ ಇಲ್ಲ. ಅದರಂತೆ ಖೋಟಾ ವ್ಯಕ್ತಿತ್ವದ ವಿಚಾರಗಳು, ತತ್ವಗಳು ಇಂದೂ ಸಮಾಜದಲ್ಲಿ ವಿಜೃಂಭಿಸಿ ಇಡೀ ಸಾಮಾಜಿಕ ವ್ಯವಸ್ಥೆಯೇ ಹದಗೆಡುತ್ತಿರುವ ಇಂದಿನ ಸ್ಥಿತಿಗೆ ಈ ನಗೆ ಲೇಖನದ ಹಾಸ್ಯ ಮೂಲಕ ಪ್ರತಿಕ್ರಿಯಿಸುತ್ತಾರೆ.

'ಬೆಲ್ಲದ ಮಾತು' ಎಂಬ ಲೇಖನದಲ್ಲಿ ಬಸ್ಸಿನಲ್ಲಿ ಪ್ರಯಾಣಿಸುವಾಗ ಪಡೆದ ಅನುಭವ. ಅದಕ್ಕೆ ಇಂಗ್ಲೀಷ್‌ನಿಂದ ಪ್ರತಿಕ್ರಿಯಿಸಿದ 'ಥ್ಯಾಂಕ್‌ಯೂ' ಮತ್ತು 'ಎಕ್ಸ್‌ಕ್ಯೂಜ್ ಮಿ' ಎಂಬ ಪದಗಳು, ಅದರಿಂದ ಪಡೆದ ಲಾಭ. ಈ ರೀತಿಯ ಬೆಲ್ಲದ ಮಾತಿನ ಚಾಳಿ ಕನ್ನಡತನದಲ್ಲಿ ಇಲ್ಲದಿರುವುದು, ಮನುಷ್ಯನಲ್ಲಿ ಒಳ್ಳೆಯ ವ್ಯಕ್ತಿತ್ವಗಳು ಇಲ್ಲದೇ ಹೋದರೂ ಚಿಂತೆಯಿಲ್ಲ, ಬೆಲ್ಲದಂತಹ ಮಾತಿನ ಮೂಲಕ ಲಾಭ ಪಡೆಯುವ ಇಂದಿನ ಸಮಾಜದ ದೃಷ್ಟಿಯನ್ನು ವಿಡಂಬಿಸುತ್ತಾರೆ.

'ಮುದ್ರಾ ರಾಕ್ಷಸನ ಹಾವಳಿ' ನಗೆ ಲೇಖನದಲ್ಲಿ ಮುದ್ರಿಸುವ ಸಂದರ್ಭದಲ್ಲಿ ಆಗುವ ದೋಷಗಳನ್ನು ವಿಡಂಬಿಸಿದ್ದಾರೆ. ಇತ್ತೀಚಿನ ಕೆಲವು ಪುಸ್ತಕಗಳನ್ನು ಗಮನಿಸಿದಾಗ ಅಲ್ಲಿ ಆಗುವ ಅನೇಕ ಮುದ್ರಾ ದೋಷಗಳನ್ನು ಕಾಣಬಹುದು. ಇದನ್ನು ಅಂದೇ ನಾಡಿಗೇರರು ತಮ್ಮ ಹಾಸ್ಯ ಲೇಖನದ ಮೂಲಕ ಎಚ್ಚರಿಕೆಯ ಸಂದೇಶವನ್ನು ನೀಡಿದ್ದಾರೆ. ಆ ಮೂಲಕ ಪ್ರಗತಿಶೀಲ ಸಾಹಿತಿಯಾಗಿ ಸಮಾಜದ ಕೈಗನ್ನಡಿಯಾಗಿ ತಮ್ಮ ನಗೆ ಬರಹದ ಮೂಲಕ ಅನೇಕ ವಿಚಾರಗಳನ್ನು ದಾಖಲಿಸಿದ್ದಾರೆ.

ನಾಡಿಗೇರ ಕೃಷ್ಣರಾಯರ ಮತ್ತೊಂದು ಲೇಖನ 'ನಮ್ಮ ಸಾಹಿತ್ಯ – ಅದರ ಗುರಿ' ಎಂಬುದು ಅ. ನ. ಕೃ. ಸಂಪಾದಿಸಿರುವ ೧೯೪೦ರಲ್ಲಿ ಪ್ರಕಟಗೊಂಡ 'ಪ್ರಗತಿಶೀಲ ಸಾಹಿತ್ಯ' ಎಂಬ ಕೃತಿಯಲ್ಲಿದೆ. ಪ್ರಗತಿಶೀಲ ಸಾಹಿತ್ಯ ಯಾವ ಬಗೆಯದು. ಅದು ಯಾರಿಗೆ ಸಂಬಂಧಿಸಿದ್ದು ಅದರ ಗುರಿಯನ್ನು ಕುರಿತಂತೆ ಸೌಂದರ್ಯದಿಂದ ವರ್ಣನೆಗಳಿಂದ ಕೂಡಿದ ಸಾಹಿತ್ಯವು ನಮಗೆ ಬೇಕಾಗಿಲ್ಲ. ಜನತೆಗೆ ಸಾಮಾಜಿಕ ಸಮಸ್ಯೆಗೆ ಪರಿಹಾರ ನೀಡುವ ಸಾಹಿತ್ಯವನ್ನು ಬರೆಯುವುದು ಆಗಿದೆ. ಪ್ರಗತಿಶೀಲ ಸಾಹಿತ್ಯದಲ್ಲಿ ಕಾಣಿಸಿಕೊಂಡ ಕೆಲವು ಲೇಖಕರು ಕಮ್ಯುನಿಸ್ಟರು ಅವರು ನಾಸ್ತಿಕರು ಎಂಬುದು ವೈಯಕ್ತಿಕ ವಿಚಾರವಾಗಿದೆಯೇ ಹೊರತು ಪ್ರಗತಿಶೀಲ ಕಾಲಘಟ್ಟದ ಧೋರಣೆಯಲ್ಲ ಎಂಬುದಾಗಿ ಉತ್ತರಿಸುತ್ತಾರೆ. ಪ್ರಗತಿಶೀಲ ಸಾಹಿತಿಗಳೆಲ್ಲಾ ಕಮ್ಯುನಿಸ್ಟ್ ಭಾವನೆಯನ್ನು ಹೊಂದಿದ್ದಾರೆ ಎಂಬುದನ್ನು ಅಲ್ಲಗಳೆಯುತ್ತಾರೆ. ಪ್ರಗತಿಶೀಲ ಚಳುವಳಿಯಲ್ಲಿ ಕಾಂಗ್ರೇಸ್, ಮುಸ್ಲಿಂ ಲೀಗ್, ಹಿಂದೂ ಮಹಾಸಭಾದ ಎಲ್ಲಾ ರೀತಿಯ ಸಾಹಿತಿಗಳು ಕಂಡು ಬರುವುದು. ಆದರೆ ಎಲ್ಲರ ಗುರಿ ದೇಶದ ಸಮಸ್ಯೆಗಳಿಗೆ ಸಾಹಿತ್ಯದ ಮೂಲಕ ಪರಿಹಾರವನ್ನು ನೀಡುವುದು.

ಈ ಲೇಖನವನ್ನು ಸೂಕ್ಷ್ಮವಾಗಿ ಗ್ರಹಿಸಿದರೆ ಪ್ರಗತಿಶೀಲ ಚಳುವಳಿಗಾರರ ಮೂಲ ಉದ್ದೇಶ ದಲಿತರು, ಬಡವರು, ಶೋಷಿತರು, ಜನಸಾಮಾನ್ಯರ ಜೀವನವನ್ನು ಉತ್ತಮ ಮಟ್ಟಕ್ಕೆ ಕೊಂಡೊಯ್ಯುವಂತೆ ಸಾಮಾಜಿಕ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಸರಿಪಡಿಸುವ ಮೂಲಕ ಉತ್ತಮ ಸಮಾಜವನ್ನು ನಿರ್ಮಾಣ ಮಾಡುವ ಗುರಿಯನ್ನು ಕಾಣಬಹುದು.

ಮನುಷ್ಯ ನಾಸ್ತಿಕ ಅಥವಾ ಆಸ್ತಿಕನಾಗುವುದು ಆತನ ವೈಯಕ್ತಿಕ ವಿಚಾರ. ಅದಕ್ಕೆ ಪ್ರಗತಿಶೀಲ ಸಾಹಿತ್ಯಕ್ಕೂ ಸಂಬಂಧವಿಲ್ಲ ಎಂಬ ಅವರ ಮಾತಿನಲ್ಲಿ ಪ್ರಗತಿಶೀಲರೆಲ್ಲಾ ದೇವರು, ಧರ್ಮ, ಸಂಸ್ಕೃತಿಯ ವಿರೋಧಿಗಳಲ್ಲ. ಆದರೆ ಅವುಗಳಿಂದ ಸಾಮಾನ್ಯ ಜನರಿಗೆ ಉಂಟು ಮಾಡುವ ಧಾರ್ಮಿಕ ಮೌಢ್ಯ, ಮೇಲು-ಕೀಳು, ಜಾತೀಯತೆ, ಅಸ್ಪೃಶ್ಯತೆ ಮೊದಲಾದವುಗಳ ವಿರುದ್ಧ ಹೋರಾಟವು ಇದ್ದೇ ಇರುತ್ತದೆ ಎಂಬ ಅಂಶವನ್ನು ಈ ಸಾಹಿತ್ಯದ ಧೋರಣೆಯಲ್ಲಿ ತಿಳಿಯಬಹುದು.

ಪ್ರಗತಿಶೀಲ ಕಾಲಘಟ್ಟದ ಮತ್ತೊಬ್ಬ ಪ್ರಮುಖ ಬರಹಗಾರರಲ್ಲಿ ತಿರುಮಲೆ ತಾತಾ ಶರ್ಮರವರು ಒಬ್ಬರು. ಇವರು ಬರೆದ ವಿಚಾರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿಚಾರ ಕರ್ನಾಟಕ ಮತ್ತು ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಜೀವನ ಸಾಧನೆ ಎಂಬ ಜೀವನ ಚರಿತ್ರೆಯು ಮುಖ್ಯವಾದುದು. ವಿಚಾರ ಕರ್ನಾಟಕ ಕೃತಿಯಲ್ಲಿ ಕನ್ನಡ ನಾಡಿನ ಹಲವಾರು ವಿಚಾರಗಳನ್ನು ಚರ್ಚಿಸಿದ್ದಾರೆ. ಕನ್ನಡವನ್ನು ಚಾರಿತ್ರಿಕವಾಗಿ, ಭಾಷಾ ವಾಚಕವಾಗಿ, ದೇಶವಾಚಕವಾಗಿ, ಕನ್ನಡದ ಶ್ರೀವಿಜಯ, ಪಂಪ, ತೆಲುಗಿನ ಶ್ರೀನಾಥ ಕವಿಗಳು ಬರವಣಿಗೆಯ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ತಿಳಿಸಿದ್ದಾರೆ.

ಪಂಚ ದ್ರಾವಿಡ ಭಾಷೆಗಳಲ್ಲಿ ಮರಾಠಿಯೂ ಒಂದು. ಮರಾಠಿಯು ಕೂಡಾ ಹೆಚ್ಚು ಕಡಿಮೆ ಒಂದೇ ಆಗಿತ್ತೆಂದು ಬಾಲ ಗಂಗಾಧರ ತಿಲಕರ ಅಭಿಪ್ರಾಯದ ಹಿನ್ನೆಲೆಯಲ್ಲಿ ಇವೆರಡೂ ಸಹೋದರ ಭಾಷೆಗಳೇನು ಎಂಬ ಅನುಮಾನವನ್ನು ವ್ಯಕ್ತಪಡಿಸಿದರ ಹಿನ್ನೆಲೆಯನ್ನು ನೋಡಿದರೆ ಕನ್ನಡ ನಾಡಿನ ಜೊತೆಗೆ ತಿಲಕರಿಗೆ ಒಂದು ರೀತಿಯ ಮಧುರ ಬಾಂಧವ್ಯವಿತ್ತೇನೋ, ಏಕೆಂದರೆ ಅನೇಕ ಭಾಷಾ ತಜ್ಞರು ದ್ರಾವಿಡ ಭಾಷೆಗಳಲ್ಲಿ ತಮಿಳು, ಕನ್ನಡ, ಮಲಯಾಳಂ, ತೆಲುಗು, ತುಳು, ಇವುಗಳ ಹಿನ್ನೆಲೆಯಲ್ಲಿ ದಕ್ಷಿಣ ದ್ರಾವಿಡ, ಉತ್ತರ ದ್ರಾವಿಡ, ಮಧ್ಯ ದ್ರಾವಿಡ ಎಂಬುದಾಗಿ ವಿಭಾಗಿಸಿಯೂ ಯಾವ ಭಾಷೆಗಳು ಯಾವ ವಲಯಕ್ಕೆ ಸೇರಿದವು ಎಂದು ನಿಖರವಾಗಿ ಅಧ್ಯಯನಗಳು ನಡೆದ ಸಂದರ್ಭದಲ್ಲಿ ತಿಲಕರ ಹೇಳಿಕೆಯನ್ನು ತಿ. ತಾ. ಶರ್ಮರು ಕನ್ನಡ-ಮರಾಠಿ ಭಾಷೆಯ ಬಾಂಧವ್ಯದ ಅಥವಾ ಸಂಬಂಧದ ಬಗ್ಗೆ ದಾಖಲಿಸುವುದು ಅಷ್ಟು ಸಮಂಜಸವಲ್ಲ.

ಅಮೇರಿಕಾ ದಂಡ ನಾಯಕನೊಬ್ಬ ಸಾಹಿತ್ಯ, ಜೀವನ, ವಿಚಾರಗಳನ್ನು ಕುರಿತಂತೆ "ಅಮೇರಿಕಾದ ಜನ ಹೇಗಿದ್ದರು ಪುಸ್ತಕ, ಸಾಹಿತ್ಯ, ಕವಿ ಈ ಮಾತುಗಳೇ ಬಳಕೆಯಲ್ಲಿ ಇರಲಿಲ್ಲ. ಓದುವವರು ಕೆಲವರಿದ್ದರು. ಅವರ ಆದರ್ಶ ಇಂಗ್ಲೀಷ್, ಇಂಗ್ಲೀಷ್ ಕವಿಗಳು, ಇಂಗ್ಲೀಷ್ ಕಲಾವಿದರು ಇನ್ನೂ ಯಾರೂ ಇಲ್ಲ. ಯಂಗ್ ಪೋಲರ್, ಅಡಿಸನ್, ವಾಟ್ಸನ್ ಇವರೇ ಅಮೇರಿಕಾದ ಮಹಾಕವಿಗಳು! ಮಾದರಿಗಳು! ಕಾದಂಬರಿಕಾರ ಸರ್ ವಾಲ್ಟರ್ ಸ್ಕಾಟ್ ಒಬ್ಬನೇ. ನಾಚಿಕೆ ಹೇಸಿಗೆ ಇಲ್ಲದವರೆಲ್ಲಾ ಷೇಕ್ಸ್‌ಪಿಯರ್ ಭಕ್ತ ಶಿರೋಮಣಿಗಳು! ಪ್ರಾಟಸ್ಟೆಂಟರ ಪಾಲಿಗೆ ಮಿಲ್ಟನ್ ಒಬ್ಬನೇ ಮಹಾಕವಿ! ಮಾನ ಮರ್ಯಾದೆ ಉಳ್ಳವರು ಯಾರೂ ಬೈರನ್ ಷೆಲ್ಲಿಗಳ ಹೆಸರನ್ನು ಉಚ್ಚರಿಸುತ್ತಿರಲಿಲ್ಲ! ಬರ್ನ್ಸ್ ಪಾಪ ಕೂಸು! ಅವನನ್ನು ಹೆತ್ತ ತಾಯಿಗೆ ಅವನನ್ನು ಕಂಡರೆ ನಾಚಿಕೆ"[೧೬] ಎಂಬ ಮಾತನ್ನು ಗಮನಿಸಿದರೆ ನಮ್ಮ ಭಾಷೆ, ಸಾಹಿತ್ಯ, ಸಂಸ್ಕೃತಿಯ ಪರಂಪರೆಯ ಬಗ್ಗೆ ನಾವೇ ಮಲತಾಯಿ ಧೋರಣೆಯನ್ನು ಹೊಂದಿ ಇಂಗ್ಲೀಷ್ ಮುಖ್ಯ ಆದರ್ಶಗಳಾಗಿ ಹೇಗೆ ನಮ್ಮ ಸಾಹಿತ್ಯ ಸಾಂಸ್ಕೃತಿಕ ಮನೋಧರ್ಮದಿಂದ ಹಿಮ್ಮುಖವಾಗುತ್ತಿದ್ದೇವೆ ಎಂದು ಹೇಳುತ್ತಾರೆ.

ಶ್ರೀ ವಿಜಯ, ಪಂಪ, ರನ್ನ, ವಚನಕಾರರು, ಕೀರ್ತನಕಾರರು, ಆಧುನಿಕ ಕನ್ನಡ ಸಾಹಿತ್ಯದ ವಿಪುಲರಾಶಿ. ಉತ್ಕೃಷ್ಟ ಗ್ರಂಥಗಳು, ಶ್ರೀಮಂತ ಸಾಹಿತ್ಯ ಮತ್ತು ಸಂಸ್ಕೃತಿಯ ಪರಂಪರೆಯ ಬಗ್ಗೆ ಗೌರವ ಅಭಿಮಾನಗಳು ಇಲ್ಲವಾಗಿ ಅಮೆರಿಕಾದ ದಂಡನಾಯಕ ಹೇಳುವ ಹಾಗೆ ಇಂಗ್ಲೀಷ್ ಭಾಷೆ ಸಾಹಿತ್ಯ ಸಂಸ್ಕೃತಿಗಳ ಮೇಲಿನ ಅತಿಯಾದ ವ್ಯಾಮೋಹ ನಮ್ಮ ಮೂಲ ಬೇರುಗಳನ್ನು ನಾಶ ಮಾಡುತ್ತದೆ. ಈ ರೀತಿಯ ಮನೋಧರ್ಮದಿಂದ ಹೊರ ಬರಬೇಕು. ಭಾಷೆಯನ್ನು ಗೌರವಿಸುವ, ಪ್ರೀತಿಸುವ, ಪರಂಪರೆಯ ಬಗ್ಗೆ ಅಭಿಮಾನವನ್ನು ಹೊಂದುವ ಮನಃಸ್ಥಿತಿಯು ನಮ್ಮೊಳಗೆ ಮೂಡಬೇಕು. ಪರಭಾಷೆಗಳ ಮತ್ತು ಸಂಸ್ಕೃತಿಯ ಮೇಲಿನ ಅತಿಯಾದ ವ್ಯಾಮೋಹದ ದೌರ್ಬಲ್ಯಗಳು ನಾಶವಾಗಬೇಕು, ಕನ್ನಡತನದ ಮನಸ್ಸು ಜಾಗೃತವಾಗಬೇಕು.

ಟಿ. ಪಿ. ಕೈಲಾಸಂ ಮತ್ತು ತಿ. ತಾ. ಶರ್ಮರ ನಡುವೆ ಕನ್ನಡ ಭಾಷೆಗೆ ಸಂಬಂಧಿಸಿದಂತೆ ತಿ. ತಾ. ಶರ್ಮರು ತಮ್ಮ ಬರಹಗಳಲ್ಲಿ ಗ್ರಾಮೀಣ ಶಬ್ದಗಳನ್ನು ಬಳಸುವುದೇ ಕನ್ನಡ ಕುಲಗೆಟ್ಟು ಹೋದೀತು ಎಂದಾಗ ಕೈಲಾಸಂರವರು ಕೆಡುವುದಕ್ಕೆ ಕನ್ನಡಕ್ಕೆ ಒಂದೇ ಕುಲವೇನು? ಕನ್ನಡ ಕುಲವನ್ನು ಗ್ರಾಮೀಣ, ನಾಗರಿಕ ಮೊದಲಾದ ರೀತಿಯಲ್ಲಿ ವರ್ಗೀಕರಣದ ಹಿನ್ನೆಲೆಯಲ್ಲಿ ಮುಂದುವರೆಸಿ ಹೇಳುವುದಾದರೆ ಕರ್ನಾಟಕದಲ್ಲಿ ೩೦ ಜಿಲ್ಲೆಗಳಿವೆ. ಈ ೩೦ ಜಿಲ್ಲೆಗಳಲ್ಲಿಯೂ ಮೂವತ್ತು ಕುಲಗಳಿವೆ ಎಂದು ಭಾವಿಸಬಹುದು. ಒಂದೊಂದು ಪ್ರದೇಶದಲ್ಲಿಯೂ ಒಂದೊಂದು ರೀತಿಯ ಭಾಷಾ ವೈಶಿಷ್ಟ್ಯವನ್ನು ಕಾಣಬಹುದು. ಇದು ಜೀವಂತ ಭಾಷೆಯ ವೈಶಿಷ್ಟ್ಯವೇ ಆಗಿದೆ. ಭಾಷೆಯು ಒಂದು ಕಾಲಕ್ಕೆ ತಕ್ಕಂತೆ ಬದಲಾವಣೆಯನ್ನು ಹೊಂದುವ ಸ್ಥಿತಿಯನ್ನು ಕೈಲಾಸಂರವರ ಮಾತಿನಲ್ಲಿ ವಿವರಿಸಬಹುದು.

ಪತ್ರ ಸಾಹಿತ್ಯವನ್ನು ಕುರಿತಂತೆ ಪ್ರಾಚೀನ ಭಾರತದಲ್ಲಿ ಸಾರ್ವಜನಿಕ ಜೀವನದ ವಿಕಾಸದ ಸಲುವಾಗಿ ಪತ್ರ ಸಾಹಿತ್ಯ ರೂಪುಗೊಂಡಿತೋ ಇಲ್ಲವೋ ಆದರೆ ಕಾವ್ಯಗಳಲ್ಲಿ, ನಾಟಕಗಳಲ್ಲಿ ಶಕುಂತಲೆ ಮೊದಲಾದವರು ತಮ್ಮ ಪ್ರಿಯತಮರಿಗೆ ಪತ್ರಗಳನ್ನು ಬರೆದ ಹೇಳಿಕೆಗಳಿವೆ. ಅದರಂತೆ ಮೊಘಲರ ಕಾಲಕ್ಕೆ ಬರುವವರೆಗೂ ರಾಜಕೀಯ, ಸಾಮಾಜಿಕ ಜೀವನಕ್ಕೆ ಸಂಬಂಧಿಸಿದಂತೆ ಪತ್ರಗಳು ಸಿಗುವುದಿಲ್ಲ. ಪರ್ಶಿಯನ್ ಭಾಷೆಯಲ್ಲಿ ಹಲವು ಪತ್ರಗಳಿದ್ದು ಅವು ಆ ಕಾಲಘಟ್ಟದ ಸಾಮಾಜಿಕ, ರಾಜಕೀಯ, ಧಾರ್ಮಿಕ ಮೊದಲಾದ ವಿಚಾರಗಳನ್ನು ಸೂಕ್ಷ್ಮವಾಗಿ ತಿಳಿಯಲು ಸಾಧ್ಯವಾಗುತ್ತದೆ. ಪತ್ರ ಸಾಹಿತ್ಯ ಸಂಶೋಧನೆಯ ಅವಶ್ಯಕತೆಯನ್ನು ತಿ. ತಾ. ಶರ್ಮರು ಚರ್ಚಿಸುತ್ತಾರೆ. ಕರ್ನಾಟಕದಲ್ಲಿ ಈ ರೀತಿಯ ಪತ್ರಗಳು ಅನೇಕ ಮಠಗಳಲ್ಲಿವೆ. ಹೈದರಾಲಿ ಮತ್ತು ಟಿಪ್ಪುವಿನ ಕಾಲದ ಪತ್ರಗಳು ಶೃಂಗೇರಿ ಮಠದಲ್ಲಿವೆ. ಕೆಳದಿ, ಸುರಪುರ, ಚಿತ್ರದುರ್ಗ, ತರೀಕೆರೆ ಮೊದಲಾದ ಪಾಳೆಗಾರರ ಕಾಲದ ಪತ್ರಗಳನ್ನು ಶೋಧಿಸಿ ಹೊರತೆಯಬೇಕಾದುದರ ಅಗತ್ಯತೆ ಮತ್ತು ಈ ಪತ್ರಗಳಿಂದ ಆ ಕಾಲದ ಕನ್ನಡ ನಾಡಿನ ವಾಸ್ತವ ಚಿತ್ರಣವನ್ನು ತಿಳಿಯಲು ಸಹಕಾರಿಯಾಗುತ್ತವೆ ಎಂಬ ನಿಲುವಿದೆ. ಕಾವ್ಯಗಳಲ್ಲಿ ವರ್ಣಿಸಬಹುದು ಆದರೆ ಪತ್ರಗಳಲ್ಲಿ ವಾಸ್ತವ, ಬದುಕಿನ ಸಮಾಜದ ಚಿತ್ರಣವೇ ಇರುತ್ತದೆ. ಹಾಗಾಗಿ ಪತ್ರ ಸಾಹಿತ್ಯದ ಸಂಶೋಧನೆಯ ಅಗತ್ಯತೆಯನ್ನು ತಿ. ತಾ. ಶರ್ಮರು ಚರ್ಚಿಸಿದ್ದಾರೆ.

ಪತ್ರ ಸಾಹಿತ್ಯವು ಕೂಡಾ ವಿಚಾರ ಸಾಹಿತ್ಯದ ಒಂದು ಭಾಗವಾಗಿದೆ. ಪತ್ರ ಸಾಹಿತ್ಯವನ್ನು ಅಸಡ್ಡೆ ಮಾಡುವ, ಅದು ಸಾಹಿತ್ಯವಲ್ಲವೆಂದು ಪರಿಭಾಷಿಸುವುದು ಯಾವುದೇ ವಿಚಾರವನ್ನು ಅದು ಧ್ವನಿಸುವುದಿಲ್ಲ ಎಂದು ಪತ್ರಸಾಹಿತ್ಯವನ್ನು ಜರಿಯುವ ಅನೇಕರಿಗೆ ಪತ್ರ ಸಾಹಿತ್ಯದಿಂದ ಏನೆಲ್ಲಾ

ಉಪಯುಕ್ತ ಮಾಹಿತಿ, ಜ್ಞಾನ, ತಿಳುವಳಿಕೆ ದೊರಕುತ್ತದೆ ಎಂಬುದನ್ನು ವಿಮರ್ಶಿಸುತ್ತಾರೆ. ಒಂದು ಕಾಲಘಟ್ಟದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಐತಿಹಾಸಿಕ ವಿಚಾರಗಳನ್ನು ತಿಳಿಯಲು ಪತ್ರ ಸಾಹಿತ್ಯ ಸಹಕಾರಿಯಾಗಿದೆ. ಶಾಸನ ಸಾಹಿತ್ಯ, ಹಸ್ತಪ್ರತಿ, ಸೃಜನಶೀಲ ಸಾಹಿತ್ಯ ಇವಷ್ಟೇ ಸಾಹಿತ್ಯ ಪ್ರಕಾರಗಳಲ್ಲದೆ ಪತ್ರ ಸಾಹಿತ್ಯವು ಅನೇಕ ವಿಚಾರಗಳನ್ನು ತಿಳಿಸುವ ಸಾಧನವಾಗಿದೆ. ಯಾವುದೇ ಸಾಹಿತ್ಯ ಪ್ರಕಾರಗಳನ್ನು ಅಲ್ಲಗಳೆಯುವ ತಾತ್ಸಾರದ ಧೋರಣೆಯನ್ನು ಖಂಡಿಸುತ್ತಾರೆ.

ಸಾಹಿತ್ಯೇತಿಹಾಸದ ಕಾಲವಿಭಾಗವನ್ನು ಕುರಿತಂತೆ ಕೃತಿಗಳಲ್ಲಿ ಕವಿಗಳು ಕಾಣಿಸಿಕೊಳ್ಳಬೇಕೇ, ಬೇಡವೇ? ಎಂಬ ಪ್ರಶ್ನೆಗೆ ವ್ಯಾಸ, ವಾಲ್ಮೀಕಿಯರು ಕೃತಿಯಲ್ಲಿ ಕಾಣಿಸುವುದಿಲ್ಲ. ಪಂಪ, ರನ್ನ ಮೊದಲಾದವರು ಅವರ ಕಾವ್ಯದಲ್ಲಿ ಕಾಣಿಸಿಕೊಳ್ಳುವರು. ಆದರೆ ನವ್ಯದಲ್ಲಿ ಕವಿಗಳೇ ಕವಿತೆಯಲ್ಲಿ ಕುಣಿದಾಡುವ ಬಗ್ಗೆ ವಿಮರ್ಶಿಸುತ್ತಾರೆ. ಕಾವ್ಯದಲ್ಲಿ ಕವಿ ಕಾಣಿಸಿಕೊಂಡರೂ ಅಲ್ಲಿ ಸತ್ವಯುತವಾಗಿ ಜನತೆಗೆ ಸಂದೇಶವನ್ನು ಅರ್ಥವಾಗುವ ರೀತಿಯಲ್ಲಿರಬೇಕೆಂದು, ಬರೀ ಕಾವ್ಯದಲ್ಲಿ ಕಾಣಿಸಿಕೊಳ್ಳುವುದೇ ಸಾಹಿತ್ಯವೆಂದು ತಿಳಿಯುವ ನವ್ಯ ಕಾಲಘಟ್ಟದವರ ದೃಷ್ಟಿಯನ್ನು ತಿರಸ್ಕರಿಸುತ್ತಾರೆ.

ಪ್ರಗತಿಶೀಲ ಕಾಲಘಟ್ಟದ ಬಹುಮುಖ್ಯ ಬರಹಗಾರರು ನವ್ಯ ಸಾಹಿತ್ಯವನ್ನು ಖಂಡಿಸುತ್ತಾರೆ. ಕಾರಣವೆಂದರೆ ಅದು ಜನತೆಗಾಗಿ ಬರೆದ ಸಾಹಿತ್ಯವಲ್ಲ, ಕಲೆಗಾಗಿ ಸಾಹಿತ್ಯ ಎಂದು ಪರಿಭಾವಿಸುವುದು ವ್ಯಕ್ತಿ ವಿಶಿಷ್ಟತೆ, ಸಂಕೇತ, ಅಮೂರ್ತ ಪರಿಕಲ್ಪನೆಗಳು ದಾಖಲಿಸುವುದು. ಇದು ಓದುಗರಿಗೆ ಅರ್ಥವಾಗದ ಸಾಹಿತ್ಯವೇ ಆಗಿದೆ. ಇದು ಸಾಹಿತ್ಯದ ಲಕ್ಷಣವೂ ಅಲ್ಲವೆಂಬ ಧೋರಣೆ ಪ್ರಗತಿಶೀಲ ಕಾಲಘಟ್ಟದ ಬರಹಗಾರರಲ್ಲಿರುವ ನಿಲುವು ಅದೇ ನಿಲುವು ತಿ. ತಾ. ಶರ್ಮರಲ್ಲಿಯೂ ಇದೆ.

ಕನ್ನಡ ಸಾಹಿತ್ಯವನ್ನು ವಸ್ತುವಿನಿಂದ, ವ್ಯಕ್ತಿಯಿಂದ, ರಾಜವಂಶದಿಂದ, ಛಂದೋರೂಪದಿಂದ ಕಾಲವಿಭಾಗ ಮಾಡುವುದನ್ನು ತಿ. ತಾ. ಶರ್ಮರು ವಿಮರ್ಶಿಸುತ್ತಾರೆ. ಜೊತೆಗೆ ಕವಿಯ ಪ್ರತಿಭಾ ಪ್ರಕಟನ ಸಮಯ ಯಾವುದು? ಕವಿತೆ ಬರೆಯಲು ಸ್ಫೂರ್ತಿ ಯಾವುದು? ಮೊದಲಾದವುಗಳನ್ನು ಇಟ್ಟುಕೊಂಡು ವಿಂಗಡಿಸುವುದು ಸರಿಯಾದ ಕ್ರಮವಲ್ಲವೆಂದು ಕನ್ನಡ ಸಾಹಿತ್ಯ ಚರಿತ್ರೆಯನ್ನು ವಿಂಗಡಿಸುವ ಕ್ರಮವನ್ನು ಒಪ್ಪುವುದಿಲ್ಲ.

೩೦-೦೬-೧೯೪೦ರಲ್ಲಿ ವಿಶ್ವ ಕರ್ನಾಟಕ ಸಾಹಿತ್ಯ ಕೂಟದಲ್ಲಿ ಫ್ರಾನ್ಸಿನ ಸ್ವಾತಂತ್ರ್ಯವಾದಿಯೂ, ಕಾದಂಬರಿಕಾರನಾದ ಎಮಿಲಿ ಜೋಲಾನ ಬಗ್ಗೆ ಪರಿಚಯಿಸಿ, ಸಮಾಜದಲ್ಲಿನ ಸಮಸ್ಯೆಗಳ ಕುರಿತು ಬರೆಯಬೇಕೆಂದು 'ಜಮೀನರ್' ಎಂಬ ಕತೆಗಾಗಿ ಮುನ್ನುಡಿಯಲ್ಲಿ ಆತ ಈ ರೀತಿ ಬರೆದ "ನಾನಿಲ್ಲಿ ಕೂಲಿಕಾರರ ನರಕಕ್ಕೆ ಇಳಿದಿದ್ದೇನೆ. ಇದನ್ನು ಚಿತ್ರಿಸುವುದರಲ್ಲಿ ನಾನೇನನ್ನಾದರೂ ತುಂಬಾ ಹೊಲಸಿನ ವಿವರಗಳನ್ನು ಕೊಟ್ಟಿದ್ದರೆ ಅದಕ್ಕೆ ಕಾರಣ ನಮ್ಮ ಜನ, ನಮ್ಮ ಸಮಾಜ, ಇಂತಹ ಕೀಳು ಜೀವನ, ಸಮಾಜ ನಮ್ಮಲ್ಲಿದೆಯೆಂಬುದನ್ನು ವಾಚಕ ಜನ ತಿಳಿಯಲಿ, ತಿಳಿದು ಕಣ್ಣೀರಿಡಲಿ ಎಂದು ಬರೆದಿದ್ದೇನೆ. ಈ ಚಿತ್ರಗಳು ಎಳೆ ಹುಡುಯರಿಗಲ್ಲ! ಗೃಹಸ್ಥರು ಅಗತ್ಯವಾಗಿ ಓದಲಿಕ್ಕಾಗಿ, ಓದಿದವರು ನೀವೆಲ್ಲಾ ನ್ಯಾಯಕ್ಕಾಗಿ ಜೀವ ದಯೆಗಾಗಿ ನಿಮ್ಮ ಸ್ವರವನ್ನೆತ್ತಿದಿರೆಂದರೆ ಸಾಕು ನನ್ನ ಕೆಲಸ ಸಾರ್ಥಕವಾಯಿತು"[೧೭] ಎಂದು ತಮ್ಮ ಭಾಷಣದಲ್ಲಿ ತಿ. ತಾ. ಶರ್ಮರು ಹೇಳುತ್ತಾರೆ.

ಸಾಮಾಜಿಕ ಜವಾಬ್ದಾರಿಯೆಂಬುದು ಜನರದ್ದು ಮತ್ತು ಸಮಾಜದ್ದು. ಸಾಹಿತ್ಯ ಧೋರಣೆಯು ಸಮಾಜದಲ್ಲಿನ ಸಮಸ್ಯೆಗಳನ್ನು ಸಾಹಿತ್ಯದ ಮೂಲಕ ವಾಸ್ತವ ಚಿತ್ರಣದೊಂದಿಗೆ ಓದುಗರಿಗೆ ಮನವರಿಕೆ ಮಾಡುವಂತಿರಬೇಕು. ಅದು ಸಾಮಾಜಿಕ ಬದಲಾವಣೆಯನ್ನು ತರಬೇಕು. ಸಮಾಜದಲ್ಲಿನ ಅನಿಷ್ಠ ವಿಚಾರಗಳಿಗೆ ಸಾಹಿತ್ಯದ ವಸ್ತುವಾಗಿರಬೇಕು ಮತ್ತು ವಾಸ್ತವ ನೆಲೆಗಟ್ಟಿನಲ್ಲಿ ಚಿತ್ರಿತವಾಗಬೇಕು. ಅದು ಸಾಹಿತಿಯ ಜವಾಬ್ದಾರಿಯೂ ಆಗಿರುತ್ತದೆ. ಸಾಹಿತ್ಯವು ಸಮಾಜದಲ್ಲಿ ಬದಲಾವಣೆಯನ್ನು ತರುವಂತಿರಬೇಕು. ಪ್ರಗತಿಶೀಲ ಕಾಲಘಟ್ಟದ ಸಾಹಿತಿಗಳು ತಮ್ಮ ಬರಹದಲ್ಲಿ ಅಂದಿನ ಕಾಲಘಟ್ಟದಲ್ಲಿದ್ದ ಜಾತಿಯ ಸಮಸ್ಯೆಗಳು, ಹಸಿವು, ಬಡತನ, ವೇಶ್ಯೆಯ ಸಮಸ್ಯೆ ಮೊದಲಾದವುಗಳನ್ನು ಚಿತ್ರಿಸಿದಾಗ ಪ್ರಗತಿಶೀಲ ಸಾಹಿತ್ಯವನ್ನು ಅದೊಂದು ಅಶ್ಲೀಲ ಸಾಹಿತ್ಯ ಎಂದು ಅನೇಕರು ತೆಗಳಿದಾಗ ಅದಕ್ಕೆ ಪ್ರತಿಕ್ರಿಯೆಯನ್ನು ತಿ. ತಾ. ಶರ್ಮರ 'ಜಮೀನರ್' ಕತೆಯ ಮುನ್ನುಡಿಯನ್ನು ಭಾಷಣದಲ್ಲಿ ಪ್ರಸ್ತಾಪಿಸಿ ಸಾಹಿತ್ಯ ಯಾವ ಧೋರಣೆಯನ್ನು ಹೊಂದಿರಬೇಕು ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತಾರೆ. ಈ ರೀತಿಯ ನಿಲುವೇ ಪ್ರಗತಿಶೀಲ ಸಾಹಿತ್ಯದ ಮತ್ತು ವಿಚಾರ ಸಾಹಿತ್ಯದ ನಿಲುವು ಆಗಿದೆ.

ಕರ್ನಾಟಕದ ಗಡಿ ರೇಖೆಗೆ ಸಂಬಂಧಿಸಿದಂತೆ ಚಾಲುಕ್ಯರ ಕಾಲದಲ್ಲಿನ ಗಡಿ ರೇಖೆಗಳನ್ನು ಕುರಿತಂತೆ ಉತ್ತರಕ್ಕೆ ನರ್ಮದ ನದಿ, ದಕ್ಷಿಣಕ್ಕೆ ತುಂಗಭದ್ರಾ ನದಿ, ಪಶ್ಚಿಮಕ್ಕೆ ಅರಬ್ಬೀ ಸಮುದ್ರ, ಪೂರ್ವಕ್ಕೆ ಗೋದಾವರಿ, ಪೂರ್ವಘಟ್ಟಗಳೂ ಮತ್ತು ಕವಿರಾಜಮಾರ್ಗಕಾರ ಪೂರ್ವ ಪಶ್ಚಿಮ ಗಡಿಯನ್ನು ಸೂಚಿಸುವುದಿಲ್ಲ. ಕಾರಣವೆಂದರೆ ಎರಡು ಕಡೆ ಸಮುದ್ರ, ಅದರ ಉತ್ತರ ಭಾಗಕ್ಕೆ ಸೂಚಿಸಲು ಕಾರಣ ಒಂಬತ್ತನೇ ಶತಮಾನದಿಂದಲೇ ಗಡಿ ಸಮಸ್ಯೆ ಇದ್ದಿರಬಹುದೇನೋ ಎಂಬ ಸಂಶಯವನ್ನು ತಿ. ತಾ. ಶರ್ಮರು ವ್ಯಕ್ತಪಡಿಸಿದ್ದಾರೆ.

ಗಡಿ ಸಮಸ್ಯೆ ಎಂಬುದು ಕರ್ನಾಟಕ ಏಕೀಕರಣಗೊಂಡ ನಂತರ ಉದ್ಭವವಾದುದಲ್ಲ, ಅದು ಮೊದಲಿನಿಂದಲೂ ಇತ್ತು ಎಂಬ ಅಭಿಪ್ರಾಯದಲ್ಲಿ ಗಡಿ ಸಮಸ್ಯೆಯನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ನಾವು ನೋಡಬೇಕು ಎಂಬ ಅಂಶ ಪ್ರಮುಖವಾದುದು.

"ವಿಧಾನ ಸೌಧದಲ್ಲಿ ಕೂತು ಕಡತಗಳನ್ನು ತಿರುವಿ ಹಾಕುವವರದ್ದು ಈ ಕನ್ನಡದಲ್ಲಿ ಸರಿಯಾದ ಮಾತುಗಳಿಲ್ಲ ಎಂಬುದೊಂದೇ ಪಲ್ಲವಿ. ಇದು ಅವರ ಅಜ್ಞಾನದ ಫಲವಲ್ಲವಾದರೂ ಅಪರಿಚಯದ ಫಲ"[೧೮] ಎಂಬ ತಿ. ತಾ. ಶರ್ಮರ ಮಾತಿನಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ, ಅನ್ನದ ಭಾಷೆಯಾಗಿ ನೋಡದ ಕರ್ನಾಟಕದ ಶಕ್ತಿ ಕೇಂದ್ರ ವಿಧಾನ ಸೌಧದಲ್ಲಿರುವ ಅನೇಕ ಉನ್ನತ ದರ್ಜೆಯ ಅಧಿಕಾರಿಗಳು, ಶಾಸಕರು, ಇವರಿಗೆ ಕನ್ನಡ ಭಾಷೆಯ ಸಂಪತ್ತಿನ ಬಗ್ಗೆ, ಸಾಹಿತ್ಯದ ಬಗ್ಗೆ ತಿಳುವಳಿಕೆ ಇಲ್ಲದವರು, ಕನ್ನಡದಲ್ಲಿ ಸರಿಯಾದ ಮಾತುಗಳೇ ಇಲ್ಲ ಎಂದು ಪರಿಭಾವಿಸಿಕೊಂಡಂತವರು ಕರ್ನಾಟಕದಲ್ಲಿ ಕನ್ನಡ ಭಾಷೆಯ ಅನುಷ್ಠಾನವನ್ನು ಮಾಡದೆ ಕನ್ನಡ ಭಾಷೆಯ ಬದಲು ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳ ಮೂಲಕ ವ್ಯವಹರಿಸುವ ನಾಡದ್ರೋಹಿಗಳ ಮನೋಧೋರಣೆಯನ್ನು ಖಂಡಿಸುತ್ತಾರೆ.

ಕೆಲಸಕ್ಕೆ ತಕ್ಕಂತೆ ಹಣವನ್ನು ಕೊಡುವ ನಿಬಂಧನೆಯನ್ನು ಕರ್ನಾಟಕವನ್ನು ಆಳಿದ ಅರಸು ಮನೆತನಗಳಲ್ಲಿ ಒಂದಾದ ಹೊಯ್ಸಳರ ಕಾಲದಲ್ಲಿಯೇ ಇತ್ತು ಎಂಬುದನ್ನು ತಿ. ತಾ. ಶರ್ಮರು ತಿಳಿಸುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಮಾಲೀಕ ವರ್ಗವು ಕಾರ್ಮಿಕ ವರ್ಗವನ್ನು ಆರ್ಥಿಕವಾಗಿ

ಶೋಷಿಸುವುದನ್ನು ನೋಡಿದರೆ ಕನ್ನಡ ನಾಡನ್ನು ಆಳಿದ ರಾಜಮನೆತನಗಳ ಅರಸರು ಕೆಲಸಕ್ಕೆ ತಕ್ಕಂತೆ ಹಣವನ್ನು ಗೌರವವಾಗಿ ನೀಡಿದ ಧೋರಣೆಗೂ, ಪ್ರಜಾಪ್ರಭುತ್ವ ಜಾರಿಗೆ ಬಂದು ೭೦ ವರ್ಷಗಳು ಕಳೆದರೂ ಇಂದಿಗೂ ಅದೆಷ್ಟೋ ಕಡೆ ಕನಿಷ್ಠ ವೇತನವನ್ನು ನೀಡದ ಮಾಲೀಕರ ಧೋರಣೆಯನ್ನು ಕಾಣಬಹುದು.

ಗ್ರಂಥ ಪ್ರಕಟಣೆ ಎಂಬುದು ಭಾಷೆ, ಸಾಹಿತ್ಯವನ್ನು ಉಳಿಸುವ ಪೋಷಿಸುವ ಒಂದು ಕಾರ್ಯವಾಗಿತ್ತು. ಇತ್ತೀಚೆಗೆ ಗ್ರಂಥ ಪ್ರಕಟಣೆ ಎಂಬುದು ವ್ಯಾಪಾರ ವೃತ್ತಿಯಾಗುತ್ತಿದೆ. ಇದರಿಂದ ಸಾಹಿತ್ಯ ನಿರ್ಮಾಣವು ಆ ದೃಷ್ಟಿಯಲ್ಲಿಯೇ ನೋಡುವಂತದ್ದಾಗಿದೆ. ಸಾಹಿತ್ಯ ನಿರ್ಮಾಣದಿಂದ ಪ್ರಕಟಣೆಯಿಂದ ಸಾಮಾಜಿಕ ಬದಲಾವಣೆಯನ್ನು ತರುವುದು, ಒಂದು ನಾಡಿನ ಜ್ಞಾನ ಪ್ರಸಾರದ ಕಾರ್ಯದಲ್ಲಿ ನಡೆಯಬೇಕೆ ಹೊರತು ವ್ಯಾಪಾರ ದೃಷ್ಟಿಯಿಂದ ಅಲ್ಲ. ಭಾಷೆ, ಸಾಹಿತ್ಯ, ಗ್ರಂಥ ಪ್ರಕಟಣೆಯನ್ನು ಯಾವುದೇ ರೀತಿಯಿಂದಲೂ ವ್ಯಾಪಾರದ ಮನಃಸ್ಥಿತಿಯಿಂದ ನೋಡಬಾರದು ಎಂಬ ನಿಲುವು ತಿ. ತಾ. ಶರ್ಮರವರದ್ದಾಗಿದೆ. ಆ ಮೂಲಕ ನಾಡಿನ ಓದುಗ ವರ್ಗಕ್ಕೆ ಹೆಚ್ಚು ಜ್ಞಾನ ತಿಳುವಳಿಕೆಯನ್ನು ನೀಡುವ ಜವಾಬ್ದಾರಿ ಗ್ರಂಥ ಪ್ರಕಟಣೆಯಲ್ಲಿದೆ. 'ವಿಚಾರ ಕರ್ನಾಟಕ' ಗ್ರಂಥದಲ್ಲಿ ಕನ್ನಡ ನಾಡನ್ನು ಕುರಿತಂತೆ ಭಾಷೆ ಸಾಹಿತ್ಯದ ಹಿನ್ನೆಲೆಯಲ್ಲಿ ಸಮಕಾಲೀನ ಸಮಾಜದ ಹಲವು ವಿಚಾರಗಳನ್ನು ಪರೋಕ್ಷವಾಗಿ, ಪ್ರತ್ಯಕ್ಷವಾಗಿ ಮತ್ತು ಪ್ರಗತಿಶೀಲ ಕಾಲಘಟ್ಟದ ಕೆಲವು ವಿಚಾರಗಳನ್ನು ಮತ್ತು ಆಶಯಗಳನ್ನು ಚರ್ಚಿಸಿದ್ದಾರೆ.

ತಿ. ತಾ. ಶರ್ಮರವರು ಸರ್ ಎಂ. ವಿಶ್ವೇಶ್ವರಯ್ಯನವರಿಗೆ ೧೯೬೦ರಲ್ಲಿ ನೂರು ವರ್ಷ ತುಂಬಿದ ಸಂದರ್ಭದಲ್ಲಿ ಬರೆದ ಗ್ರಂಥವನ್ನು ಅಂದಿನ ಪ್ರಧಾನ ಮಂತ್ರಿ ಜವಹಾರಲಾಲ್ ನೆಹರೂರವರಿಂದ ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದ ಪುಸ್ತಕವೇ ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ (ಜೀವನ ಸಾಧನೆ). ಇದೊಂದು ಜೀವನ ಚರಿತ್ರೆಯಾಗಿದೆ. "ಭಾರತ ಮಾತೆಯನ್ನು 'ಪಾರ್ಶ್ವವಾಯು'ವಿನಿಂದ ಮುಕ್ತಳನ್ನಾಗಿ ಮಾಡಬೇಕು, ಆಕೆಯನ್ನು ದಾರಿದ್ರ್ಯದಿಂದ, ಹಸಿವಿನಿಂದ ಪಾರು ಮಾಡಬೇಕು, ಪ್ರತಿಯೊಬ್ಬ ಭಾರತೀಯನಲ್ಲಿಯೂ ಆತ್ಮಗತವಾಗಿರುವ ಸೋಮಾರಿತನವನ್ನು ನಿರ್ಮೂಲ ಮಾಡಿ ಅವನನ್ನು ಉದ್ಯಮಶೀಲನನ್ನಾಗಿ ಮಾಡಬೇಕು. ಭಾರತವನ್ನು ಸಿರಿ ಸೌಭಾಗ್ಯದಿಂದ ಮೆರೆಯುವಂತೆ ಮಾಡಬೇಕು. ಜೀವನ ವಿಜಯದ ನಾಗರಿಕ ಜಗತ್ತಿನಲ್ಲಿ ಭಾರತವನ್ನು ಪರಮೋತ್ತಮ ರಾಷ್ಟ್ರವನ್ನಾಗಿ ಮಾಡಬೇಕು"[೧೯] ಇದು ಅವರ ಜೀವನದ ಪರಮ ಆದರ್ಶವಾಗಿತ್ತು.

ತಿ. ತಾ. ಶರ್ಮರು ಸರ್. ಎಂ. ವಿ. ಯವರ ಈ ಮಾತನ್ನು ದಾಖಲಿಸಿರುವುದನ್ನು ನೋಡಿದರೆ ಭಾರತ ದೇಶ ಪಾರ್ಶ್ವವಾಯುವಿನಿಂದ ನರಳುತ್ತಿದೆ, ಅದರಲ್ಲಿ ಜಾತೀಯತೆ, ಹಸಿವು, ಬಡವ-ಶ್ರೀಮಂತ, ಮೇಲು-ಕೀಳು, ಧಾರ್ಮಿಕ ಮೌಢ್ಯ ಇವುಗಳಿಂದ ದೇಶದ ಜನತೆಯನ್ನು ಬಿಡುಗಡೆ ಮಾಡಬೇಕು ಎಂಬ ಪ್ರಗತಿಶೀಲ ಮನೋಭಾವನೆಯನ್ನು ಕಾಣಬಹುದು. ಈ ಜೀವನ ಚರಿತ್ರೆಯ ರಚನೆಯ ಉದ್ದೇಶ ಬರೀ ಸರ್. ಎಂ. ವಿಶ್ವೇಶ್ವರಯ್ಯನವರ ಜೀವನ ಸಾಧನೆಯನ್ನು ತಿಳಿಸುವುದು ಮಾತ್ರವಲ್ಲ, ಅವರು ಅಂದಿನ ಕಾಲಘಟ್ಟದಲ್ಲಿದ್ದ ಹಸಿವಿನ ಸಮಸ್ಯೆಯಿಂದ ಜನತೆಯನ್ನು ಕಾಪಾಡಲು, ನೀರನ್ನು ಸಂರಕ್ಷಿಸಲು ಅಣೆಕಟ್ಟುಗಳನ್ನು ಕಟ್ಟಿದ್ದು, ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಿ ಮತ್ತು ವಿಶ್ವವಿದ್ಯಾನಿಲಯದ ಸ್ಥಾಪನೆಯ ಮೂಲಕ ಎಲ್ಲಾ ವರ್ಗದ ಜನರಿಗೂ ಶಿಕ್ಷಣ ದೊರಕಬೇಕೆಂಬ ಕಾಳಜಿ ಮೊದಲಾದ ಕಾರ್ಯಕ್ರಮಗಳ ಮೂಲಕ ನವಭಾರತ ನಿರ್ಮಾಣವನ್ನು

ಹೇಗೆ ಕೈಗೊಂಡರೋ ಹಾಗೆಯೇ ಈ ಜೀವನ ಚರಿತ್ರೆಯಿಂದ ಓದುಗರು ನವಭಾರತವು ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಪರಿಹಾರ ಕೊಡುವ ನಿಟ್ಟಿನಲ್ಲಿ ಆಲೋಚನೆಗಳು ಓದುಗರಲ್ಲಿ ಮೂಡಲಿ ಎಂಬ ಆಶಯವಿದೆ.

ಈ ಜೀವನ ಚರಿತ್ರೆಯಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರ ಜೀವನದ ಹಲವು ವಿಚಾರಗಳನ್ನು ಅವರು ಬರೆದ ಬರಹಗಳಿಂದ ತೆಗೆದುಕೊಂಡಿದ್ದು ಒಂದು ಮಿತಿಯು ಹೌದು ಹಾಗೂ ಈ ಕೃತಿಯ ಶಕ್ತಿಯೂ ಆಗಿದೆ. ಸರ್ ಎಂ. ವಿ. ಯವರ ಹುಟ್ಟು, ಮನೆತನ, ಶಿಕ್ಷಣ, ಇಂಜಿನಿಯರಿಂಗ್ ವೃತ್ತಿಯಲ್ಲಿರಬೇಕಾದಾಗ ಮಾಡಿದ ಕೆಲಸಗಳಲ್ಲಿ ನಗರಗಳಿಗೆ ಕುಡಿಯುವ ನೀರಿನ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ, ಮಹಾರಾಷ್ಟ್ರದ ಪುಣೆ, ಕರ್ನಾಟಕದ ಧಾರವಾಡ, ವಿಜಯಪುರ, ಲಂಡನ್‌ನ ಏಡನ್ ನಗರ ಮೊದಲಾದವುಗಳಿಗೆ ಕುಡಿಯುವ ನೀರಿನ ನಿರ್ವಹಣೆ ಮತ್ತು ಇವರ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿದ ಮಹಾದೇವ ಗೋವಿಂದ ರಾನಡೆ ಮತ್ತು ಗೋಪಾಲಕೃಷ್ಣ ಗೋಖಲೆ, ಪುಣೆ ನಗರದಲ್ಲಿ ಹೆಚ್ಚು ಕಾಲ ಕಳೆದದ್ದು, ಕ್ಲಬ್ ಸ್ಥಾಪಿಸಿದ್ದು, ಹೈದರಾಬಾದ್ ನಗರ ನಿರ್ಮಾಣ, ಮೈಸೂರಿಗೆ ಆಗಮನ, ಕನ್ನಂಬಾಡಿ ಅಣೆಕಟ್ಟಿನ ನಿರ್ಮಾಣ, ಮೈಸೂರು ವಿಶ್ವವಿದ್ಯಾಲಯದ ಸ್ಥಾಪನೆ, ಮದರಾಸಿನಲ್ಲಿ ಆರಂಭಗೊಂಡ ಬ್ರಾಹ್ಮಣೇತರ ಚಳುವಳಿ, ಇದು ಮೈಸೂರು ರಾಜ್ಯದಲ್ಲಿ ಹೆಚ್ಚಾದುದು, ಇದರಿಂದ ದಿವಾನಗಿರಿಗೆ ರಾಜೀನಾಮೆ ಕೊಟ್ಟ ಪ್ರಸಂಗ, ಭದ್ರಾವತಿಯಲ್ಲಿ ಉಕ್ಕಿನ ಕಾರ್ಖಾನೆ, ಕಾವೇರಿ ನಾಲಾದ ಮುಖಾಂತರ ಕೃಷಿಗೆ ನೀರಾವರಿ ಒದಗಿಸಿದ್ದು, ವಿಮಾನ ಕಾರ್ಖಾನೆ, ಆಟೋಮೊಬೈಲ್ ಕಾರ್ಖಾನೆ, ವಿದೇಶ ಪ್ರವಾಸ ಈ ರೀತಿಯ ಹಿನ್ನೆಲೆಯಲ್ಲಿ ಅವರ ವ್ಯಕ್ತಿತ್ವ ಮತ್ತು ಸಾಧನೆಯನ್ನು ವಿವರಿಸಿದ್ದಾರೆ.

ಸರ್ ಎಂ. ವಿಶ್ವೇಶ್ವರಯ್ಯನವರ ರಾಜಕೀಯ ವಿಚಾರಗಳನ್ನು ತಿಳಿಸುವಾಗ ತಿ. ತಾ. ಶರ್ಮರವರು ರಷ್ಯಾದ ಕಮ್ಯುನಿಸಂ ಕುರಿತಂತೆ ತುಂಬಾ ವಿಚಾರ ಮಾಡಿದ್ದಾರೆ. ಒಂದೊಂದು ದೇಶದಲ್ಲೂ ಒಂದೊಂದು ರೀತಿಯಲ್ಲಿ ಸಮಾಜವಾದದ ಸ್ವರೂಪವಿದೆ ಎಂದು ವಿಶ್ವೇಶ್ವರಯ್ಯನವರು ಗ್ರಹಿಸಿದ್ದಾರೆ. ಹಲವಾರು ವ್ಯಕ್ತಿಗಳು ಸಮಾಜದಲ್ಲಿ 'ಭೋಗಿಗಳಾಗಿ' ಜೀವನ ನಡೆಸುತ್ತಾರೆ. ಮತ್ತೆ ಅನೇಕರು 'ದರಿದ್ರ' ಜೀವನ ನಡೆಸುತ್ತಾರೆ. ಇದು ಉಭಯ ವರ್ಗದ ನಡುವೆ ವೈರತ್ವ ಹುಟ್ಟಿ ಸಂಘರ್ಷಗಳು ನಡೆಯುತ್ತವೆ. ಈ ರೀತಿಯಲ್ಲಿ ಸಮಾಜವಾದದ ಧೋರಣೆಯನ್ನು ಗ್ರಹಿಸಿದ್ದಾರೆ.

"ಬಂಡವಾಳಶಾಹಿಯಿಂದ ಕಮ್ಯುನಿಸಂಗೆ ನಾಲ್ಕು ಘಟ್ಟಗಳು. 'ಕ್ಯಾಪಿಟಲಿಸಂ' ಅಥವಾ ಬಂಡವಾಳಶಾಹಿ, 'ಡಿಕ್ಟೇಟರ್‌ಶಿಪ್ ಆಫ್ ದಿ ಪ್ರೊಲಿಟಾಲಿಯಟ್' ಅಥವಾ 'ದುಡಿಯುವವರ ಪಾಳೆಗಾರತನ', 'ಸೋಷಿಯಲಿಸಂ' ಅಥವಾ ಸಮಾಜವಾದ, ಮತ್ತು 'ಕಮ್ಯುನಿಸಂ'.[೨೦] ಹೀಗೆ ರಷ್ಯಾದ ಕಮ್ಯುನಿಸಂನ ಸ್ವರೂಪವನ್ನು ವಿಶ್ವೇಶ್ವರಯ್ಯನವರು ತಿಳಿಸಿದ್ದಾರೆ. ಅಮೆರಿಕಾ ಮತ್ತು ಯುರೋಪ್‌ನಲ್ಲಿ ಕಮ್ಯುನಿಸಂಗೆ ವ್ಯಾಪಕ ವಿರೋಧವಿದೆ ಎಂಬ ಅವರ ನಿಲುವನ್ನು ಸಮರ್ಥಿಸುವ ತಿ. ತಾ. ಶರ್ಮರು ಸೇರಿದಂತೆ ಅನೇಕ ಪ್ರಗತಿಶೀಲ ಲೇಖಕರಿಗೆ ಕಮ್ಯುನಿಸಂ ನಿಷ್ಠೆ ಇರಲಿಲ್ಲವೇನೋ ಎಂಬ ಸಂಶಯ ವ್ಯಕ್ತವಾಗುತ್ತದೆ. ಭಾರತ ದೇಶದ ಸಾಮಾಜಿಕ, ಆರ್ಥಿಕ ಸ್ಥಿತಿಯನ್ನು, ಇಲ್ಲಿನ ಸಮಸ್ಯೆಗಳನ್ನು ಇಲ್ಲಿಯ ಸಮಾಜದ ದೃಷ್ಟಿಯಿಂದಲೇ, ವೈಚಾರಿಕ ಹಿನ್ನೆಲೆಯಲ್ಲಿಯೇ ಪ್ರತಿಕ್ರಿಯಿಸಬೇಕೇ ಹೊರತು ರಷ್ಯಾದ ಕಮ್ಯುನಿಸಂನಿಂದ ಉತ್ತರ ಲಭ್ಯವಾಗುವುದಿಲ್ಲ ಎಂಬ ಅಂಶವನ್ನು ಇಲ್ಲಿ ಗಮನಿಸಬಹುದು.

ತಿ. ತಾ. ಶರ್ಮರ ಮತ್ತೊಂದು ಲೇಖನ 'ಅಶ್ಲೀಲ ಸಾಹಿತ್ಯ' ಎಂಬ ಹೆಸರಿನಲ್ಲಿ ಬರೆದಿದ್ದು ಅದು ಅ. ನ. ಕೃ. ಸಂಪಾದಿಸಿರುವ 'ಪ್ರಗತಿಶೀಲ ಸಾಹಿತ್ಯ' ಕೃತಿಯಲ್ಲಿದೆ. ಈ ಲೇಖನದಲ್ಲಿ ನೀತಿವಾದಿಗಳು ಪ್ರಗತಿಶೀಲ ಕಾಲಘಟ್ಟದ ಸಾಹಿತ್ಯವನ್ನು "ಈ ಬಗೆಯ ಸಾಹಿತ್ಯವು ಕೀಳು ಇಂದ್ರಿಯಗಳನ್ನು ಉದ್ರೇಕಗೊಳಿಸುತ್ತದೆ! ಜೀವನವನ್ನು ಕಲ್ಮಶಗೊಳಿಸುತ್ತದೆ! ಹೆಚ್ಚೇನು ಮಾನವನನ್ನು ಸಂಪನ್ನನನ್ನಾಗಿ ಮಾಡುತ್ತದೆ, ಅಶ್ಲೀಲ ಸಾಹಿತ್ಯವು ಆರೋಗ್ಯ, ದೃಢಕಾಯ ಮನಸ್ಸು ಮತ್ತು ಸಮಾಜವನ್ನು ಕುಲಗೆಡಿಸುತ್ತದೆ"[೨೧] ಎಂದು ಸಾಹಿತ್ಯ ಧೋರಣೆಯನ್ನು ಟೀಕಿಸಿದಾಗ ಅದಕ್ಕೆ ಪ್ರತಿಕ್ರಿಯೆಯಾಗಿ ತಿ. ತಾ. ಶರ್ಮರು ಕಲೆಗೂ ನೀತಿಗೂ ಸಂಬಂಧವಿಲ್ಲ, ಕಲೆಯು ನೀತಿ ಪ್ರಚಾರವಾದ ಸಾಧನವಲ್ಲ, ಇಲ್ಲಿ ಅನೀತಿ ವಿಚಾರಕ್ಕೆ ಅವಕಾಶವಿಲ್ಲ, ಅನೇಕ ಪ್ರಸಿದ್ಧ ಗ್ರೀಕ್ ಪ್ರತಿಮೆಗಳು ನಗ್ನವಾಗಿವೆ, ಸಾಹಿತ್ಯದಲ್ಲಿಯೂ ಅಷ್ಟೇ, ನವೋದಯ ಕಾಲಘಟ್ಟದ ಬರಹಗಾರರು ಸಾಹಿತ್ಯವು ನೀತಿಯನ್ನು ಬೋಧಿಸಬೇಕು ಎಂಬ ಮನಃಸ್ಥಿತಿಯನ್ನು ಖಂಡಿಸುತ್ತಾರೆ. ಸಾಹಿತ್ಯ ನೀತಿಯನ್ನು ಬೋಧಿಸುವುದಲ್ಲ ಅದು ವಾಸ್ತವ ಸಮಾಜವನ್ನು ಪ್ರತಿನಿಧಿಸುವುದು ಎಂದು ಕಟುವಾಗಿ ವಿಮರ್ಶಿಸುತ್ತಾರೆ.

ಪ್ರಗತಿಶೀಲ ಕಾಲಘಟ್ಟದ ಸಾಹಿತಿಗಳಲ್ಲಿ ಬಹುತೇಕರು ಕಮ್ಯುನಿಸ್ಟ್ ಸಿದ್ಧಾಂತದ ನಿಷ್ಠೆಯಾಗಲೀ ಅಥವಾ ಸಮಾಜವಾದದ ಮೇಲಿನ ಪ್ರೀತಿಯಾಗಲೀ ಇತ್ತೆಂದು ಭಾವಿಸುವುದು ಸರಿಯಲ್ಲ. ಬಸವರಾಜ ಕಟ್ಟೀಮನಿಯಂತಹ ಕೆಲವು ಲೇಖಕರು ಸಮಾಜವಾದಿ ತತ್ವಗಳನ್ನು ಅಳವಡಿಸಿಕೊಂಡಿದ್ದರೆ ಮತ್ತೆ ಕೆಲವರು ನಾಡು ನುಡಿ, ಸಂಸ್ಕೃತಿ, ಮೊದಲಾದ ದೇಶೀಯ ಸಿದ್ಧಾಂತಗಳ ಹಿನ್ನೆಯಲ್ಲಿ ತಮ್ಮ ತಾತ್ವಿಕತೆಯನ್ನು ರೂಪಿಸಿಕೊಂಡಿದ್ದಾರೋ ಅಥವಾ ಗಾಂಧಿ ತತ್ವಗಳು ಮತ್ತು ವಿಚಾರಧಾರೆಗಳಿಂದ ಪ್ರಭಾವಿತರಾಗಿದ್ದಾರೋ ಎಂಬ ಸಂಶಯ ಮೂಡುವುದು ಸಹಜ.

ಪ್ರಗತಿಶೀಲ ಕಾಲಘಟ್ಟದ ಕೆಲವು ಲೇಖಕರು ಜವಹರಲಾಲ್ ನೆಹರೂರವರ ವಿಚಾರಗಳು ಮತ್ತು ಅವರ ಒಡನಾಟಗಳನ್ನು ಹೊಂದಿದ್ದರು. ಬಸವರಾಜ ಕಟ್ಟೀಮನಿಯವರು ನೆಹರೂರವರ ವಿಚಾರಗಳನ್ನು ಕೆಲವು ಬರಹಗಳಲ್ಲಿ ದಾಖಲಿಸಿರುವುದು, ಶ್ರೀರಂಗರು ನಮ್ಮ ನೆಚ್ಚಿನ ನೆಹರೂ ಎಂಬ ಜೀವನ ಚರಿತ್ರೆಯನ್ನು ಬರೆದಿರುವುದು, ತಿ. ತಾ. ಶರ್ಮರು ಸರ್. ಎಂ. ವಿಶ್ವೇಶ್ವರಯ್ಯನವರನ್ನು ಕುರಿತು ಬರೆದ ಜೀವನಚರಿತ್ರೆಯನ್ನು ಸ್ವತಃ ನೆಹರೂರವರೇ ಬೆಂಗಳೂರಿನಲ್ಲಿ ಬಿಡುಗಡೆಗೊಳಿಸಿದರು. ಇವೆಲ್ಲವನ್ನು ಗಮನಿಸಿದಾಗ ಹೆಚ್ಚಿನ ಪ್ರಗತಿಶೀಲ ಕಾಲಘಟ್ಟದ ಲೇಖಕರ ಮೇಲೆ ನೆಹರೂರವರ ವ್ಯಕ್ತಿತ್ವ ಮತ್ತು ವಿಚಾರಗಳು ಹಾಗೂ ಅವರ ತಾತ್ವಿಕತೆಯು ಪ್ರಭಾವಿಸಿದೆ.

ಪ್ರಗತಿಶೀಲ ಚಳುವಳಿಯ ಲೇಖಕರಲ್ಲಿ ಕುಮಾರ ವೆಂಕಣ್ಣನವರು ಒಬ್ಬರು. ಇವರು ಬರೆದ ವೈಚಾರಿಕ ಲೇಖನ 'ಕನ್ನಡ ಸಾಹಿತಿಗಳೆಲ್ಲಿ?' ಈ ಲೇಖನ ಅ. ನ. ಕೃ. ರವರು ೧೯೪೪ರಲ್ಲಿ ಸಂಪಾದಿಸಿರುವ 'ಪ್ರಗತಿಶೀಲ ಸಾಹಿತ್ಯ' ಎಂಬ ಕೃತಿಯಲ್ಲಿದೆ. ಈ ಲೇಖನದ ಶೀರ್ಷಿಕೆಯಲ್ಲಿಯೇ ಪ್ರಶ್ನೆಯಿದೆ. ಆ ಮೂಲಕ ಕುಮಾರ ವೆಂಕಣ್ಣನವರು ಸಾಹಿತಿಗಳನ್ನು ಉದ್ದೇಶಿಸಿ ಕೇಳಿದ ಮಾತಾಗಿದೆ. ೧೯೩೩-೩೪ರ ಮಟ್ಟದ ಸಾಹಿತ್ಯದಂತೆ ಕಳೆದ ಹತ್ತು ವರ್ಷಗಳಲ್ಲಿ ಸಾಹಿತ್ಯವು ಮುನ್ನಡೆಯನ್ನು ಕಂಡಿಲ್ಲ, ಕವಿಗಳು, ಕಾದಂಬರಿಕಾರರು ಮೊದಲಾದ ಪ್ರಕಾರದ ಸಾಹಿತಿಗಳನ್ನು ಕುರಿತಂತೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರ ಸಂಖ್ಯೆಯಿಂದಲೇ ತಿಳಿಯುವುದು. ಸಾಹಿತಿಗಳ ಸಾಮಾಜಿಕ ಹೊಣೆಗಾರಿಕೆ ಎಂಥದ್ದು ಎಂದು ಖಾರವಾಗಿ ಪ್ರತಿಕ್ರಿಯಿಸುತ್ತಾರೆ.

ಪ್ರಗತಿಶೀಲ ಕಾಲಘಟ್ಟದ ಸಾಹಿತಿಗಳನ್ನು ಬಿಟ್ಟರೆ ಉಳಿದ ಯಾವುದೇ ಸಾಹಿತಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲಿಲ್ಲ. ಈ ಹಿನ್ನೆಲೆಯಲ್ಲಿ ೧೯೪೪ರ ಈ ಲೇಖನದಲ್ಲಿ ಕುಮಾರ ವೆಂಕಣ್ಣನವರು ಕಳೆದ ಹತ್ತು ವರ್ಷಗಳಲ್ಲಿ ಸಮಾಜದೊಡನೆ ಸಾಹಿತ್ಯವು ಬೆಳೆಯಲಿಲ್ಲ ಎಂದು ಧ್ವನಿಯೆತ್ತುತ್ತಾರೆ. ೧೯೪೨ರ ವೇಳೆ ನಡೆದ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿಯೇ ನವೋದಯ ಕಾಲಘಟ್ಟದ ಕೆಲವು ಕವಿಗಳನ್ನು ಬಿಟ್ಟರೆ ಉಳಿದವರಾರೂ ಆ ಸ್ವಾತಂತ್ರ್ಯ ಚಳುವಳಿಯಲ್ಲಿ ದೈಹಿಕವಾಗಿ, ಸಾಂಕೇತಿಕವಾಗಿ ಪಾಲ್ಗೊಳ್ಳಲಿಲ್ಲ. ಸಾಹಿತ್ಯದ ಮುಖಾಂತರ ಸಮಾಜದ ಕಣ್ಣನ್ನು ತೆರೆಸುವ ಕೆಲಸ ಮಾಡಲಿಲ್ಲ. ಬರಹಗಾರರಾಗುವವರು ಸಮಕಾಲೀನ ವಸ್ತುವನ್ನು ಸಾಹಿತ್ಯಕ್ಕೆ ಬಳಸಿಕೊಂಡು ಸಮಸ್ಯೆಗಳಿಗೆ ಪರಿಹಾರವನ್ನು ನೀಡುವ, ಸರಕಾರದ ಕಣ್ಣು ತೆರೆಸುವ ರೀತಿಯಲ್ಲಿ ಬರಹಗಾರರ ಮನೋವೃತ್ತಿ ಇರಬೇಕೇ ಹೊರತು ತಟಸ್ಥ ಮಾರ್ಗವನ್ನು ಅನುಸರಿಸುವುದು ಸರಿಯಲ್ಲ ಎಂಬ ದೃಷ್ಟಿಕೋನದಿಂದಲೇ ಕುಮಾರ ವೆಂಕಣ್ಣ ಸಾಹಿತಿಗಳನ್ನು ಉದ್ದೇಶಿಸಿಯೇ ಈ ಲೇಖನದ ಮೂಲಕ ಪ್ರಶ್ನಿಸುವುದು.

ಸ್ವಾತಂತ್ರ್ಯ ಹೋರಾಟ ತೀವ್ರ ಸ್ವರೂಪ ಪಡೆದ ಸಂದರ್ಭದಲ್ಲಿ ಬರಹಗಾರರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ತಮ್ಮ ಬರವಣಿಗೆಯ ಮೂಲಕ ಜನತೆಯಲ್ಲಿರುವ ದಾಸ್ಯ ಭಾವನೆ, ಹುಂಬತನ, ಧಾರ್ಮಿಕ ಅನಿಷ್ಠಗಳು, ಸ್ವಾರ್ಥ, ಲಾಲಸೆಗಳಿಂದ ಬಿಡುಗಡೆ ಹೊಂದುವ ರೀತಿಯಲ್ಲಿ ಕಾರ್ಯ ಪ್ರವೃತ್ತರಾಗಬೇಕು ಎಂಬ ಮನೋಭಾವನೆಯಿದೆ.

"ಜನತೆಯ ಸುಖ-ದುಃಖಗಳಲ್ಲಿ ಸಹಭಾಗಿಗಳಾಗಿ ಅವರ ನಿಜ ಜೀವನದ ಹೋರಾಟದಲ್ಲಿ ಭಾಗಿಯಾಗಿ, ಜನತೆಯಿಂದ ಸ್ಫೂರ್ತಿಯನ್ನು ಪಡೆದು ಅವರಿಗಾಗಿ ಬರೆದು-ಹಾಡುವ ಬದಲು ನಮ್ಮ ಸಾಹಿತಿಗಳು ಹೃದಯವಿಲ್ಲದವರಾಗಿದ್ದಾರೆ, ಮನೆ ಹೊತ್ತಿ ಉರಿಯುತ್ತಿರುವಾಗ ಆ ಮನೆಯಲ್ಲಿ ನಮ್ಮ ಜನ ಸಾಯುವ ಸ್ಥಿತಿಯಲ್ಲಿರುವಾಗ ಆ ಮನೆ ಯಾರಿಗೆ ಸೇರಬೇಕೆಂದು ವಾಗ್ವಾದಕ್ಕಿಳಿದಿದ್ದಾರೆ"[೨೨] ಎಂದು ಅಭಿಪ್ರಾಯಿಸುತ್ತಾರೆ. ಈ ಮಾತಿನಲ್ಲಿ ಜನತೆಗಾಗಿ ಸಾಹಿತ್ಯವಿರಬೇಕು, ಅವರ ಸುಖ-ದುಃಖಗಳಲ್ಲಿ ಪಾಲುದಾರರಾಗಿರಬೇಕು ಎಂಬ ಆಶಯವಿದೆ. ಈ ವೇಳೆಯಲ್ಲಿ ಬಿಜಾಪುರ, ಬಳ್ಳಾರಿ, ಅನಂತಪುರಗಳು ಭೀಕರ ಬರಗಾಲದಿಂದ ಬಳಲಿ ಅಲ್ಲಿನ ಜನ ಹಸಿವಿನಿಂದ ಸತ್ತರು. ಆ ಸಂದರ್ಭದಲ್ಲಿ ಸಾಹಿತಿಗಳು ಸರಕಾರದ ಕಣ್ಣನ್ನು ತೆರೆಸುವಂತೆ ಕಾರ್ಯ ಪ್ರವೃತ್ತರಾಗಿರಬೇಕು, ಅಧಿಕಾರಸ್ಥ ವರ್ಗದೊಡನೆ ಬಾಲ ಹಿಡಿದು ನಡೆದಿದ್ದನ್ನು ಖಂಡಿಸುತ್ತಾರೆ. ಸಾಹಿತಿಯಾದವರ ಜವಾಬ್ದಾರಿ ಸಮಾಜಮುಖಿಯಾಗಿರಬೇಕು, ಅಧಿಕಾರಸ್ಥರ ಹಿಂದೆ ನಡೆಯುವುದಲ್ಲ ಎಂಬ ನಿಲುವನ್ನು ಕಾಣಬಹುದು.

ಸಂಗಿತ, ನೃತ್ಯ, ಶಿಲ್ಪಕಲೆ ಇವುಗಳೆಲ್ಲಾ ಕಲಾ ಸಂಸ್ಕೃತಿಯ ಮಾಧ್ಯಮವಾಗಿವೆ. ಇಂತಹ ಕಲೆಯು ಹಿಂದಿನ ಅಚ್ಚುಕಟ್ಟನ್ನೇ ಸುತ್ತಿ ಸುಳಿದು ಸಾಗುತ್ತಿರುವುದು, ಕಲೆಗಳೆಲ್ಲ ಒಂದು ವರ್ಗದ ಪರವಾಗಿ ಉಳಿದಿರುವುದು, ಆ ವರ್ಗವೇ ಅರಸರು, ಮಾಂಡಲೀಕರು, ಬಂಡವಾಳಗಾರರು. ಇವರನ್ನು ಬಿಟ್ಟು ಕಲಾಕೃತಿಗಳನ್ನು ಕಲಾವಿದ ರಚಿಸಲಾರ. ಕಲೆಗಳು ಉಳ್ಳವರ ಪರವಾಗಿಯೇ ಕೆಲಸ ಮಾಡುವುದು. ಕಲಾವಿದನು ಕೂಡಾ ಅದಕ್ಕೆ ವ್ಯತಿರಿಕ್ತವಾದ ರೀತಿಯಲ್ಲಿ ಹೊರಡದೆ ಇರುವುದು ಕಲೆಯ ಹೆಸರಿನಲ್ಲಿ ಹಿಂದಿನಿಂದಲೂ ಈ ರೀತಿಯ ವರ್ಗ ಸಮರ ನಡೆಯುತ್ತಿರುವುದನ್ನು ಕುಮಾರ ವೆಂಕಣ್ಣನವರು ತಮ್ಮ 'ಜನತೆ ಮತ್ತು ಕಲೆ' ಎಂಬ ಲೇಖನದಲ್ಲಿ ವಿಶ್ಲೇಷಿಸುತ್ತಾರೆ.

ಕಲೆಯ ಬೆಳವಣಿಗೆಯು ಅನೇಕ ವೇಳೆ ಕುಂಠಿತಗೊಂಡಿದೆ. ಆಶ್ರಯದಾತರಿಂದಲೇ ಕಲೆಯು ಕುಂಠಿತವಾಗಲು ಕಾರಣ ನೃತ್ಯ, ಚಿತ್ರಕಲೆ, ಶಿಲ್ಪಕಲೆ, ಸಂಗೀತ, ಇವುಗಳೆಲ್ಲಾ ಕೆಲವರ ವಸ್ತುಗಳಾಗಿ ಇರುವುದರಿಂದಲೇ ಅವು ಅವನತಿ ಹೊಂದಲು ಕಾರಣ. ಪ್ರಸ್ತುತ ಚಿತ್ರಕಲೆ ಮತ್ತು ಶಿಲ್ಪಕಲೆ ಹೇಳ ಹೆಸರಿಲ್ಲದಂತೆ ಇರುವುದು, ಭರತನಾಟ್ಯ ವೇಶ್ಯೆಯರ ಕುಣಿತವೆಂದು ಹೇಳಿಸಿಕೊಂಡಿದ್ದು ಇವೆಲ್ಲಾ ಉಳ್ಳವರ ವರ್ಗಕ್ಕೆ ಸೀಮಿತವಾದುದೇ ಕಾರಣವೆಂದು, ಕಲೆಗಳು ನಾಶಗೊಳ್ಳಲು ಜಮೀನ್ದಾರರು, ಬಂಡವಾಳದಾರರು, ಅರಸರ ಸ್ವತ್ತು ಆಗಿ ಪರಿಣಮಿಸಿ ಜನತೆಯ ಬಳಿ ಬರಲಾರದೆ ಅವು ಅವನತಿಗೊಳ್ಳಲು ಕಾರಣವೆಂಬ ದೃಷ್ಟಿಕೋನದಲ್ಲಿ ಕುಮಾರ ವೆಂಕಣ್ಣ ವಿಶ್ಲೇಷಿಸುತ್ತಾರೆ.

ಸ್ವಾತಂತ್ರ್ಯ ಕಾಲಘಟ್ಟದಲ್ಲಿ ರಾಜರಿಗೆ ಸೀಮಿತವಾಗಿದ್ದ ಹಿಂದೂಸ್ಥಾನಿ ಸಂಗೀತವನ್ನು ವಿಷ್ಣು ದಿಗಂಬರ್ ಪಾಲೂಸ್ಕರ್‌ರವರು ಸಾರ್ವಜನಿಕವಾಗಿ ಸಂಗೀತ ಕಛೇರಿಗಳನ್ನು ನಡೆಸುತ್ತಿದ್ದು, ಆ ಮೂಲಕ ಹಿಂದೂಸ್ಥಾನಿ ಸಂಗೀತವನ್ನು ಜನಸಾಮಾನ್ಯರ ಬಳಿಗೆ ತೆಗೆದುಕೊಂಡು ಹೋಗಿದ್ದು ಇಂಥವರು ಕೆಲವರು ಮಾತ್ರ ಕಲೆಯನ್ನು ಮತ್ತು ಸಂಗೀತವನ್ನು ಜನರ ಬಳಿಗೆ ತೆಗೆದುಕೊಂಡು ಹೋಗಿರಬಹುದು. ಈ ವಿಷ್ಣು ದಿಗಂಬರ್ ಪಾಲೂಸ್ಕರ್ ಯಾರು ಎಂದರೆ ಮಹಾತ್ಮಾ ಗಾಂಧಿಯವರ ರಘುಪತಿ ರಾಘವ ರಾಜಾ ರಾಮ್ ಮತ್ತು ಮಹಮ್ಮದ್ ಇಕ್ಬಾಲ್‌ರವರ ಸಾರೇ ಜಹಾಂ ಸೆ ಅಚ್ಛಾ ಗೀತೆಗಳಿಗೆ ಸಂಗೀತ ಸಂಯೋಜಿಸಿದವರು.

ಕಲೆಗಾಗಿ ಕಲೆ, ಕಲೆಯು ಪವಿತ್ರವಾದುದು ಎಂಬ ದೃಷ್ಟಿಕೋನವನ್ನು ಬಿಟ್ಟು ಜನಜೀವನದೊಡನೆ ಸೇರಬೇಕು. ಕಲೆಯು ಉಳಿಯಬೇಕಾದರೆ ಅರಸರ, ಮಾಂಡಲೀಕರ, ಬಂಡವಾಳಗಾರರ, ಆಶ್ರಯದಾತರ ಕೈಯಿಂದ ಹೊರಬಂದು ಜನತೆಗಾಗಿ ಕಲೆ ಇರಬೇಕು. "ಸಂಗೀತ, ಚಿತ್ರ, ನೃತ್ಯ ಎಂದುಕೊಂಡು ಅಶ್ರಯದಾತರ ಮನ ಮೆಚ್ಚಿಸುವುದಕ್ಕಾಗಿ ಪ್ರಯೋಗಿಸುತ್ತಾ ಮುನ್ನಡೆದರೆ ಆ ಕಲೆ ಕಲಾವಿದರಲ್ಲಿ ಉಳಿಯಬಹುದು, ಆಶ್ರಯದಾತರ ಮನ ಚೆನ್ನಾಗಿರುವ ತನಕ ಕೆಲವೊಂದು ಮನೆಗಳಲ್ಲೋ, ಪ್ರದರ್ಶನಾಲಯಗಳಲ್ಲೋ ಮೆರೆಯಬಹುದು. ಇದ್ದಂತೆ ಉಳಿಯಬಹುದು. ನಮ್ಮ ಕಲಾವಿದರು ಈ ನೀತಿ ಬಿಟ್ಟು ಕಾರ್ಖಾನೆಯ ಕೂಲಿಗಾರರಿಗಾಗಿ, ರೈತರಿಗಾಗಿ, ಅವರ ಜೀವನದ ಸತ್ಯ ದುರಂತಗಳ ಚಿತ್ರ ಚಿತ್ರಿಸಲಿ, ನಾಟಕ ಆಡಲಿ, ಕವಿತೆ ಬರೆಯಲಿ, ನೃತ್ಯ ಪ್ರದರ್ಶಿಸಲಿ. ಹಾಗಿದ್ದಾಗ ಅದು ಆಶ್ರಯದಾತರ ಅಧಿಕಾರಶಾಹಿ ಕಟ್ಟಳೆಗಳ ಸಂಕಲೆಗಳನ್ನು ಮುರಿದು ಸ್ವತಂತ್ರವಾಗಬಲ್ಲುದು"[೨೩] ಎಂದಿದ್ದಾರೆ.

ಯಾವುದೇ ಕಲೆಯಾಗಲೀ ಅದು ದೀರ್ಘಕಾಲ ಉಳಿದು ಬರಬೇಕಾದರೆ ಅದು ಜನತೆಗಾಗಿ, ಜನತೆಗೋಸ್ಕರವಿದ್ದರೆ ಮಾತ್ರ ಆ ಕಲೆ ಉಳಿಯುವುದು, ಬೆಳೆಯುವುದು. ಯಾವ ಕಲೆ ಜನತೆಯಿಂದ ದೂರ ಉಳಿಯುತ್ತದೆಯೋ ಆಗ ಕಲೆ ಬೇಗ ನಾಶವಾಗುತ್ತದೆ. ಹಾಗಾಗಿ ಪ್ರಗತಿಶೀಲ ಕಾಲಘಟ್ಟದ ಬರಹಗಾರರು ಜನತೆಗಾಗಿ ಕಲೆ ಎಂಬ ಧೋರಣೆಯನ್ನು ಹೊಂದಿರುವುದು.

ಪ್ರಗತಿಶೀಲ ಚಳುವಳಿಯಲ್ಲಿ ಕಾಣಿಸಿಕೊಂಡವರಲ್ಲಿ ಅರ್ಚಕ ವೆಂಕಟೇಶರವರು ಒಬ್ಬರಾಗಿದ್ದಾರೆ. ಅವರು ಬರೆದ ವೈಚಾರಿಕ ಲೇಖನ ಪ್ರಗತಿಶೀಲ ಸಾಹಿತ್ಯಕ್ಕೆ ಸಂಬಂಧಿಸಿದ 'ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲತೆ'. ಇಲ್ಲಿ ಲೇಖಕರು ಇಡೀ ವಿಶ್ವವೇ ಪ್ರಗತಿಶೀಲವಾಗಿದೆ, ಅಮೀಬಾದಿಂದ ಮಾನವನಾಗುವವರೆಗೂ ಹೇಗೆ ಪ್ರಗತಿಯನ್ನು ಕಾಣುತ್ತೇವೆಯೋ ಅದೇ ರೀತಿ ಭಾರತೀಯ ಸಂಸ್ಕೃತಿ, ಸಂಸ್ಕೃತ ಸಾಹಿತ್ಯ, ಪಾಶ್ಚಾತ್ಯ ಸಾಹಿತ್ಯ ಮೊದಲಾದವುಗಳಲ್ಲಿ ಪ್ರಗತಿಯನ್ನು ಗುರುತಿಸಬಹುದು. ಕನ್ನಡ

ಸಾಹಿತ್ಯದಲ್ಲಿಯ ಪ್ರಗತಿ ಮುಖವು ೧೨ನೇ ಶತಮಾನದ ಶಿವಶರಣರು, ರಾಘವಾಂಕ, ಹರಿಹರ, ನಯಸೇನ, ಸರ್ವಜ್ಞ ಮೊದಲದ ಹಳಗನ್ನಡ, ನಡುಗನ್ನಡ ಸಾಹಿತ್ಯದಲ್ಲಿಯೂ ಪ್ರಗತಿಯನ್ನು ಕಾಣಬಹುದು. ಹಾಗೆಯೇ, ಆಧುನಿಕ ಕನ್ನಡ ಸಾಹಿತ್ಯದಲ್ಲೂ ಈ ದೃಷ್ಟಿಯಿಂದ ಕಂಡು ಬಂದಿದೆ. ಪ್ರಗತಿಶೀಲರ ದೃಷ್ಟಿಕೋನ ಸಂಕುಚಿತವಾದುದಲ್ಲ, ವಿಶಾಲವಾದುದು. ಸಾಹಿತ್ಯವೆಂಬುದು ಪಂಡಿತರ ಸ್ವತ್ತಲ್ಲ, ಅದು ಜನಸಾಮಾನ್ಯರಿಗೆ ಸೇರಿದೆ. ಜನಸಾಮಾನ್ಯರಿಗಾಗಿಯೇ ಸಾಹಿತ್ಯ ನಿರ್ಮಾಣವಾಗಬೇಕು. ಓದಬಲ್ಲ ಎಲ್ಲರು ಸಾಹಿತ್ಯವನ್ನು ತಿಳಿಯುವಂತಾಗಬೇಕು. ಜನತೆಯ ಜೀವನದಲ್ಲಿ ಹೊಸ ಬೆಳಕನ್ನು ನೀಡುವಂತಾಗಬೇಕು. ಆ ರೀತಿಯ ಸಾಹಿತ್ಯ ಪ್ರಗತಿಶೀಲ ಸಾಹಿತ್ಯ ಎಂದು ಪ್ರಗತಿಶೀಲ ಸಾಹಿತ್ಯದ ಧೋರಣೆಯನ್ನು ವಿಶ್ಲೇಷಿಸುತ್ತಾರೆ. ಅರ್ಚಕ ವೆಂಕಟೇಶರವರು ಪ್ರಗತಿಶೀಲ ಕಾಲಘಟ್ಟದ ಸಾಹಿತ್ಯವು ಜನತೆಯ ಸಾಹಿತ್ಯವಾಗಿರುತ್ತದೆ ಹೊರತು ಪಂಡಿತರ, ಬಂಡವಾಳಗಾರರ, ಅರಸರ, ಮಾಂಡಲಿಕರ ಪ್ರತಿನಿಧಿಯಾಗಿ ಸಾಹಿತ್ಯವಿರಲಾರದು ಎಂಬ ಸ್ಪಷ್ಟ ನಿಲುವಿದೆ.

ಬಸವರಾಜ ಕಟ್ಟೀಮನಿಯವರು ಕೂಡಾ ಪ್ರಗತಿಶೀಲ ಸಾಹಿತ್ಯವನ್ನು ವಿಶಾಲ ದೃಷ್ಟಿಯಲ್ಲಿ ನೋಡಿದ್ದಾರೆ. ಸಮಾಜಕ್ಕಾಗಿ, ಪ್ರಗತಿಗಾಗಿ ನೋಡುವುದು ಎಲ್ಲವೂ ಪ್ರಗತಿಶೀಲವೇ ಆಗಿದೆ. ಹಾಗಾಗಿ ನವೋದಯ ಕಾಲಘಟ್ಟ ಕವಿಗಳಲ್ಲಿ ಒಬ್ಬರಾದ ಕುವೆಂಪುರವರನ್ನು ಬಸವರಾಜ ಕಟ್ಟೀಮನಿಯವರು ಕುವೆಂಪುರವರು ಪ್ರಗತಿಶೀಲರೇ ಆಗಿದ್ದಾರೆ ಎಂದು ಕರೆದರು. ಬಂಡಾಯ ಸಾಹಿತ್ಯವು ಪ್ರಗತಿಯ ಪರವಾಗಿಯೇ ಇರುವುದರಿಂದ ಪ್ರಗತಿಶೀಲದ ಮತ್ತೊಂದು ಘಟ್ಟ ಎಂದು ಕರೆದರು. ಪ್ರಗತಿಶೀಲತೆ ಎಂಬುದು ಕೇವಲ ಒಂದು ಪಂಥಕ್ಕೆ, ಕಾಲಘಟ್ಟಕ್ಕೆ ಸೀಮಿತವಾದುದಲ್ಲ ಎಂಬ ದೃಷ್ಟಿಯಿದೆ.

ಎಸ್. ಅನಂತನಾರಾಯಣರು ಕೂಡಾ ಪ್ರಗತಿಶೀಲ ಚಲುವಳಿಯಲ್ಲಿ ಕಾಣಿಸಿಕೊಂಡ ಮತ್ತೊಬ್ಬ ಬರಹಗಾರರು. ಅವರ ವೈಚಾರಿಕ ಲೇಖನ 'ಸಾಹಿತ್ಯದಲ್ಲಿ ಜನತಾ ದೃಷ್ಟಿ' ಈ ಲೇಖನ ಅ. ನ. ಕೃ. ರವರು ಸಂಪಾದಿಸಿರುವ 'ಪ್ರಗತಿಶೀಲ ಸಾಹಿತ್ಯ' ಕೃತಿಯಲ್ಲಿದೆ. ಕೆಲವು ಸಾಹಿತಿಗಳು ಜನತೆಗೂ ಸಾಹಿತ್ಯಕ್ಕೂ ಸಂಬಂಧವಿಲ್ಲ ಎಂದು ಪರಿಭಾವಿಸಿದ್ದಾರೆ. ಜನತೆಯನ್ನು ತಮ್ಮ ಸಾಹಿತ್ಯದಿಂದ ದೂರವಿರಿಸಿದ್ದಾರೆ. ಆದರೆ ಜನತೆಗೂ ಸಾಹಿತ್ಯಕ್ಕೂ ಸಂಬಂಧವಿದೆ ಎಂಬುದಕ್ಕೆ ಉತ್ತಮ ನಿದರ್ಶನ ಜನಪದ ಸಾಹಿತ್ಯ.

ಜನಪದರು ಕಟ್ಟಿದ ಹಾಡಿನಲ್ಲಿ ಅಥವಾ ಸಾಹಿತ್ಯದಲ್ಲಿ ಅವರ ಬದುಕಿನ ಪ್ರತಿಬಿಂಬವೇ ಅಡಗಿದೆ. ಸಾಮಾನ್ಯ ಜನರು ಬಯಸುವುದು ನಿಸರ್ಗ ಸೌಂದರ್ಯದ ವರ್ಣನೆಯಲ್ಲ, ಹೆಂಗೆಳೆಯರ ರೂಪ ಲಾವಣ್ಯವಲ್ಲ, ಒಂದು ಹೊತ್ತಿನ ಅನ್ನಕ್ಕಾಗಿ ಹಪಹಪಿಸುವ, ತನ್ನ ಮೇಲಿನ ಅಧಿಕಾರಿಗಳ ಮಾನಸಿಕ ಅತ್ಯಾಚಾರ, ಜಮೀನ್ದಾರನ ಅನ್ಯಾಯ, ಮಾಲೀಕನ ದೌರ್ಜನ್ಯ. ಇದರಿಂದ ಪರಿಹಾರ ನೀಡುವ ಸಾಹಿತ್ಯ ಆತನಿಗೆ ಬೇಕಾದುದು. ಹಾಗಾಗಿ ಸಾಹಿತ್ಯದಲ್ಲಿ ಜನತಾ ದೃಷ್ಟಿಯೆಂಬುದು ಇರಬೇಕು.

ಪ್ರಗತಿಶೀಲ ಕಾಲಘಟ್ಟದ ಸಮಾಜದ ಅತ್ಯಂತ ದೊಡ್ಡ ಸಮಸ್ಯೆ ವರ್ಗ ಕಲಹದ್ದು. ಒಂದು ದುಡಿಯುವವರು, ಇನ್ನೊಂದು ದುಡಿಸುವವರು. ಬಂಡವಾಳಗಾರರು ಉಳಿದವರನ್ನು ದಾಸರನ್ನಾಗಿ ಮಾಡಿಕೊಂಡು ಅದರಿಂದ ಬಿಡುಗಡೆ ಬಯಸುವ ಜನತೆಯ ದೃಶ್ಯಗಳೇ ಸಾಹಿತಿಯ ಮುಂದೆ ನಿಲ್ಲುವಂತದ್ದು. ಆ ಸಂದರ್ಭದಲ್ಲಿ ಸಾಹಿತ್ಯವು ಆನಂದಕ್ಕಾಗಿ, ನೀತಿಯನ್ನು ಬೋಧಿಸುವುದಕ್ಕಾಗಲೀ ಸೂಕ್ತವಾದುದಲ್ಲ. ಸಾಹಿತ್ಯದಿಂದ ಸಾಮಾನ್ಯ ಜನರು ಸಮಸ್ಯೆಗಳಿಗೆ ಪರಿಹಾರವನ್ನು ಬಯಸುತ್ತಾರೆ.

ಸಾಹಿತ್ಯವು ಕೂಡಾ ಕಾಲದಿಂದ ಕಾಲಕ್ಕೆ ಬದಲಾಗಬೇಕು. ಸಮಾಜವನ್ನು ನೋಡುವ ದೃಷ್ಟಿಕೋನವು ಬದಲಾಗಬೇಕು. ಆಗ ಅದು ಜನತೆಯ ಸಾಹಿತ್ಯವಾಗುತ್ತದೆ.

ಸಾಹಿತಿಯ ಕರ್ತವ್ಯವೆಂದರೆ ಜನತೆಯನ್ನು ಕಷ್ಟಗಳಿಂದ ಪಾರುಗೊಳಿಸಲು ಸುಗಮ ಹಾದಿಯನ್ನು ಬರವಣಿಗೆಯ ಮೂಲಕ ತೋರಿಸುವುದು ಅಗಿದೆ. ಲೆನಿನ್ ಹೇಳುವಂತೆ "ಯಾವ ಸಾಹಿತ್ಯವೇ ಆಗಲಿ, ಸಾಹಿತ್ಯವೆನಿಸಿಕೊಳ್ಳಬೇಕಾದರೆ ಅದು ಜನತೆಯ ಕ್ರಾಂತಿಗೆ ಸಹಕಾರಿಯಾಗಬೇಕು"[೨೪] ಎಂಬ ಮಾತಿನಲ್ಲಿ ಜನತೆಗೆ ಸುಲಭವಾಗಿ ಹೊಸ ವಿಚಾರಗಳು ತಿಳಿದು ಅನ್ಯಾಯದ ವಿರುದ್ಧ, ಬಡತನದ ವಿರುದ್ಧ, ಹಸಿವಿನ ವಿರುದ್ಧ ಮೊದಲಾದ ಅನ್ಯಾಯಗಳನ್ನು ಕಿತ್ತೊಗೆದು ಜನತೆಯ ನಾಡನ್ನು ಸೃಷ್ಟಿಸುವ ಸಾಹಿತ್ಯ ಬೇಕು.

ಎಸ್. ಅನಂತನಾರಾಯಣರು ಸಾಹಿತ್ಯದ ಕಾರ್ಯಗಳು, ಯಾವ ರೀತಿಯ ಸಾಹಿತ್ಯ ಜನರಿಗೆ ಬೇಕು, ಸಾಹಿತಿಯಾದವನ ಕರ್ತವ್ಯ, ಪ್ರಗತಿಪರ ನಿಲುವನ್ನು ಹೊಂದುವ ಮೂಲಕ ಸಮಾನತೆಯ ಸಮಾಜವನ್ನು, ಶೋಷಣೆಮುಕ್ತ, ಜಾತಿಮುಕ್ತ, ವರ್ಗಮುಕ್ತ ಸಮಾಜವನ್ನು ನಿರ್ಮಾಣ ಮಾಡುವ ಹೊಸ ಮಾದರಿಯ ಸಾಹಿತ್ಯ ಬೇಕೆಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ.

ಕಥೆಗಾರರಾಗಿ, ಕಾದಂಬರಿಕಾರರಾಗಿ ಜನಮನ್ನಣೆ ಗಳಿಸಿದವರಲ್ಲಿ ದೊಡ್ಡೇರಿ ವೆಂಕಟಗಿರಿ ರಾವ್‌ರವರು ಪ್ರಗತಿಶೀಲ ಚಳುವಳಿಯಲ್ಲಿ ಸ್ವಲ್ಪ ಮಟ್ಟಿಗೆ ಕಾಣಿಸಿಕೊಂಡ ಲೇಖಕರು. ಇವರು ಬರೆದ ವೈಚಾರಿಕ ಲೇಖನವೆಂದರೆ 'ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ಲೈಂಗಿಕ ಶಿಕ್ಷಣದ ಸ್ಥಾನ' ವಿಶಿಷ್ಟವಾದುದು ಆಗಿದೆ. ಅ. ನ. ಕೃ. ರವರು ೧೯೪೪ರಲ್ಲಿ ಸಂಪಾದಿಸಿದ ಪ್ರಗತಿಶೀಲ ಲೇಖಕರ ಸಂಘವು ಪ್ರಕಟಿಸಿದ 'ಪ್ರಗತಿಶೀಲ ಸಾಹಿತ್ಯ' ಕೃತಿಯಲ್ಲಿ ಪ್ರಮುಖ ವೈಚಾರಿಕ ಲೇಖನವಾಗಿದೆ. ದೊಡ್ಡೇರಿ ವೆಂಕಟಗಿರಿ ರಾಯರು ವೈದ್ಯರು ಕೂಡಾ ಆಗಿದ್ದರಿಂದ ತಮ್ಮ ಬರವಣಿಗೆಯ ಮೂಲಕ ಸಮಾಜದ ಸಮಸ್ಯೆಗಳಿಗೆ ಚಿಕಿತ್ಸೆಯನ್ನು ನೀಡಿದ್ದಾರೆ. ಆ ರೀತಿಯ ಬರವಣಿಗೆಯಲ್ಲಿ ಈ ವೈಚಾರಿಕ ಲೇಖನವು ಮುಖ್ಯವಾಗಿದೆ.

ಕಾಮ ಮತ್ತು ಲೈಂಗಿಕ ವಿಜ್ಞಾನದ ಸರಿಯಾದ ಜ್ಞಾನವನ್ನು ಹದಿಹರೆಯದವರಿಗೆ ತಂದೆ-ತಾಯಿಗಳು ಮತ್ತು ಉಪಾಧ್ಯಾಯರು ನೀಡುವುದು ಒಳಿತು. ಆದರೆ ತಂದೆ-ತಾಯಿಗಳು ಕಾಮ ವಿಷಯಗಳ ಜ್ಞಾನವನ್ನು ಮಕ್ಕಳೊಂದಿಗೆ ಚರ್ಚಿಸುವುದು ಅಶ್ಲೀಲವೆಂದು ಭಾವಿಸಿದ್ದಾರೆ. ಇದು ತಪ್ಪು ತಿಳುವಳಿಕೆ. ಹಾಗೆ ನೋಡಿದರೆ ತಾಯಿಯಾದವಳು ತನ್ನ ಮಗಳಿಗೆ ಋತುಸ್ರಾವ, ಅದರ ರೀತಿ-ನೀತಿಗಳು, ಗರ್ಭಧಾರಣೆ, ಗರ್ಭದಾನ ಮೊದಲಾದ ವಿಷಯಗಳನ್ನು ಕೆಲವರು ತಿಳಿಸಿರಬಹುದು. ಆದರೆ ಹುಡುಗರಿಗೆ ತಂದೆಯನ್ನು ಕೇಳಲು ಹೆದರಿಕೆ, ತಾಯಿಯೊಡನೆ ಕೇಳಲು ನಾಚಿಕೆ, ಈ ರೀತಿಯಲ್ಲಿದ್ದಾಗ ಅವರು ಲೈಂಗಿಕ ವಿಷಯಗಳಿಗೆ ಸಂಬಂಧಿಸಿದಂತೆ ತಪ್ಪು ತಿಳುವಳಿಕೆಗಳು ಮೂಡಿ, ಕೆಲವು ಚಟಗಳಿಗೆ ದಾಸರಾಗುತ್ತಾರೆ. ಇಂತಹ ದುಶ್ಚಟಗಳಿಗೆ ಬಲಿಯಾಗದ ರೀತಿಯಲ್ಲಿ ಹದಿಹರೆಯದವರಿಗೆ ಲೈಂಗಿಕ ಶಿಕ್ಷಣ ನೀಡುವುದು ಬಹಳ ಮುಖ್ಯ.

ಲೈಂಗಿಕ ಶಿಕ್ಷಣವನ್ನು ಮಕ್ಕಳಿಗೆ ಉಪಾಧ್ಯಾಯರೇ ನೀಡುವುದು ಒಳ್ಳೆಯದು. ದಿನದ ಪಾಠದ ಜೊತೆಗೆ ನೈತಿಕ ಶಿಕ್ಷಣವನ್ನು ಕೊಡುವ ಶಿಕ್ಷಕರು ಅಶ್ಲೀಲವಲ್ಲದ ರೀತಿಯಲ್ಲಿ ಇಂತಹ ವಿಷಯಗಳನ್ನು ತಿಳಿಸಲು ಅವರಿಗೆ ಅವಕಾಶಗಳಿರುತ್ತವೆ. ಪ್ರತ್ಯೇಕ ತರಗತಿಗಳನ್ನು ಏರ್ಪಡಿಸದೆ ದೈನಂದಿನ

ಪಾಠಗಳೊಡನೆ ಈ ವಿಚಾರಗಳನ್ನು ತಿಳಿಸುವುದು ಉತ್ತಮ. ಅದರಲ್ಲಿಯೂ ಪ್ರೌಢ ಶಿಕ್ಷಣದ ಹಂತದಲ್ಲಿಯೇ ಲೈಂಗಿಕ ಶಿಕ್ಷಣ ನೀಡುವುದು ಒಳ್ಳೆಯದು. ಕಾರಣವೆಂದರೆ ಈ ಅವಧಿಯಲ್ಲಿ ಮಕ್ಕಳಲ್ಲಿ ವಿಷಯವನ್ನು ತಿಳಿದುಕೊಳ್ಳುವ ಕುತೂಹಲ, ವಿಷಯವನ್ನು ಗ್ರಹಿಸುವ, ಜೊತೆಗೆ ಜೀವಶಾಸ್ತ್ರ, ಸಸ್ಯಶಾಸ್ತ್ರ, ದೇಹ ವಿಜ್ಞಾನ, ಅನುವಂಶೀಯತೆ ಮೊದಲಾದ ವಿಷಯಗಳ ಪರಿಚಯವಾಗುವುದು ಹೈಸ್ಕೂಲು ಹಂತದಲ್ಲಿ. ಲೈಂಗಿಕ ಶಿಕ್ಷಣ ನೀಡಲು ಪ್ರೌಢಶಾಲಾ ಹಂತವೇ ಅನುಕೂಲಕರವಾದುದು ಎಂಬುದಾಗಿ ದೊಡ್ಡೇರಿ ವೆಂಕಟಗಿರಿ ರಾಯರು ವಿಮರ್ಶಿಸುತ್ತಾರೆ.

"ಬಯಾಲಜಿ ತರಗತಿಯಲ್ಲಿ ಅದಕ್ಕೆ ಸಂಬಂಧಿಸಿದ ಉಪಾಧ್ಯಾಯರು ಮೊದಲು ಹೂ, ಪರಾಗ, ಅದರಿಂದ ಕಾಯಿ, ಬೀಜ ಇವುಗಳ ಉತ್ಪಾದನಾ ಕ್ರಮವನ್ನು ಬೋಧಿಸುವ ಸಮಯದಲ್ಲಿಯೇ ಪ್ರಾಣಿ ಮತ್ತು ಮಾನವರಿಗೆ ಸಂಬಂಧಿಸಿದ ಉತ್ಪತ್ತಿ ಕ್ರಮವನ್ನು ವಿವರಿಸಬಹುದು. ದೇಹ ವಿಜ್ಞಾನ ತರಗತಿಯಲ್ಲಿ ಕಾಮಾಂಗಗಳ ಪರಿಚಯವನ್ನು ಅಶ್ಲೀಲವಲ್ಲದ ರೀತಿಯಲ್ಲಿ ಬೋಧಿಸಬಹುದು. ಅಮೀಬಾ ಮೊದಲಾದ ವಿಷಯಗಳನ್ನು ಬೋಧಿಸುವಾಗ ಮೇಹ ಜಾಡ್ಯಗಳಿಗೆ ಸಂಬಂಧಿಸಿದ ಕ್ರಿಮಿಗಳ ವಿಷಯವಾಗಿ ತಿಳುವಳಿಕೆ ಕೊಡಬಹುದು. ಅಲ್ಲದೆ ಕಾಮಭಾವ, ಹಾವಭಾವ, ಕಾಮಸೂಚನೆ ಮೊದಲಾದ ವಿಷಯಗಳನ್ನು ಅಶ್ಲೀಲವಲ್ಲದ ರೀತಿಯಿಂದ ಬೋಧಿಸಲು ಸಾಹಿತ್ಯ, ನಾಟಕ, ಇತಿಹಾಸ ಇತ್ಯಾದಿಗಳನ್ನು ಪಾಠ ಮಾಡುವ ಉಪಾಧ್ಯಾಯರುಗಳಿಗೆ ತುಂಬಾ ಅವಕಾಶವಿದೆ"[೨೫] ಎಂದು ಅಭಿಪ್ರಾಯಿಸುತ್ತಾರೆ.

ಇಲ್ಲಿ ಲೇಖಕರು ಯಾವ ಹಂತದಲ್ಲಿ ಲೈಂಗಿಕ ಶಿಕ್ಷಣವನ್ನು ನೀಡಬೇಕು, ಯಾರು ನೀಡಬೇಕು, ಹೇಗೆ ನೀಡಬೇಕು ಎಂಬ ನಿಲುವಿನಲ್ಲಿ ಸ್ಪಷ್ಟವಾದ ಕ್ರಮಗಳನ್ನು ಸೂಚಿಸಿದ್ದಾರೆ. ಸಮಾಜದಲ್ಲಿನ ಯುವ ಸಮೂಹ ಲೈಂಗಿಕ ಚಟಗಳಿಂದ ದೂರ ಉಳಿಯುವಂತೆ ಮಾಡುವ ತಂತ್ರವನ್ನು ಮತ್ತು ಹದಿಹರೆಯದವರ ಲೈಂಗಿಕ ಸಮಸ್ಯೆಗೆ ಸ್ಪಷ್ಟವಾದ ಪರಿಹಾರವನ್ನು ನೀಡುವ ಮೂಲಕ ಒಬ್ಬ ಸಾಹಿತಿಯ ಸಾಮಾಜಿಕ ಜವಾಬ್ದಾರಿಯನ್ನು ಕಾಣಬಹುದು.

ಮನಃಶಾಸ್ತ್ರಜ್ಞರು, ಶಿಕ್ಷಣ ತಜ್ಞರು, ಹಲವು ಸಂಘ ಸಂಸ್ಥೆಯ ಪ್ರತಿನಿಧಿಗಳು, ಬುದ್ಧಿಜೀವಿಗಳು, ವಿಚಾರವಾದಿಗಳು ಇಂದಿನ ಯುವ ಸಮೂಹ ಲೈಂಗಿಕ ಚಟಗಳಿಗೆ ದಾಸರಾಗಿ ತಪ್ಪು ದಾರಿಯನ್ನು ತುಳಿದು ತಮ್ಮ ಬದುಕನ್ನು ನಾಶಗೊಳಿಸುವ ಸ್ಥಿತಿಗೆ, ಲೈಂಗಿಕ ಶಿಕ್ಷಣದ ವಿಚಾರವನ್ನು ಯಾವ ಹಂತದಲ್ಲಿ ಕೊಡಬೇಕು, ಹೇಗೆ ಕೊಡಬೇಕು, ಯಾರು ಕೊಡಬೇಕು ಎಂದು ಚರ್ಚೆಯನ್ನು ನಡೆಸುತ್ತಿರುವ ಪ್ರಸ್ತುತ ಕಾಲಘಟ್ಟದಲ್ಲಿ ದೊಡ್ಡೇರಿ ವೆಂಕಟಗಿರಿಯವರು ೧೯೪೪ರಲ್ಲಿಯೇ, ಅಂದರೆ ಪ್ರಗತಿಶೀಲ ಕಾಲಘಟ್ಟದಲ್ಲಿಯೇ ಇದಕ್ಕೆ ಸ್ಪಷ್ಟ ಉತ್ತರವನ್ನು ಕೊಟ್ಟಿದ್ದಾರೆ.

ಸಮಾಜದ ಯುವ ಪೀಳಿಗೆಯ ಸಮಸ್ಯೆಗಳಲ್ಲಿ ಬಹುಮುಖ್ಯವಾದ ಹದಿಹರೆಯದವರ ಕಾಮ ಮತ್ತು ಲೈಂಗಿಕ ವಿಚಾರಗಳಿಗೆ ಸಂಬಂಧಿಸಿದಂತೆ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಲು ಲೈಂಗಿಕ ಶಿಕ್ಷಣವನ್ನು ಪ್ರೌಢ ಶಾಲೆಯ ಹಂತದಲ್ಲಿಯೇ ನೀಡುವ ಮೂಲಕ ಹದಿಹರೆಯದವರು ದಾರಿ ತಪ್ಪುವ, ಸಮಾಜ ಕಂಟಕರಾಗುವ, ದುಶ್ಚಟಗಳಿಂದ ದೂರವಾಗುವ ಮಾರ್ಗವನ್ನು ಲೇಖಕರು ತಿಳಿಸಿದ್ದಾರೆ. ಜನತೆಗೆ ಒಳಿತು ಮಾಡುವ ಸಾಹಿತ್ಯವೇ ನಿಜವಾದ ಸಾಹಿತ್ಯ ಎಂಬ ಪ್ರಗತಿಶೀಲ ಕಾಲಘಟ್ಟದ ಸಾಹಿತ್ಯದ ಧೋರಣೆಯನ್ನು ಈ ವಿಚಾರ ಸಾಹಿತ್ಯದ ಲೇಖನವು ಪುಷ್ಟೀಕರಿಸುತ್ತದೆ.

ಈ ಮೇಲ್ಕಂಡ ಪ್ರಮುಖ ಲೇಖಕರ ಜೀವನ ಚರಿತ್ರೆ, ಪ್ರಬಂಧ, ಲೇಖನಗಳು ಮೊದಲಾದವುಗಳ ವಿಶ್ಲೇಷಣೆಯಿಂದ ಪ್ರಮುಖವಾಗಿ ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯದ ತಾತ್ವಿಕತೆಯೇನು ಎಂಬ ಪ್ರಶ್ನೆಗೆ ಉತ್ತರವು ದೊರಕಿದೆ ಎನ್ನಬಹುದು.

೩.೩ ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯದ ಸ್ವರೂಪ

ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯದ ಸ್ವರೂಪವನ್ನು ಈ ಕೆಳಕಂಡ ಅಂಶಗಳಿಂದ ಗುರುತಿಸಬಹುದು:

- ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯು ವಿಚಾರ ಸಾಹಿತ್ಯದ ವಸ್ತುಗಳಲ್ಲಿ ಒಂದಾಗಿದೆ.
- ಸ್ವಾತಂತ್ರ್ಯ ಹೋರಾಟದ ಜೊತೆಗೆ ತಮ್ಮನ್ನು ವೈಚಾರಿಕತೆ, ಬರಹಗಳನ್ನು ರೂಢಿಸಿಕೊಂಡದ್ದು ಈ ವಿಚಾರ ಸಾಹಿತ್ಯದ ಸ್ವರೂಪವೇ ಆಗಿದೆ.
- ಜಾತೀಯತೆಯ ಸಮಸ್ಯೆಗಳಿಗೆ ಉತ್ತರವನ್ನು ನೀಡುವ ಸ್ವರೂಪವನ್ನು ಹೊಂದಿದೆ.
- ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ವ್ಯಕ್ತಿಗಳ ಜೀವನ ಚರಿತ್ರೆಗಳಿಂದ ಮುಂದಿನ ಪೀಳಿಗೆ ಪ್ರೇರಣೆ ಪಡೆಯಲಿ ಎಂಬುದು ವಿಚಾರ ಸಾಹಿತ್ಯದ ಸ್ವರೂಪವಾಗಿದೆ.
- ಕರ್ನಾಟಕ ಏಕೀಕರಣವನ್ನು ಕುರಿತಂತೆ ವಿಚಾರ ಸಾಹಿತ್ಯ ಧ್ವನಿಸುತ್ತದೆ.
- ಕಲೆಗಾಗಿ ಕಲೆಯಲ್ಲ, ಜನತೆಗಾಗಿ ಕಲೆಯಿರಬೇಕು. ಜನತೆಯ ಬದುಕಿನ, ಸಮಾಜದ ಪ್ರತಿಬಿಂಬವಾಗಿ ಸಾಹಿತ್ಯವಿರಬೇಕು ಎಂಬ ಸ್ವರೂಪ ಮತ್ತು ಧೋರಣೆಯನ್ನು ಹೊಂದಿದೆ.
- ಸಾಹಿತ್ಯವು ರಾಜಕೀಯ ಮತ್ತು ಸಾಮಾಜಿಕ ದಾಸ್ಯದಿಂದ ಬಿಡುಗಡೆ ಪಡೆಯಬೇಕು.
- ಗಾಂಧೀಜಿಯವರ ವಿಚಾರಧಾರೆಗಳು ಹೆಚ್ಚು ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯದ ಮೇಲೆ ಪ್ರಭಾವಿಸುವ ಅಂಶಗಳಾಗಿವೆ.
- ಸಮಾಜವಾದದ ತಳಹದಿಯ ಮೇಲೆಯೇ ಸಮಾಜವನ್ನು ನಿರ್ಮಾಣ ಮಾಡಬೇಕು ಎಂಬ ಧೋರಣೆಯನ್ನು ಹೊಂದಿದೆ.
- ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯ ಸಾಂಪ್ರದಾಯಿಕತೆಗೆ ವಿರುದ್ಧವಾದುದು.
- ಜನತೆಗೆ ಅರ್ಥವಾಗದ ರೀತಿಯಲ್ಲಿ ಬರೆದ ನವ್ಯ ಕಾಲಘಟ್ಟದ ಸಾಹಿತ್ಯವು ಜನತೆಯ ಸಾಹಿತ್ಯವಲ್ಲ.
- ಜಮೀನ್ದಾರಿಕೆಯ ಮನಃಸ್ಥಿತಿಗೆ ಒಗ್ಗಿರುವ ಜನತೆಯ ದೃಷ್ಟಿಕೋನವನ್ನು ಬದಲಾಯಿಸುವುದು.

- ಸಾರ್ವತ್ರಿಕ ಶಿಕ್ಷಣದ ಹಕ್ಕಿನ ಬಗ್ಗೆ ತಿಳಿಸುವುದು ವಿಚಾರ ಸಾಹಿತ್ಯದ ಸ್ವರೂಪವೇ ಆಗಿದೆ.

- ವಿಚಾರ ಸಾಹಿತ್ಯದಲ್ಲಿ ವಿಚಾರ ಸ್ವಾತಂತ್ರ್ಯವಿದೆ, ಆದರೆ ವಿಚಾರಗಳನ್ನು ಒಪ್ಪಲೇಬೇಕು ಎಂಬ ಧೋರಣೆಯಿಲ್ಲ.

- ಸಾಹಿತ್ಯದಲ್ಲಿನ ಮಡಿವಂತಿಕೆಯನ್ನು ವಿರೋಧಿಸುತ್ತದೆ.

- ಸಾಹಿತ್ಯದಲ್ಲಿ ಶೀಲ-ಅಶ್ಲೀಲವೆಂಬ ವಿಂಗಡಣೆಗಳಿಲ್ಲ. ಜನತೆಗೆ ಜ್ಞಾನವನ್ನು, ತಿಳುವಳಿಕೆಯನ್ನು ನೀಡುವುದೇ ಸಾಹಿತ್ಯವಾಗಿದೆ ಎಂಬ ದೃಷ್ಟಿಕೋನ ವಿಚಾರ ಸಾಹಿತ್ಯದ ಸ್ವರೂಪಗಳಲ್ಲಿ ಒಂದಾಗಿದೆ.

- ಜೀವನ ಚರಿತ್ರೆಗಳಲ್ಲಿ ಜೀವನ ಚಿತ್ರಣವಿದೆಯೇ ಹೊರತು ವ್ಯಕ್ತಿ ಪೂಜೆಗಳಿಲ್ಲ.

ಈ ಮೊದಲಾದ ಅನೇಕ ಸ್ವರೂಪಗಳನ್ನು ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯವು ಹೊಂದಿದೆ ಮತ್ತು ಉಳಿದ ವಿಚಾರಗಳಿಗಿಂತ ಭಿನ್ನವಾಗಿ ನಿಲ್ಲುವಂತಹ ಅಂಶಗಳನ್ನು ಹೊಂದಿದೆ.

ಈ ಅಧ್ಯಾಯದ ಹಿನ್ನೆಲೆಯಲ್ಲಿ ಮುಂದಿನ ಅಧ್ಯಾಯದಲ್ಲಿ ಪ್ರಗತಿಶೀಲ ಕಾಲಘಟ್ಟದ ಪ್ರಮುಖ ಲೇಖಕರಾದ ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯದ ತಾತ್ವಿಕತೆಗಳೇನು ಮತ್ತು ಸ್ವರೂಪಗಳೇನು ಎಂಬುದನ್ನು ಅಧ್ಯಯನ ಮಾಡಲಾಗುವುದು. ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯದ ತಾತ್ವಿಕತೆ ಮತ್ತು ಸ್ವರೂಪವೇ ಇವರ ವಿಚಾರದಲ್ಲಿ ಧ್ವನಿಸುತ್ತದೆಯೇ ಅಥವಾ ಭಿನ್ನ ತತ್ವಗಳು, ಆಶಯಗಳು, ಧೋರಣೆಗಳು ವ್ಯಕ್ತವಾಗುತ್ತವೆಯೇ ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಕೊನೆ ಟಿಪ್ಪಣಿಗಳು

೧. ಗೌರೀಶ್ ಕಾಯ್ಕಿಣಿ, ಗೌರೀಶ್ ಕಾಯ್ಕಿಣಿ ಸಮಗ್ರ ಸಾಹಿತ್ಯ, ಸಂಪುಟ ೧, ಪುಟ ೬೬, ೬೭.

೨. ಅದೇ, ಪುಟ ೫೭, ೫೮.

೩. ಕೆ. ಶಿವರಾಮ ಕಾರಂತ, ವಿಚಾರ ಸಾಹಿತ್ಯ ನಿರ್ಮಾಣ, ಪುಟ ೪.

೪. ಡಿ. ಡಿ. ರಾಮಕೃಷ್ಣ, ಕನ್ನಡದಲ್ಲಿ ವಿಚಾರ ಸಾಹಿತ್ಯ (ಅಪ್ರಕಟಿತ ಪಿ. ಹೆಚ್. ಡಿ. ಮಹಾಪ್ರಬಂಧ), ಪುಟ ೧೦, ೧೧.

೫. ಅದೇ, ಪುಟ ೧೧.

೬. ಕೀರ್ತಿನಾಥ ಕುರ್ತಕೋಟಿ, ಸಾಹಿತ್ಯದಲ್ಲಿ ವೈಚಾರಿಕತೆ, ಪುಟ ೨೦.

೭. ಕೀರ್ತಿನಾಥ ಕುರ್ತುಕೋಟಿ, ಉರಿಯ ನಾಲಗೆ, ಪುಟ ೨೫.

೮. ಯಲ್ಲಪ್ಪ ಹಿಮ್ಮಡಿ, ವಿಚಾರ ಸಾಹಿತ್ಯ ಮೀಮಾಂಸೆ, ಪುಟ ೧೯.

೯. ಸೀಮಂತಿನಿ ನಿರಂಜನ (ಸಂ), ಬುದ್ಧಿ ಭಾವ ಬದುಕು, ಪುಟ ೧೦೯.

೧೦. ತಾರಿಣಿ ಶುಭದಾಯಿನಿ, ಸಾಮಯಿಕ, ಪುಟ ೫೯.

೧೧. ಜಿ. ಎಸ್. ಅಮೂರ (ಸಂ), ಶ್ರೀರಂಗ ಸಾರಸ್ವತ, ಸಂಪುಟ ೧೨, ಪುಟ ೫೯೭.

೧೨. ಅದೇ, ಪುಟ ೬೧೨.

೧೩. ಜಿ. ಎಸ್. ಅಮೂರ (ಸಂ), ಶ್ರೀರಂಗ ಸಾರಸ್ವತ, ಸಂಪುಟ ೧೦ (ಸಾಹಿತ್ಯ ಚಿಂತನ), ಪುಟ ೪೫೪.

೧೪. ತ. ರಾ. ಸು., ಅ. ನ. ಕೃ., ಪುಟ ೧೧೦.

೧೫. ಕೊತ್ತಲ ಮಹಾದೇವಪ್ಪ, ಬಸವರಾಜ ಕಟ್ಟೀಮನಿ, ಪುಟ ೭೨.

೧೬. ತಿ. ತಾ. ಶರ್ಮ, ವಿಚಾರ ಕರ್ನಾಟಕ, ಪುಟ ೪೧.

೧೭. ಅದೇ, ಪುಟ ೮೮.

೧೮. ಅದೇ, ಪುಟ ೧೦೮.

೧೯. ತಿ. ತಾ. ಶರ್ಮ, ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯ, ಪುಟ ೨೩.

೨೦. ಅದೇ, ಪುಟ ೧೧೦.

೨೧. ಅ. ನ. ಕೃ. (ಸಂ), ಪ್ರಗತಿಶೀಲ ಸಾಹಿತ್ಯ, ಪುಟ ೧೨೦ (ಲೇಖನ: ತಿ. ತಾ. ಶರ್ಮ, ಅಶ್ಲೀಲ ಸಾಹಿತ್ಯ).

೨೨. ಅದೇ, ಪುಟ ೨೨ (ಲೇಖನ: ಕುಮಾರ ವೆಂಕಣ್ಣ, ಕನ್ನಡ ಸಾಹಿತಿಗಳೆಲ್ಲಿ?).

೨೩. ಅದೇ, ಪುಟ ೭೫ (ಲೇಖನ: ಕುಮಾರ ವೆಂಕಣ್ಣ, ನಾಟ್ಯಾಚಾರ್ಯ, ಜನತೆ ಮತ್ತು ಕಲೆ).

೨೪. ಅದೇ, ಪುಟ ೨೮ (ಲೇಖನ: ಎಸ್. ಅನಂತ ನಾರಾಯಣ, ಸಾಹಿತ್ಯದಲ್ಲಿ ಜನತಾ ದೃಷ್ಟಿ).

೨೫. ಅದೇ, ಪುಟ ೪೭, ೪೮ (ಲೇಖನ: ದೊಡ್ಡೇರಿ ವೆಂಕಟಗಿರಿ ರಾವ್, ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ಲೈಂಗಿಕ ಶಿಕ್ಷಣದ ಸ್ಥಾನ).

ಅಧ್ಯಾಯ ೪

ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯ – ತಾತ್ವಿಕತೆ ಮತ್ತು ಸ್ವರೂಪ

ಪ್ರಗತಿಶೀಲ ಕಾಲಘಟ್ಟದ ಲೇಖಕರಲ್ಲಿ ಪ್ರಮುಖರಾದವರು ಅ. ನ. ಕೃ. ಮತ್ತು ನಿರಂಜನರು. ಅ. ನ. ಕೃ. ರವರ ವಿಚಾರ ಸಾಹಿತ್ಯವು ದೇಶೀಯ ಚಿಂತನೆಯ ಗಾಂಧಿ ತತ್ವಗಳು, ಕಾಂಗ್ರೇಸ್ ಸಂಸ್ಥೆಯ ಮೇಲಿನ ಪ್ರೀತಿ, ಕನ್ನಡ ಭಾಷೆಯ ಉಳಿವು ಅಳಿವುಗಳ ಮೇಲಿನ ಹೋರಾಟ ಮೊದಲಾದವುಗಳ ಬಗ್ಗೆ ಮೇಲ್ನೋಟಕ್ಕೆ ಚಿತ್ರಿತವಾಗಿದೆ ಎಂದೆನಿಸಬಹುದು. ಹಾಗೆಯೇ ನಿರಂಜನರವರ ವಿಚಾರಸಾಹಿತ್ಯವು ಕಮ್ಯೂನಿಸ್ಟ್ ಸಿದ್ಧಾಂತದ ಹಿನ್ನೆಲೆಯಲ್ಲಿ, ಸಮಾಜವಾದಿ ಹಿನ್ನೆಲೆಯಲ್ಲಿ ಸಮಾಜವನ್ನು ನೋಡುವ, ಸಮಾಜದ ಸಮಸ್ಯೆಗಳಿಗೆ ಪರಿಹಾರ ನೀಡುವ ನಿಟ್ಟಿನಲ್ಲಿಯೂ ಕಾಣಬಹುದು. ಈ ಅಧ್ಯಾಯದಲ್ಲಿ ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯದ ತಾತ್ವಿಕತೆ ಮತ್ತು ಸ್ವರೂಪವನ್ನು ಚರ್ಚಿಸಲಾಗಿದೆ. ಇಲ್ಲಿ ೨ ಭಾಗಗಳಿದ್ದು ಮೊದಲನೆಯ ಭಾಗದಲ್ಲಿ ಅ. ನ. ಕೃ. ರವರ ವಿಚಾರ ಸಾಹಿತ್ಯದ ತಾತ್ವಿಕತೆ ಮತ್ತು ಸ್ವರೂಪವನ್ನು ಅವರ ಕೃತಿಗಳ ಹಿನ್ನೆಲೆಯಲ್ಲಿ, ೨ ನೇ ಭಾಗದಲ್ಲಿ ನಿರಂಜನರವರ ವಿಚಾರ ಸಾಹಿತ್ಯದ ತಾತ್ವಿಕತೆ ಮತ್ತು ಸ್ವರೂಪವನ್ನು ಒಟ್ಟಾಗಿ ಚರ್ಚಿಸಲಾಗುವುದು. ಈ ಅಧ್ಯಾಯದಲ್ಲಿ ಪ್ರಮುಖವಾಗಿ ಪ್ರಗತಿಶೀಲ ಕಾಲಘಟ್ಟದಲ್ಲಿ ವಿಭಿನ್ನ ಧೋರಣೆಗಳನ್ನು, ತಾತ್ವಿಕತೆಯನ್ನು ಹೊಂದಿದ್ದ ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯವು ಯಾವ ಯಾವ ರೀತಿಯ ತಾತ್ವಿಕತೆಯನ್ನು ಮತ್ತು ಸ್ವರೂಪವನ್ನು ಒಳಗೊಂಡಿದೆ ಎಂಬುದನ್ನು ಅಭ್ಯಸಿಸುವುದು ಆಗಿದೆ.

ಭಾಗ ೧

೪.೧ ಅ. ನ. ಕೃ. ರವರ ವಿಚಾರ ಸಾಹಿತ್ಯ–ತಾತ್ವಿಕತೆ ಮತ್ತು ಸ್ವರೂಪ

ಪ್ರಗತಿಶೀಲ ಕಾಲಘಟ್ಟದ ಮುಂಚೂಣಿಯಲ್ಲಿದ್ದ ಬರಹಗಾರರಲ್ಲಿ ಅ. ನ. ಕೃ. ರವರು ಒಬ್ಬರು. ಪ್ರಗತಿಶೀಲ ಸಾಹಿತ್ಯ ಚಳುವಳಿಯಲ್ಲಿ ಇವರು ಕಾದಂಬರಿಕಾರರಾಗಿ ಮಾತ್ರವಲ್ಲದೆ ಪ್ರಬಂಧ, ಜೀವನಚರಿತ್ರೆ, ಭಾಷಣ, ವೀರಶೈವ ಸಾಹಿತ್ಯ, ಕಲೆ, ನಾಡು ನುಡಿ ಕುರಿತಂತೆ ವಿಚಾರ ಸಾಹಿತ್ಯದ ಮೂಲಕ ಕನ್ನಡ ನಾಡಿನ ಜನರ ಗಮನವನ್ನು ಸೆಳೆದವರು. ಸೃಜನಶೀಲ ಸಾಹಿತ್ಯದಲ್ಲಿ ಪ್ರಗತಿಶೀಲ ಕಾಲಘಟ್ಟದಲ್ಲಿದ್ದ ಪ್ರಮುಖ ಸಮಸ್ಯೆಗಳನ್ನು ಚಿತ್ರಿಸಿದರು. ಕನ್ನಡ ನಾಡು ನುಡಿ–ಸಂಸ್ಕೃತಿಯ ಬಗ್ಗೆ ಅಪಾರವಾದ ಅಭಿಮಾನವನ್ನು ಹೊಂದಿದ್ದು ಅವುಗಳನ್ನು ಸೃಜನಶೀಲ ಬರಹಗಳಲ್ಲಿ ಮಾತ್ರವಲ್ಲದೆ ತಮ್ಮ ವಿಚಾರ ಸಾಹಿತ್ಯದಲ್ಲಿಯೂ ಅನೇಕ ವಿಚಾರಗಳನ್ನು ಪ್ರತಿಬಿಂಬಿಸಲು ಪ್ರಯತ್ನಿಸಿದವರು. ಅಂತಹ ಪ್ರಯತ್ನದಿಂದಲೇ ಅವರ ಗದ್ಯ ಬರಹಗಳನ್ನು ನೋಡಬಹುದಾಗಿದೆ. ಅ. ನ. ಕೃ. ರವರ ವೈಚಾರಿಕ ತಾತ್ವಿಕತೆ ಮತ್ತು ಅದರ ಸ್ವರೂಪವನ್ನು ಈ ಅಧ್ಯಾಯದಲ್ಲಿ ಪರಿಶೀಲಿಸಲಾಗಿದೆ. ಇದಕ್ಕೆ ವಿವಿಧ ವಿಚಾರ ಸಾಹಿತ್ಯವನ್ನು ಪ್ರತಿಪಾದಿಸಿದ ವಿಷಯಗಳನ್ನು ಪ್ರಬಂಧ, ಭಾಷಣಗಳು, ಜೀವನ ಚರಿತ್ರೆ, ಸ್ವಸಂದರ್ಶನ, ವೀರಶೈವ ಸಾಹಿತ್ಯದ ಬರಹಗಳು, ಸಂಸ್ಕೃತಿ ಸಾಹಿತ್ಯ, ಕಲೆಯನ್ನು ಕುರಿತು ಬರೆದ ಲೇಖನಗಳು, ಕರ್ನಾಟಕ ಏಕೀಕರಣವನ್ನು ಕುರಿತಂತೆ ಬರೆದ ಪ್ರಬಂಧಗಳ ವ್ಯಾಪ್ತಿಯಲ್ಲಿ ಈ

ಅಧ್ಯಯನವಿರುತ್ತದೆ. ಪ್ರಮುಖವಾಗಿ ಅ. ನ. ಕೃ. ರವರ ವಿಚಾರ ಸಾಹಿತ್ಯದ ತಾತ್ವಿಕತೆ ಮತ್ತು ಸ್ವರೂಪವನ್ನು ಜತೆ ಜತೆಯಾಗಿ ಅವರ ಕೃತಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಹೊಸಹುಟ್ಟು – ೧೯೩೧

ಹೊಸಹುಟ್ಟು ಎಂಬುದು ಅ. ನ. ಕೃ. ಬರೆದ ವೈಚಾರಿಕ ಲೇಖನಗಳ ಸಂಕಲನವಾಗಿದೆ. ಇದನ್ನು ೧೯೩೧ರಲ್ಲಿ ಪ್ರಕಟಿಸಿದರು. ಇದರಲ್ಲಿ ಒಟ್ಟು ೧೬ ಲೇಖನಗಳಿದ್ದು, ಒಂದೊಂದು ಲೇಖನವೂ ಭಿನ್ನವಾಗಿದೆ. ಈ ಲೇಖನಗಳನ್ನು ಅವರು ನ್ಯಾಸಗಳೆಂದು ಕರೆದಿದ್ದಾರೆ. ಈ ಲೇಖನಗಳು ಕೆಲವೊಂದು ಪತ್ರಿಕೆಗಳಲ್ಲಿಯೂ ಪ್ರಕಟವಾಗಿವೆ. ಸರಸ್ವತಿ ಉತ್ಸವ, ಜಾಗೃತ ಏಶಿಯಾ ಖಂಡ, ಎಚ್ಚೆತ್ತ ಭಾರತ, ಭಾರತ ಮಹಿಳೆಯರ ಬಂಧ ವಿಮೋಚನೆ, ನಮ್ಮ ತರುಣರು, ಶ್ರೀ ಕೃಷ್ಣ ದೇವರಾಯ, ಕೋಮಿಂಗ್–ಟನ್, ಚೀನೀ ಭಾಷೆ, ಹಿಂದೂಸ್ಥಾನದ ಸುಲಿಗೆ, ಗಾಂಧೀಜಿ, ಚಿತ್ತರಂಜನದಾಸ್, ವಿದ್ಯೆಯ ಕೀಲಕ, ಸಂಸಾರದಲ್ಲಿ ಸುಖವಿಲ್ಲ, ಪುರುಷಧರ್ಮ, ನಮ್ಮ ಸಾಹಿತ್ಯದಲ್ಲಿ ನವಚೇತನ, ಭಾರತೀಯ ಚಿತ್ರಕಲೆಯ ಸಂಕ್ಷಿಪ್ತ ಇತಿಹಾಸ ಲೇಖನಗಳಿವೆ.

'ಸರಸ್ವತಿ ಉತ್ಸವ' ಮತ್ತು 'ಭಾರತ ಮಹಿಳೆಯರ ಬಂಧವಿಮೋಚನೆ'ಯಲ್ಲಿ ಸ್ತ್ರೀಪರ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಸರಸ್ವತಿ ಉತ್ಸವದಲ್ಲಿ ಸರಸ್ವತಿಯನ್ನು ವಿದ್ಯೆಯ ದೇವತೆಯೆಂಬುದಾಗಿ ನೋಡದೆ ಸ್ತ್ರೀಯ ಹಿನ್ನೆಲೆಯಲ್ಲಿ ಗ್ರಹಿಸುತ್ತಾರೆ. ತಾಯಿಯು ಒಂದು ಮಗುವನ್ನು ಸಾಕಿ ಸಲಹಿ ಸಮಾಜಕ್ಕೆ ಉತ್ತಮ ವ್ಯಕ್ತಿಯಾಗಿ ನಿರ್ಮಾಣಗೊಳ್ಳಲು ಹೇಗೆ ಕಾರಣೀಭೂತಳೋ, ಹಾಗೆಯೇ ಸರಸ್ವತಿಯು ಕೂಡಾ ವಿದ್ಯೆ ಮತ್ತು ಜ್ಞಾನಗಳನ್ನು ನೀಡುವ ಮೂಲಕ ವ್ಯಕ್ತಿಯನ್ನು ಅಜ್ಞಾನದಿಂದ ಜ್ಞಾನದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುವವಳಾಗಿ ವಿದ್ಯೆ, ಜ್ಞಾನಕ್ಕೂ ಮುಪ್ಪಿಲ್ಲವೆಂದು, ಆಕೆ ಚಿರಯೌವನೆಯೆಂದು, ವಿದ್ಯೆಗೆ ಮುಪ್ಪುಂಟೇ, ಮರಣವುಂಟೇ? ಎಂದು ಪ್ರಶ್ನಿಸುತ್ತಾರೆ. "ಮಾನವನಿಗೆ ಮಾನವೀಯತೆಯನ್ನು ಕೊಡುವ ವಿದ್ಯಾ ವಿವೇಕಗಳು ಸ್ತ್ರೀಗೆ ಸೇರಿದವುಗಳಾಗಿವೆ"[೧] ಎನ್ನುತ್ತಾರೆ.

ಪ್ರಾಚೀನ ಭಾರತದಲ್ಲಿ ಗಾರ್ಗಿ, ಮೈತ್ರೇಯಿಯರಂತಹ ಹೆಣ್ಣು ಮಕ್ಕಳಿಗೆ ವಿದ್ಯೆಯನ್ನು ನೀಡಲಾಗಿದ್ದು ಆ ರೀತಿಯ ದಿನಗಳು ಇಂದೂ ನಾಡಿನಲ್ಲಿ ಬರುವ ಮೂಲಕ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ಪಡೆಯುವ, ಸ್ವಾತಂತ್ರ್ಯವನ್ನು ಹೊಂದುವ, ಹೆಣ್ಣಿಗೆ ಸೂಕ್ತ ಸ್ಥಾನಮಾನ ನೀಡುವ ಸಮಾಜ ನಿರ್ಮಾಣವಾಗಲಿ ಎಂಬ ಹಿನ್ನೆಲೆಯಲ್ಲಿ ಸ್ತ್ರೀ ಶಿಕ್ಷಣದ ಅಗತ್ಯತೆಯನ್ನು ಪ್ರತಿಪಾದಿಸುತ್ತಾರೆ.

ಭಾರತ ಮಹಿಳೆಯರ ಬಂಧ ವಿಮೋಚನೆ ಎಂಬ ಲೇಖನದಲ್ಲಿ ಅ. ನ. ಕೃ. ರವರು ಪುರುಷನು ಸ್ತ್ರೀಯನ್ನು ಕೇವಲ ಆದರ್ಶ ಸ್ತ್ರೀಯಾಗಿ ನೋಡುವುದು ಸರಿಯಲ್ಲವೆಂದು, ಪ್ರಾಚೀನ ಭಾರತದಲ್ಲಿ ಸ್ತ್ರೀಯು ಉನ್ನತ ಸ್ಥಾನ ಪಡೆದಿದ್ದಳೆಂದು, ಭಾರತೀಯ ಸ್ತ್ರೀಯರ ಸಮಸ್ಯೆಗಳನ್ನು ಸಿಂಹಾವಲೋಕನ ಮಾಡಿದಾಗ ಇಡೀ ಸಾಮಾಜಿಕ ವ್ಯವಸ್ಥೆಯನ್ನು ಪುರುಷನೇ ಮುಂದಾಳುವಾಗಿ ಸ್ತ್ರೀಯನ್ನು ದಾಸ್ಯದ ಸಂಕೋಲೆಯಲ್ಲಿ ಬಂಧಿಸಿದ್ದಾನೆ. ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಅವಳ ಮಾನ, ಪ್ರಾಣಕ್ಕಾಗಿ ಆಕೆ ಹೋರಾಡಬೇಕಾದ ಪರಿಸ್ಥಿತಿ ಬಂದಿದ್ದು ಪುರುಷನ ದೃಷ್ಟಿಕೋನವು "ಮಹಿಳೆಯರು ಎಲ್ಲಾ ರಂಗಗಳನ್ನು ಹೊಕ್ಕು ಪುರುಷರನ್ನು ದಾಸರನ್ನಾಗಿ ಮಾಡಿಕೊಂಡು, ರಾಜ್ಯವನ್ನು ಅನಾಯಕ ಮಾಡಿ ಬಿಟ್ಟು, ಸಂತುಷ್ಟಿ, ಅಜ್ಞಾನ, ನಿರುದ್ಯೋಗ, ಬಡತನದಲ್ಲಿ ಜನತೆಯು

ಉಳಿಯುವಂತೆ ಮಾಡುತ್ತಾರೆಂದು ಮನಸ್ಸಿನಲ್ಲಿಯೇ ಕಲ್ಪಿಸಿಕೊಂಡಿದ್ದಾರೆ"[೨]. ಈ ರೀತಿಯ ಕಲ್ಪನೆಯು ಭಯಗ್ರಸ್ತರ, ಅವಿವೇಕತನವೆಂದು ತಿಳಿಸುತ್ತಾರೆ. ಸ್ತ್ರೀಯು ಬಯಸುವುದು ರಾಷ್ಟ್ರ ಸೇವೆಯಲ್ಲಿ ಭಾಗಿಯಾಗಿ ಪುರುಷನ ಸರಿಸಮಾನಳಂತೆ ಆತ್ಮಗೌರವವನ್ನು ಪಡೆಯುವುದೇ ಆಗಿದೆ ಹೊರತು ಪುರುಷರನ್ನು ದಾಸರನ್ನಾಗಿ ಮಾಡಿಕೊಳ್ಳುವುದಲ್ಲ. ಸ್ತ್ರೀ ಸ್ವಾತಂತ್ರ್ಯವನ್ನು ಹತ್ತಿಕ್ಕುವುದು ಪುರುಷನ ಮೂರ್ಖತನವೆಂದು ಭಾವಿಸುತ್ತಾರೆ. ಸೃಜನಶೀಲ ಬರವಣಿಗೆಯಲ್ಲಿ ಆದರ್ಶ ಸ್ತ್ರೀಯಾಗಿ, ಗೃಹಿಣಿಯಾಗಿ, ವೇಶ್ಯೆಯಾಗಿ ಚಿತ್ರಿಸುವ ಅ. ನ. ಕೃ. ರವರು ವಿಚಾರ ಸಾಹಿತ್ಯದಲ್ಲಿ ಸ್ತ್ರೀ ಪರ ಕಾಳಜಿಯನ್ನು ಸ್ತ್ರೀ ಶಿಕ್ಷಣದ ಅವಶ್ಯಕತೆಯನ್ನು ಭಾರತೀಯ ಪರಂಪರೆಯ ಹಿನ್ನೆಲೆಯಲ್ಲಿ ತಾತ್ವೀಕರಿಸುತ್ತಾರೆ.

'ಎಚ್ಚೆತ್ತ ಭಾರತ' ಮತ್ತು 'ನಮ್ಮ ತರುಣರು' ಎಂಬ ಲೇಖನದಲ್ಲಿ ಜಾತಿಪದ್ಧತಿಯನ್ನು ಕುರಿತು, ಭಾರತದಲ್ಲಿ ಜಾತಿ ಪದ್ಧತಿಯೆಂಬುದು ಸಮಾಜದ ಅನುಕೂಲತೆಯನ್ನು ಅನುಸರಿಸಿದೆ ಹೊರತು ಧಾರ್ಮಿಕ ಬೀಜದ ವೃಕ್ಷವಾಗಿ ಪರಿಣಮಿಸಿರಲಿಲ್ಲವೆಂಬ ಅ. ನ. ಕೃ. ರವರ ಮಾತಿನಲ್ಲಿ ಜಾತೀಯತೆ ಎಂಬುದು ಸಾಮಾಜಿಕವಾಗಿತ್ತು, ಧಾರ್ಮಿಕತೆಯ ಲೇಪವನ್ನು ಪಡೆದಿರಲಿಲ್ಲ, ಯಾವಾಗ ಧಾರ್ಮಿಕ ಲೇಪವನ್ನು ಪಡೆಯಿತೋ, ಆಗ ಜಾತಿಯ ಸಮಸ್ಯೆಗಳು ಉಲ್ಬಣಗೊಂಡವು, ಜಾತೀಯತೆಯ ಸಮಸ್ಯೆಗೆ ಧಾರ್ಮಿಕ ಲೇಪವು ಕಾರಣವಾದುದರ ಹಿನ್ನೆಲೆಯಲ್ಲಿ ತಮ್ಮ ತಾತ್ವಿಕತೆಯನ್ನು ನಿರೂಪಿಸುತ್ತಾರೆ.

ದಾಸ್ಯದ ಸಂಕೋಲೆಯನ್ನು ಇಡೀ ಜಗತ್ತಿನ ಹಿನ್ನೆಲೆಯಲ್ಲಿಯೇ ಗುರುತಿಸುತ್ತಾರೆ. ಅಮೆರಿಕಾ, ಐರ್ಲೆಂಡ್, ಚೈನಾ, ಅಫ್ಘಾನಿಸ್ಥಾನ, ತುರ್ಕಿ, ರಷ್ಯಾ ದೇಶಗಳು ದಾಸ್ಯದ ವಿರುದ್ಧವಾಗಿ ಹೋರಾಡಿದ್ದರಿಂದ ದಾಸ್ಯದಿಂದ ವಿಮೋಚನೆಗೊಂಡವು. ಅದೇ ಮಾದರಿಯಲ್ಲಿ ಭಾರತದಲ್ಲಿಯೂ ಸ್ವಾತಂತ್ರ್ಯದ ಆಂದೋಲನ ನಡೆಯುತ್ತಿರುವುದಾಗಿ ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಜಗತ್ತಿನ ಹಿನ್ನೆಲೆಯಲ್ಲಿ ನೋಡುವ ಕ್ರಮದಲ್ಲಿ ಭಾರತೀಯರು ಎಚ್ಚೆತ್ತುಕೊಂಡಿದ್ದರ ಬಗೆಯನ್ನು ಗ್ರಹಿಸುತ್ತಾರೆ.

ತಾರುಣ್ಯದಲ್ಲಿ ಮೂಡಿ ಬಂದ ಧಾರ್ಮಿಕ ಮೌಢ್ಯದ ವಿರುದ್ಧದ ಮನಃಸ್ಥಿತಿ, ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅತ್ಯಾಚಾರ, ಅನಾಚಾರ, ದುರಾಚರಗಳನ್ನು ಕಂಡು ಬೇಸತ್ತು ಪ್ರತಿಭಟಿಸುವ ತರುಣರ ಮನಃಸ್ಥಿತಿ, ಇವೆಲ್ಲವೂ ಹೊಸ ದಿಕ್ಕಿಗೆ ಸಮಾಜವನ್ನು, ದೇಶವನ್ನು ಕೊಂಡೊಯ್ಯುವ ನಿಟ್ಟಿನಲ್ಲಿ ಸಹಕಾರಿಯಾದವು. ಯುವ ಸಮೂಹದ ಹೊಸ ಆಲೋಚನಾ ಕ್ರಮಗಳು ರಾಷ್ಟ್ರಕ್ಕಾಗಿ ಸೇವಾದೀಕ್ಷೆ ಕೈಗೊಂಡು, ನಿಷ್ಪಕ್ಷಪಾತ ದೃಷ್ಟಿಕೋನ, ವಿಶಾಲ ಹೃದಯಿಗಳಾದ ತರುಣರು ನಿರಂಕುಶರು ಎಂದು ಭಾವಿಸುತ್ತಾರೆ. ಕುವೆಂಪುರವರು 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂಬ ಗದ್ಯ ಲೇಖನದಲ್ಲಿ ತರುಣರಿಗೆ ಹೇಳಿದ ಸಂದೇಶದ ರೀತಿಯಲ್ಲಿಯೇ ಯುವಕರನ್ನು ಕೇಂದ್ರೀಕರಿಸಿಯೇ ಯುವಕರ ದೃಷ್ಟಿಕೋನ ಹೇಗೆ ಇರಬೇಕು, ದೇಶದ ಸಮಸ್ಯೆಗಳ ಪರಿಹಾರಕ್ಕೆ ಸಂಬಂಧಿಸಿದಂತೆ ಯುವಕರು ಹೇಗೆ ಕಟಿಬದ್ಧರಾಗಿರಬೇಕು ಎಂಬುದಾಗಿ ವಿವೇಚಿಸುತ್ತಾರೆ. ಆ ಮೂಲಕ ದೇಶದ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಲ್ಲಿ ಯುವಕರ ಪಾತ್ರವನ್ನು ಚರ್ಚಿಸುತ್ತಾರೆ.

'ಜಾಗೃತ ಏಶಿಯಾ ಖಂಡ' ಎಂಬ ಲೇಖನದಲ್ಲಿ ಇಡೀ ಏಷ್ಯಾ ಖಂಡವನ್ನು ಕುರಿತಂತೆ ಅಮೇರಿಕಾ, ಆಸ್ಟ್ರೇಲಿಯಾ, ಕೆನಡಾ ಮೊದಲಾದ ದೇಶಗಳು ಜಿನೀವಾದಲ್ಲಿ ನಡೆದ 'ಜನಾಂಗಗಳ

ಸಭೆ' ಯಲ್ಲಿ ಭಾಗವಹಿಸಿದ್ದವು. ಈ ಸಭೆಯು ತೋರಿಕೆಗಾಗಿ ಜನಾಂಗಗಳ ಸಭೆಯಾಗಿದ್ದು ಇದರಲ್ಲಿ ಮುಂದುವರೆದ ದೇಶಗಳು ಸಣ್ಣ ಪುಟ್ಟ ರಾಜ್ಯಗಳನ್ನು ಅಥವಾ ದೇಶಗಳನ್ನು ನುಂಗುವ ಪ್ರಯತ್ನದಿಂದ ಮಾಡಿದ ಸಭೆಯಾಗಿ ಗುರುತಿಸುತ್ತಾರೆ. ಏಷ್ಯಾ ಖಂಡದಲ್ಲಿರುವ ಜಪಾನ್, ಕೊರಿಯಾ, ಅಫ್ಘಾನಿಸ್ಥಾನ, ತುರ್ಕಿಸ್ಥಾನ, ಭಾರತ, ಸಿಲೋನ್ ಮೊದಲಾದ ದೇಶಗಳು ಜ್ಞಾನ ಜಾಗೃತಿಯನ್ನುಂಟುಮಾಡಿ ದೇಶದ ಅಭಿವೃದ್ಧಿಗೆ ಪೂರಕವಾಗಿ ಆ ಜ್ಞಾನವನ್ನು ಬಳಸಿಕೊಳ್ಳಬೇಕು. ಇದರ ನೇತೃತ್ವವನ್ನು ಎಲ್ಲಾ ದೇಶದ ಯುವ ಸಮೂಹ ತಮ್ಮ ತಮ್ಮ ದೇಶಗಳ ಅಭಿವೃದ್ಧಿಗೆ ಶ್ರಮಿಸುವ ಮೂಲಕ ಏಷ್ಯಾ ಖಂಡವನ್ನು ಮೇಲಕ್ಕೆ ಎತ್ತುವಲ್ಲಿ ಯುವ ಸಮೂಹ ಪಾಲ್ಗೊಳ್ಳಬೇಕಾದ ಅವಶ್ಯಕತೆಯನ್ನು ಪ್ರತಿಪಾದಿಸುತ್ತಾರೆ.

'ಕೋ-ಮಿನ್-ಟಂಗ್' ಎಂಬ ಲೇಖನದಲ್ಲಿ ೧೯೧೧ರಲ್ಲಿ ಚೀನಾ ದೇಶದಲ್ಲಿ ರಾಜ್ಯ ಪರಿವರ್ತನೆಯಗಿ ಮಾಂಚೂ ಚಕ್ರಾಧಿಪತ್ಯವು ತನ್ನ ಅಸ್ತಿತ್ವವನ್ನು ಕಳೆದುಕೊಂಡಿದ್ದು ಡಾ। ಸನ್‌ಯಾತ್ ಸೇನ್‌ನ ನೇತೃತ್ವದಲ್ಲಿ ಪ್ರಾಂತಿಕ ಪ್ರಜಾಸತ್ತಾತ್ಮಕ ಸರಕಾರವೊಂದು ಆಳ್ವಿಕೆ ನಡೆಸಿ ಹೊಸ ಸರಕಾರವು ಪ್ರಗತಿಪರವಾಗಿ, ಹೊಸ ಹೊಸ ಸುಧಾರಣೆಗಳಾಗಿ ಚೀನಾ ದೇಶದ ಅಭಿವೃದ್ಧಿಗೆ ಹೊಸ ನಾಂದಿಯನ್ನು ಹಾಡಿತು. ೧೯೨೧-೨೫ರಲ್ಲಿ ಕ್ಯಾಂಟನ್ನಿನ ಪ್ರಗತಿಯು ಅವಿಚ್ಛಿನ್ನವಾಗಿ ಸರ್ಕಾರವು ತಮ್ಮ ದೇಶದಲ್ಲಿ ವಿದೇಶಗಳಲ್ಲಿಯೂ ಕೂಡಾ ಕೋ-ಮಿನ್-ಟಂಗ್ ಸಂಸ್ಥೆಗೆ ನೂತನ ಚೈನಾದ ಆಸೆ ಆಶಯಗಳನ್ನು ಕೇಂದ್ರೀಕರಣವೆಂದು ಚಿತ್ರಿಸಲಾರಂಭಿಸಿತು. ೧೯೨೫ರಲ್ಲಿ ಸನ್‌ಯಾತ್ ಸೇನ್‌ನು ಪೀಕಿಂಗ್ ನಗರದಲ್ಲಿ ಕೋ-ಮಿನ್-ಟಂಗ್‌ನ ರಾಷ್ಟ್ರಿಯ ತತ್ವಗಳನ್ನು ಜನಮನದಲ್ಲಿ ಬಿತ್ತುವುದಕ್ಕೆ ಕಾರಣವಾದುದು, ೧೯೨೬ರಲ್ಲಿ ಚೀನಾದ ಕೇಂದ್ರ ವಿಭಾಗವು ಚಂಗ್-ಕೈ-ಷೇಕ್‌ನ ನಾಯಕತ್ವದಲ್ಲಿ ಪ್ರಗತಿಪರ ಚಟುವಟಿಕೆಗಳು ನಡೆದದ್ದು, ಹಿರಿಯರು ಕಿರಿಯರೆನ್ನದೆ ಜನರೊಂದಿಗೆ ಬೆರೆತು ಅವರನ್ನು ದಾರಿದ್ರ್ಯ ಅಂಧಕಾರದಿಂದ ಮೇಲಕ್ಕೆತ್ತಿದ್ದು ಮತ್ತು ಕಮ್ಯೂನಿಸ್ಟರು ಕೋ-ಮಿನ್-ಟಂಗ್‌ನ ಪಕ್ಷವನ್ನು ಸೇರಿದರು. ೧೯೨೪ರಲ್ಲಿ ಕೋ-ಮಿನ್-ಟಂಗ್ ಸಂಸ್ಥೆ ಹೊರಡಿಸಿದ ಪ್ರಕಟಣೆಯು ಚೀನಾದ ಆರ್ಥಿಕತೆಯು ಬೇಸಾಯದ ಮೇಲೆ ನಿಂತಿದೆ. ಚೀನಾದ ಬೇಸಾಯಗಾರರು ಭಾರತದ ಕೃಷಿಕರ ರೀತಿಯಲ್ಲಿಯೇ ಜಮೀನ್ದಾರರ ವಿರುದ್ಧ ಹೋರಾಡುವ ಮನಃಸ್ಥಿತಿಯಲ್ಲಿದ್ದಾಗ ಅಧಿಕಾರಕ್ಕೆ ಬಂದ ಕೋ-ಮಿನ್-ಟಂಗ್‌ನು ಸಂಸ್ಥೆಯಲ್ಲಿ ಸಾಗುವಳಿಯ ಜಮೀನನ್ನು ಎಲ್ಲರಿಗೂ ಸಮಾನವಾಗಿ ಹಂಚಿದರು. ಸಾಗುವಳಿದಾರರಿಗೋಸ್ಕರವೇ ರೈತರ ಬ್ಯಾಂಕ್ ತೆರೆದರು. ರೈತರು ಮತ್ತು ಕೂಲಿಕಾರರ ಹಿತಕ್ಕಾಗಿ ಶ್ರಮಿಸಿ ರೈತರ ಚಳುವಳಿಯನ್ನು ಶಿಸ್ತುಗೊಳಿಸಿ, ಚಕ್ರಬಡ್ಡಿ ತೆಗೆದುಕೊಳ್ಳುವುದನ್ನು ಕ್ರಿಮಿನಲ್ ಅಪರಾಧವಾಗಿ ಮಾಡಿ, ಅನ್ಯಾಯದ ಸುಲಿಗೆಗಳನ್ನು, ತೆರಿಗೆಗಳನ್ನು ತೆಗೆದು ಹಾಕಿದನು. ಆ ಮೂಲಕ ರೈತರ, ಕೂಲಿ ಕಾರ್ಮಿಕರ ಪರ ಕಾಳಜಿ ಹೊಂದಿದ್ದ ಕೋ-ಮಿನ್-ಟಂಗ್ ಸಂಸ್ಥೆಯ ವಿಚಾರಧಾರೆಗಳನ್ನು ವಿಶ್ಲೇಷಿಸುತ್ತಾರೆ.

ಆ ಮೂಲಕ ಭಾರತದಲ್ಲಿರುವ ರೈತರು ಕೂಡಾ ಜಮೀನ್ದಾರರ ವಿರುದ್ಧ ಹೋರಾಡುವ ಗುಣ ಬೆಳೆಸಿಕೊಳ್ಳಲಿ ಎಂಬ ಧೋರಣೆಯಿದೆ. ರೈತರೇ ರೈತರ ಬ್ಯಾಂಕನ್ನು ಸ್ಥಾಪಿಸಿಕೊಂಡು ರೈತರು ಬಂಡವಾಳದಾರರ ಮುಂದೆ ಸಾಲಗಾರರಾಗಿ ನಿಲ್ಲದೆ ಸ್ವಂತ ಆರ್ಥಿಕ ಸ್ಥಿತಿಯನ್ನು ಕಂಡುಕೊಳ್ಳಲು ಮಾರ್ಗೋಪಾಯಗಳನ್ನು ಈ ಲೇಖನದ ಹಿನ್ನೆಲೆಯಲ್ಲಿ ವ್ಯಕ್ತಪಡಿಸುತ್ತಾರೆ. ರೈತರ ಸಮಸ್ಯೆಗಳಿಗೆ ಕೋ-ಮಿನ್-ಟಂಗ್ ತಾತ್ವಿಕ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸುತ್ತಾರೆ.

ಕೋ-ಮಿನ್-ಟಂಗ್ ಸಂಸ್ಥೆಯ ವಿಚಾರಧಾರೆಗಳನ್ನು ಸಂಕ್ಷಿಪ್ತವಾಗಿ ದಾಖಲಿಸಿ ಆ ರೀತಿಯ ವಿಚಾರಗಳು ಭಾರತದ ರೈತರಲ್ಲಿ, ಕಾರ್ಮಿಕರಲ್ಲಿ ಮೂಡಿ ಅವರ ಬದುಕು ಉತ್ತಮಗೊಳ್ಳಲಿ ಎಂಬ ದೃಷ್ಟಿಕೋನವಿದೆ. ನೇರವಾಗಿ ಕಮ್ಯೂನಿಸ್ಟ್ ತತ್ವವನ್ನು ಅ. ನ. ಕೃ. ರವರು ಒಪ್ಪದೇ ಇದ್ದರೂ ಆ ರೀತಿಯ ದೃಷ್ಟಿಕೋನಗಳು ಹೇಗೆ ರೈತರ ಮತ್ತು ಕೂಲಿಕಾರರ ಬದುಕು ಉತ್ತಮಗೊಳ್ಳಲು ಸಹಕಾರಿಯಾಗುತ್ತವೆ ಎಂಬುದನ್ನು ಸೂಚಿಸುತ್ತಾರೆ.

'ಚೀನೀ ಭಾಷೆ' ಎಂಬ ಲೇಖನದಲ್ಲಿ ಚೀನೀ ಭಾಷೆಯನ್ನು ಹೋಲುವ ಮತ್ತು ಸಾಟಿಯಾಗುವ ಭಾಷೆಯು ಜಗತ್ತಿನಲ್ಲಿ ಬೇರೊಂದಿಲ್ಲ ಎಂಬುದಾಗಿ ಇದರಲ್ಲಿ ೩೩೦ ಮಾತುಗಳ ಮೇಲಿಲ್ಲ. ಹತ್ತು ವರ್ಷಗಳ ಚೀನೀ ಭಾಷೆಯ ವ್ಯಾಸಂಗ ಮಾಡಿ ಚೀನೀ ಭಾಷೆಯಲ್ಲಿಯೇ ಬೋಧನೆಯನ್ನು ನೀಡಲು ಹೋದ ಕ್ರೈಸ್ತ ಪಾದ್ರಿಯಾದ ಪಿ. ಖೊನರ್ ಷಾಯಿಸಿ ಎಂಬವನ ಅನುಭವವನ್ನು ದಾಖಲಿಸುತ್ತಾರೆ. ಚೀನೀ ಭಾಷೆ "ಒಂದೇ ಪದವು ಗುಣವಾಚಕ, ಕ್ರಿಯಾಪದ, ಏಕವಚನ, ಬಹುವಚನ, ಪುಲ್ಲಿಂಗ, ಸ್ತ್ರೀಲಿಂಗ ಎಲ್ಲಕ್ಕೂ ಪ್ರಯೋಗಿಸಲ್ಪಡುತ್ತದೆ"[೩] ಎಂದು ಅಭಿಪ್ರಾಯಿಸುತ್ತಾರೆ. ಚೀನೀ ಭಾಷೆಯಲ್ಲಿರುವ ೩೩೦ ಪದಗಳು ೮೦೦ ಕ್ಕಿಂತಲೂ ಹೆಚ್ಚು ವಿಷಯಗಳನ್ನು ತಿಳಿಸುತ್ತಿರುವುದರ ಜೊತೆಗೆ ಸಂಭಾಷಣೆಯ ಭಾಷೆಗೂ ಗ್ರಂಥ ರಚನೆಯ ಭಾಷೆಗೂ ಸಂಬಂಧವಿರುವುದಿಲ್ಲ. ಪ್ರತಿಯೊಂದು ಪದಕ್ಕೆ ಬೇರೆ ಬೇರೆ ಉಚ್ಚಾರಣೆ ಇದೆ, ಸಾಮಾನ್ಯವಾಗಿ ಎಲ್ಲಾ ಪದಗಳಿಗೂ ಮೂಗಿನ ಉಚ್ಚರಣೆ ಇರುವುದನ್ನು ವಿಶ್ಲೇಷಿಸುತ್ತಾರೆ.

ಚೀನೀ ಭಾಷೆಯ ವೈಶಿಷ್ಟ್ಯವನ್ನು ನೋಡಿದಾಗ ಕನ್ನಡ ಭಾಷೆಯ ವೈಶಿಷ್ಟ್ಯಗಳಲ್ಲಿ ಗುಣವಾಚಕ, ಕ್ರಿಯಾಪದ, ಏಕವಚನ, ಬಹುವಚನ, ಸಂಖ್ಯಾವಾಚಕ, ಪುಲ್ಲಿಂಗ ಮೊದಲಾದವುಗಳಿಗೆಲ್ಲ ಸ್ಪಷ್ಟವಾಗಿರುವುದನ್ನು ಕಾಣಬಹುದು. ಚೀನೀ ಭಾಷೆಯು ಮೂಗಿನ ಉಚ್ಚಾರಣೆಗೊಂಡರೆ ಕನ್ನಡ ಭಾಷೆಯು ಧ್ವನ್ಯಾಂಗಗಳ ಮೂಲಕ ಉಚ್ಚರಣೆಗೊಳ್ಳುವುದು. ಕನ್ನಡ ಮಾತ್ರವಲ್ಲದೆ ಭಾರತೀಯ ಭಾಷೆಗಳು ವಿಶಿಷ್ಟವೂ, ವೈವಿಧ್ಯತೆಗಳಿಂದ ಕೂಡಿದವುಗಳು ಆಗಿವೆ. ಚೀನೀ ಭಾಷೆಯನ್ನು ವಿಮರ್ಶಿಸುವ ಮೂಲಕ ಅ. ನ. ಕೃ. ಕನ್ನಡ ಭಾಷೆಯ ವೈಶಿಷ್ಟ್ಯವನ್ನು ಪರೋಕ್ಷವಾಗಿ ತಿಳಿಸುವುದನ್ನು ನೋಡಿದರೆ ಅ. ನ. ಕೃ. ರವರಿಗೆ ಕನ್ನಡ ಭಾಷೆಯ ಮೇಲೆ ಇದ್ದ ಅಭಿಮಾನವನ್ನು ತಿಳಿಸುವುದು.

'ಹಿಂದೂಸ್ಥಾನದ ಸುಲಿಗೆ' ಎಂಬ ಲೇಖನದಲ್ಲಿ ಬ್ರಿಟಿಷರು ಭಾರತವನ್ನು ಆಡಳಿತ ನಡೆಸುವ ಸಂದರ್ಭದಲ್ಲಿ ಭಾರತವನ್ನು ಹೇಗೆ ಸುಲಿಗೆ ಮಾಡಿದರು ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಹೊಗೆ ಬಂಡಿಗಳ ನಿರ್ಮಾಣ, ಹತ್ತಿಯ ಸಾಗುವಳಿ, ಬ್ರಿಟಿಷ್ ಬಂಡವಾಳಗಾರರಿಗೆ ರಿಯಾಯಿತಿ, ಬ್ರಿಟಿಷರು ಹಿಂದುಸ್ಥಾನದ ಉದ್ಯೋಗಗಳು, ಹಿಂದೂಸ್ಥಾನಕ್ಕೆ ಸ್ವರಾಜ್ಯದ ಅಪಲಾಪ ಎಂಬ ಐದು ಅಂಶಗಳಲ್ಲಿ ಚರ್ಚಿಸುತ್ತಾರೆ. ಆ ಮೂಲಕ ಬ್ರಿಟಿಷರ ಆಡಳಿತ ಹಿನ್ನೆಲೆಯಲ್ಲಿ ಸುಲಿಗೆಯ ತಂತ್ರವನ್ನು ೧೯೩೫ರಲ್ಲಿಯೇ ಬ್ರಿಟಿಷ್ ಆಡಳಿತ ವಿರೋಧಿ ಲೇಖನವನ್ನು ಪ್ರಕಟಿಸಿ ಜನತೆಗೆ ಬ್ರಿಟಿಷರು ದೇಶವನ್ನು ಹೇಗೆ ಸುಲಿಗೆ ಮಾಡುತ್ತಿದ್ದಾರೆ ಎಂಬ ವಾಸ್ತವ ಚಿತ್ರಣವನ್ನು ಓದುಗರಿಗೆ ನೀಡುತ್ತಾರೆ. ಸಮಕಾಲೀನ ಸಾಹಿತಿಯದವನಿಗೆ ಇರಬೇಕಾದ ಸಾಮಾಜಿಕ ಜವಾಬ್ದಾರಿ ಮತ್ತು ಬ್ರಿಟಿಷರ ಸುಲಿಗೆಯ ತಂತ್ರಗಳನ್ನು ವಿಶ್ಲೇಷಿಸುತ್ತಾರೆ.

'ಗಾಂಧೀಜಿ' ಎಂಬ ಲೇಖನದಲ್ಲಿ ಗಾಂಧಿಯ ವ್ಯಕ್ತಿತ್ವವನ್ನು ವಿಮರ್ಶಿಸುತ್ತಾರೆ. ಗಾಂಧಿಯವರ ಬಾಲ್ಯ, ತಾರುಣ್ಯ, ಬದುಕು, ದಕ್ಷಿಣಾ ಆಫ್ರಿಕಾಗೆ ವಕೀಲರಾಗಿ ಹೋದಾಗ ಅಲ್ಲಿನ ಭಾರತೀಯರ ಸ್ಥಿತಿಗತಿ, ಅಲ್ಲಿನ ಕ್ಷೋಭೆ, ದಾರಿದ್ರ್ಯ, ಮಾನಹಾನಿಯಿಂದಾಗಿ ನೋವುಗಳಿಂದ ಮಾನವೀಯ ಗುಣಗಳನ್ನು ಕಳೆದುಕೊಳ್ಳುತ್ತಿದ್ದದ್ದು, ಜನರಿಗೆ, ದೀನರಿಗೆ, ನೋವಿನಿಂದ ನೊಂದವರಿಗೆ, ಹಿತವನ್ನುಂಟುಮಾಡಿ ಅವರ ಆತ್ಮಗಳಿಗೆ ಶಾಂತಿಯನ್ನುಂಟು ಮಾಡಿದವರಾಗಿ ಗಾಂಧೀಜಿಯವರು ಹೊಸ ವಿಚಾರಗಳೇನೂ ಹೇಳುತ್ತಿಲ್ಲ, ಅವರಿಗೆ ದೊರೆತ ಅನುಭವಗಳಿಂದ, ಜ್ಞಾನವನ್ನು ತಾವು ಪಡೆದ ಕಾರ್ಯರಂಗದಲ್ಲಿ ಪರೀಕ್ಷಿಸಿ ಜಯದ ಫಲಗಳನ್ನು ವಿಷಯಗಳನ್ನೇ ಹೇಳುತ್ತಿರುವುದು. ಅವರ ವಿಚಾರಗಳು, ತತ್ವಗಳು, ಸಂಶಯಗ್ರಸ್ಥ ಜ್ಞಾನಿಗಳಿಗೆ ಮಾರ್ಗದರ್ಶಿಗಳಾಗಿಯೂ, ಸಾಮಾನ್ಯ ಜನರಿಗೆ ಕರ್ಮಗೀತೆಗಳು ಆಗಬಹುದು ಎಂದು ವಿಶ್ಲೇಷಿಸುತ್ತಾರೆ. ಗಾಂಧೀಜಿಯವರ ವ್ಯಕ್ತಿತ್ವವು ಅ. ನ. ಕೃ. ರವರ ಮೇಲೆ ಪ್ರಭಾವ ಬೀರಿರುವುದನ್ನು ಇಲ್ಲಿ ತಿಳಿಯಬಹುದು.

'ಚಿತ್ತರಂಜನ್ ದಾಸ್' ಎಂಬ ಲೇಖನವು ವ್ಯಕ್ತಿ ಚಿತ್ರಣವಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಇಂದಿನ ಪರಿಸ್ಥಿತಿಯಲ್ಲಿ ದೇಶಕ್ಕೆ ಸೇವೆ ಸಲ್ಲಿಸುವವರ ಅವಶ್ಯಕತೆಯಿದೆ ಎಂದು ಪರಿಭಾವಿಸಿ ದೇಶಕ್ಕೋಸ್ಕರ ಹೋರಾಡಿದ ಬಂಗಾಳದ ಚಿತ್ತರಂಜನ್ ದಾಸ್‌ರವರನ್ನು ಕುರಿತು ಬರೆದ ಸಂಕ್ಷಿಪ್ತ ಲೇಖನವಾಗಿದೆ. ಇಂಗ್ಲೇಂಡಿನಲ್ಲಿ ಸಿವಿಲ್ ಸರ್ವಿಸ್ ಪರೀಕ್ಷೆಗೆ ಹೋದಾಗ ದಾಸ್‌ರವರು ದಾದಾಬಾಯಿ ನವರೋಜಿಯವರು ಪಾರ್ಲಿಮೆಂಟಿನ ಸದಸ್ಯರಾಗಲು ಸಹಕರಿಸಿದ್ದು, ೧೮೬೧ರಲ್ಲಿ ಜೇಮ್ಸ್ ಮ್ಯಾಕ್ಲೀನ್ ಎಂಬ ಪಾರ್ಲಿಮೆಂಟ್ ಸದಸ್ಯ ಸಭಾ ಸದನದಲ್ಲಿ ಭಾರತದ ಹಿಂದೂ-ಮುಸ್ಲಿಂರನ್ನು ಗುಲಾಮರೆಂದು ಟೀಕಿಸಿದಾಗ ಲಂಡನ್ನಿನ ಎಲ್ಲಾ ವಿದ್ಯಾರ್ಥಿಗಳ ದೊಡ್ಡದೊಂದು ಸಭೆಯನ್ನು ಸೇರಿಸಿ ಸರಳವಾದ ವಾಕ್ಚಾತುರ್ಯದಿಂದಲೇ ವಿದೇಶಿಯರು ಬೆರಗಾಗುವ ರೀತಿಯಲ್ಲಿ ಭಾಷಣ ಮಾಡಿದರು. ಬಂಗಾಳ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದವರಾಗಿ, ಸ್ತ್ರೀಪರ ಕಾಳಜಿಯನ್ನು ಹೊಂದಿದ್ದ ಚಿತ್ತರಂಜನ್ ದಾಸರು ಲಾರ್ಡ್ ಲಿಟ್ಟನ್‌ರವರು ಭಾರತದ ಸ್ತ್ರೀ ಜನಾಂಗವನ್ನು ದೂಷಿಸಿದಾಗ ಅದಕ್ಕೆ ತಕ್ಕುದಾದ ತೀಕ್ಷ್ಣವಾದ ಪ್ರತಿಕ್ರಿಯೆ ನೀಡಿದವರು ಎಂಬುದಾಗಿ ಪರಿಚಯಿಸುತ್ತಾರೆ. ಆ ಮೂಲಕ ಯುವ ಪೀಳಿಗೆಯು ಈ ರೀತಿಯ ದೃಷ್ಟಿಕೋನವನ್ನು ಬೆಳೆಸಿಕೊಂಡು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಪ್ರೇರಣೆ ನೀಡುವ ಸಲುವಾಗಿ ಬರೆದ ಲೇಖನವಾಗಿದೆ. ಅ. ನ. ಕೃ. ರವರು ವ್ಯಕ್ತಿ ಚಿತ್ರಣಗಳನ್ನು ಕೊಡುವಾಗ ಉತ್ಪ್ರೇಕ್ಷಿಸಿ ಹೇಳುವುದು ಅವರ ಒಂದು ಶಕ್ತಿಯೂ ಹೌದು ಮತ್ತು ಮಿತಿಯೂ ಆಗಿದೆ.

'ವಿದ್ಯೆಯ ಕೀಲಕ' ಎಂಬ ಲೇಖನದಲ್ಲಿ ಭಾರತದಲ್ಲಿ ವಿದ್ಯಾ ಸಂಸ್ಥೆಗಳು ಗುರುಕುಲ ಪದ್ಧತಿಯಲ್ಲಿದ್ದು ಯಾವಾಗ ಗುರುಕುಲ ಪದ್ಧತಿ ನಾಶವಾಗುತ್ತಾ ಬಂದಿತ್ತೋ ಆಗ ದೇಶದ ಪ್ರಗತಿ ಕುಂಠಿತವಾಯಿತು ಅಂದು ಅ. ನ. ಕೃ. ಗ್ರಹಿಸುತಾರೆ. ಆದರೆ ಗುರುಕುಲ ಪದ್ಧತಿಯಲ್ಲಿ ಎಲ್ಲಾ ಸಮುದಾಯದವರಿಗೂ ವಿದ್ಯೆ ದೊರಕುವ ವ್ಯವಸ್ಥೆ ಇತ್ತೇ ಎಂಬುದನ್ನು ಚರ್ಚಿಸುವುದಿಲ್ಲ. ಅವರ ದೃಷ್ಟಿ ಗಾಂಧಿ, ರವೀಂದ್ರನಾಥ ಟಾಗೋರರು, ವಾಸ್ವಾನಿ, ದಿವಂಗತ ಶ್ರದ್ಧಾನಂದರವರ ಆಶ್ರಮಗಳು, ಆದರ್ಶ ಪ್ರೇರಿತ ಆಶಯಗಳನ್ನು ಒಳಗೊಂಡಿವೆ. ಇಂತಹ ಸಂಸ್ಥೆಗಳು ಹೆಚ್ಚಾಗಬೇಕು ಎಂದು ತಿಳಿಸುವ ಅ. ನ. ಕೃ. ರವರು ಆಧ್ಯಾತ್ಮಿಕತೆಯ ಹಿನ್ನೆಲೆಯಲ್ಲಿ ವ್ಯಕ್ತಿತ್ವ ನಿರ್ಮಾಣ ಮಾಡುವ ಆತ್ಮಜ್ಞಾನವೇ ನೈಜವಾದ ವಿದ್ಯೆ ಎಂಬುದಾಗಿ ಗ್ರಹಿಸುತ್ತಾರೆ. ಆಧುನಿಕ ವಿದ್ಯಾ ಪದ್ಧತಿಯನ್ನು ಕುರಿತಂತೆ ತರುಣರು ಕಲಿಯುವುದು ವಿದ್ಯೆಯನ್ನಲ್ಲ, ಆತ್ಮವಿನಾಶ ಕ್ರಮವನ್ನು ಎಂಬುದಾಗಿ ವಿಶ್ಲೇಷಿಸುತ್ತಾರೆ.

ಇಂದಿನ ಶಿಕ್ಷಣ ಅಥವಾ ವಿದ್ಯೆ ಪಡೆದವನಲ್ಲಿ ಅತಿಯಾದ ಸ್ವಾರ್ಥ, ಮೋಸ, ಜಾತೀಯತೆ, ಅಹಂಭಾವ ಮೊದಲಾದವು ಆತ್ಮವಿನಾಶವನ್ನೇ ನೀಡುವುದು ಹೊರತು ಆತ್ಮಜ್ಞಾನವನ್ನಲ್ಲ ಎಂಬ ಅವರ ತಾತ್ವಿಕ ಧೋರಣೆಯಲ್ಲಿ ವಾಸ್ತವಾಂಶವು ಅಡಗಿದೆ ಎನ್ನಬಹುದು.

'ಸಂಸಾರದಲ್ಲಿ ಸುಖವಿಲ್ಲ' ಮತ್ತು 'ಪುರುಷ ಧರ್ಮ' ಎಂಬೆರಡು ಪ್ರಬಂಧಗಳಲ್ಲಿ ಗಂಡ–ಹೆಂಡತಿಯ ಸಂಬಂಧವನ್ನು ಕುರಿತಂತೆ ತಿಳಿಸುವುದಾಗಿದೆ. "ಪ್ರತಿಯೊಂದು ವಿಚಾರವನ್ನು ಎಡೆಬಿಡದೆ ಚರ್ಚಿಸುವ, ತರ್ಕಿಸುವ, ವಿವೇಚಿಸುವ ಹಂಬಲ ನಮ್ಮಲ್ಲಿ ಹುಟ್ಟಬೇಕು. ಸಿದ್ಧಾಂತಗಳನ್ನು ಒಪ್ಪಿಕೊಳ್ಳುವುದು ಇಲ್ಲವೇ ಸಾಕಷ್ಟು ವಿವೇಚಿಸದೇ ಅವುಗಳನ್ನು ವಿಸರ್ಜಿಸುವುದು ಮಾನವನ ಪ್ರವೃತ್ತಿಗಳಿಗೆ ಶ್ರೇಯಸ್ಸನ್ನು ತರುವ ವಿಚಾರವಲ್ಲ! ಧ್ಯಾನ, ಜ್ಞಾನ, ಪ್ರೇಮಗಳ ತಿರುಳು ತಿಳಿದ ಹೊರತು ನಮ್ಮ ಸಂಸಾರಗಳು ಉತ್ತಮಗೊಂಡು ಸುಖ ರೂಪಿಯಾಗುವುದಿಲ್ಲ"[೬] ಎಂಬ ಅ. ನ. ಕೃ. ರವರ ಮಾತಿನಲ್ಲಿ ಗಂಡ ಹೆಂಡತಿಯರ ನಡುವೆ ವಿಚಾರಗಳು ಹೇಗೆ ಇರಬೇಕೆಂಬುದನ್ನು ತಿಳಿಸುತ್ತದೆ.

ಪುರುಷ ಧರ್ಮದಲ್ಲಿ ಪ್ರಾಚೀನ ಭಾರತದಲ್ಲಿ ಸ್ತ್ರೀಯು ಎಲ್ಲಾ ವಿಷಯಗಳಲ್ಲಿಯೂ ಸರಿಸಮನಾಗಿದ್ದಳು ಎಂಬುದಾಗಿ ಮೈತ್ರೇಯಿ ಗಾರ್ಗಿ ಮೊದಲಾದವರು ಇದ್ದರೆಂದು, ಆದರೆ ಸ್ತ್ರೀಯರು ಕಲಾರಂಗಗಳಲ್ಲಿ ಭಾಗವಹಿಸಿದ ಉಲ್ಲೇಖವಿಲ್ಲದೇ ಇರುವುದು ಕೂಡಾ ಅಂದಿನ ಕಾಲಘಟ್ಟದಲ್ಲಿ ಸ್ತ್ರೀಯರನ್ನು ಶೋಷಣೆಗೆ ಒಳಪಡಿಸಲಾಗಿತ್ತು ಎಂಬುದನ್ನು ಕಲೆಯ ಹಿನ್ನೆಲೆಯಲ್ಲಿ ಗುರುತಿಸುತ್ತಾರೆ. ಜೊತೆಗೆ ಸಾಮಾನ್ಯನಲ್ಲಿ ಸ್ತ್ರೀಯು ಮಕ್ಕಳನ್ನು ಹೆರುವ ಯಂತ್ರದಂತೆಯೂ, ಸ್ತ್ರೀಯನ್ನು ಎಲ್ಲಾ ರೀತಿಯಲ್ಲಿಯೂ ನಿಯಂತ್ರಿಸುವ ಪುರುಷನ ಅವನತಿಯ ಹಾದಿಯಾಗಿದೆ ಎಂದು ಹೇಳುವ ಅ. ನ. ಕೃ. ಸ್ತ್ರೀಯ ಬದುಕಿನಲ್ಲಿ ಪುರುಷ ಹೇಗೆಲ್ಲಾ ನಿಯಂತ್ರಿಸಿ ತನ್ನ ಪ್ರಗತಿಗೆ ತಾನೇ ಹೇಗೆ ಮಾರಕನಾಗಿದ್ದಾನೆ ಎಂಬುದನ್ನು ಸೂಕ್ಷ್ಮವಾಗಿ ತಿಳಿಸುತ್ತಾರೆ. ಪುರುಷ ಸ್ತ್ರೀಯನ್ನು ತನ್ನ ಐಹಿಕ ಸುಖಗಳ, ಸ್ವಾರ್ಥ ಭಾವನೆಗಳ, ಕಾಮಲಾಲಸೆಗಳ ತುತ್ತಾಗಿ ಎಣಿಸಿ ತಾನೂ ಕೂಡಾ ವಿನಾಶ ಹೊಂದುವುದಲ್ಲದೆ ಆಕೆಯಲ್ಲಿರುವ ಉದಾತ್ತ ಧೋರಣೆಗಳನ್ನು, ವ್ಯಕ್ತಿತ್ವಗಳನ್ನು ನಾಶಗೊಳಿಸುತ್ತಾನೆ ಎಂಬ ನಿಲುವಿನಲ್ಲಿ ಪುರುಷನ ನಾಶಕ್ಕೆ ಪುರುಷನೇ ಕಾರಣ ಹೊರತು ಸ್ತ್ರೀಯಲ್ಲ ಎಂಬ ತಾತ್ವಿಕತೆಯನ್ನು ನಮ್ಮ ಮುಂದೆ ಇಡುತ್ತಾರೆ.

ಶ್ರೀ ಕೃಷ್ಣದೇವರಾಯನ ಬಗ್ಗೆ ಸಂಕ್ಷಿಪ್ತವಾಗಿ, ಭಾರತೀಯ ಚಿತ್ರಕಲೆಯನ್ನು ಸಂಕ್ಷಿಪ್ತವಾಗಿ ತಿಳಿಸುವುದು ಮಾತ್ರವಲ್ಲದೆ ಈ ಚಿತ್ರಕಲೆಯನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಗ್ರಹಿಸುತ್ತಾರೆ. ಸೃಜನಶೀಲ ಕಲೆಗಳಂತೆ ಈ ಚಿತ್ರಕಲೆಯು ಕೂಡಾ ಅವಶ್ಯಕವಾದುದು ಮತ್ತು ವಿಶಿಷ್ಟವಾದುದಾಗಿ ಗುರುತಿಸುವುದು ಸಂಸ್ಕೃತಿಯ ತಿಳುವಳಿಕೆಯಲ್ಲಿ ಇವು ಹೆಚ್ಚು ಮಹತ್ವಪೂರ್ಣವಾದುದಾಗಿ ಅ. ನ. ಕೃ. ನೋಡುತ್ತಾರೆ.

ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ – ೧೯೩೨

ಈ ಗ್ರಂಥದ ರಚನೆಯ ಮುಖ್ಯ ಉದ್ದೇಶವನ್ನು ನೇರವಾಗಿ ಸಾರಿರುವ ಅ. ನ. ಕೃ. ಈ ಗ್ರಂಥ ಬರೆದಿರುವುದು ಆಚಾರವಂತರಿಗಲ್ಲ, ವಿಚಾರವಂತರಿಗೆ ಎನ್ನುವ ಮಾತಿನಲ್ಲಿ ಇದೊಂದು ಚಿತ್ರಕಲೆಯನ್ನು ಕುರಿತಂತೆ ಬರೆದ ವೈಚಾರಿಕ ಕೃತಿಯೆಂಬುದು ಮನದಟ್ಟಾಗುತ್ತದೆ. ೧೯೩೨ರಲ್ಲಿ ಈ ಕೃತಿಯನ್ನು ಪ್ರಕಟಿಸಿದರು. ಇದರಲ್ಲಿ ಒಟ್ಟು ೬ ಅಧ್ಯಾಯಗಳಿದ್ದು ರಾಜಾ ರವಿವರ್ಮನ ಚಿತ್ರಕಲೆಯ ತಾತ್ವಿಕ ಸ್ವರೂಪವನ್ನು ವಿಮರ್ಶಿಸುತ್ತಾರೆ.

ಸತ್ಯ ಮತ್ತು ಸೌಂದರ್ಯಗಳು ಬೆರೆತು ಕಲೆಯು ರೂಪುಗೊಳ್ಳುವುದು. ನಿಸರ್ಗವು ಮಾನವನ ಜೀವನದಿಂದ ದೂರವಾದಂತೆ ಕಂಡರೂ ನಿಸರ್ಗವು ಜೀವನದಲ್ಲಿ ಕಲೆಯ ರೂಪದಲ್ಲಿ ಬೆರೆತಿರುತ್ತದೆ. ಕಲೆಯೆಂಬುದು ಮಾನವನನ್ನು ಪರಿಪೂರ್ಣತೆಯೆಡೆಗೆ ಕೊಂಡೊಯ್ಯುತ್ತದೆ ಎಂದು ಕಲೆಯ ತಾತ್ವಿಕತೆಯನ್ನು ಅ. ನ. ಕೃ. ನಿರೂಪಿಸುತ್ತಾರೆ. ರವಿವರ್ಮನ ಬಗ್ಗೆ ಯಾವುದೇ ಮತ್ಸರವಿಲ್ಲದೇ ಇದ್ದರೂ, ಅವನ ಕೃತಿಗಳ ಬಗ್ಗೆ ಉತ್ತಮವಾಗಿದೆಯೆಂದು ಆದರೆ ಅಭಿಮಾನಪಡಲಾಗದು ಎಂದು ಆತನ ಕಲೆಯನ್ನು ಮತ್ತು ಚಿತ್ರಕಲೆಯನ್ನು ವಿಮರ್ಶಿಸುವುದು ಈ ಕೃತಿಯ ಆರಂಭದ ಉದ್ದೇಶದಲ್ಲಿ ದಾಖಲಿಸಿದ್ದಾರೆ.

ರವಿವರ್ಮನು ೧೮೪೮ರಲ್ಲಿ ತಿರುವಾಂಕೂರು ಸಂಸ್ಥಾನದ ಕಿರಿಮಾನೂರು ಎಂಬಲ್ಲಿ ಜನಿಸಿದ್ದ. ಸಂಸ್ಕೃತ, ಇಂಗ್ಲೀಷ್ ಪಾಂಡಿತ್ಯ ಗಳಿಸಿದರೂ ಬಾಲ್ಯದಿಂದಲೇ ಸೋದರಮಾವನ ಪ್ರೋತ್ಸಾಹ, ತಿರುವಾಂಕೂರು ಅರಸನ ತಂಗಿಯೊಬ್ಬಳ ವಿವಾಹ, ಅದರಿಂದ ಬಂದ ಅಪಾರ ಪ್ರಮಾಣದ ಆಸ್ತಿಯಿಂದಾಗಿ ಜೀವನವು ಸುಖಮಯವಾಯಿತು. ಭಾರತೀಯ ಚಿತ್ರಗಳನ್ನು ರಚಿಸುತ್ತಾ ಅದನ್ನು ದೊಡ್ಡ ದೊಡ್ಡ ಶ್ರೀಮಂತರಿಗೆ ಮಾರಿ ಹೆಸರನ್ನು, ಕೀರ್ತಿಯನ್ನು ಸಂಪಾದಿಸಿಕೊಂಡದ್ದು ಮುಂದೆ ಈತನು ಕಲೆಯನ್ನು ಹಣಕ್ಕಾಗಿ, ಕೀರ್ತಿಗಾಗಿ ಹುಟ್ಟು ಹಾಕಿದ ಸಂಪ್ರದಾಯವನ್ನು ಮುಂದೆ ಅನೇಕ ಚಿತ್ರಗಾರರು ಪಾಲಿಸಿದ್ದು ಈಗ ಇತಿಹಾಸವೆಂದು ಅ. ನ. ಕೃ. ಭಾವಿಸುತ್ತಾರೆ.

ಅ. ನ. ಕೃ. ದೃಷ್ಟಿಯಲ್ಲಿ ಕಲೆಯ ತಾತ್ವಿಕತೆಯೆಂಬುದು ಸಂಸ್ಕೃತಿಯ ಪೋಷಕವಾದ ಒಂದು ಅಂಶ. ಭಾರತೀಯ ಚಿತ್ರ ಕಲಾವಿದರು ಯಾವುದೇ ಫಲಾಪೇಕ್ಷೆಯಿಲ್ಲದೆ ಭಾರತೀಯ ಸಂಸ್ಕೃತಿಯ ಪುನರುಜ್ಜೀವನಕ್ಕೆ ನಾಂದಿ ಹಾಡಿದವರು. ಅದಕ್ಕೆ ಉದಾಹರಣೆಯಾಗಿ ಅಜಂತಾ, ಎಲ್ಲೋರಾ ಮೊದಲಾದ ಶಿಲ್ಪ ಕಲಾಕಾರರು, ಮುಂದೆ ಆಧುನಿಕ ಕಾಲದಲ್ಲಿ ಬಂಗಾಳದಲ್ಲಿದ್ದ ಹ್ಯಾವಲ್, ನಂದಲಾಲ ಬಸು, ಅವನೀಂದ್ರ ಠಾಕೂರರು ಅದೇ ದಾರಿಯಲ್ಲಿ ಮುನ್ನಡೆದವರು. ಆದರೆ ರವಿವರ್ಮ ಇವರಿಗಿಂತಲೂ ಭಿನ್ನ ಮನೋಧರ್ಮವನ್ನು ಹೊಂದಿದ್ದವನಾಗಿ ಅ. ನ. ಕೃ. ಗುರುತಿಸುತ್ತಾರೆ.

ಭಾರತೀಯ ಚಿತ್ರಕಲಾ ಇತಿಹಾಸದಲ್ಲಿ ರವಿವರ್ಮನಿಗೆ ಸ್ಥಾನವಿದೆ. ಆದರೆ ಕಲಾವಿದರ ಶ್ರೇಣಿಯಲ್ಲಿ ಸ್ಥಾನವಿಲ್ಲವೆಂದು ಹಣಕ್ಕಾಗಿ, ಕೀರ್ತಿಗಾಗಿ ಕಲೆಯನ್ನು ದುರುಪಯೋಗಪಡಿಸಿಕೊಂಡದ್ದು, ಭಾರತೀಯ ಚಿತ್ರಕಲೆಯ ಪುನರುಜ್ಜೀವನಕ್ಕೆ ಯಾವುದೇ ಕಾಣಿಕೆಯನ್ನು ಆತ ನೀಡಿಲ್ಲವೆಂದು ವಿಮರ್ಶಿಸುತ್ತಾರೆ. ರವಿವರ್ಮ ಮೊದಲಾದ ಚಿತ್ರಕಾರರನ್ನು ಪ್ರಾಚೀನ ಕಾಲದಿಂದ ಬೆಳೆದು ಬಂದು ವರ್ತಮಾನ ಪರೀಕ್ಷೆಗಳನ್ನು ಹಾಯ್ದು ಬೆಳೆದ ಭಾರತೀಯ ಚಿತ್ರಕಲೆಯ ಮಾನದಂಡದಿಂದ ನೋಡಬಹುದೇ ಅಥವಾ ಸಹಸ್ರಾರು ಜನರು ಮೆಚ್ಚಿಕೊಂಡಿದ್ದಾರೆಂಬ ಮಾನದಂಡದಿಂದ ನೋಡಬೇಕೇ ಎಂಬ ಎರಡು ಭಿನ್ನ ಪ್ರಶ್ನೆಗಳನ್ನು ಆಯ್ದುಕೊಳ್ಳುತ್ತಾರೆ.

ಚಿತ್ರಕಲೆಯೆಂಬುದು ಚಿತ್ತಕಲೆಯಾಗಬೇಕು, ಜಗತ್ತಿನಲ್ಲಿ ತಾನು ಕಾಣುವ ಕೆಲವು ಸ್ತ್ರೀ ಪುರುಷರ ವ್ಯಕ್ತಿಗಳನ್ನು ತಂದು ಅವರ ಪ್ರತಿರೂಪಗಳಿಗೆ ಬಣ್ಣ ಬಳಿದು ಇನ್ನೆರಡು ಕೈಗಳನ್ನು ಕೊಟ್ಟು ಅದಕ್ಕೆ ಸರಸ್ವತಿಯೆಂದು ಹೆಸರಿಟ್ಟರೆ ಆಗುತ್ತದೆಯೇ, ಹಾಗೆಯೇ ರವಿವರ್ಮ ಚಿತ್ರಿಸಿರುವ ಎಲ್ಲಾ ದೇವಾನುದೇವತೆಗಳಿಗೆ ಚಿತ್ರಗಳು ಕೂಡಾ ಹೀಗೆಯೇ ಇವೆ. ಈ ರೀತಿಯಲ್ಲಿ ಆತನ ಚಿತ್ರಕಲೆಯು ಅರಳಲು ಆತ ಅರಮನೆಯ ಸುಖದ ವಾತಾವರಣದಲ್ಲಿ ಬೆಳೆದದ್ದು, ಜೀವನದ ಯಾವುದೇ ಸಂಕಟಗಳನ್ನು ಅನುಭವಿಸದೆ, ಅನುಭವದ ಎಲ್ಲೆಯನ್ನು ಮೀರದೆ ರಾಜ ಮಹಾರಾಜರ, ಸರದಾರ,

ಶ್ರೀಮಂತರ ಚಿತ್ರಗಳನ್ನು ಬರೆದು ಅಂತರಂಗದಲ್ಲಿ ಅನುಭವವು ಅರಳದೆ ಹೋಯಿತು. ಆತನ ಅನೇಕ ನಿಸರ್ಗದ ಚಿತ್ರಗಳು ನಾಟಕದ ಪರದೆಯ ರೀತಿಯಲ್ಲಿ ಕಾಣುವುದು ಕೂಡಾ ಆತನಿಗೆ ಅರಮನೆಗಳ ಸ್ಫೂರ್ತಿಯಿಂದ ರವಿವರ್ಮನು ತನ್ನ ಕಲೆಯ ಶಕ್ತಿಯ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲು ಕಾರಣವಾದ ಅಂಶವನ್ನು ವಿಮರ್ಶಿಸುತ್ತಾರೆ.

ಅ. ನ. ಕೃ. ರವಿವರ್ಮನ ಕಲೆಯಲ್ಲಿ ೨ ದೊಡ್ಡ ತಪ್ಪುಗಳನ್ನು ಗುರುತಿಸುತ್ತಾರೆ. ಮೊದಲನೆಯದು ಸನಾತನ ಧರ್ಮದ ವಿಭೂತಿಗಳ ಚರಿತ್ರೆ ತಿಳಿಯದೆ ತನ್ನ ಅಲ್ಪ ಜ್ಞಾನದಿಂದ ಚಿತ್ರಿಸಲು ಹೊರಟದ್ದು, ಎರಡನೆಯದು ಚಿತ್ರಿಸಿದರೂ ಅವುಗಳಿಗೆ ತಕ್ಕ ಸ್ಥಾನ, ತನ್ನ ಅನುಭವ, ಸಂಸ್ಕೃತಿಯ ನೈಪುಣ್ಯತೆಯ ಎರಕ ಹೊಯ್ಯದೆ ಇರುವುದು. ಇದಕ್ಕೆ ಕಾರಣವೆಂದರೆ ಆತನ ಚಿತ್ರಗಳಲ್ಲಿ ಇರುವ ಸ್ತ್ರೀಯರೆಲ್ಲಾ ಜೀವಂತವಿರುವ ವ್ಯಕ್ತಿಗಳನ್ನು ಕಲ್ಪನೆ ಹೊಂದಿಸಿ ಬರೆದ ಚಿತ್ರಗಳಾಗಿವೆ. ೧೮೮೫ರಲ್ಲಿ ರವಿವರ್ಮ ಮೈಸೂರಿಗೆ ಬಂದಾಗ ಚಾಮರಾಜೇಂದ್ರ ನಾಟಕ ಮಂಡಳಿಯಲ್ಲಿ ನಡೆದ ಅನೇಕ ನಾಟಕಗಳನ್ನು ವೀಕ್ಷಿಸಿದ ಈತ ಅಲ್ಲಿ ಬರುವ ರಾಣಿ, ಸಖಿ ಪಾತ್ರಗಳನ್ನು ಅಭಿನಯಿಸುತ್ತಿದ್ದವರ ಚಿತ್ರಗಳನ್ನು ತನ್ನ ಕೃತಿಯಲ್ಲಿ ಮೂಡಿಸಿದ್ದಾನೆ. "ಆಗ ಕಾಪಾಲಿಕ ಪಾತ್ರವನ್ನು ಅನುಕರಣೀಯವಾಗಿ ಅಭಿನಯಿಸುತ್ತಿದ್ದ ಸರ್ಪನ್ ರಾಮರಾವ್ ಎಂಬ ನಟನ ಪಾತ್ರ ರೂಪವನ್ನೇ ತನ್ನ 'ಕಿರಾತ ಮತ್ತು ಬಿಲ್ಲ ಹೆಂಗಸು' ಎಂಬ ಚಿತ್ರದಲ್ಲಿ ಶಾಶ್ವತಗೊಳಿಸಿದ್ದಾರೆ. ಮೈಸೂರಿನ ಕೆಲವು ವೇಶ್ಯಾಸ್ತ್ರೀಯರನ್ನು ತನ್ನ ಚಿತ್ರ ಮಂದಿರಕ್ಕೆ ಬರಮಾಡಿಕೊಂಡು ಆ ಕಾಲದಲ್ಲಿ ಅವರ ಸಹಾಯದಿಂದ ಚತ್ರಗಳನ್ನು ರವಿವರ್ಮ ಚಿತ್ರಿಸುತ್ತಿದ್ದನು"[೫] ಎಂದು ಅಭಿಪ್ರಾಯಿಸುತ್ತಾರೆ. ಈ ವಿಚಾರವನ್ನು ಅರಮನೆಯ ನೌಕರಿಯಲ್ಲಿದ್ದ ಮಹಾನ್ ವ್ಯಕ್ತಿಯವರೇ ತಿಳಿಸಿದ್ದಾರೆ ಎಂಬುದನ್ನು ಅ. ನ. ಕೃ. ಸ್ಮರಿಸುತ್ತಾರೆ.

ಇದೇ ವಿಮರ್ಶೆಯನ್ನು ಅವನ ಪ್ರಕೃತಿಯ ಚಿತ್ರಕ್ಕೂ ಅವನ ಜ್ಞಾನಕ್ಕೂ ಅನ್ವಯಿಸುವ ಅ. ನ. ಕೃ. ರವರು ರವಿವರ್ಮ ಚಿತ್ರಿಸಿರುವ ಸರಸ್ವತಿಯ ಹಿಂದಿರುವ ನಿಸರ್ಗವನ್ನು ನೋಡಿದರೆ ಅಲ್ಲಿರುವ ಕೃತ್ರಿಮವು ಒಡೆದು ಕಾಣುತ್ತದೆ. ಜೊತೆಗೆ ನಿರ್ಸಗದ ಅರ್ಥಹೀನತೆಗೆ ಸಾಕ್ಷಿಯಾಗಿದೆಯೆಂದು, ಆತನು ಬರೆದ ವಿಶ್ವಾಮಿತ್ರ–ಮೇನಕಾ, ಮೋಹಿನಿ, ಅಹಲ್ಯಾ ಶಾಪವಿಮೋಚನೆ, ಅಹಲ್ಯಾ ಮದಲಸಾ, ಭರತನ ಬಂಧುಪ್ರೇಮ, ಶಾಕುಂತಲಾ ಪತ್ರಲೇಖನಾ, ಸುಭದ್ರಾರ್ಜುನ ಮೊದಲಾದ ಚಿತ್ರಗಳ ಹಿಂತೆರೆಯಲ್ಲಿ ಒಂದೇ ರೀತಿಯ ನೋಟ ಕಂಡು ಬರುವುದನ್ನು ವಿಮರ್ಶಿಸುತ್ತಾರೆ.

ರವಿವರ್ಮನ ಕೆಲವು ಚಿತ್ರಗಳು ಎಂಬ ಭಾಗದಲ್ಲಿ ಸೀತಾ ವನವಾಸ, ಅಶೋಕವನದಲ್ಲಿ ಸೀತಾ ಮೊದಲಾದ ಚಿತ್ರಗಳನ್ನು ಕುರಿತಂತೆ ಆತನ ಚಿತ್ರಕಲೆ ಅರಸಿಕರಾದವರಿಗೆ ಒಪ್ಪುವಂಥದ್ದೂ ಅದರಲ್ಲಿ ಸತ್ವವಿಲ್ಲವೆಂದು, ಕಲೆಯಲ್ಲಿ ಗುಣವಿಲ್ಲದಿರುವುದನ್ನು ಭಾರತೀಯ ಚಿತ್ರಕಲೆ ಮತ್ತು ಕಲಾವಿದರ ಹಿನ್ನೆಲೆಯಲ್ಲಿ ನೋಡುತ್ತಾರೆ.

ರವಿವರ್ಮ ಮತ್ತು ರೆಮ್‌ಬ್ರ್ಯಾಂಟ್ ಎಂಬ ಭಾಗದಲ್ಲಿ ಇಬ್ಬರು ಸೌಂದರ್ಯದ ಒಳ ಸತ್ವವನ್ನು ಹುಡುಕುತ್ತಿದ್ದು, ರೆಮ್‌ಬ್ರ್ಯಾಂಟನು ಬೈಬಲಿನಿಂದ, ರವಿವರ್ಮ ರಾಮಾಯಣ, ಮಹಾಭಾರತ ಕಾವ್ಯಗಳಿಂದ ವಸ್ತುಗಳನ್ನು ಆಯ್ದುಕೊಳ್ಳುತ್ತಿದ್ದರು. ರೆಮ್‌ಬ್ರ್ಯಾಂಟ್ ಕಲೆಗಾಗಿ ತನ್ನ ಆತ್ಮವನ್ನು ಮೀಸಲಿಟ್ಟವನು. ಆತನ 'ಕಲಾವಿದ ಮತ್ತು ಆತನ ಮೊದಲನೆ ಹೆಂಡತಿ', 'ಚಿತ್ರದೂರಿಗೆ'

ರವಿವರ್ಮನ 'ಸುಭದ್ರಾರ್ಜುನ' ಚಿತ್ರವನ್ನು ಹೋಲಿಸಬಹುದೆಂದು ಇಬ್ಬರ ಕಲಾಸ್ವರೂಪದ ನೈಪುಣ್ಯಗಳನ್ನು ತೌಲನಿಕವಾಗಿ ವಿಮರ್ಶಿಸುತ್ತಾರೆ.

ರವಿವರ್ಮನ ಶಿವನ ಪುಣ್ಯಕಥೆಯನ್ನು, ಕೃಷ್ಣನ ಕಥೆಯನ್ನು ಕುರಿತಂತೆ ವಸ್ತುಗಳನ್ನು ಆಯ್ದುಕೊಂಡು ಅನೇಕ ಚಿತ್ರಗಳನ್ನು ಬರೆದಿದ್ದರೂ, ಶಿವನ ತೇಜೋಮಯವಾದ ಸ್ವರೂಪವನ್ನು ಭಾರತೀಯ ಚಿತ್ರಕಾರರು ಬರೆದ ಹಾಗೆ ಈತನ ಚಿತ್ರಗಳಲ್ಲಿ ಕಾಣಲು ಸಾಧ್ಯವಿಲ್ಲವೆಂದು, ಆಧ್ಯಾತ್ಮಿಕ ವಸ್ತುಕಗಳನ್ನು ಚಿತ್ರಿಸಿದವರಲ್ಲಿ ಆಧುನಿಕ ಚಿತ್ರಗಾರರಾದ ಬಂಗಾಳ ಚಿತ್ರ ಪರಂಪರೆಗೆ ಸೇರಿದ ನಂದಲಾಲ ಬಸು ಮತ್ತು ಪ್ರಮೋದ ಕುಮಾರ ಚಟರ್ಜಿಯವರ ಚಿತ್ರಗಳಿಗೆ ಹೋಲಿಸಿ ಆ ರೀತಿಯ ಹಿನ್ನೆಲೆಯಲ್ಲಿ ರವಿವರ್ಮನ ಚಿತ್ರಗಳು ರೂಪು ಪಡೆದಿಲ್ಲವೆಂದು ಒಟ್ಟಾರೆ ಭಾರತೀಯ ಚಿತ್ರಕಲೆಯ ಸ್ವರೂಪದ ಮಾನದಂಡದಿಂದಲೇ ವಿಮರ್ಶಿಸುತ್ತಾರೆ.

ರವಿವರ್ಮನ ಚಿತ್ರಕಲೆಯಲ್ಲಿ ವ್ಯಕ್ತಿಯ ಮನೋಭಾವವನ್ನು ಚಿತ್ರಸಲು ಅಸಾಧ್ಯವಾಗಿರಬಹುದು, ಆದರೆ ಸ್ತ್ರೀಪುರುಷರ ಬಾಹ್ಯ ರೂಪವನ್ನು ಉತ್ತಮವಾಗಿ ಚಿತ್ರಿಸಿದ್ದು ಮಾತ್ರವಲ್ಲದೆ, ಧರ್ಮದ ಹೆಸರಿನಲ್ಲಿ ಚರ್ವಿತಚರ್ವಣ ಹಿಡಿದದ್ದು ಸರಿಯಲ್ಲವೆಂದು, ಅಂದಿನ ಕಾಲಘಟ್ಟದಲ್ಲಿ ಎರಡು ರೀತಿಯ ಜನಾಂಗವಿದ್ದು ರವಿವರ್ಮನ ಎದುರಿಗೆ ಪಾಶ್ಚಾತ್ಯ ಮಾದರಿಯಲ್ಲಿ ರೂಪ ಚಿತ್ರಗಳನ್ನು ಬಯಸುತ್ತಿದ್ದ ಆಡಳಿತವರ್ಗ ಮತ್ತು ಮೌಢ್ಯದಲ್ಲಿ ಮುಳುಗಿದ ಜನತೆ ಈ ಎರಡು ಅಭಿರುಚಿಗಾಗಿ ತನ್ನ ಪ್ರತಿಭೆಯನ್ನು ಮುರಿದು ಬಿಟ್ಟವನಾಗಿ ಅ. ನ. ಕೃ. ಆತನ ಕಲೆಯನ್ನು ಗ್ರಹಿಸುತ್ತಾರೆ.

ಕನ್ನಡ ದಾರಿ – ೧೯೩೭

ಕನ್ನಡ ಭಾಷೆಯ ಒಳಿತಿಗೆ ಸಂಬಂಧಿಸಿದಂತೆ ೧೯೩೭ರಲ್ಲಿ ಬರೆದ ಕೃತಿ ಕನ್ನಡ ದಾರಿ. ಇದರಲ್ಲಿ ಒಟ್ಟು ೩೬ ಲೇಖನಗಳಿವೆ. ಪರಿಷತ್ತಿನ ಸಂದೇಶ ಎಂಬ ಲೇಖನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಟ್ಟಲು ಶ್ರಮಿಸಿದ ಕರ್ಪೂರ ಶ್ರೀನಿವಾಸ ರಾಯರು, ಡಿ. ವಿ. ಜಿ., ಮೊದಲಾದವರ ಕೊಡುಗೆ, ಕನ್ನಡ ಪರ ಕಾಳಜಿ, ಸಾಹಿತ್ಯಾಭಿಮಾನಿಗಳನ್ನು ಒಂದೆಡೆ ಸೇರಿಸುವುದಕ್ಕಾಗಿ ಮಾಡಿದ ತ್ಯಾಗದ ಸಂಕೇತವಾಗಿ ಪರಿಷತ್ತು ಇದೆ ಎಂದು ತಿಳಿಸುತ್ತಾರೆ.

ಇಂಡಿಯಾ-ಚೀನಾ ದೇಶದ ಬಾಂಧವ್ಯಕ್ಕಾಗಿ ತಾನ್ ಎನ್ ಷಾನ್‌ರವರು ಎರಡು ದೇಶಗಳ ಸಂಸ್ಕೃತಿಯನ್ನು ಸಾರುವ ಮೂಲಕ ವಿಶ್ವ ಶಾಂತಿಗಾಗಿ ದುಡಿಯುವವರಾಗಿದ್ದಾರೆ. ಆ ಮೂಲಕ ಚೀನಾ ಭಾರತ ಸಂಸ್ಕೃತಿ ಸಂಘವನ್ನು ಸ್ಥಾಪಿಸುವ ಮೂಲಕ ಅದನ್ನು ಸಾಧಿಸುವಲ್ಲಿ ರವೀಂದ್ರನಾಥ ಟಾಗೋರರು ಸಂಸ್ಕೃತಿಯ ಮೂಲಕ ಸಾಧಿಸಿದಂತೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಒಂದು ಕನ್ನಡ ಸಂಸ್ಕೃತಿ ಪೀಠವಿಲ್ಲದೆ ಇರುವುದು ಒಂದು ತೊಡಕಾಗಿದೆ. ಮೈಸೂರು, ಮುಂಬಯಿ, ಆಂಧ್ರದ ಉಸ್ಮಾನಿಯಾ ವಿಶ್ವವಿದ್ಯಾಲಯಗಳಲ್ಲಿ ಪೀಠಗಳನ್ನು ಸ್ಥಾಪಿಸುವ ಮೂಲಕ ಕನ್ನಡ ಸಂಸ್ಕೃತಿಯ ಪ್ರಚಾರ ಮಾಡಬೇಕು ಎಂಬ ವಿಚಾರವನ್ನು ಪ್ರತಿಪಾದಿಸುತ್ತಾರೆ. ಇವರ ಈ ತಾತ್ವಿಕ ಕಾಳಜಿಯಿಂದಾಗಿಯೇ ಇಂದೂ ಅನೇಕ ವಿಶ್ವವಿದ್ಯಾಲಯಗಳಲ್ಲಿ ಅನೇಕ ಪೀಠಗಳನ್ನು ಸ್ಥಾಪಿಸಲಾಗಿದೆ ಎನ್ನಬಹುದು. ಆ ಮೂಲಕ ಕನ್ನಡ ನಾಡಿನ ಸಂಸ್ಕೃತಿಯನ್ನು ಪ್ರಚಾರ ಮಾಡಲು ಇದು ಸಾಧ್ಯವಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಬರೆದ ಈ ಲೇಖನದಲ್ಲಿ ಪ್ರಮುಖವಾಗಿ ಕನ್ನಡ ಭಾಷೆಯನ್ನು ಹಿಂದಿ ಹೇರಿಕೆಯ ವಿರುದ್ಧವಾಗಿ ಬೆಳೆಸುವ ವಿವಿಧ ಮಾರ್ಗೋಪಾಯಗಳನ್ನು, ದಕ್ಷಿಣ ಕನ್ನಡ ಜಿಲ್ಲೆಯು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದರೂ ಒಂದು ಕಾಲ ಘಟ್ಟದಲ್ಲಿ ಇದು ಮೈಸೂರು ರಾಜ್ಯಕ್ಕೆ ಸೇರಿದ್ದು ಇಲ್ಲಿನ ಕೊಂಕಣಿ ಮಾತೃಭಾಷೆಯನ್ನು ಮಾತನಾಡುವ ಕ್ರೈಸ್ತ ಸಮಾಜವು ಕನ್ನಡವೇ ಶಿಕ್ಷಣ ಭಾಷೆಯಾಗಬೇಕೆಂದು ಹೋರಾಟದ ಮೂಲಕ ತಮ್ಮ ಕನ್ನಡ ಪ್ರೇಮವನ್ನು ಮೆರೆದಿದ್ದು, ಅನೇಕ ಕ್ರೈಸ್ತರು ಕನ್ನಡಕ್ಕಾಗಿ ದುಡಿದ ಮಹನೀಯರುಗಳ ರೀತಿಯಲ್ಲಿಯೇ ಕನ್ನಡದ ತೇರನ್ನು ಎಳೆಯುವಲ್ಲಿ ಸಹಕರಿಸಲಿ ಎಂಬ ಮನೋಭಾವ ಅ. ನ. ಕೃ. ರವರದ್ದಾಗಿದೆ.

ಶಿಕ್ಷಣದಲ್ಲಿ ಮಾತೃಭಾಷೆಯ ಸ್ಥಾನವನ್ನು ಒತ್ತಿ ಹೇಳುವ ಅ. ನ. ಕೃ. ರವರು ವಿಶ್ವವಿದ್ಯಾಲಯದ ಎಲ್ಲಾ ವಿಷಯಗಳು ಮಾತೃಭಾಷೆಯಲ್ಲಿ, ಕನ್ನಡದಲ್ಲಿ ನಡೆಯುವುದರಿಂದ ಸರಕಾರವು ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುತ್ತದೆ ಎಂಬ ನಿಲುವಿನಲ್ಲಿ ಆಡಳಿತದಲ್ಲಿ ಕನ್ನಡ, ಶಿಕ್ಷಣದಲ್ಲಿ ಕನ್ನಡ ಮಾಧ್ಯಮದ ಅವಶ್ಯಕತೆಯನ್ನು ಸಾರುತ್ತಾರೆ.

ಪ್ರೊ॥ ವಾಡಿಯವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಮಾಡಿದ ಭಾಷಣ ಹಿಂದಿ ಭಾಷೆಯ ಬೆಳವಣಿಗೆಯಲ್ಲಿ ಭಾರತಕ್ಕೆ ಒಂದೇ ಭಾಷೆ, ವ್ಯಾವಹಾರಿಕವಾಗಿ, ಅಗತ್ಯತೆಗಾಗಿ ಹಿಂದೀ ಭಾಷೆಯು ಅವಶ್ಯಕವೆಂದು ತಿಳಿಸಿದರು. ಅ. ನ. ಕೃ. ರವರು ಇದಕ್ಕೆ ಉತ್ತರವಾಗಿ ಹಿಂದಿಯು ಉತ್ತರ ಭಾರತದಲ್ಲಿ ದಾಳಿ ಮಾಡಿದಾಗಿನಿಂದ ಭಾರತೀಯ ಸಂಸ್ಕೃತಿಯ ಮೂಲ ಸ್ವರೂಪ ಕಳೆದುಕೊಂಡಿದೆ. ಕಲೆ, ಸಂಗೀತ, ವಾಸ್ತುಶಿಲ್ಪದಲ್ಲಿ ಇಂಡೋ–ಪರ್ಶಿಯನ್ ಶೈಲಿ ಬಂದಿದ್ದು ಭಾರತೀಯ ವಾಸ್ತು ಶೈಲಿಯು ಕಾಂಗ್ರಾ ಕಣಿವೆಯಲ್ಲಿ ನಾಶಗೊಂಡಿದೆ. ಆದರೆ ಕರ್ನಾಟಕದಲ್ಲಿ ಎಲ್ಲಾ ಸಮುದಾಯದವರು ಕನ್ನಡ ಸೇವೆಗೆ ಒಮ್ಮತವಾಗಿ ಬರುವ ಮೂಲಕ ಕನ್ನಡ ಸಂಸ್ಕೃತಿಯನ್ನು ಉಳಿಸಲು ಕಟಿಬದ್ಧರಾಗಬೇಕಾಗಿದೆ. ಕಾಕಾ ಕಾಲೇಕರ್‌ರವರು ಹಿಂದಿಯನ್ನು ಕನ್ನಡ ನಾಡಿನಲ್ಲಿ ಪ್ರಚಾರ ಮಾಡಲು ಬಂದಿದ್ದು, ಉತ್ತರ ಭಾರತದ ರಾಜಕೀಯ ಹೇಗೆ ಹಿಂದಿಯೇತರ ರಾಜ್ಯಗಳ ಮೇಲೆ ಭಾಷಾ ಸವಾರಿ ಮಾಡಲು ಹವಣಿಸುತ್ತದೆ ಎಂಬುದನ್ನು ಸೂಚಿಸುತ್ತಾರೆ.

ಉತ್ತರ ಭಾರತಕ್ಕೆ ದೇವನಾಗರಿ ಲಿಪಿ ಇರುವಂತೆ ದಕ್ಷಿಣಕ್ಕೆ ಕನ್ನಡ ಲಿಪಿಯನ್ನು ಬಳಸುವಂತೆ, ಆ ಮೂಲಕ ದಕ್ಷಿಣ ರಾಜ್ಯಗಳ ಸಂಸ್ಕೃತಿ ಮೈತ್ರಿಯನ್ನು ಕಾಣಬೇಕು. ಆ ಮೂಲಕ ಇಡೀ ದಕ್ಷಿಣ ಭಾರತಕ್ಕೆ ಏಕ ಲಿಪಿಯ ಸ್ಥಾನವನ್ನು ಕನ್ನಡಕ್ಕೆ ನೀಡುವುದನ್ನು ಕನ್ನಡಾಭಿಮಾನಿಯಾದ ಅ. ನ. ಕೃ. ರವರು ಒಪ್ಪುತ್ತಾರೆ. ಏಕಲಿಪಿಯ ತಾತ್ವಿಕತೆಯನ್ನು ಒಪ್ಪುವ ಅ. ನ. ಕೃ. ರವರ ನಿಲುವು ಕನ್ನಡ ಭಾಷಾಭಿಮಾನದ ಸಂಕೇತವೆನ್ನಬಹುದು. ಆದರೆ ದಕ್ಷಿಣ ದ್ರಾವಿಡ ಭಾಷೆಗಳು ಒಂದೇ ಲಿಪಿಯಿಂದ ಉಗಮವಾಗಿದ್ದರೂ ಭಿನ್ನ ಭಿನ್ನ ರೂಪಗಳನ್ನು ಪಡೆದಿವೆ ಎಂದು ಕೆಲವು ಭಾಷಾ ವಿದ್ವಾಂಸರು ಹೇಳುತ್ತಾರೆ. ಇಡೀ ದಕ್ಷಿಣಕ್ಕೆ ಕನ್ನಡವೇ ಏಕಲಿಪಿ ವಾದವನ್ನು ಪುರಸ್ಕರಿಸುವ ಅ. ನ. ಕೃ. ವಾದವು ಹೆಚ್ಚು ಸಮಂಜಸವೆನ್ನಿಸುವುದಿಲ್ಲ.

ಕನ್ನಡಿಗರ ನಿರಭಿಮಾನವನ್ನು ಕುರಿತಂತೆ ಆಂಧ್ರದ ಚಲನಚಿತ್ರವಾದ 'ವಂದೇಮಾತರಂ' ನಲ್ಲಿ ನಾಯಕನ ಬಾಯಿಯಿಂದ ವಿಜಯನಗರ ಸಾಮ್ರಾಜ್ಯ ತೆಲುಗಿನವರದ್ದು, ಹಂಪಿಯ ಚಿತ್ರಕಲೆ. ವಾಸ್ತುಶಿಲ್ಪ ಎಲ್ಲಾ ಆಂಧ್ರರ ಕಲೆಯ ಪ್ರತೀಕ ಎಂದು ಹೇಳಿದರು. ಅದರ ವಿರುದ್ಧವಾಗಿ ಕನ್ನಡ ಜನತೆಗಾಗಲೀ ಅಥವಾ ಚಲನಚಿತ್ರದ ಆ ದೃಶ್ಯಕ್ಕೆ ತಡೆ ನೀಡುವುದಾಗಲೀ ಕನ್ನಡ ಜನತೆಯ ಹಾಗೂ

ವಿದ್ಯಾರ್ಥಿಗಳ ಹೋರಾಟವೇ ಮಾಡದ ಮನಃಸ್ಥಿತಿಯನ್ನು ಮತ್ತು ಕನ್ನಡ ಪರ ಕಾಳಜಿ ಇಲ್ಲದ ಧೋರಣೆಯನ್ನು ತಿಳಿಸುತ್ತಾರೆ.

ಕನ್ನಡ ನಾಡು ನುಡಿ, ಸಾಹಿತ್ಯ ಇವುಗಳನ್ನು ಪೋಷಿಸುವ, ಬೆಳೆಸುವ ನಿಟ್ಟಿನಲ್ಲಿ ಕನ್ನಡದ ದಾರಿ ಲೇಖನಗಳ ಸಂಕಲನ ಕನ್ನಡಿಗರಿಗೆ ಒಂದು ಮಾರ್ಗದರ್ಶನವನ್ನು ನೀಡುತ್ತದೆ.

ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ – ೧೯೪೩

ವೀರಶೈವ ಸಾಹಿತ್ಯವನ್ನು ಬಸವಣ್ಣನಿಂದ ಗುರುತಿಸುವ ಅ. ನ. ಕೃ. ರವರು ವೀರಶೈವರಲ್ಲಿ ಕಂಡು ಬರುವ ಪಂಚಾಚಾರ, ಷಟ್ಸ್ಥಳ, ಅಷ್ಟವರಣಗಳಿಗೆ ಹೊಸ ಅರ್ಥವನ್ನು ಕೊಟ್ಟ ಹಾಗೆ ವಚನ ಸಾಹಿತ್ಯದಲ್ಲಿಯೂ ಧಾರ್ಮಿಕತೆಯನ್ನು ಅಳವಡಿಸಿಕೊಂಡಿದ್ದಾರೆ. ಜೊತೆಗೆ ಜೇಡರ ದಾಸಿಮಯ್ಯನ ಅನೇಕ ವಚನಗಳನ್ನು ಸ್ತುತಿಸುತ್ತಿರುವುದು ಮಾತ್ರವಲ್ಲದೆ ಪ್ರಭಾವಿಸಿರಬಹುದೆಂದು ಮತ್ತು ದಾಸಿಮಯ್ಯನನ್ನು ಅವಲಂಬಿಸಿ, ವಚನ ಪದ್ಧತಿಯನ್ನು ಅನುಸರಿಸಿಯೇ ಷಟ್ಸ್ಥಳ ವಚನ, ಕಾಲಜ್ಞಾನ ವಚನ, ಮಂತ್ರಗೋಪ್ಯ ಮೊದಲಾದ ಕೃತಿಗಳನ್ನು ಆಧ್ಯಾತ್ಮಿಕತೆಯ ಮೇಲೆ ರಚಿಸಿರುವುದನ್ನು ೧೯೪೩ರಲ್ಲಿ ಪ್ರಕಟಿಸಿದ 'ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ' ಎಂಬ ಕೃತಿಯಲ್ಲಿ ವಿಮರ್ಶಿಸುತ್ತಾರೆ.

ವೀರಶೈವ ಸಾಹಿತ್ಯದ ಬೆಳವಣಿಗೆಯಲ್ಲಿ ಹರಿಹರನ ಪಾತ್ರ ಹಿರಿದಾಗಿ ನೋಡುವ ಅ. ನ. ಕೃ. ರವರು ವೀರಶೈವ ಸಾಹಿತ್ಯಕ್ಕೆ ೧೦೧ ರಗಳೆಗಳ ಮೂಲಕ ಸೂರ್ಯ ಸ್ವರೂಪವಾಗಿ ಕಂಗೊಳಿಸುವುದನ್ನು ಮತ್ತು ರಾಘವಾಂಕನು ಬರೆದ ಕೃತಿಗಳಲ್ಲಿ "ಕಾವ್ಯ ದೃಷ್ಟಿಯಿಂದ ಸೋಮನಾಥ ಚರಿತ್ರೆ, ವೀರೇಶ್ವರ ಚರಿತ್ರೆಗಳಿಗೆ ಏನೂ ಮಹತ್ವವಿಲ್ಲ. ಸೋಮನಾಥ ಚರಿತ್ರೆಯಲ್ಲಿ ರಾಘವಾಂಕ ತೋರಿರುವ ಅಸಹಿಷ್ಣುತೆ, ಪರಮತ ನಿಂದನೆ ಅಸಹ್ಯವನ್ನುಂಟುಮಾಡುತ್ತದೆ, ಅವನ ಕೀರ್ತಿಯ ಕಳಸಗಳಾಗಿ ನಿಂತಿರುವುದು ಹರಿಶ್ಚಂದ್ರ ಕಾವ್ಯ ಮತ್ತು ಸಿದ್ಧರಾಮ ಚರಿತ್ರೆ"[೬] ಎಂಬ ಅ. ನ. ಕೃ. ರವರ ಅಭಿಪ್ರಾಯದಲ್ಲಿ ವೀರಶೈವ ಸಾಹಿತ್ಯವನ್ನು ನಿರೂಪಿಸುವುದು ಮಾತ್ರವಲ್ಲದೆ ವೀರಶೈವ ಸಾಹಿತ್ಯದ ವಿಮರ್ಶೆಯನ್ನು ಮಾಡುತ್ತಾರೆ. ಸಿದ್ಧರಾಮ ತಿಳಿಸುವ ಕರ್ಮದ ಮಹತ್ವವನ್ನು ಅವನ ಕೃತಿಯಲ್ಲಿ ಸರಿಯಾಗಿ ವ್ಯಕ್ತವಾಗದೇ ಇರುವುದು ಮುಂದೆ ಚಾಮರಸ, ಗೂಳೂರು ಸಿದ್ಧ ವೀರಣ್ಣಾಚಾರ್ಯರು ಸಿದ್ಧರಾಮನಿಗೆ ಹಿತವಲ್ಲದ ರೀತಿಯಲ್ಲಿಯೇ ಚರ್ಚಿಸುವ ವಿಷಯವನ್ನು ತಿಳಿಸುತ್ತಾರೆ.

ಪುಲಿಗೇರಿ ಸೋಮನಾಥನ 'ಸೋಮೇಶ್ವರ ಶತಕ'ದಲ್ಲಿ ಕವಿಗೆ ಜನಜೀವನ ನಿಕಟ ಪರಿಚಯವಿದ್ದರಿಂದಲೇ ಆತ ಕಾವ್ಯದ ಸಾಮಾಗ್ರಿಯನ್ನು ಆಯ್ದುಕೊಂಡುದಾಗಿ, ಭೀಮಕವಿ, ಹರಿಹರ, ರಾಘವಾಂಕನ ಕಾವ್ಯಗಳನ್ನು ಅನುಸರಿಸದೆ ಪಾಲ್ಕುರಿಕೆ ಸೋಮನನ್ನು ಏತಕ್ಕೆ ಅನುಸರಿಸಿದನೆಂದು, ಅವನ ಕಾಲದಲ್ಲಿ ಕಾವ್ಯ ರಚಿಸುವುದು ಅಷ್ಟು ಪ್ರಾಮುಖ್ಯತೆ ಪಡೆದಿಲ್ಲವೇನೋ ಎಂದು ಭಾವಿಸುತ್ತಾರೆ.

ಪ್ರೌಢದೇವರಾಯನ ಕಾಲದಲ್ಲಿ ವೀರಶೈವ ಸಾಹಿತ್ಯವು ಬೆಳವಣಿಗೆಗೊಂಡಿದ್ದು ವೀರಶೈವ ಸಿದ್ಧಾಂತಗಳ ಖಚಿತವಾದ ನಿರ್ಣಯ ಮಾಡುವುದಕ್ಕೆ ಮಗ್ಗೆಯ ಮಾಯಿದೇವ (೧೯೪೦) ನ ಕೃತಿಗಳ ಹಿನ್ನೆಲೆಯಲ್ಲಿ ಚರ್ಚಿಸುತ್ತಾರೆ. ಹದಿನೈದನೆಯ ಶತಮಾನದ ಅಂತ್ಯವನ್ನು ವೀರಶೈವ ಸಾಹಿತ್ಯದ ವಸಂತಕಾಲವಾಗಿ ಗುರುತಿಸುವ ಅ. ನ. ಕೃ. ಆ ಕಾಲದಲ್ಲಿ ಸುರಂಗ, ಸಿಂಗಿರಾಜ, ಗೂಳೂರು ಸಿದ್ಧ ವಿರಣ್ಣಾಚಾರ್ಯ, ನಿಜಗುಣಶಿವಯೋಗಿ, ಷಡಕ್ಷರದೇವ, ಸರ್ವಜ್ಞ ಮೊದಲಾದವರಿಂದ ವೀರಶೈವ ಸಾಹಿತ್ಯ ಬೆಳವಣಿಗೆ ಕಂಡಿದ್ದನ್ನು ಗುರುತಿಸುತ್ತಾರೆ.

ಕನ್ನಡ ಸಾಹಿತ್ಯದಲ್ಲಿ ವೀರಶೈವ ಸಾಹಿತ್ಯವು ೨೦೦ ವರ್ಷಗಳಲ್ಲಿ ಬೆಳವಣಿಗೆ ಕಂಡಿದ್ದು ಜನಪದರ ಜೀವನವನ್ನು ತಮ್ಮ ಕಾವ್ಯಗಳಲ್ಲಿ, ಸಾಮಾನ್ಯರಿಗಾಗಿ ಬರೆದದ್ದು ಆಗಿದೆ. ವೀರಶೈವ ಕವಿಗಳ ಶೈಲಿಯು ಜನಪದದ ಮಾತುಗಳು, ಗಾದೆಗಳು, ನೀತಿಗಳು, ಕತೆಗಳು, ಹಾಸುಹೊಕ್ಕಾಗಿ ಬೆರೆತುಕೊಂಡಿದೆ. ವೀರಶೈವ ಕವಿಗಳು ಚರ್ವಿತಚರ್ವಣಕ್ಕೆ ಎಡೆ ಮಾಡಿಕೊಟ್ಟಿದ್ದು ಷಡಕ್ಷರಿಯನ್ನು ಬಿಟ್ಟರೆ ಉಳಿದ ಅನೇಕ ವೀರಶೈವ ಕವಿಗಳು ಹರಿಹರ, ಸುರಂಗ, ಸಿಂಗಿರಾಜ, ಮೊದಲಾದವರ ಪಡಿನೆಳಲಾಗಿ ಬಾಳಿದವರಾಗಿ ವೀರಶೈವ ಸಾಹಿತ್ಯವನ್ನು ಅ. ನ. ಕೃ. ಗುರುತಿಸುತ್ತಾರೆ.

'ಅನುಭವ ಮಂಟಪ' ಎಂಬ ಭಾಗದಲ್ಲಿ ವ್ಯಕ್ತಿ ತನ್ನ ಸಂಸ್ಕಾರ ಹಾಗೂ ಮನೋಧರ್ಮವನ್ನು ಅವಲಂಬಿಸಿ ಪ್ರಗತಿ ಪಥದಲ್ಲಿ ನಡೆಯಬೇಕೆಂದು, ಪ್ರಗತಿಯ ಹಾದಿಯನ್ನು ಹಿಡಿಯುವ ಪ್ರತಿಯೊಬ್ಬನು ಸಮಾನ ಧರ್ಮೀಯನೆಂದು ಅದಕ್ಕಾಗಿ ಒಂದು ಕಡೆ ನಿಂತು ವೀರಶೈವ ಧರ್ಮದ ಉನ್ನತ ತತ್ವಗಳಿಗೆ ಸಾರ್ವತ್ರಿಕ ರೂಪ ಕೊಡುವುದಕ್ಕೆ ಸ್ಥಾಪಿಸಿದ ಸಂಸ್ಥೆಯಾಗಿ 'ಅನುಭವ ಮಂಟಪ' ವನ್ನು ಅ. ನ. ಕೃ. ರವರು ಕಾಣುತ್ತಾರೆ. ಇದನ್ನು ಶಿವ ಜ್ಞಾನದ ಒಂದು ವಿಶ್ವವಿದ್ಯಾಲಯವಾಗಿ ಕಾಣುವ ಹಂಬಲ ಬಸವಣ್ಣನವರದಾಗಿತ್ತು.

ಅನುಭವ ಮಂಟಪದಲ್ಲಿ ವಿವಿಧ ವೃತ್ತಿಯ, ವಿವಿಧ ಜಾತಿಯ, ಮತಗಳಿಗೆ ಸೇರಿದ ಎಲ್ಲರಿಗೂ ಆಶ್ರಯ ನೀಡಿದ್ದ, ವ್ಯಕ್ತಿಯ ಸಾಮಾಜಿಕ ಸ್ಥಿತಿಗಿಂತ ಶಿವಾನುಭವ ಮಾತ್ರ ಮುಖ್ಯವಾಗಿತ್ತೆಂದು, ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿ ಒಗ್ಗಟ್ಟಿನ ಶಕ್ತಿಯಿಂದ ಅನೇಕ ಮಹತ್ವದ ಘಟನೆಗಳು ಜರಗಿವೆ, ಅದರಲ್ಲಿ ತಮಿಳುನಾಡಿನ ಸಂಘ ಸಾಹಿತ್ಯವು, ಮಧ್ಯಕಾಲದ ಪರ್ಶಿಯಾ ದೇಶದ ಸೂಫಿ ಸಾಹಿತ್ಯವನ್ನು ಅನುಭವ ಮಂಟಪದ ಸಾಹಿತ್ಯವನ್ನು ಹೋಲಿಸುತ್ತಾರೆ. ಸ್ತ್ರೀ–ಶೂದ್ರರ ಬಂಧನವನ್ನು ಕಳೆದಿದ್ದ ವಿಶ್ವಸಾಹಿತ್ಯವಾಗಿ, ಜಗತ್ತಿನ ಕಲ್ಯಾಣಕ್ಕೆ ಅವಶ್ಯಕವಾದ ಬೆಳಕನ್ನು ನೀಡುವ ಮಂಟಪವಾಗಿ ಅನುಭವ ಮಂಟಪವನ್ನು ಅ. ನ. ಕೃ. ನೋಡುತ್ತಾರೆ.

'ಹರೀಶ್ವರನ ಇಬ್ಬರು ಮಹಾನುಭಾವರು' ಎಂಬ ಭಾಗದಲ್ಲಿ ಆತನ ಕಾವ್ಯದಲ್ಲಿ ವಸ್ತು ಮುಖ್ಯವಾದರೆ ಮತ್ತೊಂದು ಅಸಾಧಾರಣ ಲೋಕಾನುಭವ, ಲೌಕಿಕ ಮತ್ತು ಧಾರ್ಮಿಕ ವ್ಯವಹಾರಗಳಲ್ಲಿ ಜನರು ಹೇಗೆ ನಡೆದುಕೊಳ್ಳಬೇಕೆಂದು ತಿಳಿದವನಾಗಿ ಹರಿಹರನ ಕಾವ್ಯಾಂಶ ಗುಣವನ್ನು ವಿಮರ್ಶಿಸುತ್ತಾರೆ. ಹರಿಹರ ರಚಿಸಿರುವ ಶಿವಶರಣರ ರಗಳೆಗಳಲ್ಲಿ ಬಹಳ ಮುಖ್ಯವಾಗಿ ಪ್ರಭುದೇವರ ರಗಳೆ, ಬಸವರಾಜ ದೇವರ ರಗಳೆ ಈ ಎರಡು ಕಾವ್ಯಗಳಲ್ಲಿ ಹರಿಹರನು ಬಸವಣ್ಣ ಮತ್ತು ಅಲ್ಲಮಪ್ರಭುರವರ ಗುಣ ವ್ಯಕ್ತಿತ್ವವನ್ನು ಜ್ಞಾನವನ್ನು ಅ. ನ. ಕೃ. ವಿಮರ್ಶಿಸುತ್ತಾರೆ.

ಅಕ್ಕಮಹಾದೇವಿಯ ಆಧ್ಯಾತ್ಮಿಕ ಪ್ರಗತಿ ಎಂಬ ಅಧ್ಯಾಯದಲ್ಲಿ ಆತ್ಮನಿಗೆ ಗಂಡು–ಹೆಣ್ಣುಗಳೆಂಬ ಬೇಧವಿಲ್ಲವೆಂದೂ, ಆಧ್ಯಾತ್ಮಿಕ ಜೀವನ ಪ್ರಗತಿ ಅವಳ ಸ್ವಯಂವರ, ವಿವಾಹ, ಗಂಡನೊಂದಿಗೆ ಬಾಳುವೆ, ಗಂಡನೊಂದಿಗೆ ಐಕ್ಯವಾಗುವುದು, ಈ ನಾಲ್ಕು ಹಂತಗಳಲ್ಲಿ ನಡೆದಿದ್ದು, ಅಕ್ಕಮಹಾದೇವಿಗೂ ಮಾಯೆಯು ಕಾಡದೆ, ಪ್ರಿಯ, ಪ್ರೇಯಸಿ ಮಾರ್ಗವನ್ನು ಅನುಸರಿಸಿದವರಲ್ಲಿ ಅಕ್ಕನ ವಿಶ್ವದೃಷ್ಟಿ ಕಾಣುತ್ತದೆ. ಭಕ್ತಿ ಮತ್ತು ಭಗವಂತನ ಸಂಬಂಧ ಈ ರೀತಿಯ ಪ್ರಿಯ ಸಂಬಂಧವೇ ಇರಬೇಕೆಂದು ಕಠೋಪನಿಷತ್ತಿನ ಶಾಂತಿಮಂತ್ರ, ಸಮರಸಭಾವ, ಸಮರತಿಯನ್ನು ನಿರ್ದೇಶಿಸುತ್ತದೆ. ಈ ರೀತಿಯಲ್ಲಿಯೇ ಅಕ್ಕಮಹಾದೇವಿಯು ಶಿವನನ್ನು ತನ್ನ ಪತಿಯಾಗಿ ಸ್ವೀಕರಿಸಿ ಪ್ರೇಮವೇ ಪ್ರಿಯದರ್ಶನವಾಗಿ, ದೇವರಾಗಿ ಚೆನ್ನಮಲ್ಲಿಕಾರ್ಜುನನನ್ನು ಕಂಡಿದ್ದಾಳೆ.

ಅದೇ ರೀತಿಯಲ್ಲಿ ಮಧ್ಯಯುಗದಲ್ಲಿ ಚಿತ್ತೂರಿನ ಮೀರಾಬಾಯಿಯ ಜೀವನವು ಪ್ರೇಮರಸವಾಗಿ, ಔರಂಗಜೇಬನ ಮಗಳಾದ ಜೇಬುನ್ನೀಸಾ ಮೀರಾಬಾಯಿಯಂತೆ ಶ್ರೀಕೃಷ್ಣನಲ್ಲಿ ಅನುರಕ್ತಳಾದಳು. "ಇಸ್ಲಾಂ ಧರ್ಮದ ಮಹಾಗ್ರಂಥವಾದ ಕುರಾನಿನಲ್ಲಿಯೇ ಪರಮಾತ್ಮನಿಗೆ ಅರ್ ರವೂಫ್ (ಪ್ರೇಮಮಯ), ಅಲ್-ಲತೀಫ್ (ದಯಾಮಯ), ಅಸ್ಸಲಾಂ (ಶಾಂತಿನಾಥ), ಅಲ್-ಬಾರ್ (ಕರುಣಾಪೂರ) ಮೊದಲಾದ ಸಂಬೋಧನೆಗಳಿದ್ದರೂ ಪೈಗಂಬರ್ ಮಹಮ್ಮದ್‌ರು ಅವೆಲ್ಲವುಗಳ ಜೀವಂತ ಪ್ರತಿನಿಧಿಗಳಾಗಿದ್ದರೂ ಇಸ್ಲಾಂ ತನ್ನ ಕ್ಷಾತ್ರ ಚರಿತ್ರೆಯಿಂದ ಆ ಎಲ್ಲಾ ಗುಣಗಳನ್ನು ನೀಗಿಕೊಂಡಿತ್ತು"[೭]. ಅದೇ ರೀತಿಯಲ್ಲಿ ಕ್ರೈಸ್ತ ಧರ್ಮದ ಪವಿತ್ರ ಗ್ರಂಥವಾದ ಬೈಬಲಿನಲ್ಲಿಯೂ ದೇವರನ್ನು ಪ್ರೇಮ ಕಲ್ಪನೆಯಿಂದ ನೋಡುವ ಕ್ರಮವನ್ನು ಅ. ನ. ಕೃ ವಿವರಿಸುತ್ತಾರೆ.

ಮಹಾದೇವಿಯಕ್ಕನ ಪ್ರೇಮ ನಿಷ್ಕಾಮದಿಂದ ಕೂಡಿದ್ದು ಅವಳ ಪ್ರಿಯ, ಪ್ರೇಯಸಿ ಭಾವದ ಎಲ್ಲಾ ತತ್ವಗಳು ಅಕ್ಕನ ಜೀವನದಲ್ಲಿ ಕಂಡು ಬರುತ್ತವೆ ಎಂದು ಅಕ್ಕನ ಆಧ್ಯಾತ್ಮಿಕ ಪ್ರಗತಿಯನ್ನು ಪ್ರಿಯ, ಪ್ರೇಯಸಿ ಭಾವದ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾರೆ.

ರಾಘವಾಂಕನ ಹರಿಶ್ಚಂದ್ರನ ಕಾವ್ಯವನ್ನು ವಿಮರ್ಶಿಸುತ್ತಾರೆ. ಹರಿಶ್ಚಂದ್ರ ಕಥೆಯನ್ನು ಕಥಾವಸ್ತುವಾಗಿ ಆಯ್ದುಕೊಳ್ಳುವುದಕ್ಕೆ ಎದೆಗಾರಿಕೆಯನ್ನು ತೋರಿದ್ದಾನೆ. ಚಿತ್ರ ಕಥನ ರೀತಿ, ಸಂವಾದ ಪದ್ಧತಿ, ನಿರೂಪಣೆ ಎಲ್ಲವನ್ನೂ ಅಳವಡಿಸಿಕೊಂಡು ಕಾವ್ಯ ರಚಿಸಿದ್ದಾನೆಂದು, ಕಾವ್ಯದಲ್ಲಿ ಬರುವ ರಾಜ ರಾಣಿಯರು, ಹರಿಶ್ಚಂದ್ರನ ಸಂಭಾಷಣೆಯಲ್ಲಿ, ಹೊಲತಿಯರ ವಾದವೈಖರಿ ಇವುಗಳು ಹಿಂದೂ ಸಮಾಜದಲ್ಲಿರುವ ಜಾತಿಯ ಪ್ರಶ್ನೆಯನ್ನು ಕವಿ ರಾಘವಾಂಕ ಎತ್ತಿಕೊಂಡಿರುವುದನ್ನು ವಿಶ್ಲೇಷಿಸುತ್ತಾರೆ ಮತ್ತು ಸರ್ವಜ್ಞನನ್ನು ಜನಪದ ಕವಿಯಾಗಿ ಗುರುತಿಸುತ್ತಾರೆ.

ಇದೇ ಕೃತಿಯ ಕೊನೆಯಲ್ಲಿ ಅನುಬಂಧದಲ್ಲಿ ಸೂಫಿ ಮತದ ಬಗ್ಗೆ ಲೇಖನವಿದೆ. ಈ ಹಿನ್ನೆಲೆಯಲ್ಲಿ ವೀರಶೈವ ಸಾಹಿತ್ಯಕ್ಕೆ ಮತ್ತು ಸೂಫಿ ಮತದ ತತ್ವಕ್ಕೆ ಹೋಲಿಕೆಯನ್ನು ನೀಡುವ ಪ್ರಯತ್ನವನ್ನು ಅ. ನ. ಕೃ. ಮಾಡಿದ್ದಾರೆ. ಬಹಳ ಮುಖ್ಯವಾಗಿ ವೀರಶೈವ ಸಾಹಿತ್ಯವನ್ನು ವೈಭವೀಕರಿಸದೆ ವಸ್ತು ನಿಷ್ಠವಾಗಿ ವಿಮರ್ಶಿಸುವುದರೊಂದಿಗೆ ವೀರಶೈವ ಸಾಹಿತ್ಯದ ತಾತ್ವಿಕತೆಯ ಅಂಶಗಳನ್ನು ಮಂಡಿಸುತ್ತಾರೆ.

ಸಾಹಿತ್ಯ ಮತ್ತು ಜೀವನ – ೧೯೪೪

ಕನ್ನಡ ಸಾಹಿತ್ಯ ಮತ್ತು ಜೀವನವನ್ನು ಪ್ರತಿಬಿಂಬಿಸುವ ಗ್ರಂಥವಾಗಿ ೧೯೪೪ರಲ್ಲಿ ಈ ಗ್ರಂಥವನ್ನು ಪ್ರಕಟಿಸಿದರು. ಇದೊಂದು ಪ್ರಬಂಧಗಳ ಸಂಕಲನ. ಇದರಲ್ಲಿ ಒಟ್ಟು ೧೨ ಪ್ರಬಂಧಗಳಿದ್ದು ಈ ಹನ್ನೆರಡು ಪ್ರಬಂಧಗಳಲ್ಲಿ ಕನ್ನಡ ಸಾಹಿತ್ಯವನ್ನು ಕುರಿತಂತೆ ಬರೆದ ಪ್ರಬಂಧಗಳಾಗಿವೆ. 'ಬೆಳೆಯುತ್ತಿರುವ ಕನ್ನಡ ಸಾಹಿತ್ಯ' ಎಂಬ ಪ್ರಬಂಧದಲ್ಲಿ ಪಂಪನಿಂದ ಆರಂಭಗೊಂಡ ಕಾವ್ಯಗಳಲ್ಲಿ ಸಂಸ್ಕೃತ ಸಾಹಿತ್ಯದ ಪ್ರಭಾವವಿದ್ದು ಅದು ಕಾಲಕ್ರಮೇಣ ನಯಸೇನ ಮತ್ತು ಹರಿಹರ ಕಾಲಘಟ್ಟದಲ್ಲಿ ಅದರಿಂದ ಹೊರಬಂದಿದ್ದು, ೧೨ನೇ ಶತಮಾನದಲ್ಲಿ ಬಸವಣ್ಣನಿಂದ ಉಂಟಾದ ವಚನ ಸಾಹಿತ್ಯ, ಸಾಮಾಜಿಕ ಚಳವಳಿಗಳು ಚಂಪೂವಿನ ಸಂಕೋಲೆಗಳಿಂದ ಕನ್ನಡ ಸಾಹಿತ್ಯವನ್ನು ಬಿಡಿಸಿದ ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ ಮೊದಲಾದ ಕವಿಗಳ ಭಿನ್ನ ದಾರಿ.

ಸರ್ವಜ್ಞನ ತ್ರಿಪದಿಗಳು, ಪುರಂದರಾದಿಗಳ ದಾಸರ ಕೀರ್ತನೆಗಳು, ೧೨ನೇ ಶತಮಾನದ ವಚನಗಳನ್ನು ಬಿಟ್ಟರೆ ಧರ್ಮದ ವಿಚಾರಗಳನ್ನು ಬಿಟ್ಟು, ಜನಜೀವನದ ಸಂಬಂಧವೇ ಸಾಹಿತ್ಯದಲ್ಲಿ ಕಾಣುವುದಿಲ್ಲ. ಇದಕ್ಕೆ ಕಾರಣ ಕನ್ನಡ ಸಾಹಿತ್ಯದ ಮೇಲೆ ಸಂಸ್ಕೃತ ಸಾಹಿತ್ಯದ ಪ್ರಭಾವವು ಇದ್ದಿರಬಹುದು ಮತ್ತು ಧರ್ಮವು ಪ್ರಭಾವಿಸಿರಬಹುದು ಎಂಬುದಾಗಿ ಅ. ನ. ಕೃ. ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಸಂಸ್ಕೃತ ಸಾಹಿತ್ಯ ಮತ್ತು ಧರ್ಮ ಹೇಗೆ ಪ್ರಭಾವಿಸಿದೆ ಎಂಬುದನ್ನು ವಿಶ್ಲೇಷಿಸಿದ್ದಾರೆ.

'ಕನ್ನಡ ನಾಡಿಗೆ ಬೇಕಾದ ಸಾಹಿತ್ಯ' ಎಂಬ ಲೇಖನದಲ್ಲಿ ಸಾಹಿತ್ಯವೆಂಬುದು ಒಂದು ಕಾಲಘಟ್ಟದ ಪರಿಸ್ಥಿತಿಯ ತೊಡಕಿನಲ್ಲಿ ಸಿಲುಕಿಕೊಂಡು ಇರಬಾರದು. ಮರಾಠಿ ಸಾಹಿತ್ಯದಲ್ಲಿ ಕಥೆ ಕಾದಂಬರಿಗಳು ಹೇರಳವಾಗಿವೆ. ಅದರೆ ಕನ್ನಡದಲ್ಲಿ ಆ ರೀತಿಯ ಪರಿಸ್ಥಿತಿ ಇಲ್ಲ. ಎಲ್ಲೋ ಕಾವ್ಯಗಳಲ್ಲಿ ಕುವೆಂಪು, ಬೇಂದ್ರೆ, ಶಂಕರ ಭಟ್ಟ ಮೊದಲಾದವರು ಉತ್ತಮವಾದುದನ್ನು ಬರೆದುದು ಬಿಟ್ಟರೆ ಉಳಿದವರು ಅಷ್ಟು ಯಶಸ್ವಿಯಾಗಲಿಲ್ಲವೆಂದೂ, ಸಣ್ಣ ಕಥೆಗಳಲ್ಲಿಯೂ ಮಾಸ್ತಿಯವರನ್ನು ಬಿಟ್ಟರೆ ಉಳಿದವರು ಅಷ್ಟಾಗಿ ಯಶಸ್ವಿಯಾಗದೇ ಹೋದದ್ದು, ಸಾಹಿತ್ಯದ ಬೆಳವಣಿಗೆಗೆ ತೊಡಕಾದ ಸಂಗತಿಯಾಗಿ ಕಾಣುವರು. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರಕಾಶಕರ ಕೊರತೆ ಕಂಡು ಬಂದರೆ, ಕಾದಂಬರಿಗಳ ಬಗ್ಗೆ ಲೇಖಕರ ಕೊರತೆಯನ್ನು ಕಾಣುವಂತಹ ವಿಚಾರದ ಜೊತೆಗೆ ಅ. ನ. ಕೃ. ಕನ್ನಡದಲ್ಲಿ ಕಾದಂಬರಿಕಾರರ ಅವಶ್ಯಕತೆ ಎಷ್ಟು ಇದೆ ಎಂಬುದನ್ನು ವಿಶ್ಲೇಷಿಸುತ್ತಾರೆ.

ಹಳ್ಳಿಗಳಲ್ಲಿ ಕರ್ನಾಟಕ ಸಂಘಗಳನ್ನು ಸ್ಥಾಪಿಸುವ ಮೂಲಕ ಸಾಹಿತ್ಯವನ್ನು ಕನ್ನಡ ನಾಡಿನ ಎಲ್ಲರಿಗೂ ದೊರೆಯುವಂತೆ ಮಾಡಬೇಕೆಂದು, ವಿಮರ್ಶಕನ ಕಾರ್ಯಗಳು ಹೇಗಿರಬೇಕೆಂದು ತಾತ್ವೀಕರಿಸುವುದು ಮಾತ್ರವಲ್ಲದೆ ಲಕ್ಷ್ಮೀಶನ 'ಸೀತಾರಾಮರು' ಎಂಬ ಲೇಖನದಲ್ಲಿ ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಬರುವ ಸೀತಾ-ರಾಮರ ಪಾತ್ರಗಳನ್ನು ವಿಮರ್ಶಿಸುತ್ತಾರೆ. ಲಕ್ಷ್ಮೀಶ ಕವಿಯು ಸೀತಾರಾಮರನ್ನು ದೈವಿಕ ವ್ಯಕ್ತಿಗಳನ್ನಾಗಿ ನೋಡುತ್ತಾನೋ ಅಥವಾ ಮಾನವ ರೂಪಿ ದೇವತೆಗಳನ್ನಾಗಿ ನೋಡುತ್ತಾನೋ ಈ ಕಾವ್ಯದಿಂದ ಖಚಿತವಾಗಿ ತಿಳಿಯುವುದಿಲ್ಲವೆಂದು ವಿಶ್ಲೇಷಿಸುತ್ತಾರೆ. ಸೀತೆಯ ಮೇಲೆ ಅಪವಾದದಿಂದ ಅವಳನ್ನು ಪರಿತ್ಯಾಗಕ್ಕೆ ಬರುವ ನಿರ್ಧಾರ ಮಾಡುವ ರಾಮ ಬಹಳ ಮುಖ್ಯವಾಗಿ ಇಲ್ಲಿ ರಾಜ್ಯಕ್ಕೆ ಅಸ್ಥಿಭಾರ ಪ್ರಜೆಗಳು, ಅವರ ಅಭಿಪ್ರಾಯಕ್ಕೆ ರಾಮ ಸೀತೆಯನ್ನು ಪರಿತ್ಯಾಗ ಮಾಡಲು ನಿರ್ಧರಿಸಿದನೆಂದು ನಿರಪರಾಧಿಯಾದ ಸೀತೆಯನ್ನು ಕಾಡಿಗೆ ಕಳುಹಿಸುವಾಗ ರಾಮಚಂದ್ರ ಸೀತೆಯನ್ನು ಮಾತನಾಡಿಸುವುದಿಲ್ಲ. ಮಾತನಾಡಿಸಿದರೆ ಈ ಸಂದರ್ಭದಲ್ಲಿ ತನ್ನ ನಿಜ ಭಾವನೆಯನ್ನು ವ್ಯಕ್ತಪಡಿಸದೆ ಹೇಗೆ ಮಾತನಾಡಿಸುತ್ತಿದ್ದಾನೆಂಬ ಒಂದು ಸುಂದರ ಸನ್ನಿವೇಶವನ್ನು ಲಕ್ಷ್ಮೀಶನು ಉಪಯೋಗಿಸಿಕೊಂಡಿಲ್ಲ ಎಂಬುದಾಗಿ ಪಾತ್ರಗಳನ್ನು, ಸನ್ನಿವೇಶಗಳನ್ನು ಕವಿಯ ದೃಷ್ಟಿಕೋನವನ್ನು ವಿಮರ್ಶಿಸುತ್ತಾರೆ. ರಾಮನ ಜೊತೆ ಲವಕುಶರು ಅಯೋಧ್ಯೆಗೆ ಹೊರಟು ಹೋದಾಗ ಅವರು ತಾಯಿಗೆ ಒಂದು ಮಾತನ್ನು ಯಾಕೆ ಹೇಳಲಿಲ್ಲ, ರಾಮ ಇಷ್ಟು ವರ್ಷಗಳ ನಂತರ ಸೀತೆಯನ್ನು ಕಂಡರೂ ಕಾಣದ ಹಾಗೆ ಹೋದುದು ಏಕೆ? ಎಂಬುದಾಗಿ ಚಿತ್ರಿಸದೆ ಲಕ್ಷ್ಮೀಶನ ಕವಿ ಕಾವ್ಯದ ಉತ್ತರ ಭಾಗವನ್ನು ಸಮಂಜಸವಾಗಿ ಚಿತ್ರಿಸಿಲ್ಲದ ವಿಚಾರವನ್ನು ಗುರುತಿಸುತ್ತಾರೆ.

ಕನ್ನಡದಲ್ಲಿ ಸಣ್ಣ ಕಥೆಗಳ ವಿಷಯವಾಗಿ ನಾಟಕ ಮತ್ತು ಸಾಮಾಜಿಕ ನಾಟಕಗಳ ಪ್ರಾಮುಖ್ಯತೆಯನ್ನು, ರವೀಂದ್ರರ ನಾಟಕಗಳನ್ನು, ಅವರ ಧೋರಣೆ ಮೊದಲಾದವುಗಳನ್ನು

ವಿಮರ್ಶಿಸುತ್ತಾರೆ. ಇಲ್ಲಿ ಅ. ನ. ಕೃ. ರವರ ವಿಮರ್ಶಾ ದೃಷ್ಟಿಕೋನವನ್ನು ಸಾಹಿತ್ಯ ಮತ್ತು ಜೀವನ ಎಂಬ ಪುಸ್ತಕದ ಲೇಖನಗಳ ಹಿನ್ನೆಲೆಯಲ್ಲಿ ಗುರುತಿಸಬಹುದು.

ನನ್ನನ್ನು ನಾನೇ ಕಂಡೆ – ೧೯೪೪

ಕನ್ನಡದಲ್ಲಿ ಪತ್ರಿಕಾ ವೃತ್ತಿ ಬೆಳೆದ ಹಾಗೆ ವ್ಯಕ್ತಿಗಳನ್ನು ಸಂದರ್ಶಿಸಿ ಅವರ ವಿಚಾರಗಳನ್ನು ಸಂಗ್ರಹಿಸುವ ರೀತಿಯು ಬೆಳೆದು ಬಂದಿದೆ. ಆದರೆ ಅ. ನ. ಕೃ. ರವರು ಸ್ವಸಂದರ್ಶನದ ಮೂಲಕ ತಮ್ಮನ್ನು, ತಮ್ಮ ವಿಚಾರಗಳನ್ನು, ಸ್ವವಿಮರ್ಶೆಯನ್ನು ಮಾಡಿಕೊಂಡ ಬರಹ ರೂಪದ ಕೃತಿಯೇ 'ನನ್ನನ್ನು ನಾನೇ ಕಂಡೆ' ಎಂಬುದಾಗಿದೆ. ಇದನ್ನು ೧೯೪೪ರಲ್ಲಿ ಪ್ರಕಟಿಸಿದರು.

ಕಾದಂಬರಿ ಮತ್ತು ಕಾದಂಬರಿಕಾರ ಎಂಬ ಲೇಖನವು ಕೂಡಾ ಸ್ವಸಂದರ್ಶನದ ಮಾದರಿಯಾಗಿದೆ. ಅಲ್ಲಿ ಕಾದಂಬರಿ ಮತ್ತು ಕಾದಂಬರಿಕಾರನಾಗಿ ಮಾತ್ರ ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ಸಂದರ್ಶಿಸಿದರೆ ಇಲ್ಲಿ ಹಲವಾರು ವಿಚಾರಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾರೆ. ಇದರಲ್ಲಿ ಒಟ್ಟು ೮ ಸ್ವಸಂದರ್ಶನಗಳಿದ್ದು ಅಂದಿನ ಸಮಕಾಲೀನ ಸಮಾಜದಲ್ಲಿ ನಡೆದ ಪ್ರಮುಖ ವಿಚಾರಗಳನ್ನು ಸಾಹಿತ್ಯದ ಹಿನ್ನೆಲೆಯಲ್ಲಿ ಕನ್ನಡ ಭಾಷೆ, ಮಾಧ್ಯಮ, ಕಿರಿಯ ಸಾಹಿತಿಗಳೊಡನೆ ಸಂಬಂಧ, ಹಿಂದಿ ಸಮಸ್ಯೆ, ಧರ್ಮಾಧಾರಿತವಾಗಿ ನಿರ್ಮಾಣವಾದ ಪಾಕಿಸ್ತಾನ, ಸಮಾಜದಲ್ಲಿ ಕೋಮುವಾದದ ಭೂತ, ಸ್ವಾತಂತ್ರ್ಯ ಹೋರಾಟದಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ, ಮಾಧ್ಯಮವಾಗಿ ಕನ್ನಡ ಮತ್ತು ಅವರ ಸಾಹಿತ್ಯರತ್ನ ಕಾದಂಬರಿಯ ವಿಮರ್ಶೆ, ಹೀಗೆ ಭಿನ್ನ ವಿಚಾರಗಳನ್ನು ವಿಮರ್ಶೆಗೆ ಒಳಪಡಿಸುತ್ತಾರೆ.

ವೀರಶೈವ ಸಾಹಿತ್ಯದ ಬಗ್ಗೆ ಹೆಚ್ಚು ಅಧ್ಯಯನ ಮಾಡಿದ ಅ. ನ. ಕೃ. ರವರು ಬಸವಣ್ಣನವರ ಕೆಲವೊಂದು ವಚನಗಳನ್ನು ಕೂಡಾ ಅಭ್ಯಯಿಸಿದ್ದಾರೆ. ಅದರಲ್ಲಿ ಕೆಲವೊಂದು ವಚನಗಳಲ್ಲಿ ತನ್ನನ್ನು ತಾನೇ ವಿಮರ್ಶಿಸಿಕೊಳ್ಳುವ ಬಸವಣ್ಣನವರ ಹಾಗೆ ಅ. ನ. ಕೃ. ರವರು ಕೂಡಾ ನನ್ನನ್ನು ನಾನೇ ಕಂಡೆ ಎಂಬ ಕೃತಿಯಲ್ಲಿ ಸ್ವ ಸಂದರ್ಶನದ ಮೂಲಕ ತಮ್ಮನ್ನು ತಾವೇ ವಿಮರ್ಶಿಸಿಕೊಳ್ಳುವ ಧಾಟಿ ಕನ್ನಡ ಸಾಹಿತ್ಯದಲ್ಲಿ ಹೊಸ ಬಗೆಯದು.

ಅಖಂಡ ಕರ್ನಾಟಕ – ೧೯೪೬

ಕರ್ನಾಟಕ ಏಕೀಕರಣದ ಅಗತ್ಯತೆಯನ್ನು ಸಾರುವ, ಆ ಮೂಲಕ ಕನ್ನಡ ನಾಡು ಒಂದಾಗದೆ ಭಾಷಿಕವಾಗಿ, ಸಾಹಿತಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ ಎಂಬುದರ ಜೊತೆಗೆ ೨೪ ಸಂಕ್ಷಿಪ್ತ ಲೇಖನಗಳಲ್ಲಿ ಏಕೀಕೃತ ಕರ್ನಾಟಕವಾಗಬೇಕೆಂಬ ಹಂಬಲ. ಜೊತೆಗೆ ಕನ್ನಡ ನಾಡಿನಲ್ಲಿಯೇ ಕನ್ನಡ ಭಾಷೆಯ ಉಳಿವಿಗೆ ಅಡ್ಡಿಯಾಗಿರುವ ಮಂಗಳೂರಿನಲ್ಲಿ ಕ್ರೈಸ್ತ ಕೊಂಕಣಿ ಪಾದ್ರಿಗಳು ಶಿಕ್ಷಣ ಸಂಸ್ಥೆಯಲ್ಲಿ ಕನ್ನಡವನ್ನು ಬೋಧಿಸುವ ಬಗ್ಗೆ ನಿರಾಸಕ್ತಿ, ಕೊಳ್ಳೆಗಾಲ ಕನ್ನಡದಲ್ಲಿ ತಮಿಳಿನ ಪ್ರಭಾವ, ಕರ್ನಾಟಕ ಪ್ರಾಂತ್ಯದಲ್ಲಿ ಮೈಸೂರಿನ ಸ್ಥಾನ, ಉತ್ತರ ಕರ್ನಾಟಕದಲ್ಲಿರುವ ಆಶ್ರಿತ ಸಂಸ್ಥಾನಗಳಲ್ಲಿ ಕನ್ನಡದ ಸ್ಥಾನ, ಮುಧೋಳ ಸಂಸ್ಥಾನದಲ್ಲಿ ಕನ್ನಡ ವಿರೋಧಿ ಧೋರಣೆ, ಏಕೀಕರಣದ ಹೋರಾಟಕ್ಕಾಗಿ ಕನ್ನಡ ಬಾವುಟದ ಅಗತ್ಯತೆ, ಮೈಸೂರು ನ್ಯಾಯ ವಿಧಾಯಕ ಸಭೆಯಲ್ಲಿ ಕನ್ನಡದ ಅನುಷ್ಠಾನ ಇವೆಲ್ಲಾ ವಿಚಾರಗಳನ್ನು ಕರ್ನಾಟಕದ

ಏಕೀಕರಣದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಸ್ಥಾಪನೆಯ ಉದ್ದೇಶದ ಅವಶ್ಯಕತೆಯನ್ನು ಸಾರುವ ಅ. ನ. ಕೃ. ರವರು ಕನ್ನಡ ನಾಡಿನ ಏಕೀಕರಣಕ್ಕೆ ಇರುವ ಅಡ್ಡಿ ಆತಂಕಗಳನ್ನು ಚರ್ಚಿಸುತ್ತಾರೆ.

ಕರ್ನಾಟಕ ಕಲಾವಿದರು ಭಾಗ ೧ – ೧೯೪೬

ಒಂದು ದೇಶದ ಸಂಸ್ಕೃತಿಯನ್ನು ತಿಳಿಯಲು ರಾಜಕೀಯ ಪ್ರಗತಿಯಿಂದ ಸಾಧ್ಯವಿಲ್ಲ. ಆ ದೇಶದ ಕಲೆ ಮತ್ತು ಸಾಹಿತ್ಯದ ಬೆಳವಣಿಗೆಯಿಂದ ಗುರುತಿಸಬಹುದು. ಕನ್ನಡ ನಾಡಿನ ಸಂಸ್ಕೃತಿಯ ರಾಯಭಾರಿಗಳಾಗಿ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಕಾಣಿಕೆ ನೀಡಿದ ಪ್ರಮುಖ ಕಲಾವಿದರನ್ನು ಕನ್ನಡ ನಾಡಿನ ಜನತೆಗೆ ಪರಿಚಯಿಸುವ ಉದ್ದೇಶದಿಂದ ಬರೆದ ಕೃತಿಯೇ ಕರ್ನಾಟಕ ಕಲಾವಿದರು ಭಾಗ ೧. ಇದೊಂದು ವ್ಯಕ್ತಿ ಚಿತ್ರಣವನ್ನು ನೀಡುವ ಕೃತಿಯಾಗಿದೆ. ಇದನ್ನು ೧೯೪೬ರಲ್ಲಿ ಪ್ರಕಟಿಸಿದರು.

ಈ ಕೃತಿಯ ಮುನ್ನುಡಿಯಲ್ಲಿ ಕಲೆ ಮತ್ತು ಕಲಾವಿದನ ಉದ್ದೇಶವನ್ನು ಸ್ಪಷ್ಟಪಡಿಸುವ ಅ. ನ. ಕೃ. ರಾಜಕೀಯ ಉದ್ದೇಶದಿಂದ ಸಂಸ್ಕೃತಿಯನ್ನು ಅರಿಯಬಾರದೆಂದು, ಐರ್ಲೆಂಡ್, ರಷ್ಯಾದ ಸಾಂಸ್ಕೃತಿಕ ಆಂದೋಲನ ರಾಜಕೀಯ ಪಡಿನೆಳಲಾಗಿದ್ದು ಆ ಧೋರಣೆಯಲ್ಲಿ ನಮ್ಮ ಕಲೆಗಳು ಹೊಂದಿಲ್ಲವೆಂದು, ವ್ಯಕ್ತಿ, ಸಮಾಜ, ಜನಾಂಗಗಳ ಸರ್ವತೋಮುಖ ಅಭಿವೃದ್ಧಿಗೆ ಕಲೆಗಳು ಪೋಷಕವಾಗಿವೆ ಹಾಗೂ ಸಂಸ್ಕೃತಿಯ ಬೆಳವಣಿಗೆಗೆ ಪೂರಕವಾದುದು.

ಮಲ್ಲಿಕಾರ್ಜುನ ಮನ್ಸೂರ್, ಡಿ ಸುಬ್ಬರಾಮಯ್ಯನವರ ಸಂಗೀತ ಪ್ರೇಮವನ್ನು ಅವರ ಬದುಕಿನ ಹಿನ್ನೆಲೆಯಲ್ಲಿ ಅವರು ಸಂಗೀತ ಕಲಾ ಪ್ರಕಾರವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಪ್ರಯತ್ನವಾಗಿ ನೋಡಬೇಕು. ಕನ್ನಡದ ಕೀರ್ತನೆಗಳನ್ನು, ವಚನಗಳನ್ನು ಸಂಗೀತದಲ್ಲಿ ಅಳವಡಿಸುವ ಸಂಪ್ರದಾಯ ಬೆಳೆಯಲಿ ಎಂಬ ಧೋರಣೆ ಈ ಲೇಖನದಲ್ಲಿದೆ.

ವೈಣಿಕ ಪ್ರವೀಣನಾಗಿ ವೆಂಕಟಗಿರಿಯಪ್ಪ, ಚಿತ್ರಕಾರ ಅಮೀನ್ ಸಾಬ್ ಕಮಾಡೋಳಿಯವರ ಚಿತ್ರಗಳಲ್ಲಿ ಪ್ರಕೃತಿಯ ನೋಟಗಳು, ಇವರು ಮುಸಲ್ಮಾನರಾದರೂ ಕಲೆ ಎಂಬುದಕ್ಕೆ ಜಾತಿ ಮತ ಪಂಥಗಳಿಗಿಂತ ಮಿಗಿಲಾದದ್ದು ಎಂಬುದಕ್ಕೆ ಅವರು ಚಿತ್ರಿಸಿರುವ ಲಕ್ಷ್ಮೇಶ್ವರ, ಸೋಮನಾಥ ದೇವಾಲಯ, ಹಂಪೆಯ ಕಲ್ಲಿನ ರಥ ಚಿತ್ರಗಳು ಉತ್ತಮ ಉದಾಹರಣೆಯಾಗಿವೆ. ಲಂಬಾಣಿ ಮುದುಕಿಯ ಚಿತ್ರಣ ನೈಜವಾಗಿ ಮೂಡಿರುವ ಪರಿಯನ್ನು ಅ. ನ. ಕೃ. ವಿಶ್ಲೇಷಿಸುತ್ತಾರೆ.

ವಾದ್ಯವಾದನದ ಜೊತೆಗೆ ಹಿಂದೂಸ್ಥಾನಿ ಹಾಡುಗಾರರಾದ ದೇವೇಂದ್ರಪ್ಪ, ಕರ್ನಾಟಕಕ್ಕೆ, ಕರ್ನಾಟಕತ್ವದ ಕೀರ್ತಿ ಕೊಟ್ಟವರಾಗಿ ಬಿಡರಂ ಕೃಷ್ಣಪ್ಪ, ದೇವೇಂದ್ರಪ್ಪನವರನ್ನು ಕಾಣಬಹುದು. ವೀಣಾ ವಾದಕರಾದ ಬೇಲೂರಿನ ಕೇಶವಮೂರ್ತಿ, ಕುಂದಗೋಳದ ರಾಮರಾಯರು (ಇವರು ಸವಾಯ್ ಗಂಧರ್ವರೆಂದೇ ಹೆಸರಾದವರು), ನಟಶಿರೋಮಣಿ ಎ. ವಿ. ವರದಾಚಾರ್ಯರು, ವಾದ್ಯವಾದನ ನಿಪುಣ ವಾಸುದೇವ, ಆಸ್ಥಾನ ವಿದ್ವಾನ್ ಎಸ್. ರಾಮರಾಯರು, ಗಾಯನಾಚಾರ್ಯರಾದ ರಾಮಕೃಷ್ಣ ಬೂವಾ ವೈಯ್ಗೆ, ವೀಣೆಯ ರಾಜಾರಾಯರು ಇವರುಗಳನ್ನು ಕಲೆಯ ಹಿನ್ನೆಲೆಯಲ್ಲಿ ಪರಿಚಯಾತ್ಮಕವಾಗಿ ವಿವರಿಸುತ್ತಾರೆ.

ನಟಶೇಖರ ಮಹಮ್ಮದ್ ಪೀರ್‌ರವರು ನಟಿಸಿದ ಷಹಜಹಾನ್ ಮತ್ತು ಗೌತಮ ಬುದ್ಧ ನಾಟಕಗಳಲ್ಲಿ ನಟನಗಾರನಾಗಿ ನಟಿಸಿದ ರೀತಿ, ನಾಟಕವನ್ನು ಅ. ನ. ಕೃ. ವಿಶ್ಲೇಷಿಸುತ್ತಾರೆ. ಹಿಂದು–

ಮುಸ್ಲಿಂ ಎಂದು ಜಗಳಾಡುವವರು ಶಿಶುನಾಳ ಷರೀಫ, ಚಿತ್ರಗಾರ ಅಮೀನ್ ಸಾಬ್ ಕಮಡೋಳಿ, ನಟಶೇಖರ ಮಹಮ್ಮದ್ ಪೀರ್‌ರವರಿಂದ ಪಾಠ ಕಲಿಯಬೇಕೆಂದು, ಜಾತ್ಯಾತೀತತೆಯ ದೃಷ್ಟಿಕೋನದ ಜೊತೆಗೆ ಕಲೆಗೆ ಯಾವುದೇ ಜಾತಿ, ಮತ ಎಂಬ ಬೇಧಭಾವವಿಲ್ಲದ್ದು, ಕನ್ನಡ ನಾಡಿನ ಸಂಸ್ಕೃತಿ ಕಲೆಯ ಉಳಿವಿನಲ್ಲಿ ಮುಸ್ಲಿಂ ಸಮುದಾಯ ನೀಡಿದ ಕಲಾ ಬೆಳವಣಿಗೆಯ ಕೊಡುಗೆಯನ್ನು ಸೂಕ್ಷ್ಮವಾಗಿ ತಿಳಿಸುತ್ತಾರೆ.

ನಾಟಕರತ್ನ ಗುಬ್ಬಿ ವೀರಣ್ಣರವರ ಕಲಾಸೇವೆಯನ್ನು ತಿಳಿಸುವ ಅ. ನ. ಕೃ. ಅಂದಿನ ಕಾಲಘಟ್ಟದ ನಾಟಕದ ದುಃಸ್ಥಿತಿಯ ಜೊತೆಗೆ ನಟರ ಬದುಕಿನ ಕಷ್ಟ, ನಟರೇ ಡೇರಾವನ್ನು ಗುಂಡಿ ತೋಡಿ ಸಿದ್ಧಪಡಿಸುತ್ತಿದ್ದದ್ದು, ತಮಟೆ ಹೊಡೆದು ನಾಟಕದ ಹೆಸರು ಹೇಳುತ್ತಿದ್ದದ್ದು, ಯಾವ ಸಮಯದಲ್ಲಿ ನಾಟಕದ ಆರಂಭ. ಒಂದೊಂದು ನಾಟಕದಲ್ಲಿ ೮೦-೧೦೦ ಹಾಡುಗಳಿದ್ದು ಪ್ರತಿ ನಾಟಕದಲ್ಲೂ ರಾಜ, ಮಂತ್ರಿ, ಸೇನಾಪತಿ ಈ ತ್ರಿಮೂರ್ತಿಗಳೇ ಮೊದಲು ವೇದಿಕೆಯ ಪ್ರವೇಶ ಪಡೆಯಬೇಕಾದುದು, ಉನ್ನತ ಹುದ್ದೆಯ ಅಧಿಕಾರಿಗಳು ಅವರೇ ಕುರ್ಚಿಯನ್ನು ತೆಗೆದುಕೊಂಡು ಬಂದು ನಾಟಕ ನೋಡುವುದು, ಇವೆಲ್ಲವನ್ನೂ ಪರಿಚಯಾತ್ಮಕವಾಗಿ ತಿಳಿಸುವುದು ಮಾತ್ರವಲ್ಲದೆ ಅಂದಿನ ಕನ್ನಡ ನಾಡಿನಲ್ಲಿ ನಾಟಕದ ಪರಿಸ್ಥಿತಿಯನ್ನು ಅನಾವರಣಗೊಳಿಸುತ್ತಾರೆ. ಗುಬ್ಬಿ ವೀರಣ್ಣನವರು ೧೯೭೩ರಲ್ಲಿ ಮೈಸೂರಿನಲ್ಲಿ 'ಸದಾರಮೆ' ನಾಟಕದ ಮೂಲಕ ಕಳ್ಳನ ಪಾತ್ರದ ಭಿನ್ನ ನಟನ ಶೈಲಿ ರೂಪಿಸಿದ್ದು, ತಮಿಳುನಾಡಿನಲ್ಲಿ ಕನ್ನಡ ನಾಟಕಗಳನ್ನು ಅಭಿನಯಿಸುವ ಮೂಲಕ ಕನ್ನಡ ಪ್ರೇಮವನ್ನು ಬೆಳೆಸಲು ಪ್ರೇರೇಪಿಸಿದರು. 'ಕುರುಕ್ಷೇತ್ರ' ನಾಟಕವನ್ನು ರಂಗಭೂಮಿಗೆ ಅಳವಡಿಸಬೇಕಾದ ಅಂದಿನ ಕಾಲದಲ್ಲಿ ೫೦-೬೦ ಸಾವಿರ ಖರ್ಚು ಮಾಡಿ ಸಲಕರಣೆ ತಂದು ಹೊಸಹೊಸ ದೃಶ್ಯಗಳನ್ನು ಅಳವಡಿಸಿದರು. ಆ ಮೂಲಕ ಕನ್ನಡ ನಾಡಿನ ನಾಟಕಗಳಿಗೆ ಭಿನ್ನವಾದ, ನಾಟಕಕ್ಕೆ ಅನುಗುಣವಾಗಿ ಆಕರ್ಷಕವಾದ ಪೋಷಾಕು ಮೊದಲಾದ ಸಲಕರಣೆ ತಂದು ನಾಟಕ ಮತ್ತು ನಾಟಕ ಕಂಪೆನಿಗಳು ಬೆಳೆಯಲು ನೀಡಿದ ಕೊಡುಗೆಯನ್ನು ಅ. ನ. ಕೃ. ವಿಶ್ಲೇಷಿಸುತ್ತಾರೆ.

ಪೊರಕೆ – ೧೯೪೬

ಪೊರಕೆ ಎಂಬುದು ಅ. ನ. ಕೃ. ೧೯೪೬ರಲ್ಲಿ ಬರೆದ ಹರಟೆಗಳ ಸಂಕಲನ. ಹೆಸರೇ ಸೂಚಿಸುವಂತೆ ಪೊರಕೆಯನ್ನು ಕಸಗುಡಿಸುವ ಸಾಧನವಾಗಿ ನಾವು ಬಳಸುತ್ತೇವೆ. ಇಲ್ಲಿ ಲೇಖಕರು ಹರಟೆಗೆ ತೆಗೆದುಕೊಂಡ ವಿಷಯಗಳು ಸಮಾಜದಲ್ಲಿನ ಸಮಸ್ಯೆಗಳನ್ನು ಗುಡಿಸುವ ಸಾಧನದ ಅನೇಕ ವಿಷಯಗಳಾಗಿವೆ. ಇದರಲ್ಲಿ ಒಟ್ಟು ೧೬ ಪ್ರಬಂಧಗಳಿದ್ದು ಭಿನ್ನ ಭಿನ್ನ ವಿಚಾರಗಳನ್ನು ಈ ಹರಟೆಗಳು ಧ್ವನಿಸುತ್ತವೆ.

ಈ ಹರಟೆಗಳ ಹಿನ್ನೆಲೆಯಲ್ಲಿ ಅ. ನ. ಕೃ. ರವರ ತಾತ್ವಿಕತೆಯನ್ನು ತಿಳಿಯಬಹುದಾಗಿದೆ. 'ಹೊಸದು-ಹಳೆಯದು' ಎಂಬ ಹರಟೆಯಲ್ಲಿ ಗಾದೆಗಳ ಹಿನ್ನೆಲೆಯಲ್ಲಿ ಹೊಸತು ಹಳೆಯದರ ಪ್ರಾಮುಖ್ಯತೆ, ಭಾರತೀಯರು ಹಳೆಯದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡುವ ಮನಃಸ್ಥಿತಿ. ಸಾಹಿತ್ಯವನ್ನಾಗಲೀ, ಕಲೆಯನ್ನಾಗಲೀ ಅಳೆಯುವ ಪ್ರಮುಖ ಮಾನದಂಡಗಳಲ್ಲಿ ಹೊಸತು ಹಳೆಯದರ ತಾತ್ವಿಕತೆಯನ್ನು ಗುರುತಿಸುತ್ತಾರೆ. ಯುರೋಪಿನಲ್ಲಿ ಹಳೆಯದರ ಬಗ್ಗೆ ತಿರಸ್ಕಾರ. ನಮ್ಮ ಜನಕ್ಕೆ ಹಳೆಯದರ ಮೇಲಿನ ಪ್ರೇಮ ಈ ಹಿನ್ನೆಲೆಯಲ್ಲಿ ವಿವರಿಸುತ್ತಾರೆ.

'ರೋಗ' ಎಂಬ ಹರಟೆಯಲ್ಲಿ ನಿರಾಶಾವಾದಿಯಾದ ವ್ಯಕ್ತಿ ಆಶಾವಾದಿಯಾಗಬೇಕಾದರೆ ಅವನು ರೋಗಗಳಿಗೆ ತುತ್ತಾಗಬೇಕೆಂದು, ಆಗ ಜನರ, ಸಂಬಂಧಿಕರ, ಸಮಾಜದ ಕರುಣೆ, ಸ್ನೇಹ, ಅನುಕಂಪದಿಂದ ನಿರಾಶಾವಾದಿಯಾದ ವ್ಯಕ್ತಿ ಆಶಾವಾದಿಯಾಗುತ್ತಾನೆ ಎಂಬ ಸಲಹೆ. ಆಧ್ಯಾತ್ಮಿಕ ಪ್ರವೃತ್ತಿಗಳು ಮೂಡುವುದು ಮನುಷ್ಯನ ರೋಗಗ್ರಸ್ತನಾದಾಗಷ್ಟೇ ಎಂಬ ವಾಸ್ತವ ವಿಚಾರ. ದೈಹಿಕ ರೋಗ, ಸಾಮಾಜಿಕ ರೋಗ, ಧಾರ್ಮಿಕ ರೋಗ ಎಂಬ ರೋಗದ ವಿವಿಧ ಮಾದರಿಗಳನ್ನು ಓದುಗರ ಮುಂದೆ ಇಡುತ್ತಾರೆ.

'ಪೊರಕೆ' ಎಂಬ ಹರಟೆಯಲ್ಲಿ ಕಸಗುಡಿಸುವ ಸಾಧನ ಮಾತ್ರವಲ್ಲದೆ ಆಧ್ಯಾತ್ಮಿಕ ಸಾಧನೆಗೆ ಅವಶ್ಯಕವೆಂಬುದನ್ನು ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ 'ಅಹಂಕಾರ' ಹೋಗಲು ಸಾಧನವಾಗಿ ಬಳಸಿದರು. ಗಾಂಧೀಜಿಯವರು ಜಾತಿ ಮತಗಳ ಗೊಂದಲ ನಿವಾರಣೆಯ ಸಾಧನವಾಗಿ ಪೊರಕೆಯನ್ನು, ಅಸ್ಪೃಶ್ಯತೆಯನ್ನು ಹೊಗಲಾಡಿಸಲು ಅವರು ಪೊರಕೆ ಹಿಡಿದು ಕಸಗುಡಿಸುವ ಕಾರ್ಯಕ್ಕೆ ಮುಂದಾಗಿದ್ದು, ಸಾಮ್ಯವಾದ ಪೊರಕೆಯ ರೂಪದಲ್ಲಿಯೇ ಜನ್ಮ ತಾಳಿದ್ದು ಎಂಬುದಾಗಿ ಪೊರಕೆಯ ಮಹತ್ವವನ್ನು ಸಾರಿದ್ದಾರೆ. ಇದರಿಂದಲೇ ಏನೋ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲರು ತಮ್ಮ ಪಕ್ಷದ ಚಿಹ್ನೆಯಾಗಿ ಪೊರಕೆಯನ್ನು ಬಳಸಿ ರಾಜಕಾರಣದಲ್ಲಿನ ಕಸವನ್ನು ಗುಡಿಸಲು ಪ್ರಯತ್ನಿಸುತ್ತಿರಬಹುದು.

'ಭಾರತದ ವಾಕ್ಚಿತ್ರಗಳು' ಎಂಬ ಹರಟೆಯಲ್ಲಿ ಶ್ರಮಜೀವಿಗಳ ನೆರವಿಲ್ಲದೆ ಬಂಡವಾಳಶಾಹಿಗಳ ಉದ್ಯಮವು ಪ್ರಗತಿ ಹೊಂದುವುದಿಲ್ಲವೆಂದು ಶ್ರಮಜೀವಿಗಳು ವಾಕ್ಚಿತ್ರಗಳನ್ನು ನೋಡಿದ್ದು, ಮಧ್ಯಮ ಮತ್ತು ಕೆಳವರ್ಗದ ಮನೋರಂಜನಾ ಸಾಧನವಾಗಿ, ಜೀವನದ ಸಮಗ್ರ ಪರಿಚಯದೊಂದಿಗೆ ನವಜಗತ್ತಿನ ನಿರ್ಮಾಣಕ್ಕೆ ಸಾಧನವಾಯಿತು. ಚಲನಚಿತ್ರ ಮಾಧ್ಯಮವೆಂಬುದು ನಾಟಕ, ಸಂಗೀತ, ಶಿಲ್ಪ, ಸಾಹಿತ್ಯಕ್ಕೆ ಮಾಡಿರುವ ದಾಳಿ, ಹೆಣ್ಣನ್ನು ಧರ್ಮದೇವತೆಯಾಗಿ ನಿರುಪಯುಕ್ತ ಜೀವಿಯಾಗಿ ತೋರಿಸುವ, ಸಾಮಾಜಿಕ ಜೀವನ ವ್ಯವಸ್ಥೆಯನ್ನು ಹೇಗೆ ನಿಯಂತ್ರಿಸುವ ಸಾಧನವಾಗಿದೆ ಎಂಬುದನ್ನು ವಿಶ್ಲೇಷಿಸುತ್ತಾರೆ. ಅಂದು ಭಾರತದ ವಾಕ್ಚಿತ್ರಗಳು ಇಂದೂ ಚಲನಚಿತ್ರಗಳು ಕಲೆಯಾಗದೆ ಉದ್ಯಮವಾಗಿದೆ, ಈ ಉದ್ಯಮ ಬೆಳೆಯಲು ಶ್ರಮಿಕ ವರ್ಗವೇ ಕಾರಣ ಎಂಬ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ.

'ಶ್ರಾದ್ಧ' ಎಂಬ ಹರಟೆಯಲ್ಲಿ ಶ್ರಾದ್ಧದ ಉದ್ದೇಶ ಸತ್ತವರನ್ನು ಸ್ಮರಿಸಿಕೊಳ್ಳುವ ಮೂಢನಂಬಿಕೆಯ ಆಚರಣೆಯ ಭಾಗವಾಗಿದೆ. ಅನ್ನದಾನ ಮಾಡಬೇಕಾದರೆ ಭಿಕ್ಷುಕರಿಗೆ ಹಾಕಬಾರದೇ? ಶ್ರಾದ್ಧ ಮಾಡಿ ಮನೆಮಂದಿ, ಬಂಧುಗಳೇ ತಿನ್ನಬೇಕೇ? ವಿಚಾರವಾದ ದೇಶದ ಮುಂದಿದ್ದರೂ ಮೌಢ್ಯದ ದಾಸರಾಗಿರುವ ಜನರ ಮನಃಸ್ಥಿತಿಗೆ ಕನ್ನಡಿಯಾಗಿ ಈ ಹರಟೆಯು ಪಿತೃಗಳಿಗೆ ಬೇಕಾದುದುದು ಶ್ರಾದ್ಧವಲ್ಲ ಮುಂದಿನ ಪೀಳಿಗೆ ಆತ್ಮಾಭಿಮಾನಿಯಾಗಿ, ವಿಚಾರ ಪರರಾಗಿ, ಮನುಷ್ಯರಾಗಿ ಬಾಳುವುದು ಎಂಬ ಶ್ರಾದ್ಧ ಸ್ವರೂಪವನ್ನು ಗುರುತಿಸುತ್ತಾರೆ.

'ಮೀಸೆ' ಎಂಬಲ್ಲಿ ಗಂಡಸಿನ ಮೀಸೆಯನ್ನು ಕುರಿತು, 'ಆತ್ಮಹತ್ಯಾ ಯೋಗ' ಎಂಬ ಹರಟೆಯಲ್ಲಿ ಆತ್ಮಹತ್ಯೆಗೆ ಧಾರ್ಮಿಕ ಚೌಕಟ್ಟಿನಲ್ಲಿ ಧನಾತ್ಮಕ ಅಂಶವಿಲ್ಲವೆಂದು, 'ಅಭ್ಯಾಸಗಳು' ಎಂಬ ಹರಟೆಯಲ್ಲಿ ಕೆಟ್ಟ ಅಭ್ಯಾಸವಾಗಿ ಆತ್ಮಪ್ರಶಂಸೆಯನ್ನು ಗುರುತಿಸುವುದು, 'ಮಕ್ಕಳು' ಎಂಬ ಹರಟೆಯಲ್ಲಿ ಮಕ್ಕಳಿಗೆ ಸಮಾಜದಲ್ಲಿರುವ ಪ್ರಾಶಸ್ತ್ಯ, 'ಜಿಪುಣತನ' ಎಂಬ ಹರಟೆಯಲ್ಲಿ ಮನುಷ್ಯನ ಜಿಪುಣತನದ

ಬಗ್ಗೆ, ಬೆಂಗಳೂರಿನ ಪ್ರವಾಸದ ಅನುಭವವನ್ನು 'ನಮ್ಮೂರಿಗೆ ಬನ್ನಿ' ಎಂಬ ಹರಟೆಯಲ್ಲಿ, 'ಸುಳ್ಳು' ಎಂಬ ಹರಟೆಯಲ್ಲಿ ಸುಳ್ಳನ್ನು ಒಂದು ಕಲೆಯಾಗಿ ಮಾಡಿಕೊಂಡವರಲ್ಲಿ ಪತ್ರಕರ್ತರು ಮತ್ತು ರಾಜಕಾರಣಿಗಳನ್ನು ಗುರುತಿಸುತ್ತಾರೆ. ಸುಳ್ಳು ಹೇಳಲು ಕರಗತವಾಗಿರುವುದೇ ಆಂಗ್ಲರ ಕಾರಣದಿಂದ ಎಂಬುದಾಗಿ ವಿಶ್ಲೇಷಿಸುತ್ತಾರೆ.

ಹರಟೆಯ ವಸ್ತುಗಳಿಗೆ ತಕ್ಕಂತೆ ಅ. ನ. ಕೃ. ರವರು ಸಂಕ್ಷಿಪ್ತವಾಗಿ ಭಿನ್ನ ಭಿನ್ನ ಆಯಾಮಗಳಲ್ಲಿ ಆ ವಿಷಯಗಳಿಗೆ ತಕ್ಕಂತೆ ತಮ್ಮ ಪರ-ವಿರೋಧ ವಿಚಾರವನ್ನು ಮಂಡಿಸುತ್ತಾರೆ. ೧೯೪೬ರಲ್ಲಿ ಹರಟೆ ಸಾಹಿತ್ಯವೆಂಬುದು ಅಷ್ಟೊಂದು ಕನ್ನಡ ಸಾಹಿತ್ಯದಲ್ಲಿ ಬೆಳೆಯದಿದ್ದ ಸಂದರ್ಭದಲ್ಲಿ 'ಪೊರಕೆ' ಎಂಬ ಅ. ನ. ಕೃ. ರವರ ಹರಟೆಯು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ.

ಕೈಲಾಸಂ – ೧೯೪೭

ಅ. ನ. ಕೃ. ರವರ ಸಮಕಾಲೀನ ಸಾಹಿತಿಯಾದ, ಸ್ನೇಹಿತರಾದ ಟಿ. ಪಿ. ಕೈಲಾಸಂರವರನ್ನು ಕುರಿತಂತೆ ಬರೆದ ವಿಮರ್ಶಾತ್ಮಕ ಕೃತಿ. ಇದೊಂದು ಜೀವನ ಚರಿತ್ರೆಯಾಗಿ ಕಂಡು ಬಂದರೂ ಇಲ್ಲಿ ಕೈಲಾಸಂರವರ ನಾಟಕಗಳನ್ನು ವಿಮರ್ಶಾತ್ಮಕವಾಗಿ ಪರಿಚಯಿಸುತ್ತಾರೆ. ಕನ್ನಡ ನಾಟಕಗಳ ಪ್ರಾಚೀನತೆಯನ್ನು ಸಂಸ್ಕೃತದ ನಾಟಕಗಳ ಪ್ರಭಾವದಿಂದ ಗುರುತಿಸಬಹುದೇ ಹೊರತು ಗ್ರೀಕ್‌ನಿಂದ ತೆಗೆದುಕೊಳ್ಳಬೇಕಾದ ಕಾರಣವಿರಲಿಲ್ಲವೆಂದು ತಿಳಿಸುತ್ತಾರೆ.

ಭಾಗ ೨ರಲ್ಲಿ ಕೈಲಾಸಂರವರ ಜೀವನ, ಪಾಂಡಿತ್ಯ, ಪಂಡಿತ ತಾರನಾಥರ ಪ್ರಭಾವ, ಗಾಂಧೀಜಿಯವರ ಸಂಪರ್ಕ ಸಹವಾಸ ಕೈಲಾಸಂರವರಿಗೆ ದೊರಕಿದರೆ ಅವರ ಜೀವನದಲ್ಲಿ ಬದಲಾವಣೆಗಳು ಆಗುತ್ತಿದ್ದವೇನೋ ಎಂದು ಅನುಮಾನಿಸುತ್ತಾರೆ. ಅವರ ಬರವಣಿಗೆಯ ಶೈಲಿಯನ್ನು ಮೈಸೂರು ಸೀಮೆಗೆ ಸೀಮಿತವಾದುದೆಂದು, ಇಡೀ ಕರ್ನಾಟಕಕ್ಕೆ ಒಳಗೊಳ್ಳುವುದಿಲ್ಲ ಎಂದು ಕೆಲವು ವಿಮರ್ಶಕರು ಟೀಕಿಸಿದ್ದು, ಅವರ ಶೈಲಿಯಲ್ಲಿ ಅ. ನ. ಕೃ. ದೇಸೀಯತೆಯನ್ನು ಗುರುತಿಸುತ್ತಾರೆ.

ಕೈಲಾಸಂ ಪರೀಕ್ಷೆಗಳಲ್ಲಿ ಪಾಸಾದರೂ ಅವರ ಒಲವಿದ್ದಿದ್ದು ಆಟದ ಮೈದಾನದಲ್ಲಿ. ಫುಟ್ಬಾಲ್, ಕ್ರಿಕೆಟ್, ಹಾಕಿ ಆಟಗಳಲ್ಲಿ ಅವರ ಆಸಕ್ತಿಯಿತ್ತು. ಅವರ ನಾಟಕಗಳಲ್ಲಿ ಡಿಕ್ಲೆಮೇಷನ್‌ಗಳು (ಪ್ರಸಂಗಗಳು) ಬುನಾದಿ ಹಾಕಿದೆ. ಲಂಡನ್ ನಾಟಕಗಳ ಪ್ರದರ್ಶನವನ್ನು ವೀಕ್ಷಿಸಿದ್ದರಿಂದ, ಲಂಡನ್‌ನಿಂದ ವಾಪಸ್ಸು ಬಂದು ಸರಕಾರಿ ಕೆಲಸ ದೊರೆತರೂ ಅದನ್ನು ದಾಸ್ಯವೆಂದು ಪರಿಗಣಿಸಿ ಅದನ್ನು ಬಿಟ್ಟರು. ಮಾಸ್ತಿಯವರ ಸಾಹಿತ್ಯಕ್ಕೆ ದೊರೆತ ಜನರ ಪುರಸ್ಕಾರ ಕೈಲಾಸಂರವರ ನಾಟಕಗಳಿಗೆ ದೊರೆಯದೇ ಇದ್ದದ್ದನ್ನು ಜನರು ಸರಕಾರಿ ಅಧಿಕಾರದ ದಾಸರಾಗಿ ಗುರುತಿಸುವುದು, ಮಾಸ್ತಿಯವರ ಕತೆಗಳಲ್ಲಿ ಮಧ್ಯಮ ವರ್ಗದ ಕಥಾವಸ್ತು, ಅವರ ಆಕರ್ಷಣೀಯ ಬರವಣಿಗೆಯ ಶೈಲಿಯಿಂದ ಅವರ ಸಣ್ಣ ಕತೆಗಳು ಮಹತ್ವ ಪಡೆದವುಗಳಿಗಿಂತ ಅವರು ಸರ್ಕಾರಿ ಅಧಿಕಾರಿಯಾಗಿದ್ದರಿಂದ ಅವರ ಕೃತಿಗಳ ಬಗ್ಗೆ ಜನತೆಯ ಒಲವು ಬೆಳೆಯಿತು ಎಂಬ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ. ಇದು ಆ ಕಾಲಘಟ್ಟದ ಜನರಿಗಿದ್ದ ಸರಕಾರಿ ಅಧಿಕಾರಿಗಳ ಬಗ್ಗೆ ಮನೋಭಾವನೆಯನ್ನು ತಿಳಿಸುತ್ತದೆ.

ಜನತೆಯಲ್ಲಿ ಹುಟ್ಟಿ ಬೆಳೆದ ನಾಟಕಕಾರರಾಗಿ ಕೈಲಾಸಂರವರನ್ನು ಅ. ನ. ಕೃ. ಗುರುತಿಸಿದರು. ಕೈಲಾಸಂರವರ ಶುಚಿರುಚಿಗೆ ಮಹತ್ವ ಕೊಡದೇ ಇರುವುದು, ಅವರ ಹಾಸ್ಯ ಪ್ರವೃತ್ತಿ, ನಾಟಕ

ಪರಂಪರೆಗೆ, ಸಮಾಜ ಸುಧಾರಣೆ, ಧರ್ಮೋಪದೇಶದಿಂದ ಬರೆದಿದ್ದು ಯಾವುದೂ ಉಳಿದಿಲ್ಲ. ನಾಟಕದ ಉದ್ದೇಶ ಆನಂದ ನೀಡುವುದು ಆಗಿದೆ ಎಂಬ ಕೈಲಾಸಂರವರ ದೃಷ್ಟಿಯಲ್ಲಿ ಕಲೆಗಾಗಿ ಕಲೆ ಎಂಬ ಧೋರಣೆಯಿಂದ ತಮ್ಮ ಬೃಹತ್ ಶಕ್ತಿಯನ್ನು ಮರೆತವರಾಗಿ ಜನತೆಗಾಗಿ ಕಲೆಯೆಂದು ತಿಳಿಯದ ಅವರ ನಿಲುವಿನ ತಾತ್ವಿಕತೆಯನ್ನು ವಿಮರ್ಶಿಸುತ್ತಾರೆ.

ಟೊಳ್ಳುಗಟ್ಟಿ, ತಾಳಿ ಕಟ್ಟೋಕ್ಕೂಲೇನೇ, ಬಂಡ್ವಾಳ್ವಿಲ್ಲದ ಬಡಾಯಿ, ಹೋಂ ರೂಲು, ಅಮ್ಮಾವ್ರ ಗಂಡ, ಪೋಲಿ ಕಿಟ್ಟಿ, ಸತ್ತವನ ಸಂತಾಪ, ಹುತ್ತದಲ್ಲಿ ಹುತ್ತ, ಸೂಳೆ ಮೊದಲಾದ ನಾಟಕಗಳಿಗೆ ಬಂದ ವಿಮರ್ಶೆಯೊಂದಿಗೆ ಆ ನಾಟಕಗಳ ಮತ್ತು ಪಾತ್ರ ಸಂಭಾಷಣೆಗಳನ್ನು ಅವರು ತೆಗೆದುಕೊಳ್ಳುವ ಪಾತ್ರಗಳು ನಮ್ಮ ಸುತ್ತಮುತ್ತಲಿನ ಜನರ ಪಾತ್ರಗಳೇ ಆಗಿವೆ. ಸಂಬಂಧ ಸೂತ್ರವಿಲ್ಲದ ಒಂದು ಪೊಳ್ಳು ಹರಟೆಯಾಗಿ, ಕೆಲವೊಂದು ಏಕಾಂತ ನಾಟಕಗಳಿವೆ. ಕೈಲಾಸಂರವರ ವಿಚಾರ ಸರಣಿಗಳು ನಾಟಕದಲ್ಲಿ ಭಿನ್ನತೆ ಕಾಣಲು ಅವರು ಇದ್ದ, ಬೆಳೆದ ಪರಿಸರ, ನಂತರ ಸೇರಿದ ಪರಿಸರದ ವಾತಾವರಣದ ಬದಲಾವಣೆಯೇ ಕಾರಣವಾಗಿದೆ.

'ನಗೆಗಾರಿಕೆ' ಎಂಬ ಭಾಗದಲ್ಲಿ ಕೈಲಾಸಂರವರ ಹಾಸ್ಯದ ರೀತಿ, 'ವಿಚಾರಲಹರಿ' ಎಂಬ ಅಧ್ಯಾಯದಲ್ಲಿ ಕೈಲಾಸಂರವರ ನಾಟಕದ ದೃಷ್ಟಿಯನ್ನು ಬರ್ನಾಡ್ ಷಾರವರ ದೃಷ್ಟಿಗೆ ಹೋಲಿಸುವುದು ಮಾತ್ರವಲ್ಲದೆ ಕೈಲಾಸಂರವರು ಕುತೂಹಲದಿಂದ ಜೀವನವನ್ನು ನೋಡಿದ್ದು, ಸಂಪ್ರದಾಯ ಪ್ರಿಯರಾಗಿದ್ದ ಅವರ ಕೆಲವು ಪಾತ್ರಗಳಲ್ಲಿ ಅದು ವ್ಯಕ್ತವಾಗುತ್ತದೆ. ಹೆಣ್ಣಿನ ತ್ಯಾಗ ಜೀವನವನ್ನು ಕೈಲಾಸಂ ವಿಪುಲವಾಗಿ ಚಿತ್ರಿಸುತ್ತಾರೆ. ಹೆಣ್ಣು ಆ ಮಾದರಿಯಲ್ಲಿರಬೇಕೆಂದು, ಶಿಕ್ಷಣವೆಂಬುದು ತಾಯಿಯ ಕೈಯಲ್ಲಿರಬೇಕೆಂದೂ, ಮಾನವನ ಜಾತಿ ವ್ಯವಸ್ಥೆಯನ್ನು ಬಹಳ ಗೌಣವಾಗಿ ನೋಡುವ ಅವರು ಪರ್ಪಸ್ ನಾಟಕದಲ್ಲಿ ಜಾತಿಯ ಬಗ್ಗೆ ತಿಳಿಸುವ ಕೈಲಾಸಂ ಕರ್ಣ ನಾಟಕದಲ್ಲಿ ಅದರ ಪರಾಕಾಷ್ಠೆಯನ್ನು ತಿಳಿಸುವುದನ್ನು ಅ. ನ. ಕೃ. ವಿಮರ್ಶಿಸುತ್ತಾರೆ.

ಕನ್ನಡ ನಾಟಕವನ್ನು ಕಂಪೆನಿ ಕವಿಗಳಿಂದ ಬಿಡುಗಡೆಗೊಳಿಸಿದವರಾಗಿ ಕೈಲಾಸಂರವರನ್ನು ಗುರುತಿಸಿದರು, ಭಾರತೀಯ ಸಾಮಾಜಿಕ, ಧಾರ್ಮಿಕ ಹಲವು ಸಮಸ್ಯೆಗಳನ್ನು ಚಿತ್ರಿಸುವ ಬದಲು ಅವರ ನಾಟಕಗಳು ವರ್ಣಾಶ್ರಮ, ಧರ್ಮ, ಸ್ತ್ರೀಯರ ಸಮಸ್ಯೆ, ಜಾತಿ ಪ್ರಜ್ಞೆಗಳ ಮೇಲೆ ಹೊಸ ಬೆಳಕನ್ನು ಚೆಲ್ಲದೆ ಆ ಸಮಸ್ಯೆಗಳಿಗೆ ಮತ್ತೆ ಅಸ್ತಿತ್ವ ಕೊಡಲು ಪ್ರಯತ್ನಿಸುವುದನ್ನು ಅ. ನ. ಕೃ. ಖಂಡಿಸುತ್ತಾರೆ.

ಕರ್ನಾಟಕದ ಹಿತಚಿಂತನೆ – ೧೯೪೭

ಕರ್ನಾಟಕದ ಹಿತಚಿಂತನೆ – ೧೯೪೭ರಲ್ಲಿ ಅ. ನ. ಕೃ. ಪ್ರಕಟಿಸಿದ ಈ ಕೃತಿಯಲ್ಲಿ ಒಟ್ಟು ೧೫ ಪ್ರಬಂಧಗಳಿವೆ. ಅದರಲ್ಲಿ ಕೆಲವೊಂದು ಲೇಖನಗಳು ಆಕಾಶವಾಣಿಯಲ್ಲಿ ಮಾಡಿದ ಭಾಷಣಗಳನ್ನು ಕೂಡಾ ಸೇರಿಸಲಾಗಿದೆ. ಇಲ್ಲಿನ ಹೆಚ್ಚಿನ ಪ್ರಬಂಧಗಳಲ್ಲಿ ಕನ್ನಡ ನಾಡು ನುಡಿಯನ್ನು ಕುರಿತಂತೆ ಕರ್ನಾಟಕದ ಹಿತವನ್ನು ಕಾಯುವ ತಾತ್ವಿಕ ಧೋರಣೆಯನ್ನು ಪ್ರಸ್ತಾಪಿಸುತ್ತಾರೆ.

'ಕರ್ನಾಟಕ ಪ್ರಾಂತ್ಯ ನಿಯೋಜನೆ' ಎಂಬ ಪ್ರಬಂಧದಲ್ಲಿ ಕರ್ನಾಟಕ ಏಕೀಕರಣದ ಅಗತ್ಯತೆ, ಕರ್ನಾಟಕಕ್ಕೆ ದುಡಿಯುವ ನಾಯಕರು ಲೇಖನದಲ್ಲಿ ಆಂಧ್ರದಲ್ಲಿ ಪಟ್ಟಾಭಿ, ಪ್ರಕಾಶಂ, ಮಹಾರಾಷ್ಟ್ರದ

ಶಂಕರರಾವ್ ದೇವ್ ಈ ರೀತಿಯ ನಾಯಕರು ಕನ್ನಡ ನಾಡಿಗೆ ಬೇಕಾಗಿದ್ದಾರೆ. ಹಲವು ಸಮಿತಿಗಳನ್ನು ರಚಿಸಿಕೊಂಡು ಏಕೀಕರಣಕ್ಕೆ ಸನ್ನದ್ಧರಾಗಬೇಕೆಂದು, ಕನ್ನಡ ನಾಡಿನ ಮೇಲೆ ಆಂಧ್ರದ ದಾಳಿ ಎಂಬ ಮೂರು ಲೇಖನಗಳಲ್ಲಿ ಕರ್ನಾಟಕ್ಕೆ ಸೇರಿರುವ ಕೆಲವು ಆಂಧ್ರ ಪ್ರಾಂತ್ಯದ ಗಡಿ ಪ್ರದೇಶಗಳನ್ನು ಮತ್ತು ಅನಂತಪುರದ ಕಾಲೇಜ್‌ಗಳನ್ನು ಆಂಧ್ರಪ್ರದೇಶಕ್ಕೆ ಸೇರಿಸುವ ಒಂದು ತಂತ್ರ, ಆ ತಂತ್ರಕ್ಕೆ ಮೈಸೂರಿನ ಮಾಜಿ ದಿವಾನರಾದ ಮಾಧವರಾಯರು, ಶ್ರೀಮಂತ ಜಮೀನ್ದಾರರು ಉದಾರವಾಗಿ ಆಶ್ರಯ ನೀಡುತ್ತಿದ್ದುದ್ದು, ಹಾಗೆಯೇ ಪ್ರೊ. ರೆಡ್ಡಿ ಎಂಬವರು ಪಿ. ವಿ. ರಾಜರು ಬರೆದ ತೆಲುಗು ಸಾಹಿತ್ಯ ಕೃತಿಗೆ ಮುನ್ನುಡಿ ಬರೆಯುವಾಗ ಬಸವಣ್ಣ ಆಂಧ್ರದ ಆರಾಧ್ಯ ಬ್ರಾಹ್ಮಣನೆಂದು, ಅಜಂತಾ ಗುಹೆ ಆಂಧ್ರದ ಕಲಾ ಪ್ರತಿಭೆಯ ಸೃಷ್ಟಿ, ಕನ್ನಡ ಸಾಹಿತ್ಯಕ್ಕೆ ಆಂಧ್ರವು ಬಹಳ ಕಾಣಿಕೆ ನೀಡಿದೆ ಎಂಬುದಾಗಿ ಬರೆದಿರುವ ವಿಚಾರ, ಆ ಮೂಲಕ ಕನ್ನಡ ನಾಡಿನ ಕಲೆ, ಸಾಹಿತ್ಯವನ್ನು ಕಬಳಿಸುವ ತಂತ್ರವನ್ನು ಕನ್ನಡಿಗರ ಮುಂದೆ ಇಡುತ್ತಾರೆ.

ಮೂರನೇ ಲೇಖನದಲ್ಲಿ ಪಿ. ಬಿ. ರಾಜುರವರು ಬರೆದ ತೆಲುಗು ಸಾಹಿತ್ಯ ಕೃತಿಯಲ್ಲಿ ವಿಜಯನಗರದ ಅರಸ ಶ್ರೀಕೃಷ್ಣದೇವರಾಯ ಅಮುಕ್ತಮೌಲ್ಯ ತೆಲುಗಿನಲ್ಲಿ ಬರೆದಿದ್ದು, ದೇಸೀಕಾವ್ಯ ಆರಂಭವಾದುದು ತೆಲುಗಿನಲ್ಲಿ, ಚಾರಿತ್ರಿಕವಾಗಿ ಚಾಲುಕ್ಯರು ಆಂಧ್ರದವರು, ಕನ್ನಡ ಸಾಹಿತ್ಯಕ್ಕೆ ತೆಲುಗು ಸಾಹಿತ್ಯ ಪ್ರಭಾವಿಸಿದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಆಂಧ್ರದ ತಿಕ್ಕ ಕಾರಣ ಎಂಬ ವಿಚಾರಗಳು ಈ ಕೃತಿಯಲ್ಲಿ ವ್ಯಕ್ತವಾಗಿವೆ. ಇದನ್ನು ಆಧಾರ ಸಹಿತವಾಗಿ ಅ. ನ. ಕೃ. ಕಟುವಾಗಿ ವಿಮರ್ಶಿಸುತ್ತಾರೆ. ಕನ್ನಡ ನಾಡು, ಸಾಹಿತ್ಯ, ಕಲೆ ಇವುಗಳಿಗೆ ಮಸಿ ಬಳಿಯಲು ಪ್ರಯತ್ನಿಸುವ ಇಂತಹ ಆಂಧ್ರ ಲೇಖಕರ ಮನಃಸ್ಥಿತಿಯ ಬಗ್ಗೆ ಜಾಗೃತವಾಗಿ ಕನ್ನಡಿಗರು ಎಚ್ಚೆತ್ತುಕೊಳ್ಳಬೇಕೆಂದು, ಇಲ್ಲವಾದರೆ ಮುಂದೆ ಬರೀ ಕನ್ನಡ ನಾಡನ್ನಲ್ಲ, ಸಾಹಿತ್ಯ, ಕಲೆ, ಚಿತ್ರಕಲೆ ಎಲ್ಲವನ್ನು ತಮ್ಮದೆಂದು ಹೊಂಚು ಹಾಕುವ ಆಂಧ್ರದ ದೃಷ್ಟಿಕೋನವನ್ನು ಚರ್ಚಿಸುತ್ತಾರೆ.

ಮಹಿಳೆಯರ ಪ್ರಗತಿ (?) ಎಂಬ ಲೇಖನದಲ್ಲಿ ಮೊದಲಿಗೆ ಪ್ರಶ್ನಾರ್ಥಕ ಚಿಹ್ನೆ ಬಳಸಿರುವುದು ಮಹಿಳೆಯರ ಪ್ರಗತಿ ಎಂಬುದು ಯಾವಾಗ, ಹೇಗೆ ಎಂಬ ಹಲವಾರು ಮರುಪ್ರಶ್ನೆಗಳೂ ಏಳುತ್ತವೆ. ೧೯೪೭೦ರ ಸಂದರ್ಭದಲ್ಲಿ ನಡೆದ ಮಹಿಳಾ ಸಮ್ಮೇಳನಗಳು ಮೈಸೂರು ಸಂಸ್ಥಾನದಲ್ಲಿ 'ಲೇಡೀಸ್ ಕಾನ್ಫರೆನ್ಸ್' ಮತ್ತು ಉತ್ತರ ಕರ್ನಾಟಕದಲ್ಲಿ 'ಕರ್ನಾಟಕ ಮಹಿಳಾ ಪರಿಷತ್ತು' ಸ್ಥಾಪನೆಗೊಂಡು ಮಹಿಳಾ ಸಬಲೀಕರಣಕ್ಕಾಗಿ ಹೋರಾಡುತ್ತವೆ. ಆದರೆ ಈ ಸಮ್ಮೇಳನದ ಅಧ್ಯಕ್ಷರ ಭಾಷಣ, ಸ್ವಾಗತ ಮೊದಲಾದವುಗಳೆಲ್ಲಾ ಇಂಗ್ಲೀಷ್‌ಮಯವಾಗಿರುವುದು, ಈ ಸಮ್ಮೇಳನಕ್ಕೆ ಬಂದಂತಹ ಸಾಮಾನ್ಯ ಮಹಿಳೆಯರಿಗೆ ಬಾರದ ಇಂಗ್ಲೀಷ್ ಹೇಗೆ ಅರ್ಥವಾಗಬೇಕು, ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮ. ಮಹಿಳಾ ಸಮ್ಮೇಳನಗಳಲ್ಲಿ ಇಂಗ್ಲೀಷ್‌ನಿಂದ ನಿರ್ಣಯ ತೆಗೆದುಕೊಂಡರೆ ಅದರಿಂದ ಸಾಮಾನ್ಯ ಮಹಿಳೆಯರಿಗೆ ಏನು ಪ್ರಯೋಜನವಾಗುವುದಿಲ್ಲ. ಇದು ಕನ್ನಡ ದ್ರೋಹವಾಗಿ ಈ ಎರಡು ಸಂಘಗಳ ಸಮ್ಮೇಳನಗಳನ್ನು ಅ. ನ. ಕೃ. ನೋಡುತ್ತಾರೆ.

ಅನಕ್ಷರಸ್ಥರಾದ ಸಾವಿರಾರು ಹೆಣ್ಣು ಮಕ್ಕಳು ಅಂಧಕಾರದಲ್ಲಿದ್ದಾರೆ. ಅವರಿಗೆ ವಿದ್ಯೆ, ಜ್ಞಾನವನ್ನು ನೀಡುವುದರೊಂದಿಗೆ ಮನುಷ್ಯರಂತೆ ಬಾಳಲು ಮಾರ್ಗದರ್ಶನವನ್ನು ನೀಡುವ ಕೆಲಸ ಮಹಿಳಾ ಸಮ್ಮೇಳನಗಳಲ್ಲಿ ಜರುಗಬೇಕು. ಭಾರತದಲ್ಲಿ ಅಸ್ಪೃಶ್ಯತೆಯ ಸಮಸ್ಯೆಯನ್ನು ಹೋಗಲಾಡಿಸಲು ಶ್ರಮಿಸಬೇಕಾದುದು ಮಹಿಳೆಯರು. ಹಾಗಾಗಿ ಅವರಿಗೆ ಆ ವಿಚಾರದ ಬಗ್ಗೆ ಜ್ಞಾನ

ನೀಡಬೇಕು. ಸ್ತ್ರೀಯ ಸಮಸ್ಯೆಗಳು ಪರಿಸ್ಥಿತಿಗನುಗುಣವಾಗಿ ವಿವಿಧ ಸ್ವರೂಪಗಳಿದ್ದೂ ಸ್ತ್ರೀಯರಿಗೆ ಸಂತಾನ ಸಂಯಮ, ಹೆಣ್ಣು ಮಕ್ಕಳಿಗೆ ಲೈಂಗಿಕ ಶಿಕ್ಷಣವನ್ನು ಶಾಲೆಗಳಲ್ಲಿ ಪಠ್ಯದಲ್ಲಿ ಸೇರಿಸಬೇಕು. ಸ್ತ್ರೀಯರಿಗೆ ದಾಂಪತ್ಯದ ಹಕ್ಕು, ವಿವಾಹದ ಹಕ್ಕು ಮೊದಲಾದವುಗಳ ಬಗ್ಗೆ ಮಹಿಳಾ ಸಮ್ಮೇಳನಗಳು ನಡೆದು ಹೆಣ್ಣು ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು ಎಂಬ ತಮ್ಮ ಸ್ತ್ರೀಪರ ಕಾಳಜಿಯನ್ನು ವ್ಯಕ್ತಪಡಿಸುತ್ತಾರೆ. ಶ್ರೀಮಂತ, ಅಧಿಕಾರಿ ವರ್ಗದ ಹೆಣ್ಣು ಮಕ್ಕಳ ಹಿಡಿತದಲ್ಲಿ ಸಮ್ಮೇಳನಗಳು ನಡೆಯದೆ ಸಾಮಾನ್ಯ ಮಹಿಳೆಯರ ಕೈಯಲ್ಲಿ ಸ್ತ್ರೀ ಸಮ್ಮೇಳನಗಳು ನಡೆಯಬೇಕು ಎಂಬ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ.

'ನಮಗೆ ಬೇಕು – ಸಜೀವ ಸಂಗೀತ' ಎಂಬ ಲೇಖನದಲ್ಲಿ ಸಂಗಿತವನ್ನು ಜನಸಾಮಾನ್ಯರಿಗೆ ತಲುಪಿಸಬೇಕಾದ ಅಗತ್ಯತೆ, ತಮಿಳುನಾಡಿನ ಸಂಸ್ಕೃತಿ, ಸಂಗೀತದ ರಕ್ಷಣೆಗೆ ಮುಂದಾದ ತಮಿಳಿನ ಈಸೈ ಚಳುವಳಿಯ ಮಾದರಿಯ ರೀತಿಯಲ್ಲಿಯೇ ನಮ್ಮ ಕನ್ನಡ ನಾಡಿನಲ್ಲಿ ತ್ಯಾಗರಾಜನ ಕೀರ್ತನೆಗಳು ತಮಿಳು ಗಾಯಕರು ಹಾಡಿ ತಮ್ಮದೆಂದು ಭಾವಿಸುತ್ತಾರೆ. ನಮ್ಮ ಕರ್ನಾಟಕತನ ಕನ್ನಡತನ ಉಳಿವಿಗೆ ಕನ್ನಡನಾಡಿನ ದೃಷ್ಟಿಯಿಂದ ಮಾತ್ರವಲ್ಲದೆ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಕನ್ನಡ ಕೀರ್ತನೆಗಳು ಪ್ರಸಾರವಾಗಬೇಕೆಂದು ಸೂಚಿಸುತ್ತಾರೆ.

ನಾಟಕಗಳನ್ನು ಬಳಸಿಕೊಂಡು ರಷ್ಯಾ, ಚೀನಾ, ಐರ್ಲೆಂಡ್ ನಂತಹ ದೇಶಗಳು ದೇಶಸೇವೆಗೆ ಬಳಸಿದ ರೀತಿ,ನಮ್ಮ ದೇಶದ ಜನರಿಗೆ ಶಿಕ್ಷಣವನ್ನು, ಜ್ಞಾನವನ್ನು ನೀಡುವ ಒಂದು ಸಾಧನವಾಗಿ ನಾಟಕವನ್ನು ಗ್ರಹಿಸುತ್ತಾರೆ. ಕರ್ನಾಟಕದಲ್ಲಿ ರಾಷ್ಟ್ರೀಯ ರಂಗಭೂಮಿಯ ಅಗತ್ಯತೆಯಿಂದ ಆಗುವ ಪ್ರಯೋಜನಗಳು, ವಾಕ್ ಚಿತ್ರದಿಂದ ನಾಟಕಗಳು ಅವನತಿಯ ಹಾದಿ ಹಿಡಿದದ್ದನ್ನು, ಶಿವಗಂಗೆ, ಬೇಲೂರು ಮೊದಲಾದ ಚಾರಿತ್ರಿಕ ಸ್ಥಳಗಳನ್ನು ಪರಿಚಯಿಸುತ್ತಾರೆ.

'ಕನ್ನಡ ನಾಡಿನಲ್ಲಿ ಚಿತ್ರಕಲೆ' ಎಂಬ ಲೇಖನದಲ್ಲಿ ಚಿತ್ರಕಲೆಯ ಬಗ್ಗೆ ಕನ್ನಡ ನಾಡಿನಲ್ಲಿ ಯಾವುದೇ ಜ್ಞಾನವಿಲ್ಲದೆ ಇರುವುದು, 'ಫಿಲ್ಮ್ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟವಾಗುವ ಸಿನಿಮಾ ತಾರೆಯರ ಚಿತ್ರಗಳು ಕಲೆಯೇ ಆಗಿವೆ ಎಂದು ಇಂದಿನ ತರುಣರು ತಿಳಿದುಕೊಂಡಿದ್ದಾರೆ. ಇದು ಕಲೆಯ ಬಗೆಗೆ ಅವರಿಗೆ ಇರುವ ಅಜ್ಞಾನದ ಸಂಕೇತವಾಗಿ ಪರಿಗಣಿಸುತ್ತಾರೆ.

ಅಜಂತಾದಲ್ಲಿಯ ಎಲ್ಲಾ ವರ್ಗದ ಚಿತ್ರಗಳು ಬರೆದಿರುವುದು ಜನತೆಗಾಗಿ ಬರೆದ ಕಲೆಯೇ ಆಗಿದೆ. ಅಜಂತಾ, ಎಲ್ಲೋರಾದಲ್ಲಿ ಧರ್ಮದೃಷ್ಟಿಯಿದ್ದರೆ, ಮಧ್ಯಕಾಲದಲ್ಲಿ ಮೊಘಲ್, ಚಾರಿತ್ರಿಕ ಚಿತ್ರಕಲೆಯ ಕಾಂಗ್ರಾ ಸಂಪ್ರದಾಯದಲ್ಲಿ ಜನಸಾಮಾನ್ಯರ ಬದುಕನ್ನು ಚಿತ್ರಿಸಿದೆ. ಇಲ್ಲಿ ಕೃಷ್ಣ ಗೋಪಿಯರ ಲೀಲೆಗಳು, ಮೊಘಲರಲ್ಲಿ ಸೂಫಿ ತತ್ವಜ್ಞಾನದ ಚಿತ್ರಗಳು ಕಂಡುಬರುತ್ತವೆ. ಕಾಂಗ್ರಾದಲ್ಲಿ ಕೃಷ್ಣನನ್ನು ಸಾಮಾನ್ಯ ಮಾನವನಾಗಿ ಚಿತ್ರಿಸಿದ್ದಾನೆ. ಭಾರತೀಯ ಚಿತ್ರಕಲೆಯು ಸಾಮಾನ್ಯನ ದೃಷ್ಟಿಯಲ್ಲಿ ರಚಿತವಾಗಿದೆಯೆಂದು ಅ. ನ. ಕೃ. ತಾತ್ವೀಕರಿಸುತ್ತಾರೆ. ಮತ್ತೊಬ್ಬ ಪ್ರಗತಿಶೀಲ ಲೇಖಕರಾದ ಎಸ್. ಅನಂತನಾರಾಯಣರು ಕೂಡಾ ತಮ್ಮ 'ಜನತೆಗಾಗಿ ಕಲೆ' ಎಂಬ ಲೇಖನದಲ್ಲಿ ಕಲೆಯೆಂಬುದು ಜನತೆಗಾಗಿ ಇರಬೇಕು ಎಂದು ತಿಳಿಸುತ್ತಾರೆ.

೧೭ನೇ ಶತಮಾನದ ವೇಳೆಗೆ ಭಾರತದಲ್ಲಿ ಭಾವ ಚಿತ್ರಗಳ ಬದಲು ರೂಪ (ಛಾಯಾ) ಚಿತ್ರಗಳು ಬಂದಿದ್ದವು. ರಾಬರ್ಟ್ ಕ್ಲೈವ್, ವಾರನ್ ಹೇಸ್ಟಿಂಗ್ಸ್, ಕಾರನ್ ವಾಲಿಸ್ ಮೊದಲಾದವರು

ಭಾರತಕ್ಕೆ ಬಂದ ನಂತರ ನಮ್ಮ ಕಲೆಯು ನಶಿಸುತ್ತಾ ಸಾಗಿದ್ದು ಪಾಶ್ಚಾತ್ಯರ ಕಲೆಗಳ ಬಗ್ಗೆ ಹೆಚ್ಚು ಮನ್ನಣೆ ನೀಡಿದ್ದು ನಮ್ಮ ಕಲೆಯ ರಾಷ್ಟ್ರೀಯ ಜೀವನಕ್ಕೆ ಕೊಡಲಿ ಪೆಟ್ಟು ಕೊಟ್ಟಿದ್ದಾಗಿ ಚಿತ್ರಕಲೆಯ ಅವನತಿಯನ್ನು ತಿಳಿಸುತ್ತಾರೆ.

ಕನ್ನಡ ಕುಲ ರಸಿಕರು – ೧೯೫೧

ಕನ್ನಡ ಕುಲ ರಸಿಕರು ಕನ್ನಡ ನಾಡಿಗೆ ಸೇವೆ ಸಲ್ಲಿಸಿದ ವ್ಯಕ್ತಿಗಳ ವ್ಯಕ್ತಿಚಿತ್ರಣ ನೀಡುವ ಕೃತಿಯಾಗಿದೆ. ಈ ಕೃತಿಯಲ್ಲಿ ಒಟ್ಟು ಮೂವತ್ತೆರಡು ಕವಿಗಳ ಬದುಕು, ಬರಹ ಮತ್ತು ವ್ಯಕ್ತಿತ್ವದ ಚಿತ್ರಣವನ್ನು ನೀಡಲಾಗಿದೆ. ಕನ್ನಡ ನಾಡಿಗೆ ಸೇವೆ ಸಲ್ಲಿಸಿದ ಬರಹಗಾರರನ್ನು ಕೂಡಾ ಓದುಗರಿಗೆ ಪರಿಚಯಿಸುವುದೇ ಈ ಗ್ರಂಥದ ಉದ್ದೇಶವಾಗಿದೆ. ಆಲೂರು ವೆಂಕಟರಾಯರ ಲೇಖನದಲ್ಲಿ ಸ್ವದೇಶಿ ಚಳುವಳಿಯಲ್ಲಿ ಭಾಗವಹಿಸುವ ಮೂಲಕ ಬ್ರಿಟಿಷರ ಒಡೆದು ಆಳುವ ನೀತಿಯ ವಿರುದ್ಧ, ಉತ್ತರ ಕರ್ನಾಟಕದಲ್ಲಿ ಕರ್ನಾಟಕದ ಜನರಲ್ಲಿ ಮರಾಠಿಯಿಂದ ಕನ್ನಡದ ಕಡೆಗೆ ಸೆಳೆದವರು ಶಾಂತಕವಿಗಳು, ಅದನ್ನು ದಕ್ಷತೆಯಿಂದ ನಿರ್ವಹಿಸಿದವರು ಆಲೂರು ವೆಂಕಟರಾಯರು ಎಂಬುದಾಗಿ ಕನ್ನಡವನ್ನು ಬೆಳೆಸಿದವರಾಗಿ ನೋಡುತ್ತಾರೆ.

ಧರ್ಮಸ್ಥಳದ ಧರ್ಮಾಧಿಕಾರಿ ಮಂಜಯ್ಯ ಹೆಗಡೆಯವರ ಪರಿಚಯ ಮತ್ತು ಧರ್ಮಸ್ಥಳವನ್ನು ಪರಧರ್ಮ ಸಹಿಷ್ಣುತೆಯ ಪ್ರತೀಕವಾಗಿ ಅವರು ೧೯೩೨ರಲ್ಲಿ ಸರ್ವ ಧರ್ಮ ಸಮ್ಮೇಳನ ಮತ್ತು ಸಾಹಿತ್ಯ ಸಮ್ಮೇಳನದ ಮೂಲಕ ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಿದರು. ಇದು ಹಿಂದೂ, ಬೌದ್ಧ, ಮುಸ್ಲಿಂ, ಕ್ರೈಸ್ತ, ಜೈನ, ವೀರಶೈವ ಮತಗಳ ಪರಿಚಯದ ಜೊತೆಗೆ ಧಾರ್ಮಿಕ ಸಹಿಷ್ಣುತೆಯನ್ನು ಬೆಳೆಸಲು ಸಹಕಾರಿಯಾದ ಕಾರ್ಯಕ್ರಮವಾಗಿದೆ. ಧರ್ಮಸ್ಥಳಕ್ಕೆ ಹೋಗುವುದೆಂದರೆ ದೆವ್ವ ಬಿಡಿಸಲು ಎಂಬ ತಪ್ಪು ಕಲ್ಪನೆ ಇಟ್ಟುಕೊಂಡವರು ದೆವ್ವ ಬಿಡುಗಡೆಗಿಂತ ಜಾತಿಮತಗಳ ದೆವ್ವ ಬಡಿದವರು ಅವಶ್ಯಕವಾಗಿ ಹೋಗಬೇಕು ಎಂಬಲ್ಲಿ ಜಾತಿಮುಕ್ತ, ವರ್ಗಮುಕ್ತ ಮನಃಸ್ಥಿತಿಯ ಆಶಯವಿದೆ.

ಗಾಂಧೀಜಿಯ ಪರಿಕಲ್ಪನೆಯಲ್ಲಿ ರಾಜಕಾರಣವೆಂಬುದು ಸಮಾಜ ಸಂಘಟನೆ. ಲೋಕಕಲ್ಯಾಣ, ದಾರಿದ್ರ್ಯ, ಅಜ್ಞಾನಗಳ ನಿರ್ಮೂಲನೆಯೇ ರಾಜಕಾರಣದ ಗುರಿ ಎಂದು ನಂಬಿದ್ದ ರಾಜಕಾರಣಿಗಳಲ್ಲಿ ದಿವಾಕರ ರಂಗರಾಯರು ಒಬ್ಬರಾಗಿ, ಉಪನಿಷತ್ತಿನ ಬಗ್ಗೆ ಅಪಾರ ಒಲವಿದ್ದವರಾಗಿ ಅ. ನ. ಕೃ. ನೋಡುತ್ತಾರೆ. ಮಾಸ್ತಿಯವರ ವ್ಯಕ್ತಿತ್ವವನ್ನು ಕನ್ನಡಿಗರನ್ನು ಕನ್ನಡ ಸಾಹಿತಿಗಳನ್ನು ಪ್ರೀತಿಸುವ ರೀತಿಯನ್ನು ಮಾಸ್ತಿಯವರಿಂದ ಕಲಿಯಬೇಕೆಂದು ಅ. ನ. ಕೃ. ತಿಳಿಸುತ್ತಾರೆ.

ಮಂಜೇಶ್ವರ ಗೋವಿಂದ ಪೈಗಳ ಲೇಖನದಲ್ಲಿ ಅವರೊಡನೆ ನಡೆದ ಸಂಭಾಷಣೆಯಲ್ಲಿ ಅ. ನ. ಕೃ. ರವರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಬಹುದಲ್ಲ ಎಂಬ ಮಾತಿಗೆ ದೇಶ ಸ್ವತಂತ್ರವಾಯಿತೇ? ಎಂಬ ಅವರ ಮಾತಿನಲ್ಲಿ ಬ್ರಿಟಿಷರ ದಾಸ್ಯದಿಂದ ಸ್ವಾತಂತ್ರ್ಯ ಗಳಿಸಿರಬಹುದು. ಭಾರತದಲ್ಲಿರುವ ಸಾಮಾಜಿಕ ದಾಸ್ಯ, ರಾಜಕೀಯ ದಾಸ್ಯ ಮೊದಲಾದವುಗಳಿಂದ ದೇಶ ಸ್ವತಂತ್ರವಾಗಬೇಕೆಂಬ ಹಂಬಲವನ್ನು, ಎಂದು ದೇಶ ಇವುಗಳಿಂದ ಬಿಡುಗಡೆ ಹೊಂದುತ್ತದೆಯೋ ಅಂದು ತಾವು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುತ್ತೇನೆಂಬ ಅವರ ಮಾತಿನ ತಾತ್ವಿಕತೆಯನ್ನು ವಿಶ್ಲೇಷಿಸುತ್ತಾರೆ.

ಕನ್ನಡ ನಾಡಿನ ಸಾಹಿತ್ಯ ಚರಿತ್ರೆಯಲ್ಲಿ ಎ. ಆರ್. ಕೃಷ್ಣ ಶಾಸ್ತ್ರಿಗಳು ಕರ್ನಾಟಕ ಸಂಘ, ಪ್ರಬುದ್ಧ ಕರ್ನಾಟಕ ಸಾಹಿತ್ಯ ಪತ್ರಿಕೆ ಸ್ಥಾಪನೆಯ ಮೂಲಕ ಮುಂದೆ ದೇಶದಾದ್ಯಂತ ಕರ್ನಾಟಕ ಸಂಘಗಳು ಹುಟ್ಟುವಲ್ಲಿ ಪ್ರೇರಣೆ ನೀಡಿದ್ದು, ಸಾಹಿತ್ಯವೆಂಬುದು ಸಾಮಾನ್ಯ ಜನರಿಗೂ ತಿಳಿಯಬೇಕೆಂದು ಪ್ರಬುದ್ಧ ಕರ್ನಾಟಕದಲ್ಲಿ ಸುದೀರ್ಘ ಲೇಖನಗಳನ್ನು ಬರೆದಿದ್ದು, ಪ್ರತಿಯೊಬ್ಬ ಕನ್ನಡಿಗನಿಗೂ ಮಹಾಭಾರತ ಕಥಾವಸ್ತು ತಿಳಿಸುವ ಪ್ರಯತ್ನ ಮಾಡಿದ್ದು, ಜನಜೀವನ ಮತ್ತು ಸಮಸ್ಯೆಗಳಿಂದ ದೂರವಿರುವ ಎಷ್ಟೋ ಸಾಹಿತಿಗಳು ಅವರನ್ನು ನೋಡಿ ಕಲಿಯಬೇಕೆಂದೂ, ಜನತೆಗಾಗಿ ಬರೆದ ಬರಹಗಾರನಾಗಿ ಎ. ಆರ್. ಕೃಷ್ಣಶಾಸ್ತ್ರಿಗಳ ವ್ಯಕ್ತಿ ಚಿತ್ರಣವನ್ನು ನೀಡುತ್ತಾರೆ.

ವಚನ ಸಾಹಿತ್ಯಕ್ಕೆ ಕೊಡುಗೆ ನೀಡಿದ ಫ. ಗು. ಹಳಕಟ್ಟಿ, ಶಿ. ಶು. ಬಸವನಾಳ, ತೀ. ನಂ. ಶ್ರೀ, ನಂದೀಮಠ, ಬೇಂದ್ರೆ, ಕುವೆಂಪು, ಎಂ. ಆರ್. ಶ್ರೀನಿವಾಸಮೂರ್ತಿ ಮೊದಲಾದವರ ಸಾಹಿತ್ಯಕ ಸಾಂಸ್ಕೃತಿಕ ಕೊಡುಗೆಗಳ ಹಿನ್ನೆಲೆಯಲ್ಲಿ ಬಸವಲಿಂಗ ಸ್ವಾಮಿಗಳ ವೀರಶೈವ ವಿಚಾರಧಾರೆಗಳನ್ನು ಸರ್ವಧರ್ಮ ಸಮ್ಮೇಳನದ ಮೂಲಕ ಎತ್ತಿ ಹಿಡಿಯುವ ದೃಷ್ಟಿಕೋನ, ನಿಡುಮಾಮಿಡಿ ಶ್ರೀಗಳ ಬಗ್ಗೆ ಅವರು ಆಯ್ದಕ್ಕಿ ಮಾರಯ್ಯ, ಅಕ್ಕನಬಾಳು ನಾಟಕಗಳು, ಸೀಳ್ನುಡಿ ಎಂಬುದು ಶಿವಶರಣರ ವಚನಗಳ ಮೇಲೆ ಬರೆದ ವ್ಯಾಖ್ಯಾನ ಗ್ರಂಥ. ಬಸವಣ್ಣನ ಮೇಲೆ ಅಣ್ಣನ ಬದುಕು ಕೃತಿಗಳ ಪರಿಚಯ, ಸುಬೋಧ ರಾಮರಾಯರ ವ್ಯಕ್ತಿತ್ವದಲ್ಲಿ ಧರ್ಮಶ್ರದ್ಧೆ, ದಾಸ ಸಾಹಿತ್ಯದ ಪ್ರಕಟಣೆ, ಮಹಾರಾಷ್ಟ್ರವನ್ನು ದ್ವೇಷಿಸದೆ ಕನ್ನಡಾಭಿಮಾನವನ್ನು ಬೆಳೆಸಲು ಶ್ರಮಿಸಿದ ಕುಂದಣಗಾರರು, ವಿಚಾರ ಪ್ರಚೋದಕ ಸಾಹಿತ್ಯದ ರೂವಾರಿಯಾದ ದ. ಕೃ. ಭಾರದ್ವಾಜರು, ಸಣ್ಣಕಥೆಗಳ ಬೆಳವಣಿಗೆಯಲ್ಲಿ ದೇವುಡರ ಕೊಡುಗೆ, ಸರ್ವಜ್ಞನ ವಚನಗಳನ್ನು ಸಂಪಾದಿಸಿದ ಉತ್ತಂಗಿ ಚೆನ್ನಪ್ಪ, ನಾಟಕ, ಕಲೆ, ಯಕ್ಷಗಾನ, ನಿರ್ದೇಶನ ಮೊದಲಾದವುಗಳಲ್ಲಿ ಶಿವರಾಮ ಕಾರಂತರನ್ನು ಪರಿಚಯಿಸುತ್ತಾರೆ.

ಬಿ. ಶಿವಮೂರ್ತಿ ಶಾಸ್ತ್ರಿಗಳ 'ಶರಣರ ಸಾಹಿತ್ಯ' ದ ಉದ್ದೇಶ ವೀರಶೈವ ಸಾಹಿತ್ಯ ಚರಿತ್ರೆ ಪ್ರಸಾರ ಮಾಡುವುದು ಮಾತ್ರವಲ್ಲದೆ ಸರ್ವಧರ್ಮಗಳ ಪರಿಚಯವನ್ನು ಮಾಡುವ ಮೂಲಕ ಧಾರ್ಮಿಕ ಏಕತೆ ತರುವಲ್ಲಿ ಶ್ರಮಿಸಿದವರಾಗಿ, ವೈ ನಾಗೇಶ ಶಾಸ್ತ್ರಿಗಳು ಪುರಾಣದ ಜ್ಞಾನವನ್ನು, ಸಾಲಿಗ್ರಾಮ ರಾಮಚಂದ್ರರಾಯ ಚಿತ್ರಸೃಷ್ಟಿಯು ಬುದ್ಧಿ ಪ್ರಧಾನವಾಗಿ, ಅಂತಃಕರಣ ಪ್ರಧಾನವಾಗಿ ಅ. ನ. ಕೃ. ನೋಡುತ್ತಾರೆ. ಕನ್ನಡ ರಂಗಭೂಮಿಗೆ ನೀಡಿದ ಕೊಡುಗೆಗಳಲ್ಲಿ ಬೆಳ್ಳಾವೆ ನರಹರಿ ಶಾಸ್ತ್ರಿಗಳು, 'ಕೃಷ್ಣ ಗಾರುಡಿ' ನಾಟಕದ ವೈಶಿಷ್ಟ್ಯ ಮತ್ತು ತಿ. ತಾ. ಶರ್ಮರ 'ತುಂಟರ ಗುಂಪು', 'ದೇಶೀಯ ವಿದ್ಯಾಶಾಲೆ', ವಿಶ್ವ ಕರ್ನಾಟಕ ಪತ್ರಿಕೆಗಳ ಮೂಲಕ ಮಾಡಿದ ಸಾಧನೆಯನ್ನು ಪರಿಚಯಿಸಿದ್ದಾರೆ.

ಕನ್ನಡ ಕುಲರಸಿಕರು ಕೃತಿಯು ಪರಿಚಯವಿರುವ ಕವಿಗಳ ವ್ಯಕ್ತಿತ್ವ, ಸಾಹಿತ್ಯ ಕೃತಿಗಳು ಪರಿಚಯಾತ್ಮಕವಾಗಿ ಬರೆದ ಲೇಖನಗಳ ಸಂಕಲನವಾಗಿದೆ. ಪ್ರತಿಯೊಂದು ಲೇಖನದ ಆರಂಭವು ಭಿನ್ನವಾಗಿಯೇ ತೆರೆದುಕೊಳ್ಳುತ್ತದೆ. ಕನ್ನಡ ಓದುಗನಿಗೆ ಪರಿಚಯವಿರುವ ಮತ್ತು ಪರಿಚಯವಿಲ್ಲದ ಎಸ್. ಜಿ. ಶಾಸ್ತ್ರಿ, ಎಂ. ಜಿ. ನಂಜುಂಡಾರಾಧ್ಯ, ಜೋಶಿ ಶಂಕರ ನಾರಾಯಣರನ್ನು ಪರಿಚಯಿಸುತ್ತಾರೆ. ಆ ಮೂಲಕ ಕನ್ನಡ ನಾಡಿಗೆ ಸಾಹಿತ್ಯ ಕೊಡುಗೆಯನ್ನು ನೀಡಿದ ಮಹನೀಯರುಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶವಿದೆ.

ನಿಡುಮಾಮಿಡಿ ಸನ್ನಿಧಿಯವರು – ೧೯೫೧

ವೀರಶೈವ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ಶ್ರೀ ಬಸವೇಶ್ವರರು ಮತ್ತು ಅವರ ಅಮೃತವಾಣಿ, ವಿಶ್ವಬಂಧು ಬಸವೇಶ್ವರ ಈ ಮಾದರಿಯ ವೀರಶೈವ ಸಾಹಿತ್ಯದ ಮತ್ತೊಂದು ಕೃತಿ ಶ್ರೀ ನಿಡುಮಾಮಿಡಿ ಸನ್ನಿಧಿಯವರು. ಇದೊಂದು ಜೀವನ ಚರಿತ್ರೆಯಾಗಿದೆ. ಇದರಲ್ಲಿ ಒಟ್ಟು ಮೂರು ಅಧ್ಯಾಯಗಳಿವೆ. ನಿಡುಮಾಮಿಡಿ ಪೀಠ ಎಂಬ ಮೊದಲ ಭಾಗದಲ್ಲಿ ನಿಡುಮಾಮಿಡಿ ಪೀಠ ಬೆಳೆದು ಬಂದ ಬಗೆ, ಈ ಪರಂಪರೆಯಲ್ಲಿ ಬೆಳೆದು ಬಂದ ಹದಿನಾರನೇ ಸ್ವಾಮಿ ಚನ್ನ ಬಸವರಾಜ ದೇಶಿ ಕೇಂದ್ರ ಶಿವಾಚಾರ್ಯ ಸ್ವಾಮಿಗಳು, ವೀರಶೈವದ ಪಂಚಾಚಾರ್ಯರಲ್ಲಿ ಒಬ್ಬರಾದ ಪಂಡಿತಾರಾಧ್ಯರಿಂದ ಸ್ಥಾಪಿತವಾದ ನಿಡುಮಾಮಿಡಿ ಶ್ರೀಶೈಲ ಪೀಠ ಸುಮಾರು ಹತ್ತು ಶತಮಾನಗಳಷ್ಟು ಪ್ರಾಚೀನತೆಯನ್ನು ಹೊಂದಿದೆ ಎಂಬುದಾಗಿ ಐತಿಹಾಸಿಕ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ.

ಅಡ್ನೂರಿನಲ್ಲಿ ಮಲ್ಲಿಕಾರ್ಜುನ ಗೌಡರು ಪೀಠ ಸ್ಥಾಪಿಸಿದರು. ಚನ್ನಬಸವರಾಜ ದೇಶೀ ಕೇಂದ್ರ ಸ್ವಾಮಿಗಳ ಹುಟ್ಟು, ಬಾಲ್ಯ, ಹತ್ತನೇ ವರ್ಷಕ್ಕೆ ಸನ್ಯಾಸತ್ವ, ಹಾನಗಲ್ಲ ಕುಮಾರ ಸ್ವಾಮಿಯಿಂದ ಮತ್ತಷ್ಟು ಶಿವಶಿಕ್ಷಣ ಪಡೆದು ಹನ್ನೆರಡು ವರ್ಷಗಳಕಾಲ ಶಿವಯೋಗ ಮಂದಿರದಿಂದ ಕಠಿಣ ನಿಯಮ ನಿಬಂಧನೆಗಳೊಡನೆ ಅಭ್ಯಾಸ ಮಾಡಿದರು. 'ಸುಕುಮಾರ' ಪತ್ರಿಕೆಯಲ್ಲಿ 'ತಿಳಿನುಡಿಗಳು' ಎಂಬ ಸೂಕ್ತಿಗಳಿಂದ ಅವರ ವಿಚಾರವಾಹಿನಿ ಪರಿಚಯವಾಗುತ್ತದೆ. ಮುಂದೆ ಶಿವಯೋಗ ಮಂದಿರವನ್ನು ಬಿಟ್ಟು ಕನ್ನಡವನ್ನು ಕಲಿಯಲು ಬೆಂಗಳೂರಿಗೆ ಬಂದದ್ದು, 'ಶರಣ ಸಾಹಿತ್ಯ' ಕ್ಕೆ ಲೇಖನಗಳನ್ನು ಬರೆದು ಶಿವಾನುಭವ ಪತ್ರಿಕೆಯಲ್ಲಿ ಪ್ರಕಟಿಸಿ ಆ ಮೂಲಕ ವೀರಶೈವ ಸಾಹಿತ್ಯದ ತಿಳಿವನ್ನು ಮೂಡಿಸಿದರು.

೧೯೩೯ರಲ್ಲಿ 'ಅಕ್ಕನ ಬಾಳು', 'ಅಕ್ಕನ ಲಾವಣಿ', 'ಅಕ್ಕನ ಅಮೃತವಾಣಿ' ಸಂಗ್ರಹಿಸಿ ಕೊಟ್ಟದ್ದು, ಬಾಗೆಪಲ್ಲಿ ತಾಲೂಕಿನ ಗೂಳೂರಿನಲ್ಲಿ ಪಂಡಿತಾರಾಧ್ಯರ ಪರಂಪರೆಯ ಪೀಠಕ್ಕೆ ಪೀಠಾಧಿಪತಿಯಾಗಿದ್ದು, ಜೂನ್ ೧೨, ೧೯೩೮ರಂದು ಸಾಮಾಜಿಕ ಕೆಲಸದೊಂದಿಗೆ ವೀರಶೈವ ಸಾಹಿತ್ಯದ ಪ್ರಚಾರವನ್ನು ಆರಂಭಿಸಿದರು.

'ಶ್ರೀಗಳ ಕೃತಿ ವಿಸ್ತಾರ' ಎಂಬ ಭಾಗದಲ್ಲಿ ಅಕ್ಕಮಹಾದೇವಿಯ ಅನೇಕ ವಚನಗಳನ್ನು ಉದಾಹರಣೆಯಾಗಿ ನೀಡಿ, ಅವಳ ಘನ ವ್ಯಕ್ತಿತ್ವವನ್ನು ಆಧ್ಯಾತ್ಮಿಕ ಪ್ರಗತಿಯಲ್ಲಿ ಸ್ತ್ರೀ ಯಾವ ಹಂತಕ್ಕೆ ಹೋಗಬಹುದಾಗಿ ಅಕ್ಕ ಮಹಾದೇವಿಯ ಹಿನ್ನೆಲೆಯಲ್ಲಿ ತಿಳಿಸುತ್ತಾರೆ. ಆಕೆಯ ಗುರು ಅಲ್ಲಮಪ್ರಭು ಆಗಿದ್ದರೆಂದು, ಜೊತೆಗೆ ಅಕ್ಕನ 'ಯೋಗಾಂಗ ತ್ರಿವಿಧಿ'ಯನ್ನು ಪರಿಷ್ಕರಿಸಿ ಪ್ರಕಟಿಸುತ್ತಾರೆ. 'ಚನ್ನಬಸವಣ್ಣ' ನನ್ನು ಕುರಿತು ಅವನ ಜೀವಿತವನ್ನೇ ಚರ್ಚಿಸುವುದಕ್ಕಿಂತ ಅವನ ಕೃತಿಗಳ ಉಪದೇಶದ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ರೀತಿಯನ್ನು, 'ಅಣ್ಣನ ಬದುಕು', 'ಸೀಳ್ನುಡಿ' ಎಂಬ ಕೃತಿಯಲ್ಲಿ ಅಂತರಂಗ ವಿಶ್ಲೇಷಣಾತ್ಮಕ ಜೀವನ ಚರಿತ್ರೆಗಳ ಸಂಪ್ರದಾಯಕ್ಕೆ ಸೇರಿದ್ದಾಗಿ ಅ. ನ. ಕೃ. ಗುರುತಿಸುತ್ತಾರೆ. ಬಸವಣ್ಣನವರ ತಂದೆ ತಾಯಿಗಳಾರು, ಜನ್ಮಸ್ಥಳ, ಯಾವುದನ್ನೂ ಪ್ರಸ್ತಾಪಿಸದೆ ನೇರವಾಗಿ ವಚನಗಳ ಮೂಲಕ ತಿಳಿಸುವ ನಿಡುಮಾಮಿಡಿ ಶ್ರೀಗಳು ಸಂಪೂರ್ಣ ಬಸವಣ್ಣನವರ ಜೀವನ ಚರಿತ್ರೆಯನ್ನು ತಿಳಿಸುತ್ತಾರೆಂದು ಅ. ನ. ಕೃ. ವಿಶ್ಲೇಷಿಸುತ್ತಾರೆ.

ಆಯ್ದಕ್ಕಿ ಮಾರಯ್ಯ, ಮಹಾದೇವಿಯಕ್ಕ, ಮುಪ್ಪಿನ ಷಡಕ್ಷರಿಯವರ ವಚನಗಳನ್ನು, ಪದ್ಯಗಳನ್ನು ಉದಾಹರಣೆಯಾಗಿ ನೀಡಿ ಅವುಗಳ ಹಿನ್ನೆಲೆಯಲ್ಲಿ ನಿಡುಮಾಮಿಡಿ ಶ್ರೀಗಳು ವಿವರಿಸುವುದು ಮತ್ತು ಆ ಮೂಲಕ ವೀರಶೈವ ಧರ್ಮಕ್ಕೆ ವಿಶ್ವ ಧರ್ಮದ ಸ್ಥಾನ ಕೊಡಲು ನಿಡುಮಾಮಿಡಿ ಸ್ವಾಮಿಗಳು ಪ್ರಯತ್ನಿಸಿರುವುದನ್ನು ತಾತ್ವಿಕವಾಗಿ ಸೂಚಿಸುತ್ತಾರೆ.

'ಅಕ್ಕನ ಬಾಳು' ಎಂಬ ಕೃತಿಯಲ್ಲಿ ಅಕ್ಕನ ಗುರು ಯಾರು, ಅವಳ ಆಧ್ಯಾತ್ಮ ಯಾವುದು ಎಂದು ನಿಡುಮಾಮಿಡಿಗಳು ಚರ್ಚಿಸುವುದು, ಮುಂದುವರೆದು ಅ. ನ. ಕೃ. ರವರು ಮಹಾದೇವಿಯಕ್ಕನಿಗೆ ಮದುವೆಯಾಗಿತ್ತೇ? ಎಂಬ ಪ್ರಶ್ನೆಗಿಂತ ಕೌಶಿಕ ಜೈನ, ಈಕೆ ಶಿವಶರಣೆ, ಆತ ಜೈನನಾಗಿದ್ದನೆಂದು ಸಾಕಷ್ಟು ಆಧಾರಗಳಿಲ್ಲವೆಂದು, ಪ್ರಾಪಂಚಿಕ ವಿವಾಹದಿಂದ ಬೇಸತ್ತು ಆಧ್ಯಾತ್ಮಿಕ ವಿವಾಹದೆಡೆಗೆ ಅವಳ ಮನಸ್ಸು ಹೋಗಿರಬಹುದೆಂದು ವಿಶ್ಲೇಷಿಸುವುದು ಮಾತ್ರವಲ್ಲದೆ "ಮಹಾದೇವಿಯಕ್ಕನ ಕಾಲದಲ್ಲಿ ಒಳಜಾತಿಯ ವಿವಾಹಗಳು, ಮಿಶ್ರ ವಿವಾಹಗಳು ರೂಢಿಯಲ್ಲಿದ್ದವು, ಮತಾಂತರ ಮಾಡಿಕೊಳ್ಳುವುದು ಸರ್ವ ಸಾಧಾರಣವಾಗಿತ್ತು. ಒಂದೇ ಕುಟುಂಬದಲ್ಲಿ ನಾಲ್ಕಾರು ಧರ್ಮಗಳನ್ನ ಅನುಸರಿಸುತ್ತಿದ್ದವರು ಇರುತ್ತಿದ್ದರು"[೮] ಎಂದು ಅ. ನ. ಕೃ. ಅಭಿಪ್ರಾಯಿಸುತ್ತಾರೆ.

ಈ ಹೇಳಿಕೆಯನ್ನು ಗಮನಿಸಿದರೆ ಅಂದಿನ ಕಾಲಘಟ್ಟದಲ್ಲಿ ಸಾಮಾಜಿಕ ಜೀವನ, ಧಾರ್ಮಿಕ ಜೀವನಗಳು ಸಮನ್ವಯವನ್ನು ಸಾಧಿಸಿರಬಹುದು, ಧಾರ್ಮಿಕವಾಗಿ ಕುಟುಂಬದ ಯಾವುದೇ ಸದಸ್ಯ ಶೈವ, ವೀರಶೈವ, ಜೈನ ಮೊದಲಾದ ಪಂಥಗಳನ್ನು ಅನುಸರಿಸುವ ಪದ್ಧತಿ ಇತ್ತು ಎನ್ನಬಹುದಾದರೆ ಮಧುವರಸ, ಹರಳಯ್ಯರ ಮಗ-ಮಗಳ ವಿವಾಹದಿಂದ ಅಂದು ಕಲ್ಯಾಣದಲ್ಲಿ ಕ್ರಾಂತಿ ಯಾಕೆ ನಡೆಯುತ್ತಿತ್ತು ಎಂಬ ಪ್ರಶ್ನೆ ಏಳುತ್ತದೆ.

ಕರ್ನಾಟಕ ಕಲಾವಿದರು ಭಾಗ ೨ – ೧೯೫೨

ಕನ್ನಡ ನಾಡಿಗೆ ಸೇವೆ ಸಲ್ಲಿಸಿದ ಕಲಾವಿದರನ್ನು ಪರಿಚಯಿಸುವ ಕೃತಿ ಕರ್ನಾಟಕ ಕಲಾವಿದರು ಭಾಗ ೨ ಕಲಾವಿದರ ವ್ಯಕ್ತಿ ಚಿತ್ರಣದ ಕೃತಿಯಾಗಿದೆ. ಇದನ್ನು ೧೯೫೨ರಲ್ಲಿ ಪ್ರಕಟಿಸಿದರು. ಭಾರತೀಯ ಸಂಸ್ಕೃತಿಗೆ ಅನುಗುಣವಾಗಿ ಕಲೆಯ ನಿರ್ಮಲ ರೂಪವನ್ನು ಆರಾಧನೆ ಮಾಡಿದ ವ್ಯಕ್ತಿಗಳಲ್ಲಿ ಚಿತ್ರಗಾರ, ಸೌಂದರ್ಯೋಪಾಸಕ ಮಡಿವಾಳಪ್ಪ ಮಿಣಜಗಿಯವರು ರಜಪೂತ ಸಂಪ್ರದಾಯದ ಮಾಲಕಾಂಶ, ತೋಟಿ, ಮೇಘಮಲ್ಹಾರ ಚಿತ್ರಗಳನ್ನು ಅ. ನ. ಕೃ. ವಿಮರ್ಶಿಸುತ್ತಾರೆ.

ಸಂಗೀತಗಾರರಾದ ತಿಟ್ಟೆ ಕೃಷ್ಣಯ್ಯಂಗಾರ್ಯ, ಕರ್ನಾಟಕದ ಶಿಲ್ಪ ವೈಭವದ ಜೊತೆಗೆ ಹೊಯ್ಸಳ ಶಿಲ್ಪಗಳನ್ನು ಚಿತ್ರಿಸಿದ ಎಸ್. ಎನ್. ಸ್ವಾಮಿ (ಗಾಂಧೀಜಿಯ ಮುಂದೆ ಕುಳಿತು ಅವರ ಭಾವಚಿತ್ರವನ್ನು ರೂಪಿಸಿದವರು), ವೀಣಾವಾದಕರಾದ ದೊರೆಸ್ವಾಮಿ ಅಯ್ಯಂಗಾರ್ಯ, ಜನತೆಯ ರಾಷ್ಟ್ರಿಯ ರಂಗಭೂಮಿಯ ಸ್ಥಾಪಕರಲ್ಲಿ ಪಾರ್ಶ್ವನಾಥ ಅಳತೆಕರು, ಭರತನಾಟ್ಯ ಕಲಾವಿದರಾದ ರಾಮಗೋಪಾಲ, ಪಿಟೀಲುವಾದಕರಾದ ದ್ವಾರಂ ವೆಂಕಟಸ್ವಾಮಿ ನಾಯಿಡು, ಸಂಗೀತಗಾರರಾದ ಆನೆಕಲ್ ಶಿವರುದ್ರಪ್ಪ, ಚಿತ್ರಗಾರರಾದ ಎಲವಟ್ಟಿಯವರು, ತಮ್ಮ ಪ್ರಾಕೃತಿಕ ಸೌಂದರ್ಯದ ಚಿತ್ರಗಳ ಮುಖೇನ ಶ್ರೀರಂಗಪಟ್ಟಣದ ಜಲದ್ವಾರ, ಬೆಂಗಳೂರಿನ ದ್ವಾರಗಳನ್ನು ವಿಮರ್ಶಿಸುತ್ತಾರೆ.

ವೀಣಾವಾದಕರಾದ ನೀಲಮ್ಮ ಕಡಾಂಬಿ, ಸಂಗೀತಗಾರರಾದ ಶಂಕರ ದೀಕ್ಷಿತ್, ವೀಣಾವಾದಕರಾದ ರುದ್ರಪಟ್ಟಣದ ದೊರೆಸ್ವಾಮಿ, ವೀಣೆ ನಾಗರಾಜ ರಾಯರು, ನೃತ್ಯ ಕಲಾವಿದರಾದ ಉಭಯಕರ್ ಕೃಷ್ಣರಾವ್, ಚಂದ್ರಭಾಗಾ ದಂಪತಿಗಳು, ವಿಣಾವಾದಕರಾದ ವಿ. ಎನ್. ರಾವ್ (ವೆಂಕಟನಾರಾಯಣ ರಾವ್), ಸಂಗೀತ ವಿದುಷಿ ಜಿ. ಚೆನ್ನಮ್ಮ, ಹಾಸ್ಯನಟ ಕೆ. ಹಿರಣಯ್ಯನವರು, ಸಂಗೀತ ವಿದುಷಿ ಗಂಗೂಬಾಯಿ ಹಾನಗಲ್, ಸಂಗೀತಗಾರರಾದ ಎ. ಸುಬ್ಬರಾಯರು, ಕೊಳಲು ವಾದಕರಾದ ಎಂ. ಆರ್. ದೊರೆಸ್ವಾಮಿ, ಛಾಯಾ ಚಿತ್ರಗಾರರಾದ ಬಿ. ಎ. ಸೀತಾರಾಮ್, ಪಿಟೀಲು ವಾದಕರಾದ ಬಿ. ಟಿ. ರಾಜಪ್ಪ, ವರನಟ ಹಂದಿಗನೂರು ಸಿದ್ಧರಾಮಪ್ಪ ಮೊದಲಾದವರನ್ನು ಪರಿಚಯಾತ್ಮಕವಾಗಿ ವಿವರಿಸುತ್ತಾರೆ.

ಚಿತ್ರಗಾರ ಪಿ. ಸುಬ್ಬರಾವ್‌ರವರು ಜಪಾನ್‌ನಲ್ಲಿ ಜಾಮಿನಿರಾಯರು ಹೇಗೆ ಜನರ ಬದುಕನ್ನು ಚಿತ್ರಿಸಿದವರು ಹಾಗೆ ಭಾರತದಲ್ಲಿ, ಅದರಲ್ಲಿಯೂ ಕರ್ನಾಟಕದಲ್ಲಿ ಹಳ್ಳೀಗರ ಭಾವಭಕ್ತಿ, ಆಚಾರ-ವಿಚಾರ, ಅಭಿರುಚಿ, ವರ್ಣ ಸಾಮಂಜಸ್ಯಕ್ಕೆ ಒಂದು ತಳಹದಿ ಹಾಕಿದವರಾಗಿ ವಿಶ್ಲೇಷಿಸುತ್ತಾರೆ. ಅವರ ಹಳ್ಳಿಯ ಜೀವನ ಚಿತ್ರಗಳು, ಸಾಮಾಜಿಕ ಜೀವನ ಚಿತ್ರವಾಗಿ ತಾಯಿ-ಮಗು, ಭಾವನಾತ್ಮಕ ಚಿತ್ರಗಳು, ಸಮಸ್ಯಾತ್ಮಕ ಚಿತ್ರಗಳು, ವ್ಯಕ್ತಿಯ ಬಾಹ್ಯಕ್ಕೆ ಪ್ರಾಧಾನ್ಯತೆ ಕೊಡದೆ ಅಂತರಂಗದಲ್ಲಿ ಆಗುತ್ತಿರುವ ಆಂದೋಲನ ಅನುಭವವನ್ನು ಚಿತ್ರಿಸುವ ಬಗೆಯನ್ನು ಚರ್ಚಿಸುತ್ತಾರೆ.

ಅ. ನ. ಕೃ. ರವರು ಈ ಕೃತಿಯಲ್ಲಿ ಕನ್ನಡ ನಾಡಿನವರೇ ಆದ ಸಂಗೀತಗಾರರು, ನಾಟಕಕಾರರು, ಚಿತ್ರಕಾರರನ್ನು ಪರಿಚಯಿಸುತ್ತಾರೆ. ಕನ್ನಡ ನಾಡಿನ ಕಲೆ, ಸಂಗೀತ, ನಾಟಕದ ಬೆಳವಣಿಗೆಗೆ ಹೇಗೆ ಕೊಡುಗೆಯನ್ನು ನೀಡಿದ್ದಾರೆ, ಕನ್ನಡ ನಾಡಿನ ಕಲಾವಿದರ ವ್ಯಕ್ತಿತ್ವವನ್ನು ಪರಿಚಯಿಸುವುದರೊಂದಿಗೆ ಮುಂದಿನ ಪೀಳಿಗೆಯು ಕನ್ನಡ ನಾಡಿನ ಕಲೆ, ಸಂಗೀತ, ನಾಟಕ ಕ್ಷೇತ್ರಕ್ಕೆ ದುಡಿದವರನ್ನು ಸ್ಮರಿಸುವ ಒಂದು ಪ್ರಯತ್ನವಾಗಿದೆ.

ಬಹಳ ಮುಖ್ಯವಾಗಿ ಅ. ನ. ಕೃ. ರವರು ಕರ್ನಾಟಕ ಕಲಾವಿದರು ಭಾಗ ೧ ಮತ್ತು ಭಾಗ ೨ರಲ್ಲಿ ಕಲಾವಿದರನ್ನು ಪರಿಚಯಿಸುವುದು ಮಾತ್ರವಲ್ಲದೆ ಛಾಯಾ ಚಿತ್ರಗಳನ್ನು ಅದರೊಂದಿಗೆ ನೀಡುವ ಮೂಲಕ ಅವರನ್ನು ಪರಿಚಯಿಸುತ್ತಾರೆ. ಬರಹವಾದರೆ ಕೆಲವರು ಓದಬಹುದು, ಇನ್ನು ಕೆಲವರು ಓದಿ ಮರೆಯಬಹುದು. ಆದರೆ ಚಿತ್ರಗಳಿಂದ ವ್ಯಕ್ತಿಯನ್ನು ನೋಡಿದಾಗ ಅದು ದೀರ್ಘಕಾಲಿಕವಾಗಿ ನೆನಪಿನಲ್ಲಿ ಉಳಿಯುತ್ತದೆ ಎಂಬ ಧೋರಣೆಯಿದೆ.

ಯುವಪೀಳಿಗೆ ನಾಡಿನ ಕಲೆ, ಸಂಗೀತ, ನಾಟಕ ಕ್ಷೇತ್ರಕ್ಕೆ ದುಡಿಯುವವರನ್ನು ಮರೆತು ಚಲನಚಿತ್ರ ನಾಯಕ ನಟ ನಟಿಯರನ್ನು ಕಲಾವಿದರೆಂದು ಗುರುತಿಸುತ್ತಾರೆ ಹೊರತು ಹಿಂದೆ ಒಂದು ಪರಂಪರೆಯನ್ನು ಬೆಳೆಸಿದ ಚಿತ್ರಕಲೆಯಲ್ಲಿ ಮಿಣಜಿಗಿಯವರು, ನಾಟಕದಲ್ಲಿ ಗುಬ್ಬಿ ವೀರಣ್ಣನವರು, ಸಂಗಿತದಲ್ಲಿ ಸವಾಯ್ ಗಂಧರ್ವ, ದೇವೇಂದ್ರಪ್ಪ, ವೆಂಕಟಗಿರಿಯಪ್ಪ ಮೊದಲಾದವರನ್ನು ಸ್ಮರಿಸುವ ಅಥವಾ ನೆನಪಿಸುವ ಗೋಜಿಗೆ ಹೋಗುವುದಿಲ್ಲ.

ಇವೆಲ್ಲಾ ದೃಷ್ಟಿಯಿಂದ ಕರ್ನಾಟಕ ಕಲಾವಿದರ ಕುರಿತು ಬರೆದ ಈ ಎರಡು ಕೃತಿಗಳು ಕನ್ನಡ ನಾಡಿನ ಸಾಂಸ್ಕೃತಿಕ ರಾಯಭಾರಿಗಳಾದ ಕಲಾವಿದರನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ಪ್ರಮುಖ ಕೃತಿಗಳಾಗಿವೆ. ಕಥೆ, ಕಾದಂಬರಿ, ಕಾವ್ಯವೆಂದು ಸಾಹಿತ್ಯವಿದ್ದ ಕಾಲಘಟ್ಟದಲ್ಲಿ

(೧೯೪೦-೫೦ರ ದಶಕದಲ್ಲಿ) ಕನ್ನಡ ನಾಡಿಗೆ ಸೇವೆ ಸಲ್ಲಿಸಿದ ಕಲಾವಿದರನ್ನು ನೆನಪಿಸುವ ಈ ಕೃತಿಗಳು ಇಂದೂ ಮಹತ್ವದ ಕೃತಿಗಳಾಗಿವೆ.

ಸಾಹಿತ್ಯ ಮತ್ತು ಯುಗಧರ್ಮ – ೧೯೫೨

ಇದರಲ್ಲಿ ಒಟ್ಟು ೧೪ ಪ್ರಬಂಧಗಳಿದ್ದು ಅದರಲ್ಲಿ ಏಳು ಪ್ರಬಂಧಗಳನ್ನು ಬೇರೆ ಬೇರೆ ಕೃತಿಗಳಲ್ಲಿ ಕಾಣಬಹುದಾಗಿದೆ. ಅವುಗಳ ವಿಚಾರವನ್ನು ಯಾವ ತಾತ್ವಿಕ ನೆಲೆಯಲ್ಲಿ ಗ್ರಹಿಸಿದ್ದಾರೆ ಎಂಬುದನ್ನು ಈಗಾಗಲೇ ವಿಶ್ಲೇಷಿಸಲಾಗಿದೆ. ಇನ್ನಿತರ ಕೆಲವೊಂದು ಲೇಖನಗಳನ್ನು ಹಿನ್ನೆಲೆಯಲ್ಲಿ ಅವರ ತಾತ್ವಿಕತೆಯನ್ನು ನೋಡಬಹುದು.

ಲಿಂಗೈಕ್ಯ ಪ್ರೊ॥ ಬಸವನಾಳ ಎಂಬ ಲೇಖನದಲ್ಲಿ ವೀರಶೈವ ಸಾಹಿತ್ಯದ ಸಂಗ್ರಹ ಮತ್ತು ಸಂಪಾದನೆಯ ಜೊತೆಗೆ ಉತ್ತರ ಕರ್ನಾಟಕದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ, ಬೆಳಗಾವಿ ಪರಿಸರದಲ್ಲಿ ಅದರಲ್ಲೂ ಗಡಿನಾಡುಗಳಲ್ಲಿ ಕನ್ನಡದ ಉಳಿವಿಗಾಗಿ ಹೋರಾಡಿದವರಾಗಿದ್ದಾರೆ. ಉತ್ತರ ಕರ್ನಾಟಕದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಕನ್ನಡದ ತೇರನ್ನು ಎಳೆದವರಾಗಿ ಬಸವನಾಳರು ಒಬ್ಬರಾಗಿ ಗ್ರಹಿಸಿರುವುದು ವಿಶೇಷ.

'ಸಾಹಿತ್ಯದಲ್ಲಿ ವ್ಯಷ್ಟಿ ಸಮಷ್ಟಿ ವಾದ' ಎಂಬ ಲೇಖನದಲ್ಲಿ ವಿಶ್ವ ಸಾಹಿತ್ಯದ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಅ. ನ. ಕೃ. ಎರಡು ಮಹಾಯುದ್ಧಗಳನ್ನು ಎದುರಿಸಿದ ರಷ್ಯಾ ಬೆಳವಣಿಗೆಯನ್ನು ಹೊಂದಲು ಅಲ್ಲಿನ ರಾಜಕಾರಣದ ಶಕ್ತಿ, ಲೆನಿನ್, ಸ್ಟಾಲಿನ್ ಮೊದಲಾದವರು. ಜೊತೆಗೆ ಗಾರ್ಕಿ, ಮಾಯಾಕೂವಸ್ಕಿ, ಅಲೆಕ್ಸಿ, ಟಾಲ್‌ಸ್ಟಾಯ್ ಮೊದಲಾದ ಕವಿಗಳ ಸಾಹಿತ್ಯವು ಸಾಂಘಿಕ ಮುಖದ ಕಡೆ ತಿರುಗಿದ್ದು, ಅಲ್ಲಿ ಸಮಷ್ಟಿವಾದ ಬೆಳೆದು ದೇಶ ಅಭಿವೃದ್ಧಿ ಹೊಂದಲು ಕಾರಣವಾಯಿತೆಂದು, ಅಮೆರಿಕಾದ ಸಾಹಿತ್ಯ ವ್ಯಕ್ತಿವಾದದ ಕಡೆಗೆ ತಿರುಗಿ ಜಾರ್ಜ್ ವಾಷಿಂಗ್ಟನ್, ಲಿಂಕನ್, ಜೆಫರ್‌ಸನ್ ಮೊದಲಾದ ರಾಜಕಾರಣಿಗಳಿಂದ ಕಟ್ಟಲ್ಪಟ್ಟ ಅಮೆರಿಕಾ ಕಾಲಕ್ರಮೇಣ ಜಾನಪದ ಸ್ವರೂಪವನ್ನು ಕಳೆದುಕೊಂಡು ಬಂಡವಾಳಗಾರರ ಕೈಗೊಂಬೆಯಾಯಿತು. ಅಲ್ಲಿನ ಸಾಹಿತ್ಯವು ಬಂಡವಾಳಗಾರರ ಮುಖವಾಣಿಯಾಗದೆ ವಿಶ್ವ ಶಾಂತಿ, ವಿಶ್ವ ಮೈತ್ರಿ, ವಿಶ್ವ ಪ್ರೇಮವನ್ನು ಸಾರಿದೆ. ಆದರೆ ಫ್ರಾನ್ಸಿನಲ್ಲಿ ಮಹಾಕ್ರಾಂತಿ ಉಂಟಾಗಲು ವಾಲ್ಟೇರ್ ರೂಸೋ, ವಿಕ್ಟರ್ ಹ್ಯೂಗೋ ಮೊದಲಾದ ಸಾಹಿತಿಗಳು ಕಾರಣರಾದರು, ಆದರೆ ಫ್ರಾನ್ಸಿನಲ್ಲಿ ಕ್ರಮೇಣ ವ್ಯಕ್ತಿವಾದವೇ ನಿರ್ಮಾಣವಾಯಿತು.

ಪಾಶ್ಚಾತ್ಯ ದೇಶದಲ್ಲಿ ಸಮಷ್ಟಿವಾದ ಸಾಹಿತ್ಯವೇ ನಿರ್ಮಾಣವಾಗಿ ಕಾಲಕ್ರಮೇಣ ವ್ಯಕ್ತಿವಾದವಾಗಿ ಮಾರ್ಪಟ್ಟು ವಿಶ್ವದಲ್ಲಿ ಎರಡು ಮಹಾಯುದ್ಧಗಳು ಘಟಿಸಲು ಈ ವ್ಯಕ್ತಿವಾದವೇ ಕಾರಣವಾಗಿದೆ. ಪಾಶ್ಚಾತ್ಯ ದೇಶಗಳಲ್ಲಿನ ವ್ಯಷ್ಟಿ ಮತ್ತು ಸಮಷ್ಟಿ ವಾದಕ್ಕೆ ಸೇತುವೆಯಾಗಿ ವ್ಯಕ್ತಿಯು ಬೆಳೆಯಬೇಕಾಗಿದೆ. ಅದು ಸಮಷ್ಟಿಯ ಚಿಂತನೆಯೊಂದಿಗೆ ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಯೇ ಉತ್ತರ ನೀಡುವ ದಾರಿದೀಪವಾಗಿ ವ್ಯಷ್ಟಿ ಸಮಷ್ಟಿವಾದಕ್ಕೆ ತಮ್ಮ ಭಾರತೀಯ ಪರಿಕಲ್ಪನೆಯನ್ನು ತಾತ್ವೀಕರಿಸುತ್ತಾರೆ.

'ಶ್ರಮಜೀವಿ ಮತ್ತು ಸಾಹಿತ್ಯ' ಎಂಬ ಲೇಖನದಲ್ಲಿ ಸಾಹಿತ್ಯವೆಂಬುದು ಶ್ರಮಜೀವಿಯ ಸಮಸ್ಯೆಗಳಿಗೆ ಪರಿಹಾರ ನೀಡುವ. ಸಾಹಿತ್ಯವು ಉಳ್ಳವರ ಪರವಾಗಿರುವುದಕ್ಕಿಂತ ಶ್ರಮಜೀವಿಯ

ಪರವಾಗಿ ನಿಲ್ಲಬೇಕೆಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ. 'ಕನ್ನಡ ಕಾದಂಬರಿಯಲ್ಲಿ ವಾಸ್ತವಿಕತೆ' ಎಂಬ ಲೇಖನದಲ್ಲಿ ಕನ್ನಡ ಸಾಹಿತ್ಯವನ್ನೆಲ್ಲಾ ಅವಲೋಕಿಸಿದಾಗ ಅಲ್ಲಿ ಆದರ್ಶವನ್ನೇ ಹೇಳಿಕೊಂಡು ಬಂದಿದೆ. ಫ್ರಾನ್ಸ್‌ನಲ್ಲಿ ಹುಟ್ಟಿಕೊಂಡು ಬಂದ ವಾಸ್ತವವಾದ ಕನ್ನಡ ಸಾಹಿತ್ಯದಲ್ಲಿ ಪ್ರೇರಣೆ ಪ್ರಭಾವವನ್ನು ಬೀರಿ ವಾಸ್ತವವಾಗಿ ಕಾದಂಬರಿ ರೂಪು ಪಡೆಯಿತೆಂದು ಇದಕ್ಕೆ ಸಾಮ್ಯವಾದವು ಕಾರಣವಲ್ಲವೆಂದು ಚರ್ಚಿಸುತ್ತಾರೆ. ಸಾಮ್ಯವಾದವನ್ನೇ ಅಲ್ಲಗಳೆಯುವ ಅ. ನ. ಕೃ. ಕಾರ್ಲ್ ಮಾರ್ಕ್ಸ್ ತತ್ವದಿಂದ ರಷ್ಯಾದ ಮಾರ್ಗವಾಗಿ ಬಂದಿತ್ತೆಂದು ಭಾವಿಸುವ ಜನರು ನಮ್ಮ ಅರಣ್ಯಕಗಳಲ್ಲಿಯೇ ಅದರ ತತ್ವ ಅಡಗಿದೆ ಮತ್ತು ಆ ರೀತಿಯ ವಿಚಾರಗಳಿಂದಲೇ ಭಾರತ ಸಮಾಜ ನಿರ್ಮಾಣಗೊಂಡಿದೆ. ಆ ತತ್ವದ ಮೇಲೆಯೇ ನಮ್ಮ ಪ್ರಾಚೀನ ಕನ್ನಡ ಕಾದಂಬರಿಕಾರರು ಯಾರು ವರ್ಗವಾದ, ಬಂಡವಾಳವಾದ ಮತ್ತು ಜಾತಿವಾದಗಳನ್ನು ಅಂಗೀಕರಿಸಲಿಲ್ಲವೆಂದು ಆ ಮೂಲಕ ಸಾಮ್ಯವಾದವು ಹುಟ್ಟಿದ್ದೇ ಭಾರತದಲ್ಲಿ, ಅದರಲ್ಲೂ ಉಪನಿಷತ್ತು, ಅರಣ್ಯಕಗಳಲ್ಲಿ ಆ ವಿಚಾರಗಳಿವೆ ಎಂಬುದನ್ನು ಚರ್ಚಿಸುತ್ತಾರೆ.

ವೀರಶೈವ ಸಾಹಿತ್ಯದ ಪ್ರತಿಪಾದಕರಾದ ಅ. ನ. ಕೃ. ರವರು ತಮ್ಮ ಅನೇಕ ವೈಚಾರಿಕ ಲೇಖನಗಳಲ್ಲಿ ವೀರಶೈವ ಸಾಹಿತ್ಯವನ್ನು ಕುರಿತಂತೆ ವಿವರಿಸುವುದರ ಜೊತೆಗೆ ವಿಶ್ಲೇಷಿಸಿದ್ದಾರೆ. ಅವರ 'ವೀರಶೈವ ಸಾಹಿತ್ಯದ ನಿಜ ಸ್ವರೂಪ' ಎಂಬ ಲೇಖನದಲ್ಲಿ ಅದರ ಸ್ವರೂಪವನ್ನು ವಿಶ್ಲೇಷಿಸುತ್ತಾರೆ. ವೀರಶೈವ ಸಾಹಿತ್ಯವೆಂಬುದು ಸಮಸ್ತ ಜನರು ಬದುಕಬೇಕೆಂದು ನಿರ್ಮಾಣವಾದ ಸಾಹಿತ್ಯವಾಗಿದೆ. ವೀರಶೈವ ಶ್ರೇಷ್ಠತೆಯನ್ನು ಸಾರಿದ ಮತವಲ್ಲ, ಬಸವಣ್ಣನಿಂದ ಹಿಡಿದು ಸರ್ವಜ್ಞನವರೆಗೂ ಅದರ ವ್ಯಾಪ್ತಿಯನ್ನು ಗುರುತಿಸುತ್ತಾರೆ. ವೀರಶೈವ ಸಾಹಿತ್ಯವೆಂಬ ಸಂಕುಚಿತಾರ್ಥದಲ್ಲಿ ನೋಡಬಾರದೆಂದು ವೀರಶೈವ ಸಾಹಿತ್ಯವು ವಿನಯದ ಅವಶ್ಯಕತೆ, ನಾನು ನನ್ನದು ಎಂಬ ಭಾವನೆ ಸರಿಯಲ್ಲ, ಜೀವನದ ಒಳಗೂ ಹೊರಗೂ ಶುದ್ಧರಾಗಿರುವುದು, ನಡೆನುಡಿಯಲ್ಲಿ ಸಮನ್ವಯತೆ, ಮಾನವನ ಔನತ್ಯವನ್ನು ಸ್ಥಾಪಿಸಿ ಏಕದೇವನಲ್ಲಿ ಅನನ್ಯ ಭಕ್ತಿ, ಆತನ ನಿಜವನ್ನು ತಿಳಿಸುವುದು, ಸಾಹಿತ್ಯವನ್ನು ಸಾಮಾನ್ಯ ಜನರ ಮನೆಗೆ ತಂದು ಮುಟ್ಟಿಸಿದ ಕೀರ್ತಿ ವೀರಶೈವ ಸಾಹಿತ್ಯವೆಂದು, ವೀರಶೈವ ಸಾಹಿತ್ಯದ ಸ್ವರೂಪವನ್ನು ಸ್ಪಷ್ಟಪಡಿಸುತ್ತಾರೆ.

'ಉಮರ್ ಖಯ್ಯಾಂ' ಎಂಬ ಲೇಖನದಲ್ಲಿ ಪರ್ಶಿಯನ್ ಕವಿಯಾದ ಉಮರ್ ಖಯ್ಯಾಂನ ಜೀವನ ಬದುಕನ್ನು ಕುರಿತಂತೆ ಬೆಳಕು ಚೆಲ್ಲುವ ಲೇಖನವಾಗಿದೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಪರ್ಶಿಯನ್ ಭಾಷೆಯಲ್ಲಿ ಅವನು ಬರೆದ ರುಬಾಯಿತ್‌ಗಳನ್ನು ಇಂಗ್ಲಿಷಿಗೆ ಫಿಟ್ಸ್‌ಜೆರಾಲ್ಡ್ ಎಂಬ ಆಂಗ್ಲಕವಿ ಅನುವಾದಿಸಿದ್ದ. ಸೂಫಿ ಪಂಥದ ಅನುಯಾಯಿಯಾದ ಉಮರ್‌ನ ಕಾವ್ಯದಲ್ಲಿ ಧರ್ಮದ್ವೇಷವನ್ನು ನಾಸ್ತಿಕತೆಯನ್ನು ಬೋಧಿಸುವ ವಿಚಾರಗಳನ್ನು ನೋಡಿದರೆ ಅನುವಾದಕರು ಎಚ್ಚರ ವಹಿಸದೇ ಇದ್ದರೆ ಏನೆಲ್ಲಾ ಅನಾಹುತವಾಗುತ್ತದೆ ಎಂಬ ವಿಚಾರವಿದೆ. ಜೊತೆಗೆ ಅನುವಾದಕರಾದವರು ಮೂಲ ಕೃತಿಯನ್ನು ತಿಳಿಯದೇ ಹೋದರೆ ಹೇಗೆ ಅಪಾರ್ಥಕ್ಕೆ ಎಡೆ ಮಾಡಿಕೊಡುತ್ತದೆ ಎಂಬುದನ್ನು ಚರ್ಚಿಸುತ್ತಾರೆ.

ಉಮರನ ಕಾವ್ಯದ ಬಗ್ಗೆ ಪಾಶ್ಚಾತ್ಯರಲ್ಲಿ ವಿರೋಧಾಭಿಪ್ರಾಯ ಬೆಳೆಯಲು ಅವರಿಗೆ ಸೂಫಿ ಸಂಕೇತವೇ ತಿಳಿಯದೇ ಇದ್ದದ್ದು, ಷೇಕ್ಸ್‌ಪಿಯರನ ಸುನೀತಗಳು, ಕೀಟ್ಸ್‌ನ ಪ್ರಣಯ ಗೀತೆಗಳು ಮೊದಲಾದವುಗಳನ್ನು ಓದಿದವರಿಗೆ ಇಂಗ್ಲೀಷೀಕರಿಸಿದ ಉಮರನ ಕಾವ್ಯದಲ್ಲಿ ಅದೇ ವಿಚಾರಗಳು

ಪ್ರತಿಧ್ವನಿಸಿತ್ತು. ಇದಕ್ಕೆ ಅವರು ಬೀರಿದ ಪ್ರಭಾವವೇ ಕಾರಣವಾಗಿತ್ತು. ಒಂದು ಸಮುದಾಯದ ಮೇಲೆ ಹೇಗೆಲ್ಲಾ ಕೆಲವರ ಬರಹಗಳು ಪ್ರಭಾವಿಸಿ ಬೇರೆ ಕೃತಿಗಳನ್ನು ಅದೇ ಧಾಟಿಯಲ್ಲಿ ನೋಡುವ ದೃಷ್ಟಿಯನ್ನು ಇದರಿಂದ ತಿಳಿಯಬಹುದು.

ಇದರಲ್ಲಿ ಬಹಳ ಮುಖ್ಯವಾಗಿ ಅ. ನ. ಕೃ. ರವರು ಉಮರ್ ಖಯ್ಯಾಂ ಸೂಫಿಯಾಗಿದ್ದಾನೆಯೇ ಅಥವಾ ಇಲ್ಲವೇ ಎಂಬ ವಿಚಾರವನ್ನು ಎತ್ತಿಕೊಂಡು ಪ್ರಬಂಧವನ್ನು ಬೆಳೆಸಿರುವುದು ಒಂದು ವಿಶೇಷ. ಅವನು ಸೂಫಿ ಪಂಥದವನೆಂದು ಡಿ. ವಿ. ಗುಂಡಪ್ಪನವರ ಉಮರನ ಒಸಗೆಯ ಹಿನ್ನೆಲೆಯಲ್ಲಿ, ಉಮರನ ಕಾವ್ಯದ ಮೇಲೆ ಸುದೀರ್ಘ ವಿಮರ್ಶೆ ಬರೆದ ಮೌಲಾನಾ ಷಬ್ಲಿ ಮತ್ತು ಅವನ ಕಾವ್ಯದ ಹಿನ್ನೆಲೆಯಲ್ಲಿಯೇ ಆತ ಸೂಫಿ ಪಂಥದವನಾಗಿದ್ದನು. ರೋಮನ್ ರಾಜ್ಯದಲ್ಲಿ ಕ್ರೈಸ್ತರು ತಲೆಮರೆಸಿಕೊಂಡು ತಮ್ಮ ಧರ್ಮವನ್ನು ಆಚರಿಸುತ್ತಿದ್ದ ಹಾಗೆ ಪರ್ಶಿಯನ್ ಸಂಪ್ರದಾಯಪ್ರಿಯರು ಕಟು ಧರ್ಮಪ್ರಚಾರಕರು ತುಂಬಿದ ಸಂದರ್ಭದಲ್ಲಿ ತಾನು ಸೂಫಿಯೆಂದು ಹೇಳಿಕೊಂಡು ಬಾಳುವುದು ಕಷ್ಟವೆಂದು ತಿಳಿದಿದ್ದರಿಂದಲೇ ತನ್ನ ಅನೇಕ ಪದ್ಯಗಳಲ್ಲಿ ಸೂಫಿ ಪಂಥದವನಾಗಿ ಅನೇಕ ವಿಷಯಗಳನ್ನು ತಿಳಿಸುತ್ತಾನೆ ಎಂದು ಚರ್ಚಿಸುತ್ತಾರೆ. ಧಾರ್ಮಿಕ ಸಂಪ್ರದಾಯತೆ ಎಂಬುದು ಭಾರತದಲ್ಲಿ ಮಾತ್ರವಲ್ಲ ಜಗತ್ತಿನ ಬೇರೆ ಬೇರೆ ಕಡೆಯಲ್ಲೂ ಕಟುವಾಗಿ ಆಚರಣೆಯಲ್ಲಿತ್ತು ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ.

'ಉಮರನ ಸಾಹಿತ್ಯದಲ್ಲಿ ಪ್ರೇಮ' ಎಂಬ ಲೇಖನದಲ್ಲಿ ಸೂಫಿಗಳು ಏಕೆ ಸಂಕೇತದ ಮೂಲಕ ದೇವರನ್ನು ಸಂಭೋದಿಸುವುದು ಎನ್ನುವುದಕ್ಕೆ ಕುರಾನಿನ ಉಪದೇಶದ ಒಂದು ಶಾಖೆಯಾಗಿ ಸೂಫ಼ಿ ಪಂಥ ಬೆಳೆದುಕೊಂಡರೂ ಅದನ್ನು ಸನಾತನಿಗಳು ಒಪ್ಪಲಿಲ್ಲ. ಜೊತೆಗೆ ಪರಂಪರೆಯ ಒಲವು ಇಲ್ಲದೇ ಇದ್ದುದ್ದರಿಂದ ಸೂಫಿಗಳು ಸಂಕೇತಗಳನ್ನು ಬಳಸಿಕೊಂಡರು. ಪ್ರೇಮ ಸೌಂದರ್ಯದ ನಿಧಿಯಾಗಿ ಹೆಣ್ಣನ್ನು ನೋಡುವುದರಿಂದ ಹೆಣ್ಣನ್ನು ದೇವರೆಂದು ಭಾವಿಸಿದರು ಎಂಬ ವಿಚಾರಗಳನ್ನು ಉಮರನ ಪದ್ಯಗಳಲ್ಲಿನ ಪ್ರೇಮದ ಸ್ವರೂಪವನ್ನು ಅ. ನ. ಕೃ. ವಿಶ್ಲೇಷಿಸುತ್ತಾರೆ.

ವೀರಶೈವ ಸಾಹಿತ್ಯದ ಹಾಗೆ ಸೂಫಿ ಸಾಹಿತ್ಯವು ಮನುಷ್ಯನ ಅನೇಕ ಸಮಸ್ಯೆಗಳಿಗೆ ಪರಿಹಾರ ನೀಡುವ ಮೂಲಕ ಜಗತ್ತನ್ನು ಹಿಂಸೆಯಿಂದ, ಸಂಘರ್ಷದಿಂದ ಜನತೆಯು ಮುಕ್ತವಾಗಲಿ ಎಂಬ ಆಶಯವಿದ್ದದ್ದರಿಂದಲೇ ಸೂಫಿ ಸಾಹಿತ್ಯದ ಬಗ್ಗೆ ಅ. ನ. ಕೃ. ರವರಿಗೆ ಒಲವು ಇತ್ತು.

ಬಳ್ಳಾರಿಯ ಸಮಸ್ಯೆ ಮತ್ತು ಕರ್ನಾಟಕ ಪ್ರಾಂತ್ಯ – ೧೯೫೩

ಕರ್ನಾಟಕ ಪ್ರಾಂತ್ಯ ರಚನೆಯಲ್ಲಿ ಬಳ್ಳಾರಿಯ ಸಮಸ್ಯೆಯನ್ನು ಕುರಿತಂತೆ ಬರೆದ ಚಿಕ್ಕ ಕೃತಿಯಾಗಿದೆ. ಏಕೀಕರಣದ ಮೊದಲು ಬಳ್ಳಾರಿ ಪ್ರಾಂತ್ಯ ಮದ್ರಾಸ್ ಆಡಳಿತಕ್ಕೆ ಒಳಪಟ್ಟಿತ್ತು. ೧೯೨೧ರಲ್ಲಿ ಕೇಳ್ಕರ್ ಸಮಿತಿಯ ವರದಿಯಿಂದಾಗಿ ಬಳ್ಳಾರಿಯ ಮೂರು ತಾಲೂಕುಗಳನ್ನು ಆಂಧ್ರ ಪ್ರಾಂತ್ಯ ಕಾಂಗ್ರೆಸ್‌ಗೆ ಒಪ್ಪಿಸಿದಾಗಿನಿಂದ ಈ ಸಮಸ್ಯೆಯ ಮೂಲ ಕಾರಣವನ್ನು ಗುರುತಿಸುತ್ತಾರೆ. ಬಳ್ಳಾರಿಯ ಸಮಸ್ಯೆ ಎಂಬುದು ಕೇಂದ್ರ ಸರಕಾರದ ರಾಜಕೀಯ ಹಗರಣವಾಗಿ ಅದನ್ನು ಆಂಧ್ರದವರಿಗೆ ಭಾಗ ಮಾಡಿ ಕೊಡುವ ಪ್ರಯತ್ನವಾಗಿ ಅಂದಿನ ನೆಹರೂ ಸರ್ಕಾರ ಮತ್ತು ಜನಗಣತಿಗೆ ಬಂದ ಆಂಧ್ರ ಅಧಿಕಾರಿಗಳು ತೆಲುಗು ಭಾಷಿಕ ಸಮುದಾಯದವರು ಹೆಚ್ಚಾಗಿ ಇದ್ದಾರೆ ಎಂದು ತಪ್ಪು ಮಾಹಿತಿ ನೀಡಿದ್ದು, ಆರ್ಥಿಕವಾಗಿ ಸಂಪದ್ಭರಿತವಾದ ಮೂರು ತಾಲೂಕು ಆಂಧ್ರಕ್ಕೆ

ಸೇರಿಸಿ ಉಳಿದ ಸಂಪದ್ಭರಿತವಲ್ಲದ ಜಿಲ್ಲೆಗಳ ತಾಲೂಕನ್ನು ಮೈಸೂರು ರಾಜ್ಯಕ್ಕೆ ಸೇರಿಸಲು ಮಾಡಿದ ಹಗರಣವಾಗಿ, ಅಂದಿನ ಕರ್ನಾಟಕದ ಮುಖ್ಯಮಂತ್ರಿ ಕೆ. ಸಿ. ರೆಡ್ಡಿಯವರು ಕೋಲಾರದಲ್ಲಿ ಮಾಡಿದ ಭಾಷಣದಲ್ಲಿ ಕೋಲಾರ ಆಂಧ್ರಕ್ಕೆ ಸೇರಿಸಬೇಕೆಂಬ ದೃಷ್ಟಿ ಇವೆಲ್ಲವುಗಳನ್ನು ಅ. ನ. ಕೃ. ಚರ್ಚಿಸುತ್ತಾರೆ.

ಆರ್ಥಿಕ ಸಮಸ್ಯೆ ಮತ್ತು ಕರ್ನಾಟಕ ಪ್ರಾಂತ ರಚಿತವಾದರೆ ಲಿಂಗಾಯತ ಪ್ರಾಬಲ್ಯ ಹೆಚ್ಚಿ ಉಳಿದವರು ಹಿಂಸೆಗೆ ಒಳಗಾಗುತ್ತಾರೆ ಎಂಬ ಎರಡು ದೃಷ್ಟಿಯಿಂದ ನೆಹರೂರವರು ಕರ್ನಾಟಕ ಪ್ರಾಂತ್ಯ ರಚಿಸಲು ಒಪ್ಪದೆ ಇದ್ದಿದ್ದು, ಇವುಗಳಿಗೆ ಉತ್ತರವಾಗಿ ಅ. ನ. ಕೃ. ದೇಶದ ರಾಜಧಾನಿ ನಿರ್ಮಾಣ ಮಾಡಲು ೧೫ ಕೋಟಿಯನ್ನು ನೆಹರೂರವರು ಮೀಸಲು ಇಟ್ಟಿದ್ದು, ಆಗ ಆರ್ಥಿಕ ಸಮಸ್ಯೆ ಬರಲಿಲ್ಲವೇ ಎಂದು, ಕರ್ನಾಟಕದಲ್ಲಿ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಭಿನ್ನ ಸಮುದಾಯದವರು ಹೆಚ್ಚಿದ್ದು, ಹೇಗೆ ಕರ್ನಾಟಕದಲ್ಲಿ ಲಿಂಗಾಯತರು ಸರ್ವಾಧಿಕಾರಿಗಳಾಗುತ್ತಾರೆ ಎಂದು ಪ್ರಶ್ನಿಸುತ್ತಾರೆ. ಈ ರೀತಿಯ ಕೋಮುವಾರು ವಿಷ ಬೀಜವನ್ನು ಕಿತ್ತೊಗೆಯಬೇಕಾದರೆ ಏಕೀಕರಣ ಒಂದೇ ಮಾರ್ಗವಾಗಿದೆ ಎಂಬ ಅಂಶವನ್ನು ಅಂದು ಅ. ನ. ಕೃ. ಕರ್ನಾಟಕ ಏಕೀಕರಣ ವಿರೋಧಿ ಮನಃಸ್ಥಿತಿಯ ಕೇಂದ್ರ ಸರಕಾರದ ನಾಯಕರನ್ನು ಪ್ರಶ್ನಿಸುತ್ತಾರೆ.

ಕರ್ನಾಟಕ ಏಕೀಕರಣಕ್ಕೆ ತಡೆಯಾಗಲು ಕೇಂದ್ರದಲ್ಲಿ ಕನ್ನಡಿಗರು ಅಖಿಲ ಭಾರತ ಕಾಂಗ್ರೆಸ್ ಕಾರ್ಯ ಸಮಿತಿಯಲ್ಲಿ ಯಾರೂ ಇಲ್ಲದೇ ಇರುವುದು, ಮೊದಮೊದಲು ಕರ್ನಾಟಕ ಪ್ರಾಂತ್ಯ ರಚನೆಗೆ ಬೆಂಬಲ ಕೊಡುತ್ತಿದ್ದ ವಲ್ಲಭಭಾಯಿ ಪಟೇಲ್, ಬಿ. ಜಿ. ಖೇರರು, ರಾಜಗೋಪಾಲಾಚಾರ್ಯರು, ಕೆ. ಎಂ. ಮುನ್ಷಿಯವರು ನಂತರ ವಿರೋಧ ವ್ಯಕ್ತಪಡಿಸಿದರು ಮತ್ತು ಕರ್ನಾಟಕದ ಒಳಗೆ ಮೈಸೂರಿಗರು ಬೆಂಬಲ ಕೊಡದೇ ಇದ್ದದ್ದು, ಮೈಸೂರೇತರ ಕನ್ನಡಿಗರು ಮೈಸೂರು ಅರಸರನ್ನು ಒಪ್ಪದೇ ಇದ್ದದ್ದು, ಕರ್ನಾಟಕ ಪ್ರಾಂತಿಕ ಸಮಿತಿಯ ಒಡೆದು ಆಳುವ ನೀತಿ, ಇದರಿಂದ ಕರ್ನಾಟಕ ಏಕೀಕರಣಕ್ಕೆ ತಡೆಯಾಗುವ ಅಂಶವನ್ನು ತಾತ್ವಿಕವಾಗಿ ಅ. ನ. ಕೃ. ೧೯೫೩ರಲ್ಲಿಯೇ ಗ್ರಹಿಸಿದ್ದಾರೆ.

ನ್ಯಾಯಮೂರ್ತಿಗಳಾದ ಮಿಶ್ರಾರವರು ಬಳ್ಳಾರಿಯನ್ನು ಕರ್ನಾಟಕ್ಕೆ ಸೇರಿಸಬೇಕೆಂದು, ಅದವಾನಿ, ಆಲೂರು, ರಾಯದುರ್ಗ ಪ್ರಾಂತ್ಯದ ವಿವಾದ ಉಂಟಾಗಲು ಕೇಳ್ಕರ್ ವರದಿಯೇ ಕಾರಣವೆಂದು, ೧೯೫೧ರ ಜನಗಣತಿಯಂತೆ ಈ ಮೂರು ತಾಲೂಕುಗಳಲ್ಲಿ ಕನ್ನಡಿಗರ ಸಂಖ್ಯೆ ೬,೭೭,೫೭೫ ಇದೆಯೆಂದು, ತೆಲುಗರ ಸಂಖ್ಯೆ ೩,೭೫,೪೪೭ ಎಂದು, ಇದನ್ನು ಮಿಶ್ರಾ ವರದಿಯು ಒಪ್ಪಿಕೊಳ್ಳಲಿಲ್ಲ ಮತ್ತು ಕರ್ನಾಟಕದ ಕಮ್ಯೂನಿಸ್ಟ್ ಪಾರ್ಟಿಯ ಯು. ಎಲ್. ಉಪಾಧ್ಯಾಯರು ಈ ಮೂರು ಪ್ರದೇಶಗಳನ್ನು ಆಂಧ್ರಕ್ಕೆ ಸೇರಿಸಬೇಕೆಂಬ ನಿಲುವು, ಕಮ್ಯೂನಿಸ್ಟರು ಕನ್ನಡ ನಾಡಿನ ಪರವಾಗಿ ಎಂದೂ ಇರಲಿಲ್ಲವೆಂದೂ, ಈ ಮೂರು ಜನಗಳ ಸಾಮಾಜಿಕ ಮತ್ತು ವ್ಯಾವಹಾರಿಕ ಸಂಬಂಧಗಳು ಮೈಸೂರಿನೊಂದಿಗೆ ಇವೆ ಆದರೂ ಕಮ್ಯೂನಿಸ್ಟರು ಆಂಧ್ರಕ್ಕೆ ಸೇರಿಸಲು ಹವಣಿಸುತ್ತಾರೆ ಎಂಬುದಾಗಿ ಚರ್ಚಿಸುತ್ತಾರೆ.

ಕರ್ನಾಟಕದ ಪ್ರದೇಶವಾದ ಬಳ್ಳಾರಿಯ ಮೇಲೆ ದಬ್ಬಾಳಿಕೆ ಮಾಡಿ ಆಲೂರು, ಅದವಾನಿ, ರಾಯದುರ್ಗಗಳನ್ನು ಕಬಳಿಸಿದ ಆಂಧ್ರರು ಕನ್ನಡ ನಾಡಿನ ಸಾಮ್ರಾಜ್ಯವಾದ ವಿಜಯನಗರ ಸಾಮ್ರಾಜ್ಯ ತಮ್ಮದೆಂದು, ಕನ್ನಡ ಸಾಹಿತ್ಯ, ಕಲೆ, ವಾಸ್ತುಶಿಲ್ಪದ ಮೇಲೆ ಆಕ್ರಮಣ ಮಾಡುವ ರೀತಿಯನ್ನು

ಕನ್ನಡಿಗರು ಖಂಡಿಸಬೇಕು ಎಂಬ ನಿಲುವಿನೊಂದಿಗೆ ಆಂಧ್ರದವರ ದಾಳಿಯ ಮಾದರಿಯನ್ನು ತಿಳಿಸುತ್ತಾರೆ.

'ಕರ್ನಾಟಕ ಪ್ರಾಂತ್ಯ ಮತ್ತು ಮೈಸೂರು' ಎಂಬ ಭಾಗದಲ್ಲಿ ಕರ್ನಾಟಕ ಪ್ರಾಂತ್ಯ ರಚನೆಗೆ ಅಡ್ಡಿಯಾಗುವ ಮೇಲಿನ ಎಲ್ಲಾ ವಿಷಯಗಳನ್ನು ಸಮಗ್ರವಾಗಿ ಚರ್ಚಿಸುತ್ತಾರೆ. ಆ ಮೂಲಕ ಕರ್ನಾಟಕ ಪ್ರಾಂತ್ಯ ರಚನೆಯಿಂದಾಗಿ ಮೈಸೂರು ಅರಸರ ಆಡಳಿತದ ಕೆಳಗೆ ಮೈಸೂರೇತರ ಪ್ರಾಂತ್ಯದ ಜನ ತಿರಸ್ಕರಿಸಿದ್ದು, ಮೈಸೂರಿನ ಭಾಗದ ಒಕ್ಕಲಿಗರು ಎಲ್ಲಿ ತಮ್ಮ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ಕೊಡಲಿ ಪೆಟ್ಟು ಬೀಳುತ್ತದೆಂದು ಪ್ರಾಂತ್ಯ ರಚನೆಗೆ ಬೆಂಬಲ ಕೊಡಲಿಲ್ಲವೆಂದೂ, ಮೈಸೂರು ಕಲೆ, ಸಾಹಿತ್ಯ, ಸಂಗೀತ ಮೊದಲಾದವುಗಳಲ್ಲಿ ಬೆಳೆದಿದ್ದ ಮೈಸೂರೇತರ ಪ್ರಾಂತ್ಯಗಳು ಬೆಳೆದಿಲ್ಲವೆಂಬ ಧೋರಣೆಯ ವಿರುದ್ಧವಾಗಿ ಅ. ನ. ಕೃ. ರವರು ಕರ್ನಾಟಕದ ಇತರ ಭಾಗಗಳಲ್ಲಿ ಹೇಗೆ ಕಲೆ, ಸಾಹಿತ್ಯ, ಸಂಗೀತ, ನಾಟಕಗಳು ಬೆಳೆದಿವೆ ಎಂಬುದರೊಂದಿಗೆ ಮೈಸೂರು ಸಂಸ್ಕೃತಿ, ಮಂಗಳೂರು ಸಂಸ್ಕೃತಿ, ಧಾರವಾಡ ಸಂಸ್ಕೃತಿ ಎಂಬುದರಲ್ಲಿ ಅರ್ಥವಿಲ್ಲದ್ದು, ಕನ್ನಡ ಮಾತನಾಡುವ ಜನಜೀವನವೆಲ್ಲಾ ಒಂದೇ ಸಂಸ್ಕೃತಿ ಅದು ಕನ್ನಡ ಸಂಸ್ಕೃತಿ ಎಂಬ ತಾತ್ವಿಕ ನಿಲುವಿನೊಂದಿಗೆ ಕನ್ನಡ ಪ್ರಾಂತ್ಯ ರಚನೆಯಾಗಬೇಕು, ಮೈಸೂರು ಹಿರಿಯಣ್ಣನ ಸ್ಥಾನದಲ್ಲಿದ್ದು ಕನ್ನಡ ಪ್ರಾಂತ್ಯ ಒಗ್ಗೂಡುವಿಕೆಗೆ ಎಲ್ಲರೂ ಕಟಿಬದ್ಧರಾಗಿರಬೇಕು ಎಂದು ಪ್ರತಿಪಾದಿಸುತ್ತಾರೆ.

ಸಂಸ್ಕೃತಿಯ ವಿಶ್ವರೂಪ – ೧೯೫೫

ಇದರಲ್ಲಿ ಒಟ್ಟು ೧೫ ಪ್ರಬಂಧಗಳಿದ್ದು ಅದರಲ್ಲಿ ೮ ಪ್ರಬಂಧಗಳು ಉಳಿದ ಕೆಲವೊಂದು ವೈಚಾರಿಕ ಕೃತಿಗಳಲ್ಲಿ ಪ್ರಕಟಗೊಂಡಿವೆ. ಅದನ್ನು ಆ ಕೃತಿಗಳ ಸಂದರ್ಭಗಳಲ್ಲಿ ಚರ್ಚಿಸಲಾಗಿದೆ. ಈ ಭಾಗದಲ್ಲಿ ಉಳಿದ ಲೇಖನಗಳ ಹಿನ್ನೆಲೆಯಲ್ಲಿ ಅ. ನ. ಕೃ. ರವರ ವಿಚಾರ ಸಾಹಿತ್ಯದ ತಾತ್ವಿಕತೆ ಮತ್ತು ಸ್ವರೂಪಕ್ಕೆ ಅನುಗುಣವಾಗಿ ಚರ್ಚಿಸಲಾಗುವುದು.

ಗೀತಾ ಸಂದೇಶ ಎಂಬ ಲೇಖನದಲ್ಲಿ ಭಾರತೀಯ ಸಂಸ್ಕೃತಿಯನ್ನು ಅರಿಯಬೇಕಾದರೆ ಭಗವದ್ಗೀತೆ, ರಾಮಾಯಣ, ಮಹಾಭಾರತಗಳ ಮೊರೆ ಹೋಗಬೇಕು. ಅದರಲ್ಲಿ ಉದಾತ್ತ ಜೀವನದ ಆದರ್ಶವೇ ಸಂಸ್ಕೃತಿಯಾಗಿದೆ. ಭಗವದ್ಗೀತೆಯೆಂಬುದು ಭಾರತದ ಸ್ವತ್ತಾಗಿ ನೋಡದೆ ಅಲ್ಲಿರುವ ವಿಚಾರಗಳು ವಿಶ್ವದ ಸೊತ್ತು ಆಗಬೇಕೆಂದು ಸರ್ವದೇಶ, ಸರ್ವಕಾಲ, ಸರ್ವವಿಚಾರ ಧೋರಣೆಗಳಿಗೂ ತಾರ್ಕಿಕವಾಗುವಂಥದ್ದು ಎಂಬ ಹಿನ್ನೆಲೆಯಲ್ಲಿ ವಿಮರ್ಶಿಸುತ್ತಾರೆ. ಭಗವದ್ಗೀತೆಯಲ್ಲಿಯ ಭಕ್ತನ ಅಂತಿಮ ಕಲ್ಯಾಣ ಮತ್ತು ಅಂತಃಕರಣ ವಿಶಾಲ ಹೃದಯತೆಯ ಎರಡು ಸಂದೇಶಗಳನ್ನು ಚರ್ಚಿಸಿ ಪ್ರತಿ ಮನುಷ್ಯನಲ್ಲೂ ಇರಬೇಕು ಎಂದು ಭಾವಿಸುತ್ತಾರೆ.

ಕಾದಂಬರಿಯಲ್ಲಿ ವಾಸ್ತವಿಕತೆಯ ಸ್ಥಾನವನ್ನು ನಿರ್ದೇಶಿಸುವ ಅ. ನ. ಕೃ. ಸಾಹಿತ್ಯದಲ್ಲಿಯೂ ವಾಸ್ತವಿಕತೆಯ ಸ್ಥಾನ ಎಷ್ಟು ಅವಶ್ಯಕವಿದೆ ಎಂಬುದನ್ನು ಆಧುನಿಕ ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ಜನತೆಗಾಗಿ ವಾಸ್ತವ ಸಮಾಜದ ಸಮಸ್ಯೆಗಳನ್ನು ಪ್ರತಿಪಾದಿಸುವ, ವಾಸ್ತವತೆಯನ್ನು ಅನಾವರಣಗೊಳಿಸುವ ಸಾಹಿತ್ಯ ಅವಶ್ಯಕವೆಂಬ ಧೋರಣೆಯನ್ನು 'ಸಾಹಿತ್ಯದಲ್ಲಿ ವಾಸ್ತವಿಕತೆಯ ಸ್ಥಾನ' ಎಂಬ ಲೇಖನದಲ್ಲಿ ಚರ್ಚಿಸುತ್ತಾರೆ.

'ದಾಸಿಮಯ್ಯನ ವ್ಯಕ್ತಿತ್ವ' ಎಂಬ ಲೇಖನದಲ್ಲಿ ೧೨ನೇ ಶತಮಾನದಲ್ಲಿ ಬಸವಣ್ಣನಾದಿಯಾಗಿ ಅನೇಕ ವಚನಕಾರರ ಮೇಲೆ ಆತನ ವ್ಯಕ್ತಿತ್ವ ಮತ್ತು ವಚನಗಳು ಪ್ರಭಾವಿಸಿವೆ. ಶಾಂತಿ, ಸಹನೆ, ಪರಮತ ಸಹಿಷ್ಣುತೆ ಆತನ ವಚನಗಳಲ್ಲಿ ವ್ಯಕ್ತವಾಗುವುದಿಲ್ಲ, ಪರಮತದ ಖಂಡನೆಯನ್ನು ಸೂಕ್ಷ್ಮವಾಗಿ ವಿಮರ್ಶಿಸುತ್ತಾರೆ. ವೀರಶೈವ ಮತಧರ್ಮದ ಬೆಳಕನ್ನು ಚೆಲ್ಲಿದವನಾಗಿ ಒಪ್ಪಿಕೊಳ್ಳದೆ ವಚನಗಳ ಆದ್ಯ ಪ್ರವರ್ತನಾಗಿ ಗುರುತಿಸುತ್ತಾರೆ.

'ಸರ್ವಜ್ಞನ ಸಾರೋಕ್ತಿಗಳು' ಎಂಬ ಲೇಖನದಲ್ಲಿ ಸರ್ವಜ್ಞನ ತ್ರಿಪದಿಗಳಲ್ಲಿನ ವಸ್ತುವಿನಲ್ಲಿ ಬೇಕು-ಬೇಡವಾಗಲೀ, ಶೀಲ-ಅಶ್ಲೀಲವಾಗಲೀ ಯಾವುದನ್ನು ತಿರಸ್ಕರಿಸದೆ ಎಲ್ಲವನ್ನು ತಿಳಿಸುವ ಧಾಟಿಯನ್ನು ಮುಖ್ಯವಾಗಿ ಗುರುತಿಸುತ್ತಾರೆ. 'ಭಾಷೆಯಲ್ಲಿ ವ್ಯಾಕರಣದ ಸ್ಥಾನ' ಎಂಬಲ್ಲಿ ದೇವುಡು ಮತ್ತು ಅ. ನ. ಕೃ. ನಡುವೆ ನಡೆದ ಸಂಭಾಷಣೆಯ ಸ್ವಾರಸ್ಯವನ್ನು ಕಾಣಬಹುದು. ಭಾಷೆಯ ಪರಿಪೂರ್ಣತೆಗೆ ವ್ಯಾಕರಣದ ಅಗತ್ಯತೆಯಿದೆ ಎಂಬ ತಾತ್ವಿಕತೆಯಿದೆ.

'ಹೊಯ್ಸಳ ಶಿಲ್ಪಕಲಾ ವೈಭವ' ಎಂಬ ಪ್ರಬಂಧದಲ್ಲಿ ಕರ್ನಾಟಕದ ಮಲೆನಾಡಿನಲ್ಲಿದ್ದ ಸರ್ವಧರ್ಮ ಸಮನ್ವಯತೆ, ಸಂಕೇತವಾಗಿ ಶುಕಭಾಷಿಣಿ, ಲೀಲಾ ಕಿಲಾತಿ, ಜಗನ್ಮೋಹಿನಿ ಮದನಿಕೆಗಳನ್ನು ವರ್ಣಿಸುತ್ತಾರೆ. ಮಾನವನ ದೇಹವನ್ನು ಪಾಪದ ಮೂಟೆಯಾಗಿ ನೋಡದೆ, ಸೌಂದರ್ಯವನ್ನು ಪ್ರೀತಿಯಿಂದ, ಕುತೂಹಲದಿಂದ ಹೊಯ್ಸಳ ಶಿಲ್ಪದಲ್ಲಿ ನೋಡಿದ ಬಗೆಯನ್ನು ವಿವರಿಸುತ್ತಾರೆ. ಅಜಂತಾದ ಗುಹೆಗಳಲ್ಲಿರುವ ಚಿತ್ರಕಲೆ, ಶಿಲ್ಪಗಳನ್ನು, ಬೌದ್ಧ ಧಾರ್ಮಿಕ ಮತ್ತು ಜನಜೀವನದ ಚಿತ್ರಣವಾಗಿ 'ಅಜಂತಾ ಚಿತ್ರಣ' ಎಂಬ ಲೇಖನದಲ್ಲಿ ಅ. ನ. ಕೃ. ನೋಡುತ್ತಾರೆ. ಇಲ್ಲಿ ಬೇಲೂರು, ಹಳೆಬೀಡುಗಳಲ್ಲಿರುವ ಶಿಲ್ಪ ವೈಭವವನ್ನು ಶಿಲ್ಪಿಯ ಕಣ್ಣಿನಿಂದ ಹೆಣ್ಣಿನ ಸೌಂದರ್ಯದಲ್ಲಿ ಸಹಜವಾಗಿ ವಿಶ್ಲೇಷಿಸುತ್ತಾರೆ.

ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಕಾಣಿಕೆ ನೀಡಿದ ಕೆ. ವಾಸುದೇವಾಚಾರ್ಯರ ಬಗ್ಗೆ ವ್ಯಕ್ತಿ ಚಿತ್ರಣವನ್ನು ನೀಡುತ್ತಾರೆ. ಅಸ್ಪೃಶ್ಯತೆಯ ನಿರ್ಮೂಲನೆಯನ್ನು ಕುರಿತಂತೆ ತಮ್ಮ 'ಅಸ್ಪೃಶ್ಯತೆಯ ನಿರ್ಮೂಲನ' ಎಂಬ ಲೇಖನದಲ್ಲಿ ಅಸ್ಪೃಶ್ಯತೆಯ ನಿವಾರಣೆಗಾಗಿ ನಡೆದ ಚಳುವಳಿಯಾಗಿ ವಚನ ಚಳುವಳಿ ಮತ್ತು ಹರಿದಾಸ ಪಂಥದಲ್ಲಿ ಪುರಂದರದಾಸರು ಕನಕದಾಸರಿಂದ ನಡೆದ ಹೋರಾಟ, ಕಾಲಕ್ರಮೇಣ ಇದೇ ಪಂಥದವರು ಮತ್ತೆ ಅಸ್ಪೃಶ್ಯತೆಯನ್ನು ಎತ್ತಿ ಹಿಡಿದದ್ದನ್ನು ಖಂಡಿಸುತ್ತಾರೆ.

ಸಮದರ್ಶನ – ೧೯೫೬

ಅ. ನ. ಕೃ. ಬರೆದ ಸಮದರ್ಶನವೆಂಬ ವೈಚಾರಿಕ ಸಾಹಿತ್ಯದಲ್ಲಿ ಒಟ್ಟು ೧೫ ಪ್ರಬಂಧಗಳಿವೆ. ಇವುಗಳಲ್ಲಿ ಮೂರು ಪ್ರಬಂಧಗಳು ಧರ್ಮದ ಪ್ರಚಾರಕ್ಕೆ ಸಂಬಂಧಿಸಿದ್ದು, ಮೂರು ಪ್ರಬಂಧಗಳು ಚಿತ್ರಕಲೆ, ಎರಡು ನಾಟಕಕಲೆ, ಎರಡು ಸಂಗೀತ, ನಾಲ್ಕು ಸಾಹಿತ್ಯ, ಒಂದು ವಿಚಾರ ಸಾಹಿತ್ಯ, ಮತ್ತೊಂದು ಚಲನಚಿತ್ರ ಕಲೆಗೆ ಸಂಬಂಧಿಸಿದವು. ಇಲ್ಲಿ ಕಲೆಯನ್ನು ಕುರಿತು ಭಿನ್ನ ವಸ್ತುಗಳನ್ನು ಆಯ್ದುಕೊಂಡು ತಮ್ಮ ವೈಚಾರಿಕ ತಾತ್ವಿಕತೆಯನ್ನು ಪ್ರತಿಪಾದಿಸಿದ್ದಾರೆ.

'ಬೌದ್ಧ ಪೂರ್ಣಿಮಾ' ಎಂಬ ಲೇಖನದಲ್ಲಿ ಬುದ್ಧನ ಬದುಕಿನ ತಿರುವುಗಳಲ್ಲಿ ಬೌದ್ಧ ಪೂರ್ಣಿಮಾ ಎಷ್ಟು ಮುಖ್ಯ ಎಂಬುದು, ಆತನ ಬೋಧನೆಯಲ್ಲಿ ಅಷ್ಟಸೂತ್ರಗಳು, ಪಂಚಶೀಲ

ತತ್ವಗಳೊಂದಿಗೆ ವೇದಗಳಲ್ಲಿ ಇರುವ ಪ್ರಾಣಿ ಹಿಂಸೆ, ಯಜ್ಞ ಯಾಗಾದಿಗಳಲ್ಲಿ ಬಲಿ ಕೊಡುವ ಮೌಢ್ಯದ ವಿರುದ್ಧ ಪ್ರತಿಭಟನೆ, ಜಾತಿ ವ್ಯವಸ್ಥೆಯನ್ನು ಸಾರುವ ದೃಷ್ಟಿಕೋನವನ್ನು ತೀಕ್ಷ್ಣವಾಗಿ ತನ್ನ ಶಿಷ್ಯರ ಹತ್ತಿರ ಖಂಡಿಸುವುದು, ಜಗತ್ತಿನಲ್ಲಿ ಒಳ್ಳೆಯವರು, ಕೆಟ್ಟವರು ಎಂದು ತಿಳಿಸಿ ಇದಕ್ಕೆಅವರ ಜಾತಿ, ವಂಶ, ಕುಲ ಮುಖ್ಯವಲ್ಲ ಎಂಬ ಬುದ್ಧನ ನಿಲುವು, ಸ್ತ್ರೀ ಸಮಾನತೆಯನ್ನು ನೀಡಿದ ಬುದ್ಧನ ವಿಚಾರಗಳಲ್ಲಿ ಜಾತಿ, ಕುಲ, ಮತ, ವರ್ಗಗಳನ್ನು ಬಿಟ್ಟು ಮಾನವ ಧರ್ಮವನ್ನು ಪಾಲಿಸಬೇಕೆಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ.

'ಅಜಂತಾ ಚಿತ್ರಕಲೆ' ಎಂಬ ಲೇಖನದಲ್ಲಿ ಅಜಂತಾದಲ್ಲಿರುವ ಚಿತ್ರ ಸಮೂಹಗಳು ಅಂದಿನ ಭಾರತೀಯ ಧಾರ್ಮಿಕ ಮತ್ತು ಸಾಮಾಜಿಕ ಜೀವನವನ್ನು ಪ್ರತಿಬಿಂಬಿಸುತ್ತದೆ. ಅಜಂತಾ ಚಿತ್ರಕಲೆಯಲ್ಲಿ ಬೌದ್ಧ ಧರ್ಮದ ಪ್ರಭಾವ ಹೆಚ್ಚಾಗಿ ಕಂಡು ಬಂದರೂ ಅದು ವೈದಿಕ ಧರ್ಮಗಳ ವಿರುದ್ಧವಾಗದೆ ಇರುವುದನ್ನು ಕಂಡು ಅದರಲ್ಲಿರುವ ಧಾರ್ಮಿಕ ಸಹಿಷ್ಣುತೆಯನ್ನು ಗುರುತಿಸಬಹುದು. ಬೌದ್ಧ ಧರ್ಮಕ್ಕೆ ರಾಜಾಶ್ರಯ ತಪ್ಪಿದರೂ ವೈದಿಕ ಅರಸರು ಬೌದ್ಧ ಧರ್ಮದ ಕಲೆ, ವಾಸ್ತುಶಿಲ್ಪಕ್ಕೆ ಪ್ರೋತ್ಸಾಹ ನೀಡುವುದು ಮಾತ್ರವಲ್ಲದೆ ವೈದಿಕ ಧರ್ಮದ ಪುನರುತ್ಥಾನದಿಂದ ಬೌದ್ಧ ಧರ್ಮ ಭಾರತದಲ್ಲಿ ಕಣ್ಮರೆಯಾಯಿತೇ ಹೊರತು ಯಾವುದೇ ದಬ್ಬಾಳಿಕೆ, ಹಿಂಸೆಯಿಂದ ಅಲ್ಲ ಎಂದು ಪರಿಭಾವಿಸುವ ಅ. ನ. ಕೃ. ರವರು ವೈದಿಕ ಧರ್ಮದ ಸಹಿಷ್ಣುತೆಯನ್ನು, ಅರಸರ ಪ್ರೋತ್ಸಾಹದಿಂದಲೇ ಅಜಂತಾದ ಕಲೆಗಳೆಲ್ಲಾ ಇಂದಿಗೂ ನಮ್ಮ ಕಣ್ಣ ಮುಂದೆ ಇರಲು ಸಾಧ್ಯವಾಗಿದೆ ಎಂದು ಚರ್ಚಿಸುತ್ತಾರೆ.

ಬಂಗಾಳದ ಚಿತ್ರಕಲಾ ಪ್ರತ್ಯಕ್ ಸಂಪ್ರದಾಯದಲ್ಲಿ ತೊಡಗಿಸಿಕೊಂಡ ದೇವಿಪ್ರಸಾದ್ ರಾಯ್ ಚೌಧರಿ ಎಂಬ ಲೇಖನ ವ್ಯಕ್ತಿ ಚಿತ್ರಣವನ್ನು ನೀಡುವ ಲೇಖನವಾಗಿದೆ. ಸಂಪ್ರದಾಯದ ಕಲೆಯ ಹಿನ್ನೆಲೆಯಲ್ಲಿ ಹೋಗದೆ ಅದನ್ನು ಮುರಿಯುವ ಪ್ರಯತ್ನ ಮಾಡಿದ ರಾಯ್ ಚೌಧರಿಯವರು 'ಪರಿತ್ಯಕ್ತ', 'ಇಬ್ಬನಿಯ ಆಗಮನ', 'ಕೂಲಿ-ತಾಯಿ', 'ಅರಣ್ಯ ಭೈರವ' ಮೊದಲಾದ ಚಿತ್ರಕಲೆಗಳಲ್ಲಿ ಸಮಾಜದ ಸಮಸ್ಯೆಗಳನ್ನು ಚಿತ್ರಿಸಿರುವುದನ್ನು ಅ. ನ. ಕೃ. ವಿಶ್ಲೇಷಿಸುತ್ತಾರೆ. ಕೂಲಿ-ತಾಯಿ ಚಿತ್ರಕಲೆಯಲ್ಲಿ ಆಕೆಯ ಬಾಹ್ಯ ಸೌಂದರ್ಯಕ್ಕಿಂತ ಹಾಲನ್ನು ಉಣಿಸುವ ಮಹೋನ್ನತ ತಾಯಿಯಾಗಿ, ಪರಿತ್ಯಕ್ತೆಯಲ್ಲಿ ಸಮಾಜದಿಂದ, ಸಾಮಾಜಿಕ ಜೀವನದಿಂದ ಹೆಣ್ಣು ಪರಿತ್ಯಕ್ತೆಯಾಗಿ, ಕೂಸು ಪಾಪದ ಫಲವಾಗಿ, ಅಕ್ಕಪಕ್ಕ ಇರುವ ದೊಡ್ಡಮರ ರೂಢಿಯಾಚರಣೆಯ ಸಂಕೇತವಾಗಿ, ಅರಣ್ಯದ ಭೈರವ ಚಿತ್ರಕಲೆಯಲ್ಲಿ ದೂರದಲ್ಲಿರುವ ಬಂಡೆಯನ್ನು ನೋಡಿದ ಜನರು ಹೆದರಿ ಅವುಗಳಿಗೆ ಆಕಾರ ಕಲ್ಪಿಸಿ ಹೆಸರಿಟ್ಟ ಗುಡಿಕಟ್ಟಿ ಪೂಜಿಸುವ, ಬಲಿ ಕೊಡುವ ಮನುಷ್ಯನ ಮೌಢ್ಯತೆಯ ಸಂಕೇತವಾಗಿ ವಿಮರ್ಶಿಸುತ್ತಾರೆ. ಇಲ್ಲಿ ಅ. ನ. ಕೃ. ರವರ ವಿಮರ್ಶಾ ದೃಷ್ಟಿಕೋನವನ್ನು ತಿಳಿಯಬಹುದು.

ದೇವಿ ಪ್ರಸಾದ್ ರಾಯ್ ಚೌಧರಿಯವರು ಚಿತ್ರಕಲೆಯಲ್ಲಿ ಸಾಧಿಸಿದ ಪ್ರೌಢಿಮೆ ಶಿಲ್ಪಕಲಾದಲ್ಲಿ ಇಲ್ಲದೆ ಇರುವುದು, ಬಂಗಾಳದ ಕಲೆ ಮತ್ತು ಚಿತ್ರಕಲೆಯ ಬೆಳವಣಿಗೆಯಲ್ಲಿ ಮಾಡಿದ ಅವರ ಸಾಧನೆ ಅನನ್ಯವಾಗಿದೆ. ಜೀವನಕ್ಕೆ ಕಲೆ ಹೇಗೆ ಹತ್ತಿರವಾಗಿದೆ ಎಂಬುದನ್ನು ಇವರ ಚಿತ್ರಕಲೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾರೆ.

ನಾಟಕ ಶಿರೋಮಣಿ ಎ. ವಿ. ವರದಾಚಾರ್ಯರು ಲೇಖನದಲ್ಲಿ ಕನ್ನಡ ರಂಗಭೂಮಿಯ ಹುಟ್ಟು, ಬೆಳವಣಿಗೆಯಲ್ಲಿ ಚಾಮರಾಜ ಒಡೆಯರು, ರಂಗಾಚಾರ್ಯರು ಕಾರಣರಾದರೆ ನಾಟಕ ರಂಗಭೂಮಿ ಬೆಳೆಯಲು ಕಾರಣರಾದ ಎ. ವಿ. ವರದಾಚಾರ್ಯರು ಅವರ ರತ್ನಾವಳಿ ಥಿಯೆಟ್ರಿಕಲ್

ಕಂಪೆನಿಯೂ ಒಂದಾಗಿದೆ. ಅಲ್ಲಿ ಪ್ರದರ್ಶಿಸಿದ ಶಾಕುಂತಲ ನಾಟಕ ಪ್ರದರ್ಶನ ಮೊದಲಾದವನ್ನು ಪರಿಚಯಿಸುತ್ತಾರೆ. ಎ. ವಿ. ವರದಾಚಾರ್ಯರ ಒಂದು ಪ್ರತಿಮೆಯೂ ಇಲ್ಲದೆ ಇರುವುದು ಕನ್ನಡ ನಾಡಿನ ಜನತೆಗೆ ನಾಟಕಗಳ ಬಗ್ಗೆ, ನಾಟಕಕಾರರ ಬಗ್ಗೆ ತೋರಿದ ಧೋರಣೆಗೆ ಸಾಕ್ಷಿಯಾಗಿ ಈ ವ್ಯಕ್ತಿಚಿತ್ರ ಲೇಖನ ತಿಳಿಸುತ್ತದೆ.

'ಸಂಗೀತ ಮತ್ತು ಜನಪ್ರೋತ್ಸಾಹ' ಎಂಬ ಲೇಖನದಲ್ಲಿ ಅ. ನ. ಕೃ. ರವರು ಕನ್ನಡ ನಾಡಿನಲ್ಲಿ ತ್ಯಾಗರಾಜನಿಂದ ೫೦೦ ವರ್ಷಗಳ ಹಿಂದೆಯೇ ನಿಜಗುಣ ಶಿವಯೋಗಿ, ಕನಕದಾಸ, ಪುರಂದರದಾಸ ಮೊದಲಾದ ಅನೇಕ ಸಂಗೀತಗಾರರಿದ್ದು ಕನ್ನಡ ನಾಡಿನ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗಳ ಜೊತೆಜೊತೆಯಾಗಿಯೇ ಸಂಗೀತವು ಬೆಳೆದು ಬಂದಿದೆ. ತ್ಯಾಗರಾಜನ ಕಿರ್ತನೆಗಳನ್ನು ನಮ್ಮ ಸಂಗೀತಗಾರರು ಬಹುತೇಕ ಹಾಡುತ್ತಾರೆ. ನಮ್ಮ ಅಭಿರುಚಿ ವಿಶಾಲವಾಗಿರಬೇಕು ಎಂಬುದು ನಿಜವಾದರೂ ನಿಜಗುಣಶಿವಯೋಗಿ, ಮುಪ್ಪಿನ ಷಡಕ್ಷರಿ, ಮೊದಲಾದ ಕೃತಿಗಳು ನಮಗೆ ದೊರಕಬೇಕಾಗಿದೆ. ಇದು ಭಾಷಾ ವ್ಯಾಮೋಹದಿಂದ ಹೇಳುವುದಲ್ಲ, ಕಲೆಯ ದೃಷ್ಟಿಯಿಂದ ಭಾಷೆಯನ್ನು ಅಲಕ್ಷಿಸಲು ಸಾಧ್ಯವಿಲ್ಲವೆಂದು, ಕನ್ನಡ ನಾಡಿನ ಸಂಗೀತಗಾರರು, ಕನ್ನಡ ಕೀರ್ತನೆಗಾರರು ಗೀತೆಗಳನ್ನು ಹಾಡದೆ ಪ್ರಚಾರ ಮಾಡದೆ ಇರುವ ಮನಃಸ್ಥಿತಿಯನ್ನು ಚರ್ಚಿಸುತ್ತಾರೆ. ಈ ರೀತಿಯ ಮನಃಸ್ಥಿತಿಯಿಂದ ಕನ್ನಡ ಸಂಗೀತವು ಬೆಳೆಯುವುದು ಹೇಗೆ? ಎಂದು ಪ್ರಶ್ನಿಸುತ್ತಾರೆ.

ನಾಟಕ ಮತ್ತು ಸಿನಿಮಾ ತಂತ್ರದ ವ್ಯತ್ಯಾಸವನ್ನು ಅ. ನ. ಕೃ. ವಿಶ್ಲೇಷಿಸುತ್ತಾರೆ. ವಾಕ್ಚಿತ್ರಗಳಿಂದ ರಂಗಭೂಮಿಗೆ ಹೇಗೆ ಪ್ರಬಲವಾದ ಪೆಟ್ಟು ಕೊಟ್ಟಿದೆಯೆಂದು, ನಾಟಕವನ್ನು ಕಲೆ ಎಂದು ಗುರುತಿಸುವ ಹಾಗೆ, ಚಲನಚಿತ್ರವನ್ನು ಸಾಮೂಹಿಕ ಕಲೆಯೆಂದು, ನಾಟಕದಲ್ಲಿ ನಾಟಕಕಾರ, ನಟ ಮುಖ್ಯವಾದರೆ ಚಲನಚಿತ್ರದಲ್ಲಿ ಸಂಗೀತ, ಛಾಯಾಗ್ರಾಹಕ, ಧ್ವನಿಗ್ರಾಹಕ, ಸಂಪಾದಕ ಮೊದಲಾದವು ಮಹತ್ವ ಪಡೆದಿವೆ. ನಾಟಕಕಲೆ ಬಿಡಿಬಿಡಿಯಾಗಿ ಮಾಡಿದ್ದು, ಸಿನಿಮಾ ಇಡಿಯಾಗಿ ಮಾಡುವುದು, ನಾಟಕಕಲೆ ವ್ಯಕ್ತಿಯನ್ನು ಅವಲಂಬಿಸಿದರೆ ಸಿನಿಮಾ ಯಂತ್ರಗಳನ್ನು ಅವಲಂಬಿಸಿದೆ ಎಂದು ಇವೆರಡರ ಸ್ವರೂಪವನ್ನು ಚರ್ಚಿಸುತ್ತಾರೆ. ಮುಂದುವರೆದು ಬಹಳ ಮುಖ್ಯವಾಗಿ ಸಾಹಿತ್ಯ, ಕಲೆ ಸಂಸ್ಕೃತಿಯ ಸಂವರ್ಧನೆಗೆ ಸಿನಿಮಾ ಎಂದಿಗೂ ಸಹಾಯ ಮಾಡಲಾರದು. ಸಿನಿಮಾ ಎಂಬುದು ಯಾಂತ್ರೀಕೃತ ಮಾಧ್ಯಮವಾಗಿದೆ. ಯಾಂತ್ರಿಕ ಮಾಧ್ಯಮಗಳಿಂದ ನಾಡಿನ ಕಲೆ, ಸಾಹಿತ್ಯ, ಸಂಗೀತವು ಉಳಿಯಲು, ಬೆಳೆಯಲು ಸಾಧ್ಯವಿಲ್ಲ ಎಂಬ ತಾತ್ವಿಕ ನಿಲುವನ್ನು ಪ್ರಕಟಿಸುತ್ತಾರೆ.

'ಶ್ರೀ ಬಸವೇಶ್ವರರು' ಎಂಬ ಲೇಖನದಲ್ಲಿ ಬಸವಣ್ಣನವರ ಕಾರ್ಯಕ್ಷೇತ್ರ ಧಾರ್ಮಿಕ ರಂಗಕ್ಕೆ ಮಾತ್ರ ಸೀಮಿತವಾಗಿರದೆ ಸಮಕಾಲೀನ, ರಾಜಕಾರಣ, ಸಾಹಿತ್ಯ, ಸಾಮಾಜಿಕ ಜೀವನ ಮೊದಲಾದವುಗಳನ್ನು ವ್ಯಾಪಿಸಿಕೊಂಡಿದೆ. ವೀರಶೈವ ಧರ್ಮದ ಉದ್ಧಾರಕನಾಗಿ, ಸಾಮಾಜಿಕ ರಂಗದಲ್ಲಿ ಸರ್ವ ಸಮತಾ ಜೀವನವನ್ನು ಕಟ್ಟಲು ಆರ್ಥಿಕ ಸ್ಥಿತಿಯನ್ನು ಸುಧಾರಿಸಿ ನಿರುದ್ಯೋಗ ನಿವಾರಿಸಿ ಸಂಪತ್ತಿನ ಸಮಾನ ಹಂಚಿಕೆಗಾಗಿ ಪ್ರಯತ್ನಿಸಿದವರೆಂದು, ಯಾವುದನ್ನು ಪ್ರಗತಿಶೀಲ ಕಾಲಘಟ್ಟದ ಲೇಖಕರು ಬಯಸಿದರೋ ಆ ಧೋರಣೆಯನ್ನು ಬಸವಣ್ಣನವರಲ್ಲಿ ಅ. ನ. ಕೃ. ಗುರುತಿಸುತ್ತಾರೆ.

ಶ್ರೀರಂಗ ಎಂಬ ಲೇಖನದಲ್ಲಿ ಕನ್ನಡ ನಾಟಕದಲ್ಲಿದ್ದ ಸಂಪ್ರದಾಯವನ್ನು ಮೀರಿ ಉದರ ವೈರಾಗ್ಯ, ಅಧಿಕಮಾಸ, ವೈದ್ಯರಾಜ, ಮೊದಲಾದ ನಾಟಕಗಳನ್ನು ರಂಗಕ್ಕೆ ಅಳವಡಿಸಿ ಕ್ರಾಂತಿಕಾರಕ

ಬದಲಾವಣೆಯನ್ನು ತಂದವರಾಗಿ ಆ ರೀತಿಯ ಬದಲಾವಣೆಗಳು ನಡೆಯಬೇಕೆಂದು ಅ. ನ. ಕೃ. ಅಪೇಕ್ಷೆಯಾಗಿತ್ತು. ಬದಲಾವಣೆಗೆ ಸಾಹಿತ್ಯ ಮತ್ತು ಸಮಾಜವು ತೆರೆದುಕೊಂಡಿರಬೇಕು ಎಂಬ ತಾತ್ವಿಕತೆಯನ್ನು ಅ. ನ. ಕೃ. ರವರಲ್ಲಿ ಕಾಣಬಹುದು.

'ಕಾದಂಬರಿ ಸೃಷ್ಟಿಯ ಕಾರಣರಂಗ' ಎಂಬ ಲೇಖನದಲ್ಲಿ ಕಾದಂಬರಿಗಳ ಸಾರ್ವಭೌಮರಾದ ಅ. ನ. ಕೃ. ರವರು ಕಾದಂಬರಿಯ ಕಥಾಭಾಗ, ವಸ್ತು, ತಂತ್ರ, ಶೈಲಿ, ಪಾತ್ರ ಸಂವಿಧಾನ, ಜ್ಞಾನ, ನಿರೀಕ್ಷೆ, ಸ್ಫೂರ್ತಿ, ಉದ್ದೇಶ, ಜೀವನಕಲೆ ಇವೆಲ್ಲಾ ಹೇಗೆ ಒಂದು ಕಾದಂಬರಿ ರೂಪುಗೊಳ್ಳಲು ಅವಶ್ಯಕವಾದುದೆಂದು ವಿವರಿಸುತ್ತಾರೆ.

ಅ. ನ. ಕೃ. ಮತ್ತು ಪಿ. ಶ್ರೀನಿವಾಸ ರಾಯರು ನಡೆಸಿದ ಸಂಭಾಷಣೆಯ ಸ್ವಾರಸ್ಯದ ವಿಷಯಗಳನ್ನು ಒಳಗೊಂಡ ಲೇಖನವೇ 'ವಿಜ್ಞಾನದಿಂದ ಮಾನವನ ನಿಜವಾದ ಪ್ರಗತಿಗೆ ಅಡ್ಡಿಯಾಗಿದೆ'. ಈ ಲೇಖನದಲ್ಲಿ ವಿಜ್ಞಾನ ಮಾನವನ ಕಲ್ಯಾಣಕ್ಕೆ ಅವಶ್ಯಕವಾಗಿದ್ದು ವಿಜ್ಞಾನ ಮತ್ತು ವೈಜ್ಞಾನಿಕ ಮನೋಧರ್ಮವನ್ನು ಕುರಿತಂತೆ ವಿಜ್ಞಾನ ಬೆಳೆಯುತಿರುವ ರೀತಿಯನ್ನು ನೋಡಿದರೆ ವೈಜ್ಞಾನಿಕ ಮನೋಧರ್ಮಕ್ಕೆ ದಾರಿದ್ರ್ಯ ಹಿಡಿದಿದೆ. ಎಲ್ಲಾ ವಿಜ್ಞಾನಿಗಳು ಮೈಕಲ್ ಫ್ಯಾರಡೆ, ಐನ್‌ಸ್ಟೈನ್ ರೀತಿಯಲ್ಲಿ ಮಾನವನ ಒಳಿತಿಗಾಗಿಯೇ ಕಂಡು ಹಿಡಿದಿದ್ದಾರೆಯೇ ಎಂಬ ಅನುಮಾನವನ್ನು ವ್ಯಕ್ತಪಡಿಸುತ್ತಾರೆ. ಪಿ. ಶ್ರೀನಿವಾಸರಾಯರ ದ್ವಿತೀಯ ಮಹಾಯುದ್ಧದ ಸಂದರ್ಭದಲ್ಲಿ ರಾಜಕೀಯ ನೇತಾರರ ಕಪಿಮುಷ್ಠಿಯಲ್ಲಿ ವಿಜ್ಞಾನಿಗಳು ನರಳಿದ್ದು, ವಿಜ್ಞಾನಿಗಳೂ ಅಸಹಾಯಕರಾದರೆಂದು ಮಾನವನ ನಿಜವಾದ ಪ್ರಗತಿಯೆಂದರೆ ಶಾಂತಿ. ವಿಜ್ಞಾನದಿಂದ ಶಾಂತಿಯು ಲಭಿಸುವುದಿಲ್ಲವೆಂದು, ವಿಜ್ಞಾನದಿಂದ ಮಾನವನ ನಿಜವಾದ ಪ್ರಗತಿಗೆ ಅಡ್ಡಿಯಾಗುತ್ತದೆ ಎಂಬುದೇ ತರ್ಕವಿಲ್ಲದ ವಾದ ಎಂಬ ದೃಷ್ಟಿಗೆ ಅ. ನ. ಕೃ. ಬರುತ್ತಾರೆ.

ನಾಟಕ ಕಲೆ – ೧೯೫೭

ನಾಟಕವು ಕಲೆಯ ಒಂದು ಭಾಗವಾಗಿದ್ದು ಅದು ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಬೆಳೆಯದೇ ಇದ್ದದ್ದನ್ನು ಸ್ವತಃ ನಾಟಕಕಾರರಾಗಿದ್ದ ಅ. ನ. ಕೃ. ರವರು ನಾಟಕ ಕಲೆಯನ್ನು ಕುರಿತಂತೆ ೧೩ ಪ್ರಬಂಧದಲ್ಲಿ ೧೯೫೭ರಲ್ಲಿ 'ನಾಟಕ ಕಲೆ' ಎಂಬ ಕೃತಿಯನ್ನು ಪ್ರಕಟಿಸಿದರು.

ಸಮಾಜದಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವೆ ಸಂಬಂಧ, ಸ್ವಾತಂತ್ರ್ಯ, ಸಹನೆ ಮೊದಲಾದ ವಿಚಾರಗಳು ಮೂಡಬೇಕಾದರೆ ನಾಟಕವು ಮಹತ್ವದ ಕಾರ್ಯವನ್ನು ನಿರ್ವಹಿಸುತ್ತದೆ ಎಂಬ ತಾತ್ವಿಕ ನೆಲೆಯಲ್ಲಿ ಕನ್ನಡ ನಾಟಕ ಹೇಗೆ ಹುಟ್ಟಿತು, ಕನ್ನಡ ರಂಗಭೂಮಿಯ ಸುಧಾರಣೆ, ಅಭಿನಯಗಾರರಲ್ಲಿ ಆಗಬೇಕಾದ ಸುಧಾರಣೆಗಳು, ನಾಟಕದಲ್ಲಿ ಹಾಸ್ಯ, ವಿನೋಧಾಭಿನಯಗಾರನ ವ್ಯಕ್ತಿತ್ವ, ರಾಷ್ಟ್ರೀಯ ರಂಗಭೂಮಿಯ ಅಗತ್ಯತೆಗೆ ತಕ್ಕಂತೆ ಕರ್ನಾಟಕದಲ್ಲಿ ರಂಗಭೂಮಿ ನಿರ್ಮಾಣ, ನಾಟಕಗಳಲ್ಲಿ ಸಂಗೀತವಿರಬೇಕೆ? ಬೇಡವೇ? ನಾಟಕಗಳ ಅಭಿವೃದ್ಧಿಯಲ್ಲಿ ನಗರಸಭೆಗಳು ಯಾವ ರೀತಿ ಕಾರ್ಯಪ್ರವೃತ್ತರಾಗಬೇಕೆಂದು ನಾಟಕದ ಸ್ವರೂಪ, ಹಾಸ್ಯದ ಸ್ವರೂಪ ಮತ್ತು ವಿಧಗಳು, ವಂಗಿ (ಬಂಗಾಳ) ರಂಗಭೂಮಿಯ ಸ್ವರೂಪ, ನಾಟಕದ ಅವನತಿಗೆ ಸಿನಿಮಾ ತಂತ್ರದ ವ್ಯವಸ್ಥೆ ಇವೆಲ್ಲವುಗಳನ್ನು ಚರ್ಚಿಸುತ್ತಾರೆ.

'ನಾಟಕ ಹುಟ್ಟಿತು' ಎಂಬ ಭಾಗದಲ್ಲಿ ನಾಟಕಕಾರ, ವಿಮರ್ಶಕ, ಪ್ರೇಕ್ಷಕ-ಪ್ರೇಕ್ಷಿಕ ಎಂಬ ಕಾಲ್ಪನಿಕ ಪಾತ್ರವನ್ನು ತಂದು ಸಂಭಾಷಣೆಯ ಮೂಲಕ ನಾಟಕದ ವಸ್ತು, ಪಾತ್ರ, ನಟನಗಾರರನ್ನು, ತಂತ್ರಗಳೆಲ್ಲವನ್ನೂ ಚರ್ಚಿಸುವುದು, ರಂಗಭೂಮಿಯ ಸುಧಾರಣೆಯಲ್ಲಿ ನಟರು ಉತ್ತಮ ದೇಹವನ್ನು ಹೊಂದುವುದು, ನಟನಿಗೆ ವಿದ್ಯೆ ಇರಬೇಕು, ಆ ಮೂಲಕ ನಾಟಕಕಾರ ರಚಿಸಿದ ನಾಟಕದ ಸಂದೇಶದ ಪರಿಜ್ಞಾನವನ್ನು ತಿಳಿದವನಾಗಬೇಕು, ಧ್ವನಿಯನ್ನು ಯುಕ್ತ ರೀತಿಯಿಂದ ಉಪಯೋಗಿಸುವ ಶೈಲಿ, ಭಾವ ಪ್ರದರ್ಶನ ನಟನಲ್ಲಿ ಸುಧಾರಣೆಯಾಗಬೇಕೆಂದು ಅ. ನ. ಕೃ. ಭಾವಿಸುತ್ತಾರೆ.

ನಾಟಕದಲ್ಲಿ ಸಂಗೀತಕ್ಕಿಂತ ಅದರಲ್ಲಿ ಪಾತ್ರರಚನೆ, ಭಾವ, ಪ್ರಕಟಣೆಗೆ ಹೆಚ್ಚು ಅಪೇಕ್ಷಿಸುವಂತದ್ದಾಗಿದೆ. ಹಾಗಾಗಿ ನಟನಗಾರರು ಭಾವಕ್ಕೆ ಹೆಚ್ಚು ಆದ್ಯತೆ ಕೊಡಬೇಕು. ನಾಟಕದಲ್ಲಿ ಸ್ವಲ್ಪ ಸಂಗೀತವನ್ನು ಉಪಯೋಗಿಸಿದರೆ ಸಾಕು, ಅದರೆ ಇಂದೂ ಸಂಗೀತಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿ ನಾಟಕದ ಮೂಲ ಸ್ವರೂಪವೇ ಬದಲಾಗಿದೆ. ಹಣಕ್ಕಿಂತ ಗುಣಕ್ಕೆ ಹೆಚ್ಚು ಪ್ರಾಶಸ್ತ್ಯವಿದ್ದಂತೆ ಶೃಂಗಾರ, ವೀರರಸಗಳಲ್ಲಿ ಹೆಚ್ಚು ಸಂಗೀತ ಬಳಸಬಹುದು. ಶೋಕ, ಹಾಸ್ಯ, ಕರುಣಾರಸಗಳಲ್ಲಿ ಮಿತವಾಗಿ ಸಂಗಿತ ಬಳಸಬೇಕೆಂದು, ಇದು ತಿಳಿಯದೆ ಎಷ್ಟೋ ನಾಟಕಗಳು ಪ್ರೇಕ್ಷಕನಿಗೆ ತಲೆಚಿಟ್ಟು ಹಿಡಿಯುವಂತೆ ಮಾಡುವ ನಾಟಕಗಳೇ ಹೆಚ್ಚಾಗಿವೆ ಎಂದು ನಾಟಕದಲ್ಲಿ ಸಂಗೀತ ಹೇಗೆ ಇರಬೇಕೆಂದು ವಿವರಿಸುತ್ತಾರೆ.

ನಾಟಕದಲ್ಲಿ ವಿನೋದದ ವಸ್ತು ಕೀಳು ಮಟ್ಟದಲ್ಲಿರಬೇಕೆಂಬ ದೃಷ್ಟಿಕೋನವನ್ನು ಅ. ನ. ಕೃ. ಖಂಡಿಸುತ್ತಾರೆ. ವಿನೋದಕ್ಕೂ, ವಸ್ತುವಿರಬೇಕೆಂದು ವಿನೋದಗಾರ ಜನಮನ ಗುಣದ ಮೇಲೆ ಅರಿತು ಹಾಸ್ಯವನ್ನು ನಡೆಸಬೇಕೆಂದು, ನಾಟಕದಲ್ಲಿ ವಿನೋದಗಾರರನ್ನು ಧಿಕ್ಕರಿಸಿ, ಕೀಳಾಗಿ ಕಾಣುವ, ಅಲ್ಪತೆಯಿಂದ ನೋಡುವ ಜನರ ಧೋರಣೆಯು ಸರಿಯಾದುದಲ್ಲವೆಂದು, ಆತನ ಪಾತ್ರದಲ್ಲಿಯೂ ಒಂದು ಧ್ಯೇಯವಿರುತ್ತದೆ. ವಿದೂಷಕನಿಗೆ ಮೂಲ ನಾಟಕದ ಪಾತ್ರದಲ್ಲಿ ಸ್ಥಾನ ಕೊಡದೆ ಈ ರೀತಿಯ ಕೆಟ್ಟ ಅಭ್ಯಾಸವನ್ನು ನಮ್ಮ ಕೆಲವು ನಾಟಕಗಳು ತಮಿಳು ನಾಟಕಗಳಿಂದ ಪ್ರೇರಣೆ ಪಡೆದದ್ದರ ಫಲವೇ ನಾಟಕದಲ್ಲಿ ವಿದೂಷಕನ ಪಾತ್ರವು ಗೌಣವಾದುದಾಗಿ ನೋಡಿದ್ದಾರೆ.

ಓಬೆರಾಮೆರಗೌ ರಂಗಭೂಮಿಯ ಬಗ್ಗೆ ಅ. ನ. ಕೃ. ರವರು ಬವೇರಿಯಾ ಪರ್ವತ ಪ್ರದೇಶದಲ್ಲಿನ ಜನರು ೧೬೩೩ ಇಸವಿಯಲ್ಲಿ ಮಾಹಾಮಾರಿಗೆ ತುತ್ತಾಗಿ ಅನೇಕ ಸಾವು ನೋವುಗಳಿಂದ ಸಂಕಷ್ಟಕ್ಕೆ ಒಳಗಾದಾಗ ಏಸು ಜೀವಿತವನ್ನು ನಾಟಕದ ರೂಪದಲ್ಲಿ ನಡೆಸಲು ಹರಕೆ ಹೊತ್ತಿಕೊಂಡಾಗಿನಿಂದ ಅಲ್ಲಿ ರೋಗಗಳೇ ಕಾಣಿಸದೇ ಇರುವುದು, ಇಂದಿಗೂ ಆ ಹಳ್ಳಿಯಲ್ಲಿ ಹತ್ತು ವರ್ಷಗಳಿಗೊಮ್ಮೆ ೨೦೦೦ಕ್ಕೂ ಹೆಚ್ಚು ಜನರು ಸೇರಿ ೯ ಗಂಟೆಗಳ ಕಾಲ ಬೈಬಲ್‌ನ ಹಳೆಯ ಒಡಂಬಡಿಕೆಯಿಂದ ತೆಗೆದುಕೊಂಡ ಕಥಾವಸ್ತು ಪಾತ್ರಕ್ಕೆ ಅನುಗುಣವಾದ ನಡವಳಿಕೆಯನ್ನು ತ್ರಿಕಾಲದಲ್ಲಿ ಧಾರ್ಮಿಕ ವಾತಾವರಣದಲ್ಲಿ ಎಲ್ಲಾ ಕಾಲದಲ್ಲಿಯೂ ತಮ್ಮ ಪಾತ್ರಕ್ಕೆ ಅನುಗುಣವಾದ ನಡವಳಿಕೆಯನ್ನು ತಮ್ಮ ಜೀವನದಲ್ಲಿ ಅಳವಡಿಕೊಂಡಿರುವುದು. ಈ ನಾಟಕದಿಂದ ಬಂದ ಹಣವನ್ನು ನಾಟಕದ ಖರ್ಚಿಗೆ ಉಪಯೋಗಿಸಿ ಪ್ರತಿಯೊಬ್ಬರಿಗೂ ಜೀವನೋಪಾಯಕ್ಕೆ ಹಂಚಿ ಉಳಿದದ್ದು ದಾನಧರ್ಮಕ್ಕೆ, ಹಳ್ಳಿಯ ಅಭಿವೃದ್ಧಿಗೆ ಹಂಚುವ ಕಾರ್ಯವನ್ನು ಈ ಲೇಖನದಲ್ಲಿ ನಮ್ಮ ಮುಂದೆ ಪ್ರಸ್ತಾಪಿಸುತ್ತಾರೆ.

ಧಾರ್ಮಿಕ ನೆಲೆಗಟ್ಟಿನ ನಾಟಕಗಳು ಹೇಗೆ ಮನುಷ್ಯನನ್ನು ನಿರ್ಮಾಣ ಮಾಡುತ್ತವೆ, ಸಮುದಾಯವನ್ನು ಉನ್ನತ ಕಡೆಗೆ ಕೊಂಡೊಯ್ಯುವುದು ಮಾತ್ರವಲ್ಲದೆ ಹಣದಾಸೆ ಕಲೆಗಳಲ್ಲಿ ಬಂದಾಗ ಅದರ ಅವನತಿ ಹೊರತು ಹಣದಾಸೆಯಿಂದ ಕಲೆ ದೂರವಾಗಬೇಕು ಎಂಬ ದೃಷ್ಟಿಯಿಂದ ತಿಳಿಸುತ್ತಾರೆ. ನಟನೆಯಲ್ಲಿ ತೊಡಗುವ ವ್ಯಕ್ತಿಯನ್ನು ಕೀಳು ಕುಲದವನು, ಪಾಪ ಕರ್ಮದವನೆಂದು ಹೇಳುವ ನಮ್ಮ ಸಮಾಜವೆಲ್ಲಿ, ನಟನನ್ನು ತಮ್ಮ ಮನೆಯ ಹಿರಿಯನೆಂದು ಗೌರವಿಸುವ ಬವೇರಿಯಾ ಪ್ರದೇಶದ ಒಬೆರಾಮೆರಗೌ ಎಲ್ಲಿ ಎಂಬ ಧ್ವನಿಪೂರ್ಣ ಮಾತನ್ನು ಅ. ನ. ಕೃ. ಎತ್ತುತ್ತಾರೆ.

ಯಾವುದೇ ಕಲೆ, ಜನತೆಯ ಪರವಾಗಿರಬೇಕು ಎಂದು ವಾದಿಸುವ ಅ. ನ. ಕೃ. ಈ ಲೇಖನದಲ್ಲಿ ಧಾರ್ಮಿಕ ಚೌಕಟ್ಟಿನಲ್ಲಿ ನಾಟಕ ಕಲೆಯನ್ನು ಆದರ್ಶವಾಗಿಡಬೇಕೆಂಬ ತಾತ್ವಿಕತೆಯನ್ನು ವ್ಯಕ್ತಪಡಿಸುತ್ತಾರೆ.

ಬಂಗಾಳದಿಂದ ನವೋದಯ ಕಾಲಘಟ್ಟದ ಸಾಹಿತ್ಯ ಮತ್ತು ಪ್ರಕಾರಗಳು ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಹೇಗೆ ಪ್ರಭಾವವನ್ನು ಬೀರಿವೆಯೋ ಅದೇ ರೀತಿಯಲ್ಲಿ ರಂಗಭೂಮಿಯ ಮೇಲೆ ಪ್ರಭಾವಿಸಿವೆ ಎಂಬ ಅಂಶವನ್ನು 'ವಂಗೀಯ ರಂಗಭೂಮಿ' ಎಂಬ ಲೇಖನದಲ್ಲಿ ವಿವರಿಸುತ್ತಾರೆ. ಬಂಗಾಳದಲ್ಲಿ ಇಂಗ್ಲೀಷ್ ಶಿಕ್ಷಣ, ಸಂಸ್ಕೃತಿಯಿಂದ ಪಾಶ್ಚಾತ್ಯ ಮಾದರಿಯ ನಾಟಕಗಳು ರೂಪ ಪಡೆದವು, ಸಿಪಾಯಿ ದಂಗೆಯ ೧೮೫೭ನೇ ವರ್ಷದಲ್ಲಿ 'ಕುಲೀನ ಕುಲ ಸರ್ವಸ್ವವೇ' ಎಂಬ ವಂಗ ನಾಟಕ ಜನ್ಮತಾಳಿದ್ದು, ರಾಷ್ಟ್ರಿಯ ರಂಗಭೂಮಿ ರೂಪಕ ಪಡೆಯಲು ವಂಗೀಯ ರಂಗಭೂಮಿಯ ಪ್ರಭಾವ, ಇದೇ ಮಾದರಿಯಲ್ಲಿ ಕರ್ನಾಟಕದಲ್ಲಿ ರಾಷ್ಟ್ರೀಯ ರಂಗಭೂಮಿ ರೂಪ ಪಡೆಯಲು ಸಾಧ್ಯವಾಯಿತು ಎಂಬುದಾಗಿ ಚರ್ಚಿಸುತ್ತಾರೆ.

ಸಾಹಿತ್ಯ ಸಮಾರಾಧನೆ – ೧೯೫೯

ಈ ಕೃತಿಯನ್ನು ೧೯೫೯ರಲ್ಲಿ ಅ. ನ. ಕೃ. ಪ್ರಕಟಿಸಿದರು. ಇದರಲ್ಲಿ ಒಟ್ಟು ಏಳು ಲೇಖನಗಳಿವೆ. ಅದರಲ್ಲಿ ಕನ್ನಡ ನಾಡು ಕಟ್ಟಿದ ಕವಿಗಳು, ಆಧುನಿಕ ಕನ್ನಡ ಸಾಹಿತ್ಯದ ಸ್ವರೂಪ, ಇಂದಿನ ಕನ್ನಡ ಕಥಾ ಸಾಹಿತ್ಯ ಬೆಳೆದು ಬಂದ ಬಗೆ, ಕಥೆಗಾರ, ಕಾದಂಬರಿಕಾರರಾಗಿ ನವರತ್ನ ರಾಮರಾಯರು, ಕಲೆಯಲ್ಲಿ ಹೂ–ಬಳ್ಳಿ, ಭಾರತೀಯ ಸಂಸ್ಕೃತಿಯಲ್ಲಿ ಶ್ರೀ ಕೃಷ್ಣನ ಪಾತ್ರವನ್ನು ತಮ್ಮದೇಯಾದ ತಾತ್ವಿಕ ನೆಲೆಗಟ್ಟಿನಲ್ಲಿ ವಿವರಿಸುತ್ತಾರೆ.

'ಕನ್ನಡ ನಾಡು ಕಟ್ಟಿದ ಕಲಿಗಳು' ಎಂಬ ಲೇಖನದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಕಾರಣೀಭೂತರಾದ ವಿದ್ಯಾರಣ್ಯರಿಂದ ಕನ್ನಡ ನಾಡು ರೂಪ ಪಡೆದಿದ್ದರಿಂದ ಆರಂಭಿಸಿ ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬರುವ ಮೂಲಕ ಕನ್ನಡ ನಾಡು ದಾಸ್ಯದಿಂದ ಬಿಡುಗಡೆಯಾಗುವ ಮೂಲಕವಲ್ಲದೆ, ಭಾಷಾವಾರು ಪ್ರಾಂತ್ಯ ರಚನೆಯಿಂದಾಗಿ ಕರ್ನಾಟಕ ರೂಪುಗೊಳ್ಳುವವರೆಗೂ ಚರ್ಚಿಸುತ್ತಾರೆ. ಕನ್ನಡಿಗರು ೨೧ ಹೋಳುಗಳಾಗಿ ಕನ್ನಡ ನಾಡು ಬೇರೆ ಬೇರೆ ಕಡೆ ಅಧೀನಕ್ಕೆ ಒಳಪಟ್ಟರೂ ಆಂಗ್ಲರೊಂದಿಗೆ ಮಾತ್ರವಲ್ಲದೆ ಮಹಾರಾಷ್ಟ್ರ, ತಮಿಳುನಾಡು, ಆಂಧ್ರ, ಕೇರಳ ಮೊದಲಾದ ದೇಶೀಯದಲ್ಲಿಯೂ ಹರಿದು ಹಂಚಿ ಹೋಗಿದ್ದರೂ ಈ ಸಂದರ್ಭದಲ್ಲಿ ಕನ್ನಡದ ಸಾಂಸ್ಕೃತಿಕ ಸೊಲ್ಲು ಅಡಗಿ ಹೋಗಿತ್ತು. ಇಂತಹ ಸಂದರ್ಭದಲ್ಲಿ ಶಾಂತ ಕವಿಗಳ ಹೋರಾಟ. ಆಲೂರು ವೆಂಕಟರಾಯ. ಮುದವೀಡು ಕೃಷ್ಣರಾಯ. ಕಡಪಾ ರಾಘವೇಂದ್ರ ರಾಯರು ಮತ್ತು

ಕೌಜಲಗಿ ಶ್ರೀನಿವಾಸ ರಾಯರ ಹೋರಾಟದ ಫಲವಾಗಿ ಏಕೀಕರಣ ಚಳುವಳಿ ರೂಪ ಪಡೆಯಲು ಕಾರಣವಾದ ಅಂಶವನ್ನು ವಿಶ್ಲೇಷಿಸುತ್ತಾರೆ. ಮುಂದೆ ಮೈಸೂರಿನಲ್ಲಿ ವಿಶ್ವವಿದ್ಯಾಲಯದ ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ, ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಏಕೀಕರಣಕ್ಕಾಗಿ ನಡೆದ ಹೋರಾಟವನ್ನು ಚರ್ಚಿಸಿದ್ದಾರೆ.

'ಆಧುನಿಕ ಕನ್ನಡ ಸಾಹಿತ್ಯ ಸ್ವರೂಪ' ಎಂಬ ಲೇಖನದಲ್ಲಿ ನವೋದಯ ಕಾಲಘಟ್ಟದ ಸಾಹಿತ್ಯ ಧೋರಣೆಗಳು, ಇಂಗ್ಲೀಷ್‌ನ ಪ್ರಭಾವದಿಂದ ಬಿ. ಎಂ. ಶ್ರೀ. ಇಂಗ್ಲೀಷ್ ಗೀತೆಗಳ ಅನುವಾದದ ಮೂಲಕ ಆಲೂರು ವೆಂಕಟರಾಯ, ಎಂ. ಎಸ್. ಪುಟ್ಟಣ್ಣ, ಪಂಡಿತ ತಾರಾನಾಥರ ಗದ್ಯಶೈಲಿಗಳು, ಸಂಸ, ಶ್ರೀರಂಗ ಮೊದಲಾದವರ ಸ್ವತಂತ್ರ ನಾಟಕಗಳು, ಕಾರಂತರ ಗೀತ ನಾಟಕಗಳು, ವಿಚಾರ ವೈಜ್ಞಾನಿಕ ಸಾಹಿತ್ಯವು ೧೯೧೮ರಲ್ಲಿಯೇ ಬೆಳ್ಳಾವೆ ವೆಂಕಟ ನಾರಾಯಣಪ್ಪನವರ 'ವಿಜ್ಞಾನ' ಪತ್ರಿಕೆಯ ಮೂಲಕ ಬೆಳೆದಿದ್ದು, ನವೋದಯ ಕಾಲಘಟ್ಟದಲ್ಲಿ ಸಣ್ಣಕಥೆ, ಭಾವಗೀತೆ, ಕಾದಂಬರಿ, ವಿಮರ್ಶೆ, ಬೆಳೆದು ಬಂದಿವೆ. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಿಂದ ಸಾಹಿತ್ಯ ಪ್ರಗತಿಶೀಲ ಕಾಲಘಟ್ಟದ ಸಾಹಿತ್ಯದಲ್ಲಿ ಭಿನ್ನ ಧೋರಣೆ ಬೆಳೆದದ್ದು ಇವೆಲ್ಲವನ್ನೂ ವಿವರಿಸುತ್ತಾರೆ.

'ನವರತ್ನ ರಾಮರಾಯರು' ಎಂಬ ಎಂಬ ಪ್ರಬಂಧದಲ್ಲಿ ನವರತ್ನ ರಾಮರಾಯರ ಜೀವನ, ಕೃತಿಗಳನ್ನು ಪರಿಚಯಿಸುತ್ತಾರೆ. ಅವರು ಬರೆದ 'ಕೆಲವು ನೆನಪುಗಳು' ಕೃತಿ, ಮೈಸೂರು ಸರ್ಕಾರ ರೇಷ್ಮೆ ಇಲಾಖೆಯ ಸ್ಥಾಪನೆ, ಅದರ ಮುಖ್ಯಾಧಿಕಾರಿಯಾಗಿ ನೇಮಕ, ಸೆಂಟ್ರಲ್ ಸಿಲ್ಕ್ ಬೋರ್ಡ್ ಸ್ಥಾಪನೆ, 'ಲಕ್ಷ್ಮಣರಾಯನ ಭಾಗ್ಯ' ಕಥೆಯ ಪರಿಚಯದೊಂದಿಗೆ ವ್ಯಕ್ತಿತ್ವವನ್ನು ಸಂಕ್ಷಿಪ್ತವಾಗಿ ತಿಳಿಸುತ್ತಾರೆ.

'ಕಲೆಯಲ್ಲಿ ಹೂ-ಬಳ್ಳಿ' ಎಂಬ ಲೇಖನದಲ್ಲಿ ಕಲೆಯಲ್ಲಿ ಹೇಗೆ ಹೂಗಳನ್ನು ಬಳಸಿಕೊಂಡಿದ್ದಾರೆಂದು, ಭಾರತಿಯರಲ್ಲಿ ಮಲ್ಲಿಕಾ, ಚಂಪಕಾ, ಬಕುಳ, ಕೇತಕಿ ಇರುವಂತೆ ಪದ್ಮ ಮೊದಲಾದ ಹೂಗಳನ್ನು ಕಾಣಬಹುದು. ಆದರೆ ಪದ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಕಲೆಯನ್ನು ದೇವಾರಾಧನೆಯ ಭಾಗವಾಗಿ ನೋಡದೆ ಮಾನವನ ಜೀವನಕ್ರಮವನ್ನಾಗಿ ಬಳಸಿಕೊಂಡಿದ್ದು ಮೊಘಲರ ಸಂಪರ್ಕದಿಂದಾಗಿ, ಮೊಘಲ್ ಚಿತ್ರಕಾರರು ಹಿಂದೂ ಚಿತ್ರಗಾರನಷ್ಟೇ ಸ್ವತಂತ್ರನಾಗಿರಲಿಲ್ಲ, ಕುರಾನಿನಲ್ಲಿ ಲಲಿತ ಕಲೆಗಳಿಗೆ ಪ್ರಾಧಾನ್ಯತೆ ಕೊಡದಿದ್ದರಿಂದ ಆತ ಇಸ್ಲಾಂನ ಕಟ್ಟುನಿಟ್ಟಿಗೆ ಬದ್ಧನಾಗಿದ್ದರಿಂದ ಆತ ರಾಮಾಯಣ, ಮಹಾಭಾರತ, ಭಾಗವತ ಮೊದಲಾದವುಗಳ ಮೊರೆ ಹೋದನೆಂದು, ನಿತ್ಯ ಜೀವನದ ದೃಶ್ಯಗಳು, ಸಾಹಸ, ಬೇಟೆ, ಶೃಂಗಾರ, ವ್ಯಕ್ತಿ ಚಿತ್ರಗಳು, ಗಿಡಮರಗಳು, ಹೂ ಬಳ್ಳಿ ರೇಖೆಗಳನ್ನು ಬಿಡಿಸುವುದು ಇವೆಲ್ಲಾ ಮೊಘಲ್ ಚಿತ್ರಕಲೆಯಲ್ಲಿ ಹೆಚ್ಚು ಬರಲು ಕಾರಣವಾದ ಪ್ರಸಂಗವನ್ನು ಚಾರಿತ್ರಿಕವಾಗಿ ವಿಶ್ಲೇಷಿಸುತ್ತಾರೆ. ಭಾರತೀಯ ಚಿತ್ರ ಸಂಸ್ಕೃತಿಯಲ್ಲಿ ಶ್ರೀಕೃಷ್ಣನ ಪಾತ್ರ ಕಲೆಯ ಮೇಲೆ ಹೇಗೆ ಪ್ರಭಾವಿಸಿದೆಯೆಂದು ಕೂಡಾ ಚರ್ಚಿಸುತ್ತಾರೆ.

ಶ್ರೀ ಬಸವಣ್ಣನವರ ಅಮೃತವಾಣಿ - ೧೯೫೯

ವೀರಶೈವ ಸಾಹಿತ್ಯವನ್ನು ಕುರಿತಂತೆ ಬರೆದ ಕೃತಿಗಳಲ್ಲಿ ಅ. ನ. ಕೃ. ರವರು ಬಸವಣ್ಣನವರ ಜೀವನ, ಬದುಕು ಮತ್ತು ವಚನಗಳನ್ನು ಕನ್ನಡಿಗರಿಗೆ ತಿಳಿಸುವ ಪ್ರಯತ್ನವಾಗಿ ಬರೆದ ಕೃತಿಯೇ 'ಶ್ರೀ ಬಸವಣ್ಣನವರ ಅಮೃತವಾಣಿ'. ಈ ಕೃತಿಯು ೧೯೫೯ರಲ್ಲಿ ಪ್ರಕಟಗೊಂಡಿದ್ದು ಇದರಲ್ಲಿ ಮೂರು

ಭಾಗಗಳಿವೆ. ಮೊದಲ ಭಾಗದಲ್ಲಿ ಬಸವಣ್ಣನವರ ಜೀವನಕ್ಕೆ ಸಂಬಂಧಿಸಿದಂತೆ ಬಾಲ್ಯ, ಯೌವ್ವನ, ಬಿಜ್ಜಳನ ರಾಜಾಸ್ಥಾನ, ಅವರ ಸಂಸಾರ, ಸಂಸಾರದ ಬಗ್ಗೆ ನಿರಶನ, ಸಾಧನ ಯೋಗ, ಬಸವಣ್ಣನವರು ಸಮಾಜದಲ್ಲಿದ್ದ ಅಸ್ಪೃಶ್ಯತೆ, ಕುಲ ಇವುಗಳ ವಿರುದ್ಧ ಅನುಭವ ಮಂಟಪದ ಮೂಲಕ ನವ ಸಮಾಜದ ನಿರ್ಮಾಣದ ಕನಸು, ಷಟ್‌ಸ್ಥಲ ಸಿದ್ಧಾಂತ (ಭಕ್ತಸ್ಥಲ, ಮಹೇಶ್ವರ ಸ್ಥಲ, ಪ್ರಸಾದಿ ಸ್ಥಲ, ಪ್ರಾಣಲಿಂಗಿ ಸ್ಥಲ, ಶರಣ ಸ್ಥಲ, ಐಕ್ಯ ಸ್ಥಲ), ಇವುಗಳ ವಿವೇಚನೆ, ೧೨ನೇ ಶತಮಾನದಲ್ಲಿ ಹರಳಯ್ಯ ಮತ್ತು ಮಧುವರಸರ ಪ್ರಕರಣದಿಂದ ಉಂಟಾದ ಮಹಾಕ್ರಾಂತಿ ಇವುಗಳೆಲ್ಲವನ್ನು ಬಸವಣ್ಣನವರ ವಚನಗಳ ಹಿನ್ನೆಲೆಯಲ್ಲಿ ಪರಿಚಯಿಸುತ್ತಾರೆ.

ಎರಡನೆಯ ಭಾಗದಲ್ಲಿ 'ಅಮೃತವಾಣಿ' ಯಲ್ಲಿ ಬಸವಣ್ಣನವರ ವಚನಗಳಲ್ಲಿ ತಿಳಿಸುವ ಸಂಸಾರ ಹೇಯ, ಮನುಷ್ಯನ ಅಲ್ಪತನದ ಆತ್ಮಕಥೆ ಹಾಗೂ ಆತ್ಮಾರ್ಪಣೆ, ಮನಸ್ಸಿನ ಅಶಾಂತಿಯ ಸ್ಥಿತಿ, ಸಂಗನಲ್ಲಿ ಮೊರೆಯಿಡುವುದು, ಅರಿಷಡ್ವರ್ಗಗಳ ದಮನ, ಕರ್ಮಜಾಲ, ಸಂಗಮ ಮಾಡುವ ಪರೀಕ್ಷೆ, ಡಾಂಭಿಕತೆ, ಜಾತಿ, ಕುಲಗಳು, ಕರ್ತವ್ಯದ ಶ್ರದ್ಧೆ, ಏಕದೇವತಾ ಪೂಜೆ, ಪ್ರಿಯ, ಪ್ರೇಯಸಿ ಭಾವ, ಶರಣರ ಮತ್ತು ಸಂಗನ ಕೃಪೆ ಮೊದಲಾದ ವಿಚಾರಗಳನ್ನು ಅವರ ವಚನಗಳನ್ನು ಕ್ರೋಢಿಕರಿಸಿ ನೀಡಿದ್ದಾರೆ.

ಕಡೆಯ ಭಾಗದಲ್ಲಿ 'ಶ್ರೀ ಬಸವಣ್ಣನವರ ಗುಣಗಾನ' ಎಂಬ ಭಾಗದಲ್ಲಿ ಬಸವಣ್ಣನವರ ಸಮಕಾಲೀನರಾದ ಅಲ್ಲಮ ಪ್ರಭು, ಚನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಿದೇವ, ಅಕ್ಕಮಹಾದೇವಿ, ನೀಲಾಲೋಚನೆ, ಅಕ್ಕನಾಗಯ್ಯ, ಬಸವಣ್ಣನವರನ್ನು ಹೇಗೆ ತಮ್ಮ ವಚನಗಳಲ್ಲಿ ಸ್ತುತಿಸಿದ್ದಾರೆ ಎಂಬುದನ್ನು ಆಯಾಯ ವಚನಕಾರರ ವಚನಗಳನ್ನು ನೀಡಿದ್ದಾರೆ.

ಜೊತೆಗೆ 'ಕವಿಗಳು' ಎಂಬಲ್ಲಿ ಬಸವಣ್ಣನ್ನು ಪಾಲ್ಕುರಿಕೆ ಸೋಮನಾಥಾರಾಧ್ಯರು, ಹರಿಹರ, ಭೀಮಕವಿ, ಪದ್ಮಣಾಂಕ, ಮೊಗ್ಗೆಯ ಮಾಯಿದೇವ, ಭೀಮರಸ, ಚತುರ್ಮುಖ ಬೊಮ್ಮರಸ, ಸುರಂಗ, ಮರಿ ತೋಂಟದಾರ್ಯ, ವಿರೂಪಾಕ್ಷ ಪಂಡಿತ, ಸರ್ವಜ್ಞ, ಸಿದ್ಧ ನಂಜೇಶ, ಷಡಕ್ಷರಿ ಮೊದಲಾದವರು ಬಸವಣ್ಣನನ್ನು ತಮ್ಮ ಕಾವ್ಯಗಳಲ್ಲಿ ಸ್ತುತಿಸಿರುವ ಭಾಗಗಳನ್ನು ನೀಡಿದ್ದಾರೆ.

ಆ ಮೂಲಕ ಬಸವಣ್ಣನವರ ವ್ಯಕ್ತಿತ್ವ ೧೨ನೇ ಶತಮಾನದ ನಂತರದ ಕಾಲಘಟ್ಟದಲ್ಲಿ ಕೆಲವು ಕವಿಗಳ ಮೇಲೆ ಪ್ರಭಾವಿಸಿರುವುದನ್ನು ಕಾಣಬಹುದು. ಇಂದಿಗೂ ಅನೇಕ ಬರಹಗಾರರ ಮೇಲೆ ಬಸವಣ್ಣನವರ ವಿಚಾರಗಳು, ವಚನಗಳು, ಸಾಮಾಜಿಕ ಸುಧಾರಣೆಗಾಗಿ ನಡೆದುಕೊಂಡ ರೀತಿ ಇವೆಲ್ಲಾ ಪ್ರಭಾವಿಸುತ್ತಿರುವುದನ್ನು ಕಾಣಬಹುದು.

ಸಾಹಿತ್ಯ ಮತ್ತು ಕಾಮಪ್ರಚೋದನೆ – ೧೯೬೧

ಅ. ನ. ಕೃ. ಬರೆದ ನಗ್ನ ಸತ್ಯ, ಶನಿ ಸಂತಾನ ಕಾದಂಬರಿಗಳಿಗೆ ಬಂದ ವಿಮರ್ಶೆ ಹಾಗು ಪ್ರಗತಿಶೀಲ ಕಾಲಘಟ್ಟದ ಸಾಹಿತ್ಯವನ್ನು ಅಶ್ಲೀಲ, ಕಾಮಪ್ರಚೋದಕ ಎಂಬುದಾಗಿ ಮಾಸ್ತಿ, ಬೆಟಗೇರಿ ಕೃಷ್ಣಶರ್ಮ, ಡಿ. ವಿ. ಜಿ. ಮೊದಲಾದವರ ಟೀಕೆ, ಪ್ರಜಾವಾಣಿ ಪತ್ರಿಕೆಗಳಲ್ಲಿ ಸುದೀರ್ಘವಾಗಿ ಬಂದ ಟೀಕೆ, ಪ್ರಗತಿಶೀಲ ಸಾಹಿತ್ಯದಲ್ಲಿ ಗುರುತಿಸಿಕೊಂಡಿದ್ದ ನಿರಂಜನರು ಅ. ನ. ಕೃ. ರವರ ವಿರುದ್ಧ

ಧೋರಣೆ, ಇವುಗಳಿಗೆಲ್ಲಾ ಉತ್ತರವಾಗಿ ಸಾಹಿತ್ಯ ಮತ್ತು ಕಾಮಪ್ರಚೋದನೆ ಎಂಬ ಗ್ರಂಥವನ್ನು ೧೯೬೧ರಲ್ಲಿ ಪ್ರಕಟಿಸಿದರು.

ವಿಚಾರ ಪ್ರಚೋದಕದ ಯಾವುದೇ ಸಾಹಿತ್ಯ ಬಂದರೂ ಅದನ್ನು ಸಂಪ್ರದಾಯವಾದಿಗಳು ಅಶ್ಲೀಲವೆಂದು ತಿರಸ್ಕರಿಸುವ ಧೋರಣೆಯು ಇಂಗ್ಲೆಂಡ್,ಫ್ರಾನ್ಸ್, ಅಮೆರಿಕಾ, ರಷ್ಯಾದಲ್ಲಿರುವಂತೆ ಭಾರತದಲ್ಲಿಯೂ ನಡೆದಿದೆ. ಪಂಡಿತ ತಾರಾನಾಥರ 'ಧರ್ಮ ಸಂಭವ' ದ ಮೇಲೆ ಮಾಡಿದ ಆಪಾದನೆ, ೧೯೨೪ರಲ್ಲಿ ವಿಜ್ಞಾನದ ಮೇಲೆ ಬೆಂಗಳೂರಿನಲ್ಲಿ ಲೈಂಗಿಕ ವಿಷಯದ ಮೇಲೆ ಮಾಡಿದ ಭಾಷಣದ ಮೇಲಿನ ಟೀಕೆ, ಅ. ನ. ಕೃ. ರವರ ಸಾಹಿತ್ಯದಲ್ಲಿ ಶೀಲದ ಪ್ರಶ್ನೆ ಲೇಖನ, ಪ್ರಗತಿ ಶೀಲ ಲೇಖಕರ ಸಾಹಿತ್ಯವೆಲ್ಲ ಅಶ್ಲೀಲವೆಂದು ಸಂಪ್ರದಾಯವಾದಿಗಳ ವಿಚಾರ ಪ್ರಚೋದಕ ಸಾಹಿತ್ಯದ ವಿರೋಧಿ ಧೋರಣೆಯಾಗಿದೆ.

ಈ ರೀತಿ ಪ್ರಗತಿಶೀಲ ಸಾಹಿತ್ಯವನ್ನು ವಿರೋಧಿಸುವ ಕಾರಣಗಳನ್ನು ಅ. ನ. ಕೃ. ಗುರುತಿಸುತ್ತಾರೆ. ಅದರಲ್ಲಿ ತಾಟಸ್ಥ್ಯ ನೀತಿಯೆಂಬುದು ಭಾರತೀಯರಲ್ಲಿದ್ದೂ ಹೊಸ ದಾರಿಯ ಕಡೆಗೆ ಹೋಗದೇ ಇರುವುದು, ಆಲಸ್ಯದಿಂದ ಇದ್ದುದ್ದರಲ್ಲಿಯೇ ಇರೋಣ, ಬದಲಾಯಿಸುವ ಮನಃಸ್ಥಿತಿಗೆ ಒಳಗಾಗದೆ ಇರುವುದು, ಜ್ಞಾನದಾಹದ ದಾರಿದ್ರ್ಯದಿಂದ ಹೊಸ ವಿಚಾರ ಮಾಡುವ ಮನಃಸ್ಥಿತಿಗೆ ಹೋಗದಿರುವುದು ಭಾರತೀಯರೆಲ್ಲರೂ ಜೀವನವೆಲ್ಲಾ ಸುಖಮಯವಾಗಿದೆಯೆಂಬ ಭ್ರಾಂತಿ ಇವೆಲ್ಲಾ ಧೋರಣೆಗಳಿಂದ ಪ್ರಗತಿಶೀಲ ಸಾಹಿತ್ಯವನ್ನು ಅಶ್ಲೀಲವೆಂದು ವಿರೋಧಿಸಲು ಕಾರಣವಾದ ತಾತ್ವಿಕತೆಯನ್ನು ಮುಂದಿಡುತ್ತಾರೆ.

'ಹೆಣ್ಣನ್ನು ನೋಡುವ ಕಣ್ಣು' ಎಂಬ ಅಧ್ಯಾಯದಲ್ಲಿ ಭಾರತೀಯ ವೇದ-ಉಪನಿಷತ್ತುಗಳಲ್ಲಿ ಹೆಣ್ಣಿಗೆ ಉತ್ತಮ ಸ್ಥಾನ ನೀಡಿದ್ದವೆಂದು ಕಾಲಾನಂತರ ಹೆಣ್ಣನ್ನು ಭೋಗದ ವಸ್ತುವಾಗಿ ನೋಡುವ ದೃಷ್ಟಿ ಬೆಳೆದಿದ್ದನ್ನು ವಿಶ್ಲೇಷಿಸುತ್ತಾರೆ. 'ಕನ್ನಡದ ಕವಿಗಳು ನೋಡಿದ ಹೆಣ್ಣು' ಎಂಬ ಭಾಗದಲ್ಲಿ ಪ್ರಾಚೀನ ಕನ್ನಡದಿಂದ ಹಿಡಿದು ಸರ್ವಜ್ಞನ ಕಾಲದವರೆಗೂ ಹೆಣ್ಣಿನ ಬಗ್ಗೆ ತಳೆದಿದ್ದ ಅಭಿಪ್ರಾಯದ ಸ್ಥೂಲ ಪರಿಚಯವನ್ನು ಮಾಡುತ್ತಾರೆ. ಹೆಣ್ಣಿನ ಉದ್ಧಾರಕ್ಕಾಗಿ ಕನ್ನಡ ಕಾವ್ಯ ಪ್ರಪಂಚದಲ್ಲಿ ಹೋರಾಡಿದವರು ಅಕ್ಕಮಹಾದೇವಿ ಮತ್ತು ಸಂಚಿಯ ಹೊನ್ನಮ್ಮ. ಇವರಿಬ್ಬರು ಸಾಮಾನ್ಯ ಜೀವನದಿಂದ ದೂರ ನಿಂತಿದ್ದು ಸ್ತ್ರೀ ಜನಾಂಗವನ್ನು ಉದ್ಧಾರಿಸಲು ಸಾಧ್ಯವಿಲ್ಲವೆಂದು, ಅಕ್ಕಮಹಾದೇವಿ ಆಧ್ಯಾತ್ಮಿಕ ಕಡೆ ಹೋಗಿದ್ದು, ಸಂಚಿಯ ಹೊನ್ನಮ್ಮ ಅರಸನ ಆಶ್ರಯದಲ್ಲಿದ್ದು ಹೆಣ್ಣಿಗೆ ಸಹಾನುಭೂತಿ ದೊರಕಿಸುವ ಕಡೆ ಹೋಗಿದ್ದೂ ಎಷ್ಟು ಸರಿಯೆಂದು ಚರ್ಚಿಸುತ್ತಾರೆ.

ಕಾಮಪ್ರಚೋದಕ ಮತ್ತು ಅಶ್ಲೀಲ ಎಂಬ ಎರಡು ವಿಚಾರಗಳನ್ನು ಎತ್ತಿಕೊಂಡು ಪ್ರಾಚೀನ ಸಂಸ್ಕೃತ ಮತ್ತು ಕನ್ನಡ ಕವಿಗಳು ಕಾಮಪ್ರಚೋದನೆಯು ಒಂದು ಪಾಪವೆಂದು ಭಾವಿಸಲಾರರು. ಹಾಗೆ ಭಾವಿಸುವುದು ನಮ್ಮ ಸಂಸ್ಕೃತಿಯ ಪ್ರತೀಕವಲ್ಲವೆಂದು ಅದಕ್ಕೆ ಉತ್ತರವಾಗಿ ಧರ್ಮ, ಅರ್ಥ. ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳಲ್ಲಿ ಕಾಮವನ್ನು ಏಕೆ ಸೇರಿಸುತ್ತಿದ್ದರು, ಕಾಮವನ್ನು ದೇವರನ್ನಾಗಿ ಕಂಡಿದ್ದು, ಮಹಾಭಾರತದ ಶಾಂತಿಪರ್ವದಲ್ಲಿ ಕಾಮನ ಪ್ರಶಂಸೆ ಮಾಡುವುದು. ಆತನನ್ನು ವೃಕ್ಷಕ್ಕೆ ಹೋಲಿಸುವುದು ಮೊದಲಾದವುಗಳನ್ನು ಉದಾಹರಿಸುತ್ತಾರೆ.

ಸಂಪ್ರದಾಯವಾದಿಗಳು ಪ್ರಗತಿಶೀಲ ಸಾಹಿತ್ಯವು ಇಂದ್ರಿಯವನ್ನು ಕೆರಳಿಸುವ ಸಾಹಿತ್ಯವನ್ನು ಸೃಷ್ಟಿಸುತ್ತಿದ್ದಾರೆ ಎಂಬ ಅಪವಾದಕ್ಕೆ ಅ. ನ. ಕೃ. ರವರು ಇಂದ್ರಿಯಾಸಕ್ತಿಯನ್ನು ಕೆರಳಿಸುವುದಕ್ಕೆ ಸಾಹಿತ್ಯವೇ ಬೇಕೇ? ಕಾಫಿ, ಚಹಾ, ಸಿಗರೇಟು, ಮಾದಕ ದ್ರವ್ಯಗಳು, ಸುಗಂಧ ಮೊದಲಾದವೂ ಇಂದ್ರಿಯವನ್ನು ಕೆರಳಿಸುವುದಿಲ್ಲವೇ. ಕರ್ನಾಟಕದಲ್ಲಿ ಓದುಗರ ಸಂಖ್ಯೆ ಎಷ್ಟಿರಬಹುದು, ಅದರಲ್ಲಿ ಸಾಹಿತ್ಯವನ್ನು ಓದುವವರ ಸಂಖ್ಯೆ ಕಡಿಮೆ ಇದೆ ಎಂದೂ, ಇವರೆಲ್ಲರನ್ನು ಪ್ರಗತಿಶೀಲ ಸಾಹಿತ್ಯ ಮಲಿನಗೊಳಿಸುತ್ತದೆಯೇ, ಉಳಿದ ಜನರ ಶೀಲ ಭದ್ರವಾಗಿದೆಯೇ ಎಂದು ವಿಮರ್ಶಕರು ಆಶ್ವಾಸನೆ ಕೊಡಬಲ್ಲರೇ ಎಂದು ಪ್ರಶ್ನಿಸುತ್ತಾರೆ. ಆ ಮೂಲಕ ಸಂಪ್ರದಾಯವಾದಿತನದ ವಿಮರ್ಶಕರ ಮನಃಸ್ಥಿತಿಯನ್ನು ಖಂಡಿಸುತ್ತಾರೆ.

'ಮತಗಳು ಕಾಮಪ್ರಚೋದನೆ' ಎಂಬ ಅಧ್ಯಾಯದಲ್ಲಿ ಪ್ರಾಚೀನರಲ್ಲಿ ಲೈಂಗಿಕ ವಿಷಯಗಳಲ್ಲಿ ಅವರ ಮನೋಭಾವ ಮಡಿವಂತಿಕೆಯಿಂದ ಮತ್ತು ಗೋಪ್ಯತೆಗಳಿಂದ ದೂರವಾಗಿದ್ದು, ಲಿಂಗವೆಂಬುದು ಅವರಿಗೆ ಪುಂಸತ್ವದ ಸಂಕೇತವಾಗಿ ಪೂಜನೀಯವಾಗಿತ್ತು ಎಂದು ಭಾವಿಸುತ್ತಾರೆ. ಧರ್ಮ ಬೋಧನೆಗಾಗಿ ಬರೆದ ಗ್ರಂಥ ಯಶೋಧರ ಚರಿತೆಯನ್ನು ಅಶ್ಲೀಲವೆಂದು ಗುರುತಿಸುವ ಮತ್ತು ಸಾಹಿತ್ಯದಲ್ಲಿ ಕೆಲವು ಶಬ್ದಗಳನ್ನು ಉಪಯೋಗಿಸಿದರೆ ಅಶ್ಲೀಲವೆಂದು ಪ್ರತಿಕ್ರಿಯಿಸುವ, ಜಿ. ಪಿ. ರಾಜರತ್ನಂರವರು ತಮ್ಮ ಕಾದಂಬರಿ, ಕತೆಯಲ್ಲಿ 'ತಾಯ್ಗಂಡ' ಎಂಬ ಶಬ್ದ ಬಳಸುವ ಹಿನ್ನೆಲೆಯಲ್ಲಿ ಇವೆಲ್ಲವನ್ನೂ ಉಲ್ಲೇಖಿಸುತ್ತಾರೆ. ಕನ್ನಡದಲ್ಲಿ ಲೈಂಗಿಕ ವಿಷಯಗಳಿಗೆ ಸ್ಪಷ್ಟವಾದ ಕೂಲಂಕಷವಾದ ವಿಸ್ತಾರವಾಗಿ ವಿವೇಚನೆ ಮಾಡಿದ ಕವಿಯಾಗಿ ರತ್ನಾಕರವರ್ಣಿ ಆತನ 'ಭರತೇಶ ವೈಭವ'ದ ಕೆಲವೊಂದು ಪದ್ಯಗಳನ್ನು ಉದಾಹರಣೆಯಾಗಿ ನೀಡುತ್ತಾರೆ.

ಪ್ರಗತಿಶೀಲ ಕಾಲಘಟ್ಟದ ಕಥೆ-ಕಾದಂಬರಿಗಳನ್ನು ಮಡಿವಂತ ಸಾಹಿತ್ಯದವರು ಅಶ್ಲೀಲತೆಯ ಕಲ್ಪನೆ ಕೊಟ್ಟ ವಿಚಾರವನ್ನು ಖಂಡಿಸುತ್ತಾರೆ. ನವೋದಯ ಕಾಲಘಟ್ಟದಲ್ಲಿನ ಬರಹಗಾರರಲ್ಲಿಯೇ ಅಶ್ಲೀಲವೆನಿಸಬಹುದಾದ ಭಾಗಗಳನ್ನು ಎತ್ತಿ ತೋರಿಸಬಹುದೆಂದು ಮಾಸ್ತಿ, ತಿ. ನಂ. ಶ್ರೀ, ವಿ. ಸೀ., ಕೆ. ಎಸ್. ನರಸಿಂಹಸ್ವಾಮಿ, ವಿ. ಕೃ. ಗೋಕಾಕ್‌ರವರ ಪದ್ಯಗಳನ್ನು ಮತ್ತು ಕಥೆಯ ಸಾಲುಗಳನ್ನು ಉದಾಹರಿಸುತ್ತಾರೆ. ಲೈಂಗಿಕ ಪ್ರವೃತ್ತಿಯೆಂಬುದು ಮನುಷ್ಯ ಜೀವನದ ಅವಿಭಾಜ್ಯ ಅಂಗವಾಗಿದ್ದು ಎಷ್ಟೇ ಮಡಿವಂತನಾಗಿದ್ದರೂ ಸಾಹಿತಿಯಾದವನಿಗೆ, ಕಲಾವಿದನಾದವನಿಗೆ ಅದನ್ನು ಪ್ರಸ್ತಾಪಿಸದೆ ಗತ್ಯಂತರವಿಲ್ಲ ಎಂದು ಚರ್ಚಿಸುತ್ತಾರೆ.

ಸಾಹಿತ್ಯ ಎಂಬುದು ನೀತಿಯನ್ನು ಬೋಧಿಸುವುದಕ್ಕಿಂತ ಸಮಾಜದಲ್ಲಿನ ವಾಸ್ತವ ಘಟನೆಗಳನ್ನು ಚಿತ್ರಿಸಬೇಕಾದುದೆಂದು, ಆದರ್ಶ, ನೀತಿಯೇ ಮುಖ್ಯವೆಂದು ಭಾವಿಸುವ ಮಡಿವಂತ ಸಾಹಿತಿಗಳು, ಸಾಮಾನ್ಯರ ಜೀವನದ ಚಿತ್ರಣವು ಸಾಹಿತ್ಯದಲ್ಲಿ ಬಿಂಬಿಸಬೇಕೆಂದು ಈ ರೀತಿ ಸಾಹಿತ್ಯದಲ್ಲಿ ಚಿತ್ರಿಸುವಾಗ ಸಮಾಜದ ನೈಜ ಸಮಸ್ಯೆಗಳಾದ ಹಸಿವು, ವೇಶ್ಯಾ ಚಿತ್ರಣ, ಮೈಥುನ ಮೊದಲಾದವುಗಳನ್ನು ಪ್ರತಿಬಿಂಬಿಸುತ್ತವೆ. ಕಲೆಯನ್ನು ಮತ್ತು ನೀತಿಯನ್ನು ಒಟ್ಟಾಗಿ ಬೆರೆಸಬಾರದು. ನೀತಿಯ ಮಾನದಂಡದಿಂದ ಕಲೆಯನ್ನು ಅಳೆಯಬಾರದೆಂದು, ಕಾಮ ಪ್ರಚೋದನೆಯೆಂಬುದು ಸಾಹಿತ್ಯ ಮತ್ತು ಕಲಾ ಪ್ರಪಂಚಕ್ಕೆ ಸೇರಿದ ಪದವಲ್ಲವೆಂದು ಅದು ವೈದ್ಯ ಶಾಸ್ತ್ರಕ್ಕೆ ಸೇರಿದ್ದೆಂದು, ಹಾಗೆಯೇ ಅಶ್ಲೀಲವೆಂಬ ಪದ ನೀತಿ ಶಾಸ್ತ್ರಕ್ಕೆ ಸೇರಿದ್ದು, ಒಂದು ಶಾಸ್ತ್ರದ ಪಾರಿಭಾಷಿಕ ಪದವನ್ನು

ಇನ್ನೊಂದು ಶಾಸ್ತ್ರಕ್ಕೆ ಸೇರಿಸಿದರೆ ಅದು ಅನರ್ಥಕ್ಕೆ ಎಡೆ ಮಾಡಿ ಕೊಡುತ್ತದೆ ಎಂಬ ತಾತ್ವಿಕ ನಿಲುವು ಅ. ನ. ಕೃ. ರವರದ್ದಾಗಿದೆ.

ಸಜೀವ ಸಾಹಿತ್ಯ – ೧೯೬೫

ಈ ಕೃತಿಯನ್ನು ೧೯೬೫ರಲ್ಲಿ ಅ. ನ. ಕೃ. ಪ್ರಕಟಪಡಿಸಿದರು. ಇದರಲ್ಲಿ ಒಟ್ಟು ೧೪ ಪ್ರಬಂಧಗಳಿವೆ. ಇದರಲ್ಲಿ ಸಂಸ್ಕೃತಿಯೆಂದರೇನು? ಎಂಬ ಪ್ರಬಂಧದಲ್ಲಿ ದೇಶದಲ್ಲಿರುವ ರಾಜಕಾರಣ, ಸಂಸ್ಕೃತಿ ಒಂದಕ್ಕೊಂದು ಬೆಸೆದುಕೊಂಡಿದೆ, ಚಾಲುಕ್ಯರ ಪುಲಕೇಶಿ, ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯ ಇವರ ರಾಜಕಾರಣವು ಸಂಸ್ಕೃತಿಯ ಒಂದು ಭಾಗವಾಗಿ ಗುರುತಿಸುತ್ತಾರೆ. ಪಾಶ್ಚಾತ್ಯರು ಭೋಗವನ್ನು ಸಂಸ್ಕೃತಿಯೆಂದು ಭಾವಿಸಿದರು. ಭಾರತೀಯರು ಪಾರಮಾರ್ಥಿಕ ಪ್ರಗತಿಯನ್ನು ಸಂಸ್ಕೃತಿಯೆಂದು, ಪ್ರಾಪಂಚಿಕ ಭೋಗದಿಂದಲೇ ಎರಡು ಮಹಾಯುದ್ಧಗಳೂ ನಡೆದಿದ್ದು, ಯುದ್ಧ ಮತ್ತು ಭೋಗ ಸಂಸ್ಕೃತಿಗೆ ಪರಿಹಾರವಾಗಿ ಭಾರತೀಯ ಪಾರಮಾರ್ಥಿಕ ಸಂಸ್ಕೃತಿಯಿಂದ ವಿಶ್ವಕ್ಕೆ ಒಳಿತಾಗುತ್ತದೆಂದು ಭಾರತೀಯ ಸಂಸ್ಕೃತಿಯ ತಾತ್ವಿಕತೆಯನ್ನು ವಿಶ್ಲೇಷಿಸುತ್ತಾರೆ.

ಶ್ರೀರಂಗರು 'ನಮಗೆ ಒಂದು ಸಂಸ್ಕೃತಿ ಇದೆಯೇ?' ಎಂಬ ಲೇಖನದಲ್ಲಿ ಭಾರತದಲ್ಲಿ ಒಂದು ಸಂಸ್ಕೃತಿಯೆಂಬುದು ಇಲ್ಲ, ಹಲವು ಸಂಸ್ಕೃತಿಗಳು ಇದ್ದು ಅದು ಭಾರತೀಯ ಸಮಾಜದಲ್ಲಿ ಬೆರೆತುಕೊಂಡಿದೆ ಎಂದು ವಿಶ್ಲೇಷಿಸುತ್ತಾರೆ. ಅ. ನ. ಕೃ. ರವರು ವಿಶಾಲವಾದ ಭಾರತದಿಂದ ಭಿನ್ನವಾದ, ಪ್ರತ್ಯೇಕ ಕರ್ನಾಟಕ ಸಂಸ್ಕೃತಿ ಕರ್ನಾಟಕದಲ್ಲಿತ್ತೇ? ಎಂಬ ಲೇಖನದಲ್ಲಿ ಕರ್ನಾಟಕದ ಪ್ರಾಚೀನ ಪರಂಪರೆಯಿಂದ ಧರ್ಮದ ಹೆಸರಿನಲ್ಲಿ ಕರ್ನಾಟಕದಲ್ಲಿ ಯಾವುದೇ ಸಂಘರ್ಷಗಳು ನಡೆಯದೇ ಇರುವುದು, ಒಂದೇ ಕುಟುಂಬದ ಜನ ಬೇರೆ ಬೇರೆ ಧರ್ಮಗಳಿಗೆ ಸೇರಿದ ನಿದರ್ಶನಗಳು ಕನ್ನಡ ನಾಡಿನಲ್ಲಿದ್ದು ಧಾರ್ಮಿಕ ಸಹಿಷ್ಣುತೆ, ಧಾರ್ಮಿಕ ಸಹಬಾಳ್ವೆ ಎಂಬುದು ಕರ್ನಾಟಕದಲ್ಲಿದೆ. ಯಾವಾಗ ಆರ್ಥಿಕ ಸಮಸ್ಯೆ, ರಾಜಕಾರಣ ತಲೆ ಹಾಕಿ ಧರ್ಮವನ್ನು ದುರುಪಯೋಗಪಡಿಸಿಕೊಂಡ ಕಾಲದಲ್ಲಿ ಮಾತ್ರ ಸಂಘರ್ಷಗಳು ನಡೆದಿವೆ. ಧಾರ್ಮಿಕ ಸಂಘರ್ಷಗಳು ನಡೆಯುವುದೇ ರಾಜಕಾರಣ ತಲೆ ಹಾಕಿದಾಗ ಎಂಬ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ.

ಸಂಸ್ಕೃತಿ ಉಳಿಯಲು, ಸಾಹಿತ್ಯ ಉಳಿಯಲು ಜನಸಮುದಾಯದ ಕಾಣಿಕೆ ಮುಖ್ಯವಾದುದೆಂದು. ಕನ್ನಡ ಸಂಸ್ಕೃತಿಯೆಂಬುದು ಭಾರತ ಸಂಸ್ಕೃತಿಯಿಂದ ಬೇರೆಯಾದುದಲ್ಲ ಭಾರತ ಸಂಸ್ಕೃತಿ ಮಹಾತಾಯಿಯಾದರೆ, ಕನ್ನಡ ಸಂಸ್ಕೃತಿ ಆ ಮಹಾತಾಯಿಯ ಪುಣ್ಯ ಪುತ್ರಿಯೆಂದು ಭಾವಿಸುತ್ತಾರೆ. ಭಾರತೀಯ ಸಂಸ್ಕೃತಿಯ ಉಳಿವಿನೊಂದಿಗೆ ಕನ್ನಡ ಸಂಸ್ಕೃತಿಯನ್ನು ಬೆಳೆಸಬೇಕೆಂದು ಚರ್ಚಿಸುತ್ತಾರೆ.

'ಸಾಹಿತ್ಯ ಮತ್ತು ಯುಗಧರ್ಮ' ಎಂಬ ಲೇಖನದಲ್ಲಿ ಕನ್ನಡನಾಡಿನ ಸಾಹಿತ್ಯದ ಧೋರಣೆ, ಕಾಲಘಟ್ಟಕ್ಕೆ ಅನುಗುಣವಾಗಿರಬೇಕೆಂದು 'ವಿಮರ್ಶಕ ಹಾದಿ' ಎಂಬ ಲೇಖನದಲ್ಲಿ ವಿಮರ್ಶಕನ ದೃಷ್ಟಿಕೋನ, ಕಾದಂಬರಿಯ ಭಾವ ಪ್ರವಾಹ ಎಂಬುದು ಯುರೋಪ್‌ನಲ್ಲಿ ಬೆಳೆದು ಅದು ಕನ್ನಡ ನಾಡಿನಲ್ಲಿ ಹೇಗೆ ಪ್ರಭಾವಿಸಿದೆ ಎಂಬುದನ್ನು ಪ್ರಗತಿಶೀಲ ಕಾಲಘಟ್ಟದ ಕಾದಂಬರಿಯ ಹಿನ್ನೆಲೆಯಲ್ಲಿ

'ಕಾದಂಬರಿಗಳ ಭಾವ ಪ್ರವಾಹ' ಎಂಬ ಲೇಖನದಲ್ಲಿ, 'ವಿಜಯನಗರ ಸಂಸ್ಕೃತಿ' ಎಂಬ ಲೇಖನದಲ್ಲಿ ಸಂಸ್ಕೃತಿಯನ್ನು ಇಡಿಯಾಗಿ ನೋಡದೆ ಬಿಡಿಯಾಗಿ ನೋಡಬೇಕೆಂದು, ಒಂದು ರಾಷ್ಟ್ರದ ಸಂಸ್ಕೃತಿಯನ್ನು ಸಾಹಿತ್ಯ, ಕಲೆಯಿಂದ ಗುರುತಿಸದೆ ಧಾರ್ಮಿಕತೆಯ ಹಿನ್ನೆಲೆಯಲ್ಲಿ ನೋಡಬೇಕೆಂದು, 'ಕಳೆದ ಕನ್ನಡ ನಾಟಕ' ಎಂಬ ಲೇಖನದಲ್ಲಿ ನಾಟಕ ಕಲೆಯು ಬೆಳೆದು ಬಂದ ಬಗೆಯನ್ನು ಜನತೆಯ ಪ್ರೋತ್ಸಾಹದಿಂದ ನಾಟಕ ಬೆಳೆಯಲು ಅವಶ್ಯಕವೆಂಬ ಧೋರಣೆ, 'ಭಾರತ ಶಕ್ತಿ' ಎಂಬ ಲೇಖನದಲ್ಲಿ ಭಾರತವು ಪ್ರಾಚೀನ ಪರಂಪರೆಯ ಹಿನ್ನೆಲೆಯಲ್ಲಿ ರಾಷ್ಟವನ್ನು ನಿರ್ಮಿಸುವುದೋ ಅಥವಾ ಪಾಶ್ಚಾತ್ಯರ ಪದ್ಧತಿಯಲ್ಲಿ ನಮ್ಮ ರಾಜಕಾರಣ, ಸಂಸ್ಕೃತಿ, ಶಿಕ್ಷಣ ನಿರ್ಮಿಸುವುದೋ ಎಂಬ ಎರಡು ವಿಚಾರಗಳನ್ನು ಸೂಚಿಸಿ, ಸ್ವಾತಂತ್ರ್ಯಾನಂತರದ ಭಾರತವನ್ನು ಭಾರತೀಯ ಪರಂಪರೆಯ ಹಿನ್ನೆಲೆಯಲ್ಲಿ ನಿರ್ಮಿಸಬೇಕು ಎಂಬ ನಿಲುವಿನೊಂದಿಗೆ ಚರ್ಚಿಸುತ್ತಾರೆ.

'ಬಸವಣ್ಣನವರ ದರ್ಶನ' ಎಂಬ ಪ್ರಬಂಧದಲ್ಲಿ ಭಾರತೀಯ ವಿಚಾರ ಧಾರೆಗಳು ಕಾಲಕ್ಕೆ ತಕ್ಕಂತೆ ನೂತನವಾಗಿ ತಲೆದೋರಿದ್ದು, ಅನೇಕ ಮತಗಳು ಒಂದೇ ರೀತಿ ದರ್ಶನಕ್ಕೆ ಬದ್ಧವಾಗದೆ ಹಲವು ತತ್ವ ವಿಚಾರಗಳನ್ನು ಅಳವಡಿಸಿಕೊಂಡು ಬೆಳೆದವು. ಹಾಗೆಯೇ ಬಸವಣ್ಣನವರ ಜೀವನ ಮತ್ತು ದರ್ಶನಗಳು ಎರಡೂ ಒಂದೇ ಆಗಿವೆ. ಭಕ್ತಿ, ಜ್ಞಾನ, ವೈರಾಗ್ಯಗಳು ಮಾನವನ ಅಂತರಂಗದಲ್ಲಿ ಆಗಬೇಕು. ಭಕ್ತಿಗೆ ಹೆಚ್ಚಿನ ಮಹತ್ವ ಕೊಟ್ಟಿದ್ದ ಬಸವಣ್ಣನವರ ದರ್ಶನದಲ್ಲಿ ಗುರುವಿಗೆ ದೇವರಿಗಿಂತಲೂ ಹೆಚ್ಚಿನ ಸ್ಥಾನ ಹಾಗೂ ಮಹತ್ವವನ್ನು ಕೊಟ್ಟಿದ್ದಾರೆ. ಉಪನಿಷತ್ತಿನಲ್ಲಿ ಗುರು ಶಿಷ್ಯರಿಬ್ಬರು ಪರೀಕ್ಷೆಗೆ ಒಳಪಡಬೇಕೆಂದು ತಿಳಿಸಿದರೆ ಬಸವಣ್ಣನವರು ಗುರು ಹೇಗೆ ಇರಲಿ, ಅವನ ಕುಲ, ಗೋತ್ರ, ಗುಣ, ಶೀಲ ಪರೀಕ್ಷಿಸುವ ಗೊಡವೆಗೆ ಶಿಷ್ಯ ಹೋಗಬೇಕಿಲ್ಲವೆಂದು ವಾದಿಸುತ್ತಾರೆ. ಗುರುವಿಗೆ ಕೊಡುವ ಸ್ಥಾನವನ್ನು ಜಂಗಮನಿಗೂ ಕೊಡುವ ದೃಷ್ಟಿಯನ್ನು ಅಲ್ಲಮಪ್ರಭು ಒಪ್ಪದೆ ಇರುವುದು ಬಸವಣ್ಣನವರ ದರ್ಶನವೆಂಬುದು ವೈದಿಕ ದರ್ಶನದ ವಿರುದ್ಧವೆಂಬ ಭಾವನೆ ಬೆಳೆಯಿತು. ಇದಕ್ಕೆ ವೇದ ಪುರಾಣಗಳನ್ನು ಬಸವಣ್ಣನವರು ಅಲ್ಲಗಳೆದಿದ್ದು ಪುಷ್ಠಿ ಕೊಟ್ಟಿತ್ತು. ಆದರೆ ವೇದಾಂತದ ಜ್ಞಾನ ವೈಭವಕ್ಕೆ ಬಸವಣ್ಣನವರು ಮನಸೋತಿರುವುದು ತಿಳಿಯದಾಯಿತು. ಬಸವಣ್ಣನವರ ದರ್ಶನವೆಂದರೆ ಜೀವನ ದರ್ಶನವೇ ಆಗಿದೆ. ಅಂದೇ ಕ್ರೈಸ್ತ, ಬುದ್ಧ, ಸರ್ವಧರ್ಮ ಗ್ರಾಹ್ಯವೂ, ಜನೋಪಯೋಗಿಯೂ ಆದ ಸಂದೇಶವನ್ನು ನೀಡಿದವರೆಂದು ಬಸವಣ್ಣನವರು ಕೂಡಾಹಾಗೆ ಎಂಬುದಾಗಿ ವಿಶ್ಲೇಷಿಸುತ್ತಾರೆ.

'ಬಸವಣ್ಣನವರು ಸಾಧಿಸಿದ ಸಮಾಜ ಸಂಘಟನೆ' ಎಂಬ ಪ್ರಬಂಧದಲ್ಲಿ ಆಧ್ಯಾತ್ಮಿಕ ಸಾಧನೆಗೈದ ಅವರು ಕರ್ತವ್ಯ ಪಾಲನೆಯ ಮೂಲಕ ಸಮಾಜವು ಸುಸ್ಥಿರ, ಸುಭದ್ರವಾಗಿರಬೇಕು, ಅದಕ್ಕೆ ಜ್ಞಾನ, ಸಮಾನತೆ, ಅಂತಃಕರಣಗಳು ಮುಖ್ಯವಾದುದೆಂದು, ವ್ಯಕ್ತಿಗೆ ಹುಟ್ಟು ಮುಖ್ಯವಲ್ಲ ಗುಣ ಮುಖ್ಯವೆಂದು, ಜಾತ್ಯಾತೀತ ಸಮಾಜದ ನಿರ್ಮಾಣದ ಚಿಂತನೆ, ಸಮಾಜವನ್ನು, ಲೋಕವನ್ನು ಶರಣರ-ಅನುಭವ ಮಂಟಪ ಮಾಡಬೇಕೆಂಬ ಹಂಬಲವಿತ್ತು. ಇಡೀ ಜಗತ್ತೇ ಮಾನವತ್ವದ ಮಹಾಮನೆಯಾಗಬೇಕೆಂದು ಭಾವಿಸಿ ಬೋಧಿಸಿ ಅದನ್ನು ಸಾಧಿಸಲು ಶ್ರಮಿಸಿದವರು. ನಿರುದ್ಯೋಗವಿರಬಾರದೆಂದು, ಶೋಷಕರಿರಬಾರದೆಂದು, ಪ್ರತಿಯೊಬ್ಬನು ಹೊಟ್ಟೆಗಾಗಿ ದುಡಿಯಬೇಕೆಂದು, ದುಡಿಮೆ ಕೂಡಾ ಪರರಿಗೆ ಅಹಿತವಾಗಬಾರದೆಂದು, ಹೀಗೆ ಸಮಾಜವನ್ನು ನಿರ್ಮಾಣ ಮಾಡಬೇಕೆಂದು ಕನಸು ಕಂಡಿದ್ದ ಬಸವಣ್ಣನವರು ಅವರ ಅನುಯಾಯಿಗಳು ಸಮಾಜದ ಪೀಡನೆಗೆ ಮುಂದಾಗಿದ್ದು ಸರ್ವ ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡಲು ಹೋದ

ಬಸವಣ್ಣನವರನ್ನು ಒಂದು ಜಾತಿಗೆ, ಒಂದು ಮತಕ್ಕೆ ಸೀಮಿತಗೊಳಿಸಿದ್ದನ್ನು ಚರ್ಚಿಸುತ್ತಾರೆ. ಬಸವಣ್ಣನವರ ಉಪದೇಶಗಳು ಕೇವಲ ೧೨ನೇ ಶತಮಾನಕ್ಕೆ ಸೀಮಿತವಾಗಿರಲಿಲ್ಲ ಅದು ಇಂದಿಗೂ ಪ್ರಸ್ತುತವಾಗಿವೆ. ಇಂದೂ ವಿಶ್ವವೇ ಒಂದು ಕುಟುಂಬವಾಗಿ ಕಾಣುವ ಪರಿಕಲ್ಪನೆಯು ಬಸವಣ್ಣನವರು ೧೨ನೇ ಶತಮಾನದಲ್ಲಿಯೇ ಕಂಡ ಕನಸಾಗಿದೆ.

'ಅಲ್ಲಮ ಪ್ರಭು' ಎಂಬ ಲೇಖನವನ್ನು ಬರೆದಿರುವ ಅ. ನ. ಕೃ. ಬಸವಣ್ಣನಿಗೂ ಮತ್ತು ಅಲ್ಲಮ ಪ್ರಭುವಿಗೂ ಇರುವ ವ್ಯತ್ಯಾಸವನ್ನು ಚರ್ಚಿಸುತ್ತಾರೆ. ಹರಿಹರ ಮತ್ತು ಚಾಮರಸನ ಕಾವ್ಯದಲ್ಲಿ ಬರುವ ಹಾಗೆ ಪ್ರಸಂಗಗಳು ಸಾಂಪ್ರದಾಯಿಕತೆ ಮತ್ತು ಚಾರಿತ್ರಿಕ ಅಂಶಗಳನ್ನು ಗುರುತಿಸುತ್ತಾರೆ. ಬಸವಣ್ಣನವರಿಗಿಂತ ಅಲ್ಲಮ ಪ್ರಭು ಹೇಗೆ ಭಿನ್ನ ಎಂಬುದಕ್ಕೆ ಅಸ್ಪೃಶ್ಯತೆಯನ್ನು ತೊಡೆದು ಹಾಕಿ ಸಮಾಜ ಬಾಹಿರವಾದ ದಲಿತವರ್ಗವನ್ನು ವೀರಶೈವ ಧರ್ಮಕ್ಕೆ ಸೇರಿಸಲು ಬಸವಣ್ಣ ಪ್ರಯತ್ನಿಸಿದರೆ, ಅಲ್ಲಮಪ್ರಭು ಅದಕ್ಕಿಂತಲೂ ಮುಂದೆ ಹೋಗಿ ಎಲ್ಲಾ ಧರ್ಮಗಳ ಅಸಹನೆಯಿಂದ ದೂರವಿರಬೇಕೆಂದು, ಆ ಮೂಲಕ ಅ. ನ. ಕೃ. ರವರು ಬಸವಣ್ಣ ಮತ್ತು ಅಲ್ಲಮ ಪ್ರಭುವಿನ ಸೈದ್ಧಾಂತಿಕ ವಿಚಾರಗಳಲ್ಲಿನ ಭಿನ್ನತೆಯನ್ನು ಗುರುತಿಸುತ್ತಾರೆ. ಅಲ್ಲಮ ಪ್ರಭು ಯಾವುದೇ ರೀತಿಯಲ್ಲಿ ಹೊಸ ದರ್ಶನವಾಗಲೀ, ಮತವಾಗಲೀ ಸ್ಥಾಪಿಸದೆ ಧಾರ್ಮಿಕ ವಿಷಯಗಳಲ್ಲಿರುವ ಜನರ ಅಜ್ಞಾನವನ್ನು ಹೋಗಲಾಡಿಸಲು ಜೀವನದ ನಿತ್ಯ ಸತ್ಯಗಳನ್ನು ಜನತೆಯ ಮುಂದೆ ಇಟ್ಟವನಾಗಿ ವಿಶ್ಲೇಷಿಸುತ್ತಾರೆ.

'ಸಂಸ್ಕೃತಿ ಮತ್ತು ಲಲಿತಕಲೆಗಳು' ಎಂಬ ಪ್ರಬಂಧದಲ್ಲಿ ಭಾರತೀಯ ಸಂಸ್ಕೃತಿಯ ಕಲೆ, ವಾಸ್ತುಶಿಲ್ಪ, ಸಂಗಿತ, ನೃತ್ಯ ಮೊದಲಾದವುಗಳಲ್ಲಿ ಆಧ್ಯಾತ್ಮವು ಹಾಸು ಹೊಕ್ಕಾಗಿರುವುದನ್ನು, ಭಾರತೀಯರ ಜೀವನಕ್ರಮವು ಅದರಲ್ಲಿ ವ್ಯಕ್ತವಾಗಿರುವ ಬಗೆಯನ್ನು ಚರ್ಚಿಸುತ್ತಾರೆ. ಭಾರತೀಯ ಸಂಸ್ಕೃತಿಗೆ ತೀರಾ ಭಿನ್ನವಾದ ಇಸ್ಲಾಂ ಸಂಸ್ಕೃತಿ ಭಾರತ ಪ್ರವೇಶಿಸಿದರೂ ಭಾರತೀಯ ಸಂಸ್ಕೃತಿಯು ನಾಶಗೊಳ್ಳದೆ ಸರ್ವಧರ್ಮ ಸಮನ್ವಯ ಸಾರುವ ವಿಚಾರಗಳು, ಇದರ ಸಮನ್ವಯವಾಗಿ ಇಂಡೋ-ಸಾರ್ಸನಿಕ್ ವಾಸ್ತುಶಿಲ್ಪ ಉಗಮಗೊಂಡಿದ್ದು, ದಕ್ಷಿಣದಲ್ಲಿ ಮುಸ್ಲಿಂ ಸಂಸ್ಕೃತಿ ಪ್ರಭಾವ ಬೀರದೆ ಇರಲು ವಿಜಯನಗರ ಸಾಮ್ರಾಜ್ಯ ಕಾರಣವೆಂದು, ಭಾರತೀಯ ಲಲಿತಕಲೆಗಳು ಆಧ್ಯಾತ್ಮಕ್ಕೆ ಹೆಚ್ಚು ಒಲವನ್ನು ನೀಡಿವೆ. ಅವು ಯಾವುದೇ ವರ್ಗ, ಮತ, ರಾಷ್ಟ್ರಗಳ ಸೊತ್ತು ಆಗಿಲ್ಲ. ವಿಶ್ವದ ಮಹಾನಿಧಿ ಮತ್ತು ಲೋಕ ಕಲ್ಯಾಣವನ್ನು ಪ್ರತಿಪಾದಿಸುವುದು ಭಾರತೀಯ ಲಲಿತಕಲೆಗಳ ತಾತ್ವಿಕ ಧೋರಣೆಯಾಗಿ ಅ. ನ. ಕೃ. ಗುರುತಿಸುತ್ತಾರೆ.

ಸಾರ್ಥಕ ಸಾಹಿತ್ಯ – ೧೯೬೬

ಈ ಕೃತಿಯನ್ನು ೧೯೬೬ರಲ್ಲಿ ಪ್ರಕಟಪಡಿಸಿದರು. ಸಾಹಿತ್ಯ, ಸಂಸ್ಕೃತಿ, ರಾಜಕಾರಣ, ಭಾವೈಕ್ಯತೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಗಳು ಮೊದಲಾದ ವಿಚಾರಗಳನ್ನು ಇಲ್ಲಿ ಚರ್ಚಿಸುತ್ತಾರೆ.

ಸ್ವಾಮಿ ವಿವೇಕಾನಂದರನ್ನು ಕ್ಷತ್ರಿಯ ಸನ್ಯಾಸಿಯಾಗಿ ಅ. ನ. ಕೃ. ಕಂಡಿದ್ದಾರೆ. ಹಿಂದೂ ಧರ್ಮದಲ್ಲಿದ್ದ ಅನಾವಶ್ಯಕ ಆಚರಣೆಗಳು ಮುಖ್ಯವಲ್ಲವೆಂದು, ಅದರ ತಿರುಳು ಮುಖ್ಯವೆಂದು. ಭಾರತ ವಿಶ್ವ ಗುರುವಾಗಬೇಕಾದರೆ ಹಸಿವು, ಅಜ್ಞಾನ, ಜಾತೀಯತೆ ಇರುವವರೆಗೆ ಭಾರತ

ತಲೆಯುತ್ತುವುದಿಲ್ಲವೆಂದು ದೇಶ ಮೊದಲು ಸಾಮಾಜಿಕ ಪ್ರಗತಿ ಕಾಣಬೇಕೆಂಬ ದೃಷ್ಟಿಯಲ್ಲಿ ಚರ್ಚಿಸುತ್ತಾರೆ.

ರವೀಂದ್ರನಾಥ ಟಾಗೋರರ ಕನ್ನಡ ನಾಡಿನ ಜೊತೆಗೆ ಇದ್ದ ಒಡನಾಟ, ೧೮೮೩ರಲ್ಲಿ ಕಾರವಾರದಲ್ಲಿ ಅವರ ಅಣ್ಣಂದಿರಲ್ಲಿ ಒಬ್ಬರು ಕಲೆಕ್ಟರ್ ಆಗಿದ್ದು, ಅವರು ಮೊದಲು 'ಪ್ರಾಕೃತಿಕ್ ಪರಿಶೋಧ್' (ಪ್ರಕೃತಿಯ ಪ್ರತಿಕ್ರಿಯೆಗಳು) ರಚಿಸಿದ್ದು ಕಾರವಾರದಲ್ಲಿ ಎಂದು ರವೀಂದ್ರನಾಥ ಟಾಗೋರರ ಬಗ್ಗೆ ತಿಳಿಸುತ್ತಾರೆ.

ಅ. ನ. ಕೃ. ರವರು ಮಣಿಪಾಲದಲ್ಲಿ ನಡೆದ ೪೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮಾಡಿದ ಭಾಷಣವೇ ಸಾರ್ಥಕ ಸಾಹಿತ್ಯ ಎಂಬ ಲೇಖನವಾಗಿದೆ. ಭಾರತೀಯ ರಂಗಭೂಮಿಗೆ ಅಡಿಗಲ್ಲು ಹಾಕಿರುವುದೇ ಯಕ್ಷಗಾನ ಮತ್ತು ತಾಳಮದ್ದಲೆಯೆಂದು ಗುರುತಿಸುತ್ತಾರೆ. ಸಾಹಿತ್ಯದ ವ್ಯಾಪ್ತಿ ವಿಸ್ತರಿಸಿದೆ ಹಾಗೂ ಇಂದು ಎಲ್ಲರಿಗೂ ಸಾಹಿತ್ಯ ಎಂಬ ಧೋರಣೆ ಬೆಳೆದಿದೆ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್‌ರವರ 'ಚೆನ್ನ ಬಸವ ನಾಯಕ' ಕೃತಿಯ ವಿರುದ್ಧ ಜಾತಿದ್ವೇಷದ ಆಪಾದನೆ ಹೊರಿಸಿ ಆ ಕೃತಿಯನ್ನು ಮುಟ್ಟುಗೋಲು ಹಾಕಲು ಬಂದಾಗ ಕನ್ನಡ ಸಾಹಿತ್ಯ ಪರಿಷತ್ತು ಯಾವುದೇ ರೀತಿಯಲ್ಲಿ ಪ್ರತಿಕ್ರಿಯಿಸದೆ ಇದ್ದದ್ದನ್ನು ಖಂಡಿಸುತ್ತಾರೆ. ಪರಿಷತ್ತಿನ ಸಭಾ ಮಂದಿರವನ್ನು ಜಾತಿ ಸಂಸ್ಥೆಗಳಿಗೂ, ರಾಜಕೀಯ ಸಂಸ್ಥೆಗಳಿಗೂ ಬಾಡಿಗೆಗೆ ಕೊಡುವುದು ಎಷ್ಟು ಸರಿಯೆಂದು, ಸಾಹಿತ್ಯದಲ್ಲಿ ಕೋಮುವಾರು ಭೂತ ಬೆಳೆಯುತ್ತಿದ್ದು ಅದರ ಬಗ್ಗೆ ಕನ್ನಡಿಗರು ಎಚ್ಚರ ವಹಿಸಬೇಕೆಂದು, ಕನ್ನಡ ನಟ-ನಟಿಯರ ಬದುಕು ಬೀದಿಗೆ ಬಾರದಂತೆ ಎಚ್ಚರ ವಹಿಸುವಂತೆ ಪರಿಷತ್ತಿಗೆ ಸಲಹೆಯನ್ನು ನೀಡುತ್ತಾರೆ. ಕನ್ನಡ ಭಾಷೆ ಮತು ಸಂಗೀತವನ್ನು ಉಳಿಸಲು, ಬೆಳಸಲು ಆಕಾಶವಾಣಿ ಕಾರ್ಯಕ್ರಮಗಳ ಮೂಲಕ ನಡೆಯಬೇಕೆಂದು ಮತ್ತು ಗಡಿನಾಡ ಜನರ ಸಮಸ್ಯೆಯನ್ನು ಕುರಿತಂತೆ ಚರ್ಚಿಸುತ್ತಾರೆ.

ಚಿತ್ರಕಲೆ – ೧೯೭೦

ಅ. ನ. ಕೃ. ೧೯೭೦ರಲ್ಲಿ ಪ್ರಕಟಿಸಿದ ಕೃತಿ ಚಿತ್ರಕಲೆಯನ್ನು ಕುರಿತದ್ದಾಗಿದೆ. ಇದರಲ್ಲಿ ಒಂಬತ್ತು ಲೇಖನಗಳಿವೆ. ನಾಲ್ಕು ಲೇಖನಗಳು ಬೇರೆ ಬೇರೆ ಕೃತಿಗಳಲ್ಲಿ ಪ್ರಕಟಗೊಂಡಿವೆ. ಅದರಲ್ಲಿ ಉಳಿದ ಐದು ಲೇಖನಗಳನ್ನು ಚಿತ್ರಕಲೆಯನ್ನು ಕುರಿತಂತೆ ಅ. ನ. ಕೃ. ರವರು ವಿಶ್ಲೇಷಿಸುತ್ತಾರೆ. ಇದೊಂದು ಭಾರತೀಯ ಚಿತ್ರಕಲೆಯನ್ನು ಅದರ ಸ್ವರೂಪವನ್ನು ಪರಿಚಯಿಸುವ ಕೃತಿಯಾಗಿದೆ.

'ಭಾರತೀಯ ಚಿತ್ರಕಲೆಯ ವಿಕಾಸ' ಎಂಬ ಲೇಖನದಲ್ಲಿ ಭಾರತೀಯ ಚಿತ್ರಕಲೆಯು ಗ್ರೀಕ್ ಚಿತ್ರಕಲೆಯು ಬೆಳೆದು ಬರುವುದಕ್ಕಿಂತ ಮೊದಲೇ ಇಲ್ಲಿ ಬೆಳೆದಿತ್ತು ಎಂಬುದಾಗಿ ಒಂದು ಸೈದ್ಧಾಂತಿಕ ತಾತ್ವಿಕ ಚೌಕಟ್ಟನ್ನು ನೀಡುತ್ತಾರೆ. ಪಾಶ್ಚಿಮಾತ್ಯರು ಮತ್ತು ಭಾರತೀಯ ಚಿತ್ರಕಲೆಗೆ ಹೋಲಿಸಿ, ಭಾರತೀಯ ಚಿತ್ರಕಲೆಯು ಕ್ರಿ. ಪೂ. ೫೦೦ ರಿಂದಲೇ ಬೆಳವಣಿಗೆಗೊಂಡಿದೆ, ಪಾಶ್ಚಾತ್ಯರಲ್ಲಿ ಕಲೆ, ವಾಸ್ತುಶಿಲ್ಪ, ಸಂಗೀತ, ನೃತ್ಯ, ನಾಟಕಗಳು ಪ್ರತ್ಯೇಕವಾಗಿ ಬೆಳೆದರೆ, ಭಾರತದಲ್ಲಿ ಏಕಕಲಾ ಪ್ರಕಾರವಾಗಿ ಮೂಡಿರುವ ಅಂಶದಲ್ಲಿ ಚರ್ಚಿಸುತ್ತಾರೆ. ಭಾಗ ೨ ರಲ್ಲಿ ಅಜಂತಾ ಚಿತ್ರಕಲೆಯನ್ನು ಮೊಟ್ಟಮೊದಲಿಗೆ ಬೆಳಕಿಗೆ ತಂದ ೧೮೪೪ ಮೇಜರ್ ಗಿಲ್, ಲೇಡಿ ಹೆಲಿಂಗ್‌ಹಂ (೧೯೦೫-೧೦), ಅಜಂತೆಯಲ್ಲಿ ಗುಹೆ ೧ ರಲ್ಲಿರುವ ಪುಲಿಕೇಶಿ ಮತ್ತು ಪರ್ಶಿಯಾ ರಾಯಭಾರಿಗಳ ಚಿತ್ರವನ್ನು ಗಮನಿಸಿದರೆ,

ಅಜಂತೆಯಲ್ಲಿ ಬರೆದ ಕಲಾವಿದರ ಪರಂಪರೆಯೇ ಕರ್ನಾಟಕದ ಬಾದಾಮಿಯ ಚಿತ್ರಗಳನ್ನು ಬರೆದವರೆಂದು ಊಹಿಸಬಹುದು. ಇದು ಕನ್ನಡಿಗರ ಕಲಾಸೃಷ್ಟಿಯಾಗಿ ಅ. ನ. ಕೃ. ನೋಡುತ್ತಾರೆ. ಜೊತೆಗೆ ಆ ಚಿತ್ರಗಳಲ್ಲಿರುವ ಪ್ರಾಪಂಚಿಕ ಮತ್ತು ಸಾಮಾಜಿಕ ಎರಡೂ ಮುಖಗಳನ್ನು ಗುರುತಿಸುತ್ತಾರೆ.

ಮೊಘಲ್ ರಜಪೂತ ಸಂಪ್ರದಾಯದ ಹಿನ್ನೆಲೆಯಲ್ಲಿ ಮಧ್ಯಕಾಲೀನದವರೆಗೂ ಅಂದರೆ ಏಳನೇ ಶತಮಾನದಿಂದ ಹಿಡಿದು ೧೪ನೇ ಶತಮಾನದವರೆಗೂ ಭಾರತೀಯ ಚಿತ್ರಕಲೆಯು ಕಾಣದಾಗಿದ್ದು ಆ ಸಂದರ್ಭದಲ್ಲಿ ಶಂಕರಾಚಾರ್ಯರಿಂದ ಹಿಂದೂ ಧರ್ಮದ ಪುನರುತ್ಥಾನದಿಂದಾಗಿ ಚಿತ್ರಕಲೆ ನಾಶಗೊಂಡರೂ, ಆ ಜಾಗದಲ್ಲಿ ಶಿಲ್ಪ, ವಾಸ್ತುಶಿಲ್ಪಗಳೂ ಬೆಳೆದವು. ೧೬ನೇ ಶತಮಾನದಲ್ಲಿ ಮರುಹುಟ್ಟು ಪಡೆದು ಇಂಡೋ-ಪರ್ಶಿಯನ್ ಶೈಲಿಯ ಚಿತ್ರಗಳು ಮೊಘಲ್ ಚಕ್ರವರ್ತಿ ಅಕ್ಬರನ ಕಾಲದಲ್ಲಿ ಏಳಿಗೆ ಪಡೆಯಿತು, ಇದನ್ನು ಅ. ನ. ಕೃ. ಭಾರತೀಯ ಚಿತ್ರಕಲೆಯೆಂಬುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲವೆಂದು ಕಾರಣವೆಂದರೆ ಈ ವೇಳೆ ಚಿತ್ರಕಲೆಯನ್ನು ಬರೆದವರೆಲ್ಲಾ ಹೊರಗಿನವರೇ ಆಗಿದ್ದಾರೆ. ಭಾರತೀಯ ಚಿತ್ರಕಲೆ ಧಾರ್ಮಿಕ ಮತ್ತು ಸಾಮಾಜಿಕ ಜೀವನವನ್ನು ಚಿತ್ರಿಸಿದರೆ ಇಂಡೋ-ಪರ್ಶಿಯನ್ ಶೈಲಿಯು ಅರಮನೆಯ ವಿಲಾಸವನ್ನೇ ಚಿತ್ರಿಸುವ ಮೂಲಕ ವೈಭವಕ್ಕೆ ಹೆಚ್ಚು ಒತ್ತು ಕೊಡುವುದರಿಂದ ಇದು ಭಾರತೀಯ ಚಿತ್ರಕಲೆಯಲ್ಲ ಎಂಬ ನಿಲುವು ಅ. ನ. ಕೃ. ರವರದಾಗಿದೆ.

ಆಧುನಿಕ ಕಾಲದಲ್ಲಿ ದೇಶೀಯ ಚಿತ್ರಕಾರರು ವಿದೇಶೀ ಚಿತ್ರಕಲೆಯನ್ನು ಅನುಕರಣ ಮಾಡಿದ್ದರ ಫಲವಾಗಿ ೧೭ನೇ ಶತಮಾನದಲ್ಲಿ ಭಾರತೀಯ ಚಿತ್ರಕಲೆಯು ನಾಶಗೊಂಡಿದೆ. ಕಲೆಯೆಂಬುದು ಅನುಕರಣವಲ್ಲ ಅದೊಂದು ಸೃಷ್ಟಿಯೆಂಬ ಧೋರಣೆಯನ್ನು ಅ. ನ. ಕೃ. ಪ್ರತಿಪಾದಿಸುತ್ತಾರೆ. ಮೊಘಲ್ ಕಾಲಘಟ್ಟದ ಚಿತ್ರಕಲೆಯು ಭಾರತೀಯ ಚಿತ್ರಕಲೆಯಲ್ಲವೆಂದು, ಮತ್ತೊಂದು ಕಡೆ ಮೊಘಲ್ ಸಾಮ್ರಾಜ್ಯದ ಅವನತಿಯೊಂದಿಗೆ ಸಂಪ್ರದಾಯಬದ್ಧ ಭಾರತೀಯ ಚಿತ್ರಕಲೆ ಅವನತಿ ಹೊಂದಿತ್ತೆಂದು ಭಿನ್ನ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ. ಭಾರತೀಯ ಚಿತ್ರಕಲೆಯ ಪುನರುದ್ಧಾರ ಮಾಡಿದವರಾಗಿ ಬಂಗಾಳದ ಇ. ಬಿ. ಹ್ಯಾವರ್, ಲೇಡಿ ಹೆರಿಂಗ್ ಎಂದು ಗುರುತಿಸುವ ಅ. ನ. ಕೃ. ರಾಜಾ ರವಿವರ್ಮನಿಂದ ಭಾರತೀಯ ಚಿತ್ರಕಲೆಯು ಆಧುನಿಕ ಕಾಲಘಟ್ಟದಲ್ಲಿ ರೋಗಗ್ರಸ್ತವಾಗಿತ್ತು. ಆಧುನಿಕ ಕಾಲಘಟ್ಟದ ಹಲವು ಸಾಹಿತ್ಯ ಪ್ರಕಾರಗಳ ಮೇಲೆ ಹೇಗೆ ಬಂಗಾಳಿ ಸಾಹಿತ್ಯವು ಪ್ರೇರೇಪಿಸಿದೆಯೋ ಮತ್ತು ಪ್ರಭಾವಿಸಿದೆಯೋ ಹಾಗೆಯೇ ಕನ್ನಡ ಚಿತ್ರಕಲೆಯ ಮೇಲೆ ಬಂಗಾಳಿ ಚಿತ್ರಕಲೆಯು ಪ್ರಭಾವಿಸಿದೆ ಎಂದು ಅ. ನ. ಕೃ. ವಿಮರ್ಶಿಸುತ್ತಾರೆ.

'ಅಜಂತಾ ಕಲೆ' ಎಂಬ ಲೇಖನದಲ್ಲಿ ಅ. ನ. ಕೃ. ಬಹಳ ಮುಖ್ಯವಾಗಿ ಬೌದ್ಧ ಬಿಕ್ಕುಗಳು ಚಿತ್ರಕಲೆಗೆ ಅಜಂತಾವನ್ನು ಆಯ್ಕೆ ಮಾಡಿಕೊಳ್ಳಲು, ಕರ್ನಾಟಕದಂತಹ ಬೇರೆ ನೆಲೆಯೊಂದಿಲ್ಲವೆಂಬುದು, ಇಲ್ಲಿರುವ ಪ್ರಶಾಂತತೆ, ಏಕಾಂತದ ತಾಣವಾಗಿರುವ ಕಾರಣಗಳನ್ನು ಗುರುತಿಸುತ್ತಾರೆ. ಭಾರತೀಯ ಚಿತ್ರಕಲೆಯೆಂಬುದು ಸಮನ್ವಯ ತತ್ವದಿಂದ ಕೂಡಿದ್ದು ಅಜಂತಾದ ಚಿತ್ರಕಲೆಗಳಿಂದ ಆ ಸಮನ್ವಯತೆಯನ್ನು, ಭಾರತದ ಜನಜೀವನವನ್ನು ಪ್ರತಿನಿಧಿಸುತ್ತದೆ ಎಂಬುದಾಗಿ ತಿಳಿಸುತ್ತಾರೆ.

'ವಿಶ್ವಬಂಧು ಬಸವೇಶ್ವರ' ಕೃತಿಯ ಅನೇಕ ಲೇಖನಗಳು ಅವರ ಇನ್ನಿತರ ವೈಚಾರಿಕ ಪ್ರಬಂಧಗಳಲ್ಲಿ ಪ್ರಕಟವಾಗಿವೆ ಮತ್ತು 'ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ' ಎಂಬ ಕೃತಿಯಲ್ಲಿರುವ

ಅನೇಕ ಲೇಖನಗಳು ಕೂಡಾ ಬೇರೆ ಬೇರೆ ಪ್ರಬಂಧ, ವಿಮರ್ಶೆಗಳಲ್ಲಿ ಪ್ರಕಟಗೊಂಡಿದ್ದು ಅವುಗಳ ತಾತ್ವಿಕತೆಯು ಆ ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಅ. ನ. ಕೃ. ರವರ ಪ್ರಬಂಧ ವಿಮರ್ಶೆ, ಜೀವನ ಚರಿತ್ರೆ, ಮೊದಲಾದ ವೈಚಾರಿಕ ಕೃತಿಗಳನ್ನು ಗಮನಿಸಿದಾಗ ಅವರು ಬೇರೆ ಬೇರೆ ಕೃತಿಗಳಲ್ಲಿ ಪ್ರಕಟವಾದ ಲೇಖನಗಳನ್ನು ಒಟ್ಟಿಗೆ ಸೇರಿಸಿ ಅದರೊಂದಿಗೆ ಹೊಸದಾದ ಒಂದೆರಡು ಲೇಖನಗಳನ್ನು ಸೇರಿಸಿ ಹೊಸ ಕೃತಿಯನ್ನು ಪ್ರಕಟಿಸುವುದು ಅವರ ವೈಚಾರಿಕ ಸಾಹಿತ್ಯದ ಕೃತಿಗಳ ವೈಶಿಷ್ಟ್ಯವೇ ಆಗಿದೆ.

ಮೇಲೆ ತಿಳಿಸಿದ ಅವರ ಎಲ್ಲಾ ವೈಚಾರಿಕ ಪ್ರಬಂಧಗಳು, ಲೇಖನಗಳೂ, ಕೆಲವೊಂದು ಕೃತಿಗಳಲ್ಲಿ ಪುನರಾವರ್ತನೆಯಾಗಿರುವುದು ಕೃತಿಗಳನ್ನು ಅಭ್ಯಯಿಸಿದಾಗ ಕಂಡು ಬರುತ್ತದೆಯಾದರೂ ಪ್ರಗತಿ ಶೀಲ ಕಾಲಘಟ್ಟದಲ್ಲಿನ ಅವರ ಅನೇಕ ವೈಚಾರಿಕ ಗ್ರಂಥಗಳಲ್ಲಿನ ಲೇಖನಗಳು, ಪ್ರಬಂಧಗಳಲ್ಲಿ ಸಂಸ್ಕೃತಿ, ಕನ್ನಡನಾಡು, ನುಡಿ, ವೀರಶೈವ ಸಾಹಿತ್ಯ, ಏಕೀಕರಣ, ಸ್ತ್ರೀಪರವಾದ ನಿಲುವು, ಚಿತ್ರಕಲೆ, ಕಲೆ, ವಾಸ್ತುಶಿಲ್ಪ, ಸಂಗೀತ ಮೊದಲಾದ ಬಗ್ಗೆ ತಮ್ಮದೇಯಾದ ತಾತ್ವಿಕತೆಯನ್ನು ಓದುಗರ ಮುಂದೆ ಇಡುವುದು ಮಾತ್ರವಲ್ಲದೆ ಅವರಿಗಿದ್ದ ಭಾರತೀಯ ಸಂಸ್ಕೃತಿಯ ಒಲವು ಇವುಗಳಿಂದ ಖಚಿತವಾದ ನಿಲುವನ್ನು ಸ್ಪಷ್ಟಪಡಿಸುತ್ತದೆ.

ಅ. ನ. ಕೃ. ರವರ ವಿಚಾರ ಸಾಹಿತ್ಯದ ಸ್ವರೂಪ

ಪ್ರಗತಿಶೀಲ ಕಾಲಘಟ್ಟದಲ್ಲಿ ತಮ್ಮದೇಯಾದ ದೇಶೀಯ ಚಿಂತನೆಗಳಿಂದ ತಮ್ಮ ವಿಚಾರಗಳನ್ನು ಅ. ನ. ಕೃ. ರವರು ವಿಚಾರ ಸಾಹಿತ್ಯದ ಮೂಲಕ ಚರ್ಚಿಸಿದ್ದಾರೆ. ಈ ವಿಚಾರ ಸಾಹಿತ್ಯದ ಸ್ವರೂಪವನ್ನು ಈ ಕೆಳಕಂಡಂತೆ ಗ್ರಹಿಸಬಹುದು:

- ವಿಚಾರ ಸಾಹಿತ್ಯವು ದೇಶೀಯ ಚಿಂತನೆಗಳನ್ನು ಪ್ರತಿಪಾದಿಸುತ್ತದೆ.
- ಭಾರತೀಯ ಕಲೆ, ಚಿತ್ರಕಲೆ, ನಾಟಕ, ಸಂಗೀತ ಒಂದಕ್ಕೊಂದು ಪೂರಕವಾಗಿ ಬೆಳೆದಿವೆ ಎಂಬ ಸ್ವರೂಪವನ್ನು ಹೊಂದಿದೆ.
- ಕಾರ್ಲ್ ಮಾರ್ಕ್ಸ್‌ನ ವಿಚಾರಧಾರೆಗಳು ನಮ್ಮ ಉಪನಿಷತ್ತಿನ ಅರಣ್ಯಕಗಳಲ್ಲಿ ಅಡಗಿವೆ. ಈ ಹಿನ್ನೆಲೆಯಲ್ಲಿ ಭಾರತೀಯ ಸಮಾಜವು ರೂಪುಗೊಂಡಿದೆ.
- ವಿಚಾರ ಸಾಹಿತ್ಯದ ಸ್ವರೂಪದಲ್ಲಿ ಗಾಂಧಿ ತತ್ವಗಳು ಪ್ರಭಾವಿಸಿವೆ.
- ಕನ್ನಡ ನಾಡು ನುಡಿಗಾಗಿ ಏಕೀಕರಣದ ಅಗತ್ಯತೆಯನ್ನು ವಿಚಾರ ಸಾಹಿತ್ಯ ಒಳಗೊಂಡಿದೆ.
- ಕನ್ನಡ ಸಾಹಿತ್ಯ, ಕಲೆಗಳ ಮೇಲೆ ಪರಕೀಯರ ದಾಳಿಗಳು, ಅದರಲ್ಲೂ ಆಂಧ್ರ, ತಮಿಳರ ದಾಳಿಗಳ ವಿವಿಧ ಮಾದರಿಗಳನ್ನು ವಿಚಾರ ಸಾಹಿತ್ಯದ ಸ್ವರೂಪದಲ್ಲಿ ಕಾಣಬಹುದು.

- ಸ್ತ್ರೀ ಸ್ವಾತಂತ್ರ್ಯ ಎಂಬುದು ಉಪನಿಷತ್ತಿನ ಕಾಲಘಟ್ಟದಲ್ಲಿ ಉತ್ತಮವಾಗಿತ್ತು ಎಂಬ ಸ್ವರೂಪವನ್ನು ಒಳಗೊಂಡಿದೆ.

- ಸ್ತ್ರೀ ತತ್ವವನ್ನು ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಗುರುತಿಸುವುದು.

- ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯು ಭಾರತದ ಸ್ವಾತಂತ್ರ್ಯಕ್ಕೆ ಪ್ರೇರಣೆ ಮತ್ತು ಪ್ರಭಾವವನ್ನು ನೀಡುವಂಥದ್ದು ಮಾತ್ರವಲ್ಲದೆ ಭಾರತೀಯರೆಲ್ಲರ ಒಗ್ಗಟ್ಟಿನ ಹೋರಾಟದ ಸ್ವರೂಪವನ್ನು ಸೂಚಿಸುವುದು.

- ವಿಮರ್ಶಕನ ವಿಮರ್ಶೆ ಎಂಬುದು ಕವಿ ಕೇಂದ್ರಿತ ವಿಮರ್ಶೆ ಆಗಿರುವುದನ್ನು ಅ. ನ. ಕೃ. ರವರ ವಿಚಾರ ವಿಮರ್ಶೆ ಅಲ್ಲಗಳೆಯುತ್ತದೆ.

- ಸಾಹಿತ್ಯವೆಂಬುದು ಕಲೆಗಾಗಿ ಕಲೆಯಲ್ಲ, ಜನತೆಗಾಗಿ ಸಾಹಿತ್ಯ ಎಂಬ ಸಾಹಿತ್ಯದ ಸ್ವರೂಪವನ್ನು ವಿಚಾರ ಸಾಹಿತ್ಯ ಒಳಗೊಂಡಿದೆ.

- ಕಲೆ, ಸಾಹಿತ್ಯ, ಚಿತ್ರಕಲೆ, ಸಂಗೀತ ಮೊದಲಾದವುಗಳಲ್ಲಿ ಆದರ್ಶವಾಗಿರಬೇಕೆಂಬ ಸ್ವರೂಪದಲ್ಲಿ ಅ. ನ. ಕೃ. ವಿಚಾರ ಸಾಹಿತ್ಯದ ಸ್ವರೂಪವು ಒಳಗೊಂಡಿದೆ.

- ವೀರಶೈವ ಸಾಹಿತ್ಯದ ಸ್ವರೂಪಕ್ಕೆ ಹರಿಹರನಿಂದ ಸರ್ವಜ್ಞನವರೆಗೆ ಚೌಕಟ್ಟನ್ನು ಒದಗಿಸುತ್ತದೆ.

- ಅ. ನ. ಕೃ. ಬರೆದ ಜೀವನಚರಿತ್ರೆಗಳಲ್ಲಿ ವೀರಶೈವ ಸಾಹಿತ್ಯವನ್ನು ಪ್ರತಿಪಾದಿಸುವ ಸ್ವರೂಪವನ್ನು ಹೊಂದಿದೆ.

- ವ್ಯಕ್ತಿ ಚಿತ್ರಣಗಳ ಮೂಲಕ ನಾಡಿಗೆ ವಿವಿಧ ರೀತಿಯ ಕಾಣಿಕೆಗಳನ್ನು ನೀಡಿದ ವ್ಯಕ್ತಿಗಳ ವ್ಯಕ್ತಿತ್ವ ಅನಾವರಣಗೊಳಿಸುವುದು.

ಭಾಗ – ೨

೪.೨ ನಿರಂಜನರವರ ವಿಚಾರ ಸಾಹಿತ್ಯ–ತಾತ್ವಿಕತೆ ಮತ್ತು ಸ್ವರೂಪ

ಪ್ರಗತಿಶೀಲ ಕಾಲಘಟ್ಟದ ಬರಹಗಾರರಲ್ಲಿ ಭಿನ್ನ ಧೋರಣೆಯನ್ನು ಹೊಂದಿದ್ದು, ಕಮ್ಯುನಿಷ್ಟ್ ಸಿದ್ದಾಂತಗಳಿಗೆ ಮಾರು ಹೋಗಿದ್ದ, ಸಮಾಜವಾದಿ ತತ್ವಗಳ ಮೂಲಕ ಸಮಾಜ ನಿರ್ಮಾಣವಾಗಬೇಕೆಂಬ ಹಂಬಲವನ್ನು ಹೊಂದಿದ್ದ, ಕೆಲವೇ ಬರಹಗಾರರಲ್ಲಿ ಮುಂಚೂಣಿಯಲ್ಲಿದ್ದ ಬರಹಗಾರರಲ್ಲಿ ನಿರಂಜನರವರು ಒಬ್ಬರು. ಅವರು ಕಥೆ ಕಾದಂಬರಿ ಮೊದಲಾದ ಸೃಜನಶೀಲ ಬರವಣಿಗೆಯ ಮೂಲಕ ತಮ್ಮದೇಯಾದ ಭಿನ್ನವಾದ ತಾತ್ವಿಕತೆಯನ್ನು ಪ್ರತಿಪಾದಿಸಿದವರು. ಅದರಂತೆ ಅವರ ವಿಚಾರಸಾಹಿತ್ಯವು ಭಿನ್ನವಾದ ತಾತ್ವಿಕತೆ ಮತ್ತು ಸ್ವರೂಪವನ್ನು ಒಳಗೊಂಡಿದ್ದು, ಆ ತಾತ್ವಿಕತೆ ಮತ್ತು ಸ್ವರೂಪವನ್ನು ಅವರ ವಿಚಾರ ಸಾಹಿತ್ಯದ ಕೃತಿಗಳಾದ ಸಾಧನಾ, ಪುಷ್ಪಹಾರ, ಕಾಲಕ್ಷೇಪ,

ನಾಡಿ, ಐದು ನಿಮಿಷ, ಮುಖತಃ, ಬುದ್ಧಿಭಾವ ಬದುಕು, ದಿನಚರಿಯಿಂದ, ರಾಜಧಾನಿಯಿಂದ, ಅಂಕಣ, ಹಿಮಾಲಯದ ದಳ್ಳುರಿ, ಈ ಪುಸ್ತಕ ಓದಿದ್ದೀರಾ? ಕೃತಿಯ ಲೇಖನಗಳು, ನಡೆಚೆನ್ನ ನುಡಿ ಚೆನ್ನ ಕೃತಿಗಳ ಹಿನ್ನಲೆಯಲ್ಲಿ ಈ ಭಾಗದಲ್ಲಿ ಚರ್ಚಿಸಲಾಗುವುದು.

ಸಾಧನಾ – ೧೯೫೩

ಇದೊಂದು ಪತ್ರಲೇಖನಗಳ ಸಂಕಲನವಾಗಿದೆ. ಈ ಗ್ರಂಥವನ್ನು ೧೯೫೩ರಲ್ಲಿ ನಿರಂಜನರವರು ಪ್ರಕಟಿಸಿದರು. ಇಲ್ಲಿ ತಮ್ಮ ಗೆಳತಿಯಾದ ಅನುಪಮಾರವರ ಹೆಸರನ್ನು ಎಲ್ಲೂ ಸೂಚಿಸದೇ ಗೆಳತಿಯಾಗಿ 'ಸಾಧನಾ' ಎಂಬ ಹೆಸರಿಗೆ ಬರೆದ ಪತ್ರಗಳ ಗುಚ್ಚ ಇದಾಗಿದೆ. ಇದರಲ್ಲಿ ಮೂವತ್ತಮೂರು ಕಾಗದಗಳು ಅಥವಾ ಪತ್ರಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಕುವೆಂಪು, ಬೇಂದ್ರೆ, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮೊದಲಾದ ಅನೇಕ ನವೋದಯ ಕಾಲಘಟ್ಟದ ಬರಹಗಾರರು ಪತ್ರಗಳ ಮೂಲಕ ತಮ್ಮ ಸಮಕಾಲೀನ ಬರಹಗಾರರ ಜೊತೆ ಒಡನಾಟವಿಟ್ಟುಕೊಂಡಿದ್ದು, ಆ ಪತ್ರಗಳಲ್ಲಿ ಸಮಕಾಲೀನ ಸಮಾಜದ ಘಟನೆಗಳನ್ನು, ಸಾಮಾಜಿಕ ವಿಷಯಗಳನ್ನು, ಆತ್ಮೀಯತೆಯನ್ನು, ರಾಜಕೀಯ ಮೊದಲಾದ ವಿಚಾರಗಳನ್ನು ಪ್ರಸ್ತಾಪಿಸಿರುವುದನ್ನು ಕಾಣಬಹುದು. ಅದರಂತೆ ಪ್ರಗತಿಶೀಲ ಕಾಲಘಟ್ಟದ ಬರಹಗಾರರಾದ ನಿರಂಜನರವರು ಬೇರೆ ಬೇರೆ ಬರಹಗಾರರೊಂದಿಗೆ ಆತ್ಮೀಯರೊಂದಿಗೆ ಪತ್ರ ವ್ಯವಹಾರದ ಮೂಲಕ ಸಂಬಂಧವನ್ನು ಇಟ್ಟುಕೊಂಡಿದ್ದರು. ಈ ಸಾಧನಾ ಕೃತಿಯಲ್ಲಿ ತಮ್ಮ ಬಾಳ ಸಂಗಾತಿಯಾದ, ಪ್ರೇಯಸಿಯಾದ ಅನುಪಮಾ ಅವರೊಬ್ಬರಿಗೆ ಬರೆದ ಪತ್ರಗಳೇ ಆಗಿರುವುದು ವಿಶೇಷವಾಗಿದೆ. ೧೯೫೧, ೧೯೫೨, ೧೯೫೩ ರಲ್ಲಿ ಮೂರು ವರ್ಷಗಳಲ್ಲಿ ಬರೆದ ಪತ್ರಗಳಲ್ಲಿ ಅನೇಕ ವಿಚಾರಗಳನ್ನು ದಾಖಲಿಸಿದ್ದಾರೆ.

ಸಾಧನಾಗೆ ಮೊದಲ ಕಾಗದ ಮತ್ತು ಎರಡನೇಯ ಕಾಗದದಲ್ಲಿ ೧೯೫೧ ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬೊಂಬಾಯಿಯಲ್ಲಿ ನಡೆದಿದ್ದು ಅಲ್ಲಿಗೆ ಹೋಗಲು ಪ್ರೇಯಸಿಯಾದ ಅನುಪಮಾರಲ್ಲಿ ವಿನಂತಿಸಿಕೊಳ್ಳುವುದು, ಕನ್ನಡದ ಮತ್ತೊಬ್ಬ ಕಥೆಗಾರ, ಕಾದಂಬರಿಕಾರರಾದ ವ್ಯಾಸರಾಯ ಬಲ್ಲಾಳರ ವ್ಯಕ್ತಿತ್ವ ಸೌಮ್ಯವಾಗಿದ್ದರೂ ಅವರ ವಿಚಾರಧಾರೆಗಳು ತೀಕ್ಷ್ಣವಾಗಿ ಸಾಹಿತ್ಯದ ಮೂಲಕ ಪ್ರಕಟವಾದ ರೀತಿ, ಅವರ ಪ್ರಸ್ತುತ ಕಥಾ ಸಂಗ್ರಹಗಳಲ್ಲಿ ಬರುವ ಬದುಕಿನ ಆದರ್ಶಗಳು ಸಾಧನಾರವರ ಮೇಲೆ ಪ್ರಭಾವಿಸಿದೆ. ಮುಂಬಯಿ ಎಂಬ ಮಹಾನಗರದಲ್ಲಿ ವಲಸೆಯಿಂದಾಗಿ ವ್ಯಾಸರಾಯ ಬಲ್ಲಾಳರ ಪುಟ್ಟ ಮಗು ಪೂರ್ಣಿಮಾ ಮುಂದೊಂದು ದಿನ ಮುಂಬಯಿ ವಾಲಿಯಾಗುತ್ತದೆ ಎಂಬ ನಿಲುವಿನಲ್ಲಿ ವಲಸೆಯಿಂದಾಗಿ ಮುಂಬಯಿಗೆ ಬಂದಂತಹ ಕನ್ನಡಿಗರನ್ನು ಮುಂಬಯಿಗಾರರನ್ನಾಗಿ ಮಾಡುತ್ತದೆ. ಶ್ರೀನಿವಾಸ ಐರಾಣಿಯವರ ಮನೆ ಗುಬ್ಬಚ್ಚಿ ಗೂಡಿನಂತಹ ಮನೆ ಎಂಬ ನಿರಂಜನರವರ ಮಾತಿನಲ್ಲಿ ಮುಂಬಯಿಯ ಜನ ಸಾಮಾನ್ಯರ ಮನೆಗಳ ಚಿತ್ರಣ, ಬದುಕಿನ ಬವಣೆಗಳು ಅವರ ಪತ್ನಿ ಶಕುಂತಲಾ ಬಾಯಿ ಆಲ್ ಇಂಡಿಯಾ ರೇಡಿಯೋ ದಲ್ಲಿ ಕನ್ನಡದ ಪ್ರಕಟಕರಾಗಿ ಕೆಲಸ ನಿರ್ವಹಿಸುತ್ತಿದ್ದು, ಆ ಮೂಲಕ ಮುಂಬಯಿಯಲ್ಲಿ ಕನ್ನಡವನ್ನು ಕೇಳುಗರಿಗೆ ತಲುಪಿಸುವ ಕಾರ್ಯವನ್ನು ಮುಂಬಯಿ ಜೀವನದ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ.

ಮೂರನೇಯ ಪತ್ರದಲ್ಲಿ ದೀನ ಪ್ರತಿಭೆಯ ಸಾಹಿತಿಯಾಗಿ ಅ.ನ.ಕೃರವರು ೧೯೪೬ರಲ್ಲಿ ಧಾರವಾಡ ಜಿಲ್ಲೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣದಲ್ಲಿ ಸಾಂಸ್ಕೃತಿಕ ವಿಚಾರಗಳನ್ನು ಚರ್ಚಿಸುತ್ತಾರೆ. ಅವರ 'ಅಗ್ನಿ' ಕತೆ, ಇವೆರೆಡರಿಂದ ಅವರ ವಿಚಾರಧಾರೆಯ ಗುರಿಯಾವುದೆಂದು ಅ.ನ.ಕೃ ರವರ ವಿಚಾರಧಾರೆಗಳಲ್ಲಿ ಸ್ಪಷ್ಟತೆಯಿಲ್ಲದೆ ಚಂಚಲತೆಯನ್ನು ಹೊಂದಿದ್ದು, ಒಮ್ಮೆ ಅರಸೊತ್ತಿಗೆಯನ್ನು ಹೊಗಳುವುದು ಮತ್ತೊಮ್ಮೆ ತೆಗಳುವುದು. ಅವರ ವಿಚಾರಧಾರೆಗಳಲ್ಲಿ ಸಂಧಿಗ್ದತೆಯು ಇದೆ. ಅ.ನ.ಕೃ ರವರ ಸಹೃದಯತೆ ಪರಿಚಯವಾಗಬೇಕಾದರೆ ಮುಖತಃ ಅವರನ್ನು ಕಾಣಬೇಕೆಂದು, ಕನ್ನಡ ನಾಡಿನಲ್ಲಿ ಜನ ಸಾಮಾನ್ಯನಿಗೂ ಸಾಹಿತ್ಯದ ಗಾಳಿ ಬೀಸುವಂತೆ ಮಾಡಿದ ಕೀರ್ತಿ ಅವರದಾಗಿದೆ. ಅವರ ಓದುಗ ಸಂಖ್ಯೆಯು ಗಣನೀಯವಾಗಿದೆ. ಅದರಿಂದಾಗಿ ಅವರ ಬರಹವು ತೂಗಿ, ಗಂಭೀರವಾಗಿ, ಪರಿಣಾಮಕಾರಿಯಾಗಿ ಬರೆಯಲಿ ಎಂಬ ಅಪೇಕ್ಷೆಯೊಂದಿಗೆ ನಿರಂಜನರವರು ಅ.ನ.ಕೃ ರವರ ವಿಚಾರಗಳಲ್ಲಿನ ಸಂಧಿಗ್ಧತೆಯನ್ನು ವಿಮರ್ಶಿಸುತ್ತಾರೆ. ಇಲ್ಲಿ ನಿರಂಜನರವರು ಸಮಕಾಲೀನ ಸಾಹಿತಿಯಾದ ಅ.ನ.ಕೃರವರ ವಿಚಾರ ಧಾರೆಗಳನ್ನು ಪ್ರಶ್ನಿಸುವುದು ಅವರ ನೇರ ಧೋರಣೆಯನ್ನು ತಿಳಿಸುವುದು.

ಪತ್ರ ನಾಲ್ಕರಲ್ಲಿ ಬಡವನಾಗಿ ಹುಟ್ಟಿದರಿಂದ ವಿದ್ಯಾಭ್ಯಾಸದಿಂದ ವಂಚಿತರಾಗುವ, ವರ್ಗ ತಾರತಮ್ಯ ಇಲ್ಲದೆ ಇದ್ದರೆ, ಎಲ್ಲರಿಗೂ ಶಿಕ್ಷಣದ ಅವಕಾಶ ದೊರಕುವ, ಸ್ತ್ರೀಯು ಅಡುಗೆ ಮನೆಯಲ್ಲಿ ತುತ್ತಾಗುವುದು, ಹಣಕಾಸಿನ ಒಂದೇ ಅಭಾವದಿಂದಾಗಿ ರೋಗ ಗುಣವಾಗದೇ ಸಾವಿಗೆ ಗುರಿಯಾಗುವ, ಈ ರೀತಿಯ ದೇಶದ ಸಾಮಾಜಿಕ ಸಮಸ್ಯೆಗಳಿಂದ ಜನತೆ ಬಿಡುಗಡೆಯಾಗುವವರೆಗೂ ವರ್ಗರಹಿತ, ಜಾತಿ ರಹಿತ, ಬಡವ-ಶ್ರೀಮಂತ ಎಂಬ ಭೇದ ಭಾವ ಹೋಗುವವರೆಗೂ ತಮ್ಮ ಹೋರಾಟ ನಡೆಯುತ್ತದೆಯೆಂದು, ಆ ಹೋರಾಟದಲ್ಲಿ ನಿರಂಜನರು ಸಹ ಸೈನಿಕನಾಗಿ, ಅನುಪಮಾರವರು ಯೋಧೆಯಾಗಿ ತಾವು ಇದ್ದೇವೆಂದು ಅದನ್ನು ಸಾಧಿಸುವವರೆಗೂ ತಮ್ಮ ಹೋರಾಟ ಅಚಲವಾದುದೆಂದು, ಸಮಾನತೆಯ ಸಮಾಜ ನಿರ್ಮಾಣದ ತನಕ ತಮ್ಮ ಹೋರಾಟದ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ.

ಪತ್ರ ೫ರಲ್ಲಿ ೬೦ ವರ್ಷದಿಂದ ಮಾಸ್ತಿಯವರು ಸಣ್ಣ ಕತೆಗಳ ಮೂಲಕ ಮಾಡಿದ ಸಾಹಿತ್ಯದ ಕ್ರಾಂತಿ, ಜೊತೆಗೆ ಕನ್ನಡನಾಡಿನ ಶಾಲೆಗಳಲ್ಲಿ ಕನ್ನಡವೇ ಮಾಧ್ಯಮವಾಗಬೇಕೆಂಬ ಅವರ ನಿಲುವು, ಪತ್ರ ಆರರಲ್ಲಿ ಕನ್ನಡ ಪ್ರಾಂತ ರಚನೆಯ ಅಗತ್ಯತೆಯ ಜೊತೆಗೆ ಸಾಧನಾಳನ್ನು ಪ್ರಿಯ ಕನ್ನಡತಿಯಾಗಿ ಪತ್ರದ ಆರಂಭದಲ್ಲಿ ಸಂಬೋಧಿಸುತ್ತಾರೆ. ನಿರಂಜನರು ಪ್ರತಿಯೊಂದು ಕಾಗದದ ಆರಂಭದಲ್ಲಿ ಕಾಗದ ಯಾವ ವಿಚಾರವನ್ನು ಪ್ರತಿಪಾದಿಸುತ್ತದೆಯೋ ಅದಕ್ಕೆ ಹತ್ತಿರವಾದ ಪದದ ಮೂಲಕ ಸಾಧನಾಳನ್ನು ಸಂಬೋಧಿಸುತ್ತಾರೆ. ಪತ್ರದ ಅಂತ್ಯದಲ್ಲಿ ತಮ್ಮನ್ನು ಇದೇ ರೀತಿಯಲ್ಲಿ ಗುರುತಿಸುವುದು ಈ ಪತ್ರಗಳ ಆರಂಭ ಮತ್ತು ಅಂತ್ಯದ ವೈಶಿಷ್ಟವಾಗಿದೆ.

'ನಮಗೆ ಬಂದ ಸ್ವಾತಂತ್ರ್ಯ' ಎಂಬ ಪತ್ರದಲ್ಲಿ ಸ್ವಾತಂತ್ರ್ಯ ಒಂದು ನಾಲ್ಕು ವರ್ಷಗಳಾದರೂ ರೈತನಿಗೆ, ಕೂಲಿಕಾರನಿಗೆ, ಹೆಣ್ಣು ಮಕ್ಕಳ ಜೀವನ ಹೊಸ ಬೆಳಕಿನ ಕಡೆಗೆ ಹೋಗದೆ ಇರುವುದು, ಜಾತಿ-ಮತಗಳ ಸಂಘರ್ಷ, ನಿರುದ್ಯೋಗ, ಮರೀಚಿಕೆಯಾಗಿ ಉಳಿದ ಔದ್ಯೋಗಿಕರಣ, ಇಳಿಮುಖವಾದ ಜೀವನಮಟ್ಟ, ಏರುತ ಹೋದ ಜೀವನ ವೆಚ್ಚ, ಉದ್ಯೋಗದ ಭದ್ರತೆಯಿಲ್ಲದೆ ತತ್ತರಗೊಳ್ಳುವ ಮಧ್ಯಮ ವರ್ಗ ಇವೆಲ್ಲಾದರ ಹಿನ್ನಲೆಯಲ್ಲಿ ನಾವು ನಿರೀಕ್ಷಿಸಿದ, ಅಪೇಕ್ಷಿಸಿದ

ಸ್ವಾತಂತ್ರ್ಯ ಇದಲ್ಲವೆಂದು ಸ್ವಾತಂತ್ರ್ಯವೆಂಬುದು ದೇಶವಾಸಿಗಳಿಗೆ ಬರಲೇ ಇಲ್ಲವೆಂದು, ಸ್ವಾತಂತ್ರ್ಯವೆಂಬುದು ಯಾವ ಹಾದಿಯಲ್ಲಿ ನಡೆದಿದೆ ಎಂಬುದನ್ನು ತಾತ್ವೀಕರಿಸುತ್ತಾರೆ.

'ಅ.ನ.ಕೃ ಅಸಂಬದ್ಧತೆ' ಎಂಬ ಎಂಟನೆಯ ಪತ್ರದಲ್ಲಿ ಅ.ನ.ಕೃರವರ ಬರವಣಿಗೆಯ ಶೈಲಿ, 'ನಗ್ನ ಸತ್ಯಾ' ಕಾದಂಬರಿ ಬರೆದ ವರ್ಷವೇ 'ಅರಳು ಮರಳು' ಆಧ್ಯಾತ್ಮಿಕವಾದವನ್ನು ಕುರಿತು ಬರೆದ ಕೃತಿಯಾಗಿದೆ. ಅವರಿಗಿರುವ ಲೇಖನ ಕಲೆಯನ್ನು ಮೆಚ್ಚುವ ನಿರಂಜನರವರು ಅ.ನ.ಕೃ. ರವರ ಉಪನ್ಯಾಸಗಳು ಮತ್ತು ಭಾಷಣಗಳಲ್ಲಿ ಒಂದಕ್ಕೊಂದು ಸುಸಂಬದ್ಧತೆ ಇಲ್ಲದೆ ಅವರು ವರ್ತಿಸುವ ರೀತಿ, ಕಾಂಗ್ರೇಸ್ ಪಕ್ಷದ ನಿಷ್ಠೆಯನ್ನು ಹೊಂದಿರುವ ಅವರು ಬೆಂಗಳೂರು ಕಾರ್ಪೋರೇಶನ್ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯ ಪರವಾಗಿ ಕಾಂಗ್ರೇಸ್ ವಿರೋಧಿ ಭಾಷಣ ಮಾಡಿದ್ದು, ರಷ್ಯಾ ಮತ್ತು ಚೀನಾವನ್ನು ಜನತಾ ರಾಷ್ಟ್ರ ನಿರ್ಮಾಣಕ್ಕೆ ಪ್ರಯತ್ನ ಮಾಡಿರುವುದನ್ನು ಶ್ಲಾಘಿಸುತ್ತಾರೆ. ಆದರೆ ಭಾರತ ಆ ದಾರಿಯಲ್ಲಿ ನಡೆಯಲು ಸಾಧ್ಯವಿಲ್ಲ ಎಂದು ವಾದಿಸುತ್ತಾರೆ ಎಂಬುದಾಗಿ ಅ.ನ.ಕೃರವರ ವಿಚಾರಗಳಲ್ಲಿನ ದ್ವಂದ್ವತೆಗಳನ್ನು ವಿಶ್ಲೇಷಿಸುತ್ತಾರೆ.

'ಬೇಂದ್ರೆಯವರ ಹೊಸ ಪಾತ್ರ'ವೆಂಬ ಪತ್ರದಲ್ಲಿ ದ.ರಾ ಬೇಂದ್ರೆಯವರು 'ಭೃಂಗದ ಬೆನ್ನೇರಿ', 'ತುತ್ತಿನ ಚೀಲ'ದಂಥಾ ಮೊದಲಾದ ಕವನಗಳಲ್ಲಿ ಜನಪದ ಗೀತೆಗಳ ದಾಟಿಯಿದ್ದು, ಹಾಡುಗಳ ಭಾವ ಸಾಮಾನ್ಯನಿಗೂ, ಸರ್ವರಿಗೂ ಅರ್ಥವಾಗುವಂತೆ ಇದೆ. ರಾಷ್ಟ್ರೀಯ ಚಳುವಳಿಯು ಹಲವು ಬಾರಿ ಹೇಗೆ ವಿಫಲವಾದಂತೆ, ಸಾಂಸ್ಕೃತಿಕ ಚಳುವಳಿಗಳ ವೈಯಕ್ತಿಕ ಪ್ರತಿಷ್ಠೆಯಿಂದಾಗಿ ಚೂರಾದಂತೆ, ಜನತೆಯ ಕವಿಯಾಗಿದ್ದು ಜನತಾಮುಖಿಯಾದ ಬೇಂದ್ರೆಯವರು ಅರವಿಂದ ವಾದವನ್ನು ಒಪ್ಪಿ ಜನಸಾಮಾನ್ಯನಿಗೆ ಅರ್ಥವಾಗದ ಭಾಷೆಯಲ್ಲಿ ಮಾತನಾಡ ತೊಡಗಿದರು. ಅದು 'ಗಂಗಾವತರಣ' ಕವಿತೆಯನ್ನು ೧೯೪೩ ರಲ್ಲಿ ಶಿವಮೊಗ್ಗ ಸಾಹಿತ್ಯ ಸಮ್ಮೇಳನದಲ್ಲಿ ಹಾಡಿದ್ದು 'ಸತ್ಯಂ, ಶಿವಂ, ಸುಂದರಂ' ಎಂಬ ಅವರ ವಿಷಯವೇ ಜನಸಾಮಾನ್ಯನಿಗೆ ಅರ್ಥವಾಗದೇ ಹೋಯಿತು. ಒಬ್ಬ ಸಾಹಿತಿಯು ಕಾಲಕ್ಕೆ ತಕ್ಕಂತೆ, ಪ್ರಭಾವಕ್ಕೆ ಒಳಗಾಗಿ ಹೇಗೆ ಭಿನ್ನ ಮನೋಧರ್ಮವನ್ನು ಬೆಳೆಸಿಕೊಂಡು ಜನಮುಖಿಯಿಂದ ಬೇರೆಯಾಗುತ್ತಾನೆ ಎಂಬುದನ್ನು ದ.ರಾ. ಬೇಂದ್ರೆಯವರ ಕವಿತಾ ಸಂಕಲನಗಳ ಹಿನ್ನಲೆಯಲ್ಲಿ ತಾತ್ವೀಕರಿಸುತ್ತಾರೆ.

ವಿ. ಜಿ. ಭಟ್ ಎಂಬ ಹೆಸರಿನವರಾದ ವಿಷ್ಣು ಗೋವಿಂದ ಭಟ್‌ರವರ 'ಆತ್ಮಶೋಧನೆ ಮತ್ತು ಕಾವ್ಯ ವೇದನೆ' ಎಂಬ ಕವಿತೆಗಳನ್ನು ಧಾರವಾಡದ ಆಕಾಶವಾಣಿ ಕೇಂದ್ರದವರಾದ ಗುತ್ತಲ್ ರವರು ಇದು ವಿಮರ್ಶೆಗೆ ಯೋಗ್ಯವಲ್ಲ ಇದರಲ್ಲಿ ಪ್ರೇಮಗೀತೆಗಳೇ ಇವೆಯೆಂದು ಅಲ್ಲಗಳೆದರು. ಅವರ ಧೋರಣೆಯನ್ನು ವಿ. ಜಿ. ಭಟ್ ರವರು ಪ್ರತಿಭಟಿಸಿದ ಸಂದರ್ಭದಲ್ಲಿ ನಿರಂಜನರವರು ಆಕಾಶವಾಣಿ ಮೊದಲಾದ ರೇಡಿಯೋ ಚಾನೆಲ್‌ಗಳು ಅಂದು ಉತ್ತಮ ಕವಿತಾ ಸಂಕಲನವೆಂದರೆ ಶ್ರೇಷ್ಠ ಸಾಹಿತಿಗಳಿಂದ ವಿಮರ್ಶೆಗೆ ಒಳಪಟ್ಟು ಹೊಗಳಿದರೆ ಅದನ್ನು ಆಕಾಶವಾಣಿಯಲ್ಲಿ ಹಾಡುವುದಕ್ಕೆ ಅವಕಾಶ ನೀಡಲಾಗುತ್ತಿತ್ತು. ಇಲ್ಲವಾದರೆ ಅದನ್ನು ತಿರಸ್ಕರಿಸುವ ಆಕಾಶವಾಣಿ ಮುಖ್ಯಸ್ಥರ ಮನಃಸ್ಥಿತಿ, ವಿಮರ್ಶೆ ಎಂದರೆ ಸಾಹಿತ್ಯದ ಹೊಗಳಿಕೆ ಎಂಬ ಧೋರಣೆ ಬೆಳೆದಿದ್ದು ಹೊಗಳದೇ ಇದ್ದದ್ದು ಉತ್ತಮ ಸಾಹಿತ್ಯವಲ್ಲವೆಂದು ಬೆಳೆದ ವಿಮರ್ಶೆ ದೃಷ್ಟಿಯ ತಾತ್ವಿಕತೆಯನ್ನು ಪ್ರಶ್ನಿಸುವ ಪತ್ರವಾಗಿದೆ.

ಸಾಹಿತಿಯಾದ ಶಿವರಾಮ ಕಾರಂತರ ರಾಜಕಾರಣದ ಮನಃಸ್ಥಿತಿಯನ್ನು ಕುರಿತಂತೆ ಪತ್ರ ೧೧ ರಲ್ಲಿ ಮದ್ರಾಸ್ ಅಸೆಂಬ್ಲಿ ಚುನಾವಣೆಗೆ ನಿಲ್ಲುವ ಅವರ ಮನಃಸ್ಥಿತಿ, ಚಿಕ್ಕ ವಯಸ್ಸಿನಲ್ಲಿಯೇ

ರಾಜಕೀಯ ಆಸಕ್ತಿಯವರಾಗಿದ್ದರೆಂದು, ಪ್ರಗತಿಶೀಲ ಸಾಹಿತ್ಯ ಚಳುವಳಿಯಲ್ಲಿ ಕಾಣಿಸಿಕೊಂಡರು ಸಾಹಿತ್ಯ ರಾಜಕಾರಣ ಮಾಡದವರೆಂದು ಅವರ ವ್ಯಕ್ತಿತ್ವ ಮಾತು ನಡವಳಿಕೆ ಸುಸಂಬದ್ಧತೆಯಿತ್ತೆಂದು ತಿಳಿಸುತ್ತಾರೆ. ಅ.ನ.ಕೃ, ದ.ರಾ ಬೇಂದ್ರೆ, ಶಿವರಾಮ ಕಾರಂತ ಮೊದಲಾದ ಲೇಖಕರ ವ್ಯಕ್ತಿಗತ ವಿಮರ್ಶೆಯನ್ನು ನಿರಂಜನರು ಮಾಡುವುದಿಲ್ಲ ಅವರ ವಿಚಾರಗಳನ್ನು ವಿಮರ್ಶೆಗೆ ಒಳಪಡಿಸುವುದು ಅವರ ವಿಚಾರ ಸಾಹಿತ್ಯದ ಬಹುಮುಖ್ಯ ತಾತ್ವಿಕತೆಗಳಲ್ಲಿ ಒಂದಾಗಿದೆ. ವಿಮರ್ಶೆಯೆಂಬುದು ವ್ಯಕ್ತಿಗತವಾಗಿರದೆ ವಿಚಾರಕ್ಕೆ ಮಾತ್ರ ಸೀಮಿತವಾಗಿರಬೇಕೆಂಬ ಅವರ ದೃಷ್ಟಿಕೋನವನ್ನು ತಿಳಿಯಬಹುದು.

'ಕನ್ನಡ ಟೈಪ್ ರೈಟರ್ ಕರ್ಮ ಕಥೆ' ಎಂಬ ಪತ್ರ ೧೨ರಲ್ಲಿ ಟೈಪ್ ರೈಟರ್ ಕರ್ತರು ರೆಮಿಂಗ್ ಟನ್ ಕಂಪೆನಿಯಿಂದ ಯಂತ್ರಗಳನ್ನು ತಯಾರು ಮಾಡಿ ಕನ್ನಡ ಲಿಪಿ ಬದಲಾವಣೆ ಮಾಡಿ ಟೈಪ್‌ರೈಟರ್ ಲಿನೋ ಟೈಪ್‌ಗಳನ್ನು ಕಂಡು ಹಿಡಿದರೆಂದು ಕೆ. ಅನಂತ ಸುಬ್ಬರಾಯರ ಸಾಧನೆಯಾಗಿದೆ. ಆದರೆ ಇದರ ಬಗ್ಗೆ ಸರಕಾರ ತನಿಖೆ ನಡೆಸಬೇಕೆಂದು ಅವರೊಬ್ಬರೇ ಕಂಡು ಹಿಡಿದರೆ ಅಥವಾ ಇನ್ನಾದರೂ ಕನ್ನಡಕ್ಕೆ ಈ ಸೇವೆಯನ್ನು ನೀಡಿದವರು ಇದ್ದಾರೆಯೇ, ಎಂದು ಸರಕಾರವು ಸಾರ್ವಜನಿಕ ವಿಚಾರಣೆ ನಡೆಸಬೇಕೆಂದು ಕನ್ನಡ ಟೈಪ್‌ರೈಟರ್ ಕಂಡು ಹಿಡಿಯಲು ಇನ್ನು ಮೂವರು ಇದ್ದರು. ಅವರಿಗೆ ಸಲ್ಲಬೇಕಾದ ಗೌರವ ಸಲ್ಲಿಸಲ್ಲಿಲ್ಲವೆಂದು ಇತರರ ಸಾಧನೆಯನ್ನು ತಮ್ಮ ಸಾಧನೆಯೆಂದು ಹೇಳಿಕೊಳ್ಳುವ ಪ್ರವೃತ್ತಿಯ ವಿರುದ್ಧ ಧ್ವನಿಯನ್ನು ಈ ಪತ್ರದಲ್ಲಿ ಕಾಣಬಹುದು.

'ಆಳುವವರು ಮತ್ತು ಸಂತಾನ ಸಂಯಮ' ಎಂಬ ಪತ್ರದಲ್ಲಿ ಅಂದಿನ ಕೇಂದ್ರ ಸರಕಾರವು ಸಂತಾನ ಸಂಯಮವನ್ನು ಜಾರಿಗೆ ತಂದಿತು. ಬಡತನ, ದಾರಿದ್ರ್ಯ, ಹಸಿವು ಹೋಗಬೇಕಾದರೆ ಮಿತ ಸಂತಾನಗಳಿರಬೇಕೆಂದು, ವಯಸ್ಕರ ಶಿಕ್ಷಣ ಸಮಿತಿಯ ವಾರ ಪತ್ರಿಕೆಯಾದ 'ಬೆಳಕು' ಎಂಬ ಸಂಚಿಕೆಯಲ್ಲಿ 'ಮಕ್ಕಳು ಸಾಕು' ಎಂಬ ಲೇಖನದಲ್ಲಿ ಒಂದು – ಎರಡು ಮಕ್ಕಳು ಇರುವ ಕುಟುಂಬ ಉತ್ತಮ ಜೀವನಮಟ್ಟ ಆರೋಗ್ಯದಿಂದ ಇರುವುದು. ಹೆಚ್ಚು ಮಕ್ಕಳಿರುವ ಕುಟುಂಬ ಹಲವು ಸಮಸ್ಯೆಗಳಿಂದ ನರಳುವುದನ್ನು ಚಿತ್ರಿಸುವುದನ್ನು ನಿರಂಜನರು ಗಮನಿಸಿ ಜೀವನಮಟ್ಟ ಇಳಿಯದಂತೆ ಮಾಡುವುದಕ್ಕಾಗಿ ಜನಸಂಖ್ಯೆಯನ್ನು ನಿಯಂತ್ರಿಸಬೇಕೆಂದು ಸಲಹೆ ನೀಡುವ ಈ ರೀತಿಯವರು ಪ್ರಗತಿಶೀಲರೇ? ದೇಶದ ಸಂಪತ್ತನ್ನು ನ್ಯಾಯ ರೀತಿಯಲ್ಲಿ ವಿತರಣೆಯನ್ನು ಮಾಡದೇ ಜನಸಂಖ್ಯೆಯನ್ನು ನಿಯಂತ್ರಿಸುವುದು, ಜನಸಮುದಾಯದ ದಾರಿದ್ರ್ಯಕ್ಕೆ ಕಾರಣ ಆಳುವ ವರ್ಗಗಳೆಂದು ತಿಳಿಸುತ್ತಾರೆ. ಸಂತಾನ ನಿಯಮವನ್ನು ಪಾಲಿಸುವ ಮೂಲಕ ಸಮಾಜದಲ್ಲಿನ ದಾರಿದ್ರ್ಯ ಹಸಿವು, ಬಡತನ, ಮೊದಲಾದ ಸಮಸ್ಯೆಗಳನ್ನು ನಿವಾರಿಸಬಹುದೆಂದು ಸರಕಾರದ ಧೋರಣೆಯ ಒಂದು ಮೌಢ್ಯವಾಗಿದೆ. ದೇಶದ ಸಂಪತ್ತನ್ನು ೩೫ ಕೋಟಿ ಜನರಿಗೂ (ಸ್ವಾತಂತ್ರ್ಯ ಬಂದಾಗ ಇದ್ದ ಜನಸಂಖ್ಯೆ) ಸಮಾನವಾಗಿ ಹಂಚಬೇಕೆ ಹೊರತು ಜನಸಂಖ್ಯೆಯನ್ನು ನಿಯಂತ್ರಿಸುವುದಲ್ಲ, ಚೀನ ತನ್ನ ೪೫ ಕೋಟಿ ಜನಸಂಖ್ಯೆಯನ್ನು ವೃದ್ಧಿಸಿಕೊಳ್ಳಲು ಕಾರ್ಯಕ್ರಮವನ್ನು ರೂಪಿಸುತ್ತಿರಬೇಕಾದರೆ ನಮ್ಮ ದೇಶದಲ್ಲಿ ಜನಸಂಖ್ಯೆಯನ್ನು ಹೇಗೆ ನಿಯಂತ್ರಿಸಬೇಕೆಂಬುದೇ ದೊಡ್ಡ ಸಮಸ್ಯೆಯಾಗಿದೆ. ಆಳುವ ವರ್ಗದ ಪರವಾಗಿ ಗರ್ಭ ನಿರೋಧದ ಪ್ರಚಾರವನ್ನು, ಪತ್ರಿಕೆಗಳ ಜಾಹೀರಾತುಗಳ ವಿರುದ್ಧ ನಿರಂಜನರು ಕಿಡಿಕಾರುತ್ತಾರೆ. ಇಂದೂ ಜಾಗತೀಕರಣದ ಹಿನ್ನಲೆಯಲ್ಲಿ ಸಮೂಹ ಮಾಧ್ಯಮಗಳ ಮೂಲಕ ಜಾಹೀರಾತುಗಳು ನಮ್ಮ ಬದುಕನ್ನು ನಿಯಂತ್ರಿಸುವುದು ಕೂಡ ಇದೇ ಮಾದರಿಯಲ್ಲಿದೆ.

ಕಾಗದ ೧೪೮ರಲ್ಲಿ ಸುಬ್ಬಣ್ಣ ರಂಗನಾಥ ಎಕ್ಕುಂಡಿಯವರ ಕಾವ್ಯಗಳ ಪರಿಚಯಿಸುವುದು, 'ಚುನಾವಣೆ ಕವಿತೆಗಳು' ಎಂಬ ಪತ್ರದಲ್ಲಿ ಚುನಾವಣೆಯ ಸಂದರ್ಭದಲ್ಲಿ ಹೊಸ ಹೊಸ ಕವಿತೆಗಳು ಹೇಗೆ ರೂಪು ಪಡೆದಿವೆ. ಇದರಲ್ಲಿ ಕಾಂಗ್ರೆಸ್, ಕಮ್ಯೂನಿಷ್ಟ್, ಸಮಾಜವಾದಿ ಪಕ್ಷಗಳನ್ನು ಬೆಂಬಲಿಸುವವರು ಅವರ ವಿರೋಧ ಪಕ್ಷವನ್ನು ಹೇಗೆ ಕವಿತೆಗಳ ಮೂಲಕ ಟೀಕಿಸುವರು, ಚುನಾವಣಾ ರಾಜಕಾರಣವೆಂಬುದು ಸಾಹಿತ್ಯವಲಯವನ್ನು ಬಿಡದೆ ಕಾಡುವುದನ್ನು ನಿರಂಜನರು ವಿಮರ್ಶಿಸುತ್ತಾರೆ.

'ಕವಿ ಕುವೆಂಪು ಮತ್ತು ಕನ್ನಡ' ಎಂಬ ಕಾಗದದಲ್ಲಿ ಕುವೆಂಪುರವರು ಕರ್ನಾಟಕದಲ್ಲಿ ಕನ್ನಡವೇ ಮಾಧ್ಯಮವಾಗಬೇಕೆಂಬ ನಿಲುವು, ಅದನ್ನು ಸಾಧಿಸಲು ಜನತೆ ಬಲಿಷ್ಠವಾದ ಚಳುವಳಿಯನ್ನು ಹೂಡಬೇಕೆಂಬ ಕರೆಯನ್ನು ನೀಡುತ್ತಾರೆ. ಕಾಗದ ೧೯೯ರ ಪ್ರಗತಿಶೀಲತೆಯ ಹೆಸರಿನಲ್ಲಿ ಪ್ರದರ್ಶನ ಎಂಬಲ್ಲಿ ಪ್ರೀತಿಯ ಪ್ರಗತಿಶೀಲೆ ಎಂದು ಸಾಧನಗಳನ್ನು ಪತ್ರದ ಅಂತ್ಯದಲ್ಲಿ ನಿರಂಜನರವರು ತಮ್ಮನ್ನು ಪ್ರಗತಿಶೀಲ ಎಂದು ಕರೆದುಕೊಂಡಿದ್ದಾರೆ. ಚಿತ್ರದುರ್ಗಾದಲ್ಲಿ ನಡೆದ ಪ್ರಗತಿಶೀಲ ಸಾಹಿತ್ಯ ಸಮ್ಮೇಳನದಲ್ಲಿ (ಹಿರಿಯೂರು) ಪ್ರಗತಿಶೀಲ ಸಾಹಿತ್ಯ ಚಳುವಳಿಯಲ್ಲಿ ಅ.ನ.ಕೃ ರವರನ್ನು ಬಿಟ್ಟರೆ ಉಳಿದವರಾರು ಇರಲಿಲ್ಲವೆಂದು, ಕಾಳಿದಾಸ, ಅಲ್ಲಮಪ್ರಭು, ಕಾವ್ಯ, ನಾಟಕ, ಕಾದಂಬರಿಗಳ ಮೇಲೆ ಭಾಷಣವಿತ್ತೇ ಹೊರತು ಪ್ರಗತಿಶೀಲ ಚಟುವಟಿಕೆಗೆ ಸಂಬಂಧಿಸಿದ ಕಾರ್ಯಕ್ರಮಗಳೇ ಇಲ್ಲದೆ ಇರುವುದು, ಇಂದಿನ ಪರಿಸ್ಥಿತಿಯಲ್ಲಿ ಪ್ರಗತಿಶೀಲ ಸಾಹಿತಿಯ ಕರ್ತವ್ಯವೇನು? ಪ್ರಗತಿಶೀಲ ಸಾಹಿತ್ಯದ ಗುರಿ ಧ್ಯೇಯಗಳೇನು? ಎಂಬ ಚರ್ಚೆಗಳೇ ನಡೆಯಲಿಲ್ಲವೆಂದು ಪ್ರಶ್ನಿಸುತ್ತಾರೆ. ಆ ಮೂಲಕ ಒಂದು ಸಾಹಿತ್ಯ ಚಳುವಳಿಯು ತನ್ನ ದಿಕ್ಕನ್ನು ಹೇಗೆ ಬದಲಾಯಿಸುತ್ತದೆ ಎಂಬುದನ್ನು ವಿವರಿಸುತ್ತಾರೆ.

ಪ್ರಗತಿಶೀಲ ಚಳುವಳಿಯ ಸಾಹಿತ್ಯ ಸಮ್ಮೇಳನವು ತನ್ನ ಧೋರಣೆಯನ್ನು ಬಿಟ್ಟು, ಅ.ನ.ಕೃ ತಮ್ಮ ಸಾಹಿತ್ಯ ಮತ್ತು ಕಾಮ ಪ್ರಚೋದನೆಯ ಪುಸ್ತಕದ ಉದ್ಘಾಟನೆ, ನಗ್ನಾಸತ್ಯಾ ಮತ್ತು ಶನಿ ಸಂತಾನ ಕಾದಂಬರಿಗಳಿಗೆ ಬಂದ ವಿಮರ್ಶೆಗೆ ಟೀಕಿಸಿ, ಅ.ನ.ಕೃ ತಮ್ಮ ಕೃತಿಯನ್ನು ತಾವು ಹೊಗಳಿಕೊಂಡಿದ್ದು, ಕಾಮವನ್ನು ಮುಚ್ಚಿಡುವುದು ಸಂಪ್ರದಾಯತೆ, ಬಿಚ್ಚಿ ತೋರಿಸುವುದೇ ಪ್ರಗತಿಶೀಲತೆಯೆಂದು ಹಿರಿಯೂರಿನ ಜನತೆಗೆ ಸಾರಿ ಸಾರಿ ಹೇಳಿದ್ದು, ಕಾಮ ಪ್ರಚೋದನೆ ಎಂಬುದು ಪ್ರಗತಿಶೀಲ ಸಾಹಿತ್ಯದ ಮಹಾಕರ್ತವ್ಯಗಳಲ್ಲಿ ಒಂದು ಎಂಬುದಾಗಿ ಬಿಂಬಿಸಿದರು. ನಂತರ ಡಿಸೆಂಬರ್‌ನಲ್ಲಿ ಪ್ರಗತಿಶೀಲ ಸಾಹಿತ್ಯ ಸಮ್ಮೇಳನ ನಡೆದಿದ್ದು ಅದಕ್ಕೆ ಅ.ನ.ಕೃ ಬಳಗದವರನ್ನು ಬಿಟ್ಟು ಬಸವರಾಜ ಕಟ್ಟೀಮನಿ, ದ.ಬಾ. ಕುಲಕರ್ಣಿ, ಬಿ.ಶಂಕರಭಟ್ಟ, ಕೋ. ಚೆನ್ನಬಸಪ್ಪ, ನಿರಂಜನ ಇವರ್‍ಯಾರಿಗೂ ಸ್ಥಾಯಿ ಸಮಿತಿಯಲ್ಲಿ ಸ್ಥಾನ ನೀಡದ ವಿಚಾರ ಮತ್ತು ಪ್ರಗತಿಶೀಲ ಚಳುವಳಿಗೆ ಹೊಸ ಅರ್ಥವನ್ನು ಕೊಡುವ ಪ್ರಯತ್ನ ನಡೆದ ಬಗ್ಗೆ ಈ ಪತ್ರದಲ್ಲಿ ತಿಳಿಸುವುದರ ಮೂಲಕ ಹಿರಿಯೂರಿನ ಸಾಹಿತ್ಯ ಸಮ್ಮೇಳನದಿಂದ ಅ.ನ.ಕೃ ಮತ್ತು ನಿರಂಜನರವರ ವಿಚಾರಧಾರೆಗಳಲ್ಲಿ ಒಡಕು ಮೂಡಿ ಪ್ರಗತಿಶೀಲ ಚಳುವಳಿಯ ಎರಡು ಭಿನ್ನ ತಾತ್ವಿಕತೆ ಮತ್ತು ಸ್ವರೂಪವನ್ನು ತುಳಿಯುವ ಹಾದಿ ಹಿಡಿದ ಬಗೆಯನ್ನು ಚರ್ಚಿಸುತ್ತಾರೆ.

ಪತ್ರ ೨೦ರಲ್ಲಿ 'ಆಧ್ಯಾತ್ಮವಾದ ಆಹಾರದಲ್ಲಿ' ಸರ್ವಪಲ್ಲಿ ರಾಧಕೃಷ್ಣನ್‌ರವರ 'ಪೌರಸ್ತ್ಯ ಮತಗಳು ಮತ್ತು ಪಾಶ್ಚಾತ್ಯ ಚಿಂತನೆ' ಕೃತಿಯಲ್ಲಿ ಆಧ್ಯಾತ್ಮವಾದವನ್ನು ವಿವರಿಸಿದ ಬಗೆಯನ್ನು, 'ನಮ್ಮ

ನಾಡಿನ ಉಪಾಧ್ಯಾಯರು' ಎಂಬ ಪತ್ರದಲ್ಲಿ ಸ್ವಾತಂತ್ರ್ಯ ನಂತರ ಭಾರತದಲ್ಲಿನ ಉಪಾಧ್ಯಾಯರ ಆರ್ಥಿಕ ಕಡು ಬಡತನ, ಅನಾರೋಗ್ಯ, ವರ್ಗಾವಣೆ, ರಷ್ಯಾದಲ್ಲೂ ಇದೆ ಮಾದರಿಯಲ್ಲಿ ೧೯೧೭ರ ಕ್ರಾಂತಿಯ ಮುನ್ನ ಇತ್ತು ಎಂಬುದನ್ನು ಗಾರ್ಕಿ ಮತ್ತು ಚೆಕಾಪ್‌ರವರ ಸಾಹಿತ್ಯ ಮತ್ತು ಜೀವನ ಕೃತಿಯಲ್ಲಿ ತಿಳಿಸಿರುವುದು ಮಾತ್ರವಲ್ಲದೆ ಮುಂದೆ ಉಪಾಧ್ಯಾಯರಿಗೆ ಸಮಾಜದಲ್ಲಿ ಗೌರವ, ಅನುಕೂಲ ದೊರಕಿದವು. 'ಗಣೇಶ ಗಾಥಾ' ಎಂಬ ೨೩ನೇ ಪತ್ರದಲ್ಲಿ ಒಂದು ಕಡೆ ದೇಶದಲ್ಲಿ ಗಣೇಶ ಹಬ್ಬದ ವಾತಾವರಣ ಮತ್ತೊಂದು ಕಡೆ ಬಂಗಾಳದಲ್ಲಿ ಭೀಕರ ಬರಗಾಲ, ಕುವೆಂಪುರವರ ಕವಿತೆಯ ಸಾಲುಗಳನ್ನು ಕೋ. ಚೆನ್ನ ಬಸಪ್ಪನವರ 'ರೈತ' ಪತ್ರಿಕೆಯಲ್ಲಿ ಬಂದಂತಹ ಕೆಲವೊಂದು ಸಾಲುಗಳನ್ನು ಉದಾಹರಿಸುತ್ತಾರೆ. ಸ್ವಾತಂತ್ರ್ಯ ಬಂದು ಐದು ವರ್ಷಗಳಾದರೂ ಹಸಿವು, ದಾರಿದ್ರ್ಯ, ಭಿಕ್ಷಾಟನೆ, ದುಃಖ, ಸಂಕಟ ಇವುಗಳಿಂದ ಬಿಡುಗಡೆಯೇ ಕಾಣದಾಗಿದೆ. ಇವುಗಳಿಂದ ಜನ ಎಂದು ಮುಕ್ತರಾಗುತ್ತಾರೋ ಅಂದೇ ನಿಜವಾದ ಸ್ವಾತಂತ್ರ್ಯವೆಂದು ನೈಜ ಸ್ವಾತಂತ್ರ್ಯದ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ.

'ಕಣ್ಮರೆಯಾದ ಬೇಗಂ ರಷೀದಾ ಜಹಾನ್' ಎಂಬ ಪತ್ರದಲ್ಲಿ ೧೯೩೫ರಲ್ಲಿ ಕಾಲೇಜು ವಿದ್ಯಾಭ್ಯಾಸ ಪಡೆದ ಮೊದಲ ಮುಸಲ್ಮಾನ ಹುಡುಗಿ, ತನ್ನ ಕತೆಗಳ ಮೂಲಕ ಸಮಾಜದ ಕ್ರೂರ ವಾಸ್ತವಗಳನ್ನು ಚಿತ್ರಿಸಿದ ಕತೆಗಾರರಾಗಿ, ಮಾರ್ಕ್ಸ್‌ವಾದದ ಬಗ್ಗೆ ಅಪಾರವಾದ ಒಲವನ್ನು ಹೊಂದಿದವರು. ಪ್ರೇಮ್‌ಚಂದರ ಅಧ್ಯಕ್ಷತೆಯಲ್ಲಿ ನಡೆದ ೧೯೩೬ರಲ್ಲಿ ಪ್ರಥಮ ಭಾರತ ಪ್ರಗತಿಶೀಲ ಲೇಖಕರ ಸಮ್ಮೇಳನದಲ್ಲಿ ಭಾಗವಹಿಸಿದ ವಿಚಾರಗಳನ್ನು ವಿವರಿಸುತ್ತಾರೆ. ಅವರ ವ್ಯಕ್ತಿತ್ವವನ್ನು ಪರಿಚಯಾತ್ಮಕವಾಗಿ ತಿಳಿಸುವ ಪತ್ರವಾಗಿದೆ.

ಪತ್ರ ೨೪ರಲ್ಲಿ ಹಿಂದಿ ಭಾಷೆಯ ಮೇಲಿನ ವ್ಯಾಮೋಹಕ್ಕೆ ಒಳಗಾದ ಕೆಲವು ಕನ್ನಡ ಸ್ತ್ರೀಯರು ಹಿಂದಿ ಭಾಷೆಯನ್ನು ಕಲಿಯುವುದು, ಭಾಷೆ ಕಲಿತು ಸಾಹಿತ್ಯವನ್ನು ಓದಿ ವಿಚಾರಗಳನ್ನು ಬೆಳೆಸಿಕೊಳ್ಳದೇ ಒಂದು ಫ್ಯಾಶನ್‌ಗಾಗಿ ಮಧ್ಯಮ ವರ್ಗದ ಸ್ತ್ರೀಯರು ಹಿಂದಿ ಭಾಷೆಯ ವ್ಯಾಮೋಹಕ್ಕೆ ಒಳಗಾಗುವ ಬಗೆಯನ್ನು ತಿಳಿಸುತ್ತಾರೆ. ಪ್ರಸ್ತುತ ಕಾಲಘಟ್ಟದಲ್ಲಿಯು ಕನ್ನಡ ಭಾಷೆ ಬಿಟ್ಟು ಇಂಗ್ಲೀಷ್, ಫ್ರೆಂಚ್, ಜರ್ಮನಿ, ಭಾಷೆಯನ್ನು ಜ್ಞಾನಗಳಾಗಿ ಕಲಿಯುವುದಕ್ಕಿಂತ ಒಂದು ಫ್ಯಾಶನ್ ದೃಷ್ಟಿಕೋನದಿಂದ ಕಲಿಯಲು ಹೋಗುವುದನ್ನು ಕಾಣಬಹುದು.

ಜವಾಹರಲಾಲ್ ನೆಹರೂರವರ ಪಂಚವಾರ್ಷಿಕ ಯೋಜನೆಗಳಿಂದ ನಮ್ಮ ಉತ್ತರ ಕರ್ನಾಟಕದ ಜನತೆಗೆ ಅದರಿಂದ ಲಾಭವಾಗುವುದಿಲ್ಲವೆಂದು ಬಳ್ಳಾರಿ, ಕೂಡ್ಲಿಗಿ, ಬನಹಟ್ಟಿ ಪ್ರದೇಶದಲ್ಲಿನ ಬರಗಾಲ ಮತ್ತು ಕ್ಷಾಮದಿಂದಾಗಿ ಜನತೆಯು ತಮ್ಮ ನೇಕಾರಿಕೆಯನ್ನು, ಸೀರೆಯನ್ನು ನೇಯುವ ಕೌಶಲ್ಯವನ್ನು ಬಿಟ್ಟು ಬದುಕಿಗಾಗಿ, ತುತ್ತು ಅನ್ನಕ್ಕಾಗಿ ಸುತ್ತಿಗೆ ಹಿಡಿದು ಕಲ್ಲು ಕುಟ್ಟುವ ಕೆಲಸದಲ್ಲಿ ತೊಡಗಿಕೊಂಡರು. ನಮ್ಮ ಪುರಾತನ ನೇಯ್ಗೆ ಕಾರಿಕೆಯು ನಾಶಗೊಳ್ಳುವುದರ ಜೊತೆಗೆ ಕೇಂದ್ರ ಸರಕಾರದ ಯೋಜನೆಗಳಿಂದ ಜನರ ಬದುಕು ಉತ್ತಮವಾಗುವುದಿಲ್ಲ ಎಂಬ ತಾತ್ವಿಕತೆಯನ್ನು 'ಕುಸುರು ಕೆಲಸದ ಕೈ ಮತ್ತು ಸುತ್ತಿಗೆ' ಎಂಬ ಪತ್ರದಲ್ಲಿ ಹತಾಶೆಯ ಭಾವನೆಯನ್ನು ನಿರಂಜನರು ಪ್ರಕಟಿಸುತ್ತಾರೆ.

ಅಗಲಿದ 'ಶಿವೇಶ್ವರನ ನೆನಪಿಗೆ' ಎಂಬ ಕಾಗದದಲ್ಲಿ ಶಿವೇಶ್ವರ ದೊಡ್ಡಮನಿಯವರ 'ನವಿಲೂರ ಮನೆಯಿಂದ' ಕವನ ಸಂಕಲನ ಅದನ್ನು ಬಸವರಾಜ ಕಟ್ಟೀಮನಿ ಮತ್ತು ಚೆನ್ನವೀರ

ಕಣವಿಯವರು ಸಂಪಾದಿಸಿದರು. ಕೃತಿಗಾರನ ಸಾವಿನ ವಿಚಾರವನ್ನು ವಿವರಿಸುವ ಪತ್ರವಾಗಿದೆ. 'ಕಾರವಾರದ ಕಡಲ ತೀರದಿಂದ' ಎಂಬ ಪತ್ರದಲ್ಲಿ ಕಾರವಾರದ ನೈಸರ್ಗಿಕ ಪರಿಸರ, ಅಲ್ಲಿಯ ಸೆರೆಮನೆ, ಸ್ವಾತಂತ್ರ್ಯದ ಹೋರಾಟ, ಜಿಲ್ಲಾಧಿಕಾರಿಯ ಕಚೇರಿ, ಬೆಸ್ತ ಸ್ತ್ರೀಯರು ಹಡಗಿನಿಂದ ತಂದ ಮೀನುಗಳನ್ನು ಹೆಕ್ಕುತ್ತಿರುವುದು, ಅಂಕೋಲದಲ್ಲಿ ರೈತರು ನ್ಯಾಯಕ್ಕಾಗಿ ಹೋರಾಟ, ಕಾರವಾರ ಜನರ ಬದುಕಿನ ಚಿತ್ರಣವನ್ನು ವಿವರಿಸುವ ಪತ್ರವಾಗಿದೆ. 'ಅಮರ ಸ್ಟಾಲಿನ್' ಎಂಬ ಪತ್ರದಲ್ಲಿ ಮಾರ್ಚ್ ೧೯೫೩ ರಲ್ಲಿ ರಷ್ಯಾದ ಮಾರ್ಕ್ಸ್‌ವಾದಿ ನಾಯಕ ಸ್ಟಾಲಿನ್‌ನ ಸಾವು ಇಡೀ ಜಗತ್ತು ಅವರಿಗಾಗಿ ಗೌರವಿಸಿದ ರೀತಿ, ಅರಾಜಕತೆ ಮತ್ತು ಸಮಾಜವಾದಿ, ಜನಾಂಗ ಪ್ರಶ್ನೆ, ಲೆನಿನ್‌ವಾದದ ಸಮಸ್ಯೆಗಳು ಮೊದಲಾದ ಅವರ ಕೃತಿಗಳನ್ನು ತಿಳಿಸಿ ಲೆನಿನ್ ಮತ್ತು ಸ್ಟಾಲಿನ್ ರಷ್ಯಾವನ್ನು ಸಮಾಜವಾದದಿಂದ ಕಮ್ಯೂನಿಸಂ ಕಡೆಗೆ ತೆಗೆದುಕೊಂಡು ಹೋದ ಬಗೆಯನ್ನು ಪರಿಚಯಾತ್ಮಕವಾಗಿ ತಿಳಿಸುತ್ತಾರೆ.

'ರಾಷ್ಟ್ರಕವಿಯ ಎಪ್ಪತ್ತೇಯ ಹುಟ್ಟುಹಬ್ಬ' ಎಂಬ ಪತ್ರದಲ್ಲಿ ಗೋವಿಂದ ಪೈರವರ ವ್ಯಕ್ತಿತ್ವವನ್ನು, 'ಬರಹಗಾರನ ಬಲಗೈ' ಎಂಬ ಪತ್ರದಲ್ಲಿ ಬರಹಗಾರನಿಗೆ ಬರವಣಿಗೆಯನ್ನು ಬರೆಯಲು ಬಲಗೈ ಎಷ್ಟು ಅವಶ್ಯಕ ಎಂಬ ವಿಚಾರವನ್ನು, ಅವರ ಬಲಗೈ ಮುರಿದ ಸಂದರ್ಭದಲ್ಲಿ ಬಲಗೈಯ ಮಹತ್ವವನ್ನು ತಿಳಿಸುವ ಪತ್ರಗಳಾಗಿವೆ. ನಮ್ಮ ಮಧ್ಯಮ ವರ್ಗ ಎಂಬ ಪತ್ರದಲ್ಲಿ ೧೯೫೦ ರಲ್ಲಿನ ಮಧ್ಯಮ ವರ್ಗದ ಮನಃಸ್ಥಿತಿ, ದ್ವಿಮುಖ ಜೀವನ, ಗಂಡ ಹೆಂಡರ ಜಗಳ, ಬಾಡಿಗೆ ಮನೆ, ನೀರಿಗಾಗಿ ಪರದಾಟ, ಮಧ್ಯಮ ವರ್ಗದ ಬದುಕು ಬವಣೆಗಳನ್ನು ಆದರ್ಶವಾದಿಗಳಾಗಿದ್ದರೂ ವಾಸ್ತವತೆಯನ್ನು ಮರೆಯದ ಈಗಿನ ಇರುವಿಕೆಯಲ್ಲಿಯೇ ನಾಳಿನ ಬರುವಿಕೆಯನ್ನು ಕಲ್ಪಿಸುವ ಅವರ ಜೀವನ ಚಿತ್ರಣವನ್ನು ನಿರಂಜನರು ನೀಡುತ್ತಾರೆ. ಆ ಮೂಲಕ ಮಧ್ಯಮ ವರ್ಗದ ಸ್ಥಿತಿಗತಿಗಳನ್ನು ವಾಸ್ತವದಲ್ಲಿ ತಾತ್ವೀಕರಿಸುತ್ತಾರೆ. ೧೯೫೦ರ ಮಧ್ಯಮವರ್ಗದ ಸ್ಥಿತಿಯೇ ಇಂದಿಗೂ ಇರುವುದು ಸಮಾಜದ ಸ್ಥಿತಿಯ ಕೈಗನ್ನಡಿಯಾಗಿದೆ.

ಸಾಧನಾಳನ್ನು ಪ್ರತಿಯೊಂದು ಪತ್ರದಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸಂಬೋಧಿಸುವ ನಿರಂಜನರು ಒಬ್ಬ ಪ್ರೇಯಸಿಗೆ, ಪ್ರಿಯತಮೆಗೆ ಬರೆದ ಪ್ರೇಮ ನಿವೇದನೆಗಾಗಿ ಬರೆದ ಪತ್ರಗಳಾಗದೇ ಸಾಮಾಜಿಕ ಜವಾಬ್ದಾರಿಯ ಸಾಹಿತಿಯಾಗಿ ಈ ಮೂವತ್ತಮೂರು ಪತ್ರಗಳಲ್ಲಿ ಮೂವತ್ತ ಮೂರು ವಿಚಾರಗಳನ್ನು ಸಮಕಾಲೀನ ಘಟನೆಗಳನ್ನು ತಾತ್ವೀಕರಿಸುವ ಮೂಲಕ ವಿಶ್ಲೇಷಿಸಿದ್ದಾರೆ.

ಸಾಧನಾಳನ್ನು ಜೀವನ ಸಂಗಾತಿ, ಸಾಹಿತ್ಯ ಪ್ರಿಯೆ, ಯೋಧೆಸಾಧನಾ, ಅರಗಿಣಿ, ಪ್ರಿಯ ಕನ್ನಡತಿ, ಪ್ರಿಯ ಸ್ವತಂತ್ರೆ, ಪ್ರಾಣ ಸ್ನೇಹಿತೆ, ಪ್ರಿಯ ಕವಯಿತ್ರಿ, ಪ್ರಿಯ ಸಾಧನಮಣಿ, ಸಂಗಾತಿ, ಪ್ರೀತಿಯ ಬೀಬೀ, ಪ್ರಿಯ ಸಹೃದಯಿ, ಪ್ರಿಯ ಸಂಯಮಿ, ಶ್ರೀಮತಿಜೀ, ಗೆಳತಿ, ಸ್ನೇಹಮಯಿ, ಪ್ರೀತಿಯ ಪ್ರಗತಿಶೀಲೆ, ಪ್ರಿಯ ಆತ್ಮ, ಪ್ರಿಯ ಉಪಧ್ಯಾಯಿನಿ, ನಗೆಮಲ್ಲಿಗೆ ಒಡತಿ, ಬಾಳ ಒಡತಿ, ಪ್ರಿಯ ತತ್ವ ನಿಷ್ಠಳೇ, ನ್ಯಾಯ ಪ್ರಿಯಳೇ, ಮಾಟಗಾತಿ, ಪ್ರಾಣನಿಧಿ, ಸರ್ವಸ್ವ ಎಂದು ಸಂಬೋಧಿಸಿರುವುದನ್ನು ನೋಡಿದರೆ ಒಬ್ಬ ಪ್ರಿಯಕರನಾದವನು ಪ್ರೇಯಸಿಯನ್ನು ಹೇಗೆಲ್ಲಾ ವಿಷಯಕ್ಕೆ ಸಂಬಂಧಿಸಿದಂತೆ ಸಂಬೋಧಿಸಬಹುದೆಂದು ತಿಳಿಯುತ್ತದೆ. ಅಗತ್ಯವಾಗಿ ಈ ಕೃತಿಯನ್ನು ಪ್ರೇಯಸಿಯನ್ನು ಸಂಬೋಧಿಸಲಾದರು ಕನ್ನಡ ಸಹೃದಯ ಸಾಹಿತ್ಯ ಪ್ರಿಯರಾದವರು ಅಭ್ಯಾಸ ಮಾಡಲೇ ಬೇಕಾಗಿದೆ. ಈ ಪತ್ರವನ್ನು ಮೊದಲಿಗೆ ೧೯೫೦ ಡಿಸೆಂಬರ್ ತಿಂಗಳಿನಿಂದ ಬರೆದ ಪತ್ರಗಳೊಂದಿಗೆ ಆರಂಭಿಸಿ ೧೯೫೧ರ ಇಸವಿಯ ಜನವರಿಯಿಂದ ಡಿಸೆಂಬರ್ ವರೆಗೆ ಬರೆದ ಪತ್ರಗಳನ್ನು ತಿಂಗಳಿನ ಕ್ರಮದಂತೆ

ಜೋಡಿಸಲಾಗಿದೆ. ಅದೇ ಮಾದರಿಯಲ್ಲಿ ೧೯೫೨. ೧೯೫೩ರ ವರ್ಷದ ಪತ್ರಗಳನ್ನು ಕೂಡ ತಿಂಗಳ ಕ್ರಮದಂತೆಯೇ ಸೇರಿಸಲಾಗಿದೆ ಇದು ಈ ಕೃತಿಯ ವೈಶಿಷ್ಟ್ಯಗಳಲ್ಲಿ ಒಂದಾಗಿದೆ.

ಐದು ನಿಮಿಷ – ೧೯೫೩

ಚಿತ್ರಗುಪ್ತ ಎಂಬ ಪತ್ರಿಕೆಗೆ ನಿರಂಜನರವರು 'ಓದುಗರೊಡನೆ ಐದು ನಿಮಿಷ' ಎಂಬ ಲೇಖನಗಳ ಸರಮಾಲೆಯನ್ನು ಬರೆಯುತ್ತಿದ್ದರು. ಅದೇ ಲೇಖನಗಳನ್ನು ೧೯೫೩ರಲ್ಲಿ ನಿರಂಜನ ಮತ್ತು ವಾಸುದೇವರು ಸಂಪಾದಿಸಿದ ಕೃತಿಯೇ 'ಐದು ನಿಮಿಷ'. ಇದೊಂದು ಪತ್ರಿಕಾ ಲೇಖನಗಳ ಸಂಕಲನ ಗ್ರಂಥ ಇದರಲ್ಲಿ ಒಟ್ಟು ೨೨ ಲೇಖನಗಳಿವೆ. ಈ ಲೇಖನಗಳ ಹಿನ್ನಲೆಯಲ್ಲಿ ನಿರಂಜನರವರ ವಿಚಾರ ಸಾಹಿತ್ಯದ ತಾತ್ವಿಕತೆ ಮತ್ತು ಸ್ವರೂಪವನ್ನು ಇಲ್ಲಿ ಚರ್ಚಿಸಲಾಗುವುದು.

ಸಂಸ್ಕೃತಿಯ ಉಳಿವಿಗೆ ಸ್ವಾತಂತ್ರ ದಿನಾಚರಣೆಯಂದೇ ಅಂದಿನ ಮುಖ್ಯಮಂತ್ರಿ ಕೆ. ಸಿ. ರೆಡ್ಡಿಯವರು ರಾಮಾಯಣ, ಮಹಾಭಾರತ, ವಚನಗಳು, ಸರ್ವಜ್ಞನ ತ್ರಿಪದಿ ಮೊದಲಾದವುಗಳನ್ನು ಹಾಡಲು, ಓದಲು ಗಮಕಿಗಳಿಗೆ ಗೌರವ ಧನ ಕೊಡುವ ಪ್ರಸ್ತಾಪ ಮಾಡಿದ್ದು, ಕನ್ನಡ ನಾಡಿನ ಸಂಸ್ಕೃತಿಯ ಉಳಿವಿಗಾಗಿ ತೆಗೆದುಕೊಂಡ ಕ್ರಮವಾಗಿ ನಿರಂಜನರು ನೋಡುತ್ತಾರೆ. ಅದೇ ದಿನ ಮೈಸೂರಿನ ವಿದ್ಯಾರ್ಥಿ ಮಿತ್ರರು ಸ್ವಾತಂತ್ರ್ಯೋತ್ಸವ ಆಚರಿಸಿದರು. ಆ ಸಂದರ್ಭದಲ್ಲಿ ಅಮೇರಿಕಾದ ವಿದ್ಯಾರ್ಥಿಗಳು ಅಲ್ಲಿಗೆ ಬಂದಿದ್ದರು. ಆ ಆಚರಣೆಯಲ್ಲಿ ಹಿಂದಿ ಚಲನಚಿತ್ರ ಗೀತೆಯನ್ನು ಹಾಡಿದ್ದು, ಅಮೇರಿಕಾದ ವಿದ್ಯಾರ್ಥಿಗಳು ಇದೇ ಭಾರತೀಯ ಸಂಸ್ಕೃತಿ ಎಂದು ಭಾವಿಸುತ್ತಾರೆ. ಸಂಸ್ಕೃತಿಯ ಹೆಸರಿನಲ್ಲಿ ಯುವ ಸಮೂಹ ನಡೆಸುವ ದುರಾಚಾರಗಳು, ದುರವಸ್ಥೆಗೆ ಹಿಡಿದ ಕೈಗನ್ನಡಿಯಾಗಿ ನಿರಂಜನರು ತಾತ್ವೀಕರಿಸುತ್ತಾರೆ. ಇದೇ ಭಾಗದಲ್ಲಿ ಹುಬ್ಬಳ್ಳಿಯಿಂದ ಪ್ರಕಟವಾಗುವ ದಿನ ಪತ್ರಿಕೆಯಲ್ಲಿ ಹೊದಿಕೆ ಆಕರ್ಷಕವಾಗಿದ್ದು ಮೂರು ಬಣ್ಣಗಳಿಂದ ಮುಂಬೈನಲ್ಲಿ ಮುದ್ರಿತವಾಗಿದೆ ಎಂದು ಜಾಹೀರಾತು ಕೊಟ್ಟದ್ದನ್ನು ನಿರಂಜನರು ಗಮನಿಸಿ ಮೈಸೂರು ಸಂಸ್ಥಾನದಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ನಿರಾಸಕ್ತಿ ಹೊಂದಿದ್ದವರು ಕರ್ನಾಟಕ ಏಕೀಕರಣವಾದರೆ ಈ ರೀತಿಯ ಮುದ್ರಣಕ್ಕೆ ದೂರದ ಮುಂಬಯಿಗೆ ಹೋಗುವ ಅವಶ್ಯಕತೆ ಇಲ್ಲವೆಂದು, ಬೆಂಗಳೂರಿನ ಪ್ರೆಸ್ ಮಾಲೀಕರಿಗೆ ಕೆಲಸ ದೊರಕುವುದು ಮಾತ್ರವಲ್ಲದೆ ಅವರನ್ನೆ ನಂಬಿದ್ದ ಪ್ರೆಸ್ ಉದ್ಯೋಗಿಗಳಿಗೂ ಅದ್ದರಿಂದ ಸಹಾಯವಾಗುತ್ತದೆ. ಒಂದೇ ಲೇಖನದಲ್ಲಿ ಸಂಸ್ಕೃತಿ ಮತ್ತು ದೇಶಿಯ ಚಿಂತನೆಗಳು ಹಾಗೂ ಕರ್ನಾಟಕ ಏಕೀಕರಣದ ಅಗತ್ಯತೆಯನ್ನು ಮೂರು ವಿಚಾರಗಳನ್ನು ಆರಂಭದ ಐದು ನಿಮಿಷ ಎಂಬ ಲೇಖನದಲ್ಲಿ ವಿಶ್ಲೇಷಿಸುತ್ತಾರೆ.

'ದಿನಾಚರಣೆ' ಎಂಬ ಲೇಖನದಲ್ಲಿ ಹಬ್ಬ ಹರಿದಿನಗಳ ಆಚರಣೆಗಳಲ್ಲದೆ ಜನವರಿ ೨೬ ಗಣರಾಜ್ಯೋತ್ಸವ, ಆಗಸ್ಟ್ ೯ ಕ್ವಿಟ್ ಇಂಡಿಯಾ ಚಳುವಳಿ ಕರೆಕೊಟ್ಟ ದಿನ, ಆಗಸ್ಟ್ ೧೫ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವ ಮೂಲಕ ಅಮೇರಿಕ, ರಷ್ಯಾ, ಚೀನಾ ದೇಶಗಳ ಸ್ವಾತಂತ್ರ್ಯ ದಿನವನ್ನು ಆಚರಿಸಬೇಕೆಂದು ಆ ಮೂಲಕ ಪ್ರತಿಯೊಬ್ಬ ವ್ಯಕ್ತಿ ವಿಶ್ವ ಭ್ರಾತೃತ್ವವನ್ನು, ವಿಶ್ವ ಮಾನವನು ಆಗಬೇಕೆಂದು ತಿಳಿಸುತ್ತಾರೆ. ರೈತ, ಕೂಲಿಕಾರರ ಸಮಾಜದ ಸ್ಥಾಪನೆಯ ಉದ್ದೇಶ ಹೊಂದಿದ್ದರಿಂದ ಮೇ ೧ನ್ನು ಆಚರಿಸಬೇಕೆಂದು, ದಾಸರ, ಬಸವ ಜಯಂತಿ, ಷಡಕ್ಷರ, ರಾಘವಾಂಕ, ರನ್ನ, ಪಂಪ, ಸರ್ವಜ್ಞ, ಅಪ್ಪಟ್ಟ ಕನ್ನಡಿಗರೊಂದಿಗೆ ರವೀಂದ್ರನಾಥ ಟಾಗೋರ್, ಮಹಮ್ಮದ್ ಇಕ್ಬಾಲ್, ಪ್ರೇಮ್

ಚಂದ್, ಸುಬ್ರಹ್ಮಣ್ಯಂ ಭಾರತಿಯವರನ್ನು ಸೇರಿಸಿ ರಾಷ್ಟ್ರೀಯವಾದಿಗಳಾಗಿ, ಮುಂದುವರಿದು ಫ್ರಾನ್ಸ್‌ನ ರೋಲಾ, ರಷ್ಯಾದ ಗಾರ್ಕಿ, ಚೀನಾದ ಲುಶಾನ್‌ರ ಜಯಂತಿಯನ್ನು ಆಚರಿಸಿ ಅಂತರಾಷ್ಟ್ರೀಯವಾದಿಗಳಾಗಬೇಕೆಂದು ತಿಳಿಸುತ್ತಾರೆ. ಈ ರೀತಿಯ ದಿನಾಚರಣೆಗಳನ್ನು ಆಚರಿಸುವ ಮೂಲಕ ಮನುಷ್ಯನ ಸಂಕುಚಿತ ಭಾವನೆಗಳನ್ನು ತೊಲಗಿಸಿ ಪ್ರಾದೇಶಿಕವಾದಿಗಳಾಗದೆ, ರಾಷ್ಟ್ರೀಯವಾದಿಗಳಾಗದೇ, ಅಂತರಾಷ್ಟ್ರೀಯವಾದಿಗಳಾಗಿ ವಿಶ್ವ ಪ್ರಜ್ಞೆ ಮೂಡಿ ಮಾನವೀಯತೆ, ವಿಶ್ವ ಭ್ರಾತೃತ್ವ ಬೆಳೆದು ವ್ಯಕ್ತಿಯು ಕುವೆಂಪುರವರು ಹೇಳುವ ವಿಶ್ವಮಾನವನಾಗಲಿ ಎಂಬ ತಾತ್ವಿಕತೆಯನ್ನು ಭಿನ್ನವಾಗಿ ಪ್ರತಿಪಾದಿಸುತ್ತಾರೆ.

ಸ್ವಾತಂತ್ರ್ಯ ನಂತರ ಈ ರೀತಿಯ ದಿನಾಚರಣೆ ಜಯಂತಿಗಳನ್ನು ಆಚರಿಸುತ್ತಿದ್ದೇವೆ. ಆದರೆ ಈ ಜಯಂತಿಗಳ ಆಚರಣೆ, ದಿನಾಚರಣೆಗಳು ಇಂದು ವ್ಯಕ್ತಿ ಪ್ರಧಾನವಾಗಿ, ಜಯಂತಿಗಳು ಒಂದು ಜಾತಿ, ಪಂಥಕ್ಕೆ ಸೀಮಿತವಾಗಿ ಮನುಷ್ಯನಲ್ಲಿ ವಿಶಾಲಾರ್ಥದಲ್ಲಿ ಬೆಳೆಯುವುದರ ಬದಲು ಮತ್ತಷ್ಟು ಸಂಕುಚಿತಕ್ಕೆ ಸಮುದಾಯ ಮತ್ತು ಸಮಾಜಗಳು ಒಳಗಾಗುತ್ತಿರುವುದು ವಿಪರ್ಯಾಸವಾಗಿದೆ.

'ಬರಗಾಲ ಮತ್ತು ಮಾನವತೆ' ಎಂಬ ಲೇಖನದಲ್ಲಿ ಬಾಗೆಪಲ್ಲಿ ತಾಲೂಕಿನಲ್ಲಿ ಬರಗಾಲವಿದ್ದು ಪಿ.ಎನ್ ಪದ್ಮನಾಭರಾವ್ ಎಂಬವರು ಪತ್ರದ ಮೂಲಕ ಹಸಿವಿನ, ಕ್ಷಾಮ ಪೀಡಿತರ ಉಪವಾಸದಿಂದ ಸಾಯುವವರೆಗೆ ಯಾರಾದರೂ ಸ್ವಲ್ಪ ಮಟ್ಟಿನ ಸಹಾಯ ಮಾಡಬೇಕೆಂದ ಕೇಳಿದ ವಿಚಾರಕ್ಕೆ ನಿರಂಜನರು ಬರಿಯ ದಾನ ಧರ್ಮದಿಂದಲೇ ಸಮಸ್ಯೆ ಪರಿಹಾರವಾಗುವುದಿಲ್ಲ. ಮೂಲಭೂತವಾಗಿ ಬರ ಬಾರದ ರೀತಿಯಲ್ಲಿ, ಜನ ಹಸಿವಿನಿಂದ ನರಳದ ರೀತಿ, ರೋಗ ರುಜಿನಗಳು ಭಾದಿಸದ ರೀತಿ, ಸರಕಾರಗಳು ಕ್ರಮ ಕೈಗೊಳ್ಳಬೇಕೆಂದು ಸರಕಾರದ ಜವಾಬ್ದಾರಿಯನ್ನು ತಿಳಿಸುತ್ತಾರೆ.

ಉತ್ತರ ಕರ್ನಾಟಕದಲ್ಲಿ, ಬಳ್ಳಾರಿ ಜಿಲ್ಲೆಯಲ್ಲೂ ಹಾಗೂ ಕರ್ನಾಟಕ ಇನ್ನಿತರ ಜಿಲ್ಲೆಗಳಲ್ಲೂ ಬರದ ತೀವ್ರತೆಯನ್ನು ಕುರಿತು ಬಂದಂತಹ ಪತ್ರಿಕೆಗಳ ವರದಿಗಳನ್ನಾಧರಿಸಿ ನಿರಂಜನರು ಅಣೆಕಟ್ಟುಗಳು, ನೀರಾವರಿ ಯೋಜನೆಗಳು, ವಿದ್ಯುತ್ ಯೋಜನೆಗಳು ಎಂದೆಲ್ಲಾ ಬರಿಯ ಯೋಜನೆಗಳೇ ಆಗಿವೆಯೇ ಹೊರತು ಇವುಗಳಿಂದ ಜನಸಾಮಾನ್ಯರಿಗೆ ಯಾವುದೇ ರೀತಿಯ ಉಪಯೋಗಗಳು ಆಗುತ್ತಿಲ್ಲವೆಂದು ಸರಕಾರಕ್ಕೆ ದೂರದೃಷ್ಟಿತನವಿಲ್ಲದ ದೃಷ್ಟಿಕೋನವನ್ನು ತಿಳಿಸುತ್ತಾರೆ.

'ನಮ್ಮ ನಾಟ್ಯ ಕಲಾ ವಿಲಾಸಿಗಳು' ಎಂಬ ಲೇಖನದಲ್ಲಿ ಕರ್ನಾಟಕದಲ್ಲಿ ಕಲೆ ಪೋಷಣೆಗಾಗಿ ರಂಗಭೂಮಿಯು ಇಲ್ಲವಾಗಿದೆ. ಕಲಾವಿದರಾಗಲೀ, ರೈತರಾಗಲೀ ಕಾರ್ಮಿಕರಾಗಲೀ ಯಾವುದೇ ಸಮುದಾಯದ ಸಮಸ್ಯೆಗಳನ್ನು ಈಡೇರಿಸಿಕೊಳ್ಳಲು ಚಳುವಳಿಯೊಂದೇ ಮಾರ್ಗ. ಚಳುವಳಿಯನ್ನು ನಡೆಸದೆ ನಮ್ಮನ್ನು ಆಳುವ ಸರಕಾರಗಳು ಸಮಸ್ಯೆಗೆ ಪ್ರತಿಸ್ಪಂದಿಸುವುದಿಲ್ಲ ಎಂಬ ತಾತ್ವಿಕತೆಯನ್ನು ನಿರಂಜನರು ಪ್ರತಿಪಾದಿಸುತ್ತಾರೆ.

'ನಾಡಹಬ್ಬದ ತುತ್ತೂರಿ' ಮತ್ತು 'ಮೈಸೂರಿನ ದಸರೆ' ಎಂಬ ಲೇಖನದಲ್ಲಿ ಕನ್ನಡ ನಾಡು ಒಂದಾಗದೇ ಅನೇಕ ಭಾಗಗಳಲ್ಲಿ ಹಂಚಿಕೊಂಡಿದ್ದು ಏಕೀಕೃತವಾಗದೆ ದಸರಾ ಹಬ್ಬವು ಹೇಗೆ ನಾಡ ಹಬ್ಬವಾದಿತ್ತೆಂದು, ಬರಗಾಲವಿದ್ದರು ಕನ್ನಡ ನಾಡಿನಲ್ಲಿ ಭಾಷಣಗಾರರಿಗೆ, ಸುಮಧುರ ಕಂಠದವರಿಗೆ ಬರಗಾಲವಿಲ್ಲವೆಂದು, ದಸರಾ ಹಬ್ಬ ಎನ್ನುವುದು ನಾಡಹಬ್ಬವಾಗಬೇಕೆ ಹೊರತು, ಸಾಹಿತಿಗಳಿಗೆ, ಭಾಷಣಕಾರರಿಗೆ, ಸಂಗೀತಗಾರರಿಗೆ ಮಾತ್ರ ಹಬ್ಬವಾಗಬಾರದೆಂದು ವಿಮರ್ಶಿಸುತ್ತಾರೆ. ಆ ಮೂಲಕ

ದಸರಾ ಹಬ್ಬ ಜನತೆಯ, ನಾಡಿನವರ ಹಬ್ಬವಾಗಬೇಕೆಂಬ ನಿಲುವಿದೆ. ಆ ನಾಡ ಹಬ್ಬವಾಗಬೇಕಾದರೆ ಮೊದಲು ಕನ್ನಡ ನಾಡು ಏಕೀಕರಣಗೊಳ್ಳಬೇಕು.

'ಚಾರ್ಲಿ ಚಾಪ್ಲಿನ್ ಮತ್ತು ಅಮೇರಿಕಾ' ಎಂಬ ಲೇಖನದಲ್ಲಿ ಅಮೇರಿಕಾ ಹಳೆಯ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಚಲನಚಿತ್ರರಂಗದಲ್ಲಿ ಅತ್ಯಂತ ಜನಪ್ರಿಯನಾದ ನಟ, ನಿರ್ಮಾಪಕ ಚಾರ್ಲಿ ಚಾಪ್ಲಿನ್‌ನ್ನು ಅಮೇರಿಕಾದಿಂದ ಹೊರದೂಡಬೇಕೆಂಬ ಪ್ರಯತ್ನ, ತನ್ನ ಹಾಸ್ಯ ನಟನೆಯಿಂದ ಸಮಾಜದ ಲೋಪ ದೋಷಗಳನ್ನು ಅಣಕಿಸಿದನು. ಆತ ಪ್ಯಾರಿಸ್‌ನ ಕಲಾವಿದ ಚಿತ್ರಕಾರ ಪಿಕಾಸೋ ನೊಡನೆ ಪತ್ರ ವ್ಯವಹಾರ ಇಟ್ಟುಕೊಂಡಿದ್ದು, ಆತ ಕಮ್ಯೂನಿಸ್ಟ್ ಹಾಗಾಗಿ ಚಾರ್ಲಿ ಚಾಪ್ಲಿನ್ ಕೂಡ ಕಮ್ಯೂನಿಸ್ಟ್ ಎಂದು ಭಾವಿಸಿ ಆತನನ್ನು ಅಮೇರಿಕಾದಿಂದ ಹೊರಹಾಕುವ ಪ್ರಯತ್ನ ನಡೆಯಿತು. ಪ್ರಜಾಪ್ರಭುತ್ವ ರಾಷ್ಟ್ರವಾದರೂ ಪ್ರಜೆಗಳನ್ನು, ಕಲಾವಿದರನ್ನು ಆಳುವ ಸರಕಾರಗಳು ಹೇಗೆ ದಮನಿಸುವ ಸಂದರ್ಭಕ್ಕಾಗಿ ಹವಣಿಸುತ್ತವೆ ಎಂಬುದನ್ನು ನಿರಂಜನರು ಇಲ್ಲಿ ಚರ್ಚಿಸುತ್ತಾರೆ.

'ನವ ಚೀನ ಸಂದೇಶ' ಎಂಬ ಲೇಖನದಲ್ಲಿ ಬೆಂಗಳೂರಿಗೆ ಭಾರತ ಚೀನಾ ಮೈತ್ರಿ ಸಂಘದವರು ಭೇಟಿಕೊಟ್ಟಿದ್ದು ಸರಕಾರದ ಪ್ರಮುಖ ಹುದ್ದೆಯಲ್ಲಿ ಯುವಕರು, ಸ್ತ್ರೀಯರಿಗೆ ಸಮಾನ ಸ್ಥಾನಮಾನಗಳು ಲಭಿಸಿರುವ ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ. 'ದೀಪಾವಳಿ ವಿಶೇಷ' ಲೇಖನದಲ್ಲಿ ಶ್ರೀಮಂತರ ತಮ್ಮ ವರ್ಗದ ಘನತೆಗೆ ತಕ್ಕಂತೆ ಬೆಲೆಬಾಳುವ ಉಡುಗೊರೆ, ಬುದ್ಧಿ ಜೀವಿಗಳು ಬಾಯಿ ಮಾತಿನಲ್ಲಿ, ಕಾಗದದಲ್ಲಿ, ಹಾರ್ದಿಕ ಅಭಿನಂದನೆ ಸಲ್ಲಿಸುವುದು. ಹೊಸದಾಗಿ ಮದುವೆಯಾದವರು ರಸಿಕ ಪತಿ ಗೌಪ್ಯವಾಗಿ ಪತ್ನಿಗೆ ಮುತ್ತಿನಂಥ ಉಡುಗೊರೆ ನೀಡುವುದು ಇವುಗಳನ್ನು ತಿಳಿಸುತ್ತಾರೆ.

'ಅಧ್ಯಕ್ಷ ಚುನಾವಣೆಯ ಆಟ' ಎಂಬ ಲೇಖನದಲ್ಲಿ ಅಮೇರಿಕಾದಲ್ಲಿ ೨೦ ವರ್ಷಗಳ ಕಾಲ ಡೆಮಾಕ್ರಾಟಿಕ್ ಪಾರ್ಟಿಯವರು ಅಧಿಕಾರ ನಡೆಸಿದ ನಂತರ ರಿಪಬ್ಲಿಕ್ ಪಕ್ಷದ ಉಮೇದುದಾರ ಐಸನ್ ಹೋವರ್ ಗೆದ್ದರು. ಪ್ರೋಗ್ರೇಸಿವ್ ಪಾರ್ಟಿ ಇದೊಂದು ಬಡವರ ಪಕ್ಷವಾಗಿದ್ದು, ನೀರಿನಂತೆ ಹಣ ಹರಿಯುವ ಅಮೇರಿಕಾದಲ್ಲಿ ಈ ಎರಡು ಪಕ್ಷಗಳ ಮುಂದೆ ನಿಲ್ಲಲ್ಲು ಸಾಧ್ಯವಿಲ್ಲ. ಅಧ್ಯಕ್ಷೀಯ ಮಾದರಿ ಅಥವಾ ಸಂಸತ್ತು ಮಾದರಿಯ ಪ್ರಜಾಪ್ರಭುತ್ವ ರಾಷ್ಟಗಳ ಸರಕಾರದ ಚುನಾವಣೆಗಳು ಹೇಗೆ ಹಣದ ಅರಿವು ಇರುತ್ತದೆಂದು, ಡೆಮಾಕ್ರಿಟಿಕ್ ಅಥವಾ ರಿಪಬ್ಲಿಕ್ ಪಾರ್ಟಿ ಯಾವುದೇ ಪಕ್ಷಗಳಾಗಿದ್ದರು ಅವುಗಳು ಬಂಡವಾಳಗಾರರ ಪರವಾಗಿದ್ದು, ಬಂಡವಾಳಷಾಹಿ ಅರ್ಥಿಕ ವ್ಯವಸ್ಥೆಯನ್ನು ಪಾಲಿಸುವುದು, ವಿದೇಶಾಂಗ ನೀತಿಯಲ್ಲಿ ಇಬ್ಬರು ಯುದ್ಧ ಪ್ರಿಯರೆಂದು, ಅವರು ರಷ್ಯಾ ಮತ್ತು ಚೀನಾದ ಮಿತ್ರರು ಅಲ್ಲವೆಂದು, ಅವರು ಅಮೇರಿಕಾದ ಜೀವನ ವಿಧಾನವನ್ನು ಮಾತ್ರ ಬಯಸುತ್ತಾರೆ. ಅಮೇರಿಕಾದ ರಾಜಕೀಯ ವಿಚಾರಗಳು ಹೇಗೆ ಇರುತ್ತವೆ ಎಂಬುದನ್ನು ೧೯೫೨ರಲ್ಲಿಯೇ ನಿರಂಜನರು ವಿವರಿಸಿದ್ದಾರೆ. ಇಂದಿಗೂ ಅಮೇರಿಕಾದ ವಿಚಾರಗಳು ಇದೇ ಮಾದರಿಯಲ್ಲಿದೆ. ಅಮೇರಿಕಾದ ದೃಷ್ಟಿ ಯಾವಾಗಲೂ ಯುದ್ಧ ಪರವಾಗಿ, ಬಂಡವಾಳಗಾರರ ಪರವಾಗಿಯೇ ಇರುತ್ತದೆ. ಅಮೇರಿಕಾಕ್ಕೆ ಶಾಂತಿಗಿಂತ ಯುದ್ಧವೇ ಪ್ರಿಯವಾದುದು ಎಂದು ಅಮೇರಿಕಾದ ರಾಜಕೀಯ ಧೋರಣೆಗಳನ್ನು ತಾತ್ವೀಕರಿಸುತ್ತಾರೆ.

'ನನ್ನ ಸಹಿ ಮತ್ತು ಸಮರ್ಥನೆ' ಎಂಬ ಲೇಖನದಲ್ಲಿಯು ಭಾರತವು ಅಮೇರಿಕಾ, ರಷ್ಯಾ, ಚೀನಾಗಳಿಂದ ಆಹಾರ ಧಾನ್ಯಗಳನ್ನು, ರಷ್ಯಾ ನಮ್ಮ ದೇಶದಿಂದ ಸೆಣಬು, ಚೀನಾ ತನ್ನ ರಾಷ್ಟ್ರದ ನಿರ್ಮಾಣಕ್ಕೆ ಬೇಕಾದ ಸಾಮಾಗ್ರಿಗಳನ್ನು ಹಣಕೊಟ್ಟು ತೆಗೆದುಕೊಳ್ಳುತ್ತವೆ. ಆದರೆ ಅಮೇರಿಕಾ

ಜಪಾನ್‌ನಿಂದ ರಕ್ತವನ್ನು ಹಿರೋಶಿಮಾ, ನಾಗಸಾಕಿಗಳಿಂದ ಪರಮಾಣು ಬಿದ್ದ ಜನರಿಂದ ತೆಗೆದುಕೊಳ್ಳುವುದು. ಪರಮಾಣು ಯುದ್ಧದಿಂದ ಆಗುವ ಪರಿಣಾಮ ಮತ್ತು ಮಾನವನ ರಕ್ತದಲ್ಲಾಗುವ ಸಮಸ್ಯೆಗಳ ಸಂಶೋಧನೆಗೆ ಇದನ್ನು ಅಮೇರಿಕವು ಬಳಸಿಕೊಳ್ಳುವ ರೀತಿಯನ್ನು ವಿವರಿಸುತ್ತಾರೆ. ಆ ಮೂಲಕ ಅಮೇರಿಕಾದ ರಾಜಕೀಯ ಧೋರಣೆ ಯುದ್ಧದ ಮನಃಸ್ಥಿತಿಯಿಂದ ಕೂಡಿರುತ್ತದೆ ಎಂಬುದನ್ನು ತಿಳಿಸುತ್ತಾರೆ.

'ಹೊಟೇಲ್ ಮಾಣಿಗಳ ಸಾಹಿತ್ಯ' ಎಂಬ ಲೇಖನದಲ್ಲಿ ಹೊಟೇಲ್ ಹುಡುಗರು ಕೂಡ ತಮ್ಮ ಅನುಭವದಿಂದ ಪ್ರತಿಭೆಯಿಂದ ಸಾಹಿತ್ಯವನ್ನು ಸೃಷ್ಟಿಸುತ್ತಾರೆಂದು, 'ಮೈಸೂರು ಸರಕಾರ ಮತ್ತು ಸಂಸ್ಕೃತಿಯ ಪ್ರಚಾರ' ಎಂಬ ಲೇಖನದಲ್ಲಿ ಸಂಸ್ಕೃತಿಯ ಪ್ರಸಾರಕ್ಕಾಗಿ ಸರಕಾರವು ತೆಗೆದುಕೊಂಡ ಕ್ರಮಗಳ ಬಗ್ಗೆ ಚರ್ಚಿಸುವುದರೊಂದಿಗೆ ಮನುಷ್ಯನಿಗೆ ಮೊದಲು ಬೇಕಾದುದು ಆಹಾರ, ವಸತಿ, ಬಟ್ಟೆ, ಮುಖ್ಯವೆಂದು ನಂತರ ಸಂಸ್ಕೃತಿಯಾಗಿದೆ. ಸರಕಾರಗಳು ಮೊದಲು ಜನಸಾಮಾನ್ಯರಿಗೆ ಮೂಲಭೂತ ಅವಶ್ಯಕತೆಗಳನ್ನು ನೀಡಬೇಕು ಎಂಬ ವಾಸ್ತವ ಹಿನ್ನಲೆಯಲ್ಲಿ ತಿಳಿಸುತ್ತಾರೆ. 'ಸ್ಮರಣೋತ್ಸವಗಳ ಯಾತನೆಯ ಮಾತು' ಎಂಬ ಲೇಖನದಲ್ಲಿ ಗಮಕ ಕಲೆಯನ್ನು ಅಸಂಖ್ಯಾ ವಿದ್ಯಾರ್ಥಿಗಳಿಗೆ ಕಲಿಸಿದ ಕಳಲೆ ಸಂಪತ್ತು ಕುಮಾರ ಚಾರ್ಯರ ಸ್ಮರಣೋತ್ಸವವನ್ನು ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸದೇ ಇರುವುದು ಕನ್ನಡ ಕಲೆಗಳ ಏಳಿಗೆಗಾಗಿ ಶ್ರಮಿಸಿದವರನ್ನು ಸ್ತುತಿಸುವ, ಕಾರ್ಯವನ್ನು ಮಾಡದ ಸಾಹಿತ್ಯ ಪರಿಷತ್ತಿನ ದೃಷ್ಟಿಯನ್ನು ಹಾಗೂ ಅಸಡ್ಡೆಯ ಮನಃಸ್ಥಿತಿಯನ್ನು ತಿಳಿಸುತ್ತಾರೆ.

'ಏಕೀಕರಣ ಮತ್ತು ಆಧ್ಯಾತ್ಮ' ಎಂಬಲ್ಲಿ ಕರ್ನಾಟಕ ಏಕೀಕರಣವಾಗಬೇಕಾದರೆ ಕನ್ನಡಿಗರ ಸಂಘಟಿತ ಪ್ರಯತ್ನ ಮತ್ತು ಚಳುವಳಿಯಿಂದ ಸಾಧಿಸಬಹುದೇ ಹೊರತು, ಪ್ರಾರ್ಥನೆ, ಪೂಜೆ, ಆಧ್ಯಾತ್ಮಗಳಿಂದ ಸಾಧ್ಯವಿಲ್ಲವೆಂದು ಚರ್ಚಿಸುತ್ತಾರೆ. 'ಹುತಾತ್ಮ ಶ್ರೀ ರಾಮುಲು ತುಳಿದ ಹಾದಿ' ಎಂಬ ಲೇಖನದಲ್ಲಿ ಆಂಧ್ರ ಪ್ರಾಂತ್ಯ ರಚನೆಗಾಗಿ ಹೋರಾಡಿ ಮಡಿದ ರೀತಿಯಲ್ಲಿ ಏಕವ್ಯಕ್ತಿಯಿಂದ ಸಾಧ್ಯವಿಲ್ಲ. ಸಂಘಟಿತವಾಗಿ ಹೋರಾಡಿ ಏಕೀಕರಣವನ್ನು ಸಾಧಿಸಬಹುದೆಂಬ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ. ವ್ಯಕ್ತಿವಾದಕ್ಕಿಂತ ಸಮಷ್ಟಿವಾದಕ್ಕೆ ನಿರಂಜನರು ಬೆಂಬಲವನ್ನು ನೀಡುತ್ತಾರೆ. ಚಳುವಳಿಗಳು ಯಶಸ್ವಿಯಾಗುವುದು ಸಂಘಟಿತ ಪ್ರಯತ್ನದಿಂದ ಎಂಬ ತಾತ್ವಿಕತೆಯನ್ನು ಕಾಣುತ್ತೇವೆ.

'ಹತ್ತು ಡಾಲರಗೊಂದು ಮಗು' ಎಂಬ ಲೇಖನದಲ್ಲಿ ಡಾ.ಜೆ. ಕಾಲ್ಬಿಟ ಕ್ಲಾರ್ಕ್ ಎಂಬುವರು ಭಾರತ, ಕೊರಿಯಾ, ಜಪಾನ್, ಬರ್ಮಾ, ಫಿನ್ಲೆಂಡ್, ಇಂಡೋನೇಷ್ಯಾ, ಬ್ರೆಜಿಲ್ ಮೊದಲಾದ ಕಡೆ ಹಸಿವಿನಿಂದ ಮಕ್ಕಳು ನರಳುತ್ತಿದ್ದು, ಆ ಮಕ್ಕಳ ಹಸಿವನ್ನು ನಿಯಂತ್ರಿಸಲು 'Christian Children Fund' ಎನ್ನುವ ಸಂಸ್ಥೆ ಸ್ಥಾಪಿಸಿದರು. ಈ ಮೇಲ್ಕಂಡ ಯಾವುದೇ ದೇಶದ ಮಕ್ಕಳಿಗೆ ತಿಂಗಳಿಗೆ ಹತ್ತು ಡಾಲರ್ ಕೊಟ್ಟು ಒಂದು ಮಗುವನ್ನು ದತ್ತು ತೆಗೆದುಕೊಳ್ಳಬಹುದೆಂದು ಹಸಿದ ಹೊಟ್ಟೆಗೆ ಅನ್ನ ನೀಡುವುದು, ತಾತ್ಕಲಿಕವಾಗಿ ನೆರವಾಗುವುದು ಮಾನವ ಧರ್ಮ ಅದು ಭಿಕ್ಷೆಯಲ್ಲ ಎಂದು ವಾದಿಸುವುದು. ಇದಕ್ಕೆ ಉತ್ತರವಾಗಿ ನಿರಂಜನರವರು ಹಸಿದವರಿಗೆ ರೊಟ್ಟಿ ಕೊಟ್ಟವರೆಲ್ಲಾ ಮಾನವರೆಂದು ನಾನು ಭಾವಿಸುವುದಿಲ್ಲ. ಹತ್ತು ಡಾಲರ್ ಕೊಟ್ಟು ಒಂದು ಮಗುವನ್ನು ತಾನು ದತ್ತು ಪಡೆದೆ ಎಂದು ಮಾನವೀಯತೆಯನ್ನು ಪ್ರದರ್ಶಿಸಬೇಕೆ? ಯಾವ ದೇಶದಲ್ಲೂ, ಯಾವ ಕಾಲದಲ್ಲೂ ಹಸಿದ ಮಗು ಇರದಂತೆ ಮಾಡುವುದು ಸಾಧ್ಯವಿಲ್ಲವೇ? ಎಂದು ಪ್ರಶ್ನಿಸುತ್ತಾರೆ. ಮತದ ಹೆಸರಿನಲ್ಲಿ, ದಾನ ಧರ್ಮದ ಹೆಸರಿನಲ್ಲಿ, ಪರೋಕ್ಷವಾದ ರೀತಿಯಲ್ಲಿ ನಡೆಯುವ ಅನ್ಯಾಯದ ಸಮರ್ಥನೆಯನ್ನು

ಸಹಿಸಲು ಸಾಧ್ಯವಿಲ್ಲವೆಂದು, ಹಸಿವನ್ನು ಸಮರ್ಥಿಸುವ ಈ ರೀತಿಯ ದತ್ತನ್ನು ಸ್ವೀಕರಿಸುವುದನ್ನು ನಿರಂಜನರು ಖಂಡಿಸುತ್ತಾರೆ. ಹಸಿವನ್ನು ಶಾಶ್ವತವಾಗಿ ಪ್ರಪಂಚದಿಂದ ದೂರ ಮಾಡಬೇಕೇ ಹೊರತು ಅದನ್ನು ಪೋಷಿಸುವುದಲ್ಲ ಎಂಬುದು ನಿರಂಜನರವರ ತಾತ್ವಿಕತೆಯಾಗಿದೆ.

'ಮೊದಲ ಮುದ್ರಣ ೧,೫೦,೦೦೦ ಪ್ರತಿಗಳು' ಎಂಬ ಲೇಖನದಲ್ಲಿ ಕೃಷ್ಣನ್ ಚಂದರ್ ಬರೆದ 'ಪರಾಜಯ' ಕಾದಂಬರಿ ಅದನ್ನು ಕನ್ನಡಕ್ಕೆ ಎಚ್.ಎಸ್. ಪಾರ್ವತಿಯವರು ಅನುವಾದಿಸಿದರು. 'The Flame and the Flower (ಜ್ವಾಲಾ ಕುಸುಮ)' ಈ ಕೃತಿ ರಷ್ಯನ್ ಆವೃತ್ತಿಯಲ್ಲಿ ಒಂದು ಲಕ್ಷದ ಐವತ್ತುಸಾವಿರ ಪ್ರತಿಗಳು ಮುದ್ರಿಸಿದೆ. ನಮ್ಮ ದೇಶದ ಉತ್ತಮ ಸಾಹಿತ್ಯ ಕೃತಿಗೆ ರಷ್ಯಾದಲ್ಲಿ ಯಾವ ರೀತಿಯ ಪ್ರಕಟಣೆ ಇದೆ ಎಂಬುದನ್ನು ಇದರಿಂದ ತಿಳಿಯಬಹುದಾಗಿದೆ. ಆದರೆ ಕನ್ನಡದಲ್ಲಿ ಸಾವಿರ ಪ್ರತಿಗಳು ಪ್ರಕಟಣೆ ಪಡೆದರೆ ಅದೇ ಹೆಚ್ಚೆನ್ನಬಹುದೆನೋ ಎಂಬ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಪುಸ್ತಕ ಪ್ರಕಟಣೆ ಮತ್ತು ಸಾಹಿತ್ಯದ ಓದುಗರ ನಿರ್ಲಕ್ಷದ ಬಗ್ಗೆ ತಿಳಿಸುತ್ತಾರೆ. ಸಾಹಿತ್ಯ, ಸಾಹಿತಿ, ಪುಸ್ತಕ ಪ್ರಕಟಣೆ ಲಾಭ, ಜ್ಞಾನವೃದ್ಧಿ ಇವೆಲ್ಲಾ ಮಾಡಬೇಕಾದರೆ ಮೊದಲು ಅಕ್ಷರ ಸಂಖ್ಯೆಯನ್ನು ಹೆಚ್ಚು ಮಾಡಬೇಕೆಂದು ಬೌದ್ಧಿಕ ಹಸಿವು ಹೊಗೆ ಹಾಡುವಂತೆ ಮಾಡಬೇಕೆಂದು ಮೊದಲು ವಿದ್ಯೆ, ಸಂಸ್ಕೃತಿಗೆ ಸಂಬಂಧಿಸಿದ ಪ್ರಶ್ನೆ ಬಗೆಹರಿಯುವುದಕ್ಕಿಂತ ಮುಂಚಿತವಾಗಿ ಜನತೆಯಲ್ಲಿರುವ ಹೊಟ್ಟೆಬಟ್ಟೆಯ ಪ್ರಶ್ನೆ, ಜೀವನ ಪ್ರಶ್ನೆಗೆ ಮೊದಲು ಉತ್ತರ ದೊರಕಬೇಕೆಂದು ತಮ್ಮ ತಾತ್ವಿಕತೆಯನ್ನು ಮಂಡಿಸುತ್ತಾರೆ.

'ಕಾರ್ಮಿಕ ಸಾಹಿತಿ ವಿ. ಮಾದಯ್ಯ' ಎಂಬ ಲೇಖನದಲ್ಲಿ ಬಿನ್ನಿ ಮಿಲ್ಲಿನ ಕಾರ್ಮಿಕ ವಿ. ಮಾದಯ್ಯ 'ಕವಿ ಕಂಡ ಶಿಲೆ' ಎಂಬ ಕತೆಯನ್ನು ಬರೆದರು. ಆತ ಅನುಭವದಿಂದ ತನ್ನ ಜೀವನದಲ್ಲಿ ಕಂಡ ವಿಚಾರಗಳೇ ಸಾಹಿತ್ಯದ ವಸ್ತುವಾಗಿದೆ. ಈ ರೀತಿಯಲ್ಲಿ ಜೀವನವು ಸಾಹಿತ್ಯದಲ್ಲಿ ಒಡಮೂಡಬೇಕೆಂದು ಅಂತವರಿಗೆ ಅವಕಾಶ ದೊರಕಿಸಬೇಕೆಂದು, ಸಾಹಿತ್ಯದ ವಸ್ತುವಿನಲ್ಲಿ ಅನುಭವದ ಪಾತ್ರ ಹಿರಿದಾಗಿದೆ ಎಂಬುದನ್ನು ಮಾದಯ್ಯನವರ ಬರವಣಿಗೆ ಹಿನ್ನಲೆಯಲ್ಲಿ ತಿಳಿಯಬಹುದು ಎಂದು ವಿಶ್ಲೇಷಿಸುತ್ತಾರೆ.

'ಜನವರಿ ೨೬' ಎಂಬ ಲೇಖನದಲ್ಲಿ ಆಗಸ್ಟ್ ೧೫, ೧೯೪೭ ಸ್ವಾತಂತ್ರ ದಿನವೆಂದು ಆಚರಿಸಿದರೂ ನಿಜವಾದ ಸ್ವಾತಂತ್ರ್ಯ ದಿನ ಜನವರಿ ೨೬, ೧೯೫೦ರಂದು ಜನತೆಯ ಸಂವಿಧಾನ ರಚನೆಗೊಂಡ ದಿನ ನಿಜವಾದ ಸ್ವಾತಂತ್ರ್ಯ ದಿನ. ೧೯೪೭ ಆಗಸ್ಟ್ ೧೫ ರಂದು ಬ್ರಿಟಿಷ್ ಆಡಳಿತ ಕಾಂಗ್ರೇಸ್ ಪಕ್ಷಕ್ಕೆ ಒಪ್ಪಿಸಿದ ಸ್ವಾತಂತ್ರ್ಯ ದಿನವೆಂದು, ಜನವರಿ ೨೬ ಶಾಸನದ ಪ್ರಕಾರ ಪ್ರಜಾರಾಜ್ಯವಾದರೂ ವಾಸ್ತವವಾಗಿ ಪೂರ್ಣ ಸ್ವಾತಂತ್ರ್ಯ ದಿನವು ಅದೇ ಆಗಿದೆ ಎಂಬಲ್ಲಿ, ಆಗಸ್ಟ್ ೧೫, ೧೯೪೭ರಂದು ಸ್ವಾತಂತ್ರ್ಯ ಲಭಿಸಿದರು, ಬ್ರಿಟಿಷ್ ಆಡಳಿತವೇ ಮೇಲ್ವಿಚಾರಣೆ ವಹಿಸಿದ್ದು, ಸಂವಿಧಾನ ರಚನೆಗೊಂಡಿರಲಿಲ್ಲ, ಸಂಸ್ಥಾನಗಳು ಒಂದುಗೂಡಿರಲಿಲ್ಲ. ಹಾಗಾಗಿ ನಿರಂಜನರವರು ಜನವರಿ ೨೬, ೧೯೫೦ರಂದೇ ಸ್ವಾತಂತ್ರ್ಯ ದಿನವೆಂದು ಸ್ವಾತಂತ್ರ್ಯ ದಿನಕ್ಕೆ ಭಿನ್ನವಾದ ತಾತ್ವಿಕತೆಯನ್ನು ಮಂಡಿಸುತ್ತಾರೆ.

'ಕರ್ನಾಟಕ ವಿಶ್ವವಿದ್ಯಾಲಯ ಮುದ್ರೆ' ಎಂಬ ಲೇಖನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಆರಂಭಗೊಂಡಾಗ ಒಂದು ನೇಮಿಸಿದ ಸಮಿತಿಯೆ ಲಾಂಛನವನ್ನು, ಮುದ್ರೆಯನ್ನು ಆಯ್ಕೆ

ಮಾಡುವುದು ಸರಿಯಾದ ಕ್ರಮವಲ್ಲ. ಜನರನ್ನು ಕೇಳಬೇಕು ಮತ್ತು ಅವರಿಂದ ಏನು ಸಲಹೆ ಬರುತ್ತದೆಯೋ ಅದನ್ನು ಸಮಿತಿಯವರು ಸಮಾಲೋಚಿಸಿ ತೀರ್ಪು ನೀಡಬೇಕು ಎಂದು ಪ್ರಜಾಪ್ರಭುತ್ವ ಮಾದರಿಯ ದೃಷ್ಟಿಕೋನದ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ. ಆದರೆ ಇಂದು ಅನೇಕ ಸಮಿತಿಗಳು ಯಾವುದೇ ರೀತಿಯಲ್ಲಿ ಜನತೆಯಿಂದ ಮನವಿಯನ್ನು, ಸಲಹೆಯನ್ನು ಸ್ವೀಕರಿಸದೆ ಏಕ ನಿರ್ಧಾರವನ್ನು ತೆಗೆದುಕೊಂಡು ಸರ್ಕಾರಕ್ಕೆ ವರದಿಯನ್ನು ನೀಡುತ್ತವೆ. ಈ ರೀತಿಯ ಧೋರಣೆಗಳು ಸರ್ವಾಧಿಕಾರಿ ಮನೋಭಾವನೆಯನ್ನು ತೋರಿಸುತ್ತವೆಯೇ ಹೊರತು ಪ್ರಜಾಪ್ರಭುತ್ವದ ಮನಃಸ್ಥಿತಿಯನ್ನಲ್ಲ.

'ಮುದ್ದಣ ಸ್ಮರಣೆ' ಎಂಬ ಲೇಖನದಲ್ಲಿ ೧೮೭೦ ಜನವರಿ ೨೪ರಂದು ಮುದ್ದಣ ಕರ್ನಾಟಕದ ಪಶ್ಚಿಮ ತೀರದ ನಂದಳಿಕೆಯಲ್ಲಿ ಜನಿಸಿದನು. ರಾಮಾಶ್ವಮೇಧ, ಅದ್ಭುತ ರಾಮಾಯಣ, ರಾಮ ಪಟ್ಟಾಭಿಷೇಕ, ಯಕ್ಷಗಾನ ಕೃತಿಗಳು ನೀಡಿದ್ದು ಇಂದು ಆತನ ಸಾಹಿತ್ಯ ಕೃತಿಗಳ ಚರ್ಚೆಯ ಮೂಲಕ ಮುಂದಿನ ಪೀಳಿಗೆಯವರಿಗೆ ಕನ್ನಡ ಸಾಹಿತ್ಯದ ಪರಿಚಯವನ್ನು ಮಾಡಿಕೊಡಬೇಕೆಂದು ತಿಳಿಸುತ್ತಾರೆ. ಆ ನಿಟ್ಟಿನಲ್ಲಿ ಸಾಹಿತ್ಯ ಪರಿಷತ್ತು ಕಾರ್ಯ ಪ್ರವೃತ್ತರಾಗಬೇಕೆಂದು ಸಾಹಿತ್ಯ ಪರಿಷತ್‌ನ ಕಾರ್ಯವನ್ನು ತಿಳಿಸುತ್ತಾರೆ. 'ಮೈಸೂರು ಮತ್ತು ಏಕೀಕರಣ' ಎಂಬ ಲೇಖನದಲ್ಲಿ ಮೈಸೂರಿಗರಿಗೆ ಕರ್ನಾಟಕ ಏಕೀಕರಣದ ಆಸಕ್ತಿ ಇಲ್ಲದೆ ಇರುವುದು ಪ್ರಾಂತ ರಚನೆಯಿಂದ ತಮ್ಮ ಅಧಿಕಾರ ಕಳೆದುಕೊಳ್ಳುತ್ತೇವೆ ಎಂಬ ಭಾವನೆ ಸರಿಯಾದುದ್ದಲ್ಲ ಎಂದು ನಿರಂಜನರವರು ವಿವರಿಸುತ್ತಾರೆ.

'ಕಣ್ಮರೆಯಾದ ಹಿರಿಯ ಜೀವ ಸ್ಟಾಲಿನ್' ಎಂಬ ಲೇಖನದಲ್ಲಿ ರಷ್ಯಾದ ಕಮ್ಯುನಿಸ್ಟ್ ನಾಯಕ ಸ್ಟಾಲಿನ್ ಮರಣಿಸಿದಾಗ ಇಂಗ್ಲೆಂಡ್ ಪತ್ರಿಕೆಯಲ್ಲಿ ಸ್ಟಾಲಿನ್ ಹೀಗಾಗಲೇ ಸತ್ತಿರಬೇಕೆಂದು, ಅಮೇರಿಕಾ ಅಧ್ಯಕ್ಷ ಐಸನ್ ಹೋವರ್ ರವರು ಸ್ಟಾಲಿನ್‌ನ ಉತ್ತರಾಧಿಕಾರಿಯವರ ಜೊತೆ ಮಾತನಾಡಲು ಸಿದ್ಧ ಎಂದರು. ಪ್ರಪಂಚದ ಇತರ ದೇಶಗಳು ವಿಶ್ವದ ಮಹಾನ್ ನಾಯಕ ಮರಣಿಸಿದಾಗ ಹೇಗೆಲ್ಲಾ ವ್ಯಂಗ್ಯವಾಗಿ ಮಾತನಾಡಿದರೆಂದು, ಯಾವುದೇ ವ್ಯಕ್ತಿಯ ವಿಚಾರಗಳನ್ನು ದ್ವೇಷಿಸಬೇಕೇ ಹೊರತು ವ್ಯಕ್ತಿಗಳನ್ನಲ್ಲ ಎಂಬ ತಾತ್ವಿಕತೆ ನಿರಂಜನರವರದು.

'ಅಸ್ತಮಿಸಿದ ತಾರೆ ಹಿರಣ್ಣಯ್ಯ' ಎಂಬ ಲೇಖನದಲ್ಲಿ ಹಿರಣ್ಣಯ್ಯರವರು ಮಡಿಕೇರಿಯಲ್ಲಿ 'ಬ್ಲಾಕ್ ಮಾರ್ಕೆಟ್' ನಾಟಕ ನಡೆಯುವ ಸಂದರ್ಭದಲ್ಲಿ ಸಾವನ್ನಪ್ಪಿದ ಸಂದರ್ಭದಲ್ಲಿ ನೀಡುವ ವ್ಯಕ್ತಿ ಚಿತ್ರಣವಾಗಿದೆ. 'ಕಲಾವಿದರಿಗೆ ಅವಮಾನ' ಲೇಖನದಲ್ಲಿ ರಾಮನವಮಿ ಉತ್ಸವದ ಸಂದರ್ಭದಲ್ಲಿ ಚಾಮರಾಜ ಪೇಟೆಯಲ್ಲಿ ನಡೆದ ಸಮಾರಂಭದಲ್ಲಿ ಕೊಳಲು ವಾದಕ ಮಹಾಲಿಂಗಂ, ಪಿಟೀಲು ವಾದಕ ಕೇಶವಮೂರ್ತಿ ಒಬ್ಬರನ್ನೊಬ್ಬರು ಜಗಳಮಾಡಿದ್ದು, ಮಡಿಕೇರಿಯಲ್ಲಿ ನಡೆದ 'ಇಳಂದ ಕಾದಲ್' ಎಂಬ ತಮಿಳು ನಾಟಕದಲ್ಲಿ ಎನ್.ಎಸ್. ಕೃಷ್ಣನ್ ಮತ್ತು ಬಿ.ಎ. ಮಧುರಂರವರನ್ನು ಒಬ್ಬರನ್ನೊಬ್ಬರು ಅವಮಾನಿಸಿಕೊಂಡಿದ್ದು ಸರಿಯಲ್ಲವೆಂದು ಈ ರೀತಿ ಕಲಾವಿದರನ್ನು ಅವಮಾನಿಸುವುದು ಸಂಸ್ಕೃತಿಯ ಗುರುತಲ್ಲ ಎಂಬ ತಾತ್ವಿಕತೆ ನಿರಂಜನರವರದು.

'ಉತ್ತರದ ಉಸ್ತಾದ್ ಬಿಸ್‌ಮಿಲ್ಲಾ ಖಾನ್' ಎಂಬ ಲೇಖನದಲ್ಲಿ ಷಹನಾಯ ವಾದಕ ಮುಸ್ಲಿಂನಾದರೂ ಪ್ರತಿಭಾವಂತ ಕಲಾವಿದನಾಗಿ ಬಿಸ್‌ಮಿಲ್ಲಾ ಖಾನ್‌ರವರನ್ನು, 'ತಪ್ಪುಗ್ರಹಿಕೆ' ಎಂಬ ಲೇಖನದಲ್ಲಿ ಹಿರಣ್ಣಯ್ಯನವರು ಮಡಿಕೇರಿಯಲ್ಲಿ ಸಾವನ್ನಪ್ಪಿದಾಗ ಪತ್ರಿಕೆಯಲ್ಲಿ ಆ ವಿಚಾರಗಳು ಭಿನ್ನಭಿನ್ನವಾಗಿ ಪ್ರಕಟವಾದದ್ದು ಪತ್ರಿಕೆಗಳ ತಪ್ಪು ಗ್ರಹಿಕೆಯಿಂದ ಎಂದು 'ಮೂರು ಕಾಸಿನ ಪತ್ರಿಕೆಗಳು'

ಎಂಬ ಲೇಖನದಲ್ಲಿ ಚರ್ಚಿಸುತ್ತಾರೆ. ಕರ್ನಾಟಕದ ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ ಮೊದಲಾದ ಕಡೆ ಹತ್ತು ಹಲವು ಪತ್ರಿಕೆಗಳು ಪ್ರಕಟವಾಗುತ್ತಿದ್ದು, ಮುಂದೊಂದು ದಿನ ಕರ್ನಾಟಕ ಪ್ರಾಂತ್ಯ ರಚನೆಯಾದ ಮೇಲೆ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದಂತೆ ಹತ್ತು ಹಲವು ಪತ್ರಿಕೆಗಳು ಅವ್ಯವಸ್ಥಿತವಾಗಿ ಬರುವುದೆಂದು ಸಂಶಯ ವ್ಯಕ್ತ ಪಡಿಸುತ್ತಾರೆ. 'ಆಗಸ್ಟ್ ಒಂಭತ್ತು' ಎಂಬ ಲೇಖನದಲ್ಲಿ ೧೯೪೭ರ ಆಗಸ್ಟ್ ೯ರ ಮಾಡು ಇಲ್ಲವೇ ಮಡಿ ಹೋರಾಟದ ಕುರಿತ ಲೇಖನವಾಗಿದೆ. ಹೀಗೆ ಭಿನ್ನ ಭಿನ್ನವಾದ ವಿಚಾರಗಳಲ್ಲಿ ತಮ್ಮದೇಯಾದ ತಾತ್ವಿಕತೆಯನ್ನು ನಿರಂಜನರು ಪ್ರತಿಪಾದಿಸುತ್ತಾರೆ.

ಪುಷ್ಪಹಾರ – ೧೯೫೭

ಸಾಧನ ಸಂಚಯದ ರೀತಿಯಲ್ಲಿಯೇ 'ಜನಪ್ರಗತಿ' ಎಂಬ ಸಾಪ್ತಾಹಿಕ ಪತ್ರಿಕೆಯಲ್ಲಿ ನಾಲ್ಕೈದು ವರ್ಷಗಳ ಕಾಲ ಪ್ರತಿವಾರವು ಬರೆದ 'ಸಾಧನ ಸಂಚಯ' ಶೀರ್ಷಿಕೆಯಲ್ಲಿ ಬರೆದ ಓಲೆಗಳು. ಪ್ರೇಯಸಿಗೆಂದೇ ಬರೆದ ಓಲೆಗಳು ಅದನ್ನು ಸಾಧನಾ ಎಂಬ ಹೆಸರಿನಿಂದ ೧೯೫೬ರಲ್ಲಿ ಪ್ರಕಟಿಸಿದರು. ಇದೇ ಮಾದರಿಯಲ್ಲಿ ಮತ್ತೊಂದು ಪತ್ರಗಳ ಸಂಕಲನ ಕೃತಿ ಪುಷ್ಪಹಾರ. ಈ ಕೃತಿಯನ್ನು ೧೯೫೭ರಲ್ಲಿ ಪ್ರಕಟಪಡಿಸಿದರು. ಸಾಧನ ಪತ್ರ ಸಂಕಲನಕ್ಕೂ ಪುಷ್ಪಹಾರ ಪತ್ರ ಸಂಕಲನಕ್ಕೂ ಇರುವ ವ್ಯತ್ಯಾಸವೆಂದರೆ, ಪತ್ರದ ದಿನಾಂಕ ಸ್ಥಳದ ಹೆಸರನ್ನು ಪುಷ್ಪಹಾರದಲ್ಲಿ ನೀಡದೆ ನೇರವಾಗಿ ಶೀರ್ಷಿಕೆಯೊಂದಿಗೆ ತಮ್ಮ ವಿಚಾರಗಳನ್ನು ಪ್ರೇಯಸಿಯೊಂದಿಗೆ ಹಂಚಿಕೊಳ್ಳುವ ಬಗೆ ಒಂದು ವಿನೂತವಾದುದು ಆಗಿದೆ.

ರಾಮದಾಸರ 'ರಾಗರೂಪಸಿ' ಎಂಬ ಪತ್ರದಲ್ಲಿ ಹೇಮದಳ ಎಂಬ ಹಳ್ಳಿಯ ರಾಮದಾಸರು ಬರೆದ ವಚನಗಳ ಸಂಕಲನ ಗ್ರಂಥ. ಈ ಸಂಕಲನ ಗ್ರಂಥದಲ್ಲಿ ಪದ್ಯಗಳ ಸಾಲುಗಳ ಮೂಲಕ ಪ್ರೇಯಸಿಗೆ ಪ್ರಿಯಕರ ಹೇಳುವ ಒಲವಿನ ಮಾತುಗಳು, ಕನ್ನಡ ಓದುಗನಿಗೆ ಕೃತಿಯನ್ನು ಪರಿಚಯಿಸುವುದರೊಂದಿಗೆ ಪುಸ್ತಕ ಓದಲು ಹೇಳುವುದು, ಸಾಹಿತ್ಯಸಕ್ತರು ಹೆಚ್ಚು ಬೆಳೆಯಲಿ ಎಂಬ ದೃಷ್ಟಿಯಿದೆ.

'ಕಾರಂತರ ದೃಷ್ಟಿಯಲ್ಲಿ ಕನ್ನಡ ಸಾಹಿತ್ಯ' ಎಂಬ ಪತ್ರದಲ್ಲಿ ಶಿವರಾಮ ಕಾರಂತರು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ 'ಇಲ್ಲಸ್ಟ್ರೇಟೆಡ್ ವೀಕ್ಲಿ' ಪತ್ರಿಕೆಗೆ ಪ್ರಾಚೀನ ಕನ್ನಡ ಸಾಹಿತ್ಯವು ಮತಧರ್ಮದೊಡನೆ ಬೆರೆಸಿ ಬೆಳೆಸಿದರು. ಆದರೆ ೧೯೪೦ರ ಪ್ರಗತಿಶೀಲ ಕಾಲಘಟ್ಟದ ಲೇಖಕರು ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳನ್ನು ಪ್ರಚಾರ ಮಾಡುತ್ತಿದ್ದಾರೆ. ಈ ಲೇಖಕರ ಉದ್ದೇಶ ಕಲೆಯಾಗಿ ತೋರುವುದಿಲ್ಲ ಪ್ರಚಾರವಾಗಿದೆಯೆಂದು, ಖಡ್ಗದಿಂದ ಸಾಧಿಸಲಾಗದಿದ್ದನ್ನು ಲೇಖನಿಯಿಂದ ಸಾಧಿಸಲು ಹೊರಟಿದ್ದಾರೆ ಎಂದು ಪ್ರಗತಿಶೀಲ ಕಾಲಘಟ್ಟದ ಸಾಹಿತ್ಯವನ್ನು ಅದರ ಧೋರಣೆಯನ್ನು ಚರ್ಚಿಸುತ್ತಾರೆ. ಈ ವಿಚಾರಕ್ಕೆ ನಿರಂಜನರವರು ಈ ಲೇಖನ ನಿರಂತರತೆಯನ್ನು ಕಾಣದೇ ಅಪೂರ್ಣವಾಗಿದೆ. ವೇಶ್ಯೆ ಸಮಸ್ಯೆಯೆಂಬುದು ಸಮಾಜದ ಬಹುಮುಖ್ಯ ಸಮಸ್ಯೆಗಳಲ್ಲಿ ಒಂದಾಗಿದ್ದು, ಇದನ್ನು ಕುರಿತು ಸ್ವತಃ ಕಾರಂತರೇ 'ಸೂಳೆಯ ಸಂಸಾರ' ಎಂಬ ಕಾದಂಬರಿ ಬರೆದಿದ್ದಾರೆ. ಇತರರು ಕೂಡಾ ವೇಶ್ಯಾ ಸಮಸ್ಯೆಗೆ ಸಂಬಂಧಿಸಿದಂತೆ ಉತ್ತಮ ಕಾದಂಬರಿಯನ್ನು ಬರೆಯಲು ಸಾಧ್ಯವಿದೆ ಎಂದು ಕಾರಂತರು ಭಾವಿಸಿಲ್ಲ. ಕಾರಂತರು ಪ್ರಗತಿಶೀಲ ಸಾಹಿತ್ಯದಲ್ಲಿ ವೇಶ್ಯಾ ಸಮಸ್ಯೆಯನ್ನು ಪ್ರತಿಬಿಂಬಿಸುವ ಕತೆ ಕಾದಂಬರಿಗಳನ್ನು ಕಾಮ ಪ್ರಚೋದನೆಯನ್ನು ಪ್ರಗತಿವಾದದ

ಮುಖವಾಡ ಧರಿಸಿ ತಲೆಯೆತ್ತಿರುವುದನ್ನು ಖಂಡಿಸುವ ಕಾರಂತರು, ಕನ್ನಡದಲ್ಲಿ ವೇಶ್ಯಾ ಸಮಸ್ಯೆ ಎಂಬುದು ಕಾಮಪ್ರಚೋದನೆಗಾಗಿ ಮತ್ತು ಸಾಮಾಜಿಕ ಸಮಸ್ಯೆಯಾಗಿ ಚಿತ್ರಿಸಿರುವುದನ್ನು ಅವರು ಗಮನಿಸಿಲ್ಲವೆಂದು ಪ್ರಗತಿಶೀಲ ಸಾಹಿತ್ಯದ ಗುರಿ ಉದ್ದೇಶಗಳಿಗೆ ಅನುಗುಣವಾಗಿ ವಿಮರ್ಶಾತ್ಮಕವಾಗಿ ನಿರಂಜನರು ಪ್ರತಿಕ್ರಿಯಿಸುತ್ತಾರೆ.

ಕವಿ ಎಕ್ಕುಂಡಿಯವರ 'ಸಂತಾನ' ಎಂಬ ಪತ್ರದಲ್ಲಿ ಸುಬ್ಬಣ್ಣ ರಂಗನಾಥ ಎಕ್ಕುಂಡಿಯವರ ಮೊದಲ ಕವನ ಸಂಕಲನ 'ಸಂತಾನ' ಇದರಲ್ಲಿರುವ ಆಧ್ಯಾತ್ಮವಾದ ಮತ್ತು ವಾಸ್ತವವಾದದ ಎರಡು ದೋಣಿಗಳ ಮೇಲೆ ಕಾಲಿಟ್ಟ ಕವಿಗಳನ್ನು ವಿಮರ್ಶಿಸಿ ಸಾಹಿತಿಯಾದವನು ಯಾವುದಾದರೂ ಒಂದು ವಾದಕ್ಕೆ ಅಥವಾ ಸಿದ್ಧಾಂತಕ್ಕೆ ಒಳಗಾಗಬೇಕು. ಇಲ್ಲವಾದರೆ ಆಧ್ಯಾತ್ಮವಾದ ಮತ್ತು ವಾಸ್ತವಾವಾದಗಳಿಗೆರಡಕ್ಕೂ ಅವಕಾಶ ನೀಡಿದರೆ ಸಾಹಿತಿಯ ವಾದಗಳಿಗೆ ಸ್ಪಷ್ಟತೆ ಇರುವುದಿಲ್ಲ. ಮೊದಲು ಆತ ಜನತೆಗೆ ಯಾವ ವಾದವನ್ನು ಮುಂದೆ ಇಡುತ್ತಿದ್ದಾನೆ ಎಂಬುದು ಓದುಗನಿಗೆ ಗೊಂದಲವನ್ನುಂಟು ಮಾಡುತ್ತದೆ. ಹಾಗಾಗಿ ಸಾಹಿತಿಯ ವಾದಗಳು ಅಥವಾ ಸಿದ್ಧಾಂತಗಳು ಸಾಹಿತ್ಯದಲ್ಲಿ ಸ್ಪಷ್ಟವಾಗಿರಬೇಕು ಎಂಬುದನ್ನು ಸೂಚಿಸುತ್ತಾರೆ.

'ಕನ್ನಡ ರಂಗಭೂಮಿ' ಎಂಬ ಪತ್ರದಲ್ಲಿ ಟಿಪ್ಪು ಪಾತ್ರವನ್ನು ರಂಗಭೂಮಿಯ ಮೇಲೆ ಜೀವಂತವಾಗಿರಿಸಿದ ಹುಲಿಮನೆ ಸೀತರಾಮ ಶಾಸ್ತ್ರಿಯವರ ವ್ಯಕ್ತಿತ್ವ ಚಿತ್ರಣ ನೀಡುವ ಕಾಗದವಾಗಿದೆ. ವರದಾಚಾರ್ಯರ ನಾಟಕಗಳಿಂದ ಪ್ರೇರಿತವಾಗಿ, ಗರುಡ ಸದಾಶಿವರಾಯರಿಂದ ನಾಟ್ಯಕಲೆಯ ಕಲಿಕೆಯ ಜೊತೆಗೆ ನಾಟ್ಯಕಲೆಯು ಕನ್ನಡ ರಂಗಭೂಮಿ ನಾಶಗೊಳ್ಳುತ್ತಿರುವ ಸಂದರ್ಭದಲ್ಲಿ ಕನ್ನಡ ಜನತೆಯ ಸಹಕಾರ ಅವಶ್ಯಕವೆಂದು ತಮ್ಮ ನಿಲುವನ್ನು ಪ್ರಕಟಿಸುತ್ತಾರೆ.

೧೯೪೮ರಲ್ಲಿ ಆಪ್ಟನ್ ಸಿಂಕ್ಲೇರ್ ಎಂಬ ಅಮೇರಿಕಾದ ನಾಟಕಕಾರ ಬರೆದ 'A Giant's Strength' (ದೈತ್ಯಶಕ್ತಿ) ಎಂಬ ನಾಟಕವು ಮೂರು ಅಂಶಗಳಿಂದ ಕೂಡಿದೆ. ೧೯೪೮ರ ದ್ವಿತೀಯ ಮಹಾಯುದ್ಧ ಮುಗಿಯುವ ಸಂದರ್ಭದಲ್ಲಿ, ಯುದ್ಧ ವಿರೋಧಿ ನಿಲುವನ್ನು ಚಿತ್ರಿಸುವ ನಾಟಕ ಇದಾಗಿದ್ದು, ಸಾಮಾನ್ಯ ಜನತೆಗೆ ಬೇಕಾಗಿರುವುದು ಶಾಂತಿ, ಬಂಡವಾಳಗಾರರಿಗೆ ಬೇಕಾಗಿರುವುದು ಯುದ್ಧಕ್ಕೆ ಆಹ್ವಾನ, ಆ ಮೂಲಕ ಲಾಭ ಮಾಡಿಕೊಳ್ಳುವ ಮನಃಸ್ಥಿತಿ ಎಂದು ಅಮೇರಿಕಾದ ಬಂಡವಾಳಗಾರರ ದೃಷ್ಟಿಕೋನವನ್ನು ಚಿತ್ರಿಸುವುದಕ್ಕೆ ಪರಿಚಯವಾಗಿ ವಿಮರ್ಶಿಸುತ್ತಾರೆ. ಅಮೇರಿಕಾದ ಯುದ್ಧದ ತಾತ್ವಿಕ ದೃಷ್ಟಿಕೋನವನ್ನು ತಿಳಿಯಲು ಹಾಗೂ ಆಯಾಯಾ ದೇಶಗಳಲ್ಲಿ ಸಮಕಾಲೀನ ಕಾಲಘಟ್ಟದಲ್ಲಿ ಚಿತ್ರಿತವಾದ ಕತೆ, ಕಾದಂಬರಿ, ನಾಟಕಗಳ ಪರಿಚಯದಿಂದ ಅಲ್ಲಿನ ವಾಸ್ತವ ಚಿತ್ರಣ ತಿಳಿಯಲು ಸಾಧ್ಯ ಎಂಬ ತಾತ್ವಿಕ ಅಂಶ ನಿರಂಜನರವರದು.

'ಬದಲಾವಣೆಯ ಒಂದು ಮುಖ' ಎಂಬ ಪತ್ರದಲ್ಲಿ ಬಳ್ಳಾರಿ ಪ್ರಾಂತ್ಯವು ಮೈಸೂರು ರಾಜ್ಯದ ಜೊತೆಗೆ ಸೇರಿದ ಸಂದರ್ಭವನ್ನು, ಕನ್ನಡಿಗರು ತಾವು ವಾಸವಾಗಿರುವ ಸಣ್ಣ ಪ್ರದೇಶವೇ ಕನ್ನಡನಾಡು ಎಂದು ತಿಳಿದರೆ ಅದು ಜನತೆಯ ತಪ್ಪಲ್ಲ ರಾಜ್ಯ ವ್ಯವಸ್ಥೆಯ ತಪ್ಪಾಗಿ ಗುರುತಿಸುತ್ತಾರೆ. ಚೀನಿ. ಬರಹಗಾರ್ತಿ ಟಂಗ್‌ಲಿಂಗ್ ರವರ ಕೃತಿ 'ಸಾನ್‌ಕಾಂಗ್ ನದಿಯ ಮೇಲೆ ಸೂರ್ಯ' ಕೃತಿಯನ್ನು ವಿಮರ್ಶಿಸುವುದಕ್ಕಿಂತ ನಲ್ವತ್ತಾರು ವಯಸ್ಸಿನ ಈಕೆ ಚೈನಾದ ಹುನಾನ್ ಪ್ರಾಂತ್ಯದಲ್ಲಿ ಬಡ ರೈತನ ಕೂಲಿಗಾರರ ಶೋಷಣೆ ನಡೆದ ಕಾಲಾವಧಿಯಲ್ಲಿ ಹೋರಾಟದ ನಡುವೆ ಬೆಳೆದ ಸಾಹಿತಿಯಾಗಿ

ಮತ್ತು ಹೊಸ ಸಮಾಜದ ನಿರ್ಮಾಣದ ಪ್ರಯಾಣದಲ್ಲಿ ನಡೆದವರಾಗಿ ಅವರನ್ನು ಪರಿಚಯಾತ್ಮಕವಾಗಿ ವಿವರಿಸುತ್ತಾರೆ.

'ಪಂಜೆಯವರ ನೆನಪು' ಎಂಬಲ್ಲಿ ಕನ್ನಡ ಸಾಹಿತ್ಯಕ್ಕೆ ಪಂಜೆ ಮಂಗೇಶರಾಯರು ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಸಾಹಿತಿಯ ಬಗ್ಗೆ ಕನ್ನಡಿಗರಿಗೆ ಅನಾದರ ಮನಃಸ್ಥಿತಿಯಿದ್ದು, ಇಂಥವರು ಮರಣಿಸಿದಾಗಲೂ ಯಾವುದೇ ಪ್ರತಿಕ್ರಿಯೆ ನೀಡದೆ, ಸತ್ತವರಿಗಾಗಿ ಸ್ಮಾರಕ ಕಟ್ಟುವ ಮಾತನಾಡುತ್ತಾರೆ ಹೊರತು ಗೌರವವನ್ನು ತೋರಿಸುವುದಿಲ್ಲವೆಂದು, ಸಾಹಿತಿಯಾಗಿ ಮಾತ್ರವಲ್ಲದೆ ಉಪಧ್ಯಾಯರಾಗಿ, ಶಿಕ್ಷಕರಿಗೆ ಆತ್ಮವಿಶ್ವಾಸವನ್ನು ಬೆಳೆಸಿ ಮುಂದಿನ ಜನಾಂಗವನ್ನು ಅಭಿವೃದ್ಧಿಗೊಳಿಸುವಲ್ಲಿ ಶಿಕ್ಷಕರ ಪಾತ್ರವನ್ನು ತಿಳಿಸಿದವರಾಗಿ ನೋಡುತ್ತಾರೆ. ಈ ಕಾಗದದಲ್ಲಿ ನಿರಂಜನರು ಪಂಜೆಯವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ, ಶಿಕ್ಷಕ ವೃತ್ತಿಯವರಿಗೆ ನೀಡಿದ ಮಾರ್ಗದರ್ಶನ, ಸಾಹಿತಿಗಳ ಬಗ್ಗೆ ಕನ್ನಡಿಗರ ದೃಷ್ಟಿಕೋನ ಮೂರು ವಿಚಾರಗಳನ್ನು ತಾತ್ವಿಕರಿಸುತ್ತಾರೆ.

'ಕನ್ನಡ ಕಾದಂಬರಿಯ ಹಿರಿಯ ಪರಂಪರೆ' ಎಂಬ ಕಾಗದದಲ್ಲಿ ಕನ್ನಡದ ಮೊದಲ ಕಾದಂಬರಿಯಾದ ಇಂದಿರಾಬಾಯಿಯಿಂದ ಹಿಡಿದು ಪರಿಚಯಾತ್ಮಕವಾಗಿ ವಿವರಿಸಿ ಕನ್ನಡ ಕಾದಂಬರಿಗೆ ಒಂದು ಶತಮಾನದ ಇತಿಹಾಸವಿದೆ, ಈ ಕಾದಂಬರಿಯ ಪರಂಪರೆಯನ್ನು ಬೆಳೆಸುವುದು ಹೊಸ ಪೀಳಿಗೆಯ ಸಾಹಿತಿಗಳ ಮೇಲೆ ಇದೆ. ಜೊತೆಗೆ ಇಂದಿರಾಬಾಯಿ, ವಾಗ್ದೇವಿ, ಮಾಡಿದ್ದುಣ್ಣೋ ಮಾರಾಯ ಕಾದಂಬರಿಗಳು ಆ ಕಾಲಘಟ್ಟದ ಸಾಮಾಜಿಕ ಸಮಸ್ಯೆಗಳನ್ನು ವಾಸ್ತವವಾದ ಹಿನ್ನೆಲೆಯಲ್ಲಿ ಚಿತ್ರಿಸಿ ಸ್ವಾಸ್ಥ್ಯ ಸಮಾಜವನ್ನು ನಿರ್ಮಾಣ ಮಾಡಲು ಈ ಕಾದಂಬರಿ ಪರಂಪರೆ ಭದ್ರವಾದ ಅಡಿಗಲ್ಲು ಹಾಕಿರುವುದನ್ನು ನಿರಂಜನರು ವಿಶ್ಲೇಷಿಸುತ್ತಾರೆ.

'ಅಮರು ಕವಿಯ ಚಿತ್ರಶಾಲೆ' ಎಂಬ ಪತ್ರದಲ್ಲಿ ಅಮರು ಕವಿಯು ಸಂಸ್ಕೃತದಲ್ಲಿ ಬರೆದ ನೂರು ಮುಕ್ತ ಪ್ರೇಮ ಕವಿತೆಗಳ ಸಂಕಲನ ಗ್ರಂಥ 'ಪ್ರೇಮಾರಾಧನ'ವಾಗಿದೆ. ಪ್ರೇಯಸಿಗೆ ವಿವಿಧ ಹೆಸರಿಟ್ಟು ೧೫೦೦ ವರ್ಷಗಳ ಹಿಂದೆ ಬರೆದಿದ್ದ ಅದನ್ನು ಎಸ್.ವಿ. ಪರಮೇಶ್ವರ ಭಟ್ಟರು ಮನ್ನುಕಥನ, ಪ್ರವಾಸ ಕಥನ, ಭೋಗ ಕಥನ ಎಂಬ ಮೂರು ಭಾಗಗಳಲ್ಲಿ ಬರೆದಿದ್ದಾರೆ ಎಂದು ಪರಿಚಯಿಸುತ್ತಾರೆ. 'ಪ್ರಚಂಡ ಆಕಾಶಬಾಣ' ಎಂಬ ಪತ್ರದಲ್ಲಿ ಅಸ್ಕರ್ ವೈಲ್ಡ್ ರವರು ಬರೆದ ಕಥೆಯನ್ನು ಶೀರ್ಷಿಕೆಯ ಹೆಸರಿನಲ್ಲಿಯೇ ಡಿ.ವಿ.ಕೆ. ಮೂರ್ತಿಯವರು ಕನ್ನಡಕ್ಕೆ ಅನುವಾದಿಸಿದವರು ಎಂದು ಪರಿಚಯಾತ್ಮಕವಾಗಿ ತಿಳಿಸುತ್ತಾರೆ.

ಮಕ್ಕಳ ಸಾಹಿತ್ಯ ಅಥವಾ ಶಿಶು ಸಾಹಿತ್ಯದ ತಾತ್ವಿಕತೆಯನ್ನು ನಿರಂಜನರವರು ಮಕ್ಕಳ ಮನಸ್ಸು ಹೂವಿನಂಥದು, ಅದನ್ನು ಘಾಸಿಮಾಡದ ಸ್ವಚ್ಛಂದವಾಗಿ ಅವರಲ್ಲಿನ ಸುಪ್ತಚೇತನಗಳು ಅರಳುವ ಸಾಹಿತ್ಯ ನಿರ್ಮಾಣವಾಗಬೇಕು ಎಂದು 'ಕನ್ನಡದಲ್ಲಿ ಶಿಶುಸಾಹಿತ್ಯ' ಎಂಬ ಪತ್ರದಲ್ಲಿ ಪ್ರತಿಪಾದಿಸುತ್ತಾರೆ. 'ಹೆಣ್ಣು – ಗಂಡು' ಎಂಬ ಪತ್ರದಲ್ಲಿ ಸ್ತ್ರೀಯನ್ನು ಪುರುಷನ ಸರಿಸಮಾನವಾಗಿ ಭಾರತೀಯ ಸಮಾಜವು ಎಂದೂ ಪರಿಗಣಿಸುವುದಿಲ್ಲವೆಂದು, ಸಂವಿಧಾನದಲ್ಲಿ ಸ್ತ್ರೀ ಪುರುಷರಿಬ್ಬರು ಸರಿಸಮಾನವಾಗಿದ್ದರು ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣಿಗೆ ಸಮಾನತೆಯನ್ನು ನೀಡಿಲ್ಲವೆಂದು ತಿಳಿಸುತ್ತಾರೆ. 'ಹಳೆಯ ನೆನಪು' ಎಂಬ ಕಾಗದದಲ್ಲಿ ಬಿ.ಎಂ.ಶ್ರೀಯವರ ಇಂಗ್ಲೀಷ್ ಗೀತೆಗಳ ಕೃತಿಯನ್ನು ಪರಿಚಯಿಸುತ್ತಾರೆ.

‘ಅದ್ಭುತ ಪವಾಡ’ ಎಂಬ ಪತ್ರದಲ್ಲಿ ಮಿ॥ ದಾವುದ್ ಇರಾನಿ ಅಮೇರಿಕಾದ ಎಲಿಸ್ ಪವಾಡದ ಮೂಲಕ ಮನುಷ್ಯನ ಸರ್ವರೋಗವನ್ನು ಹೋಗಲಾಡಿಸುತ್ತೇವೆ ಎಂಬ ಧೋರಣೆಯನ್ನು ವಿರೋಧಿಸುವುದು ಇದು ವಿಜ್ಞಾನಕ್ಕೆ ವಿರೋಧಿಯಾಗಿದೆ. ಈ ರೀತಿಯ ಮೌಢ್ಯದಿಂದ ಮಾನವನ ಆತ್ಮವಿಶ್ವಾಸ ಕುಂಠಿತವಾಗುತ್ತದೆ. ಕುರುಡು ನಂಬಿಕೆಗಳನ್ನು ಹೆಚ್ಚಿಸುತ್ತದೆ. ಬಹಳಮುಖ್ಯವಾಗಿ ನಾಗರೀಕತೆಯ ಮುನ್ನಡೆಗೆ ತಡೆಯಾಗುತ್ತದೆ. ಪವಾಡದಂತ ಅಂಧಾನುಕರಣೆಯನ್ನು ನಿರಂಜನರು ಖಂಡಿಸುತ್ತಾರೆ. ಈ ರೀತಿಯ ಪವಾಡ ಸೃಷ್ಟಿಕರ್ತರ ಹಿಂದೆ ನಮ್ಮ ಜನರ ಅಜ್ಞಾನವನ್ನು ಬಂಡವಾಳವನ್ನಾಗಿ ಮಾಡಿಕೊಳ್ಳುವ, ಮತ ಸಹಿಷ್ಣುತೆಯನ್ನು ಆಧಾರವಾಗಿಟ್ಟುಕೊಂಡು ನಿರ್ದಿಷ್ಟವಾದ ವಿಚಾರ ಸ್ಮರಣೆಗೆ ಅವರ ಮನೋಭಾವನೆಯನ್ನು ರೂಪಿಸಲು ಮಾಡುವ ತಂತ್ರವಾಗಿ ಈ ಪವಾಡಗಳ ಹಿಂದೆ ಇರುವ ವಿಚಾರವನ್ನು ಚರ್ಚಿಸುತ್ತಾರೆ.

‘ಗುರುವಿಗೆ ಬಾಗಿನ’ ಎಂಬ ಪತ್ರದಲ್ಲಿ ಎಸ್.ವಿ. ರಂಗಣ್ಣನವರಿಗೆ ಅವರ ಆತ್ಮೀಯರು, ಸ್ನೇಹಿತರು, ಶಿಷ್ಯರು ಅರ್ಪಿಸಿದ ಅಭಿನಂದನ ಗ್ರಂಥ ಕೃತಿಯನ್ನು ಪರಿಚಯಿಸುವುದಾಗಿದೆ. ‘ನಟಶೇಖರ ಮಧ್ವರಾಜ’ ಎಂಬ ಪತ್ರದಲ್ಲಿ ಮಧ್ವರಾಜ ಉಮರ್ಜಿಯೆಂಬ ಚಿತ್ರಗಾರ, ಸಂಗೀತಗಾರ, ಸಾಹಿತಿಯನ್ನು ಕನ್ನಡನಾಡಿಗೆ ನೀಡಿದ ಕೊಡುಗೆಯನ್ನು ಪರಿಚಯಾತ್ಮಕವಾಗಿ ತಿಳಿಸುತ್ತಾರೆ. ‘ಇವತ್ತು ನಾಳೆಗೋಸ್ಕರ ನಿನ್ನೆಯ ಇತಿಹಾಸ’ ಎಂಬ ಪತ್ರದಲ್ಲಿ ಸ್ವಾತಂತ್ರ್ಯ ಬಂದಿದ್ದರೂ ನಮ್ಮ ಎಷ್ಟು ರಸ್ತೆ, ಆಸ್ಪತ್ರೆ, ವಸ್ತು ಸಂಗ್ರಹಾಲಯಗಳಿಗೆ ಇನ್ನು ವಿದೇಶಿಯರ ಹೆಸರೇ ಇರುವುದು ಸ್ವಾತಂತ್ರ್ಯದ ಬಗ್ಗೆ ನಮಗೆ ಇರುವ ಮನಃಸ್ಥಿತಿಯನ್ನು ತೋರಿಸುತ್ತದೆ. ನಮ್ಮ ನಾಡಿನ ಸ್ವಾತಂತ್ರ್ಯ ವೀರರನ್ನು ಸ್ಮರಿಸಿಕೊಳ್ಳುವಲ್ಲಿ ಬಹಳ ಹಿಂದೆ ಬಿದ್ದಿದ್ದೇವೆ. ಭಾರತೀಯ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ನಿರ್ಲಕ್ಷ್ಯ ಮತ್ತು ತಾತ್ಸಾರವನ್ನು ಭಾರತೀಯರು ಹೊಂದಿರುವ ಮನೋಭಾವನೆಯನ್ನು ತಿಳಿಸುತ್ತಾರೆ.

‘ಪತ್ರಿಕೋದ್ಯಮ ಮೋಡಿ’ ಎಂಬ ಪತ್ರದಲ್ಲಿ ಪತ್ರಿಕೋದ್ಯಮ ಎಂಬುದು ಸೇವೆ ಮತ್ತು ವ್ಯಾಪಾರದ ಮುಖಗಳನ್ನು ಹೊಂದಿದೆ. ಕನ್ನಡ ಪತ್ರಿಕೋದ್ಯಮಕ್ಕೆ ಬಂದು ಸುದೀರ್ಘವಾದ ಇತಿಹಾಸವಿದ್ದು, ಅದು ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದೆ. ಅಂದು ಜನತೆ ಪತ್ರಿಕೆಯನ್ನು ಓದುತ್ತಿದ್ದವರ ಅಳತೆಗೋಲುಗಳಲ್ಲಿ ರಾಷ್ಟ್ರೀಯ ಪತ್ರಿಕೆ ಮತ್ತು ಸರಕಾರ ಪತ್ರಿಕೆ, ಸ್ವಾತಂತ್ರ್ಯ ನಂತರ ಪತ್ರಿಕೋದ್ಯಮ ಎಂಬುದು ಬಂಡವಾಳಗಾರರು ಕೊಳ್ಳೆ ಹೊಡೆದರು. ಆದರ್ಶವಾದಿಯಾಗಿದ್ದ ಸಂಪಾದಕ ಕಾಲಕ್ರಮೇಣ ಯಜಮಾನದ ಧೋರಣೆಗೆ ಅನುಗುಣವಾಗಿ ಪತ್ರಿಕೆಯ ವಿಷಯಗಳನ್ನು ತೀರ್ಮಾನಿಸಲು ಸಿದ್ಧನಾದ. ಮುಂದೆ ಅನೇಕ ರಾಜಕೀಯ ಪಕ್ಷಗಳು ತಮ್ಮದೇ ಆದ ಪತ್ರಿಕೆಯನ್ನು ಆರಂಭಿಸಿದವು. ಅದು ಮುಂದೆ ಆರ್ಥಿಕ ಶಕ್ತಿಗಳ ಮುಖವಾಣಿಯಾಗಿ ಬೆಳೆಯುತ್ತಾ ಅದು ಆಳುವ ವರ್ಗದ ಪರವಾಗಿ ದುಡಿಯಲು ಪ್ರಾರಂಭಿಸಿದವು. ಹಿಂದೆ ಬ್ರಿಟಿಷರು ದೇಶಿಯ ಪತ್ರಿಕೆಗಳನ್ನು ಮಟ್ಟಹಾಕಲು ಕರಾಳ ಶಾಸನವನ್ನು ಜಾರಿಗೆ ತಂದಿದ್ದರು. ಸ್ವಾತಂತ್ರ್ಯ ನಂತರ ಪ್ರಜಾಪ್ರಭುತ್ವದ ಸರಕಾರಗಳು ಕೂಡ ಅದೇ ಶಾಸನವನ್ನು ಪೋಷಿಸಿಕೊಂಡು ಬಂದವು ಎಂಬುದಾಗಿ ನಿರಂಜನರವರು ಪತ್ರಿಕೋದ್ಯಮದ ತಾತ್ವಿಕ ನಿಲುವುಗಳು ಗುರುತಿಸುತ್ತಾರೆ.

ಪತ್ರಿಕೋದ್ಯಮ ಬಂಡವಾಳಗಾರರ ಕೈಗೆ ಸಿಲುಕಿ ಹೇಗೆ ತನ್ನತನವನ್ನು ಕಳೆದುಕೊಂಡಿತೋ ಹಾಗೆ ಪತ್ರಿಕೆ ವೃತ್ತಿಯನ್ನು ಸೇರುವವರ ಸಮಸ್ಯೆಗಳಲ್ಲಿ ಹುತಾತ್ಮನಾಗುವ ಅಪೇಕ್ಷೆ ಇದ್ದರೆ ಈ ವೃತ್ತಿಗೆ ಬರಬೇಕೆಂದು ಅರೆ ಹೊಟ್ಟೆ, ಮಾಸಿದ ಬಟ್ಟೆ ಇವಷ್ಟೇ ಪತ್ರಿಕೋದ್ಯಮದಿಂದ ದೊರೆಯುವ ಫಲ.

ಈವರೆಗೆ ಪತ್ರಿಕೋದ್ಯೋಗಿಗಳಿಗೆ ಯಾವುದೇ ರೀತಿಯ ಶಾಸ್ತ್ರೀಯ ಶಿಕ್ಷಣವಿರಲಿಲ್ಲ. ಪ್ರಾಯೋಗಿಕ ಶಾಲೆಯಲ್ಲಿ ತರಭೇತಿ ಪಡೆದು, ಸಿದ್ಧಾಂತಗಳನ್ನು ಕಲಿತು ಪತ್ರಿಕೋದ್ಯಮಕ್ಕೆ ಬರಬೇಕಾಗಿತ್ತು.

ಇಂದೂ ಪತ್ರಿಕೋದ್ಯವನ್ನು ಪದವಿ ತರಗತಿಗಳಲ್ಲಿಯೇ ಐಚ್ಛಿಕವಾಗಿ ತೆಗೆದುಕೊಂಡು ಓದಿ ಪತ್ರಿಕೋದ್ಯಮಕ್ಕೆ ಬರುವ ಮೊದಲೇ ಸೂಕ್ತ ತರಬೇಕು. ಶಿಕ್ಷಣ ಪಡೆದು, ವರದಿ ಮಾಡುವುದು, ವರದಿ ವಾಚನ, ಮೊದಲಾದವುಗಳನ್ನು ಶಿಕ್ಷಣ ಪಠ್ಯಕ್ರಮದಲ್ಲಿ ಪದವಿಯಿಂದ ಹಿಡಿದು ಸ್ನಾತಕೋತ್ತರ ಪದವಿಯವರೆಗೂ ಆಳವಡಿಸಲಾಗಿದೆ. ಈ ರೀತಿ ಪತ್ರಿಕೋದ್ಯಮವನ್ನು ಅಭ್ಯಾಸ ಮಾಡುವುದನ್ನು ೧೯೫೩ ರಲ್ಲಿಯೇ ನಿರಂಜನರವರು ಸ್ವಾಗತಿಸಿದ್ದಾರೆ.

'ಒಂದು ಶತಮಾನದ ಹಿಂದೆ' ಎಂಬ ಪತ್ರದಲ್ಲಿ ೧೮೮೫ ರಲ್ಲಿಯ ಬಂಗಾಳದ ಬರ್ದ್ವಾನಿನ ಮಹಾರಾಜರ ಬಳಿ 'ಎಲೆಕ್ಟ್ರಿಕ್ ಟೆಲಿಗ್ರಾಫ್' ವ್ಯವಸ್ಥೆ ಇತ್ತು. ಅದು ಅಂದು ಕ್ರಾಂತಿಕಾರಕ ಹೆಚ್ಚು ಆಗಿತ್ತು. ಇದೇ ರೀತಿಯಲ್ಲಿ ಮನುಷ್ಯ ನಾಗರಿಕನಾಗುತ್ತ ಹೋದಂತೆ ಹಿಂದಿನ ವಿಚಾರಗಳನ್ನು ತಮಾಷೆ ಮಾಡುವುದು ಸರಿಯಲ್ಲವೆಂದು ಎಷ್ಟೇ ಮನುಷ್ಯ ಆಧುನಿಕನಾಗುತ್ತಾ ಹೋದರು ಮಾನವೀಯತೆಯನ್ನು ಬಿಡಬಾರದೆಂದು ಮಾನವೀಯತೆಯೇ ಮನುಷ್ಯತ್ವದ ಕೈಗನ್ನಡಿಯಾಗಿದೆ ಎಂಬ ನಿಲುವನ್ನು ಪ್ರಕಟಪಡಿಸುತ್ತಾರೆ. ವಿಜ್ಞಾನದ ಕ್ರಾಂತಿ ಮತ್ತು ಸಂಶೋಧನೆಯಿಂದಾಗಿ ಯಾಂತ್ರಿಕ ಸಾಧನಗಳನ್ನು ಬಳಸಿದರೂ ಮನುಷ್ಯ ತನ್ನ ಮಾನವೀಯ ಗುಣಗಳನ್ನು ಬಿಡಬಾರದೆಂದು ನಿರಂಜನರವರ ಕಳಕಳಿಯಾಗಿದೆ. ಆದರೆ ಇಂದು ಆಧುನಿಕ ಮನುಷ್ಯ ಯಾಂತ್ರೀಕೃತ ವ್ಯವಸ್ಥೆಗೆ ಒಳಗಾಗಿ ಮನವೀಯತೆಯನ್ನು ಹಂತ ಹಂತವಾಗಿ ಕಳೆದುಕೊಳ್ಳುತ್ತಿದ್ದಾನೆ.

'ಗುಣಪಡಿಸುವ ಚಾಕು' ಎಂಬ ಪತ್ರದಲ್ಲಿ ಭಾರತೀಯ ಪರಂಪರೆಯಲ್ಲಿ ಬೆಳೆದು ಬಂದ ವೈದ್ಯಶಾಸ್ತ್ರ, ಶಸ್ತ್ರ ಚಿಕಿತ್ಸೆ ಪದ್ಧತಿಯನ್ನು ಯುರೋಪ್ ರಾಷ್ಟ್ರಗಳಲ್ಲಿ ಏಷ್ಯಾ ಜ್ಞಾನವೆಂದು ತಿರಸ್ಕರಿಸಿದರು. ಆ ರೀತಿಯ ದೃಷ್ಟಿ ಯುರೋಪಿಯನ್ನರಿಗೆ ಮೊದಲಿನಿಂದಲೂ ಇತ್ತು. 'ಮುಗಿದಾವು ಜೋಳ ಉಳಿದಾವು ಹಾಡು' ಎಂಬ ಪತ್ರದಲ್ಲಿ ಜನಪದ ಗೀತೆಗಳ ಮಹತ್ವವನ್ನು ಅದರಲ್ಲಿಯೂ ಹೆಣ್ಣು ಮಕ್ಕಳಿಗೆ ತವರು ಮನೆಯ ಮೇಲಿನ ಪ್ರೀತಿಯನ್ನು ಕೆಲವು ಜನಪದ ಗೀತೆಗಳ ಹಿನ್ನಲೆಯಲ್ಲಿ ವಿವರಿಸುತ್ತಾರೆ. 'ಲೋಕ ಕಲ್ಯಾಣಕ್ಕಾಗಿ ಮಹಾಕೋಟಿ ಹೋಮ' ಎಂಬ ಪತ್ರದಲ್ಲಿ ಪತ್ರಿಕೆಯಲ್ಲಿ ಬಂದ ಕೋಡಿಹಳ್ಳಿ ಶಂಕರ ನಾರಾಯಣ ಶಾಸ್ತ್ರಿಗಳು ಬೆಂಗಳೂರಿನಲ್ಲಿ ಲೋಕ ಕಲ್ಯಾಣಕ್ಕಾಗಿ ಹೋಮ ನಡೆಸುತ್ತಿದ್ದಾರೆ. ಆ ಹೋಮಕ್ಕಾಗಿ ಸಾವಿರಾರು ರೂಪಾಯಿಗಳನ್ನು ವ್ಯಯಿಸುವುದಕ್ಕಿಂತ ಬಡವರಿಗೆ, ದೀನರಿಗೆ, ನಿರ್ಗತಿರಿಗಾಗಿ ಉಪಯೋಗಿಸಬೇಕು ಅದೇ ನಿಜವಾದ ಲೋಕ ಕಲ್ಯಾಣವೆಂದು ತಿಳಿಸುತ್ತಾರೆ.

'ಪ್ರೇಮ ಪತ್ರಗಳು' ಎಂಬ ಪತ್ರದಲ್ಲಿ ರಷ್ಯಾದ ಟಾಲ್‌ಸ್ಟಾಯ್‌ಯ ಸಮಕಾಲೀನನಾದ ಚೆಖಾವ್ ಎಂಬ ಸಾಹಿತಿ ತನ್ನ ಪ್ರೇಯಸಿ ಓಲ್ಗಳಿಗೆ ಬರೆದ ೩೪೩ ಪತ್ರಗಳ ಸಂಕಲನ ಕೃತಿ. ಈ ಪತ್ರ ಸಂಕಲನದಲ್ಲಿ ಟಾಲ್‌ಸ್ಟಾಯ್, ಗಾರ್ಕಿಯನ್ನು ಕುರಿತು ಬರೆದ ಲೇಖನಗಳು – ರಷ್ಯಾದ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳಾಗಿವೆ. ರಷ್ಯಾದ ಸಾಹಿತ್ಯ ಪರಂಪರೆಯನ್ನು ತಿಳಿಯಲು ಇದು ಸಹಾಯಕವಾಗಿದೆ. ಪತ್ರ ಸಾಹಿತ್ಯವು ಹೇಗೆ ಸಾಹಿತ್ಯದಲ್ಲಿ ಮಹತ್ವ ಪಡೆಯುತ್ತದೆ ಎಂಬುದನ್ನು ಈ

ಲೇಖನದಿಂದ ತಿಳಿಯಬಹುದು. 'ನಾಗರಿಕತೆಯ ರಮ್ಯಕತೆ' ಎಂಬ ಪತ್ರದಲ್ಲಿ ಬಡಕಿಲ ಕೃಷ್ಣಭಟ್ಟರ 'ನಾಗರಿಕತೆ' ಎಂಬ ವಿಚಾರಕೃತಿಯನ್ನು ಪರಿಚಯಿಸುತ್ತಾರೆ.

'ಕೆಂಪು ಕಾಣುವ ಕಾಮಾಲೆರೋಗ' ಎಂಬ ಪತ್ರದಲ್ಲಿ ಭಾರತವನ್ನು ಮತ್ತು ಭಾರತೀಯರನ್ನು ಪಶ್ಚಿಮದ ಬರಹಗಾರರು ಅದರಲ್ಲಿ ಅಮೇರಿಕಾದಿಂದ ಭಾರತಕ್ಕೆ ಭೇಟಿ ಕೊಟ್ಟಿದ್ದ ಸ್ಯಾಂಡರ್ ರೆಡ್ಡಿಂಗ್ ಎಂಬುವರು ಭಾರತದಲ್ಲೆಲ್ಲಾ ಸಂಚರಿಸಿ ಹೈದಾರಾಬಾದ್, ಮದ್ರಾಸ್ ಮೊದಲಾದ ಪ್ರದೇಶಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಹಳ್ಳಿಗಳಲ್ಲಿಯೂ ಕಮ್ಯೂನಿಸಂನ ಕುರಿತು ಆಳವಾದ ಒಲವು ಇದೆ ಎಂಬುದನ್ನು ಕೃತಿಯಲ್ಲಿ ಬರೆಯುವುದು, ಭಾರತೀಯರನ್ನು ಕೆಂಪು ಕಣ್ಣಿನಿಂದಲೇ ನೋಡುವ ದೃಷ್ಟಿಯಾಗಿದೆ. ಭಾರತದಲ್ಲಿ ಕಮ್ಯೂನಿಸಂ ಬೆಳೆಯದೆ ಇದ್ದರು ಅದು ಬೆಳೆಯುತ್ತಿದೆ ಎಂದು ಬಿಂಬಿಸುವ ದೃಷ್ಟಿಕೋನವು ಇದೆ ಎಂದು ನಿರಂಜನರು ಯುರೋಪ್ ಬರಹಗಾರರು ಭಾರತವನ್ನು ನೋಡುವ ದೃಷ್ಟಿಕೋನವನ್ನು ತಿಳಿಸುತ್ತಾರೆ.

'ಕಣ್ಮರೆಯಾದ ಹರಿದಾಸ' ಎಂಬ ಪತ್ರದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಪತ್ರಿಕೋದ್ಯಮದ ಮೂಲಕ ಅನೇಕರನ್ನು ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರೇಪಿಸಿದ ಎಂ. ಹರಿದಾಸ್ ರಾಯರು ಮರಣಿಸಿದಾಗ ಅವರನ್ನು ಪರಿಚಯಿಸುವ ಲೇಖನವಾಗಿದೆ. 'ಬೆಳಕಿನ ಹಬ್ಬ ಶಾಮನತಾಯಿ' ಎಂಬ ಪತ್ರದಲ್ಲಿ ದೀಪಾವಳಿ ಹಬ್ಬದಂದು 'ಶಾಮಾಚಿ ಆಯಿ' ಎಂಬ ಮಾರಾಠಿ ಚಲನಚಿತ್ರ ನೋಡಲು ನಿರಂಜನರು ಹೋಗಿದ್ದರು. ಮಹಾರಾಷ್ಟ್ರದ ಪ್ರಖ್ಯಾತ ಬರಹಗಾರ ಸಮಾಜ ಸುಧಾರಕರಾದ ಸಾನೆ ಗುರುಜಿಯವರ ಬಾಲ್ಯ ಜೀವನಕ್ಕೆ ಸಂಬಂಧಿಸಿದ ಚಿತ್ರ ಇದಾಗಿದೆ. ಈ ಚಿತ್ರ ಸ್ವರ್ಣ ಪದಕವನ್ನು ಪಡೆದುಕೊಂಡಿದೆ. 'ಹಿರಿಯ ವ್ಯಕ್ತಿ ವಿನಯಶೀಲತೆ' ಎಂಬ ಪತ್ರದಲ್ಲಿ ಎ.ಆರ್. ಕೃಷ್ಣಮೂರ್ತಿಗಳ ವಚನ ಭಾರತದ ಕೃತಿಯಲ್ಲಿ ತಪ್ಪು ನುಸುಳಿದ್ದು ಬಲಿಯು ವಿರೋಚನನ ಮಗ, ಪ್ರಹ್ಲಾದ ಮೊಮ್ಮಗನೆಂದು ಸಂಸ್ಕೃತದ ಕೃತಿಯ ಹಿನ್ನಲೆಯಲ್ಲಿ ಎ ಸುಬ್ರಹ್ಮಣ್ಯ ಎಂಬುವರು ತಿಳಿಸಿದಾಗ ತಪ್ಪನ್ನು ತಿಳಿಸಿದಕ್ಕೆ ಎ.ಆರ್. ಕೃಷ್ಣ ಮೂರ್ತಿಯವರು ತಿದ್ದಿ ಕೊಳ್ಳುವ ಮೂಲಕ ಹಿರಿಯರಾಗಿ ತಮ್ಮ ವಿನಯಶೀಲತೆಯನ್ನು ತೋರಿದರು. ಸಾಹಿತಿಗೆ ಈ ರೀತಿಯ ಗುಣ ಇರಬೇಕೆಂದು ನಿರಂಜನರು ತಿಳಿಸುತ್ತಾರೆ. 'ಮಗು ಮತ್ತೆ ಮುಗುಳ್ನಗಲಿಲ್ಲ' ಎಂಬ ಪತ್ರದಲ್ಲಿ ಅಮೇರಿಕಾದಲ್ಲಿ ರಾಯ್ ಎಂಬ ಮಗುವಿಗೆ ಮೂತ್ರಾಂಗಕ್ಕೆ ಸಂಬಂಧಿಸಿದ ಒಂದು ಸಣ್ಣ ಶಸ್ತ್ರ ಚಿಕಿತ್ಸೆ ನಡೆದು ಆ ಮಗು ಸಾವನ್ನಪ್ಪಿದ್ದು ವೈದ್ಯರಿಗೆ ಮಾನವೀಯತೆ ಇರಬೇಕೆಂದು ತಿಳಿಸುತ್ತಾರೆ. ವಿ. ಚಿಕ್ಕವೀರಯ್ಯನವರು ಬರೆದ 'ಪ್ರಕೃತಿ ಪ್ರಿಯತೆ', 'ಚುಂಬನ', 'ಹೂಂಕಾರ' ಎಂಬ ಮೂರು ಕವನ ಸಂಕಲನಗಳು ಪ್ರಕಟಪಡಿಸಿದ ಬಗ್ಗೆ 'ವೀಚಿ–ಒಲಿದಕವಿ–ಮುನಿದಕವಿ' ಎಂಬ ಪತ್ರದಲ್ಲಿ ತಿಳಿಸುತ್ತಾರೆ.

'ನಾಳೆಗೋಸ್ಕರ ಎಂದಲ್ಲ, ಇಂದು ನಮಗಾಗಿಯೇ' ಎಂಬ ಪತ್ರದಲ್ಲಿ ನಿರಂಜನರು ಜೀವನದ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ. ಸಾಮಾನ್ಯವಾಗಿ ಮನುಷ್ಯ ತನ್ನ ವಿಚಾರಗಳು ಬಂದಾಗ ಅಂತರ್ ಮುಖಿಯಾಗುತ್ತಾನೆ. ಅನ್ಯರನ್ನು ಯಾವ ರೀತಿಯಲ್ಲಿ ಬಹಿರ್ಮುಖ ದೃಷ್ಟಿಯಿಂದ ನಾವು ನೋಡುತ್ತವೆಯೋ, ಅದೇ ರೀತಿ ನಮ್ಮನ್ನು ನಾವು ನೋಡಿಕೊಳ್ಳಬೇಕೆಂದು ಇದನ್ನು ನಾವು ಹೆಚ್ಚು ಜನರಿಂದ ನಿರೀಕ್ಷಿಸಲು ಸಾಧ್ಯವಿಲ್ಲವೆಂದು, ಬದುಕು ಮತ್ತು ಜೀವನ ಗೊಂದಲಗೂಡಾಗಿದೆ. ಅದನ್ನು ಸುವ್ಯವಸ್ಥೆ ಮಾಡಲು ಜನ ಮುಂದಾಗುವುದಿಲ್ಲ, ಇರುವಿಕೆಯಿಂದಲೇ ಜನ ತೃಪ್ತಿಯನ್ನು ಕಾಣುತ್ತಾರೆ. ಈ ಇರುವಿಕೆಯನ್ನು ಬದಲಾಯಿಸಬೇಕಾದರೆ ಹೋರಾಟವೊಂದೇ ಮಾರ್ಗವಾಗಿದೆ. ಜೀವನದಲ್ಲಿ

ಅಜ್ಞಾನದೊಡನೆ, ಅಂಧ ಶ್ರದ್ಧೆಯೊಡನೆ ಬದುಕನ್ನು ದುಸ್ಸಹಗೊಳಿಸಿರುವ ದುಷ್ಟ ಶಕ್ತಿಗಳೊಡನೆ ಹೋರಾಡಬೇಕು, ಮಾನವನ ಆದಿಯಿಂದಲೂ ಅದೇ ನಡೆದುಕೊಂಡು ಬಂದಿರುವುದು ಆ ದಾರಿಯಲ್ಲಿ ನಡೆಯಬೇಕು ಎಂದು ಚರ್ಚಿಸುತ್ತಾರೆ.

'ಆ ಜೀವಕ್ಕೆ ನಾಳೆ ಬೆಳಗಾಗಲೇ ಇಲ್ಲ' ಎಂಬ ಪತ್ರದಲ್ಲಿ ದಕ್ಷಿಣ ಕನ್ನಡದ ಯರ್ಮುಂಜ ರಾಮಚಂದ್ರ ಬರಹಗಾರರು 'ಪಾಂಚಜನ್ಯ' ಪತ್ರಿಕೆಯ ಮೂಲಕ ತಮ್ಮನ್ನ ತಾವು ತೊಡಗಿಸಿಕೊಂಡಿದ್ದು, 'ನ್ಯಾಯಕ್ಕೆ ಗಲ್ಲು' ಎಂಬ ಪತ್ರದಲ್ಲಿ ಬಳ್ಳಾರಿಯ ಎಂ. ಸತ್ಯವಂತರಾಯರು ಬರೆದ ನಾಟಕ 'ನ್ಯಾಯಕ್ಕೆ ಗಲ್ಲು' ಎಂಬಲ್ಲಿ ಪಾತ್ರಗಳ ಹೆಸರೇ ಗುಣಗಳನ್ನು ತಿಳಿಸುವ ಮತ್ತು ಸ್ವತಃ ಈ ಕೃತಿಗೆ ನಾಟಕಕಾರರೇ ಮನ್ನುಡಿಯನ್ನು ಬರೆದ ಕ್ರಮ, 'ತಾಯಿ ನುಡಿ ಕನ್ನಡ' ಎಂಬ ಪತ್ರದಲ್ಲಿ ೧೯೩೪ ರಲ್ಲಿ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆದ ವಿಶೇಷ ಸಾಹಿತ್ಯತ್ಸೋವದಂದು ಡಿ. ವಿ. ಜಿ. ಯವರು ಸ್ವಾಗತ ಭಾಷಣಕಾರರಾಗಿ ಶಿಕ್ಷಣ ಮಾಧ್ಯಮವಾಗಿ ಕನ್ನಡ ಎಂಬ ಉಪನ್ಯಾಸ ನೀಡಿದರು, ಅದನ್ನು ಮುಂದುವರೆಸಿ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟದ್ದರಿಂದ ವಿದ್ಯಾಭ್ಯಾಸದ ಕ್ರಮ, ಸಾರ್ವಜನಿಕ ವ್ಯವಹಾರ, ಇಂಗ್ಲೀಷ್ ಭಾಷೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಅವರು ನೀಡಿದ್ದರು. ಇಂದೂ ಸ್ವತಂತ್ರವಾದ ಈ ದೇಶದಲ್ಲಿ ಕನ್ನಡ ನಾಡಿನಲ್ಲಿ ಶಿಕ್ಷಣ ಮಾಧ್ಯಮ ಆಡಳಿತ ಭಾಷೆ ಕನ್ನಡದಲ್ಲಿ ಇರಬೇಕೆಂದು, ಇಂಗ್ಲಿಷನ್ನು ದೂರ ಮಾಡಬೇಕೆಂಬುದಲ್ಲ ಕನ್ನಡಕ್ಕೆ ಆತ್ಮೀಯ ಸ್ಥಾನವನ್ನು ನೀಡಬೇಕೆಂದು ತನ್ನ ಕನ್ನಡಪರ ನಿಲುವನ್ನು ಪ್ರಕಟಪಡಿಸುತ್ತಾರೆ. ಅದನ್ನು ನಿರಂಜನರವರು ಡಿ. ವಿ. ಜಿ. ಯವರಿಗೆ ಇದ್ದಂತಹ ಕನ್ನಡ ಪರ ನಿಲುವಾಗಿ ದಾಖಲಿಸುತ್ತಾರೆ.

'ಸಿಡಿ ಸಿಡಿದು ಬದುಕಿದ ಸಂಸ' ಎಂಬ ಪತ್ರದಲ್ಲಿ ನಾಟಕಕಾರರಾದ ಸ್ವಾಮಿ ವೆಂಕಟಾದ್ರಿ ಅಯ್ಯರ್‌ರವರ ಮೇಲೆ ಮೈಸೂರು ಸರಕಾರ ಗೂಡಾಚಾರಿಕೆ ನಡೆಸಿದ್ದು, ಬಗೆ ಬಗೆಯ ನಿಂದನೆಯ ಮಾತು ಜೊತೆಗೆ ತಮ್ಮ ಶವ ಸಂಸ್ಕಾರಕ್ಕೆ ಒಂದು ಚೀಟಿಯಲ್ಲಿ ೩೧ ರೂಪಾಯಿಗಳನ್ನು ಇಟ್ಟಿದ್ದರು. ಅವರು ತಮ್ಮ ಎಲ್ಲಾ ಕೃತಿಗಳನ್ನು ೮೦ ರೂಪಾಯಿಗಳಿಗೆ ಮಾರಾಟ ಮಾಡಿದ್ದು ಇವೆಲ್ಲಾವನ್ನು ದಾಖಲಿಸುತ್ತಾರೆ. ಒಬ್ಬ ನಾಟಕಗಾರನ ಮೇಲೆ ಆಳುವ ವರ್ಗದ ಧೋರಣೆ ಮತ್ತು ಆತನ ಸ್ವಾಭಿಮಾನದ ಬದುಕು ಅವರ ಸಾಹಿತ್ಯ ಕೃತಿಗಳನ್ನು ಓದಬೇಕೆಂದು, ಐತಿಹಾಸಿಕ ನಾಟಕಗಳ ಮೂಲಕ ಈಗಿನ ಪೀಳಿಗೆಗೆ ಗತ ಕಾಲದೊಡನೆ ಸಂಬಂಧವನ್ನು ಸ್ಥಾಪಿಸಿ ನಾಳೆಯ ಕಡೆಗೆ ಮುನ್ನಡೆಸಬೇಕು ಎಂಬ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ.

'ಪ್ರೇತಾತ್ಮನಾದ ಮಾನವ' ಎಂಬ ಪತ್ರದಲ್ಲಿ ಹಬ್ಬಗಳು ಧಾರ್ಮಿಕವಾಗಿರಬಹುದು. ರಾಷ್ಟ್ರೀಯ ಹಬ್ಬಗಳಾಗಿರಬಹುದು, ಇವೆಲ್ಲಾ ರಾಷ್ಟ್ರೀಯ ಪರಂಪರೆಯಲ್ಲಿ ಉಜ್ವಲವಾದ ಪರಮತ ಸಹಿಷ್ಣುತೆಯನ್ನು ಬೆಳೆಸುವಂತದ್ದು ಎಂದು ತಿಳಿಸುತ್ತಾರೆ. 'ಒಡೆಯಲಾಗದ ಒಗಟು' ಎಂಬ ಪತ್ರದಲ್ಲಿ ಬಿಜಾಪುರದ ಯರನಾಳ ಹಳ್ಳಿಯ ಕನ್ನಡ ಶಾಲೆಯವರ ಉಪಧ್ಯಾಯರಾದ ಸಿಸು (ಸಂಗಮೇಶ) ರವರು ಬರೆದ ಪ್ರಕಟಿಸಿದ ಪ್ರೇಮ ಗೀತೆಗಳ ಸಂಕಲನ 'ತೋಳಬಂಧಿ' ಕೃತಿಯನ್ನು ವಿಮರ್ಶಿಸುತ್ತಾರೆ. 'ಅಲೆಕ್ಸಾಂಡರ್ ಫ್ಲೆಮಿಂಗ್' ಎಂಬ ಪತ್ರದಲ್ಲಿ ಪೆನ್ಸಿಲಿನ್ ಚುಚ್ಚುಮದ್ದನ್ನು ಕಂಡುಹಿಡಿದು ಮಾನವ ಕುಲವನ್ನು ಬದುಕಿಸಿದ ಫೆಮ್ಲಿಂಗ್ ಸಾವನ್ನಪ್ಪಿದಾಗ ಎಷ್ಟು ಜನರು ಆತನಿಗಾಗಿ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದಾರೆ? ಓರ್ವ ಮಂತ್ರಿ, ಅಧ್ಯಕ್ಷ ರಾಜಕಾರಣಿ ಸತ್ತರೆ ಅಂತವರ ಸ್ಮರಣೆ ಚಿರಸ್ಥಾಯಿಯಾಗಲು ಗಲಾಟೆ ಗದ್ದಲವನ್ನು ಉಂಟು ಮಾಡುತ್ತಾರೆ., ಆದರೆ ಮಾನವನ ಕಷ್ಟವನ್ನು ದೂರ ಮಾಡುವಂತಹ

ಸಂಜೀವಿನಿಯನ್ನು ಕಂಡು ಹಿಡಿದಂತ ವ್ಯಕ್ತಿಯನ್ನು ನಾವು ಗೌರವಿಸುವುದಿಲ್ಲವೆಂದು, ಜನರ ವಿಜ್ಞಾನಿಗಳ ಬಗ್ಗೆ ವಿಜ್ಞಾನದ ಬಗೆಗಿನ ತಾತ್ಸಾರದ ಪ್ರವೃತ್ತಿಯನ್ನು ಚರ್ಚಿಸುತ್ತಾರೆ.

'ಎರಡು ಕೃತಿಗಳ ಉಡುಗೊರೆ' ಎಂಬ ಪತ್ರದಲ್ಲಿ ಸಂಗೀತಗಾರರಾದ ವಾಸುದೇವಾಚಾರ್ಯರು ಬರೆದ 'ನಾ ಕಂಡ ಕಲಾವಿದರು' ಮತ್ತು ಶ್ರೀಮತಿ ವಾಣಿಯವರ ಬಿಡುಗಡೆ' ಕೃತಿಗಳನ್ನು, 'ಫ್ರೆಂಚ್ ಸಾಹಿತ್ಯದ ರುದ್ರತಾರೆ ಬಾಲ್ಜಾಕ್' ಎಂಬ ಪತ್ರದಲ್ಲಿ ಫ್ರೆಂಚ್ ಸಾಹಿತ್ಯದ ಪ್ರಮುಖ ಸಾಹಿತಿಗಳಲ್ಲಿ ಒಬ್ಬರಾದ ಬಾಲ್ಜ್‌ಕ್‌ರವರು, 'ನರಮೇಧ' ಎಂಬ ಪತ್ರದಲ್ಲಿ ಗೋವ ವಿಮೋಚನ ಚಳುವಳಿಗಾಗಿ ಹೋರಾಟ ಮಾಡಿದ ಕರ್ನಾಯಿಲ್ ಸಿಂಗ್‌ನ ವ್ಯಕ್ತಿತ್ವವನ್ನು, 'ಈಶ್ವರ ಸಣ್ಣಕಲ್ಲರಿಗೆ ಸನ್ಮಾನ' ಎಂಬ ಪತ್ರದಲ್ಲಿ ರಬಕವಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಅವರನ್ನು ಸನ್ಮಾನಿಸಿದ ವಿಚಾರಗಳನ್ನು, 'ಸಾಧನ ಸಂಚಯದ ಕಥೆ' ಎಂಬ ಕೊನೆಯ ಪತ್ರದಲ್ಲಿ ಹುಚ್ಚು ಕನಸುಗಳನ್ನು ಕಂಡ ಎಳೆಯ ಜೀವನದ ಕತೆ 'ಕಣ್ಮಣಿ'ಯನ್ನು ಓದಿ ಯಾರು ಈ ಲೇಖಕಿಯಂದು, ಅವರನ್ನು ಕಾಣಲು ಮನಸ್ಸು ಬಯಸಿದ್ದು, ಆಕೆ ಆಗಲೇ ನಾಲ್ಕಾರು ಕತೆಗಳನ್ನು ಬರೆದಿದ್ದು 'ಅನುಪಮಾ' ಎಂಬ ಹೆಸರಿನ ಬರಹಗಾರ್ತಿ ಮತ್ತು ನಿರಂಜನರ ಕಲ್ಪನೆಯ ಸಂಗಾತಿ ರೂಪು ಪಡೆದಿದ್ದು, ಉಷಾ ವಾರ ಪತ್ರಿಕೆಯಲ್ಲಿ 'ಸಾಧನ ಸಂಚಯ' ಮೊದಲ ಓಲೆ ಪ್ರಕಟಣೆಗೊಂಡಿತು. ಜನ ಪ್ರಗತಿಯ ಸಾಪ್ತಾಹಿಕದಲ್ಲಿ ಪ್ರಕಟಗೊಂಡು, ಇಲ್ಲಿ ಬಳಸಿದ ಸಾಧನಳೇ ತನ್ನ ಮನೆಯ ಒಡತಿಯಾದ ಅನುಪಮಾ ಎಂದು ಸಾಧನಾಳು ಯಾರು ಎಂಬ ಪ್ರಶ್ನೆಗೆ ಈ ಕೃತಿಯ ಕೊನೆಯಲ್ಲಿ ನಿರಂಜನರವರು ಉತ್ತರವನ್ನು ಕೊಡುತ್ತಾರೆ.

ಕಾಲಕ್ಷೇಪ – ೧೯೫೭

ಕನ್ನಡ ವಿಚಾರ ಸಾಹಿತ್ಯಕ್ಕೆ ನಿರಂಜನರ ಕೊಡುಗೆಯಾಗಿ ಕಾಲಕ್ಷೇಪ ಕೃತಿ ಪ್ರಮುಖವಾದುದು. ಈ ಕೃತಿಯನ್ನು ೧೯೫೭ರಲ್ಲಿ ಪ್ರಕಟಿಸಿದರು. ಇದು ಕೂಡ ಚಿತ್ರಗುಪ್ತದಲ್ಲಿ ಶೀರ್ಷಿಕೆಯಂತೆ ಪ್ರಕಟವಾದ 'ಐದು ನಿಮಿಷ' ಪತ್ರಿಕಾ ಲೇಖನ ಸಂಕಲನದ ರೀತಿಯಲ್ಲಿ ಬರೆದ ಇನ್ನೊಂದು ಕೃತಿ ಆಗಿದೆ. ಇದರಲ್ಲಿ ಒಟ್ಟು ೪೪ ಲೇಖನಗಳು ಇವೆ.

'ಅಸಹ್ಯ! ಅಸಹ್ಯ!' ಎಂಬ ಲೇಖನದಲ್ಲಿ ದಕ್ಷಿಣ ಆಫ್ರಿಕಾದಲ್ಲಿರುವ ವರ್ಣಭೇದ ನೀತಿಯನ್ನು ಕುರಿತಂತೆ ಬರೆದ ಲೇಖನವಾಗಿದೆ. ಭಾರತದಲ್ಲಿ ಜಾತಿ ಪದ್ಧತಿ ಇರುವಂತೆ ದಕ್ಷಿಣ ಆಫ್ರಿಕಾದಲ್ಲಿ ಕರಿಯರು–ಬಿಳಿಯರು ಎಂಬ ವರ್ಣ ಭೇದವಿದ್ದು, ಬಿಳಿಯರು ಭೂಮಾಲೀಕರಾಗಿದ್ದು, ಗಣಿ ಮಾಲೀಕರಾಗಿದ್ದು ಅಥವಾ ತೋಟಗಳ ಒಡೆಯರಾಗಿದ್ದಾರೆ. ಕರಿಯರನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಂಡಿದ್ದು ಇದರ ಹಿಂದೆ ಸುಲಿಗೆಯ ತತ್ವವಿದೆ. ವರ್ಣಭೇದ ನೀತಿಗೆ ಅರ್ಥಿಕ ಮತ್ತು ಸಾಮಾಜಿಕ ಸುಲಿಗೆಯ ತತ್ವವಿದೆ ಎಂದು ನಿರಂಜನರು ಪ್ರತಿಪಾದಿಸಿದ್ದಾರೆ. 'ಹೆಣ್ಣು ಎಂದರೆ ಹಸುವಲ್ಲ' ಎಂಬ ಲೇಖನದಲ್ಲಿ ರೇಣು ಚಕ್ರವರ್ತಿ ಎಂಬ ಬಂಗಾಳದ ಮಹಿಳೆ ಪಾರ್ಲಿಮೆಂಟಿನ ಸದಸ್ಯರಾಗಿದ್ದು ವರದಕ್ಷಿಣೆಯನ್ನು ನಿಷೇದಿಸುವ ಮಸೂದೆಯನ್ನು ಜಾರಿಗೆ ತರಲು ಶ್ರಮಿಸುತ್ತಿದ್ದಾರೆ. ಕೆಲವು ರಾಜಾಕಾರಣಿಗಳು ಆಂಧ್ರದ, ಕಾಶ್ಮೀರದ ಸಮಸ್ಯೆಗಳಲ್ಲಿ ಮುಳುಗಿರುವಾಗ ಈ ವಿಚಾರಕ್ಕೆ ಚರ್ಚಿಸಲು ಯಾರು ಸಿದ್ಧರಾಗಿಲ್ಲವೆಂದು ಪಾರ್ಲಿಮೆಂಟಿನಲ್ಲಿ, ಸಾಮಾಜಿಕ ವ್ಯವಸ್ಥೆಯಲ್ಲಿ, ರಾಜಕೀಯ ವ್ಯವಸ್ಥೆಯಲ್ಲಿ ಇಂತಹ ಮಸೂದೆಗೆ ಬಹುಮತ ಬೆಂಬಲ ಸಿಗುವುದು ಅನುಮಾನ ಎಂಬ ನಿಲುವನ್ನು

ವ್ಯಕ್ತಪಡಿಸುತ್ತಾರೆ. ಆ ಮೂಲಕ ವರದಕ್ಷಿಣೆ ನಿಷೇದ ಕಾಯಿದೆ ಜಾರಿಗೆಯನ್ನು ತರುವ ಅಗತ್ಯತೆಯನ್ನು ತಿಳಿಸುತ್ತಾರೆ.

'ವೃತ್ತ ಪತ್ರಿಕೆಗಳ ಬೆಳ್ಳಿ ಹಬ್ಬ' ಎಂಬ ಲೇಖನದಲ್ಲಿ ತಾಯಿನಾಡು ಪತ್ರಿಕೆ ತನ್ನ ೨೫ನೇ ವರ್ಷ ಬೆಳ್ಳಿಹಬ್ಬವನ್ನು ೧೨ ಸೆಪ್ಟೆಂಬರ್ ೧೯೫೩ರಲ್ಲಿ ಆಚರಿಸಿಕೊಂಡಿತ್ತು. ಇದೊಂದು ಸರಕಾರದ ಪತ್ರಿಕೆಯಾಗದೇ ರಾಷ್ಟ್ರೀಯ ಪತ್ರಿಕೆಯಾಗಿದ್ದು ಸ್ವಾತಂತ್ರ್ಯ ಹೋರಾಟದಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸಿದೆ. ಜನ ಸಾಮಾನ್ಯರ ಭಾಷೆಯಲ್ಲಿ ಅಂದು ದೇಶ ವಿದೇಶಗಳ ಸುದ್ದಿ ತಲುಪಿಸುವ ಕಾರ್ಯ ಅಷ್ಟೊಂದು ಸುಲಭವಾಗಿರಲಿಲ್ಲವೆಂದು, 'ತಾಯಿನಾಡು' ಪತ್ರಿಕೆ ಒಂದು ಸಂಸ್ಥಾನದ ಪರಿಧಿಯಲ್ಲಿಯೇ ಜನ ಜಾಗೃತಿಯನ್ನುಂಟು ಮಾಡಿದ ಬಗೆಯನ್ನು, ಸ್ವಾತಂತ್ರ್ಯ ಬರುವ ತನಕ ಎಲ್ಲಾ ಪತ್ರಿಕೆಗಳ ಧ್ಯೇಯವು ಒಂದೇ ಆಗಿದ್ದು, ಅದು ಸ್ವಾತಂತ್ರ್ಯ ಪಡೆಯುವುದು. ಸ್ವಾತಂತ್ರ್ಯ ಲಭಿಸಿದ ನಂತರ ಪತ್ರಿಕೆಗಳ ಪರಿಸ್ಥಿತಿ ಬದಲಾಗಿದ್ದು ಹಿಂದಿನ ಆದರ್ಶಗಳು ಕಳೆದು ಹೋಗಿ ಲಾಭನಷ್ಟದ ವ್ಯವಹಾರದ ದೃಷ್ಟಿ ಬೆಳೆಯಿತ್ತೆಂದು ಪತ್ರಿಕೆಗಳ ದೃಷ್ಟಿಕೋನ ಹೇಗೆ ಸ್ವಾತಂತ್ರ್ಯ ನಂತರ ಬದಲಾವಣೆಯಾದ ಬಗೆಯ ತಾತ್ವಿಕತೆಯನ್ನು ಗುರುತಿಸುತ್ತಾರೆ.

'ದೇವೇಂದ್ರಪ್ಪ ಕಂಡ ಚೀನಾ' ಎಂಬ ಲೇಖನದಲ್ಲಿ ಚೀನಾ ದೇಶದ ಪ್ರವಾಸವನ್ನು ಕೈಗೊಂಡ ಸಂದರ್ಭದಲ್ಲಿ ಅಲ್ಲಿ ಆಗಿರುವ ಕ್ರಾಂತಿಕಾರಕ ಬದಲಾವಣೆಯ ಅನುಭವಗಳನ್ನು ದೇವೇಂದ್ರಪ್ಪನವರ ಕಣ್ಣಿನಲ್ಲಿ ಚೀನಾವನ್ನು ಚಿತ್ರಿಸುತ್ತಾರೆ. 'ಕೇರಳದ ಕವಿಯ ಹುಟ್ಟು ಹಬ್ಬ' ಎಂಬ ಲೇಖನದಲ್ಲಿ ಕೇರಳದ ರಾಷ್ಟ್ರಕವಿ ವಲ್ಲತೋಳ್ ನಾರಾಯಣ ಮೆನನ್ ಕವಿಯ ಹುಟ್ಟುಹಬ್ಬವನ್ನು ಕೇರಳದಲ್ಲಿ ಅದ್ದೂರಿಯಾಗಿ ಆಚರಿಸಿದರು. ಕೇರಳದ ಸಮಾಜದ ಮೇಲೆ ವಲ್ಲತೋಳ್ ಕವಿಯ ಬರವಣಿಗೆಗಳು ಪ್ರಭಾವಿಸಿದೆ ಅದೇ ಮಾದರಿಯಲ್ಲಿ ಕವಿತೆಗಳು ಪ್ರಭಾವಿಸಿದೆ. ರಾಷ್ಟ್ರಕವಿ ಗೋವಿಂದ ಪೈಯವರ ಹುಟ್ಟುಹಬ್ಬವನ್ನು ಕನ್ನಡ ನಾಡಿನಲ್ಲಿ ಆಚರಿಸದ ರೀತಿಯನ್ನು ಖಂಡಿಸುತ್ತಾರೆ. ಕೇರಳಿಗರಿಗೆ ಇರುವ ಸಾಹಿತಿಗಳನ್ನು ಗೌರವಿಸುವ ಮನಃಸ್ಥಿತಿ ನಮ್ಮ ನಾಡಿನ ಹಿರಿಯ ಕವಿಗಳಿಗೆ ಜನತೆಯು ಯಾವುದೇ ರೀತಿಯಲ್ಲಿ ಗೌರವಿಸದ ಮನಃಸ್ಥಿತಿಯನ್ನು ನಿರಂಜನರು ದಾಖಲಿಸಿದ್ದಾರೆ.

'ರಾಜಕೀಯ' ಎಂಬ ಲೇಖನದಲ್ಲಿ ಅಮೇರಿಕಾ, ಪಾಕಿಸ್ತಾನಕ್ಕೆ ಮಿಲಿಟರಿ ಸಹಾಯ ಮಾಡುವುದು. ಭಾರತದ ಮೇಲೆ ಹಿಡಿತ ಸಾಧಿಸಲು ಎಂಬ ಹಿನ್ನಲೆಯಲ್ಲಿ, 'ವೀ.ಸಿ. ಭಾಷಣದಲ್ಲಿ' ಎಂಬ ಲೇಖನದಲ್ಲಿ ವಿ. ಸೀತಾರಾಮಯ್ಯ ಸಾಹಿತಿಗಳಿಗೆ ಪುರಸ್ಕಾರವಾಗಿ ಉತ್ತಮ ಕೃತಿ ಬರೆದವರಿಗೆ ಬಹುಮಾನ ಕೊಡಬೇಕೆಂದು ೮೦-೧೦೦ ರೂಗಳು ವಾರ್ಷಿಕವಾಗಿ ಸಿಗುವಂತಾಗಬೇಕು. ಉತ್ತಮ ಪ್ರಮುಖ ಪುಸ್ತಕಗಳಿಗೆ ಸರಕಾರ ಪ್ರೋತ್ಸಾಹ ಕೊಡಬೇಕೆಂದು ಚರ್ಚಿಸುತ್ತಾರೆ. 'ದೊಂಗಲುನ್ನಾರು' ಎಂಬ ಲೇಖನದಲ್ಲಿ ಎಲ್ಲ ಕಡೆ 'ಕಳ್ಳರಿದ್ದಾರೆ ಎಚ್ಚರಿಕೆ' ಎಂಬ ಎಚ್ಚರಿಕೆಯ ಸಂದೇಶ ಸಾರುವ ಬೋರ್ಡುಗಳು ಹೋಟೆಲ್, ಬ್ಯಾಂಕ್, ರಸ್ತೆಗಳು, ರೈಲುಗಳು ಮೊದಲಾದ ಕಡೆ ಇರುವುದನ್ನು ಕಾಣಬಹುದು. ಹಾಗಾಗಿ ಸಮಾಜವೆಂಬುದು ಒಳ್ಳೆಯ ಮತ್ತು ಕೆಡುಕುಗಳ ಸಮಿಶ್ರವೇ ಆಗಿದೆ. ಅಂತರಂಗದಿಂದ ಮನುಷ್ಯನ ಒಳಿತಿನ ಕಡೆಗೆ ಹೋಗುವ ರೀತಿಯಲ್ಲಿ ಪ್ರೇರಣೆ ನೀಡುವ ಮೂಲಕ ಹೊಸ ಚೇತನದ ಪ್ರಭುತ್ವವೊಂದನ್ನು ಸ್ಥಾಪಿಸಬೇಕೆಂದು ವಿಶ್ಲೇಷಿಸುತ್ತಾರೆ.

'ಅಳಿದ ಬಳಿಕ' ಎಂಬ ಲೇಖನದಲ್ಲಿ ಆಂಗ್ಲ ಕವಿಗಳಾದ ವರ್ಡ್ಸ್‌ವರ್ತ್ ಮತ್ತು ನಾಟಕಕಾರನಾದ ಬರ್ನಾಡ್‌ಷಾ ಅವರ ಮನೆಗಳು ಇಂಗ್ಲೆಂಡ್‌ನಲ್ಲಿ ಬಾಡಿಗೆ ಇದೆ ಎಂಬ ವಿಚಾರ

ತಿಳಿದು ಪ್ರತಿಭಾವಂತರ ನಾಡದ ಇಂಗ್ಲೇಡ್‌ನಲ್ಲಿ ರಾಷ್ಟ್ರೀಯ ಸ್ಮಾರಕಗಳಾಗಬೇಕಾದ ಆ ಮನೆಗಳು ಈ ಸ್ಥಿತಿಗೆ ತಲುಪಿದ್ದು ಒಂದು ದುರಂತವಾಗಿದೆ. ಅದೇ ರೀತಿಯಲ್ಲಿ ನಮ್ಮ ಕನ್ನಡ ನಾಡಿನಲ್ಲಿ ಅನೇಕ ಲೇಖಕರ ಮನೆಗಳು ಕೂಡ ರಾಷ್ಟ್ರೀಯ ಸ್ಮಾರಕಗಳಾಗಬೇಕು ಎಂಬ ತಾತ್ವಿಕತೆಯನ್ನು ಮಂಡಿಸುತ್ತಾರೆ ಆ ನಿಟ್ಟಿನಲ್ಲಿ ಮುದ್ದಣನವರ ಕೃತಿಗಳನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನವರು, ಮಂಗಳೂರಿನ ತರುಣ ಕಲಾ ವೃಂದದವರು 'ನೆನಹು' ಎಂಬ ಹೆಸರಿನಲ್ಲಿ, ಏರ್ಯಲಕ್ಷ್ಮೀ ನಾರಾಯಣರ ಆಳ್ವರ 'ರಸಿಕ ಮುದ್ದಣ', ಮುಗದೇ ಮನೋರಮೆ, ಪಿ.ಕೆ. ನಾರಾಯಣರ 'ಶ್ರೀರಾಮಾ ಪಟ್ಟಾಭಿಷೇಕ', ಕಯ್ಯಾರ ಕಿಞ್ಞಣ್ಣ ರೈರವರ ಲೇಖನ ಇವೆಲ್ಲವೂ ಕೂಡ ಸ್ಮಾರಕಗೊಳಿಸುವ ಕಾರ್ಯಗಳಾಗಿವೆ. ಅದೇ ರೀತಿಯಲ್ಲಿ ಚಿಕ್ಕ ವಯಸ್ಸಿನಲ್ಲಿ ತೀರಿಕೊಂಡ ಕಾರಿಯಹಳ್ಳ ರಾಮಕೃಷ್ಣ ಶೆಟ್ಟಿರವರ, ಬೆಂಗಳೂರಿನ ಅನಂತ ಪದ್ಮನಾಭ, ಸೋಗಾಲ, ಧಾರವಾಡದ ಶಿವೇಶ್ವರ ದೊಡ್ಡಮನಿ, ಮಂಗಳೂರಿನ ಸದಾಶಿವ ಮೊದಲಾದವರ ಕೃತಿಗಳನ್ನು ಸ್ಮಾರಕವಾಗಿ ಪ್ರಕಟಿಸಬೇಕು. ಜನರಿಗೆ ಸುಲಭ ಬೆಲೆಗೆ ದೊರಕುವಂತೆ ಮಾಡಿ ಆ ಮೂಲಕ ಸಾಹಿತಿ ಅಳಿದ ಮೇಲು ನೆನಪು ಮಾಡುವ ಅವರ ಸಾಹಿತ್ಯ ವಿಚಾರಗಳನ್ನು ಪ್ರಚಾರ ಮಾಡುವ ಕಾರ್ಯ ನಡೆಯಬೇಕು ಎಂಬ ತಾತ್ವಿಕತೆಯಿದೆ.

'ದಂಡಾ ಕಾರಣ್ಯದಿಂದ.............' ಎಂಬ ಲೇಖನದಲ್ಲಿ ಕುವೆಂಪುರವರು ಮಲೆನಾಡನ್ನು ನಿಸರ್ಗವನ್ನು ಹೇಗೆ ತಮ್ಮ ಕಾವ್ಯಗಳಲ್ಲಿ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ ಎಂಬುದನ್ನು ದಾಖಲಿಸುತ್ತಾರೆ. 'ವಿಶ್ವಕವಿ ವರ್ಧಂತಿ ವೈಖರಿ' ಎಂಬ ಲೇಖನದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ರವೀಂದ್ರನಾಥ ಟಾಗೋರ್ ರವರು ತಮ್ಮ ಸಾಹಿತ್ಯ ಕೃತಿಗಳ ಮೂಲಕ ಜನತೆಯಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ ನೀಡಿದವರು. ಜೊತೆಗೆ ನೇರವಾಗಿ ಚಳುವಳಿಯಲ್ಲಿ ಭಾಗವಹಿಸಿದವರು, 'ಚೋರಿಲಾಲರ ಹೊಸ ಅಂಗಡಿ' ಎಂಬ ಲೇಖನದಲ್ಲಿ ಉತ್ತರ ಭಾರತದಿಂದ ಬಂದ ಕೆಲವು ಮಾರ್ವಾಡಿಗಳು ಬೆಂಗಳೂರಿನ ಕೆಲವು ಬಡಾವಣೆಗಳಲ್ಲಿ ಅಂಗಡಿಗಳನ್ನು ತೆರೆದು ಬಂಗಾರ, ಬೆಳ್ಳಿ ಮೊದಲಾದ ವಸ್ತುಗಳನ್ನು ಕಡಿಮೆ ಬಡ್ಡಿಗೆ ಇಟ್ಟುಕೊಳ್ಳುತ್ತೇವೆಂದು ಹೇಳಿ ಕನ್ನಡಿಗರಿಗೆ ಮೋಸ ಮಾಡುವ ತಂತ್ರದ ಭಾಗವಾಗಿ ಇವರನ್ನು ಇವರ ಅಂಗಡಿಗಳನ್ನು ಚೋರಿಲಾಲರು ಎಂದು ಸಂಭೋಧಿಸುತ್ತಾರೆ. ಚೋರಿ ಎಂದರೆ ಕಳ್ಳ, ಕಳ್ಳತನ ಎಂದು ಅರ್ಥ ಬರುತ್ತದೆ.

'ನಮ್ಮ ಮೇಷ್ಟ್ರು ನಮಗೆ ಬೇಕು' ಎಂಬ ವಿಚಾರ ಸಾಹಿತ್ಯದ ಲೇಖನದಲ್ಲಿ ಇಂದಿನ ವಿದ್ಯಾಭ್ಯಾಸದ ಪದ್ಧತಿಯಲ್ಲಿ ಸಮಾಜವನ್ನು ನಿರ್ಮಾಣ ಮಾಡುವ, ಉತ್ತಮ ಸಮಾಜಕ್ಕೆ ಕಾಣಿಕೆಯಾಗಿ ನೀಡುವ, ವಿದ್ಯಾರ್ಥಿಗಳನ್ನು ತಯಾರು ಮಾಡುವ, ಶಿಕ್ಷಕ ವೃಂದದವರನ್ನು ಭಿನ್ನ ರೀತಿಯಲ್ಲಿ ನೋಡುತ್ತಿರುವ ಕಾಲಘಟ್ಟದಲ್ಲಿ ನಿರಂಜನರವರು 'ಹಿಂದೂ' ಪತ್ರಿಕೆಯಲ್ಲಿ ಪ್ರಕಟವಾದ ಲೇಖನದಲ್ಲಿ ಭೂಪಾಲ್‌ನ ಒಂದು ಸಣ್ಣ ಹಳ್ಳಿ 'ಅಸ್ಥೆ' ಸರಕಾರಿ ಶಾಲೆಯ ಉಪಧ್ಯಾಯರನ್ನು ವರ್ಗಾವಣೆ ಮಾಡಿದಾಗ ಅದರ ವಿರುದ್ಧ ವಿದ್ಯಾರ್ಥಿಗಳು ನಮ್ಮ ಮೇಷ್ಟ್ರು ನಮಗೆ ಬೇಕು ಎಂದು ಹೋರಾಟ ಮಾಡಿದ ಬಗೆಯನ್ನು ತಿಳಿಸುತ್ತಾರೆ. 'ರೇಶಿಮೆ ಹುಡುಗಿಯರ ಬುದ್ದ ಪ್ರೇಮ' ಎಂಬ ಲೇಖನದಲ್ಲಿ ಜಪಾನಿನ ರೇಷ್ಮೆ ಕಾರ್ಖಾನೆಯಲ್ಲಿ ಮಾಲೀಕ ನಿರಂಕುಶ ಪ್ರಭುತ್ವದವನಾಗಿದ್ದು ಕುಕಿನತ್ಸೊಹೋಕಾ ಎಂಬುವನು ತನ್ನ ಕಾರ್ಖಾನೆಯಲ್ಲಿ ದುಡಿಯುವ ಹೆಣ್ಣು ಮಕ್ಕಳು, ಯಾವ ಕಾಲದಲ್ಲೂ ಅಲಂಕಾರ ಮಾಡಬಾರದೆಂದು, ಗಂಡಸರ ಜೊತೆ ತಿರುಗಾಡಬಾರದೆಂದು. ಚಲನಚಿತ್ರಗಳನ್ನು ನೋಡಬಾರದೆಂದು, ಯುವಕರನ್ನು ಪ್ರೀತಿಸಿ ಪತ್ರ ಬರೆಯಬಾರದೆಂದು ಮೊದಲಾದ ರೀತಿಗಳಲ್ಲಿ ಸ್ತ್ರೀಯರನ್ನು ಶೋಷಿಸುವುದು ಮಾತ್ರವಲ್ಲದೆ ಕನಿಷ್ಠ ಸಂಬಳವನ್ನು ಕೊಡದೇ,

ವಸತಿ ನೀಡದೆ ಬಂಡವಾಳಗಾರರು ಕಾರ್ಮಿಕರನ್ನು ಯಾವ ರೀತಿ ಶೋಷಣೆಗೆ ಒಳಪಡಿಸುತ್ತಾರೆ ಎಂಬುದನ್ನು ಚರ್ಚಿಸುತ್ತಾರೆ 'ಕರೆಗಂಟ ಕಳ್ಳ' ಎಂಬ ಲೇಖನದಲ್ಲಿ ಮಂಡ್ಯದ ಕಲ್ಲಹಳ್ಳಿಯ ಶಾಲೆಯ ಗಂಟೆಯನ್ನು ಒಬ್ಬ ಕಳ್ಳತನ ಮಾಡಿದ್ದು, ಯಾವುದೇ ರೀತಿಯ ಕಳ್ಳತನ ಮಾಡುವ ಕಳ್ಳರಿಗೆ ನ್ಯಾಯಾಲಯದಲ್ಲಿ ಶಿಕ್ಷೆಯನ್ನು ಕೊಡಿಸುವುದಕ್ಕಿಂತ ಮಾನವನನ್ನು ಸುಧಾರಿಸುವ ಕಾರ್ಯಗಳು ಸಮಾಜದಲ್ಲಿ ನಡೆಯಬೇಕು, ಎಲ್ಲವನ್ನು ಕಾನೂನು, ಶಿಕ್ಷೆಯಿಂದ ಮಾಡಲು ಸಾಧ್ಯವಿಲ್ಲ ಎಂಬ ನಿಲುವನ್ನು ನಿರಂಜನರು ಹೊಂದಿದ್ದಾರೆ.

'ಶಾಸನ ಮತ್ತು ವೇಶ್ಯೆಯರು' ಎಂಬ ಲೇಖನದಲ್ಲಿ ಪಾರ್ಲಿಮೆಂಟ್‌ನ ಸದಸ್ಯರೊಬ್ಬರು ವೇಶ್ಯ ವೃತ್ತಿಯೆಂಬುದು ಸಮಾಜದಲ್ಲಿ ಅನೀತಿಯೆಂದು, ವೇಶ್ಯೆ ವೃತ್ತಿಯನ್ನು ನಿಷೇದಿಸುವ ಕಾನೂನು ಜಾರಿಗೆ ತರಬೇಕೆಂದು ಚರ್ಚಿಸಿದ ವಿಚಾರವನ್ನು ನಿರಂಜನರವರು ಅನೀತಿಯನ್ನು ಶಾಸನದ ಮೂಲಕ ತಡೆಯಿಡಿಯುವ ಯತ್ನ ವಿಶ್ವದಲ್ಲಿ ನಡೆದಿದೆ, ಈ ಅನುಭವದಿಂದ ಇವರ್‍ಯಾರು ಪಾಠ ಕಲಿತ್ತಿಲ್ಲ ಎಂದು ಪಾನ ನಿರೋಧದ ಪ್ರಶ್ನೆಯನ್ನು ವಿಶ್ಲೇಷಿಸುತ್ತಾರೆ. ಕುಡಿತವನ್ನು ಪ್ರತಿಬಂಧಿಸುವ ಕಾನೂನುಗಳಾದರು ಕುಡಿಯುವವರ ಸಂಖ್ಯೆ ಕಡಿಮೆಯಾಗಿದೆಯೇ, ಜನ ಕಾನೂನುಗಳಿಗೆ ಗೌರವವನ್ನು ಕೊಟ್ಟಿದಾರೆಯೇ, ಕುಡಿತಕ್ಕೆ ಒಂದು ಸಾಮಾಜಿಕ ಮೂಲವಿದೆ. ವ್ಯಕ್ತಿ ತನ್ನ ಜೀವನದಲ್ಲಿ ಅತೃಪ್ತಿ, ಅಸಂತೋಷವನ್ನು, ಭದ್ರತೆಯಿಲ್ಲದ ಉದ್ಯೋಗ ಹೀಗೆ ಮೊದಲಾದ ಸಮಸ್ಯೆಗಳಿಂದ ಪರಿಹಾರ ಪಡೆಯಲು ಕುಡಿತಕ್ಕೆ ಹೋಗುತ್ತಾನೆ. ಮೊದಲು ಇವುಗಳಿಗೆ ಪರಿಹಾರ ದೊರಕಿದರೆ ಪಾನ ನಿರೋಧ ಶಾಸನಕ್ಕೆ ಅರ್ಥ ಬರುತ್ತದೆ. ಇದೇ ಮಾದರಿಯಲ್ಲಿ ವೇಶ್ಯೆ ಸಮಸ್ಯೆಗಳಿಗೂ ಒಂದು ಸಾಮಾಜಿಕ ಮೂಲವಿದೆ. ಬಡತನ, ಅಜ್ಞಾನ (ಶಿಕ್ಷಣ ಇಲ್ಲದ್ದು)ಮೊದಲಾದ ಸಮಸ್ಯೆಗಳಿಗೆ ಪರಿಹಾರ ಸಿಕ್ಕರೆ ವೇಶ್ಯೆ ವೃತ್ತಿಯನ್ನು ನಿಷೇದಿಸುವ ಶಾಸನ ಯಶಸ್ವಿಯಾಗುತ್ತದೆ ಎಂದು ಚರ್ಚಿಸುತ್ತಾರೆ.

ಅಂದಿನ ಸಮಕಾಲೀನ ಸಮಾಜದ ಅನೇಕ ಘಟನೆಗಳು, ಸಮಸ್ಯೆಗಳು ಸಾಹಿತ್ಯದ ವಲಯದಲ್ಲಿ ಚರ್ಚಿತವಾದ ವಿಚಾರಗಳನ್ನು ತಮ್ಮದೇಯಾದ ರೀತಿಯಲ್ಲಿ ಅವುಗಳನ್ನು ತಾತ್ವಿಕರಿಸುತ್ತಾರೆ. ಅದಕ್ಕೆ ಸ್ಪಷ್ಟವಾದ ಉತ್ತರವನ್ನು ಪರಿಹಾರವನ್ನು ನೀಡುತ್ತಾರೆ. ಉಳಿದ ಕೆಲವೊಂದು ಕೃತಿಯ ಲೇಖನಗಳನ್ನು ತೌಲನಿಕ ಅಧ್ಯಯನ ವಿಭಾಗದಲ್ಲಿ ಚರ್ಚಿಸಲಾಗುವುದು.

'ಇದೇ ಕೊನೆಯಲ್ಲ' ಎಂಬ ಲೇಖನದಲ್ಲಿ ನೆಹರೂರವರ ವಿಚಾರಗಳಲ್ಲಿ ದಿನವೆಲ್ಲಾ ದುಡಿಮೆ ಮಾಡಿ ಆ ದುಡುವೆ ನಡುವೆ ನಿನ್ನೆ–ಇಂದು–ನಾಳೆಗಳನ್ನು ಕುರಿತು ಚಿಂತಿಸುವ, ನಿನ್ನೆಯ ಅನುಭವದಿಂದ ಈ ದಿನವನ್ನು ರೂಪಿಸಿಕೊಳ್ಳುವುದು. ಈ ದಿನದ ಆಧಾರದ ಮೇಲೆ ನಾಳೆಯನ್ನು ಕಲ್ಪಿಸಕೊಳ್ಳುವುದು ನೆಹರೂರವರ ದೃಷ್ಟಿಕೋನಗಳಲ್ಲಿ ಒಂದಾಗಿದೆ. ಸದಾ ಕಾಲ ನಿರಂತರವಾಗಿ ಒಬ್ಬ ವಿದ್ಯಾರ್ಥಿಯ ಪ್ರವೃತ್ತಿಯ ಹಾಗೇ ಜವಹಾರ್‌ಲಾಲ್ ನೆಹರೂರವರು ಕಲಿಯುತ್ತಿದ್ದರು. ಹಾಗೆಯೇ ನಾವು ಯಾವಾಗಲೂ ಇರುವ ಸ್ಥಿತಿಗತಿಗಳಿಂದ ಕಲಿತುಕೊಳ್ಳಬೇಕು. ದೃಷ್ಟಿಕೋನವನ್ನು ಬೆಳಸಿಕೊಂಡು ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಕೂಡ ಒಂದು ಸೂತ್ರವಾಗಿದೆ. ಯಾವುದರಲ್ಲೂ ಕೊನೆ ಎಂಬುದಿಲ್ಲ ಎಂಬ ಅವರ ಮತ್ತೊಂದು ವಿಚಾರದ ಸಾಲುಗಳನ್ನು ಉಲ್ಲೇಖಿಸುತ್ತಾರೆ. ಈ ಕಾಲಕ್ಷೇಪದ ವಿಚಾರಗಳಿಗೆ, ಕೊನೆಯೆಂಬುದು ಇಲ್ಲವೆಂದು ಮಾರ್ಮಿಕವಾಗಿ ತಿಳಿಸಿ ಆ ಮೂಲಕ ಸಮಾಜದ, ಸಾಹಿತ್ಯದ, ಕಲೆಯ ಸಂಸ್ಕೃತಿಯ ವಿಚಾರಗಳಿಗೆ ಅಂತ್ಯ ಎಂಬುದಿಲ್ಲ ಎಂಬುದನ್ನು ಸೂಚಿಸುತ್ತಾರೆ.

ಹಿಮಾಲಯದ ದಳ್ಳುರಿ - ೧೯೬೧

ಇದೊಂದು ರಾಜಕೀಯ ದಾಖಲೆಯಾಗಿದ್ದು ೧೯೬೧ ರಲ್ಲಿ ನಡೆದ ಇಂಡೋ-ಚೀನಾ ಯುದ್ಧವನ್ನು ಕುರಿತಂತೆ ತಿಳಿಸುವ ಕೃತಿಯಾಗಿದೆ. ಈ ಕೃತಿಯನ್ನು ೧೯೬೧ರಲ್ಲಿ ನಿರಂಜನರವರು ಪ್ರಕಟಪಡಿಸಿದರು. ಇದರಲ್ಲಿ ೨ ಭಾಗಗಳಿವೆ. ಇದರಲ್ಲಿ ಚೀನಾದ ಕಪಟತನ, ಭಾರತದ ನಾಯಕರ ಉದಾರ ನೀತಿಗಳು ಹೇಗೆ ಭಾರತಕ್ಕೆ ಶಾಪವಾಗಿ ಪರಿಣಮಿಸಿದೆವು ಎಂಬುದನ್ನು ವಿಶ್ಲೇಪಿಸುತ್ತಾರೆ. ಇಲ್ಲಿ ಪಾತ್ರಗಳೇ ದೇಶಗಳಾಗಿದ್ದು, ಒಂದು ಭಾರತ ಮತ್ತೊಂದು ಚೀನಾವಾಗಿದೆ.

ಭಾರತ ಮತ್ತು ಚೀನಾ ದೇಶಗಳೆರಡು ಪಾಶ್ಚಾತ್ಯ ರಾಷ್ಟ್ರಗಳು ಕಣ್ಣುಗಳು ಬಿಡುವ ಮೊದಲೇ ಇಲ್ಲಿ ನಾಗರೀಕತೆ ಬೆಳೆದಿತ್ತು. ರಾಜಕೀಯ ದಾಸ್ಯದಿಂದಾಗಿ ಈ ಎರಡೂ ದೇಶಗಳು ಅವನತಿಯ ಹಾದಿ ಹಿಡಿದವು. ಅದಕ್ಕೆ ದಾಸ್ಯದಿಂದ ಬಿಡುಗಡೆ ಹೊಂದಿದ್ದ ನಂತರ ಜೊತೆ ಜೊತೆಯಾಗಿ ಅಭಿವೃದ್ಧಿಯ ಕಡೆ ಹೋಗುವುದು ಎಂದು ಭಾರತವು ಪುರಾತನ ಕಾಲದಿಂದಲೂ ಚೀನದೊಡನೆ ಇದ್ದ ಬಾಂಧವ್ಯವನ್ನು ಬೆಸೆಯಲು ಪ್ರಯತ್ನಿಸಿತು. ಆದರೆ ಚೀನಾ ಆ ಹಳೆಯ ಸ್ನೇಹ ಸಂಬಂಧಗಳಿಗೆ ಬೆಲೆ ಕೊಡದೆ ನಂಬಿಕೆ ದ್ರೋಹ ಮಾಡಿತ್ತು. ಭಾರತ ಮತ್ತು ಚೀನಾದ ಸಾಂಸ್ಕೃತಿಕ ಹಿರಿಮೆಯ ಹಿನ್ನಲೆಯಲ್ಲಿ ನಿರಂಜನರವರು ಭಾರತ ಐದು ಸಾವಿರ ವರ್ಷಗಳಿಂದ ತನ್ನದೇಯಾದ ಸಂಸ್ಕೃತಿಯಲ್ಲಿ ಬೆಳೆದು ಬಂದು ಪರಮತ ಸಹಿಷ್ಣುತೆಯನ್ನು ವಿಶ್ವಕ್ಕೆ ಸಾರಿತು. ಆದರೆ ಇಲ್ಲಿ ರಾಜಕೀಯ ಒಗ್ಗಟ್ಟು ಇಲ್ಲದೆ ಕ್ರಿ.ಪೂ ೩೨೭ ರಲ್ಲಿ ಗ್ರೀಸ್‌ನ ಅಲೆಗ್ಸಾಂಡರ್ ಪೌರವನನ್ನು ಎದುರಿಸಿದ್ದರಿಂದ ಹಿಡಿದು ಬ್ರಿಟಿಷರು ೧೯೪೭ ರವರೆಗೆ ಸಾಮ್ರಾಜ್ಯಗಳ ನಡುವೆ ಐಕ್ಯವಿಲ್ಲದೆ ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಅನೇಕ ಅರಸು ಮನೆತನಗಳು ನಾಶಗೊಂಡವು. ಅದೇ ರೀತಿಯಲ್ಲಿ ಚೀನಾವು ೩೦೦೦ ವರ್ಷಗಳಷ್ಟು ಸುದೀರ್ಘ ಪರಂಪರೆಯನ್ನು ಹೊಂದಿದ್ದರೂ, ಚೀನಾವನ್ನು ಶಾಂಗ್, ಚೌ ವಂಶ, ಚೆನ್, ಹಾನ್, ಸುಂಗ್, ಮಂಗೋಲ್, ಮಂಚು ಮನೆತನಗಳು ಆಳ್ವಿಕೆ ಮಾಡಿದವು, ಚೆನ್ ವಂಶದ ಷಿಹೂ ಅಂಗ್ ಟಿ ಚೀನಾವನ್ನು ಒಟ್ಟಾಗಿ ಬೆಸೆದನು. ಆದರೆ ಚೀನಾದ ಎಲ್ಲಾ ದಾಖಲೆಗಳನ್ನು ಗ್ರಂಥಗಳನ್ನು ಸುಟ್ಟು ಹಾಕಿಸಿದನು. ಹಾನ್ ರಾಜವಂಶದ ಬಳಿಕ ಸುಮಾರು ಮೂರು ಶತಮಾನಗಳ ಕಾಲ ಚೀನಾದಲ್ಲಿ ಅನೈಕ್ಯತೆ ಮತ್ತು ಅಂತಃಕಲಹದಿಂದಾಗಿ ತೊಳಲಾಡಿತು. ೧೩ ಶತಮಾನದಲ್ಲಿ ಚಂಗೀಸ್ ಖಾನ್ ದಂಡೆತ್ತಿ ಬಂದು ಚೀನಾವನ್ನು ಆಕ್ರಮಿಸಿದನು. ಮಿಂಗ್ ವಂಶವನ್ನು ಉರುಳಿಸಿದ ಮಂಚುಗಳು ಕೂಡ ೧೯ ನೇ ಶತಮಾನದವರೆಗೂ ದುರ್ಬಲರಾಗಿದ್ದರು. ಮುಂದೆ ಫ್ರೆಂಚರು, ಅಮೇರಿಕಾ, ಬ್ರಿಟನ್, ಫ್ರಾನ್ಸ್, ಪೋರ್ಚುಗೀಸ್, ರಷ್ಯ, ಜರ್ಮನಿ ಮೊದಲಾದ ಪರಕೀಯ ಶಕ್ತಿಗಳು ಚೀನಾದ ಮೇಲೆ ಪ್ರಭಾವ ಬೀರಲು ಆರಂಭಿಸಿದವು. ೧೮೯೪ರಲ್ಲಿ ಚೀನಾ – ಜಪಾನ್ ಯುದ್ಧ ನಡೆದು ಜಪಾನ್ ಜಯಗಳಿಸಿತು. ಇದರಲ್ಲಿ ಮಂಚೂ ಅರಸರು ನಷ್ಟಗೊಂಡು ಪಾಶ್ಚಾತ್ಯ ಸಾಮ್ರಾಜ್ಯ ಶಾಹಿಗಳ ಪರೋಕ್ಷ ಆಡಳಿತಕ್ಕೆ ಚೀನಾ ಒಳಪಟ್ಟಿತ್ತು. ನಿರಂಜನರು ಇಲ್ಲಿ ಮೊದಲಿಗೆ ಭಾರತ ಮತ್ತು ಚೀನಾದ ಸಾಂಸ್ಕೃತಿಕ ಪರಂಪರೆಯ ವಿಚಾರಗಳನ್ನು, ಅರಸು ಮನೆತನಗಳ ಒಳಜಗಳ - ಸಂಘರ್ಷಗಳಿಂದ ಸಾಮ್ರಾಜ್ಯಶಾಹಿಗೆ ಒಳಗಾದದ್ದನ್ನು ವಿಶ್ಲೇಷಿಸುತ್ತಾರೆ.

ಭಾರತದಲ್ಲಿಯು ೧೮೫೭ ರಲ್ಲಿ ಪ್ರಥಮ ಸ್ವಾತಂತ್ರ್ಯ ಹೋರಾಟ ನಡೆದರು ಅದು ಫಲ ನೀಡಲಿಲ್ಲ. ಮುಂದೆ ೧೯೦೫ ರಲ್ಲಿ ಬಂಗಾಳದ ವಿಭಜನೆಯಿಂದಾಗಿ ಸ್ವಾತಂತ್ರ್ಯ ಹೋರಾಟ ತೀವ್ರ ತರದ ಸ್ವರೂಪದಲ್ಲಿ ನಡೆದು, ಮೋಹನ್ ದಾಸ್ ಕರಮಚಂದ್ರ ಗಾಂಧಿಯವರ ನೇತೃತ್ವದಲ್ಲಿ

ಶತಮಾನದ ದಾಸ್ಯದಿಂದ ಬಿಡುಗಡೆ ಹೊಂದಲು ಅನೇಕ ಚಳುವಳಿಗಳು, ಸತ್ಯಾಗ್ರಹಗಳು ನಡೆದು, ಕ್ವಿಟ್ ಇಂಡಿಯಾ ಚಳುವಳಿಯಿಂದ ಸ್ವಾತಂತ್ರ್ಯ ಹೋರಾಟ ದೇಶಾದ್ಯಂತ ಹರಡಿ ಭಾರತ ದೇಶವು ಸ್ವಾತಂತ್ರ್ಯಗೊಂಡಿತ್ತು. ಆದರೆ ಭಾರತಕ್ಕಿಂತ ಭಿನ್ನ ರೀತಿಯಲ್ಲಿ ಚೀನಾದಲ್ಲಿ ಹೋರಾಟ ನಡೆಯಿತ್ತು. ಅದರ ನೇತೃತ್ವವನ್ನು ಡಾ. ಸನ್‌ಯಾತ್ ಸೇನ್‌ರವರ ಉಗ್ರ ಹೋರಾಟದಿಂದ ಮಂಚೂ ಆಡಳಿತವನ್ನು ಧಿಕ್ಕರಿಸಲು ಜುಟ್ಟನ್ನು ಕತ್ತರಿಸಿಕೊಂಡರು. ಅಮೆರಿಕಾ, ಇಂಗ್ಲೆಂಡ್‌ಗಳಲ್ಲಿ ಭೂಗತರಾಗಿದ್ದು ಚೀನಿಯರನ್ನು ಸಂಘಟಿಸಿದರು. ಈ ವೇಳೆಗಾಗಲೇ ೧೯೦೫ ರಲ್ಲಿ ಕೊಮಿಂಗ್ ಟಂಗ್ ಎಂಬ ರಾಷ್ಟ್ರೀಯ ಜನತಾ ಪಕ್ಷ ಚೀನಾದಲ್ಲಿ ಸ್ಥಾಪಿಸಿದರು. ೧೯೧೨ ರಲ್ಲಿ ಮೊದಲ ಚೀನಿ ಗಣ ರಾಜ್ಯದ ಅಧ್ಯಕ್ಷರಾಗಿ ನಾನ್ ಕಿಂಗ್ ನಲ್ಲಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ಮಂಚೂ ಆಡಳಿತ ಅಂತ್ಯವಾಯಿತು. ಆದರೆ ಚೀನಾದಲ್ಲಿ ಅಂತರ್ ಯುದ್ಧಗಳು ನಡೆದು ರಾಷ್ಟ್ರೀಯ ಚಳುವಳಿಯಿಂದಾಗಿ ಪ್ರಭಾವಿತರಾಗಿ ಯುವಕರು ಕಮ್ಯೂನಿಸ್ಟ್ ಪಕ್ಷವನ್ನು ಸೇರಿದರು. ೧೯೨೧ರಲ್ಲಿ ಟಿ.ಲಿ. ಸಾನ್ ಮತ್ತು ಮಾವೋ ತ್ಸೇತುಂಗ್ ಹಾಗೂ ಚೌ ಎನ್ ಲೇ ಸದೃಢವಾಗಿ ಕಮ್ಯೂನಿಸ್ಟ್ ಪಕ್ಷವನ್ನು ಸಂಘಟಿಸಿದರು.

ಭಾರತ ಮತ್ತು ಚೀನಾದ ಸ್ವಾತಂತ್ರ್ಯ ಹೋರಾಟ ಹೀಗೆ ಭಿನ್ನವಾದ ಮತ್ತು ಸಾಮ್ಯತೆಯಿಂದ ಕೂಡಿದ ರೀತಿಯನ್ನು ವಿವರಿಸುತ್ತಾರೆ. ಭಾರತ ಪ್ರಜಾಪ್ರಭುತ್ವ ಮಾದರಿಯನ್ನು ಹಿಡಿದರೆ, ಚೀನಾ ಕಮ್ಯೂನಿಸ್ಟ್ ಹಾದಿಯನ್ನು ಹಿಡಿಯಿತ್ತು. ಭಾರತ ಮತ್ತು ಚೀನಾದ ಸಾಂಸ್ಕೃತಿಕ ವಿಚಾರಗಳು, ಸಾಮ್ರಾಜ್ಯಗಳ ಆಡಳಿತ ಮಾತ್ರವಲ್ಲದೆ, ಸ್ವಾತಂತ್ರ್ಯ ಹೋರಾಟದ ಹಾದಿಯು ಈ ಎರಡು ದೇಶಗಳಲ್ಲಿ ಭಿನ್ನವಾದ ಹೋರಾಟದ ತಾತ್ವಿಕತೆಯನ್ನು ನಿರಂಜನರು ಗುರುತಿಸುತ್ತಾರೆ.

ಈ ಕೃತಿಯ ಮೊದಲ ಭಾಗದಲ್ಲಿ ಭಾರತ ಮತ್ತು ಚೀನಾ ದೇಶದ ಸಾಂಸ್ಕೃತಿಕ ವಿಚಾರಗಳು – ಸಾಮ್ರಾಜ್ಯಗಳ ಆಡಳಿತ, ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟವನ್ನು ತಾತ್ವೀಕರಿಸಿದರೆ ಎರಡನೆಯ ಭಾಗದಲ್ಲಿ ಭಾರತ ಮತ್ತು ಚೀನಾ ನಡುವೆ ಯುದ್ದ ನಡೆಯಲು ಕಾರಣವಾದ ಚೀನಾ ದೇಶದ ಸಾಮ್ರಾಜ್ಯಶಾಹಿ ಧೋರಣೆಯ ಹಿನ್ನಲೆಯಲ್ಲಿ ವಿಶ್ಲೇಷಿಸುತ್ತಾರೆ. ಚೀನಾದ ರಾಜಕೀಯ ಧೋರಣೆ ಎಂದರೆ ಕಮ್ಯೂನಿಸ್ಟ್ ಧೋರಣೆಯು ಆಂತರಿಕ ದುಸ್ಥಿತಿಯ ಕಡೆಗೆ ಚೀನಾದ ಪ್ರಜೆಗಳು ಗಮನಹರಿಸದಂತೆ ಬಾಹ್ಯ ಶತ್ರುವೊಂದನ್ನು ಸೃಷ್ಟಿಸಿ, ರಾಷ್ಟ್ರ ರಕ್ಷಣೆಯ ನಿರಂತರ ಕೂಗನ್ನು ಉಳಿಸಿಕೊಳ್ಳುವುದು. ಅದು ಇಂದಿಗೂ ಚೀನಾದ ಕಮ್ಯೂನಿಸ್ಟ್‌ನ ಧೋರಣೆಯು ಆಗಿದೆ. ದ್ವಿತೀಯ ಮಹಾಯುದ್ಧದಲ್ಲಿ ಕೊರಿಯವನ್ನು ವಿಂಗಡಿಸಿ ಉತ್ತರ ಕೊರಿಯಕ್ಕೆ ರಷ್ಯಾ ಮತ್ತು ಚೀನಾ ಸಹಕರಿಸಿದವು. ಮುಂದೆ ಟಿಬೆಟ್‌ನ್ನು ಆಕ್ರಮಿಸಲು ಮುಂದಾಗಿದ್ದ ಕಮ್ಯೂನಿಸ್ಟ್ ಚೀನಾದ ನಾಯಕರು ಏಷ್ಯಾ ಖಂಡದಲ್ಲಿಯೇ ನಾಯಕರಾಗಿದ್ದೇವೆ ಎಂಬ ಧೋರಣೆ ಭಾರತ ಸಾಮ್ರಾಜ್ಯ ಶಾಹಿಯ ಬಾಲಬಡಕ ದೇಶವೆಂದು ಬಿಂಬಿಸಲು ಪ್ರಯತ್ನಿಸಿತು. ಭಾರತವು ಸ್ವಾತಂತ್ರ್ಯ ನಂತರ ರಾಜಕೀಯ ಸ್ವಾತಂತ್ರ್ಯಗಳಿಸಿದ ಜೊತೆಗೆ ಸಾಮಾಜಿಕ, ಆರ್ಥಿಕ ಕ್ರಾಂತಿಗಾಗಿ ಪಂಚವಾರ್ಷಿಕ ಯೋಜನೆಗಳ ಮೂಲಕ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದು ಪ್ರಜಾಪ್ರಭುತ್ವ ಮಾದರಿಯಲ್ಲಿ ಮುನ್ನಡೆಯುವ ಸಂದರ್ಭದಲ್ಲಿ ಚೀನಾವು ರಷ್ಯಾದೊಂದಿಗೆ ೩೦ ವರ್ಷಗಳ ಒಪ್ಪಂದ ಮಾಡಿಕೊಂಡು, ಜಪಾನ್, ಟಿಬೆಟ್, ನೇಪಾಳ ಮೊದಲಾದ ರಾಷ್ಟ್ರಗಳ ಮೇಲೆ ಆಕ್ರಮಣ ಮಾಡಲು ಮುಂದಾಯಿತು. ಚೀನಾದಲ್ಲಿ ಚುನಾವಣೆ ನಡೆದರು ಅದರ ಎಲ್ಲಾ ನಿರ್ವಹಣೆ ಕಮ್ಯೂನಿಸ್ಟ್ ಪಾರ್ಟಿಯೆ ಆಗಿರುವುದು. ಭಾರತದಲ್ಲಿ ಪ್ರಜಾಪ್ರಭುತ್ವ ಮಾದರಿಯಲ್ಲಿ ಎಲ್ಲಾ ರೀತಿಯ ಸ್ವಾತಂತ್ರ್ಯವನ್ನು ಪ್ರಜೆಗಳು ಮುಕ್ತವಾಗಿ ಅನುಭವಿಸುವ

ಜಗತ್ತಿನ ಎಲ್ಲಾ ವಿಚಾರಗಳನ್ನು ತಿಳಿಯಬಹುದು. ಆದರೆ ಚೀನಾದ ಒಳಗಡೆ ಏನು ನಡೆಯುತ್ತದೆ ಎಂಬುದೆ ತಿಳಿಯದಾಗಿದೆ.

ಚೀನಾದಂತೆ ಬ್ರಿಟನ್ ಕೂಡ ಟಿಬೆಟ್‌ನ ಮೇಲೆ ಆಕ್ರಮಣ ಮಾಡಲು ನೋಡಿತು. ಆದರೆ ಅದು ಪರ್ವತ ಪ್ರದೇಶವಾಗಿದ್ದರಿಂದ ಸಾಧ್ಯವಾಗಲಿಲ್ಲವೆಂದು ೧೯೧೩ ರಲ್ಲಿ ಬ್ರಿಟನ್, ಟಿಬೆಟ್, ಚೀನಾದ ನಡುವೆ ತ್ರಿರಾಷ್ಟ್ರಗಳ ಒಪ್ಪಂದ ಏರ್ಪಟ್ಟಿದ್ದರೂ ೧೯೪೯ರಲ್ಲಿ ಕಮ್ಯೂನಿಸ್ಟ್ ಚೀನಾ ಟಿಬೆಟ್‌ನ್ನು ಕಬಳಿಸಲು ತಂತ್ರವೊಂದನ್ನು ಹೆಣೆದಿತ್ತು. ಆದರೆ ಅದಕ್ಕೆ ತೊಡಕಾದದ್ದು ಭಾರತವಾಗಿತ್ತು. ಕಾರಣವೆಂದರೆ ಭಾರತ ಟಿಬೆಟ್ ನಡುವೆ ಇದ್ದ ವ್ಯಾಪಾರ ಸಂಬಂಧ ಮಾತ್ರವಲ್ಲದೆ ಟಿಬೆಟ್‌ಗೆ ಸಂಬಂಧಿಸಿದಂತೆ ಬ್ರಿಟಿಷ್ ಸರಕಾರ ಬಳುವಳಿಯಾಗಿ ಭಾರತಕ್ಕೆ ವಿಶಿಷ್ಟ ಹಕ್ಕುಗಳನ್ನು ನೀಡಿದೆ. ೧೯೫೬ ರಲ್ಲಿ ಬುದ್ಧನ ೨೫೦೦ನೇ ವರ್ಷದ ಆಚರಣೆಗಾಗಿ ಭಾರತಕ್ಕೆ ದಲೈಲಾಮ ಬಂದಾಗ ಈ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಿಂದಾಗಿ ಧಾರ್ಮಿಕ, ರಾಜಕೀಯ ಧೋರಣೆಗಳಿಗೆ ಮಾರು ಹೋದರು. ಅಲ್ಲಿಯವರೆಗೆ ಚೀನಾದ ಧೋರಣೆಯನ್ನು ನೋಡಿದ್ದ ಅವರಿಗೆ ಭಿನ್ನ ತಾತ್ವಿಕತೆಯೇ ಮೂಡಿತ್ತು. ಮುಂದೆ ಚೌ ಎನ್ ಲಾಯ್ ದಲಾಯಿಲಾಮಾರನ್ನು ಬಂಧಿಸಲು ಮುಂದಾದಾಗ ಅವರಿಗೆ ಭಾರತ ಆಶ್ರಯವನ್ನು ನೀಡಿತ್ತು.

ಚೀನಾದಲ್ಲಿ ಕ್ಷಾಮಪೀಡಿತ ಪ್ರದೇಶ, ಹಸಿವು, ಆಹಾರ ಉತ್ಪಾದನೆ ಕಡಿಮೆ, ವಾಕ್ ಸ್ವಾತಂತ್ರ್ಯವಿಲ್ಲದೆ ಇರುವುದು, ಕಲೆ ಮತ್ತು ವಾಸ್ತುಶಿಲ್ಪಕ್ಕೆ ಪ್ರೋತ್ಸಾಹವಿಲ್ಲದ, ಜನತೆಯನ್ನು ಶ್ರಮಿಕರಾಗಿ ಮಾಡಿದ್ದು, ಸಾಹಿತ್ಯ ಮತ್ತು ಕಲೆಯಲ್ಲಿ ಮಾವುತ್ಸೇತುಂಗನ ವಿಚಾರಗಳನ್ನು ಅನುಸರಿಸಬೇಕಾದ ಚೀನಾದ ಕಮ್ಯೂನಿಸ್ಟ್ ತತ್ವಗಳು ಮೊದಲಾದ ಆಂತರೀಕ ಆಡಳಿತದಿಂದ ಕಂಗೆಟ್ಟ ಜನರ ಮನಃಸ್ಥಿತಿಯನ್ನು ಬೇರೆಡೆಗೆ ಸೆಳೆಯಲು, ತನ್ನ ಮಿಲಿಟರಿ ಪ್ರದರ್ಶನ, ಚೀನಾದ ಕಮ್ಯುನಿಸ್ಟ್ ವೈಖರಿ ಪ್ರಗತಿಯ ಹಾದಿ ಹಿಡಿದಿದೆ ಎಂಬುದನ್ನು ಬಿಂಬಿಸಲು, ಜಗತ್ತಿನ ಯಾವ ಶಕ್ತಿ ಬಣ್ಣದಲ್ಲಿ ಸೇರದ ಭಾರತವನ್ನು ನಗೆ ಪಾಡು ಮಾಡಲು, ಶಾಂತಿಯುತ ಸಹಭಾಳ್ವೆ ಎಂಬುದು ಹಾಸ್ಯಾಸ್ಪದ ಎಂದು ಜಗತ್ತಿಗೆ ತೋರಿಸಲು ಚೀನಾ ಭಾರತದ ಮೇಲೆ ಯುದ್ಧ ಸಾರಲು ಕಾರಣವಾದ ಅಂಶಗಳು.

ಜೊತೆಗೆ ಭಾರತದಲ್ಲಿನ ಆಂತರಿಕ ದೌರ್ಬಲ್ಯ, ರಾಜ್ಯಗಳ ಗಡಿ ಪ್ರಶ್ನೆ, ನೀರಿಗಾಗಿ ಕಾದಾಟ, ಪರಸ್ಪರ ಅಪನಂಬಿಕೆ, ಉತ್ತರ ಮತ್ತು ದಕ್ಷಿಣ ಭಾರತದ ದ್ವೇಷ, ಭಾರತದ ಕಮ್ಯೂನಿಸ್ಟ್ ಪಕ್ಷ ತನಗೆ ನೆರವು ನೀಡುತ್ತದೆ ಎಂಬ ಭಾವನೆ ಇವೆಲ್ಲಾ ಚೀನಾ ಭಾರತದ ವಿರುದ್ಧ ಯುದ್ಧ ಮಾಡಲು ಪ್ರೇರೇಪಿಸಿದ ಕಾರಣಗಳಾಗಿವೆ. ಭಾರತದ ಪರಂಪರಾಗತ ಗಡಿಯು ಪರ್ವತಾಗ್ರಹ ಮತ್ತು ಜಲವಿಭಾಜನ ತತ್ವದ ಮೇಲೆ ವಿಂಗಡಣೆಯಾಗಿದೆ. ಅದಕ್ಕೆ ಚೀನಾದಲ್ಲಿ ಯಾವುದೇ ಸಾಕ್ಷ್ಯ ಇರಲಿಲ್ಲ. ಗಡಿಯನ್ನು ಕಬಳಿಸುವ ಉದ್ದೇಶದಿಂದಲೇ ಪ್ರತ್ಯೇಕ ಗಡಿ ರೇಖೆಗಳ ನಕಾಶೆಯನ್ನು ಹಿಡಿದು ಭಾರತದ ಮೇಲೆ ೧೯೬೧ ರಲ್ಲಿ ದಾಳಿ ಮಾಡಲು ಮುಂದಾಯಿತು. ಆದರೆ ವಿಸ್ತಾರವಾದ ಪರ್ವತ ಪ್ರದೇಶದ ಮೇಲೆ ನಮ್ಮ ಸೈನಿಕರಿಗೆ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆ ಹೋರಾಡಲು ಸಾಧ್ಯವಾಗಲಿಲ್ಲವೆಂದು, ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಯೋಧರು ಹೋರಾಡಿದರೆಂದು ನಿರಂಜನರು ಚರ್ಚಿಸುತ್ತಾರೆ.

ಬಹಳ ಮುಖ್ಯವಾಗಿ ನಿರಂಜನರು ಭಾರತ-ಚೀನಾ ಯುದ್ಧ ನಡೆಯಲು ಕೆಲವರು ದಲಾಯಿಲಾಮಾರಿಗೆ ಆಶ್ರಯ ಕೊಟ್ಟಿದ್ದು ಕಾರಣವೆಂದು ಕೊಂಡಿದ್ದಾರೆ. ಆದರೆ ವಾಸ್ತವವಾಗಿ ಚೀನಾದ ಸೈನಿಕರು ೧೯೫೫-೫೬ ರಲ್ಲಿ ಭಾರತದ ಮೇಲೆ ಆಕ್ರಮಣ ಮಾಡಿದ್ದಾರೆಂದು, ದಲಾಯಿಲಾಮಾ ಚೀನಕ್ಕೆ ಸೆರೆ ಸಿಕ್ಕಿದ್ದರು ಚೀನಾ ಭಾರತದ ಮೇಲೆ ಆಕ್ರಮಿಸುತ್ತಿತ್ತು. ಇದಕ್ಕೆ ಬಹಳ ಮುಖ್ಯವಾದ ಕಾರಣವೆಂದರೆ ಚೀನಾದ ಸಾಮ್ರಾಜ್ಯವಾದಿ ವಿಸ್ತರಣೆ ಯೋಜನೆಯೆಂಬುದು ಆಗಿದೆ. ಅದು ಚೀನಿ ಗಣರಾಜ್ಯ ಸ್ಥಾಪನೆಯಾಗುವ ಮೊದಲೆ ಯುನಾನ್‌ನ ಗವಿಗಳಲ್ಲಿ ಮಾವೋ ತ್ಸೆತುಂಗ್ ಆಶ್ರಯ ಪಡೆದಾಗಲೇ ಆತನ ವಿಚಾರಗಳಲ್ಲಿ ಇದು ಒಂದಾಗಿದೆ. ಭಾರತದ ಮೇಲೆ ಚೀನಾ ಆಕ್ರಮಿಸಲು ಅದರ ವಿಸ್ತರಣಾವಾದಿ ನೀತಿ, ಚೀನೀ ಕಮ್ಯೂನಿಸ್ಟ್ ಚಿಂತನೆಗಳು ಹಾಗೂ ಮಾವುತ್ಸೇ ತುಂಗ್‌ನ ವಿಚಾರಗಳು ಕಾರಣವೆಂದು ತಾತ್ವೀಕರಿಸುತ್ತಾರೆ.

ರಾಜಧಾನಿಯಿಂದ – ೧೯೭೨

ನಿರಂಜನರವರು ಪತ್ರಿಕೆಗಳಿಗಾಗಿ ಬರೆದ ವಸ್ತುನಿಷ್ಠ ಟಿಪ್ಪಣಿ ರೂಪದ ಬರಹವೇ ರಾಜಧಾನಿಯಿಂದ. ಇದನ್ನು ೧೯೬೫ ರಿಂದ ೧೯೬೭ ರವರೆಗೆ ಪ್ರತಿವಾರ ಮೂರು ಲೇಖನಗಳು 'ಕರ್ಮವೀರ' ಸಾಪ್ತಾಹಿಕದಲ್ಲಿ ಪ್ರಕಟಿಸುತ್ತಿದ್ದರು. ಅದುವೇ 'ರಾಜ್ಯದ ರಾಜಧಾನಿಯಿಂದ' ಎಂಬ ಅಂಕಣವಾಗಿದೆ. 'ರಾಜಧಾನಿಯಿಂದ' ಮತ್ತು 'ದಿನಚರಿಯಿಂದ' ಎಂಬ ಅಂಕಣ ಸಂಕಲನಗಳನ್ನು ೧೯೭೨ ರಲ್ಲಿ ಪುಸ್ತಕದ ರೀತಿಯಲ್ಲಿ ಹೊರತರಲಾಗಿದೆ. ಇದರಲ್ಲಿ ಒಟ್ಟು ೧೧೩ ಅಂಕಣಗಳು ಇವೆ. ಅವುಗಳ ಹಿನ್ನಲೆಯಲ್ಲಿ ನಿರಂಜನರವರ ತಾತ್ವಿಕ ದೃಷ್ಟಿಕೋನವನ್ನು ವಿಶ್ಲೇಷಿಸಲಾಗಿದೆ.

ಭಾಷಾ ಪ್ರೇಮಕ್ಕೆ ಸಂಬಂಧಿಸಿದಂತೆ ನಿವೃತ್ತ ವಿಜ್ಞಾನದ ಅಧ್ಯಾಪಕರಾದ ಆರ್. ಎಲ್. ನರಸಿಂಹಯ್ಯನವರು ಶಿಕ್ಷಣ ಮಾಧ್ಯಮ ಕನ್ನಡವಾಗಬೇಕೆಂದು, ವಿದ್ಯಾಭ್ಯಾಸದ ಎಲ್ಲಾ ಹಂತಗಳಲ್ಲಿಯೂ ಕನ್ನಡವೇ ಮುಖ್ಯವಾಗಬೇಕು ಎಂಬ ತಾತ್ವಿಕತೆಯನ್ನು ಪ್ರತಿಪಾದಿಸುವುದು ಮಾತ್ರವಲ್ಲದೆ ವಿಜ್ಞಾನಕ್ಕೆ ಸಂಬಂಧಿಸಿದಂತೆ ಪಠ್ಯ ಪುಸ್ತಕಗಳು ಕನ್ನಡದಲ್ಲಿಯೇ ರಚನೆಯಾಗಬೇಕು. ವಿಜ್ಞಾನದ ಜ್ಞಾನ ಮಾತೃಭಾಷೆಯಾದ, ಪ್ರಾದೇಶಿಕ ಭಾಷೆಯಾದ ಕನ್ನಡದಲ್ಲಿ ದೊರಕಬೇಕೆಂಬ ನಿಲುವನ್ನು ಪುಷ್ಠೀಕರಿಸುತ್ತಾರೆ. ಕನ್ನಡ ಭಾಷೆಯನ್ನು ಬೆಳೆಸುವ ನಿಟ್ಟಿನಲ್ಲಿ ಸಾಹಿತ್ಯ ಪರಿಷತ್ತು ಮತ್ತು ಸರಕಾರ ತಿ. ನಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಕನ್ನಡ – ಕನ್ನಡ ನಿಘಂಟು ಹೊರತರಲು ಹಣ ಸಹಾಯವನ್ನು ಮಾಡುವ ಮೂಲಕ ಕನ್ನಡದ ಅನೇಕ ಪದಗಳಿಗೆ ಅರ್ಥ ತಿಳಿಯಲು ಈ ಕಾರ್ಯ ಸಹಾಯವಾಗುತ್ತದೆ. ರಂಗನಾಥ ದಿವಾಕರು ಕೂಡ ೮೮ ಪುಟಗಳ ಪತ್ರಿಕಾ ನಿಘಂಟು ಹೊರ ತರುತ್ತಿದ್ದು ಪತ್ರಿಕೆಯಲ್ಲಿ ಪ್ರಕಟವಾಗುವ ಒಂದೇ ಅರ್ಥ ಬರುವ ಪದಗಳನ್ನು ಇದರಿಂದ ಬಳಸಬಹುದು. ಕನ್ನಡದ ಹಲವು ಪತ್ರಿಕೆಗಳು ಹೀಗೆ ಏಕರೂಪತೆಯಿಂದ ಕೂಡಿದ ಪದಗಳನ್ನು ಬಳಸಲು ಸಾಧ್ಯವಿದೆಯೇ? ಎಂದು ಪ್ರಶ್ನಿಸುತ್ತಾರೆ. ಪತ್ರಿಕೆಗಳಲ್ಲಿ ಏಕರೂಪದ ಪದಗಳನ್ನು ಬಳಸಲು ಸಾಧ್ಯವಾಗುವುದಿಲ್ಲ ಅದು ಒಬ್ಬ ಪತ್ರಕರ್ತನ ಭಾಷಾ ಪಾಂಡಿತ್ಯ, ಪ್ರದೇಶ ಎಲ್ಲವೂ ಪ್ರಭಾವಿಸಿರುತ್ತದೆ ಎಂಬ ನಿಲುವನ್ನು ಇಲ್ಲಿ ಕಾಣಬಹುದು.

ಕನಕದಾಸರ ಜಯಂತಿಯನ್ನು ಸರಕಾರ ನಡೆಸುತ್ತಿದ್ದು ಅವರ ಜಯಂತಿಯ ಆಚರಣೆಗೆ ಒಂದೇ ಸಮುದಾಯದವರನ್ನು ಸಮಿತಿಗಳಲ್ಲಿ ತೊಡಗಿಸುವುದು ಸರಿಯಿಲ್ಲವೆಂದು. ಕನಕದಾಸರೇ

ಕುಲವನ್ನೆಲ್ಲಾ ಬಿಟ್ಟು ಮನುಷ್ಯರಾಗಿ ಬದುಕಿ ಎಂದು ಹೇಳುವಾಗ ಇಂದಿಗೂ ಸರಕಾರಗಳು ಜಯಂತಿಗಳನ್ನು ಆಚರಿಸಬೇಕಾದರೆ ಆ ದಿನದ ಕಾರ್ಯಕ್ರಮಗಳಲ್ಲಿ ಆಯಾಯ ಜಾತಿಗಳಿಗೆ ಹೆಚ್ಚಿನ ಪ್ರಾಧ್ಯಾನ್ಯತೆ ನೀಡುವುದು ಅವರ ವಿಚಾರಗಳನ್ನು ಅರ್ಥ ಮಾಡಿಕೊಳ್ಳದ ಧೋರಣೆಯಾಗಿದೆ. ಒಂದು ದೃಷ್ಟಿಯಲ್ಲಿ ಜಯಂತಿಗಳನ್ನು ಆಚರಿಸುವ ಮೂಲಕ ಸಹಿಷ್ಣುತೆ ಹಾಗೂ ವಿಚಾರ ಮಂಥನ ಮಾಡಲು ಸಾಧ್ಯ. ಆ ಜಯಂತಿಯ ಹಿನ್ನಲೆಯಲ್ಲಿ ಕನಕದಾಸರಂಥವರನ್ನು ಒಂದು ಜಾತಿಗೆ, ಸಮುದಾಯಕ್ಕೆ ಸೀಮಿತಗೊಳಿಸುವುದು ಸರಿಯಲ್ಲ ಎಂಬ ತಾತ್ವಿಕತೆಯನ್ನು ನಿರಂಜನರವರು ಪ್ರತಿಪಾದಿಸುತ್ತಾರೆ.

ಭಾರತ ಚೀನಾ ಯುದ್ಧದ ನಂತರವು ರಾಷ್ಟ್ರ ರಕ್ಷಣೆಗಾಗಿ ಮೈಸೂರು ರಾಜ್ಯದಲ್ಲಿ ಎನ್.ಸಿ.ಸಿ ವತಿಯಿಂದ ಹೆಣ್ಣುಮಕ್ಕಳಿಗೆ ಸೈನಿಕ ತರಬೇತಿ ನಡೆದು ರಾಷ್ಟ್ರಕ್ಕೆ ಅಪಾಯ ಉಂಟಾದಾಗ ಅದರಲ್ಲಿ ಪಾಲ್ಗೊಳ್ಳಲು ಮಹಿಳೆಯರು ಮುಂದೆ ಬಂದಿದ್ದಾರೆ. ನೀರು, ಹಾಲಿಗೆ ಅಭಾವ ಬಂದಿದ್ದರು ರಾಷ್ಟ್ರ ರಕ್ಷಣೆಗಾಗಿ ನಿಧಿಯನ್ನು ಸಂಗ್ರಹಿಸಿ ಕೊಡುವ ಕನ್ನಡಿಗರ ಮನಃಸ್ಥಿತಿಯನ್ನು ವಿವರಿಸುತ್ತಾರೆ. ವ್ಯಕ್ತಿ ಮತ್ತು ಸಂಸ್ಥೆಗಳೆರಡು ಬೆರೆತು ಶಕ್ತಿಯಾಗಬೇಕು, ವ್ಯಕ್ತಿಯೇ ಸಂಸ್ಥೆಯಾಗಬಾರದೆಂಬ ತಾತ್ವಿಕ ನಿಲುವಿಗೆ ನಿರಂಜನರು ವ್ಯಕ್ತಿ ಬಂದು ಸಂಸ್ಥೆಯಾಗಿ ಮಾಡಿದ ಕೆಲಸದಲ್ಲಿ ಅ.ನ.ಕೃ ನೂರು ಕಾದಂಬರಿಗಳನ್ನು ಬರೆದಿರುವುದು, ಡಿ.ವಿ.ಜಿ ಯವರು ಕಟ್ಟಿ ಬೆಳೆಸಿದ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯು ತನ್ನದೇಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸಿದೆ. ವ್ಯಕ್ತಿ ಮತ್ತು ಸಂಸ್ಥೆಗಳರೆಡು ಬೆರೆತು ಏಕ ಶಕ್ತಿಯಾಗಬೇಕೆಂಬ ನಿಲುವನ್ನು 'ನೀರು, ಹಾಲು, ಹಣ, ವ್ಯಕ್ತಿ' ಎಂಬ ಅಂಕಣದಲ್ಲಿ ತಿಳಿಸುತ್ತಾರೆ.

ದೇಶ ಪ್ರೇಮದ ಮಾದರಿಗಳಿಗೆ ಸಂಬಂಧಿಸಿದಂತೆ ನಿರಂಜನರವರು ೧೯೬೧ರ ಭಾರತ – ಚೀನಾದ ಯುದ್ಧದಿಂದಾಗಿ ಆಹಾರ ಸಮಸ್ಯೆ ಉಂಟಾಯಿತು. ಆ ಸಂದರ್ಭದಲ್ಲಿ ಜನತೆಯು ಸ್ವ ಪ್ರೇರಣೆಯಿಂದ ಆಹಾರವನ್ನು ಮಿತವಾಗಿ ಬಳಸುವುದು. ಸೈನಿಕರ ಮಕ್ಕಳಿಗೆ ಉಚಿತ ಶಿಕ್ಷಣ, ಪುಸ್ತಕ, ವಸತಿ ಸೌಕರ್ಯಗಳನ್ನು ಕೊಡುವುದು. ಮುಂದುವರೆದು ಸೈನ್ಯದಲ್ಲಿ ಪ್ರಾದೇಶಿಕ ಅಥವಾ ಅವರ ಪ್ರಾಂತಿಯ ಮನೋಭಾವನೆ ಬೆಳೆಯದಂತೆ ಪ್ರತ್ಯೇಕ ತಂಡಗಳನ್ನು ಮಾಡಬಾರದೆಂದು ವಿವರಿಸುತ್ತಾರೆ. ಸ್ತ್ರೀ ಶೋಷಣೆಗೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆಗಾಗಿ ೫೦ ವರ್ಷ ತುಂಬಿದ ೧೯೬೫ ರಲ್ಲಿ ಹೆಣ್ಣು ಮಕ್ಕಳಿಗೆ ರಾಜ್ಯಪಾಲರು ವಿಶ್ವವಿದ್ಯಾನಿಲಯದಲ್ಲಿ ಮಂತ್ರಿಮಂಡಲದಲ್ಲಿ ಅರ್ಧದಷ್ಟು ಸ್ಥಾನವನ್ನು ನೀಡಬೇಕು ಎನ್ನುತ್ತಾರೆ. ಅದಕ್ಕೆ 'ಪದವಿಪೂಜೆ' ಎಂಬ ಅಂಕಣದಲ್ಲಿ ನಿರಂಜನರವರು ಗಂಡಸರು ಬಸ್ಸಿನಲ್ಲಿ ಸೀಟು ಬಿಟ್ಟು ಕೊಡಬಹುದೇನೋ ಆದರೆ ಅಧಿಕಾರದ ಸೀಟನ್ನು ಬಿಟ್ಟು ಕೊಡುವುದಿಲ್ಲ ಎಂಬ ಮಾತಿನಲ್ಲಿ ಪುರುಷನ ಅಧಿಕಾರದ ಮನಃಸ್ಥಿತಿಯಲ್ಲಿ ವಿಶ್ಲೇಷಿಸುತ್ತಾರೆ. ಇಂದಿಗೂ ಮಹಿಳೆಯರು ರಾಜಕೀಯದಲ್ಲಿ ಮಹಿಳಾ ಮೀಸಲಾತಿಗೆ ಅಥವಾ ಪ್ರಾಧ್ಯಾನ್ಯತೆಗಾಗಿ ಪ್ರತ್ಯೇಕ ಬಿಲ್ (ಶಾಸನ) ಜಾರಿಗೊಳ್ಳದೇ ಇರುವುದು ಕೂಡಾ ಭಾರತೀಯ ಪುರುಷರ ಯಜಮಾನಿಕೆತನವನ್ನು ತೋರಿಸುತ್ತದೆ.

ಇಂದಿನ ಕಾಲಘಟ್ಟದಲ್ಲಿ ಕಳ್ಳಕಾಕರು ನೂತನ ವಿಧಾನಗಳಿಂದ ಕಳ್ಳತನ ಮಾಡುತ್ತಿರಬೇಕಾದರೆ ಹಳೆಯ ಪದ್ಧತಿಗಳಿಂದ ತನಿಖೆ ನಡೆಸುವುದು ಸೂಕ್ತವಲ್ಲವೆಂದು, ಅಪರಾಧ ತನಿಖೆಯಲ್ಲಿಯು ಆಧುನಿಕ ತಂತ್ರಜ್ಞಾನವನ್ನು ಆಳವಡಿಸಿಕೊಳ್ಳಬೇಕೆಂದು ತಿಳಿಸುತ್ತಾರೆ. ಪರಮಾಣುವಿನಿಂದ ಉತ್ಪಾದಿಸುವ ವಿದ್ಯುಚ್ಛಕ್ತಿ ಯಾವಾಗ ದೊರಕುತ್ತದೆಯೋ ಎಂಬ ಸಂಶಯದ ಮೂಲಕ ಪರಮಾಣು ತಂತ್ರಜ್ಞಾನವನ್ನು ಬಳಸಿಕೊಳ್ಳುವುದರಿಂದ ಜನತೆಗೆ ಒಳಿತಾಗುತ್ತದೆ. ನಮ್ಮಲ್ಲಿನ ವಿದ್ಯುಚ್ಛಕ್ತಿ

ಸಮಸ್ಯೆಯನ್ನು ಪರಿಹರಿಸಲು ಪರಮಾಣು ಉತ್ಪಾದಿಸುವ ವಿದ್ಯುಚ್ಛಕ್ತಿಯಿಂದ ಸಾಧ್ಯ ಎಂಬ ವಿಚಾರವನ್ನು 'ಹೂವಿನ ಗುಡಿಯಲ್ಲಿ ಕಳ್ಳಕಾಕರು' ಎಂಬ ಅಂಕಣದಲ್ಲಿ ವಿಶ್ಲೇಷಿಸುತ್ತಾರೆ.

ತಮಿಳುನಾಡಿನ ಕವಿ ಸುಬ್ರಹ್ಮಣ್ಯ ಭಾರತಿಯವರ ಜನ್ಮ ದಿನಾಚರಣೆ, ರವೀಂದ್ರರ ದಿನಾಚರಣೆಗಳು ಒಂದು ಭಾಷಿಕರು ಮಾತ್ರ ಆಚರಿಸಬಾರದೆಂದು, ಎಲ್ಲರು ಆಚರಿಸುವ ಮೂಲಕ ರಾಷ್ಟ್ರೀಯ ಪ್ರಜ್ಞೆ ಮತ್ತು ರಾಷ್ಟ್ರೀಯ ಭಾವೈಕ್ಯತೆ ಬೆಳೆಯಲು ಈ ರೀತಿಯ ಜಯಂತಿಗಳು ಸಹಕಾರಿಯಾಗಿದೆ. ಬೆಂಗಳೂರು ದಿನೇ ದಿನೇ ಬೆಳೆಯುತ್ತಿದೆ ಈಗ ಬೆಳೆಯುತ್ತಿರುವ ಬೆಂಗಳೂರು ೨೭ ಚದರ ಮೈಲಿಗಳಿದ್ದು ಮೂವತ್ತೇರಡು ಹಳ್ಳಿಗಳನ್ನು ಸೇರಿಸಲಾಗಿದೆ. ಇದೇ ರೀತಿಯಲ್ಲಿ ಬೆಂಗಳೂರು ಅಕ್ಕ ಪಕ್ಕದ ಹಳ್ಳಿಗಳನ್ನು ಸೇರಿಸಿದರೆ ಅಭಿವೃದ್ಧಿಯಾಗುವುದಿಲ್ಲ ಈ ಮೊದಲು ಅನೇಕ ಸಮಸ್ಯೆಗಳು ಬೆಂಗಳೂರಿನಲ್ಲಿದ್ದು ಅವುಗಳನ್ನು ಅಭಿವೃದ್ಧಿಪಡಿಸಲು ಸರ್ವಾಧಿಕಾರಿ ಅವಶ್ಯಕತೆ ಇದೆಯೆನೋ ಎಂದು ನಿರಂಜನರು ಭಾವಿಸುತ್ತಾರೆ. ಆ ಮೂಲಕ ಬೆಂಗಳೂರು ಬೆಳವಣಿಗೆ ಜೊತೆಗೆ ಅಲ್ಲಿ ಅನೇಕ ಸಮಸ್ಯೆಗಳು ೧೯೭೦ರ ದಶಕದಲ್ಲಿಯೇ ಬೃಹದಾಕಾರವಾಗಿ ಬೆಳೆದಿದ್ದವು ಆ ಸಮಸ್ಯೆಗಳೆಲ್ಲ ಇಂದಿಗೂ ಜೀವಂತವಾಗಿರುವುದು ಸ್ಪಷ್ಟವಾಗಿ ನಮಗೆ ಗೋಚರಿಸುತ್ತದೆ.

ಜನ ಸಾಮಾನ್ಯರಿಗೆ ಅನ್ನದ ಚಿಂತೆಯೇ ಇದೆ. ಶಿವಮೊಗ್ಗ ಜಿಲ್ಲೆಯಲ್ಲಿ ಬಿದಿರಿನ ಫಸಲು ಹೇರಳವಾಗಿ ಬಂದಿರುವುದು. ಈ ಶತಮಾನದ ಆರಂಭದಲ್ಲಿ ಕ್ಷಾಮ ತಲೆದೂರಿದಾಗ ಈ ರೀತಿ ಅಕ್ಕಿ ಬೆಳೆದಿತ್ತು. ಬಿದಿರಕ್ಕಿ ಬೆಳೆಯು ಬಂದಾಗ ಅದಕ್ಕೆ ಮಾನವರು ಮೌಢ್ಯದಿಂದ ಕ್ಷಾಮ, ಬರಗಾಲ ಬರುತ್ತದೆ ಎಂದು ಜನರು ಭಾವಿಸುವುದು ಅವರ ಮೌಢ್ಯದ ಮನಃಸ್ಥಿತಿಯಾಗಿ ನೋಡುತ್ತಾರೆ. ೨೦ ವರ್ಷ ಸುದೀರ್ಘವಾಗಿ ಟೈಮ್ಸ್ ಆಫ್ ಇಂಡಿಯಾ 'ಇಲಸ್ಟ್ರೇಟೆಡ್ ವೀಕ್ಲಿ' ಯಲ್ಲಿ ದುಡಿದ ಪ್ರಭಾಕರ ಗಣಪತಿ ಶಿರೂರ್ ಎಂಬ ಚಿತ್ರಕಾರ ಉದ್ಯೋಗದಿಂದ ನಿವೃತ್ತಿ ಹೊಂದಿದ್ದಾರೆ. ಆದರೆ ಕಲೆಯಿಂದಲ್ಲ ಎಂಬ ಮಾತಲ್ಲಿ ಕಲಾವಿದನಿಗೆ, ಚಿತ್ರಗಾರನಿಗೂ, ಕಲೆಯಿಂದ ಎಂದಿಗೂ ನಿವೃತ್ತಿಯೆಂಬುದಿಲ್ಲ ಎಂಬ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ.

ಗಣಕ ಯಂತ್ರಗಳು ಕಛೇರಿಗಳಲ್ಲಿ, ಕಾರ್ಖಾನೆಗಳಲ್ಲಿ, ಬರುವುದರಿಂದ ಉದ್ಯೋಗಿಗಳಿಗೆ ಇದು ಇಷ್ಟವಿಲ್ಲವೆಂದು ಕಾರಣವೆಂದರೆ ತಮ್ಮ ಉದ್ಯೋಗಕ್ಕೆ ತೊಂದರೆಯಾಗುತ್ತದೆ ಎಂಬ ಭಾವನೆ ಬೆಳೆದಿದೆ. ಬೆಂಗಳೂರಿನ 'ಬೆಂಗಳೂರು ನರ್ಸಿಂಗ್ ಹೋಮ್'ನಲ್ಲಿ ಪರಮಾಣು ಚಿಕಿತ್ಸೆ ವಿಭಾಗ ತೆರೆದಿದ್ದಾರೆ. ಇದು ಕ್ಯಾನ್ಸರ್ ರೋಗಗಳಿಗೆ ಸಹಾಯಕವಾಗುತ್ತದೆ. ಇವೆಲ್ಲಾ ಬದಲಾವಣೆಯ ಗುರುತುಗಳಾಗಿದೆ ಇವುಗಳಿಂದ ಜನತೆ ಹಾಗೂ ಸಮಾಜಕ್ಕೆ ಅನುಕೂಲವಾಗುವುದರಿಂದ ಸಮಾಜ ಇವುಗಳನ್ನು ಸ್ವೀಕರಿಸಬೇಕು ಎಂಬ ನಿಲುವನ್ನು ಪ್ರಕಟಪಡಿಸುತ್ತಾರೆ.

ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವ ನಿಟ್ಟಿನಲ್ಲಿ ಭಾರತ ಸರಕಾರದ ವಾರ್ತಾ ಪ್ರಸಾರ ಶಾಖೆಯಲ್ಲಿ ದಕ್ಷಿಣದ ನಾಲ್ಕು ಭಾಷೆಗಳ ಕವಿಗಳ ಸಮ್ಮೇಳನವನ್ನು ಕುವೆಂಪುರವರ ಅಧ್ಯಕ್ಷತೆಯಲ್ಲಿ ನಡೆದು ರಾಷ್ಟ್ರೀಯ ಭಾವೈಕ್ಯತೆಯನ್ನು ಉಂಟು ಮಾಡುವಲ್ಲಿ ಇದು ಸಹಕಾರಿಯಾಗುತ್ತದೆ ಎಂಬ ಮನೋಭಾವನೆ ನಿರಂಜನರದು. 'ಶತಮಾನದ ಸಮಾರಂಭ' ಎಂಬ ಲೇಖನದಲ್ಲಿ ಬಸವಣ್ಣನವರ ೮೦೦ನೇ ವರ್ಷದ ಆಚರಣೆ, ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿರುವ ಸಾರ್ವಜನಿಕ ಗ್ರಂಥಾಲಯ ಶತಮಾನೋತ್ಸವ ಕುರಿತಂತೆ ರಾಜಧಾನಿಯಿಂದ ಹುಬ್ಬಳ್ಳಿಗೆ ರಾತ್ರಿಯ ಬಸ್ಸುಗಳು, ಸ್ಲೀಪರ್ ಟ್ರೈನ್‌ಗಳು ಎಲ್ಲವು ಇರುವಲ್ಲಿ ರೇಡಿಯೋ ರೆಕಾರ್ಡ್ ಪ್ಲೇಯರ್ ಎಲ್ಲ ಇದೆ. ಇದರ ಬದಲು ಕನ್ನಡ ಸಾಹಿತ್ಯದ

ಪುಸ್ತಕಗಳು ಇದ್ದರೆ ಸಾಹಿತ್ಯವನ್ನು ಓದುವ ವರ್ಗವನ್ನು ಸೃಷ್ಟಿಸಬಹುದೆಂದು ಭಾಷೆ ಮತ್ತು ಸಾಹಿತ್ಯ ಬೆಳವಣಿಗೆಗೆ ಇದು ಸಹಕಾರಿಯಾಗುತ್ತದೆ. ಬಸವಣ್ಣನವರ ೮೦೦ ನೇ ವರ್ಷದ ಆಚರಣೆಗಾಗಿ ಹಂಪೆಯಿಂದ ಬಸವ ಕಲ್ಯಾಣಕ್ಕೆ ಪಾದಯಾತ್ರೆ ಮಾಡುವುದಕ್ಕಿಂತ ಅವರ ವಚನಗಳನ್ನು, ಅವರ ವಿಚಾರಗಳನ್ನು ಜನತೆಯಲ್ಲಿ ಮೂಡಿಸಬೇಕೆಂದು ತಿಳಿಸುತ್ತಾರೆ. ಬೆಂಗಳೂರಿನಲ್ಲಿ ಪಡಿತರಗೋಸ್ಕರ ಕೈಯೊಡ್ಡಿ ನಿಲ್ಲುವಂತ ವ್ಯವಸ್ಥೆ ಇದೆ. ವಾಸ್ತವವಾಗಿ ಹದಿನಾಲ್ಕುವರೆ ಲಕ್ಷ ಜನರು ಬೆಂಗಳೂರಿನಲ್ಲಿ ವಾಸವಾಗಿದ್ದರೆ ಅದೇ ರೇಶನ್ ಕಾರ್ಡ್‌ಗಳ ಪ್ರಕಾರ ಹದಿನೆಂಟು ಲಕ್ಷವೆಂದು, ಜನರು ರೇಶನ್‌ಗಾಗಿ ಬೋಗಸ್ ಕಾರ್ಡ್‌ಗಳನ್ನು ಮಾಡಿಸಿರುವುದನ್ನು ಚರ್ಚಿಸಿರುತ್ತಾರೆ. ಜನರ ಈ ಧೋರಣೆ ಅಂದು ಇತ್ತು ಇಂದೂ ಇದೆ. ಮುಂದೆಯೂ ಇರುತ್ತದೆಯೋ ಎಂಬ ಸಂಶಯವನ್ನು ಬೆಂಗಳೂರಿಗೆ ಮಾತ್ರವಲ್ಲ ಇಡೀ ಕರ್ನಾಟಕದಲ್ಲಿ ಈ ವಿಚಾರ ಇಂದಿಗೂ ಪ್ರತಿಫಲಿಸಿದೆ.

ಬಿ.ಎಡ್ ಶಿಕ್ಷಣ ಪಡೆಯಲು ಕೇರಳಿಗರು ಕರ್ನಾಟಕಕ್ಕೆ ಬರುವ ಕಾರಣವೆಂದರೆ ಕೇರಳದಲ್ಲಿ ೨ ವರ್ಷಗಳ ಬಿ.ಎಡ್. ಶಿಕ್ಷಣವಿದೆ. ಕರ್ನಾಟಕದಲ್ಲಿ ಒಂದು ವರ್ಷ ಶಿಕ್ಷಣ ಪದ್ಧತಿ ಇದೆ. ಇದರ ಲಾಭ ಪಡೆಯುವ ಕೇರಳಿಗರ ಧೋರಣೆಯನ್ನು ತಿಳಿಸುತ್ತದೆ. ಇಂದಿಗೂ ಕರ್ನಾಟಕದ ಶಿಕ್ಷಣ ಪದ್ಧತಿಯ ಲಾಭವನ್ನು ಕೇರಳಿಗರು, ಆಂಧ್ರದವರು ಮೊದಲಾದ ಭಾರತೀಯ ಪ್ರದೇಶದ ಜನರು ಪಡೆಯುತ್ತಿದ್ದಾರೆ ಎಂಬುದನ್ನು ಇದರಿಂದ ಇಂದಿಗೂ ನಾವು ಅರ್ಥೈಸಿಕೊಳ್ಳಬಹುದು. ಈ ವಿಚಾರವನ್ನು ೧೯೭೦ರ ದಶಕದಲ್ಲಿಯೆ ನಿರಂಜನರು ಕರ್ನಾಟಕದ ಶಿಕ್ಷಣ ವ್ಯವಸ್ಥೆಯನ್ನು ಅದರ ಲಾಭವನ್ನು ಕರ್ನಾಟಕದವರು ಹೊರತುಪಡಿಸಿ ಉಳಿದ ಪ್ರದೇಶದವರು ಪಡೆದುಕೊಂಡ ಬಗೆಯನ್ನು ಚರ್ಚಿಸಿದ್ದಾರೆ.

ಕನ್ನಡಿಗರ ಭಾಷಾ ಸೌಹಾರ್ದಕ್ಕೆ ಸಂಬಂಧಿಸಿದಂತೆ ರವೀಂದ್ರ ಕಲಾಕ್ಷೇತ್ರದಲ್ಲಿ ಮರಾಠಿ ನಾಟಕ 'ಲಗ್ನಾಚಿ ಬೇಡಿ' ಪ್ರದರ್ಶಿಸಲು ಅವಕಾಶ ನೀಡಿದ್ದು, ಮಾತ್ರವಲ್ಲದೆ ಕರ್ನಾಟಕದಲ್ಲಿ ತಮಿಳರು 'ಕರ್ನಾಟಕ ತಮಿಳು ಲೇಖಕರ ಸಂಘ' ಸ್ಥಾಪಿಸಲು ಅವಕಾಶ ಮಾಡಿಕೊಟ್ಟಿದ್ದು ಇದು ಕನ್ನಡಿಗರು ಇತರ ಭಾಷಿಕರ ಕಲೆ, ಸಾಹಿತ್ಯ, ಸಂಸ್ಕೃತಿಗಳ ಪೋಷಣೆಗೆ ಪ್ರೋತ್ಸಾಹವನ್ನು ನೀಡುವ ಮನಃಸ್ಥಿತಿಯನ್ನು ತಿಳಿಸುತ್ತಾರೆ. ಓದುಗರಿಗೆ ಅಗ್ಗದ ದರದಲ್ಲಿ ಉತ್ತಮ ಪುಸ್ತಕಗಳು ಲಭಿಸಬೇಕೆಂದು ಇಂಜಿನಿಯರಿಂಗ್ ಕಲಿಯುವ ವಿದ್ಯಾರ್ಥಿಗಳಿಗೆ ಕೆಲವೊಂದು ಪುಸ್ತಕಗಳನ್ನು 'ಪುಸ್ತಕ ಬ್ಯಾಂಕ್'ಗಳನ್ನು ಸ್ಥಾಪನೆ ಮಾಡಿ ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬಹುದು ಎನ್ನುತ್ತಾರೆ. ಕಳ್ಳ ಪೇಟೆಯಲ್ಲಿ ದಾಸ್ತಾನು ಮಾಡುವವರನ್ನು ಶಿಕ್ಷಿಸುವ ಕಾನೂನು ಜಾರಿಗೆ ತರಬೇಕೆಂದು 'ಕಳ್ಳ ಸೇವೆಯಲ್ಲಿ ಪುಸ್ತಕ ದಾಸ್ತಾನು' ಅಂಕಣದಲ್ಲಿ, ದಿನೇ ದಿನೇ ಬೆಳೆಯುತ್ತಿರುವ ಬೆಂಗಳೂರನ್ನು ಕುರಿತು 'ಬೆಂಗಳೂರಿನ ಚಪಲ' ಅಂಕಣದಲ್ಲಿ ಚರ್ಚಿಸುತ್ತಾರೆ.

ಕನ್ನಡ ನಾಡಿನಲ್ಲಿ ಕಲೆ, ಸಾಹಿತ್ಯ, ಸಂಗೀತ ವಾಸ್ತುಶಿಲ್ಪಿ ಮೊದಲಾದ ಕ್ಷೇತ್ರಗಳಲ್ಲಿ ದುಡಿದ ಮಹನೀಯರುಗಳಾದ ವರದಾಚಾರ್ಯರ ನೆನಪಿಗಾಗಿ ರಂಗಮಂದಿರ, ಸುಬ್ಬಯ್ಯ ನಾಯ್ಡ್, ಹರಿದಾಸ್ ರಾವ್, ಗೋವಿಂದ ಪೈ ಇವರ ನೆನಪಿಗಾಗಿ ಸ್ಮಾರಕ ಭವನ ಕಟ್ಟಲು ಸಮಿತಿ ರಚಿಸಿದರು. ಆದರೆ ಯಾವ ಸ್ಮಾರಕಗಳು ನಿರ್ಮಾಣಗೊಳ್ಳಲಿಲ್ಲವೆಂದು, ಅದೇ ದಾಟಿಯಲ್ಲಿ ತಿ. ನಂ. ಶ್ರೀ ಯವರ ಸ್ಮಾರಕವು ಆಗದಿರಲಿ ಎಂಬ ಆಶಯವನ್ನು 'ತಿ. ನಂ. ಶ್ರೀ ಅವರಿಗೆ ಸ್ಮಾರಕ' ಎಂಬ ಅಂಕಣದಲ್ಲಿ ವ್ಯಕ್ತಪಡಿಸುತ್ತಾರೆ. ಕನ್ನಡ ನಾಡಿನ ಕಲೆ, ಸಾಹಿತ್ಯ ಸಂಗೀತ ಮೊದಲಾದ ಕ್ಷೇತ್ರದಲ್ಲಿ ದುಡಿದ

ಮಹನೀಯರುಗಳ ವಿಚಾರಗಳು ಅವರ ಕೃತಿಗಳು, ಮುಂದಿನ ಪೀಳಿಗೆಗೆ ದೊರಕುವ ಮೂಲಕ ನೆನಪಿಸುವಂತಹ ಯಾವುದೇ ಕಾರ್ಯಕ್ರಮಗಳು, ಸ್ಮಾರಕಗಳನ್ನು ನಿರ್ಮಾಣ ಮಾಡುವುದರಲ್ಲಿ ಕನ್ನಡಿಗರು ಮುಂದೆ ಬರದಿರುವ ದೃಷ್ಟಿಕೋನವನ್ನು ತಿಳಿಯಬಹುದು.

'ಸದ್ಗುಣ ಮೌಲ್ಯ ಛೇದನ' ಎಂಬ ಲೇಖನದಲ್ಲಿ ೧೯೬೭ ರಲ್ಲಿ ಬೆಂಗಳೂರಿನಲ್ಲಿ ವಿಧಾನಸಭೆ ಮತ್ತು ಲೋಕ ಸಭೆಗೆ ಚುನಾವಣೆಯು ನಡೆಯಿತು. ಆ ಸಂದರ್ಭದಲ್ಲಿ ಚುನಾವಣಾ ರಾಜಕಾರಣಕ್ಕೆ ನಿಂತ ಉಮೇದುದಾರರು ಹಣವನ್ನು ದುಂದುವೆಚ್ಚ ಮಾಡುವುದು, ಬಾವುಟ, ಭಿತ್ತಿ ಪತ್ರ, ಘೋಷಣೆ, ಧ್ವನಿ ವರ್ಧಕ, ಜೀಪುದಾರರು ಮೊದಲಾದವುಗಳಿಗೆ ಹಣ ಖರ್ಚು ಮಾಡುವುದು. ಜಾತಿ ದ್ವೇಷ, ವೈಯಕ್ತಿಕ ನಿಂದನೆ, ಟೀಕಾಸ್ತ್ರಗಳು ಮೊದಲಾದವುಗಳು ನಡೆದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹಣದ ಮೌಲ್ಯವು ಅಧಃಪತನ ಹೊಂದುತ್ತಿರುವುದರ ಜೊತೆಗೆ ಸದ್ಗುಣಗಳು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿವೆ. ಚುನಾವಣಾ ರಾಜಕಾರಣವೆಂಬುದು ಹೇಗೆ ಮನುಷ್ಯನ ವ್ಯಕ್ತಿತ್ವವನ್ನು ಅಧಃಪತನಕ್ಕೆ ಎಡೆ ಮಾಡಿಕೊಡುತ್ತದೆ ಎಂಬುದನ್ನು ತಾತ್ವಿಕರಿಸುತ್ತಾರೆ.

ಮತದಾನದ ಸಂದರ್ಭದಲ್ಲಿ ಜನರು ಹೇಗೆ ವರ್ತಿಸುತ್ತಾರೆಂಬುದನ್ನು ತಿಳಿಸುವ ನಿರಂಜನರು ಸಾಕ್ಷರತೆ ಮತ್ತು ಮತದಾನಕ್ಕೆ ಸಂಬಂಧವಿದೆ ಎಂದೂ, ಹೆಚ್ಚು ಮತದಾನ ನಡೆಯುವುದು ಗ್ರಾಮಾಂತರ ಪ್ರದೇಶಗಳಲ್ಲಿ, ನಗರ ಪ್ರದೇಶಗಳಲ್ಲಿನ ಅದರಲ್ಲೂ ಸಾಕ್ಷರತೆಯನ್ನು ಪಡೆದವರು ಮತದಾನದ ಬಗ್ಗೆ ಅನಾಸಕ್ತಿಯನ್ನು ಬೆಳೆಸಿಕೊಂಡಿರುತ್ತಾರೆ. ರೈತರು ಸಾಮೂಹಿಕ ಮತದಾನ ಮಾಡುವುದು ಅವರಿಗೆ ಜೋಡು ಎತ್ತುಗಳ ಮುದ್ರೆಗಳ ಬಗ್ಗೆ, ಕಾರ್ಮಿಕರು ಸಂಕೇತಗಳ ಮೇಲೆ ಇರುತ್ತದೆ. ಈ ರೀತಿಯ ಚುನಾವಣೆಯ ಮನಃಸ್ಥಿತಿ ಇಡೀ ರಾಜ್ಯದಲ್ಲಿ ಅನ್ವಯಿಸುವುದಿಲ್ಲ. ಕೆಲವು ಕಡೆ ಜಾತಿ, ಮತಗಳ ಆಧಾರದ ಮೇಲೆ, ಇನ್ನು ಕೆಲವು ಕಡೆ ತತ್ವ, ಪ್ರಣಾಳಿಕೆಗಳ ಮೇಲೆ ಎಂದು 'ಅನಾಸಕ್ತಿ ಯೋಗದ ಅಭ್ಯಾಸಗಳು' ಎಂಬ ಅಂಕಣದಲ್ಲಿ ತಿಳಿಸುತ್ತಾರೆ. ಆ ಮೂಲಕ ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿನ ಮತದಾನದ ಪದ್ಧತಿಯಲ್ಲಿ ಪಾಲ್ಗೊಳ್ಳುವ ಮತದಾರನ ಮನಃಸ್ಥಿತಿಯನ್ನು ವಿಶ್ಲೇಷಿಸುತ್ತಾರೆ.

'ಪುಸ್ತಕದೊಳಗಿನ ಬದನೆಕಾಯಿ' ಎಂಬ ಲೇಖನದಲ್ಲಿ ಪಠ್ಯ ಪುಸ್ತಕದಲ್ಲಿ ಆಗುವ ಲೋಪದೋಷಗಳು ಅವುಗಳನ್ನು ಸರಿಪಡಿಸಲು ಬಂದು ಸಮಿತಿ ರಚಿಸಬೇಕೆಂದು, ಈ ರೀತಿ ದೋಷಗಳಾಗಲು ವಿಷಯದ ಮೇಲೆ ಪ್ರಭುತ್ವವಿಲ್ಲದ ತಜ್ಞರ, ಬರಹಗಾರರ ಅವಸರದ ಬರವಣಿಗೆ ಮತ್ತು ಮುದ್ರಣವಾಗಿದೆ. ಪಠ್ಯಪುಸ್ತಕದಲ್ಲಿ ರಾಷ್ಟ್ರೀಯ ಏಕತೆಯನ್ನು ಮೂಡಿಸುವ ಅನ್ಯ ರಾಜ್ಯದ ಸಂಸ್ಕೃತಿಗಳನ್ನು ವಿಚಾರಗಳನ್ನು ಟೀಕಿಸದ, ಸಂಕುಚಿತ ದೃಷ್ಟಿ ಇಲ್ಲದ, ಪಠ್ಯ ಪುಸ್ತಕಗಳು ರಚನೆಯಾಗಬೇಕೆಂದು, ಪಠ್ಯ ಪುಸ್ತಕಗಳು ಹೇಗೆ ರಚನೆಯಾಗಬೇಕೆಂದು ತಾತ್ವಿಕರಿಸುತ್ತಾರೆ. 'ಶಿಕ್ಷಣದಲ್ಲಿ ರಾಜಕೀಯ' ಎಂಬ ಅಂಕಣದಲ್ಲಿ ಪ್ರಾಥಮಿಕ ಶಾಲೆಯಿಂದ ಹಿಡಿದು ವಿಶ್ವವಿದ್ಯಾಲಯದವರೆಗೆ ವ್ಯಾಪಾರದ ತಳಹದಿಯ ಮೇಲೆ ಲಾಭದ ರೀತಿಯಲ್ಲಿ ಶಿಕ್ಷಣ ಸಂಸ್ಥೆಗಳು ನಡೆಯುತ್ತಿವೆ. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಹೆಚ್ಚು ಅನುತ್ತೀರ್ಣರಾಗಲು ಪರೀಕ್ಷೆ ಪದ್ಧತಿಯ ದೋಷದಿಂದ. ಹಾಗಾಗಿ ಪರೀಕ್ಷೆ ಪದ್ಧತಿಯನ್ನು ಬದಲಾಯಿಸಬೇಕಾಗಿದೆ. ಕಲೆ ಮತ್ತು ಸಾಹಿತ್ಯದಲ್ಲಿ ರಾಜಕಾರಣ ಇರುವಂತೆ ಶಿಕ್ಷಣ ವ್ಯವಸ್ಥೆಯಲ್ಲಿದ್ದು ಅದು ಇವೆಲ್ಲಾ ವಿಚಾರಗಳನ್ನು ನಿಯಂತ್ರಿಸುತ್ತದೆ ಎಂದು ಶಿಕ್ಷಣ ಕ್ಷೇತ್ರದಲ್ಲಿನ ರಾಜಕಾರಣವನ್ನು ತಿಳಿಸುತ್ತಾರೆ.

'ಒಳಗೆ ಬಾ ಯಾತ್ರಿಕನೆ' ಎಂಬ ಅಂಕಣದಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುವ ಮೂಲಕ ವಿದೇಶಿ ವಿನಿಮಯಕ್ಕಿಂತ, ವಿಶ್ವ ಭ್ರಾತೃತ್ವ ಬೆಳೆಯಲು ಸಹಾಯಕ ಎಂಬ ಧೋರಣೆಯನ್ನು ಪ್ರತಿಪಾದಿಸುತ್ತಾರೆ. ಪತ್ರಿಕೆಗಳನ್ನು ರಾಜಕೀಯ ವ್ಯಕ್ತಿಗಳು ನಿಯಂತ್ರಿಸುವ ರೀತಿಯನ್ನು 'ಪತ್ರಿಕೆಯಲ್ಲಿ ಅಚ್ಚಾಗಿದೆ' ಎಂಬ ಅಂಕಣದಲ್ಲಿ, 'ನಿರುದ್ಯೋಗಿ ಎಂಜಿನಿಯರಿಂಗ್ ಸಂಘ' ಎಂಬ ಲೇಖನದಲ್ಲಿ ಮೈಸೂರು ರಾಜ್ಯದಲ್ಲಿ ನಿರುದ್ಯೋಗಿಗಳ ಸಮಸ್ಯೆಯನ್ನು ತಿಳಿಸುವ ಲೇಖನವಾಗಿದೆ. 'ವಿದೇಶಿ ಮಾರುಕಟ್ಟೆಯಲ್ಲಿ ಕರ್ನಾಟಕ' ಎಂಬ ಅಂಕಣದಲ್ಲಿ ಮೈಸೂರು ರಾಜ್ಯದಲ್ಲಿನ ಸಂಪತ್ತನ್ನು ವಿದೇಶಗಳಿಗೆ ರಫ್ತು ಮಾಡುವ ರೀತಿಯು ಸರಿಯಿಲ್ಲವೆಂದು, 'ಹೊಟ್ಟೆಯ ಹುಣ್ಣು' ಎಂಬ ಅಂಕಣದಲ್ಲಿ ಮಹಾರಾಷ್ಟ್ರದ ಶಿವಸೇನೆಯವರು ಕನ್ನಡಿಗರ ಮೇಲೆ ಮುಂಬೈಯಲ್ಲಿ ದಾಳಿ ಮಾಡುತ್ತಿರುವುದನ್ನು ಚರ್ಚಿಸುತ್ತಾರೆ.

ಪಕ್ಷಾಂತರ ಸರಿಯೋ? ತಪ್ಪೋ? ಎಂಬ ಲೇಖನದಲ್ಲಿ ಪ್ರಚಲಿತ ರಾಜಕೀಯದಲ್ಲಿ ನೀತಿ, ಮೌಲ್ಯಗಳಿಗೆ ಬೆಲೆ ಇಲ್ಲದಂತಾಗಿದೆ. ಅದನ್ನು ವಿಧಾನಸಭಾ, ಲೋಕಸಭಾ ಕಾರ್ಯ ಕಲಾಪಗಳಲ್ಲಿ ನೋಡಬಹುದು. ಒಂದು ಪಕ್ಷದಿಂದ ಗೆದ್ದ ವ್ಯಕ್ತಿ ಇನ್ನೊಂದು ಪಕ್ಷಕ್ಕೆ ಹಣಕ್ಕಾಗಿ, ಅಧಿಕಾರಕ್ಕಾಗಿ ಹೋಗುವುದು. ಭಾರತೀಯ ರಾಜ್ಯಾಂಗದಲ್ಲಿ ಪಕ್ಷಾಂತರ ಕಾಯಿದೆ ಇಲ್ಲದೆ ಇರುವುದು ಕೆಲವರಿಗೆ ವರದಾನವಾಗಿದೆ ಎಂದು ನಿರಂಜನರವರು ಚರ್ಚಿಸುತ್ತಾರೆ ೧೯೮೬ ರಲ್ಲಿ ಪಕ್ಷಾಂತರ ನಿಷೇಧ ಕಾಯಿದೆ ಜಾರಿಗೆ ತಂದುದರ ಪರಿಣಾಮವಾಗಿ ಇಂದೂ ಪಕ್ಷಾಂತರಗಳು ನಡೆಯುತ್ತಿಲ್ಲ. ಆದರೆ ಇಂದೂ ರಾಜಿನಾಮೆ ಕೊಟ್ಟು ಬೇರೆ ಪಕ್ಷ ಸೇರಿ ಅಲ್ಲಿಂದ ಚುನಾವಣೆಗೆ ನಿಲ್ಲುವ ಪಕ್ಷಾಂತರದ ಭಿನ್ನ ಸ್ವರೂಪವನ್ನು ಕಾಣಬಹುದು. ಪಕ್ಷಾಂತರಿಗಳು ಹೇಳುವುದು ಕ್ಷೇತ್ರದ, ಜನತೆಯ ಅಭಿವೃದ್ಧಿಗಾಗಿ. ಇಲ್ಲಿ ಕ್ಷೇತ್ರದ ಜನತೆಯ ಅಭಿವೃದ್ದಿಯೇ ಇಲ್ಲವೇ ಆತನ ಅಭಿವೃದ್ಧಿಯೇ ಎಂಬುದು ಪ್ರಶ್ನೆಯಾಗಿದೆ.

'ರಾಜಧಾನಿಯಿಂದ' ಅಂಕಣದಲ್ಲಿ ನಿರಂಜನರವರು ಸಮಕಾಲೀನ ಸಮಾಜದಲ್ಲಿ, ಬದುಕಿನಲ್ಲಿ, ಕಾಲಘಟ್ಟದಲ್ಲಿ ನಡೆದ ಅನೇಕ ವಿಚಾರಗಳನ್ನು ತಮ್ಮದೆಯಾದ ತಾತ್ವಿಕತೆಯ ನೆಲೆಗಟ್ಟಿನಲ್ಲಿ ಲೇಖನಗಳ ಮೂಲಕ ವ್ಯಕ್ತಪಡಿಸುವುದರ ಜೊತೆಗೆ ಸಮಾಜದ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ನೀಡುತ್ತಾರೆ. ಬೆಂಗಳೂರಿನ ನಾಗರಿಕರ ಜೀವನ, ಸಮಾಜದ ಸ್ಥಿತಿಗತಿಗಳು, ಮೈಸೂರು ರಾಜ್ಯದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ವ್ಯವಸ್ಥೆಗಳ ವಿಚಾರಗಳನ್ನು ಈ ರಾಜಧಾನಿಯಿಂದ ಪತ್ರಿಕೆಗಳ ಲೇಖನಗಳ ಸಂಕಲನದಲ್ಲಿ ಅನಾವರಣಗೊಂಡಿವೆ.

ದಿನಚರಿಯಿಂದ – ೧೯೭೨

೧೯೭೨ ರಲ್ಲಿ ಪ್ರಕಟಿಸಿದ ಪತ್ರಿಕಾ ಅಂಕಣಗಳ ಸಂಕಲನ ಕೃತಿ ದಿನಚರಿಯಿಂದ. ಇದು ಕರ್ಮವೀರ ಪತ್ರಿಕೆಯಲ್ಲಿ ಬರೆದ ಅಂಕಣಗಳಾಗಿವೆ. ಇದರಲ್ಲಿ ವ್ಯಕ್ತಿ ಪ್ರಧಾನ, ರಾಷ್ಟ್ರನಾಡು, ಸಹಕಾರ ಮತ್ತು ಸಾಹಿತ್ಯ, ಸರಸ-ಸಂಕಟ ಎಂಬ ನಾಲ್ಕು ವಿಭಾಗಗಳಿದ್ದು, ಒಟ್ಟು ೧೨೪ ಅಂಕಣಗಳಿವೆ. ಪ್ರತಿಯೊಂದು ಅಂಕಣದ ಕೊನೆಯಲ್ಲಿ ಪ್ರಕಟವಾದ ದಿನಾಂಕವನ್ನು ಕೊಡಲಾಗಿದೆ.

ವ್ಯಕ್ತಿ ಪ್ರಧಾನ ಎಂಬ ಭಾಗದಲ್ಲಿ ಕನ್ನಡ ನಾಡಿಗೆ ಸೇವೆ ಸಲ್ಲಿಸಿದ ವಿವಿಧ ಗಣ್ಯರನ್ನು ಕುರಿತಂತೆ ನೀಡುವ ವ್ಯಕ್ತಿ ಚಿತ್ರಣಗಳಾಗಿವೆ. ಎಂ. ಮರಿಯಪ್ಪ ಭಟ್ಟರು ಬರೆದ 'ಕನ್ನಡ ಸಂಸ್ಕೃತಿ' ಪುಸ್ತಕ ಬಿಡುಗಡೆ ಹಾಗೂ ಸಮಾಜವಾದಿ ಪ್ರೇರಣೆಯಿಂದ ಆರಂಭವಾಗಿ ಕನ್ನಡ ಚಳುವಳಿಗೆ ಒಂದು

ರೂಪು ಕೊಟ್ಟವರು ಮ. ರಾಮಮೂರ್ತಿಯವರ ಜೀವನವನ್ನು ತಿಳಿಸುತ್ತಾರೆ. ಸಾಹಿತ್ಯದ ಬದುಕು ಎಂಬುದು ಅನಿಶ್ಚಿತತೆಯಿಂದ ಕೂಡಿದ್ದು, ಸಾಹಿತಿಯಾದವನ ಬದುಕಿಗೆ ಗಟ್ಟಿಯಾದ ಆರ್ಥಿಕ ಆಧಾರ ಪಡೆಯಬೇಕೆಂಬ ದೃಷ್ಟಿಯಿಂದ ಕನಕಪುರ ರಸ್ತೆಯಲ್ಲಿ ಒಂದು ತೋಟ ಮಾಡಿದರು. ಶ್ರೀನಿವಾಸ ಹಾವನೂರರವರು ಮುಂಬಯಿ ಗ್ರಂಥಾಲಯದಲ್ಲಿ ಅಧಿಕಾರಿಯಾಗಿದ್ದಾಗ ಸಂಶೋಧನೆಯಲ್ಲಿ ತೊಡಗಿಕೊಂಡಿದ್ದರು. 'ಶತಮಾನದ ಕನ್ನಡ ಸಾಹಿತ್ಯ' ಎಂಬ ಸಂಶೋಧನಾ ವಿಷಯಕ್ಕೆ ಅನೇಕ ಗ್ರಂಥಗಳ ಸಂಖ್ಯೆ, ಮುದ್ರಣ, ಪರಿಷ್ಕೃತ ವರ್ಷ, ಪ್ರಕಟಣೆ ಮಾಡಲು ಕಂಪ್ಯೂಟರಿನಿಂದ ಪಡೆದ ಅನುಕೂಲಗಳು, ಕಾರ್ಯಹಳ್ಳಿ ರಾಮಕೃಷ್ಣ ಶೆಟ್ಟಿಯವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳು, ಜಿ.ಪಿ ರಾಜರತ್ನಂ ರವರ ಹೆಸರು ಗುಂಡ್ಲು ಪಂಡಿತ್ ರಾಜಯ್ಯಂಗಾರ್ ಎಂಬುದು ಗುಂಡು ಪಂಡಿತ ಎಂದು ಶಾಲೆಯಲ್ಲಿ ಕರೆಯುತ್ತಿದ್ದರು. ರಾಜರತ್ನಂ ತಿಯ್ಯಾಂಗರ್ ಬಿಟ್ಟು ಹೋದದ್ದು, ಸೆಂಟ್ರಲ್ ಕಾಲೇಜಿಗೆ ಅಭ್ಯಾಸ ಮಾಡಲು ಬಂದಾಗ ಇಂಗ್ಲೀಷ್ ಪ್ರಾಧ್ಯಾಪಕರೊಬ್ಬರು ಹೆಸರು ದೊಡ್ಡದಾಯಿತ್ತೆಂದು ರಾಜರತ್ನಂ ಎಂದು ಕರೆದರು. ಮುಂದೆ ಜಿ.ಪಿ. ರಾಜರತ್ನಂ ಎಂದು ತಮ್ಮ ಹೆಸರನ್ನು ಇಟ್ಟುಕೊಂಡರು ಎಂದು ಅವರ ಹೆಸರು ಭಿನ್ನ ಸ್ವರೂಪ ಪಡೆದ ಬಗೆಯನ್ನು ತಿಳಿಸುತ್ತಾರೆ. 'ಗಂಡುಗೂಡಲಿ' ನಾಟಕದ "ಮಸೆಯಲಿ ಕ್ರಾಂತಿಯ ಕ್ರೂರ ಕುಠಾರಂ, ನೆಲೆಸಮವಾಗಲಿ ವೈರಿ ವಠಾರಂ" ಎಂಬ ಸಾಲುಗಳು ಕೆಚ್ಚನ್ನ ಎಬ್ಬಿಸಿತು. ಬಸವರಾಜ ಕಟ್ಟೀಮನಿಯವರ 'ಜ್ವಾಲಮುಖಿಯ ಮೇಲೆ' ಕಾದಂಬರಿಗೆ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ ಲಭಿಸಿತು, ಬಡತನದಲ್ಲಿ ಹುಟ್ಟಿದರು ಶ್ರೀಮಂತ ಕೃತಿಗಳನ್ನು ರಚಿಸಿದ ಅವರ ಸಾಹಿತ್ಯದ ಶೈಲಿಯನ್ನು ತಿಳಿಸುತ್ತಾರೆ. ಎಸ್.ವಿ ಪರಮೇಶ್ವರ ಭಟ್ಟರ ಬಗ್ಗೆ ತಿಳಿಸುವ ಸಂದರ್ಭಗಳಲ್ಲಿ ಕವಿಗೂ ಜಾಹಿರಾತಿನ ಅವಶ್ಯಕತೆ ಇದೆ. ಇವರು ಬರೆದ 'ರಾಗಿಣಿ' ಮತ್ತು 'ಇಂದ್ರಚಾಪ' ಕೃತಿಗಳನ್ನು ಪರಿಚಯಿಸುತ್ತಾರೆ. ರಾಗಿಣಿ ಕವನ ಸಂಕಲನಕ್ಕೆ ಕುವೆಂಪುರವರಿಂದ ಮುನ್ನುಡಿ ಬರೆಸುವುದು ಕೂಡ ಶ್ರೇಷ್ಠ ಬರಹಗಾರನಿಂದ ತನ್ನ ಕೃತಿಗಳನ್ನು ಗುರುತಿಸಿತ್ತಾರೆ ಎಂಬ ಅವರ ಧೋರಣೆಯನ್ನು ತಿಳಿಸುತ್ತಾರೆ. ರಾಷ್ಟಪತಿಯಾಗಿದ್ದ ಜಾಕೀರ್ ಹುಸೇನ್‌ರವರು ಕಾವ್ಯದಂತೆ ಬದುಕಿದ ವ್ಯಕ್ತಿಯಾಗಿ 'ಬಂಡವಾಳ', 'ಅರ್ಥಶಾಸ್ತ್ರದ ರಾಷ್ಟ್ರೀಯವ್ಯವಸ್ಥೆ' ಪ್ಲೇಟೋನ 'ಗಣರಾಜ್ಯ' ಮೊದಲಾದ ಕೃತಿಗಳನ್ನು ಉರ್ದು ಭಾಷೆಗೆ ಭಾಷಾಂತರಿಸಿದರು. ಶಿಕ್ಷಣ ಪದ್ಧತಿಯನ್ನು ಕುರಿತಂತೆ 'ಶಿಕ್ಷಾ' ಎಂಬ ಕೃತಿ ಮತ್ತು ಮಕ್ಕಳಿಗಾಗಿ 'ಶಿಶು ಸಾಹಿತ್ಯ' ವನ್ನು ಬರೆದ ವಿಚಾರಗಳನ್ನು ವ್ಯಕ್ತಿ ಚಿತ್ರಣಗಳಲ್ಲಿ ವಿವರಿಸಿದ್ದಾರೆ. ಆ ಮೂಲಕ ರಾಷ್ಟ್ರಪತಿಗಳಾಗಿ ಉತ್ಕೃಷ್ಟ ಸಾಹಿತ್ಯವನ್ನು ಉರ್ದು ಸಾಹಿತ್ಯಕ್ಕೆ ನೀಡಿದ್ದಾರೆ ಎಂಬುದಾಗಿ ನಿರಂಜನರು ಪರಿಚಯಾತ್ಮಕವಾಗಿ ತಿಳಿಸುತ್ತಾರೆ.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಪತ್ರಿಕಾ ರಂಗದವರು ಸ್ವಾತಂತ್ರ್ಯ ಯೋಧರು ಆಗಿದ್ದರು. ಮೈಸೂರು ಸಂಸ್ಥಾನದಲ್ಲಿ ಪೌರ ಸ್ವಾತ್ರಂತ್ರ್ಯಕ್ಕಾಗಿ ಅಥವಾ ಜವಾಬ್ದಾರಿಯುತ ಸರಕಾರಕ್ಕಾಗಿ ನಡೆದ ಹೋರಾಟದ ಸಂದರ್ಭದಲ್ಲಿ 'ತಾಯಿ ನಾಡು' ಪತ್ರಿಕೆಯ ಸಂಪಾದಕರಾದ ರಾಮಯ್ಯರವರು, ಹಾಗೆಯೇ ಉತ್ತರಕರ್ನಾಟಕದಲ್ಲಿ ಇದೇ ಮಾದರಿಯಲ್ಲಿ ಪರಕೀಯರ ವಿರುದ್ಧ ಹೋರಾಟ ಮಾಡಿದ 'ಕರ್ಮವೀರ' ಪತ್ರಿಕೆಯ ಹ.ಕಾ ಪುರೋಹಿತರು ಮೊದಲಾದವರು ಭಾಗವಹಿಸಿದ ರೀತಿಯನ್ನು ವಿಶ್ಲೇಷಿಸುತ್ತಾರೆ. ಬಹಳ ಮುಖ್ಯವಾಗಿ ನಿರಂಜನರು ಇಲ್ಲಿ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತ್ರಂತ್ರ್ಯ ನಂತರದ ಪತ್ರಕರ್ತರಲ್ಲಿನ ತಾತ್ವಿಕತೆಯನ್ನು ನಿರೂಪಿಸುತ್ತಾರೆ. ಅನೇಕ ಪತ್ರಕರ್ತರು ಸ್ವಾತಂತ್ರ್ಯ ಹೋರಾಟದಲ್ಲಿ ಯೋಧರಾಗಿ, ಸಾಹಿತಿಯಾಗಿ, ಶಿಕ್ಷಕನಾಗಿ,

ಮಾರ್ಗದರ್ಶಕರಾಗಿದ್ದರು. ಅದರೆ ಸ್ವಾತಂತ್ರ್ಯ ನಂತರದ ಪತ್ರಕರ್ತನ ಮನಸ್ಸು ಬದಲಾಗಿದ್ದು ಆಳುವ ವರ್ಗದ ಪರವಾಗಿ ನಿಲ್ಲುವ ಮನಸ್ಸಿನಿಂದ ಹೊರ ಬರಬೇಕೆಂದು, ಅನ್ಯಾಯವನ್ನು ಎದುರಿಸಬೇಕಾದ ಹೋರಾಟಗಾರನಾಗಬೇಕು ಎನ್ನುವ ಮೂಲಕ ಸಮಾಜದಲ್ಲಿ ಪತ್ರಕರ್ತನ ಜವಬ್ದಾರಿಯು ಬಹಳ ಸ್ಥಾನವನ್ನು ಪಡೆದಿದೆ ಎಂಬ ನಿಲುವನ್ನು ಹೊಂದಿದ್ದಾರೆ ನಿರಂಜನರವರು.

ಎರಡನೇಯ ಭಾಗವಾದ ರಾಷ್ಟ - ನಾಡು ಎಂಬಲ್ಲಿ ದೇಶದ-ನಾಡಿನ ಹಲವು ವಿಚಾರಗಳನ್ನು ಕುರಿತಂತೆ ನಿರಂಜನರು ತಮ್ಮದೇಯಾದ ರೀತಿಯಲ್ಲಿ ತಾತ್ವಿಕರಿಸುತ್ತಾರೆ. ದಸರಾ ಹಬ್ಬವನ್ನು ಆಚರಿಸುವುದು ಪರಂಪರೆಯಿಂದ ಬಂದಿದ್ದರೂ ಜನಸಾಮಾನ್ಯರು ಸ್ವಾತಂತ್ರ್ಯ ನಂತರ ಇದಕ್ಕೆ ಹೆಚ್ಚಿನ ಮನ್ನಣೆ ಕೊಡಲು ಕಾರಣವೇಂದರೆ ತನ್ನ ದೈನಂದಿನ ಬದುಕಿಗಿಂತ ಭಿನ್ನವಾದ ಬದುಕನ್ನು ಒಂದಷ್ಟು ದಿನ ಕಾಣುವ ಸಲುವಾಗಿ, ಸರಕಾರವು ದಸರಾ ಹಬ್ಬಕ್ಕಾಗಿ ಹಣವನ್ನು ವ್ಯಯಿಸುವುದರ ಉದ್ದೇಶ ವಿದೇಶಿ ಪ್ರಜೆಗಳು ಬರುವ ಮೂಲಕ ಪ್ರವಾಸೋದ್ಯಮವನ್ನು ಉತ್ತಮ ಪಡಿಸಬಹುದೆಂಬ ಚಿಂತನೆಯ ಫಲವಾಗಿ ಎಂದು ಆಧುನಿಕ ದಸರಾ ಹಬ್ಬವನ್ನು ನಿರಂಜನರು ಕಾಣುತ್ತಾರೆ. ಮೈಸೂರು ರಾಜ್ಯವು ಅಭಿವೃದ್ಧಿಯ ಹಿನ್ನೆಲೆಯಲ್ಲಿ ತುಂಗಾಭದ್ರ, ಶರಾವತಿ, ಲಕ್ಕವಳ್ಳಿ ಮೊದಲಾದ ಅಣೆಕಟ್ಟುಗಳ ಮುಂದೆ ಆಕರ್ಷಕವಾದ ಉದ್ಯಾನವನವನ್ನು ಸ್ಥಾಪಿಸುವುದರ ಉದ್ದೇಶವು ಪ್ರವಾಸೋದ್ಯಮವನ್ನು ಬೆಳೆಸಲು ಎಂಬುದಾಗಿ ಚರ್ಚಿಸುತ್ತಾರೆ. 'ನಾಳೆ ಮತ್ತು ಇವತ್ತು' ಎಂಬ ಅಂಕಣದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣಕ್ಕಾಗಿ ೪೦೦ ಎಕರೆ ಪ್ರದೇಶ ಬಿಟ್ಟು ಕೊಟ್ಟಿದ್ದು ೧ ಕೋಟಿಯಂತೆ ಪ್ರತಿವರ್ಷ ೧೫ ವರ್ಷಕ್ಕೆ ನೀಡುವ ಉದ್ದೇಶದಿಂದ ಉತ್ತಮ ವಿಶ್ವವಿದ್ಯಾಲಯ ಸ್ಥಾಪನೆಯಾಗುವ ಮೂಲಕ ಅದರ ಸುತ್ತ ಹಳ್ಳಿಗಳು ಸೇರುವುದರಿಂದ ಶಿಕ್ಷಣದ ಜೊತೆಗೆ ಆ ಗ್ರಾಮಗಳು ಅಭಿವೃದ್ಧಿ ಹೊಂದುತ್ತದೆ ಎಂಬ ನಿಲುವನ್ನು ಪ್ರತಿಪಾದಿಸುತ್ತಾರೆ.

ಗೋವಾದ ಸಾಂಸ್ಕೃತಿಕ ಸಂಪತ್ತನ್ನು ಪ್ರವಾಸಕ್ಕೆ ಭೇಟಿಕೊಟ್ಟ ಸಂದರ್ಭದಲ್ಲಿ ವರ್ಣಿಸುತ್ತಾರೆ. ಆಡು ಭಾಷೆ ಕೊಂಕಣಿಯಾಗಿದ್ದರೂ ಅಲ್ಲಿನ ಸ್ಥಳೀಯರು ಪೋರ್ಚುಗೀಸ್ ಭಾಷೆಯನ್ನು ಕಲಿತ್ತಿದ್ದಾರೆ. ಪೋರ್ಚುಗೀಸರ ೪೦೦ ವರ್ಷದ ಆಡಳಿತದಲ್ಲಿ ಅಲ್ಲಿಯವರಿಗೆ ಅವರು ಕಲಿಸಿದ್ದು ಒಂದು ಕುಡಿತ, ಮತ್ತೊಂದು ಹಾದರವೆಂದು 'ಪ್ರೊವಿಸೊ, ಅಲೆನ್ಸಿಯೋ' ಎಂಬ ಅಂಕಣದಲ್ಲಿ ಗೋವಾದ ಸಾಂಸ್ಕೃತಿಕ ವಿಚಾರಗಳು ಹೇಗೆ ನಾಪತ್ತೆಯಾದವು ಎಂಬುದನ್ನು ಇದರ ಹಿನ್ನೆಲೆಯಲ್ಲಿ ತಾತ್ವೀಕರಿಸಬಹುದು. ಪ್ರಜಾಪ್ರಭುತ್ವ ಮಾದರಿಯ ಭಾರತ ದೇಶದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅವಕಾಶವಿದೆ. ಅದರೆ ಪಿ. ನಾಗೇಶ್ ಓಕ್ ಎಂಬ ಇತಿಹಾಸಕಾರರು ಬೆಂಗಳೂರಿನಲ್ಲಿ ನಡೆದ ಭಾರತೀಯ ಇತಿಹಾಸ ಮಹಾಧಿವೇಶನದಲ್ಲಿ ಪಾಲ್ಗೊಂಡು ತಮ್ಮ ವಿಚಾರಗಳಾದ ಆರ್ಯಜನಾಂಗ ಎಂಬುವುದಿಲ್ಲ. ಷಹಜಹಾನ್ ತಾಜ್‌ಮಹಲ್‌ನ್ನು ಕಟ್ಟಲಿಲ್ಲ. ಅದೊಂದು ಶಿವ ದೇವಾಲಯವೆಂದು, ಕುತುಬ್ ಮಿನಾರ್‌ನ್ನು ಕುತುಬ್-ಉದ್-ದಿನ್-ಐಬಕ್ ಕಟ್ಟಲಿಲ್ಲ ಎಂಬ ವಿಚಾರಗಳನ್ನು ಪ್ರತಿಪಾದನೆ ಮಾಡಲು ಅವಕಾಶ ನೀಡದ ಈ ಮಹಾಧಿವೇಶನದ ಕ್ರಮ ಸರಿಯಲ್ಲ. ಪ್ರತಿಯೊಬ್ಬನಿಗೂ ತನ್ನದೇಯಾದ ಅಭಿಪ್ರಾಯವನ್ನು ಮಂಡಿಸುವ ಅದನ್ನು ಸಮರ್ಥಿಸುವ ಅವಕಾಶಗಳ ಪರವಾಗಿ ನಿರಂಜನರು ಬೆಂಬಲವನ್ನು ಕೊಡುತ್ತಾರೆ. ಅ ಮೂಲಕ ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸಾತ್ರಂತ್ರ್ಯವಿದೆ ಎಂಬುದನ್ನು 'ಅನ್ವೇಷಕ-ಪ್ರತಿಪಾದಕ' ಎಂಬ ಅಂಕಣದಲ್ಲಿ ಚರ್ಚಿಸುತ್ತಾರೆ.

ಅಸ್ಸಾಂನ ಮಿಜೋಗಳ ತಂಡ ಭಾರತದಾದ್ಯಂತ ಸಂಚರಿಸಿದ್ದು, ಆ ತಂಡದ ಮುಖ್ಯಸ್ಥ ಲಾಲ್ ಜುಯಿಯಾ ಅಸ್ಸಾಂ ಮಿಜೋಗಳಿಗೆ, ಬುಡಕಟ್ಟು ಜನರಿಗೆ ಬಯಲು ಸೀಮೆ ಕಂಡರೆ ಆಗುವುದಿಲ್ಲ, ಬಯಲಿನವರಿಗೆ ಗುಡ್ಡದವರನ್ನು ಕಂಡರೆ ಉಪೇಕ್ಷೆ ಇದೆಯೆಂದು ತಿಳಿಸಿದ ವಿಚಾರಕ್ಕೆ ನಿರಂಜನರವರು ಅಸ್ಸಾಂನವರಿಗೆ ಬಂಗಾಳಿಯವರನ್ನು, ಬಂಗಾಳಿಯವರಿಗೆ ಮದರಾಸಿಗಳು, ಮದರಾಸಿಗಳಿಗೆ ಹಿಂದಿಯವರನ್ನು, ಮಹಾರಾಷ್ಟ್ರದವರಿಗೆ ಕೊಂಕಣದವರನ್ನು, ಕೇರಳ ಮುಸಲ್ಮಾನರಿಗೆ ಮಾಪಿಳ್ಳೆ ಜಿಲ್ಲೆ ಬೇಕೆಂದು, ಕರ್ನಾಟಕದಲ್ಲಿ ಹಳೆಯ ಮೈಸೂರು ಬೇರೆ, ಇತರ ಪ್ರದೇಶಗಳು ಬೇರೆ, ಭಾರತ ದೇಶದಲ್ಲಿಯೂ ಎಷ್ಟೋಂದು ಅನೈಕ್ಯತೆಯಿದೆ. ಅದು ಬರೀ ಅಸ್ಸಾಂಗೆ ಮಾತ್ರ ಸೀಮಿತವಾಗಿಲ್ಲವೆಂದು ಅದು ಇಡೀ ಭಾರತದಾದ್ಯಂತ ಇದೆ. ರಾಷ್ಟ್ರ ಗೀತೆ ಮತ್ತು ರಾಷ್ಟ್ರ ಧ್ವಜಗಳಿಗೆ ಗೌರವವನ್ನು ಸಲ್ಲಿಸಬಹುದು ಆದರೆ ನಾವೆಲ್ಲ ಅಸ್ಸಾಂನ ಮೀಜೋಗಳ ಹಾಗೇ ಒಂದಲ್ಲ ಒಂದು ರೀತಿಯಲ್ಲಿ ಪ್ರತ್ಯೇಕತೆಯಲ್ಲಿ ಬದುಕುತ್ತಿದ್ದವೆಂದು ಭಾವೈಕ್ಯತೆಯ ತಾತ್ವಿಕತೆ ಹೇಗೆ ಸಂಕುಚಿತಾರ್ಥವನ್ನು ಪಡೆದಿದೆ ಎಂಬುದನ್ನು ದಾಖಲಿಸಿದ್ದಾರೆ.

ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವ ಸಲುವಾಗಿ ಬಾಬುರಾವ್ ಕಮತೇಕರ್‌ರವರು 'ಮಸ್ಸೂರಿ'ಯಲ್ಲಿ ಗಾಂಧಿಯವರ ಉದಾತ್ತ ತತ್ವಗಳಿಂದ ಪ್ರೇರಿತವಾಗಿ 'ಸಂತ ಸಾಹಿತ್ಯ ಸದನ' ಎಂಬ ಸಂಸ್ಥೆಯನ್ನು ಕಟ್ಟಿಕೊಂಡಿದ್ದಾರೆ. ಭಾರತದ ಭಾಷೆಗಳಲ್ಲಿರುವ ಶ್ರೇಷ್ಠ ಸಾಹಿತ್ಯವನ್ನೆಲ್ಲ ಭಾರತದ ಬೇರೆ ಬೇರೆ ಭಾಷೆಗಳಿಗೆ ಭಾಷಾಂತರಿಸುವ ಕಾರ್ಯದ ಮೂಲಕ ಮಾಡಲು ಪ್ರಯತ್ನಿಸುತ್ತಿರುವುದು ಒಂದು ಆಶಾದಾಯಕ ಬೆಳವಣಿಗೆಯಾಗಿದೆ. 'ತುಮ್ ನೆ ದೇಖಾ ಹೈ ಕ್ಯಾ' ಎಂಬ ಲೇಖನದಲ್ಲಿ ಅಕ್ಕಮಹಾದೇವಿಯವರ ವಚನ 'ನೀವು ಕಂಡಿರಾ ನೀವು ಕಂಡಿರಾ' ಭಾಷಾಂತರಿಸಿದ ಹೆಸರಿನಲ್ಲಿ ರಾಷ್ಟ್ರೀಯ ಭಾವೈಕ್ಯತೆ ಮೂಡಿಸುವಲ್ಲಿ ಈ ರೀತಿಯ ಕಾರ್ಯಗಳು ನಡೆಯಬೇಕಾದ ಅಗತ್ಯತೆಯನ್ನು ತಿಳಿಸುತ್ತಾರೆ.

ಉದಕಮಂಡಲದಲ್ಲಿದ್ದ (ಊಟಿ) ತೋಡ ಸಮುದಾಯದ ಮೇಲೆ ಆಂಗ್ಲ ಅಧಿಕಾರಿಗಳು ದಾಳಿ ಮಾಡಿ ಅ ಪುರಾತನ ಜನಾಂಗವನ್ನು ಅವನತಿ ಮಾಡಿದ್ದು ಅಲ್ಲದೆ, ತಮ್ಮ ಪ್ರದೇಶವನ್ನು ತಾವೇ ಆಳುತ್ತಿದ್ದ ಅವರನ್ನು ಜೀತದಾಳುಗಳಾಗಿ ಮಾಡಿಕೊಂಡು ಆಂಗ್ಲರು ಅಧಿಪತ್ಯವನ್ನು ಸ್ಥಾಪಿಸಿದ ಬಗೆಯನ್ನು 'ಸಂಪೂರ್ಣ ಶರಣಾಗತಿ' ಎಂಬ ಅಂಕಣದಲ್ಲಿ ನಿರಂಜನರು ಚರ್ಚಿಸುತ್ತಾರೆ. ತೋಡರಂಥ ಆನೇಕ ಬುಡಕಟ್ಟು ಅಥವಾ ಸ್ಥಳೀಯ ನಿವಾಸಿಗಳನ್ನು ಹೇಗೆ ಬ್ರಿಟಿಷ್ ಸರಕಾರವು ನಾಶ ಮಾಡಿದೆ ಎಂಬುದನ್ನು ತಿಳಿಸುತ್ತಾರೆ. 'ಬಡತನ-ಸಿರಿತನ' ಎಂಬ ಲೇಖನದಲ್ಲಿ ಸ್ವಾತಂತ್ರ್ಯ ನಂತರ ಇಡೀ ಕರಾವಳಿಯುದ್ದಕ್ಕು ರಾಷ್ಟ್ರೀಯ ಹೆದ್ದಾರಿಗಳನ್ನ ಸ್ಥಾಪನೆ ಮಾಡಿದ್ದು ಬಿಟ್ಟರೆ ಯಾವುದೇ ರೀತಿಯ ಆರ್ಥಿಕ ಬೆಳವಣಿಗೆ ಕಂಡಿಲ್ಲವೆಂದು, ರಾಷ್ಟ್ರದ ಸಮಾಜದ ವ್ಯವಹಾರಗಳಲ್ಲಿ ಯುವಕರು ವಹಿಸುವ ಪಾತ್ರ ಬಹಳ ಮುಖ್ಯವಾದುದಾಗಿದೆ. ದೇಶದ ಪ್ರತಿಯೊಂದು ಬೆಳವಣಿಗೆಯಲ್ಲಿ ಅವರ ಅಗತ್ಯವಿದೆ. ರಾಷ್ಟ್ರ ನಿರ್ಮಾಣದ ಚಾಲಕ ಶಕ್ತಿಯಾಗಿ, ಇಂಧನವಾಗಿ ಯುವಕರು ಕಾರ್ಯನಿರ್ವಹಿಸಬೇಕು. ಆಗ ಮಾತ್ರ ರಾಷ್ಟ್ರ ನಿರ್ಮಾಣಗೊಳ್ಳಲು ಸಾಧ್ಯವಿದೆ ಎಂಬುದನ್ನು 'ರಾಷ್ಟ್ರ ಶಕಟದ ಇಂಧನ' ಎಂಬ ಅಂಕಣದಲ್ಲಿ ಯುವಕರಿಗೆ ಆದ್ಯತೆ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಅವರ ಭಾಗವಹಿಸುವಿಕೆಯ ಅಗತ್ಯತೆಯನ್ನು ಪ್ರತಿಪಾದಿಸುತ್ತಾರೆ.

ಸಾಮಾಜಿಕ ಪರಿವರ್ತನೆಯಲ್ಲಿ ಬಲ್ಲಿದವರ (ತಿಳುವಳಿಕೆ) ಪಾತ್ರವನ್ನು ನಿರಂಜನರು ಬಲಿಷ್ಠವಾದ, ಜಾತ್ಯತೀತವಾದ, ಸಮಾಜವಾದಿ ಹಾಗೂ ಪ್ರಜಾಪ್ರಭುತ್ವ ರಾಷ್ಟ್ರ ನಿರ್ಮಾಣದ ಗುರಿಯೊಂದಿಗೆ ಜನತೆಗೆ ಉತ್ತಮ ಜೀವನಮಟ್ಟದೊಂದಿಗೆ, ಸಾಮಾಜಿಕ ನ್ಯಾಯದ ಮೇಲೆ, ನೂತನ ಸಮಾಜ ನಿರ್ಮಾಣ ಮಾಡಬೇಕೆಂದು ಸ್ವಾತ್ರಂತ್ರ್ಯ ನಂತರ ಸಂವಿಧಾನ ರಚನೆಯ ಮೂಲಕ ಅನೇಕರು ಕನಸು ಕಂಡಿದ್ದಾರೆ. ಆದರೆ ಸ್ವಾತ್ರಂತ್ರ್ಯ ಬಂದು ೨೦ ವರ್ಷಗಳಾದರು ನಾವು ಅದನ್ನು ಸಾಧಿಸಲು ಸಾಧ್ಯವಾಗಲಿಲ್ಲ. ಕಾರಣವೆಂದರೆ ಬಲ್ಲಿದವರು ಅಥವಾ ತಿಳಿದವರು ವಿಶ್ವವಿದ್ಯಾಲಯ ಗುರುಗಳಿರಬಹುದು. ಸುಶಿಕ್ಷಿತರಿರಬಹುದು, ಬುದ್ಧಿಜೀವಿಗಳಿರಬಹುದು ಇವರು ಮತ್ತು ಸರಕಾರದ ನಡುವೆ ಕಂದಕ ಏರ್ಪಟ್ಟಿದೆ. ತಿಳಿದವರ ಅನುಭವ ಮತ್ತು ಸಾಮರ್ಥ್ಯ ಆಡಳಿತಗಾರನ ಮುಂದಿನ ಗುರಿ ಸಾಧಿಸಲು ಇದು ಸಾಧ್ಯವಾಗುತ್ತದೆ. ಇವರ ಸಹಕಾರ ಪಡೆದು ಸರಕಾರ ಹೊಸ ಹೊಸ ಯೋಜನೆಗಳ ಮೂಲಕ ಸಾಮಾಜಿಕ ಪರಿವರ್ತನೆಯ ಪ್ರಯತ್ನ ಮಾಡಲು ಸಾಧ್ಯವಾಗುತ್ತದೆ ಎಂದು 'ಸಾಮಾಜಿಕ ಪರಿವರ್ತನೆಯಲ್ಲಿ ತಿಳಿದವರ ಪಾತ್ರ' ಎಂಬ ಅಂಕಣದಲ್ಲಿ ಇವರ ಮಾರ್ಗದರ್ಶನ ಸರಕಾರಕ್ಕೆ ಅಗತ್ಯವೆಂದು ವಿಶ್ಲೇಷಿಸುತ್ತಾರೆ.

ಮೂರನೇಯ ಭಾಗ 'ಸರಕಾರ-ಸಾಹಿತ್ಯ' ಎಂಬ ಅಂಕಣದಲ್ಲಿ ಬಹಳ ಮುಖ್ಯವಾಗಿ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಾಹಿತ್ಯದ ಬೆಳವಣಿಗೆಗೆ ಸರಕಾರದ ಧೋರಣೆಗಳು, ತೆಗೆದುಕೊಂಡ ಕಾಳಜಿಗಳನ್ನು ಚರ್ಚಿಸುವುದರೊಂದಿಗೆ ಅಕಾಡಮಿಗಳನ್ನು ಸ್ಥಾಪಿಸುವ ಮೂಲಕ ಅವುಗಳಿಂದ ನಿರ್ದೇಶಿಸುವ ಧೋರಣೆ, ರೇಡಿಯೋ ಮೂಲಕ ಸಾಹಿತ್ಯ ಮತ್ತು ಕಲೆಯನ್ನು ಪ್ರಚಾರ ಮಾಡಲು ಅವಕಾಶ ನೀಡದ ಸ್ಥಿತಿಯನ್ನು ಕುರಿತಂತೆ ವಿಶ್ಲೇಷಿಸುತ್ತಾರೆ. ಶಾಲಾ-ಕಾಲೇಜುಗಳಲ್ಲಿನ ಪಠ್ಯಪುಸ್ತಕಗಳು ಸರಿಯಾದ ಸಮಯಕ್ಕೆ ಸಿಗುತ್ತಿಲ್ಲವೆಂಬ ಕೂಗು ಇತ್ತೀಚಿಗೆ ದಿನಗಳಲ್ಲಿಯೂ ನಾವು ಕೇಳುತ್ತಿದ್ದೇವೆ. ಈ ವಿಚಾರ ಅಂದು ಕೂಡ ಸಮಸ್ಯೆಯಾಗಿತ್ತು. ಅದನ್ನು 'ಖಚಿತ ಗುರಿ ಸ್ಪಷ್ಟ ದಾರಿ' ಎಂಬ ಅಂಕಣದಲ್ಲಿ ಚರ್ಚಿಸುತ್ತಾರೆ. ಸರಕಾರದ ಧೋರಣೆಗಳು ಸಾಹಿತ್ಯದ ಮೇಲೆ ಹೇಗೆ ನಿಯಂತ್ರಿಸುವ ಕಾರ್ಯವನ್ನು ಮಾಡುತ್ತದೆ ಎಂಬುದನ್ನು ವಿವರಿಸಿದ್ದಾರೆ.

'ಸರಸ-ಸಂಕಟ' ಎಂಬ ನಾಲ್ಕನೇಯ ಭಾಗದಲ್ಲಿ ಹಲವು ವಿಚಾರಗಳನ್ನು ಪ್ರತಿಪಾದಿಸುತ್ತಾರೆ. 'ಮನವೆಂಬ ಮರ್ಕಟ' ಎಂಬ ಅಂಕಣದಲ್ಲಿ ಆಂಗ್ಲ ಪ್ರಾಧ್ಯಾಪಕರಾದ ರಾಮಚಂದ್ರ ಮೂರ್ತಿ ಅವರು ಜೆ. ಬಿ, ಪ್ರೆಸ್ಲೆ ಬರೆದ 'ಇನ್ಸ್‌ಪೆಕ್ಟರ್ ಕಾಲ್ಸ್' ಎಂಬ ಕನ್ನಡ ರೂಪಾಂತರ ನಾಟಕ. ಇಂಡಿಯನ್ ಹೌಸ್ ಮಕ್ಕಳಿಗಾಗಿ ಶಿಶುಸಾಹಿತ್ಯವನ್ನು ಪ್ರಕಟಿಸಲು ಮುಂದಾಗಿರುವುದು, 'ಆನೆ ಬಂದಿದೆ ಆನೆ ಬಂದಿದೆ' ಎಂಬ ಲೇಖನದಲ್ಲಿ ಕಾಕನ ಕೋಟೆಯಲ್ಲಿ ಆನೆಗಳನ್ನು ಖೆಡ್ಡಾಗೆ ಹಾಕುವ ರೀತಿಯನ್ನು, ಕುವೆಂಪುರವರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ಗುಜರಾತಿನ ಉಮಾಶಂಕರ ಜೋಶಿಯವರೊಂದಿಗೆ ಹಂಚಿಕೆ ಮಾಡಿದ್ದು ಸಮನ್ವಯತೆಯ ಸಂಕೇತವಾಗಿ ನೋಡುತ್ತಾರೆ. 'ಯುವಕ ಸಿಡಿಮದ್ದು' ಎಂಬ ಲೇಖನದಲ್ಲಿ ಪ್ರಾಗ್, ಪ್ಯಾರಿಸ್, ಬೆಲ್‌ಗ್ರೇಡ್, ಇಂಗ್ಲೆಂಡ್, ಜರ್ಮನಿ, ದಕ್ಷಿಣ ಕೊರಿಯ, ಪೋಲ್ಯಾಂಡ್ ಮೊದಲಾದ ಕಡೆ ಯುವಕರು ಚಳುವಳಿ ನಡೆಸಿದ ಕಾರಣ ನಿರುದ್ಯೋಗ ಸಮಸ್ಯೆಯಾಗಿದೆ. ಈ ನಿರುದ್ಯೋಗ ಸಮಸ್ಯೆಯನ್ನು ಸರಕಾರಗಳು ನಿವಾರಿಸಬೇಕು. ಇಲ್ಲವಾದರೆ ವಿದ್ಯಾವಂತ ನಿರುದ್ಯೋಗಿಗಳು ಭಾರತದಲ್ಲಿಯೂ ದಂಗೆ ಏಳಬಹುದೆಂದು ತಿಳಿಸುತ್ತಾರೆ. ಸಂಯುಕ್ತ ಕರ್ನಾಟಕ ಪ್ರತಿಕೆ ಆರಂಭಿಸಿ ೧೯೬೯ರಲ್ಲಿ ೧೦ವರ್ಷ ತುಂಬಿದ ಸಂದರ್ಭದಲ್ಲಿ ಸಂದರ್ಭದಲ್ಲಿ ನಿಜಾಮರ ಕಾಲದಲ್ಲಿ ಕನ್ನಡ ಭಾಷೆ ಸಂಸ್ಕೃತಿ ಜೀವಂತವಾಗಿರುವಂತೆ ಮಾಡಿದ ಪತ್ರಿಕೆಯಾಗಿ 'ಹುಟ್ಟು ಹಬ್ಬದ

ಶುಭಕಾಮನೆ' ಎಂಬ ಲೇಖನದಲ್ಲಿ ತಿಳಿಸುತ್ತಾರೆ. 'ಶಶಿ ಚುಂಬನ' ಎಂಬ ಅಂಕಣದಲ್ಲಿ ನೀಲ್ ಆರ್ಮ್‌ಸ್ಟ್ರಾಂಗ್, ಆಲ್ಡ್ರಿನ್‌ರವರು ಚಂದ್ರಯಾನ ಕೈಗೊಂಡಿದ್ದು ಶಾಂತಸಾಗರದಲ್ಲಿ ಬಂದಿಳಿದ ಬಗೆ ಮಾನವನ ಅದ್ಭುತ ಸಾಧನೆಯೆಂದು, ನೂರು ವರ್ಷದ ಹಿಂದೆಯೇ ಜೂಲ್ಸ್ ವರ್ನ್ 'ಭೂಮಿಯಿಂದ ಚಂದ್ರಗ್ರಹಣಕ್ಕೆ' ಎಂಬ ಕಾದಂಬರಿಯು ಕೂಡ ಚಂದ್ರಯಾನ ಕೈಗೊಂಡು ಸಮುದ್ರದಲ್ಲಿ ಬಂದಿಳಿದರು, ಅಮೇರಿಕಾದ ಹಡಗು ಅವರನ್ನು ಎತ್ತಿಕೊಂಡ ತಿಳಿಸಿದ ರೀತಿಯಲ್ಲಿಯೆ ಈ ಘಟನೆ ನಡೆದಿದೆ ಸಾಹಿತಿಯ ದೂರ ದೃಷ್ಟಿ ಹೇಗೆ ಸಾಹಿತ್ಯ ಕೃತಿಯಲ್ಲಿ ವ್ಯಕ್ತವಾಗುತ್ತದೆ ಎಂಬುದನ್ನು ಇದರಲ್ಲಿ ವಿಶ್ಲೇಷಿಸುತ್ತಾರೆ. 'ಮಾರ್ಗದರ್ಶಿಗಳಿಂದ ರಕ್ಷಿಸಿ' ಎಂಬ ಅಂಕಣದಲ್ಲಿ ವಿದ್ಯಾರ್ಥಿಗಳ ಕಲಿಕೆಗಾಗಿ ಗೈಡು, ನೋಟುಗಳನ್ನು ಮೊದಲೇ ಪಡೆಯಬೇಕು ಅದರಿಂದ ಹೆಚ್ಚು ಅರ್ಥವಾಗುತ್ತದೆ ಎಂಬ ತಪ್ಪು ಭಾವನೆಯಿಂದ ವಿದ್ಯಾರ್ಥಿಗಳನ್ನು ಬೆಳೆಸುತ್ತಿದ್ದು ಇದರಿಂದ ವಿದ್ಯಾರ್ಥಿ ಸಮೂಹವನ್ನು ರಕ್ಷಿಸಬೇಕಾಗುತ್ತದೆ ಎಂದು ತಿಳಿಸುತ್ತಾರೆ.

'ಅಲೆಯುವ ಆತ್ಮಕ್ಕೆ ತಾಣ' ಎಂಬ ಲೇಖನದಲ್ಲಿ ಜಪಾನಿನ ಟೋಕಿಯೋ ನಗರದಲ್ಲಿ ಆಗಸ್ಟ್ ೧೮ರಂದು ಸುಭಾಸ್ ಚಂದ್ರ ಬೋಸ್‌ರವರ ಚಿತಾಭಸ್ಮ ಇಟ್ಟ ಸ್ಥಳ ರೆಂಕೋಜಿ ದೇವಾಲಯದಲ್ಲಿ ಆಚರಿಸಿದರು. ಆದರೆ ಭಾರತೀಯರು ಅವರು ಮುಂದೊಂದು ದಿನ ಈ ದೇಶಕ್ಕೆ ಬಂದು ದೇಶದ ಚುಕ್ಕಾಣಿ ಹಿಡಿಯವರೆಂದು ಅಸತ್ಯವನ್ನು ನುಡಿದು ಅದೇ ಸತ್ಯವೆಂದು ಭಾವಿಸುವ ಜನರ ಮನಃಸ್ಥಿತಿ, ಹೊಸ ಪೀಳಿಗೆಯು ಇಲ್ಲಿ ಹುಟ್ಟಿ ಸತ್ಯ ನಿಷ್ಠ ನಿಲುವನ್ನು ತಿಳಿಯುವರೇನೋ ಎಂದು ಭಾವಿಸುತ್ತಾರೆ. ಭಾರತೀಯ ನೆಲದಲ್ಲಿ ಸಮಾದಿ ಏರ್ಪಟ್ಟು ಶ್ರದ್ಧಾಂಜಲಿ ಅರ್ಪಿಸುವಂತಾಗಲಿ ಎಂದು ಆಶಿಸುತ್ತಾರೆ. ೨೦೧೬ರ ವರೆಗೂ ಸನ್ಯಾಸಿ ಒಬ್ಬರನ್ನು ಸುಭಾಸ್ ಚಂದ್ರ ಬೋಸರೆಂದು ಹೇಳಿ ಇಡೀ ಭಾರತೀಯ ಮಾಧ್ಯಮದಲ್ಲಿ ಚರ್ಚೆಗಳು ಆಗಿದನ್ನು ಕಾಣಬಹುದು. ೧೯೬೮ರಲ್ಲಿ ನಿರಂಜನರು ಬರೆದ ಲೇಖನದಲ್ಲಿ ಜನರ ಮನಃಸ್ಥಿತಿ ಹೇಗೆ ಇತ್ತೋ ಆದೇ ರೀತಿಯಲ್ಲಿ ಲೇಖನ ಪ್ರಕಟಣೆಯಾಗಿ ೫೦ ವರ್ಷಗಳಾದರು ಸುಭಾಸ್ ಚಂದ್ರರ ಸಾವಿನ ಬಗ್ಗೆ ಭಾರತೀಯರಿಗೆ ಅದೇ ಮನಃಸ್ಥಿತಿ ಇದೆ. ಹೊಸ ಪೀಳಿಗೆಯೊಂದು ಹುಟ್ಟಿದರೂ ಸತ್ಯನಿಷ್ಠೆಯ ನಿಲುವನ್ನು ತಾಳದೆ ಇರುವುದು ವಿಪರ್ಯಾಸವೇ ಸರಿ. ನಿರಂಜನರವರ ವಿಚಾರ ಸಾಹಿತ್ಯವು ಆಯಾಯ ಲೇಖನಗಳ ವಿಷಯಕ್ಕೆ ಅನುಗುಣವಾಗಿ ಭಿನ್ನ ತಾತ್ವಿಕತೆಯನ್ನು ಓದುಗರ ಮುಂದೆ ಇಡುವುದು ಮಾತ್ರವಲ್ಲದೆ ಅವುಗಳನ್ನು ವಿಮರ್ಶಿಸುವ ಪ್ರಜ್ಞೆಯನ್ನು ಬೆಳೆಸುವುದುವಂತದ್ದು ಆಗಿದೆ.

ಅಂಕಣ -೧೯೭೨

ಕನ್ನಡ ದಿನ ಪತ್ರಿಕೆಯಾದ 'ಪ್ರಜಾವಾಣಿ' ಸಾಪ್ತಾಹಿಕ ಪುರವಾಣಿಯಲ್ಲಿ ೧೯೭೨-೧೯೭೬ರ ವರೆಗೆ ಬರೆದ 'ಬೇವು-ಬೆಲ್ಲ' ಅಂಕಣಗಳ ಸಂಕಲನ ಕೃತಿಯೇ 'ಅಂಕಣ' ಎಂಬುದಾಗಿದೆ. ಇದರಲ್ಲಿ ಒಟ್ಟು ೨೦೫ ಲೇಖನಗಳಿದ್ದು ಇದನ್ನು ನಿರಂಜನರವರು ೧೯೭೨ರಲ್ಲಿ ಪ್ರಕಟಿಸಿದರು.

ಆಫ್ರಿಕಾ, ಏಷ್ಯಾ ರಾಷ್ಟ್ರಗಳ ದ್ವಿತೀಯ ಲೇಖಕರ ಸಮ್ಮೇಳನ ಈಜಿಪ್ಟ್‌ನಲ್ಲಿ ನಡೆಯಿತು. ಆ ಸಮ್ಮೇಳನಕ್ಕೆ ಚೀನಾ ಮತ್ತು ರಷ್ಯಾ ಪ್ರತಿನಿಧಿಗಳು ಭಾಗವಹಿಸಿದರು. ಎರಡೂ ದೇಶದ ರಾಜಕೀಯ ವಿಚಾರಗಳೊಂದಿಗೆ ಮಾತಿನ ಘರ್ಷಣೆಗಳು ನಡೆಯುತ್ತೇ ಹೊರತು ಕಲೆ ಮತ್ತು ಸಾಹಿತ್ಯದ ಬಗ್ಗೆ ಯಾವುದೇ ಚರ್ಚೆಗಳು ನಡೆಯಲಿಲ್ಲ ಬರೀ ರಾಜಕೀಯದ ಚದುರಂಗದಾಟಗಳೇ ನಡೆದವು. ಬರೀ ರಾಜಕೀಯ ವಿಚಾರಗಳೇ ರಾಷ್ಟ್ರೀಯ, ಅಂತರಾಷ್ಟ್ರೀಯ ಸಾಹಿತ್ಯ ಸಮ್ಮೇಳನಗಳಲ್ಲಿ ಚರ್ಚೆಯಾಗುತ್ತವೆ

ಹೊರತು, ಕಲೆ ಮತ್ತು ಸಾಹಿತ್ಯಗಳ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸುವ ಸ್ಥಿತಿಗೆ ಹೋಗುವುದಿಲ್ಲ. ಸಾಹಿತ್ಯ ಸಮ್ಮೇಳನಗಳು ರಾಜಕೀಯ ವೇದಿಕೆಗಳಾಗಿರುವ ವಿಚಾರವನ್ನು 'ಚದುರಂಗದ ದಾಳಗಳು' ಎಂಬ ಲೇಖನದಲ್ಲಿ ತಾತ್ವೀಕರಿಸುತ್ತಾರೆ. ಕನ್ನಡ ಭಾಷೆಗೆ ಹೆಚ್ಚಿನ ಆದ್ಯತೆಯನ್ನು ಪ್ರತಿಯೊಬ್ಬರು ನೀಡಬೇಕೆಂದು ತಾಯಿ ನುಡಿಯ ಮೂಲಕವೇ ವಿಶ್ವದ ಜ್ಞಾನ ದೊರಕಬೇಕು. ಎಂದೆಂದಿಗೂ ಇಂಗ್ಲೀಷ್ ಭಾಷೆ ಬೇಡವೆನ್ನದೇ ಕನ್ನಡಕ್ಕೆ ಗರ್ಭಗುಡಿಯ ಸ್ಥಾನವನ್ನು ನೀಡಿ ಇಂಗ್ಲೇಷ್‌ಗೆ ಗೆಸ್ಟ್‌ರೂಮಿನ ಸ್ಥಾನವನ್ನು ನೀಡುವ ಮೂಲಕ ಅ ಭಾಷೆಯನ್ನು ಕಲಿಯುವದರೊಂದಿಗೆ, ಜ್ಞಾನ ಪಡೆಯುವುದರೊಂದಿಗೆ ಸಾಗಬೇಕು. ಆದರೆ ಹೆಚ್ಚಿನ ಆದ್ಯತೆ ಕನ್ನಡ ಭಾಷೆಗೆ ನೀಡಬೇಕು ಎಂದು 'ಗರ್ಭಗುಡಿಯಿಂದ ಗೆಸ್ಟ ರೂಮಿಗೆ' ಎಂಬ ಅಂಕಣದಲ್ಲಿ ಕನ್ನಡಿಗರು ಕನ್ನಡಕ್ಕೆ ಯಾವ ಸ್ಥಾನವನ್ನು ನೀಡಬೇಕೆಂದು ವಿಶ್ಲೇಷಿಸುತ್ತಾರೆ.

ಭಾರತೀಯ ಸಾಹಿತ್ಯ ಎಂದರೇನು? ಎಂಬುದಕ್ಕೆ ನಿರಂಜನರವರು ಯಾವುದೇ ಭಾರತೀಯ ಪ್ರಾದೇಶಿಕ ಭಾಷೆಯಲ್ಲಿ ರಚಿತಗೊಂಡ ಶ್ರೇಷ್ಠ ಕೃತಿ, ಬರಹಗಾರನ ಸಾಹಿತ್ಯ ಕೃತಿಯು ಅದು ಇತರ ಭಾರತೀಯ ಭಾಷೆಗಳೊಂದಿಗೆ ಭಾಷಾಂತರಗೊಂಡು ಆನೇಕ ಭಾಷಿಕರಿಗೆ ಅ ಸಾಹಿತ್ಯದ ಅನುಭವವನ್ನು ನೀಡುವುದು, ಉದಾ, ತಮಿಳುನಾಡಿನ ಸುಬ್ರಹ್ಮಣ್ಯ ಭಾರತಿ, ಬಂಗಾಳದ ಬಂಕಿಮಚಂದ್ರ ಮೊದಲಾದವರು ಭಾರತೀಯ ಸಾಹಿತಿ ಮತ್ತು ಸಾಹಿತ್ಯವನ್ನು ಸೃಷ್ಟಿಸಿದವರಾಗಿದ್ದಾರೆ. ಭಾರತೀಯ ಪ್ರಾದೇಶಿಕ ಸಾಹಿತಿಗಳು ಬರೆದ ಉತ್ತಮ ಕೃತಿಗಳು ರೂಪಾಂತರಗೊಂಡು ವಿಶ್ವದಲ್ಲಿ ಮನ್ನಣೆ ಲಭಿಸುವುದರಿಂದ ಅವರು ವಿಶ್ವ ಸಾಹಿತಿಗಳೆಂದು ಉದಾಹರಣೆಗೆ ರವೀಂದ್ರನಾಥ ಟಾಗೋರ್, ಆರ್. ಕೆ. ನಾರಾಯಣ್ ಮೊದಲಾದ ಬರಹಗಾರರು ವಿಶ್ವ ಸಾಹಿತಿ ಎಂದು, ಭಾರತೀಯ ಸಾಹಿತ್ಯ ಮತ್ತು ಸಾಹಿತಿ, ವಿಶ್ವ ಸಾಹಿತಿಯ ತಾತ್ವಿಕ ಸ್ವರೂಪವನ್ನು ವಿಶ್ಲೇಷಿಸುತ್ತಾರೆ.

'ರಾಜಕೀಯ ಗರಡಿಯಲ್ಲಿ ಕವಿ' ಎಂಬ ಲೇಖನದಲ್ಲಿ ಕನ್ನಡದ ಪ್ರಮುಖ ಬರಹಗಾರರಾದ ಶಿವರಾಮ ಕಾರಂತರು, ಬಸವರಾಜ ಕಟ್ಟೀಮನಿ, ಸರೋಜಿನಿ ಮಹಿಷಿ ಮೊದಲಾದವರು ಚುನಾವಣಾ ಕಣದಲ್ಲಿ ಭಾಗವಹಿಸಿದವರು. ರಾಜ್ಯಸಭಾ, ವಿಧಾನ ಸಭೆ, ವಿಧಾನ ಪರಿಷತ್ತಿಗೆ ಇಂತಹವರನ್ನು ಅವಿರೋಧವಾಗಿ ಆಯ್ಕೆ ಮಾಡಬೇಕೆಂದು, ಕವಿಯೂ ಕೂಡ ರಾಜಕೀಯ ಕ್ಷೇತ್ರದಲ್ಲಿ ಭಾಗವಹಿಸಿ ಸಮಾಜದಲ್ಲಿನ ಆನೇಕ ಸಮಸ್ಯೆಗಳಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯ ಶಾಸಕಾಂಗ ಸಭೆಯಲ್ಲಿ, ಅಧಿವೇಶಗಳಲ್ಲಿ ಭಾಗವಹಿಸಿ, ಚರ್ಚಿಸುವ ಮೂಲಕ ಒಳಿತನ್ನು ಕೂಡ ಮಾಡಬಹುದು. ಸೃಜನಶೀಲ ಬರವಣಿಗೆಯ ಮೂಲಕ ಮಾತ್ರ ಸಮಾಜದ ಸ್ವಾಸ್ಥ್ಯವನ್ನು ಬರಹಗಾರ ಎತ್ತಿ ಹಿಡಿಯುವುದು ಮಾತ್ರವಲ್ಲದೆ ರಾಜಕೀಯದಲ್ಲಿ ತೊಡಗಿಗೊಂಡು ಅದರಿಂದಲೂ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವ ಧೋರಣೆಯು ಒಳ್ಳೆಯದು ಎಂಬ ತಾತ್ವಿಕತೆಯನ್ನು ಓದುಗರ ಮುಂದೆ ಇಡುತ್ತಾರೆ.

ಪಠ್ಯ ಪುಸ್ತಕಗಳ ಸಮಸ್ಯೆಗೆ ಪಠ್ಯಪುಸ್ತಕಗಳನ್ನು ರಾಷ್ಟ್ರೀಕರಣ ಮಾಡುವುದರಿಂದ ಸಮಸ್ಯೆಯನ್ನು ಪರಿಹರಿಸಲಾಗದೆಂದು, ಪಠ್ಯಪುಸ್ತಕಗಳನ್ನು ರಚಿಸುವ ಸಮಿತಿಯಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳಸುವ ದೃಷ್ಟಿಯಲ್ಲಿ ರಚಿಸಬೇಕಾದುದು ಆದ್ಯ ಕರ್ತವ್ಯವಾಗಿದೆ. ಪ್ರತ್ಯೇಕತೆಯ ಭಾವನೆಗಳನ್ನು, ಇನ್ನೊಂದು ಸಂಸ್ಕೃತಿಯ ಕಲೆ, ಸಾಹಿತ್ಯ, ವಾಸ್ತುಶಿಲ್ಪ ಮೊದಲಾದವುಗಳ ಅವಹೇಳನ ಮಾಡದ ರೀತಿಯಲ್ಲಿ ಪಠ್ಯಪುಸ್ತಕಗಳು ರಚನೆಯಾಗಬೇಕು. ಪಠ್ಯ ಪುಸ್ತಕಗಳ ಸಮಸ್ಯೆಗೆ ಪರಿಹಾರವನ್ನು ತಾತ್ವಿಕವಾಗಿಯೂ 'ಮುಳುಗವವನ ಕೊರಳಿಗೆ ಕೊರಡು' ಎಂಬ ಲೇಖನದಲ್ಲಿ ವಿಶ್ಲೇಷಿಸುತ್ತಾರೆ.

'ಗಣಪತಿಯ ಬದಲು' ಎಂಬ ಲೇಖನದಲ್ಲಿ ಬಿಹಾರದಲ್ಲಿ ಪಠ್ಯಪುಸ್ತಕಗಳನ್ನು ರಾಷ್ಟ್ರೀಕರಣ ಮಾಡಿದ್ದರಿಂದ ಅಲ್ಲಿನ ಸರಕಾರಕ್ಕೆ ನಷ್ಟದ ಜೊತೆಗೆ ಸರಕಾರ ಅನೇಕ ಸಮಸ್ಯೆಗಳಿಗೆ ಒಳಗಾಗಿದೆ ಎಂಬುದನ್ನು ಚರ್ಚಿಸುತ್ತಾರೆ.

ಸಾಹಿತ್ಯ, ಕಲೆ, ಸಂಸ್ಕೃತಿಯ ಉಳಿವಿಗಾಗಿ ಲೇಖಕರಿಗೆ ಒಂದು ಕಡೆಯಿಂದ ಮತ್ತೊಂದು ಪ್ರದೇಶಗಳಿಗೆ ಹೋದಾಗ ಅವರಿಗೆ ಉಳಿದುಕೊಳ್ಳುವ ವ್ಯವಸ್ಥೆಯನ್ನು ಸರಕಾರ ಮಾಡಬೇಕು. ಪ್ರಖ್ಯಾತ ಬಂಗಾಳಿ ಬರಹಗಾರ ಶರತ್ ಚಂದ್ರರ ಹುಟ್ಟೂರಾದ ದೇವಾನಂದಪುರದಲ್ಲಿ 'ಲೇಖಕರ ವಿಶ್ರಾಂತಿ ಧಾಮ' ರೀತಿಯಲ್ಲಿ ಕಟ್ಟಬೇಕು, ಸಾಹಿತ್ಯ ಅಕಾಡೆಮಿಗಳು, ಭಾಷೆ ಮತ್ತು ಸಾಹಿತ್ಯದ ಅಭಿವೃದ್ಧಿಗೆ ಆನೇಕ ಕಾರ್ಯಕ್ರಮಗಳನ್ನು ರೂಪಿಸಿದರೆ ಸಾಲದು ಅವುಗಳನ್ನು ಜನ ಸಮಾನ್ಯರ ಬಳಿಗೆ ತೆಗೆದುಕೊಂಡು ಹೋಗಬೇಕು ಎಂಬ ತಾತ್ವಿಕತೆಯನ್ನು ನಿರಂಜನರು ಪ್ರತಿಪಾದಿಸುತ್ತಾರೆ.

'ತನ್ನನ್ನು ತಾನೇ ಕಂಡ ಜಿಲಾಸ್' ಎಂಬ ಅಂಕಣದಲ್ಲಿ ಯುಗೋಸ್ಲೋವಿಯಾದ ಯುವ ಕವಿ ಜಿಲಾಸ್ ಆತ್ಮಕತೆಯನ್ನು ವಿವರಿಸುತ್ತಾರೆ. ಚೀನಾದ ಕಮ್ಯೂನಿಸ್ಟ್ ವಿಚಾರಧಾರೆಗಳು, ದ್ವಿಮುಖ ವಿಚಾರಗಳನ್ನು ಪ್ರತಿಪಾದಿಸುವ ರೀತಿಯನ್ನು 'ಚೀನಿ ಕವಿಗಳ ಪರ್ವತಗಾನ' ದಲ್ಲಿ, 'ವಿಶ್ವರಂಗದಲ್ಲಿ ಸ್ಟಿನ್ ಬೆಕ್' ಎಂಬ ಲೇಖನದಲ್ಲಿ ಅಮೇರಿಕಾದ ಸಾಹಿತಿಯಾದ ಜಾನ್ ಸ್ಟಿನ್ ಬೆಕ್ ಸಾಹಿತ್ಯದಲ್ಲಿ ನೋಬೆಲ್ ಪಾರಿತೋಷಕ ಪಡೆದಿದ್ದು, ಸರ್ ಕಾಂಪ್ಟನ್ ಮೆಕೆಜ್ಜಿ ಎಂಬ ಸಾಹಿತಿಯ ಬದುಕಿನ ಚಿತ್ರಣವನ್ನು 'ನಾಲ್ಕು ಇಪ್ಪತ್ತರ ಯುವಕ' ಎಂಬ ಲೇಖನದಲ್ಲಿ, 'ಸಿನಿಸ್ಟರ್ ಸ್ಟ್ರಿಲ್' ಎಂಬ ಕಾದಂಬರಿ ಬೆಕ್ಕುಗಳನ್ನು ಕುರಿತು ಬರೆದದ್ದು, ಆ ಕೃತಿಯ ವಿವರವನ್ನು ನೀಡುತ್ತಾರೆ. ಚೀನಾ ದೇಶದ ಪ್ರಖ್ಯಾತ ಸಾಹಿತಿ ಲೂಶಾನ್ ಮಾವೋ ತ್ಸೇ ತುಂಗನ ದೀರ್ಘ ಪ್ರಯಾಣದಲ್ಲಿ ಜೊತೆಗಿದ್ದವನು ಚೀನ ಕಮ್ಯೂನಿಸ್ಟ್ ಪಕ್ಷದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದ. ಇದರಿಂದ ಚೀನಾದಲ್ಲಿ ಕಲೆ ಸಾಹಿತ್ಯ ಪುನರ್‌ಜ್ಜೀವನಗೊಳಿಸಬಹುದೆಂದು ಭಾವಿಸಿದನು. ಆದರೆ ಮಾವೋ ತ್ಸೇ ತುಂಗನ ರಾಜಕೀಯಕ್ಕೆ ಅನುಗುಣವಾಗಿ ಬರೆಯಲು, ಲೇಖಕನಿಗೆ ಸ್ವಾತಂತ್ರ್ಯವೇ ಇಲ್ಲವಾದ ಸ್ಥಿತಿಯನ್ನು 'ಹಕ್ಕಿ ಮತ್ತು ಕೊಳೆತ ಸೇಬುಗಳು' ಎಂಬ ಅಂಕಣದಲ್ಲಿ ತಿಳಿಸುತ್ತಾರೆ. 'ಆಸ್ಥಾನ ಕವಿಗೆ ಅರ್ಧ ಚಂದ್ರ' ಎಂಬ ಅಂಕಣದಲ್ಲಿ ರಷ್ಯಾ ಸರಕಾರದ ಆಜ್ಞೆಗೆ ಅನುಗುಣವಾಗಿ ತನ್ನ ಶ್ರೇಷ್ಠ ಕೃತಿಗಳನ್ನು ಬರೆದು ಎವಜಿನ್ ಯವುಶೇಂಕೋ ಈತನನ್ನು ಅನುಸರಿಸಿ ಅನೇಕ ಬರಹಗಾರರು ಸರಕಾರದ ಪರವಾಗಿ ಬರೆದರು. ಆದರೆ ಭಾರತಕ್ಕೆ ಸಾಂಸ್ಕೃತಿಕ ನಿಯೋಗ ಬಂದಾಗ ರಷ್ಯಾ ಸರಕಾರ ಆತನನ್ನು ಈತನ ಬರವಣಿಗೆಗಳು ಸಮಾಜವಾದಿ ವಾಸ್ತವವಾದಕ್ಕೆ ಗಂಡಾಂತರವಾಗಿವೆ ಎಂದು ಆತನನ್ನು ಸೌಹಾರ್ಧ ಲೇಖಕರಲ್ಲಿ ಕಳುಹಿಸಿಲ್ಲವೆಂದು ವಿವರಿಸುತ್ತಾರೆ. ಕಮ್ಯೂನಿಸ್ಟ್ ಸರಕಾರಗಳು ರಷ್ಯಾ ಮತ್ತು ಚೀನಾದಲ್ಲಿ ಬರಹಗಾರರನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವ ಆ ಮೂಲಕ ಸಾಹಿತಿಗಳನ್ನು ಬೇಕೆಂದಾಗ ಹತ್ತಿಕ್ಕುವ ಪ್ರವೃತ್ತಿಯು ಕಮ್ಯೂನಿಸ್ಟ್ ರಾಜಕೀಯ ಧೋರಣೆಯ ತಾತ್ವಿಕತೆಯಾಗಿದೆ.

ಜಗತ್ತಿನ ಪ್ರಮುಖ ಕವಿಗಳ ವಿಚಾರಧಾರೆಗಳು, ಆ ದೇಶದ ಸಾಹಿತ್ಯ ಪ್ರೋತ್ಸಾಹಕ್ಕೆ ಸರಕಾರಗಳು ಒಡ್ಡುವ ದಿಗ್ಬಂಧನಗಳು ಪ್ರಭಾವಗಳನ್ನು ಹೇಗೆ ಬೀರುತ್ತವೆ ಎಂಬುದರೊಂದಿಗೆ ಕನ್ನಡ ನಾಡಿಗೆ ಸೇವೆ ಸಲ್ಲಿಸಿದ ತ್ರಿವೇಣಿ, ದೇವೆಂದ್ರಪ್ಪ, ರವೀಂದ್ರನಾಥ ಟಾಗೋರ್, ಎ.ಆರ್. ಕೃಷ್ಣ ಶಾಸ್ತ್ರಿ, ಗೋವಿಂದ ಪೈ, ಜವಹಾರ್ ಲಾಲ್ ನೆಹರೂ, ರಂ. ಶ್ರೀ ಮುಗಳಿ, ಎಂ. ಮರಿಯಭಟ್ಟರು, ಹಾಸನದ

ರಾಜಾರಾಯರು, ಫ. ಗು. ಹಳಕಟ್ಟಿ, ಬಿ. ಶಂಕರಭಟ್ಟರ ಮೊದಲಾದವರ ವ್ಯಕ್ತಿ ಚಿತ್ರಣವನ್ನು ಕೆಲವೊಂದು ಲೇಖನಗಳಲ್ಲಿ ನೀಡುತ್ತಾರೆ.

'ಸರಕಾರಿ ಪಠ್ಯ' ಎಂಬ ಅಂಕಣದಲ್ಲಿ ಪಠ್ಯ ಪುಸ್ತಕವು ರಾಷ್ಟ್ರೀಕರಣವಾಗುವುದರಿಂದ ಪ್ರಕಾಶಕರ ಹಾವಳಿಯನ್ನು ತಪ್ಪಿಸಬಹುದೆಂದು ಮಹಾರಾಷ್ಟ್ರ ಸರಕಾರವು ಪಠ್ಯಪುಸ್ತಕವನ್ನು ರಾಷ್ಟ್ರೀಕರಿಸಿದೆ. ಆದರೆ ಐದನೇಯ ತರಗತಿಯ ವಿದ್ಯಾರ್ಥಿಗಳಿಗಾಗಿ ಭೂಗೋಳ ವಿಷಯಕ್ಕೆ ಸಂಬಂಧಿಸಿದಂತೆ 'ಜಗತ್ತಿನ ಕೈಪಿಡಿ' ಎಂಬ ಮರಾಠಿ ಭಾಷೆಯಲ್ಲಿ ಪುಸ್ತಕ ಪ್ರಕಟವಾಗಿದೆ. ಇದರಲ್ಲಿ ತಮಿಳರನ್ನು ಹಾಗೂ ಬಂಗಾಳಿಗರ ಉಡುಗೆ, ತೊಡುಗೆಯನ್ನು ವ್ಯಂಗೀಕರಿಸುವುದರ ಮೂಲಕ ಮಹಾರಾಷ್ಟ್ರ ಸರಕಾರದ ಸಣ್ಣತನ, ಸಂಕುಚಿತ ಪ್ರಾದೇಶಿಕ ಅಹಂಭಾವ, ಅಸಹಿಷ್ಣುತೆಯಂಥ ಗುಣಗಳು ಪಠ್ಯಪುಸ್ತಕದ ಪುಟ ಪುಟಗಳಿಂದಲೂ ಕಾಣಿಸುತ್ತಿವೆ. ಅದನ್ನು ಅಲ್ಲಿನ ಕೆಲವು ಅಧ್ಯಾಪಕರು ಸರಕಾರದ ಕಣ್ಣನ್ನು ತೆರೆಸಿದ್ದಾರೆ. ಪಠ್ಯ ಪುಸ್ತಕದ ಮೂಲಕ ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳೆಸುವುದರ ಬದಲು ರಾಷ್ಟ್ರೀಯ ಅನೈಕ್ಯತೆಯನ್ನು ಉಂಟು ಮಾಡುತ್ತಿದೆ. ಖಾಸಗಿ ಪ್ರಕಾಶಕರ ಹಾವಳಿಯನ್ನು ತಪ್ಪಿಸಲು ರಾಷ್ಟ್ರೀಕರಣವೆ ಔಷಧವೆಂದು ಭಾವಿಸಿದ ಸರ್ಕಾರ ಹಲವು ಅನರ್ಥಗಳಿಗೆ ಎಡೆ ಮಾಡಿಕೊಟ್ಟಿದೆ. ಈ ರೀತಿ ಘಟನೆ ಮುಂದೊಂದು ದಿನ ಮೈಸೂರಿನಲ್ಲಿಯೂ, ಮದರಾಸಿನಲ್ಲಿಯೂ, ಯಾವ ರಾಜ್ಯದಲ್ಲೂ ಆಗಬಹುದೆಂದು ಪಠ್ಯ ಪುಸ್ತಕಗಳ ರಾಷ್ಟ್ರೀಕರಣದಿಂದ ವಿದ್ಯಾಕ್ಷೇತ್ರದಲ್ಲಿ ಸಮಸ್ಯೆಗಳು ಮತ್ತಷ್ಟು ಹೆಚ್ಚಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ ಎಂದು ವಿಶ್ಲೇಷಿಸುತ್ತಾರೆ.

ಫ್ರೆಂಚ್ ಸಾಹಿತಿ ಜಾನ್ ಪಾಲ್ ಸಾತ್ರೆ ಅವರಿಗೆ ನೊಬೆಲ್ ಪಾರಿತೋಷಕ ಬಂದಾಗ ಆತ ಅದನ್ನು ತಿರಸ್ಕರಿಸಿದನು. ಆ ವಿಚಾರಕ್ಕೆ ಸಂಬಂಧಿಸಿದಂತೆ ನಿರಂಜನರವರು ಬರಹಗಾರ ಗುರುತಿಸಿಕೊಳ್ಳಬೇಕಾದುದು ಪ್ರಶಸ್ತಿಗಳಿಂದಲ್ಲ ಕೃತಿಗಳಿಂದ ಎಂಬ ತಾತ್ವಿಕತೆಯನ್ನು 'ನಾನೊಲ್ಲೆ' ಎಂಬ ಅಂಕಣದಲ್ಲಿ ಪ್ರತಿಪಾದಿಸುತ್ತಾರೆ. ಕವಿಯ ಅಥವಾ ಬರಹಗಾರನ ಶ್ರೇಷ್ಠತೆ ಆತನು ಬರೆದ ಕೃತಿಗಳಿಂದ, ಕೃತಿಗಳ ವಿಚಾರಗಳಿಂದ ಹೊರತು ಶ್ರೇಷ್ಠ ಪ್ರಶಸ್ತಿಗಳು ಲಭಿಸುವುದರಿಂದಲ್ಲ.

'ಮಸಣವೇ ಮನೆ' ಎಂಬ ಲೇಖನದಲ್ಲಿ ರಷ್ಯಾದ ಓಲ್ಗಾ ಮತ್ತು ಫಾಸ್ಟರ್‌ನಾಕ್ ರವರು ವಿಶ್ವ ಸಾಹಿತಿಗಳು, ಫಾಸ್ಟರ್ ನಾಕ್ ಬರೆದ ಶ್ರೇಷ್ಠ ಕಾದಂಬರಿ 'ಡಾ. ಜಿವಾಗೋ' ರಷ್ಯಾ ಅದನ್ನು ಪ್ರಕಟಿಸದ ಕಾರಣ ಇಟಲಿಯಿಂದ ಆ ಕೃತಿ ಮುದ್ರಣಗೊಂಡು ಪ್ರಕಟಗೊಂಡಿತ್ತು. ಮುಂದೆ ಆ ಕೃತಿಗೆ ನೋಬೆಲ್ ಪಾರಿತೋಷಕವು ಬಂದಿತ್ತು. ಆದರೆ ರಷ್ಯಾ ಓಲ್ಗನನ್ನು ಸರ್ಕಾರದ ವಿರೋಧಿ ಎಂದು ಬಂಧಿಸಿ ಸ್ವಲ್ಪ ಕಾಲದ ನಂತರ ಬಿಡುಗಡೆ ಮಾಡಿದಾಗ ಫಾಸ್ಟರ್ ನಾಕ್‌ನ ಗೋರಿಯ ಮೇಲೆ ಒಂದು ದಿನ ಆತ ಕಳೆದಿದ್ದ. ಇದು ಅವರ ನಡುವೆ ಇದ್ದ ಸ್ನೇಹದ ಸಂಕೇತವಾಗಿ ನಿರಂಜನರು ಸಾಹಿತಿಗಳ ನಡುವೆ ಈ ರೀತಿಯ ಮಧುರವಾದ ಸ್ನೇಹವು ಇದೆ. ಅದೇ ರೀತಿಯಲ್ಲಿ ವೈಯಕ್ತಿಕ ಟೀಕೆಗಳವರೆಗೂ ಹೋಗುವ ಸಾಹಿತಿಗಳು ಅಥವಾ ಬರಹಗಾರರು ಇದ್ದಾರೆಂದು ಸಾಹಿತಿಗಳ ಭಿನ್ನ ಮನೋಧೋರಣೆಯನ್ನು ತಿಳಿಸುತ್ತಾರೆ.

ಟಿ. ಎಸ್. ಎಲಿಯಟ್‌ನ ಬರಹಗಳನ್ನು ಪರಿಚಯಿಸುವ ಲೇಖನವಿದೆ. 'ನೆಲ ಸೇರಿದ ನಕ್ಷತ್ರ' ಎಂಬ ಲೇಖನದಲ್ಲಿ ಬೆಂಗಳೂರಿನಲ್ಲಿ ಹುಟ್ಟಿ ಬೆಳೆದು ಮುಂದೆ ಪರಣ ಭೂಮಿಗೆ ಹೋಗಿ ಅಲಹಬಾದಿನಲ್ಲಿ 'ಪಯನೀರ್' ಮತ್ತು ಲಂಡನ್ನಿನ 'ಟೆಲಿಗ್ರಾಫ್', 'ಮಲಕಂದ್ ಪಡೆಗಳ ಕಥೆ' ಬರೆದ

ವಿನ್‌ಸ್ಟನ್ ಚರ್ಚಿಲ್ಲನ ವ್ಯಕ್ತಿತ್ವದ ಚಿತ್ರಣವಿದೆ. ೧೯೦೦ ರಲ್ಲಿ 'ಸವರೋಲಾ' ಕಾದಂಬರಿ ಬರೆದು ನಂತರ ದಕ್ಷಿಣ ಆಫ್ರಿಕಾಗೆ ಹೋಗಿ 'ಜಾಗತಿಕ ಬಿಕ್ಕಟ್ಟು' ಎಂಬ ಕೃತಿಯನ್ನು ನಾಲ್ಕು ಸಂಪುಟಗಳಲ್ಲಿ ಬರೆದನು. ಮುಂದೆ ಬ್ರಿಟನ್ ಪ್ರಧಾನಿಯಾಗಿ ಪಟ್ಟವೇರಿದ ವಿನ್‌ಸ್ಟನ್ ಚರ್ಚಿಲ್‌ನ ವಿಚಾರಗಳನ್ನು ತಿಳಿಸುತ್ತಾರೆ. ಒಬ್ಬ ಸಾಹಿತಿಯನ್ನು ಸಮಾಜ ಹೇಗೆ ನಿರ್ಮಾಣಮಾಡುತ್ತದೆ ಎಂಬುದನ್ನು ಈ ಲೇಖನದಲ್ಲಿ ಅರಿಯಬಹುದು.

ಹಿಂದಿ ಸಾಹಿತ್ಯದಲ್ಲಿ ಮೈಥಿಲಿ ಶರಣ ಗುಪ್ತರಿಗೆ ಆಧುನಿಕ ಹಿಂದಿ ಸಾಹಿತ್ಯದಲ್ಲಿ ಅವರು ಬರೆದ 'ರಾಮಭಕ್ತಿ' ಮತ್ತು 'ರಾಷ್ಟ್ರ ಭಕ್ತಿ'ಯನ್ನು ತನ್ನ ಕಾವ್ಯದ ಎರಡು ಕಣ್ಣುಗಳಾಗಿ ಮಾಡಿಕೊಂಡು ಸಾಹಿತ್ಯದಲ್ಲಿ ತೊಡಗಿದವರು. 'ಸಾಕೇತ್' ಮತ್ತು 'ಪಂಚವಟೀ' ಕೃತಿಗಳಲ್ಲಿ ಊರ್ಮಿಳೆಯನ್ನು ಕಥಾ ನಾಯಕಿಯನ್ನಾಗಿ ಮಾಡಿ ಇಂದಿಗೂ ಆಧುನಿಕ ಹಿಂದಿ ಸಾಹಿತ್ಯದಲ್ಲಿ ಅಗ್ರಪೂಜೆಗೆ ಪಾತ್ರರಾಗಿದ್ದಾರೆ. ಕನ್ನಡ ಭಾಷೆ, ಸಾಹಿತ್ಯ ಉಳಿವಿಗಾಗಿ ಕನ್ನಡ ನಾಡಿನ ಬೇರೆ ಬೇರೆ ಕಡೆ ಪ್ರವಾಸ ಮಾಡಿ 'ಕನ್ನಡ ಕಂದ' ಪತ್ರಿಕೆಯನ್ನು ಮಾರಿ ಆ ಮೂಲಕ ಕನ್ನಡ ಭಾಷೆ ಸಾಹಿತ್ಯ ಉಳಿವಿಗಾಗಿ ಶ್ರಮಿಸಿದ ಮೇವುಂಡಿ ಮಲ್ಲಾರಿಯ ಬದುಕು, ಅನಾರೋಗ್ಯಕ್ಕೆ ತುತ್ತಾಗಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಪರಿತಪಿಸಿದ ದಿನಗಳನ್ನು 'ಸಾಹಿತ್ಯ ಜಂಗಮ' ಎಂಬ ಅಂಕಣದಲ್ಲಿ ತಿಳಿಸುತ್ತಾರೆ. ಕನ್ನಡದ ವಿಚಾರ ಸಾಹಿತ್ಯ ಬೆಳವಣಿಗೆಗೆ ಕಾರಣರಾದ ಬುರ್ಲಿ ಆಚಾರ್ಯರ ವ್ಯಕ್ತಿತ್ವ ಮತ್ತು ವಿಚಾರ ಸಾಹಿತ್ಯ ಸಮ್ಮೇಳನ ನಡೆಸಿದ ಇವರು ವಿಚಾರ ಸಾಹಿತ್ಯಕ್ಕಾಗಿ ಮಿಂಚಿನ ಬಳ್ಳಿ ಅಥವಾ ಗ್ರಂಥಮಾಲೆ ಸ್ಥಾಪಿಸಿ ಬುರ್ಲಿ ಬಿಂದು ಮಾಧವ ಪ್ರಕಾಶನ ಸಂಸ್ಥೆಯನ್ನು ಕಟ್ಟಿದವರು. ಬುರ್ಲಿ ಆಚಾರ್ಯರು ವಿಚಾರ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು 'ಬುರ್ಲಿಯವರ ಬಳ್ಳಿ' ಎಂಬ ಅಂಕಣದಲ್ಲಿ ಚರ್ಚಿಸುತ್ತಾರೆ.

'ಖಾಲಿತಲೆ' ಎಂಬ ಅಂಕಣದಲ್ಲಿ ಮೂರನೇ ಪಂಚವಾರ್ಷಿಕ ಯೋಜನೆಯಿಂದಾಗಿ ಸರಕಾರವು ಆಹಾರ ಸಾಮಾಗ್ರಿಗಳಿಂದ ಹಿಡಿದು ಯಂತ್ರೋಪಕರಣಗಳ ತನಕ ಒಂದಲ್ಲಾ ಒಂದು ವಸ್ತುಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಜನತೆಯ ಜ್ಞಾನದ ದಾರಿದ್ರ್ಯವನ್ನು ಹೋಗಲಾಡಿಸಲು ಬೇರೆ ದೇಶಗಳಿಂದಲ್ಲೂ ತತ್ವಜ್ಞಾನ, ವಿಜ್ಞಾನ, ಅರ್ಥಶಾಸ್ತ್ರ ಮೊದಲಾದ ಕೃತಿಗಳನ್ನು ವಿದೇಶಗಳಿಂದ ಅಮದು ಮಾಡಿಕೊಳ್ಳಲು ಸಿದ್ಧವಾಗಿಲ್ಲ. ಬೌದ್ಧಿಕ ಜ್ಞಾನವನ್ನು ಜನತೆಯಲ್ಲಿ ವಿಸ್ತರಿಸಲು, ಜನರು ಜ್ಞಾನವಂತರಾಗುವಂತೆ ಮಾಡಲು ಜಗತ್ತಿನ ಎಲ್ಲಾ ಕಡೆ ದೊರೆಯುವ ಜ್ಞಾನವು ಭಾರತೀಯರಿಗೆ ಪುಸ್ತಕಗಳಿಂದ, ಸಾಹಿತ್ಯ ಕೃತಿಗಳಿಂದ ದೊರೆಯಲಿ ಎಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ. 'ನಮ್ಮ ಪತ್ರಿಕೆ' ಎಂಬ ಅಂಕಣದಲ್ಲಿಯು ಕನ್ನಡ ನಾಡಿನಲ್ಲಿ ಪ್ರತಿಯೊಂದು ಮನೆಯಲ್ಲಿಯೂ ದೈನಂದಿನ ಪತ್ರಿಕೆ, ವಾರದ ಪತ್ರಿಕೆಗಳು ದೊರಕುವಂತಾಗಿ ಪತ್ರಿಕೆಗಳನ್ನು ಓದುವ ಹವ್ಯಾಸವನ್ನು ಜನತೆಯು ಬೆಳೆಸಿಕೊಳ್ಳಬೇಕು. ಪ್ರತಿ ನಿತ್ಯದ ಕಾರ್ಯಗಳಲ್ಲಿ ಪತ್ರಿಕೆ ಓದುವುದು ಅನಿವಾರ್ಯವಾದಾಗ ಮಾತ್ರ ಕನ್ನಡದಲ್ಲಿ ಪತ್ರಿಕೆಗಳು ಉಳಿಯಲು ಬೆಳೆಯಲು ಸಹಾಯಕವಾಗುತ್ತದೆ ಎಂಬ ತಾತ್ವಿಕತೆಯನ್ನು ಹೊಂದಿದ್ದಾರೆ. 'ವಿದ್ಯೆಯುಳ್ಳ ಪಶುಗಳು' ಎಂಬ ಅಂಕಣದಲ್ಲಿ ಕೇರಳದಲ್ಲಿನ ಪಠ್ಯ ಪುಸ್ತಕಗಳು ಕಮ್ಯೂನಿಸ್ಟ್ ರೋಗಕ್ಕೆ ತುತ್ತಾಗಿವೆ. ಕಾಶ್ಮೀರದ ಎಂಟನೇಯ ತರಗತಿಯಲ್ಲಿ ಚೀನಾ ದೇಶವನ್ನು ಹಾಡಿಹೊಗಳಿರುವುದು, ರಾಜಸ್ಥಾನದ ಗಡಿ ಪ್ರದೇಶದಲ್ಲಿ ಪಾಕಿಸ್ತಾನದಲ್ಲಿ ಬಳಕೆಯಲ್ಲಿರುವ ಪುಸ್ತಕಗಳನ್ನು ನಮ್ಮ ವಿದ್ಯಾರ್ಥಿಗಳ ಅಧ್ಯಯನಕ್ಕೆ ನೀಡಿರುವುದು. ಶಿಕ್ಷಣ ವ್ಯವಸ್ಥೆಯಲ್ಲಿನ ಅಧಿಕಾರಿಗಳ ಅದಕ್ಷತೆ, ಅಸಮರ್ಥತೆ, ಭ್ರಷ್ಟಾಚಾರ ಇವುಗಳಿಗೆ ಕಡಿವಾಣ ಬೀಳದೆ ಹೋದರೆ ಶಿಕ್ಷಣ ವ್ಯವಸ್ಥೆಯೆ ನಾಶಗೊಳ್ಳುವ ದಿನ ದೂರವಿಲ್ಲವೆಂದು ವಿಶ್ಲೇಷಿಸುತ್ತಾರೆ.

'ರಾಜಧಾನಿಯಿಂದ', 'ದಿನಚರಿಯಿಂದ' ಮತ್ತು 'ಅಂಕಣ' ಎಂಬ ಪತ್ರಿಕ ಲೇಖನಗಳನ್ನು, ಸಂಕಲನ ಕೃತಿಗಳಲ್ಲಿ ಕನ್ನಡ ಕವಿಗಳ ವ್ಯಕ್ತಿತ್ವ ಚಿತ್ರಣ, ಜಗತ್ತಿನ ಪ್ರಮುಖ ಕವಿಗಳ-ಸಾಹಿತಿಗಳ ಕೃತಿಗಳನ್ನು ಪರಿಚಯಿಸುತ್ತಾರೆ. ಸಮಕಾಲೀನ ಭಾರತದ ಅನೇಕ ಸಮಸ್ಯೆಗಳನ್ನು ಕೂಡಾ ದಾಖಲಿಸುತ್ತಾರೆ. ಸಾಹಿತ್ಯ, ಕಲೆ, ಸಂಗೀತ, ನಾಟಕ ಮೊದಲಾದ ಬೆಳವಣಿಗೆಯಲ್ಲಿ ಸರಕಾರ ತೆಗೆದುಕೊಂಡ ಕ್ರಮ, ಪ್ರೋತ್ಸಾಹ, ನಿರಾಕರಣೆ ಮೊದಲಾದವುಗಳನ್ನು ಚರ್ಚಿಸುತ್ತಾರೆ. ಅ.ನ.ಕೃ ರೀತಿಯಲ್ಲಿ ಪ್ರತ್ಯೇಕವಾಗಿ ವ್ಯಕ್ತಿತ್ವ ಚಿತ್ರಣ ನೀಡುವ ಕೃತಿಗಳನ್ನು ಬರೆಯದೆ ಇದ್ದರು ನಿರಂಜನರು ಲೇಖನಗಳ ಮೂಲಕ ಅವರ ವ್ಯಕ್ತಿತ್ವವನ್ನು ಚಿತ್ರಿಸುತ್ತಾರೆ. ಸಾಹಿತ್ಯ ಮತ್ತು ಸಮಾಜ ಇವುಗಳ ನಡುವಿನ ಸಂಬಂಧ, ಭಾರತೀಯ ಸಾಹಿತ್ಯ ನಿರ್ಮಾಣವಾಗಬೇಕಾದರೆ ಏನು ಮಾಡಬೇಕೆಂದು, ಪಠ್ಯ ಪುಸ್ತಕಗಳ ನ್ಯೂನತೆ ಮೊದಲಾದ ಸಮಸ್ಯೆಗಳಿಗೆ ಪರಿಹಾರವನ್ನು ನೀಡುವುದರೊಂದಿಗೆ ತಮ್ಮದೇಯಾದ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ.

ಬುದ್ಧಿ ಭಾವ ಬದುಕು- ೧೯೮೮

ನಿರಂಜನರವರು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಬರೆದ ಬರಹ ಮತ್ತು ಭಾಷಣಗಳ ಸಂಕಲನ ಗ್ರಂಥ ಬುದ್ಧಿ ಭಾವ ಬದುಕು. ಈ ಕೃತಿಯನ್ನು ೧೯೮೮ರಲ್ಲಿ ಪ್ರಕಟಿಸಿದರು. ಇದೊಂದು ಸಂಕಲನ ಗ್ರಂಥವಾಗಿದೆ. ಇಲ್ಲಿರುವ ಬರಹ ಮತ್ತು ಭಾಷಣಗಳನ್ನು ನಿರಂಜನರವರ ಮಗಳಾದ ಸೀಮಂತಿನಿ ನಿರಂಜನರವರು ಸಂಕಲಿಸಿದ್ದಾರೆ. ಇದರಲ್ಲಿ ಒಟ್ಟು ೩೬ ಲೇಖನಗಳಿದ್ದು, ಎಲ್ಲವು ಸಾಹಿತ್ಯವನ್ನು ಕುರಿತಂತೆ ೧೯೪೨ ರಿಂದ ೧೯೮೮ರ ವರೆಗೆ ಬರೆದ ಬರಹಗಳಾಗಿವೆ.

ಕನ್ನಡ ಸಾಹಿತ್ಯವನ್ನು ಜೀವನದ ಪ್ರತಿಬಿಂಬವಾಗಿ ನೋಡುವುದಕ್ಕಿಂತ ರಾಜಕಾರಣ ಮತ್ತು ಸಾಹಿತ್ಯದ ಮಿಶ್ರಣವಾದ ಒಂದು ವಾಚಕ ವರ್ಗವಿದೆ. ಆ ನಿಟ್ಟಿನಲ್ಲಿ ವಡೇಗ ಹಳ್ಳಿ ಅಶ್ವತ್ಥ ನಾರಾಯಣರು ಬರೆದ 'ಬಿಡುಗಡೆಯ ಬೆಲೆ' ಕೃತಿಯು ರಾಜಕಾರಣವನ್ನು ಕುರಿತಂತೆ ತಿಳಿಸುವ ಕೃತಿಯಾಗಿದೆ. ಪ್ರಗತಿಶೀಲ ಕಾಲಘಟ್ಟದ ಸಾಹಿತ್ಯವು ಹಿರಿಯ ಪರಂಪರೆಯನ್ನು ಉಳಿಸಿಕೊಂಡು ಹೊಸದಾರಿಯಲ್ಲಿ ಪ್ರಗತಿಗಾಮಿಯಾಗಿ ಮುನ್ನಡೆಯುವಂತದ್ದು. ಆದರೆ ಕನ್ನಡದ ಪ್ರಗತಿಶೀಲರು ಹಿರಿಯೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ವ್ಯಕ್ತಿವಾದಕ್ಕೆ ಜೋತುಬಿದ್ದರು. ಇದು ಪ್ರಗತಿವಾದದ ಲಕ್ಷಣವಲ್ಲ. ಪ್ರಗತಿವಾದವು ಸಮಷ್ಟಿವಾದದ ನೆಲೆಯಲ್ಲಿ ರಚಿತಗೊಳ್ಳಬೇಕಾಗಿದೆ. ನವೋದಯ ಸಾಹಿತ್ಯ ಪರಂಪರೆಯಲ್ಲಿ ಪ್ರಗತಿವಾದವನ್ನು ಕಾಣುವ ನಿರಂಜನರು ನವ್ಯ ಸಾಹಿತ್ಯ ಪಂಥವು ಜನತೆಯಿಂದ ವಿಮುಕ್ತವಾದ ಸಾಹಿತ್ಯವಾಗಿ ಕಾಣುತ್ತಾರೆ. ಪ್ರಗತಿಶೀಲ ಸಾಹಿತ್ಯವು ಆಶ್ಲೀಲವಾದವನ್ನು ಒಪ್ಪುವುದಿಲ್ಲ. ಕಮ್ಯೂನಿಸ್ಟ್ ವಿಚಾರಗಳನ್ನು ಕೆಲವರು ಪ್ರತಿಪಾದಿಸಬಹುದು ಅದರೆ ಅದೇ ಪ್ರಗತಿಶೀಲತೆಯ ಸ್ವರೂಪವಲ್ಲವೆಂದು, ಕನ್ನಡದಲ್ಲಿ ನವೋದಯ ಕಾಲಘಟ್ಟದಲ್ಲಿಯೇ ವೇಶ್ಯೆ ಸಮಸ್ಯೆಯನ್ನು ಚಿತ್ರಿಸುವ ಕಾರಂತರ ಕನ್ಯಾ ಬಲಿ, ಸೂಳೆ ಸಂಸಾರ ಮೊದಲಾದ ಕೃತಿಗಳು ರಚಿತಗೊಂಡು ಕನ್ನಡದಲ್ಲಿದ್ದ ಮಡಿವಂತಿಕೆಯನ್ನು ಧ್ವಂಸಗೊಳಿಸಿದವು ಎಂಬ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ. ಪ್ರಗತಿಶೀಲ ಸಾಹಿತ್ಯ ಮಾತ್ರ ವೇಶ್ಯಾ ಸಮಸ್ಯೆಯನ್ನು ವಸ್ತುವಾಗಿ ಆಯ್ದುಕೊಳ್ಳಲಿಲ್ಲ. ಅದಕ್ಕಿಂತ ಹಿಂದೆ ಇದ್ದ ಅನೇಕ ನವೋದಯ ಕಾಲಘಟ್ಟದ ಬರಹಗಾರರು ಕೂಡಾ ಆ ರೀತಿಯ ಮಡಿವಂತಿಕೆಯನ್ನು ತಮ್ಮ ವಸ್ತುಗಳಲ್ಲಿ ಮೀರಿದ್ದಾರೆ ಎಂಬುದನ್ನು ಸೂಚಿಸುತ್ತಾರೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅನೇಕ ಬದಲಾವಣೆಯನ್ನು ಗುರುತಿಸುವ ನಿರಂಜನರು ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡ ಸಾಹಿತ್ಯ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ ನೀಡಿದೆ. ಸೃಜನಶೀಲ ಸಾಹಿತ್ಯದಷ್ಟು ವಿಚಾರ ಸಾಹಿತ್ಯ ಸೃಷ್ಟಿಯಾಗಿಲ್ಲದಿದ್ದರು ಅಲ್ಲೊಂದು ಇಲ್ಲೊಂದು ಕೃತಿಗಳನ್ನು ಗಮನಿಸಬಹುದೆಂದು, ಸಾಹಿತಿಯು ಬರೆಯುವುದು ಕೀರ್ತಿಗಾಗಿ, ಆನಂದಕ್ಕಾಗಿ ಎಂಬ ಹೆಸರಿನಿಂದ ಕರೆಯುವುದು ಸರಿಯಲ್ಲವೆಂದು, ಸಾಹಿತಿಗೂ ಒಂದು ಸಾಮಾಜಿಕ ಜವಾಬ್ದಾರಿಯಿದ್ದು ಅದನ್ನು ಆತ ಕಾಯ್ದುಕೊಳ್ಳುತ್ತಾನೆ. ಸಾಹಿತ್ಯವೆಂಬುದು ರಾಜಕೀಯ ಪಕ್ಷದ ಗುರಿ-ನಿರ್ದೇಶನಗಳನ್ನು ಒಪ್ಪಿಕೊಂಡು ರಚಿತವಾಗುವ ಸಾಹಿತ್ಯವು ಸಾಹಿತ್ಯವಾಗುವುದಿಲ್ಲ. ಯಾವ ಸಾಹಿತ್ಯ ಕಾಲಧರ್ಮಕ್ಕೆ ಅನುಗುಣವಾಗಿ ಸೃಷ್ಟಿಯಾಗಿರುತ್ತದೆಯೇ ಅದೇ ನೈಜ ಸಾಹಿತ್ಯವಾಗಿದೆ. ಸಮಾಜದ ಆಗು ಹೋಗುಗಳನ್ನು ಚಿತ್ರಿಸುವ ಮೂಲಕ ಸಾಹಿತ್ಯ ಸಾಮಾಜಿಕ ನೀತಿಯನ್ನು ರೂಪಿಸುತ್ತದೆ. ಈ ರೀತಿ ಸಾಮಾಜಿಕ ನೀತಿ ರೂಪಿಸುವ ಮನಃಸ್ಥಿತಿ ತನಗಿದೆ ಎಂದು ಬರಹಗಾರ ಹೇಳಿಕೊಳ್ಳಲು ಎದೆಗಾರಿಕೆ ಬೇಕು ಎಂದು ಸಾಹಿತ್ಯದ ಸಾಮಾಜಿಕ ನಿಲುವುಗಳನ್ನು ಚರ್ಚಿಸುತ್ತಾರೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬೆಳೆದು ಒಂದು ಸಣ್ಣ ಕಥೆಯು ನವೋದಯ ಕಾಲಘಟ್ಟದಲ್ಲಿ ಸಾಂಪ್ರದಾಯಿಕ ಕಥನ ಶೈಲಿ, ರಮ್ಯತೆ ರಂಜಕತೆಯನ್ನು, ಪ್ರಗತಿಶೀಲದಲ್ಲಿ ಆಯುಧವಾಗಿ ಮಾರ್ಪಟ್ಟ ಲೇಖನಿಯಾಗಿ, ನವ್ಯ ಮಾರ್ಗದ ಕತೆಗಳು ಪಾತಾಳ ಗರಡಿಯ ಧೋರಣೆಯಲ್ಲಿ ಬೆಳೆದು ಬಂದ ಬಗೆಯ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ. ತಮ್ಮ ಬದುಕಿನ ಅನುಭವದ ಮೂಲಕ ಸಾಹಿತ್ಯದ ಓದುವಿಕೆಯಿಂದ ಉತ್ತಮವಾದ ವ್ಯಕ್ತಿತ್ವ ರೂಪಿಸಲು ಸಾಧ್ಯವಾದ ಮೆಟ್ಟಿಲಾಗಿ ಸಾಹಿತ್ಯವನ್ನು ನಿರಂಜನರು ನೋಡುತ್ತಾರೆ. ಪ್ರಗತಿ ಪಂಥವನ್ನು ೧೯೩೪ರಲ್ಲಿ ಕಟ್ಟಲು ಬಹಳ ಮುಖ್ಯವಾಗಿ ಜಾತೀಯತೆ, ಸಂಕುಚಿತ ಪ್ರಾಂತಿಯವಾದ, ಕುರುಡು ಭಾಷಾವಾದದ ವಿರುದ್ಧ ಹೋರಾಡುವುದರೊಂದಿಗೆ ಮಾನವ ಕೋಟಿಯ ಸಂಸ್ಕೃತಿ, ಸಂಸ್ಕಾರಗಳ ವಾರಸುದಾರರೆಂದು ಕರ್ನಾಟಕ ಪ್ರಗತಿ ಪಂಥದ ತಾತ್ವಿಕತೆಯನ್ನು ತಿಳಿಸುತ್ತಾರೆ.

ಒಟ್ಟಾರೆಯಾಗಿ ಬುದ್ಧಿ ಭಾವ ಬದುಕು ಕೃತಿಯಲ್ಲಿರುವ ಹೆಚ್ಚಿನ ಬರಹ ಮತ್ತು ಭಾಷಣಗಳು ಸಾಹಿತ್ಯವನ್ನು ಕುರಿತಂತೆ, ಸಾಹಿತಿಯ ಕಮಿಟ್‌ಮೆಂಟು, ಸಾಮಾಜಿಕ ನೀತಿ, ಪ್ರಗತಿಶೀಲ ದೃಷ್ಟಿಕೋನ, ಪ್ರಗತಿ ಪಂಥ ಕಟ್ಟಲು ಅವಶ್ಯಕವಾದ ಅಂಶ, ತಮ್ಮ ಬದುಕಿನಲ್ಲಿ ಸಾಹಿತ್ಯದಿಂದ ಪ್ರೇರಿತರಾಗಿ ಬರವಣಿಗೆಯಲ್ಲಿ ತೊಡಗಿಕೊಂಡಿದ್ದು ಇದಕ್ಕೆ ಬಾಲ್ಯದಿಂದಲೂ ಬೆಳೆದ ಸಾಹಿತ್ಯದ ಓದು ತನ್ನನ್ನು ಉತ್ತಮ ವ್ಯಕ್ತಿಯಾಗಿ ರೂಪಿಸಲು ಸಾಧ್ಯವಾದ ಬಗೆಯನ್ನು ವಿವರಿಸುತ್ತಾರೆ. ನಿರಂಜನರ ಕಾಲಘಟ್ಟದ ಸಮಾಜದ ಸಾಹಿತ್ಯದ ಧೋರಣೆಗಳನ್ನು ತಿಳಿಯಲು ಇದು ಸಹಾಯಕವಾದ ಕೃತಿಯಾಗಿದೆ.

ನಡೆ ಚೆನ್ನ ನುಡಿ ಚೆನ್ನ - ೧೯೮೬

ನಿರಂಜನರು ಕನ್ನಡ ನಾಡಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಾಗಿ ತಮ್ಮನ್ನು ತಾವು ತೊಡಗಿಸಿಕೊಂಡ ೨೦ ವ್ಯಕ್ತಿಗಳನ್ನು ಕುರಿತು ಇಪ್ಪತ್ತನಾಲ್ಕು ವರ್ಷಗಳಲ್ಲಿ ಬರೆದ ಕೃತಿ. ೧೯೬೨ ರಿಂದ ೧೯೮೬ ರವರೆಗಿನ ಕಾಲಾವಧಿಯಲ್ಲಿ ಬರೆದ ಲೇಖನಗಳ ಸಂಕಲನವೇ ನಡೆ ಚೆನ್ನ - ನುಡಿ ಚೆನ್ನ ಕೃತಿಯಾಗಿದೆ. ಈ ಕೃತಿಯಲ್ಲಿರುವ ಬರಹಗಳು ಸಾಹಿತಿಗಳ ಸಂಸ್ಮರಣ ಗ್ರಂಥ. ಸಂಭಾವನಾ ಗ್ರಂಥಗಳಿಗೆ ಬರೆದವುಗಳಾಗಿವೆ. ಇದೊಂದು ವ್ಯಕ್ತಿ ಚಿತ್ರಣ ನೀಡುವ ಸಂಕಲನ ಗ್ರಂಥವಾಗಿದೆ.

ಬಿ.ಎಂ. ಶ್ರೀ, ಶಿವರಾಮ ಕಾರಂತ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಸಿದ್ದವನಹಳ್ಳಿ ಕೃಷ್ಣ ಶರ್ಮ, ಕಡೆಂಗೋಡ್ಲು ಶಂಕರಭಟ್, ಅ.ನ.ಕೃ. ತ.ರಾ.ಸು. ದಿನಕರ ದೇಸಾಯಿ, ಬಸವರಾಜ ಕಟ್ಟೀಮನಿ, ದೇ. ಜವರೇಗೌಡ, ಹಂಪ ನಾಗರಾಜಯ್ಯ ಪಿ.ಕೆ. ನಾರಾಯಣ, ಭಾರತಿಸುತ, ಮಹಾಬಲ ಭಂಡಾರಿ, ಬಿ.ಎನ್. ಗುಪ್ತ, ಅಮ್ಮೆಂಬಳ ಶಂಕರ ನಾರಾಯಣ ನಾವಡ, ಕಯ್ಯಾರ ಕಿಞ್ಞಣ್ಣ ರೈ ಹಮಾಜು ಇಮಾಮ ಮೊದಲಾದವರ ಬಗ್ಗೆ ಅವರ ವ್ಯಕ್ತಿತ್ವವನ್ನು ಕುರಿತು ಬರೆದ ಬರಹಗಳಾಗಿವೆ.

ಈ ಪುಸ್ತಕ ಓದಿದ್ದೀರಾ?

ಇದೊಂದು ನಿರಂಜನವರ ಅಪ್ರಕಟಿತ ಕೃತಿ. ಈ ಕೃತಿಯ ಕೆಲವೊಂದು ವಿಮರ್ಶಾ ಲೇಖನಗಳು ನಿರಂಜನರ ವಾಚಿಕೆ 'ಪ್ರತಿಧ್ವನಿ' ೧೯೮೭ ರಲ್ಲಿ ಪ್ರಕಟಗೊಂಡ ಕೃತಿಯಲ್ಲಿ ಐದು ಲೇಖನಗಳಿವೆ. ಮಾಲತಿಬಾಯಿಯವರ ಕೃತಿ 'ಜೋಕಾಲಿ ಮೇಲೆ' ಎಂಬ ಲೇಖನದಲ್ಲಿ ಮಹಾರಾಷ್ಟ್ರದ ಸ್ತ್ರೀ ಲೇಖಕರಾದ ಮಾಲತಿ ಬಾಯಿಯವರು 'ವಿಭಾವರೀ' ಎಂಬ ಕಾವ್ಯನಾಮದಿಂದ ಬರೆದ ಕಾದಂಬರಿಯ ಕನ್ನಡ ಅನುವಾದ 'ಜೋಕಾಲಿಯ ಮೇಲೆ' ಈ ಕಾದಂಬರಿಯಲ್ಲಿ ಅಚಲಾ ಎಂಬ ಪಾತ್ರ ಗಂಡ ಬಿಟ್ಟು ಹೋದರು ಸಮಾಜದ ದೂಷಣೆಗಳಿಗೆ ಹೆದರದೆ ಬದುಕುವ ಹೆಣ್ಣಿನ ಚಿತ್ರಣವನ್ನು ನೀಡುವ ಈ ಕೃತಿಯನ್ನು ಡಿ.ಎಸ್. ಕುಲಕರ್ಣಿಯವರು ಕನ್ನಡಕ್ಕೆ ಅನುವಾದಿಸಿದ್ದಾರೆಂದು ಪರಿಚಯಿಸುವ ವಿಮರ್ಶಕ ಲೇಖನವಾಗಿದೆ. ಇದನ್ನು ೧೯೫೨ರಲ್ಲಿ ಬರೆದಿದ್ದಾರೆ.

'ಕನ್ನಡ ಕಾವ್ಯ ನಡೆದು ಬಂದ ದಾರಿ' ಎಂಬ ವಿಮರ್ಶಾ ಲೇಖನದಲ್ಲಿ ಗೋಪಾಲಕೃಷ್ಣ ಅಡಿಗರ ೪೭ ಕವನಗಳ ಸಂಗ್ರಹವಾದ ನಡೆದು ಬಂದ ದಾರಿ ಕೃತಿಯನ್ನು ಪರಿಚಯಿಸುವ ಲೇಖನ. ನವ್ಯ ಸಾಹಿತ್ಯವು ಆಧುನಿಕ ಕನ್ನಡ ಸಾಹಿತ್ಯದ ಒಂದು ಘಟ್ಟವಾಗಿ ಬೆಳೆದು ಬಂದಿದೆ. ಇಲ್ಲಿರುವ ಕವಿತೆಗಳಲ್ಲಿ ಓ ನನ್ನ ಜನತೆ, ಪುಷ್ಪ ಕವಿಯ ಫರಾಕು, ಇಂದೂ ನಮ್ಮಿ ನಾಡು ಬಹಳ ಮುಖ್ಯವೆಂದು ಕೆಲವೊಂದು ಕವಿತೆಗಳು ಒಮ್ಮೆ ಓದಿದರು ಅರ್ಥವಾಗುವುದಿಲ್ಲವೆಂದು ಕವಿಗಳಿಂದ, ಲೇಖಕರಿಂದ ಈ ಕೃತಿಯ ಬಗ್ಗೆ ಚರ್ಚೆಗಳಾಗಲಿ ಎಂಬ ಆಶಯವನ್ನು ೧೯೫೨ ರ ಈ ಲೇಖನದಲ್ಲಿ ವಿಮರ್ಶಿಸುತ್ತಾರೆ.

ಬಸವರಾಜ ಕಟ್ಟಿಮನಿಯವರ 'ಮಣ್ಣು ಮತ್ತು ಹೆಣ್ಣು' ಕಾದಂಬರಿಯನ್ನು ವಿಮರ್ಶಿಸುವ ಲೇಖನ, ಉತ್ತರ ಕರ್ನಾಟಕದ ಹಳ್ಳಿಗಾಡಿನಲ್ಲಿ ನಡೆಯುವ ಜೀವನ ಚಿತ್ರಣದ ಕಥಾವಸ್ತು ಇದೆ. ಇಡೀ ಕಾದಂಬರಿಯನ್ನು ವಿಮರ್ಶಿಸಿ ಬರೆದ ಲೇಖನ ಈ ಮೂಲಕ ಕೃತಿಯನ್ನು ಓದುಗರಿಗೆ ಈ ಲೇಖನದ ಮೂಲಕ ಪರಿಚಯಿಸುತ್ತಾರೆ. ವಾಸ್ತವವಾದವನ್ನು ಅನುಸರಿಸುವ ಕಾದಂಬರಿಯಾಗಿದೆ. ಮಾನವೀಯ ದೃಷ್ಟಿಗಾಗಿ ಬರೆದ ಕೃತಿಯಾಗಿದೆಯೆಂದು ೧೯೫೩ರ ಈ ಲೇಖನದ ಶೀರ್ಷಿಕೆಯಂತೆ ವಿವರಿಸುತ್ತಾರೆ.

ಶ್ರೀರಂಗ ಸೃಷ್ಟಿಯಾದ ಭವ್ಯ ಕಾದಂಬರಿ 'ಅನಾದಿ' ಎಂಬ ವಿಮರ್ಶಾ ಲೇಖನವು ರಾಮಣ್ಣ ಎಂಬ ಬರಹಗಾರನ ಸುತ್ತ ನಡೆಯುವ ಕಥಾವಸ್ತುವಾಗಿದೆ. ಮನೋವಿಶ್ಲೇಷಣಾತ್ಮಕವಾಗಿ ಬರೆದ ಕಾದಂಬರಿ ಇದಾಗಿದೆ. ಸರಳೆ ಮತ್ತು ಕುಮುದ ಪಾತ್ರಗಳು ಮತ್ತು ಅದರ ಸುತ್ತ ನಡೆಯುವ ನಾಟಕೀಯತೆಯನ್ನು ಈ ಕಾದಂಬರಿ ಹೊಂದಿದೆ. ಇವರು ಪುಟ ಸಾರ್ವಭೌಮರಾಗಿಲ್ಲವೆಂದು ಸಾಮಾನ್ಯವಾಗಿ ಹಾದರದ ಕತೆಯಾಗಬೇಕಾದುದನ್ನು ಸ್ವಲ್ಪ ತಿಳಿಸಿ ಕತೆಯ ವಸ್ತುವಿನಲ್ಲಿ ಗಂಭೀರತೆಯನ್ನು ಹೆಚ್ಚಿಸಿದ್ದಾರೆ. ಇದೊಂದು ಪ್ರೇಮ – ಕಾಮದ ಕಥೆಯಾಗಿ ೧೯೫೪ರಲ್ಲಿ ವಿಶ್ಲೇಷಿಸುತ್ತಾರೆ.

ರೇಡಿಯೋ ನಾಟಕ – ರೂಪಕ ಶಿವಸ್ವಾಮಿಯವರ ಕೃತಿಗಳು ಎಂಬ ವಿಮರ್ಶಾ ಲೇಖನದಲ್ಲಿ ರೇಡಿಯೋ ನಾಟಕಗಳನ್ನು ಬರೆಯುವುದು ರಂಗಭೂಮಿ ನಾಟಕಕ್ಕಿಂತ ಹೆಚ್ಚು ಕಷ್ಟಕರವಾದುದು. ರಂಗಭೂಮಿ ಮರೆತು ರೇಡಿಯೋ ನಾಟಕ ಬರೆಯುವುದು ಒಂದು ಸ್ವಂತ ಕಲೆಯಾಗಿದೆ. ಅದಕ್ಕೆ ಒಂದು ಉದಾಹರಣೆಯಾಗಿ ಎಸ್.ಎನ್. ಶಿವಸ್ವಾಮಿಯವರ ಐದು ಪ್ರಸಾರ ನಾಟಕಗಳ ಸಂಕಲನವಾದ 'ಹೃದಯಾಂತರಾಳ' ಇದರಲ್ಲಿ 'ಹಂಪೆ'ಯೆಂಬುದು ನಾಟಕದಲ್ಲಿ ಶಬ್ದಚಿತ್ರ, ಮಹಾಸಾಮ್ರಾಜ್ಯ ವೆಂಬ ರೇಡಿಯೋ ನಾಟಕ ಬಹಳ ಮುಖ್ಯವಾದುದೆಂದು ಪರಿಚಯಿಸುತ್ತಾರೆ.

'ಈ ಪುಸ್ತಕ ಓದಿದ್ದೀರಾ?' ಎಂದು ಓದುಗರಿಗೆ ಪ್ರಶ್ನೆಯನ್ನು ಕೇಳುತ್ತ ಓದುಗರಿಗೆ ಈ ಪುಸ್ತಕ ಅಥವಾ ಕೃತಿಗಳ ಬಗ್ಗೆ ವಿಮರ್ಶಾತ್ಮಕವಾಗಿ ಪರಿಚಯಿಸುತ್ತಾರೆ. ಸಹೃದಯರಿಗೆ ಪುಸ್ತಕವನ್ನು ಓದಲು ಪ್ರೇರೇಪಿಸುವ ವಿಮರ್ಶಾತ್ಮಕ ಬರಹಗಳಾಗಿವೆ. ಹಾ. ಮಾ. ನಾಯಕರವರ ಪುಸ್ತಕ ಸಂಸ್ಕೃತಿ ಕೃತಿಯು ಸಾಹಿತ್ಯ ಕೃತಿಗಳನ್ನು ವಿಮರ್ಶಾತ್ಮಕವಾಗಿ ಪರಿಚಯಿಸುವ ರೀತಿಯನ್ನು ನೋಡಿದರೆ ಅವರು ನಿರಂಜನರವರು ಬರೆದಿರುವ 'ಈ ಪುಸ್ತಕ ಓದಿದ್ದೀರಾ?' ಲೇಖನವನ್ನು ಗಮನಿಸಿರಬಹುದು. ಅದರ ಪ್ರಭಾವದಿಂದಲೇ ಪುಸ್ತಕ ಸಂಸ್ಕೃತಿ ಎಂಬ ಕೃತಿಗಳನ್ನು ವಿಮರ್ಶಾತ್ಮಕವಾಗಿ ಪರಿಚಯಿಸುವ ಕೃತಿಯನ್ನು ಬರೆದಿದ್ದಾರೆ.

ಮುಖತಃ – ೧೯೮೫

ಇದೊಂದು ಸಂದರ್ಶನ ಸಂಕಲನ ಕೃತಿಯಾಗಿದೆ. ನಿರಂಜನರವರು ವಿವಿಧ ಸಂದರ್ಶಕರೊಂದಿಗೆ ನಡೆಸಿದ ಸಂದರ್ಶನಗಳನ್ನು ಸೀಮಂತಿನೀ ನಿರಂಜನರವರು ಸಂಕಲಿಸಿದ್ದಾರೆ. ಈ ಕೃತಿಯ ೧೯೮೫ರಲ್ಲಿ ಪ್ರಕಟಗೊಂಡಿದ್ದು ೧೯೭೬ ರಿಂದ ೧೯೮೫ರ ಅವಧಿಯಲ್ಲಿ ನಿರಂಜನರು ನೀಡಿದ ಸಂದರ್ಶನಗಳು ಮತ್ತು ಭಾಗಿಯಾದ ಪ್ರಶ್ನೋತ್ತರಗಳಿಂದ ಆರಿಸಿ ಸಂಕಲಿಸಿದ್ದು, ಇದರಲ್ಲಿ ಒಟ್ಟು ೧೩ ಸಂದರ್ಶನದ ಲೇಖನವಿದೆ.

ಡಿ.ಆರ್. ನಾಗರಾಜ್ ರವರು ಸಂದರ್ಶನ ಮಾಡಿದ 'ಒಕ್ಕೂಟ, ಪ್ರಗತಿಪಂಥ ಇತ್ಯಾದಿ ನಿರಂಜನರ ವಿಚಾರಗಳು' ಎಂಬ ಸಂದರ್ಶನದಲ್ಲಿ ಪ್ರಗತಿ ಪಂಥವೆಂಬುದು ಪ್ರಗತಿಶೀಲ ಚಳುವಳಿಯ ಪುನರಾವರ್ತನೆಯಲ್ಲ, ಅದು ಪುನರುತ್ಥಾನವಾಗಿದೆ. ಪ್ರಗತಿಪರ ವಿಚಾರಗಳನ್ನು ಹೊಂದಿದ್ದ ಕಲಾವಿದರು, ಬರಹಗಾರರು, ಜಾನಪದರ ಬಂದು ವೇದಿಕೆ ಎಂಬ ತಾತ್ವಿಕತೆಯೊಂದಿಗೆ ತನ್ನ ಕೆಲವು ಕಾದಂಬರಿಗಳಲ್ಲಿ ವಿಮೋಚನೆ, ಮೃತ್ಯುಂಜಯ, ಚಿರಸ್ಮರಣೆಯಲ್ಲಿ ಮಾರ್ಕ್ಸ್‌ವಾದಿ ಧೋರಣೆಯಿಂದ ಬರೆದಿದ್ದು, ವಿಚಾರ ಸಾಹಿತ್ಯದ ಕೆಲವೊಂದು ಲೇಖನಗಳಲ್ಲಿ ಅದರಲ್ಲಿ ರಷ್ಯಾದ, ಚೀನಾದ ಸಾಂಸ್ಕೃತಿ ಕ್ರಾಂತಿ ಎಂಬಲ್ಲಿ ನಿರ್ಧಿಷ್ಟ ಧೋರಣೆಗಳನ್ನು ಮಾತ್ರ ವಿರೋಧಿಸಿರುವುದೇ ಹೊರತು ಕಮ್ಯುನಿಸ್ಟ್ ವಿರೋಧಿಯಾಗಿಲ್ಲ ಎಂಬ ನಿಲುವನ್ನು ಪ್ರಕಟಪಡಿಸುತ್ತಾರೆ.

ಸುದಾರ್ಥಿಯವರು ೧೯೭೬ರ ಸಂದರ್ಶನ 'ನಿರಂಜನ ವ್ಯಕ್ತಿ ವಿಚಾರ' ಎಂಬ ಸಂದರ್ಶನದಲ್ಲಿ ಸಮಾಜದಲ್ಲಿ ವ್ಯಕ್ತಿಯ ಜೀವನಮಟ್ಟವನ್ನು ಉತ್ತಮ ಪಡಿಸುವುದು ಸಾಹಿತ್ಯದ ಮುಖ್ಯ ಧೋರಣೆಯಾಗಬೇಕೆಂಬ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ. ೧೯೮೦ರಲ್ಲಿ ಬರಗೂರು ರಾಮ ಚಂದ್ರಪ್ಪನವರು ಸಂದರ್ಶಿಸುವ 'ಸಾಹಿತಿ ರಾಜಕೀಯ ಪಕ್ಷದ ಸದಸ್ಯರಾದರು ತಪ್ಪಲ್ಲ' ಎಂದು ರಾಜಕೀಯಕ್ಕೂ ಮತ್ತು ಸಾಹಿತ್ಯಕ್ಕೂ ಸಂಬಂಧವಿರಬೇಕೆಂದು, ರಾಜಕೀಯ ಪಕ್ಷದಲ್ಲಿ ಸಾಹಿತಿಯಿದ್ದರೆ

ಕೃತಿಗಳನ್ನು ಬರೆಯಲು ಸಮಯ ಸಿಕ್ಕದೆ ಇರಬಹುದು ಆದರೆ ಬರೆದ ಕೃತಿ ಕಲಾತ್ಮಕವಾಗಿಲ್ಲ, ಸೃಜನಶೀಲವಾಗಿರಲಾರದೆಂದು ನಿರಂಜನರು ತಿಳಿಸುತ್ತಾರೆ. ಸಾಹಿತಿ ಜನಪರ ಹೋರಾಟದ ಜೊತೆ ಸಂಬಂಧಗಳನ್ನು ಬೆಳೆಸುವುದರಿಂದ ಆತನಿಗೆ ಹೊಸ ಅನುಭವ ದೊರಕುವುದರಿಂದ ವಸ್ತುವಿನಿಂದಾಗಿ ಹೊಸ ಕಲಾ ಕೃತಿ ಬರಲು ಸಾಧ್ಯವಾಗುತ್ತದೆ. ಈ ರೀತಿಯ ಪ್ರಭಾವದಿಂದಾಗಿ ನಿರಂಜನರು 'ಏಕಪ್ರವಾಹ' ಕತೆ ಬರೆದರು ಎಂದು ತಿಳಿಸುತ್ತಾರೆ. ಸಾಹಿತಿಯು ಜನಪರ ಹೋರಾಟದಲ್ಲಿ ಭಾಗಿಯಾಗುವುದರಿಂದ ಸಮಾಜದ ನೈಜ ಅನುಭವಗಳನ್ನು ಗ್ರಹಿಸಲು ಸಾಧ್ಯವೆಂಬ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ.

೧೯೮೧ರಲ್ಲಿ ಎನ್. ಗಾಯತ್ರಿಯವರು ನಡೆಸಿದ 'ಅಲೆಯಾಗುವ ಬದಲು ಪ್ರವಾಹವಾಗಬೇಕು' ಎಂಬ ಸಂದರ್ಶನದಲ್ಲಿ ಸೃಜನಶೀಲ ಬರಹಗಾರರಿಗೆ ಒಂದು ಸಂಘಟನೆಯ ಅಗತ್ಯತೆಯಿದೆ. ಆ ಸಂಘಟನೆಯ ಮೂಲಕ ಸಾಂಸ್ಕೃತಿಕ ಚಳುವಳಿಯನ್ನು ನಡೆಸಲು ಸಾಧ್ಯವಾಗುತ್ತದೆ. ಈ ರೀತಿಯ ಸಂಘಟನೆಯ ಸಾಂಸ್ಕೃತಿಕ ಚಳುವಳಿಯಿಂದಾಗಿ ಸೃಜನಶೀಲ ಬರಹಗಾರ ತನ್ನದೇಯಾದ ರೀತಿಯಲ್ಲಿ ಅನುಭವ ಪಡೆದು ಉತ್ತಮ ಕೃತಿಯನ್ನು ರಚಿಸಲು ಸಾಧ್ಯವಾಗುತ್ತದೆ. ಹಿಂದುಳಿದ ಸಮಾಜ ಮತ್ತು ಬಂಡವಾಳ ಶಾಹಿ ಸಮಾಜಗಳಲ್ಲಿ ಹೆಣ್ಣನ್ನು ಭೋಗದ, ದುಡಿಮೆಯ ವಸ್ತುವಾಗಿ ನೋಡುತ್ತಾರೆ. ಇದೇ ಸಾಹಿತ್ಯದಲ್ಲೂ ಕೂಡ ಮೂಡುತ್ತದೆ. ಪ್ರಗತಿಶೀಲ ಎನಿಸಿಕೊಂಡವನು ಇದನ್ನು ಗುರುತಿಸದೇ ಹೋದರೆ ಆತನ ಕೃತಿಗಳೂ ಕೂಡ ಭೋಗದ ದುಡಿಮೆಯ ವಸ್ತುವಾಗಿಯೇ ಹೆಣ್ಣನ್ನು ಚಿತ್ರಿಸುತ್ತಾನೆ. ಹೆಣ್ಣನ್ನು ಏಕೆ ಸೃಜನಶೀಲ ಬರವಣಿಗೆಯಲ್ಲು ಭೋಗದ ವಸ್ತುವಾಗಿ ಚಿತ್ರಿಸುತ್ತಾರೆ ಎಂಬುದಕ್ಕೆ ತಮ್ಮದೇ ಆದ ತಾತ್ವಿಕತೆಯನ್ನು ಈ ಸಂದರ್ಶನದಲ್ಲಿ ಮಂಡಿಸುತ್ತಾರೆ.

ಬಾಲಕೃಷ್ಣ ಸಾಮಾಗರವರು ೧೯೮೧ರಲ್ಲಿ ನಡೆಸಿದ ಸಂದರ್ಶನ 'ಮೂಗ ಮಾತನಾಡಿಯಾನು ಕುರುಡ ಕಣ್ಣು ಬಿಟ್ಟಾನು' ಎಂಬಲ್ಲಿ ಸಮಾಜದಲ್ಲಿ ಅಂಗವಿಕಲರನ್ನು ಶೋಷಿಸುವ, ಸರಕಾರದ ಯಾವುದೇ ಸೌಲಭ್ಯಗಳಿಂದ ವಂಚಿತರಾಗುವ ಈ ಸಮುದಾಯದ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸುತ್ತಾರೆ. ಬಿದರಹಳ್ಳಿ ನರಸಿಂಹ ಮೂರ್ತಿಯವರು 'ಶಿವಪ್ಪನಾಯಕ' ಎಂಬ ಹೆಸರಿನಿಂದ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದ ಪ್ರಶ್ನಾವಳಿಯ ಸಂದರ್ಶನವಾಗಿದೆ. ೧೯೮೧ರಲ್ಲಿ ಮೃತ್ಯುಂಜಯ ಕಾದಂಬರಿಯನ್ನು ಕುರಿತು ಸಾಮಾಜಿಕ ಕಳಕಳಿಯುಳ್ಳ ಚಿಂತನಶೀಲ ಬರಹಗಾರ ಉತ್ತಮವಾದ ಕೃತಿಯನ್ನು ರಚಿಸಬಲ್ಲ. ಜೊತೆಗೆ ಆತನಿಗೆ ಇತಿಹಾಸದ ಪ್ರಜ್ಞೆ ಇದ್ದರೆ ಸಾಮಾಜಿಕ ಕಳಕಳಿಯು ಹೆಚ್ಚು ಅರ್ಥಪೂರ್ಣವಾಗುತ್ತದೆ ಮತ್ತು ಪರಿಣಾಮಕಾರಿಯಾಗಲು ಸಾಧ್ಯ. ಹಾಗಾಗಿ ಸಾಹಿತಿಗೆ ಇತಿಹಾಸ ಪ್ರಜ್ಞೆ ಅವಶ್ಯಕ ಎಂಬ ತಾತ್ವಿಕತೆಯನ್ನು ಮಂಡಿಸುತ್ತಾರೆ.

ಎನ್. ಗಾಯತ್ರಿಯವರು ನಿರಂಜನರವರೊಂದಿಗೆ ಆಕಾಶವಾಣಿ ಮಾಲಿಕೆಯಲ್ಲಿ ಸಂದರ್ಶಿಸಿದ ನಿರ್ಮಲದೇವಿಯವರು ಧ್ವನಿ ಮುದ್ರಿಸಿಕೊಂಡ ಸಂದರ್ಶನ 'ನನ್ನ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು', ನಿರಂಜನವರವರ ಸಮಕಾಲೀನರಾದ ಪ್ರಗತಿಶೀಲ ಸಾಹಿತ್ಯ ಚಳುವಳಿಯಲ್ಲಿ ಕಾಣಿಸಿಕೊಂಡ ಅ.ನ.ಕೃ. ತ.ರಾ.ಸು., ಬಸವರಾಜ ಕಟ್ಟೀಮನಿಯವರ ಕೃತಿಗಳಲ್ಲಿನ ಸ್ತ್ರೀ ಪಾತ್ರಗಳಿಗೂ ತಮ್ಮ ಕೃತಿಗಳ ಪಾತ್ರಗಳಿಗೂ ಭಿನ್ನತೆ ಇರಲು ಅವರವರ ಅನುಭವ, ಅನಿಸಿಕೆ ಮತ್ತು ಜೀವನ ರೀತಿ ನೀತಿಗಳಿಂದ ಪಡೆದವುಗಳಾಗಿವೆ. ತನ್ನ ಕೃತಿಯಲ್ಲಿನ ಸ್ತ್ರೀ ಪಾತ್ರಗಳು ಭಿನ್ನವಾಗಿ ಚಿತ್ರಿಸಲು ತನ್ನ ಬಾಲ್ಯದಲ್ಲಿ ಪಡೆದ

ಸಾಕಷ್ಟು ಅನುಭವವಾಗಿದೆ. ಸಾಹಿತಿಗೆ ಬಾಲ್ಯದಿಂದ ಪಡೆದ ಅನುಭವಗಳು ಕೂಡ ಪಾತ್ರ ಸೃಷ್ಟಿಸಲು ಸಾಧ್ಯವಾಗುತ್ತದೆ ಎಂಬುದನ್ನು ಇದರಿಂದ ಅರ್ಥೈಸಬಹುದು.

ವಸಂತ ಕುಮಾರ ಪೆರ್ಲರವರು ೧೯೮೩ರಲ್ಲಿ ಸಂದರ್ಶಿಸಿದ 'ಎಲ್ಲಕ್ಕಿಂತ ಬದುಕು ದೊಡ್ಡದು' ಎಂಬ ಸಂದರ್ಶನದಲ್ಲಿ ಪ್ರಜಾಪ್ರಭುತ್ವ ಪದ್ಧತಿಗೆ ಸಂಬಂಧಿಸಿದಂತೆ ನಿರಂಜನರು ಬ್ರಿಟಿಷರಿಂದ ಪ್ರಜಾಪಭುತ್ವ ಪದ್ದತಿ ಬಂದಿದೆ ಎಂದು ತಿಳಿಯುವುದು ತಪ್ಪುಕಲ್ಪನೆ, ಪ್ರಾಚೀನ ಕಾಲದಿಂದಲೂ ಇದರ ಮೂಲವಿತ್ತು. ಆದರೆ ಸ್ವಾತಂತ್ರ್ಯ ನಂತರ ಅದಕ್ಕೆ ಸ್ಪಷ್ಟ ರೂಪ ಬಂದಿದೆ ಎಂದು ಪ್ರಜಾಪ್ರಭುತ್ವದ ಬಗ್ಗೆ ದೇಶೀಯ ಚಿಂತನೆಯಿಂದ ಉತ್ತರಿಸುತ್ತಾರೆ. ಸಾಹಿತ್ಯದಿಂದ ಯಾವುದೇ ಕ್ರಾಂತಿಯಾಗುವುದಿಲ್ಲವೆಂದು, ಆದರೆ ಆ ರೀತಿಯ ಕ್ರಾಂತಿಗೆ ಪೂರಕ ಪ್ರೇರಣೆಯಾಗಬಹುದು. ಸಾಹಿತ್ಯ ಪ್ರೇರಣೆ ಪಡೆಯುವುದು ಬದುಕಿನಿಂದ ಹಾಗಾಗಿ ಸಾಹಿತ್ಯ, ಕ್ರಾಂತಿ, ಪ್ರೇರಣೆ ಎಲ್ಲಕ್ಕಿಂತ ಬದುಕು ದೊಡ್ಡದು ಎಂಬುದಾಗಿ ಬದುಕಿನ ಮಹತ್ವವನ್ನು ತಿಳಿಸುತ್ತಾರೆ.

ಸುಧಾ ಸಾಪ್ತಾಹಿಕ ಪ್ರಶ್ನಾವಳಿಗೆ ಉತ್ತರವಾಗಿ ೧೯೮೩ ರಲ್ಲಿ ನೀಡಿದ 'ಮಾರ್ಕ್ಸ್‌ನ ಮರಣ ಶತಾಬ್ದಿ ಸಂದರ್ಭದಲ್ಲಿ' ಕಾರ್ಲ್ ಮಾರ್ಕ್ಸ್‌ನ ವಿಚಾರಧಾರೆಗಳು, ಸಿದ್ಧಾಂತಗಳಿಂದ ಮಾನವನ ಇತಿಹಾಸಕ್ಕೆ ಬಂದು ಹೊಸ ತಿರುವನ್ನು ನೀಡಿದ್ದಾಗಿದೆ. ಮಾರ್ಕ್ಸ್‌ವಾದ ಎಂಬುದು ಪಾಶ್ಚಾತ್ಯ ಸಮಾಜಕ್ಕೆ ಸೇರಿದ್ದಾಗಿದೆ. ಅಲ್ಲಿ ಬಂಡವಾಳ ಷಾಹಿ, ಸಮಾಜವಾದಿ ಆರ್ಥಿಕ ವ್ಯವಸ್ಥೆ ಇದ್ದು ಅಲ್ಲಿ ವರ್ಗತಾರತಮ್ಯವಿದೆ. ಜಾತಿವ್ಯವಸ್ಥೆ ಇರುವ ದೇಶಗಳಿಗೆ ಅದು ಸರಿಹೊಂದುವುದಿಲ್ಲ ಎಂಬುದು ತಪ್ಪು ಕಲ್ಪನೆಯಾಗಿದೆ. ಜಾತಿ ವ್ಯವಸ್ಥೆಯೆಂಬುದು ಜಗತ್ತಿನ ಎಲ್ಲಾ ದೇಶಗಳಲ್ಲಿಯು ಒಂದಲ್ಲಾ ಒಂದು ರೀತಿ ಇದೆ. ರಾಜಕೀಯ ಕಾರಣಗಳಿಗಾಗಿ ಜಾತಿಯು ಉಗ್ರ ಸ್ವರೂಪ ಪಡೆದುಕೊಂಡಿದೆ. ರಾಜಕೀಯವೇ ಜಾತಿ ಪದ್ಧತಿಯನ್ನು ಪ್ರಪಂಚದ ನಾನಾ ದೇಶಗಳಲ್ಲಿ ಪೋಷಿಸುತ್ತಿದೆ ಎಂದು ತಿಳಿಸುತ್ತಾರೆ.

ಸಂಕಲನ ೧೯೮೩ ಪ್ರಶ್ನೋತ್ತರ ಮಾದರಿಯಲ್ಲಿ ರಾಮಚಂದ್ರದೇವರವರು ಬರೆದ ಕೃತಿಗೆ ಬಳಸಿದ ಸಂದರ್ಶನದಲ್ಲಿ ಸಾಹಿತಿಗೆ ಬಾಲ್ಯದ ನೆನಪುಗಳು ಮಾತ್ರ ಪ್ರಭಾವಿಸದೆ ಯೌವ್ವನ, ಆನಂತರದ ದಿನಗಳು ಮುಖ್ಯವಾಗಿವೆ. ಬದುಕಿನ ತನ್ನ ಸಮಗ್ರ ಸ್ಮರಣೆಯಿಂದ ಲೇಖಕ ಉತ್ತಮ ಕೃತಿ ರಚಿಸಲು ಸಾಧ್ಯ ಎಂಬ ತಾತ್ವಿಕತೆಯನ್ನು ನಿರಂಜನರು ಪ್ರತಿಪಾದಿಸುತ್ತಾರೆ.

ಕಳಕುಂದ ಶಿವರಾಯ – ನಿರಂಜನ ಸಂವಾದ ಎಂಬುದು ೧೯೮೫ ರಲ್ಲಿ ಬರೆದ ಸ್ವ ಸಂದರ್ಶನವಾಗಿದೆ. ಇದೆ ಮಾದರಿಯಲ್ಲಿ ಅ.ನ.ಕೃ ರವರು 'ನನ್ನನ್ನು ನಾನೇ ಕಂಡೆ' ಎಂಬ ಸ್ವ ಸಂದರ್ಶನದ ಮೂಲಕ ತಮ್ಮ ಆನೇಕ ವಿಚಾರಗಳನ್ನು ಮುಖಾಮುಖಿಯಾಗಿಸುತ್ತಾರೆ. ಸ್ವ ವಿಮರ್ಶೆಯನ್ನು ಮಾಡುವುದು ಕೂಡ ಸಂದರ್ಶನದ ಭಾಗವಾಗಿದೆ. ನಿರಂಜನರು ಕೂಡ ಈ ಸಂವಾದದಲ್ಲಿ ಸ್ವ ವಿಮರ್ಶೆಯನ್ನು ಮಾಡಿಕೊಂಡಿದ್ದಾರೆ ಇದು ಕೂಡ ಸಂದರ್ಶನದ ವೈಶಿಷ್ಟ್ಯತೆಯಾಗಿದೆ. ಇಲ್ಲಿ ಅವರ ಕೆಲವೊಂದು ವೈಯಕ್ತಿಕ ವಿಚಾರಗಳನ್ನು, ತಮ್ಮ ದೃಷ್ಟಿಕೋನವನ್ನು, ಮೊದಲು ಸಾಹಿತ್ಯ ಬರೆಯಲು ಪ್ರೇರಣೆ ನೀಡಿದ ಅನುಭವಗಳು ಬೇರೆ ಬೇರೆ ಹೆಸರುಗಳಿಂದ ಕೃತಿಗಳನ್ನು ಬರೆದಿದ್ದು, ಪತ್ರಕರ್ತನಾಗಿ, ಸಂದರ್ಶಕನಿಗೆ ಇರಬೇಕಾದ ಗುಣಗಳು, ಪಾರ್ಶ್ವವಾಯು ಪೀಡಿತನಾಗಿ ಮನೆಯಲ್ಲಿ ಉಳಿಯಬೇಕಾದ ಸ್ಥಿತಿ, ತಮ್ಮ ಪ್ರಾಗ್ಜರತಾ ಕಥಾ ಅಥವಾ ಹೆಜ್ಜೆ ಎಂಬ ೨೫೦೦ ಪುಟಗಳ ಬೃಹತ್ ಕಾದಂಬರಿಯನ್ನು ಬರೆಯಲು ಆಕಾರಗಳನ್ನು ಸಂಗ್ರಹಿಸಿದರೂ. ಬರೆಯಲು ಸಾಧ್ಯವಾಗದೆ ಹೋದದ್ದು ಇವೆಲ್ಲಾ ವಿಚಾರಗಳನ್ನು ಮುಖಾಮುಖಿಯಾಗಿಸುತ್ತಾರೆ.

ಇದೊಂದು ಪತ್ರಗಳ ಸಂಕಲನ ಕೃತಿಯಾಗಿದೆ, ಸೀಮಂತಿನೀ ನಿರಂಜನ ಮತ್ತು ತೇಜಸ್ವಿನಿ ನಿರಂಜನರವರು ಸಂಪಾದಿಸಿ ೧೯೯೪ ರಲ್ಲಿ ಪ್ರಕಟ ಪಡಿಸಿದ್ದಾರೆ. ಇದರಲ್ಲಿ ಸಾಧನಾ, ಪಯಣ, ಕವಿ ಕಲ್ಪನೆಯ ಪುನರುತ್ಥಾನ, ಹೆಜ್ಜೆ, ಅದು ಇದೂ ಎಂಬ ಐದು ಭಾಗಗಳಿವೆ. ಬಹಳಷ್ಟು ತಮ್ಮ ವೈಯಕ್ತಿಕ ವಿಚಾರಗಳನ್ನು ಈ ಪತ್ರಗಳಲ್ಲಿ ವ್ಯಕ್ತಪಡಿಸುತ್ತಾರೆ.

‘ಸಾಧನಾ’ ಎಂಬ ಭಾಗದಲ್ಲಿ ನಿರಂಜನರವರು ಅನುಪಮಾರವರಿಗೆ ಬರೆದ ಪತ್ರಗಳ ಸಂಕಲನ ಸಾಧನ ಕೃತಿಯ ಕೆಲವೊಂದು ಪತ್ರಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದ್ದು ಇಲ್ಲಿನ ಈ ಪತ್ರಗಳ ವಿಚಾರದ ತಾತ್ವಿಕತೆಯನ್ನು ಆ ಸಾಧನಾ ಕೃತಿಯ ತಾತ್ವಿಕತೆಯಲ್ಲಿ ಚರ್ಚಿಸಲಾಗಿದೆ. ‘ಪಯಣ’ ಎಂಬ ಭಾಗದಲ್ಲಿ ೧೯೭೬ರ ಸಂದರ್ಭದಲ್ಲಿ ಕೃಷ್ಣ ಭಟ್ ಮುಲ್ಕಿಯವರಿಗೆ ಬರೆದ ಪತ್ರದಲ್ಲಿ ತಮ್ಮ ವೈಯಕ್ತಿಕ ವಿಚಾರವನ್ನು ತಿಳಿಸುತ್ತಾರೆ. ತಂದೆಯನ್ನು ಕಾಣಲು ಹಠತೊಟ್ಟ ಕುಳಕುಂದಕ್ಕೆ ಹೋಗಿದ್ದು, ೧೯೨೪ ಜೂನ್ ೧೫ ರಂದು ದಕ್ಷಿಣ ಕನ್ನಡ ಕುಳಕುಂದ ಎಂಬ ಹಳ್ಳಿಯಲ್ಲಿ ಚೆನ್ನಮ್ಮ ಎಂಬ ಹೆಣ್ಣಿಗೆ ಎಂಟನೇಯ ವಯಸ್ಸಿನಲ್ಲಿ ಮದುವೆಯಾಗಿ ಅದೇ ವರ್ಷ ವಿಧವೆಯಾದರು. ತನ್ನ ೩೦ನೇ ವಯಸ್ಸಿನಲ್ಲಿ ಆಕೆ ಶ್ರೀನಿವಾಸರಾಯರ ಸಂಬಂಧದಿಂದ ತಾಯಿಯಾದಳು, ಆ ಮಗುವಿಗೆ ಶಿವರಾಯ ಎಂದು ಹೆಸರಿಟ್ಟರು. ತನ್ನ ತಂದೆ ತಾಯಿಯನ್ನು ಕುರಿತಂತೆ ನೇರವಾಗಿ ಯಾವುದೇ ಮುಚ್ಚುಮರೆ ಇಲ್ಲದೆ ನಿರಂಜನರವರು ತಿಳಿಸುವುದು ಒಬ್ಬ ಕಮಿಟ್‌ಮಂಟ್ ಲೇಖಕರಿಗೆ ಮಾತ್ರ ಸಾಧ್ಯ. ಬಿದರಹಳ್ಳಿ ನರಸಿಂಹ ಮೂರ್ತಿಯವರಿಗೆ ಬರೆದ ೧೯೮೧ರ ಜೂನ್ ೦೪ರ ಪತ್ರದಲ್ಲಿ ೧೯೫೧ರಲ್ಲಿ ನಿರಂಜನ ಎಂಬ ಹೆಸರು ಬರಲು ಕಾರಣ ಗುರುತುಗಳೇ ಇಲ್ಲದ ಕಾರಣ ತಾನು ನಿರಂಜನನೆಂದು, ಯಾವುದೇ ಒಂದು ಶಾಶ್ವತ ಜಾತಿಗೆ ಸೇರಿದನಲ್ಲವೆಂದು ತನ್ನದು ಜಾತ್ಯಾತೀತ ಮನಃಸ್ಥಿತಿಯೆಂದು, ಪತ್ನಿ ಅನುಪಮಾ, ಮಗಳಾದ ಸೀಮಂತಿನಿ, ತೇಜಸ್ವಿನಿ ಹೆಸರೂ ಕೂಡ ನಿರಂಜನರಾಗಿದೆಯೆಂದು ತಾವು ಬಂದ ಜಾತಿಗೆ ಸೀಮಿತವಲ್ಲವೆಂದು ತನ್ನ ಹುಟ್ಟಿನ ಮೂಲದೊಂದಿಗೆ ತನ್ನ ಕುಟುಂಬಕ್ಕೆ ಒಂದು ನಿರ್ಧಿಷ್ಟ ಜಾತಿ ಇಲ್ಲದ ಕಾರಣ ತಾನು ಹೇಗೆ ನಿರಂಜನ ಎಂಬ ಹೆಸರು ಪಡೆದೆ ಎಂಬುದನ್ನು ತಿಳಿಸುತ್ತಾರೆ.

೧೯/೧೧/೧೯೮೦ರ ಕೃಷ್ಣ ಭಟ್‌ರವರಿಗೆ ಬರೆದ ಪತ್ರದಲ್ಲಿ ಬಾಲ್ಯದಲ್ಲಿ ಮನೆಯ ಉರುವಲಿಗಾಗಿ ಕಟ್ಟಿಗೆಯನ್ನು ತರಲು ಹೋಗುತ್ತಿದ್ದದ್ದು, ಬೀಡಿ ಕಟ್ಟಿ ಬಸ್‌ಸ್ಟಾಂಡಿನಲ್ಲಿ ಮಾರಿದ್ದು, ದರ್ಜಿ ಸೀನಪ್ಪ ಅಂಗಡಿಯಲ್ಲಿ ಕಾಜ್ ಹಾಕುವ ಕೆಲಸಕ್ಕೆ ಸೇರಿದ್ದು, ಅಡುಗೆಗಾಗಿ ಮಣ್ಣಿನ ಮಡಿಕೆ ಕುಡಿಕೆ ಕೊಂಡು ತರುತ್ತಿದ್ದ ಮೊದಲಾದ ವಿಚಾರಗಳನ್ನು ಬಾಲ್ಯದಲ್ಲಿ ಜೀವನಕ್ಕಾಗಿ ಕಷ್ಟಪಟ್ಟು ದಿನಗಳನ್ನು ನೆನಪಿಸಿಕೊಳ್ಳುತ್ತಾರೆ. ತನ್ನ ಮಕ್ಕಳಿಗೆ ಆ ಸ್ಥಿತಿ ಬರುವುದಿಲ್ಲ, ಆ ಸ್ಥಿತಿಗೆ ಒಬ್ಬ ತಂದೆಯಾಗಿ ತಾನು ತನ್ನ ಮಕ್ಕಳನ್ನು ಬಿಡುವುದಿಲ್ಲವೆಂದು, ತಮ್ಮ ಮಕ್ಕಳಿಗೆ ಉತ್ತಮ ಬದುಕನ್ನು ಕಟ್ಟಿಕೊಡುವ ಅಚಲ ವಿಶ್ವಾಸವನ್ನು ವ್ಯಕ್ತಪಡಿಸುತ್ತಾರೆ.

ದಿವಂಗತ ಪಿ.ಕೆ. ನಾರಾಯಣರಿಗೆ ಬರೆದ ಪತ್ರದಲ್ಲಿ ೧೯೩೪ ರಲ್ಲಿ ಕೊಡಗಿನ ದಾರಿಯಾಗಿ ಸುಳ್ಯಕ್ಕೆ ಗಾಂಧೀಜಿಯವರು ಬಂದಾಗ ೧೦ ವರ್ಷದವನಾಗಿದ್ದಾಗ ಅವರನ್ನು ಕಂಡಿದ್ದು, ೧೯೩೭ ರಲ್ಲಿ ಪುತ್ತೂರಿನಲ್ಲಿ ನೆಹರೂರವರನ್ನು ಕಂಡರು. ದೇಶ ಪರ್ಯಟನೆಯ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಜನತೆಯನ್ನು ಸಂಘಟಿಸುವ ರಾಜಕೀಯ ನೇತಾರರ ವ್ಯಕ್ತಿತ್ವ ತಿಳಿಯುವುದರ ಜೊತೆಗೆ

ಆ ರೀತಿಯ ದಿನಗಳು ಬರಲು ಸಾಧ್ಯವೇ? ಎಂದು ಪ್ರಶ್ನಿಸುತ್ತಾರೆ. ಹದಿಹರೆಯಕ್ಕೆ ಬರುವುದಕ್ಕೆ ಮುಂಚಿತವಾಗಿ ತಮ್ಮ ಅಭಿವ್ಯಕ್ತಿ ಖಚಿತಗೊಂಡು ಪುಸ್ತಕ ಪ್ರಕಟಣೆ ಕಾರ್ಯದಲ್ಲಿ ಬೇಗನೇ ತೊಡಗಿಕೊಳ್ಳದಿದ್ದರೆ ಎಸ್.ಎಸ್.ಎಲ್.ಸಿ. ತೇರ್ಗಡೆ ಹೊಂದಿ ಅಧ್ಯಾಪಕನಾಗಬಹುದಾಗಿತ್ತು. ತಮ್ಮ ತಾಯಿ ಚಿನ್ನಮ್ಮನವರ ಸಾವಿನ ವಿಚಾರವನ್ನು ಹಾಗೂ ೧೯೫೦ರಲ್ಲಿ ಅನುಪಮಾರನ್ನು ಮದುವೆಯಾಲು ತಿರುಪತಿಗೆ ಗುಟ್ಟಾಗಿ ಹೋಗಿ ಮದುವೆಯಾಗಿದ್ದು, ನಂತರ ೧೯೬೦ರಲ್ಲಿ ತಾಯಿಯನ್ನು ತಿರುಪತಿಗೆ ದೇವರ ದರ್ಶನಕ್ಕೆ ಕರೆದುಕೊಂಡು ಹೋಗಿದ್ದೆ ಎಂದು ದಾಖಲಿಸುತ್ತಾರೆ. ನಿರಂಜನವರಿಗೆ ದೇವರ ಮೇಲೆ ಒಲವು ಇದ್ದಿತೋ, ಇಲ್ಲವೋ ಆದರೆ ಇನ್ನೊಬ್ಬರ ಧಾರ್ಮಿಕ ಭಾವನೆಗಳಿಗೆ ಅವರು ಗೌರವವನ್ನು ಕೊಡುತ್ತಿದ್ದರು ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಸಾಮಾನ್ಯವಾಗಿ ಕಮ್ಯುನಿಸ್ಟ್ ಚಿಂತನೆಯನ್ನು ಹೊಂದಿದವರು ನಾಸ್ತಿಕರು ಎಂಬ ಭಾವನೆ ಸಮಾಜದಲ್ಲಿ ಬೆಳೆದಿದೆ. ಆದರೆ ಅವರಲ್ಲಿ ದೇವರ ಬಗ್ಗೆ ಆಸ್ತಿಕರಿರಬಹುದು ಅಥವಾ ಇನ್ನೊಬ್ಬರ ಧಾರ್ಮಿಕ ಭಾವನೆಗಳಿಗೆ ಗೌರವವನ್ನು ಕೊಡುವವರು ಇರುತ್ತಾರೆ ಎಂಬುದನ್ನು ಈ ಅಂಶದಿಂದ ತಿಳಿಯಬಹುದು.

ಬರಹಗಾರನಾಗಿ ನಿರಂಜನರವರು ಈ ಪತ್ರಗಳ ಮುಖೇನ ತಮ್ಮ ನೈಜ ಬದುಕಿನ ಚಿತ್ರಣವನ್ನು ನೀಡುತ್ತಾರೆ. ಆ ಮೂಲಕ ಬರಹಗಾರನ ಬದುಕು ಎಂಬುದು ತೆರೆದ ಪುಸ್ತಕದ ಹಾಗೆ ಎಂಬ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ. ಕೆಲವು ಬರಹಗಾರರು ಕೂಡ ತಮ್ಮ ಆತ್ಮವೃತ್ತದಲ್ಲಿ ಸತ್ಯವನ್ನು ಮರೆ ಮಾಚುವುದನ್ನು ಕಾಣಬಹುದು. ಆದರೆ ಪತ್ರದಲ್ಲಿ ತಮ್ಮ ವೈಯಕ್ತಿಕ ವಿಚಾರಗಳನ್ನು ಮುಚ್ಚುಮರೆಯಿಲ್ಲದೆ ನೇರವಾಗಿ ನಿರಂಜನರವರು ತಿಳಿಸುತ್ತಾರೆ.

ನಾ. ಮೊಗಸಾಲೆಯವರಿಗೆ ಬರೆದ ಪತ್ರದಲ್ಲಿ ತಾನು ಪಾರ್ಶ್ವವಾಯುಗೆ ತುತ್ತಾಗಿದ್ದೇನೆ, ಸಾವಿನ ಒಳಗೆ ತನ್ನ ಬದುಕಿನಲ್ಲಿ ಪ್ರಭಾವ ಬೀರಿದ ಬಾಲ್ಯದ ಪರಿಸರ ಕುಳಕುಂದ, ಸುಳ್ಯ ಮೊದಲಾದ ಕಡೆ ಉಳಿದುಕೊಂಡು ಕುಳಕುಂದದಲ್ಲಿ ದೇಹತ್ಯಾಗ ಮಾಡಬೇಕೆಂಬ ಹಂಬಲ, ಮೊದಲಾದ ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ. ಆತ್ಮಕಥೆಯನ್ನು ನಿರಂಜನರು ಬರೆಯದೆ ಇದ್ದರು ಪಯಣದ ಭಾಗದಲ್ಲಿನ ಪತ್ರಗಳಲ್ಲಿ ಅವರ ಆತ್ಮಕಥೆಯ ಎಳೆಗಳನ್ನು ಗುರುತಿಸಬಹುದು.

'ಕವಿ ಕಲ್ಪನೆಯ ಪುನರುತ್ಥಾನ' ಎಂಬ ಮೂರನೇಯ ಭಾಗದಲ್ಲಿ ವ್ಯಾಸರಾಯ ಬಲ್ಲಾಳರಿಗೆ ಬರೆದ ಪತ್ರಗಳಲ್ಲಿ ಅವರ ಕಥೆ ಕಾದಂಬರಿಗಳಲ್ಲಿ ವಾಸ್ತವತೆಯ ವಿಚಾರಗಳು ಇವೆ. ಇದರೊಂದಿಗೆ ಸಾಹಿತ್ಯ ಕೃತಿಗಳು ವಾಸ್ತವ ವಿಚಾರಗಳನ್ನು ಪ್ರತಿಬಿಂಬಿಸಬೇಕು ಎಂಬ ತಾತ್ವಿಕತೆಯನ್ನು ಪ್ರತಿಪಾದಿಸುತ್ತಾರೆ. ೧೯೭೬ ರಲ್ಲಿ ನಿರಂಜನರವರ ಬದುಕು ಬರಹದಲ್ಲಿ ಮುಖ್ಯವಾದ ವರುಷವಾಗಿದ್ದು 'ಮೃತ್ಯುಂಜಯ' ಕಾದಂಬರಿ ರಚನೆ, ಪ್ರಗತಿ ಪಂಥ ಸ್ಥಾಪನೆ, ಪ್ರಗತಿ ಪಂಥ ಎಂಬುದು ಮೂವತ್ತು ವರ್ಷಗಳ ಹಿಂದಿನ ಪ್ರಗತಿಶೀಲ ಚಳುವಳಿಯ ಪುನರಾವರ್ತನೆಯಾಗದೆ ಅದರ ಮರುಹುಟ್ಟು (ಪುನರುತ್ಥಾನ) ವೆಂದು ಕರೆದು, ತಮ್ಮ ನೈಜ ಪ್ರಗತಿಶೀಲ ಬರವಣಿಗೆಯ ಹಾದಿಯನ್ನು ಹಿಡಿಯುವ ಪಂಥವಾಗಿದೆ ಎಂದು ಅದರ ಗುರಿ ಉದ್ದೇಶಗಳನ್ನು ಸ್ಪಷ್ಟವಾಗಿ ತಿಳಿಸುತ್ತಾರೆ.

೧೯೭೬ ರಲ್ಲಿ ದಾವಣಗೆರೆಯಲ್ಲಿ ನಡೆದ ಪ್ರಗತಿ ಪಂಥದ ಸಂಸ್ಥಾಪನಾ ಸಮ್ಮೇಳನ ನಡೆದಿದ್ದು ಪ್ರಗತಿ ಪಂಥದ ಸೃಜನ ಶೀಲ ಬರವಣಿಗೆಯ ತಾತ್ವಿಕತೆಯನ್ನು ಸ್ಪಷ್ಟಪಡಿಸುತ್ತಾರೆ ಅವುಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

- ಕಾಲಧರ್ಮವನ್ನು ಪ್ರತಿಬಿಂಬಿಸುತ್ತದೆ.
- ಜಾತೀಯತೆಯು ಶೋಕದಂತೆ ಎಚ್ಚರವಹಿಸುವುದು.
- ಮನುಷ್ಯರನ್ನು ದಾಸ್ಯ ಸಂಕೋಲೆಯಿಂದ ಬಿಡುಗಡೆ ಮಾಡುವುದು.
- ಯಾವುದೇ ರಾಜಕೀಯ ಪಕ್ಷದ ಪ್ರಚಾರಕರಾಗದೆ ಜನತೆಯ ಕಾವಲುಗಾರರು.
- ಏನೇ ಸಾಧನೆ ಮಾಡಿದರು, ನಾನು ಏನನ್ನು ಸಾಧಿಸಲ್ಲವೆಂಬ ನುಡಿ ನಮ್ಮದು.
- ಜಗತ್ತಿನ ಎಲ್ಲಾ ಮಾನವ ಕುಲದ ಸಂಸ್ಕೃತಿ, ಸಂಸ್ಕಾರದ ವಾರಸುದಾರರು.
- ಸತ್ಯದ ಅನ್ವೇಷಕ ದಾರಿ ನಮ್ಮದು.
- ಪ್ರಗತಿಗಾಮಿ ವಿಚಾರಧಾರೆಯ ಎಲ್ಲಾ ಬರಹಗಾರರ ಕಲಾವಿದರನ್ನು ಮೇಳೈಸುವ ಬಂದು ವಿಶಾಲ ವೇದಿಕೆ.

ರಾಮಚಂದ್ರ, ವಜ್ರಮಟ್ಟಿ, ಮೇಘಮಿತ್ರ, ಅರವಿಂದ ತಿರಕಪಡಿ ಮೊದಲಾದವರಿಗೆ ಪ್ರಗತಿಪಂಥ ಮುನ್ನಡೆಯಲ್ಲಿ ಎಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ.

ಕೃಷ್ಣ ಭಟ್‌ರವರಿಗೆ ಬರೆದ ೧೯೭೫ ರ ಜುಲೈ ತಿಂಗಳ ಪತ್ರದಲ್ಲಿ ಪಾರ್ಶ್ವವಾಯುವಿನಿಂದಾಗಿ ಮೃತ್ಯುಂಜಯ ಕಾದಂಬರಿಯ ನೂರು ಪುಟಗಳನ್ನು ಬರೆಯಲು ಸಾಧ್ಯವಿಲ್ಲವೇನೋ ಎಂಬ ಸ್ಥಿತಿ ಇದ್ದರು ಅದನ್ನು ಬರೆದು ಮುಗಿಸಬೇಕೆಂಬ ಹಠ ಜೊತೆಗೆ ಕೃತಿಯನ್ನು ಪೂರ್ಣಗೊಳಿಸಿದ ವಿಚಾರವನ್ನು ಪ್ರಸ್ತಾಪಿಸುತ್ತಾರೆ. ನಿರಂಜನರವರ ಸಾಹಿತ್ಯದ ಒಲವು ಅನಾರೋಗ್ಯ ಪೀಡಿತರಾಗಿದ್ದರೂ, ಸಾಯುವ ಸಂದರ್ಭದಲ್ಲಿಯೂ, ಬರೆಯಲು ಆಗದ ಸಂದರ್ಭದಲ್ಲಿಯು ಮೃತ್ಯುಂಜಯ ಕಾದಂಬರಿ ಬರೆದಿದ್ದು ಇವರು 'ಕಮಿಟ್‌ಮೆಂಟ್' ಸಾಹಿತಿಯಾಗಿದ್ದರು ಎಂಬುದಕ್ಕೆ ಇದು ಸಾಕ್ಷಿಯಾಗುತ್ತದೆ.

'ಹೆಜ್ಜೆ' ಎಂಬ ಭಾಗದಲ್ಲಿ 'ಪ್ರಾಗ್ಭಾರತ ಕಥಾ' ಎಂಬ ಕಾದಂಬರಿಗೆ 'ಹೆಜ್ಜೆ' ಎಂದು ಹೆಸರಿಟ್ಟಿದ್ದು ದ್ರಾವಿಡ ಸಂಸ್ಕೃತಿ ಬೆಳೆಯಲು ಕಾರಣವಾದ ಕಥಾವಸ್ತು ಇದಾಗಿದೆ ಇದರ ಬಗ್ಗೆ ಟಿಪ್ಪಣಿಗಳನ್ನು ನೀಡುವಂತೆ ಕಯ್ಯಾರ ಕಿಞ್ಞಣ ರೈ ರವರಿಗೆ ತಿಳಿಸುತ್ತಾರೆ. ಈ ಕಾದಂಬರಿಯನ್ನು ಬರೆಯಲು ಕೆಲವು ಪುಸ್ತಕಗಳನ್ನು ಚಾರಿತ್ರಿಕ ಹಿನ್ನಲೆಯಲ್ಲಿ ಅಭ್ಯಸಿಸಲು ಆಕರಗ್ರಂಥಗಳನ್ನು ಇನ್ನಿತರರಿಂದ ಸಂಗ್ರಹಿಸುವುದನ್ನು ಗಮನಿಸಿದರೆ ಸಾಹಿತಿಯು ಒಂದು ಉತ್ತಮ ಕೃತಿ ರಚನೆಗಾಗಿ ಸಂಶೋಧನೆ ಮಾಡಬೇಕಾಗುತ್ತದೆ. ಆಕಾರಗಳನ್ನು ಸಂಗ್ರಹಿಸಿ ಅದಕ್ಕೆ ತನ್ನ ಪ್ರತಿಭೆಯ ಮೂಲಕ ಬರವಣಿಗೆಗೆ ಇಳಿಸುವ ದಾಟಿ ತಿಳಿಯುತ್ತದೆ. ಹೆಜ್ಜೆ ಎಂಬ ಭಾಗದಲ್ಲಿ ಕೃಷ್ಣ ಭಟ್, ನರಸಿಂಹ ಮೂರ್ತಿ, ಕಯ್ಯಾರ ಕಿಞ್ಞಣ್ಣ ರೈ, ಅಮೃತ ಸೋಮೇಶ್ವರರವರಿಗೆ ಬರೆದ ಪತ್ರದಲ್ಲಿ ಹೆಜ್ಜಾಗಿ ಈ ಕಾದಂಬರಿಯನ್ನು ಬರೆಯುತ್ತಿರುವ ಬಗ್ಗೆ, ಕಥಾವಸ್ತು, ಆಕಾರಗಳ ಸಂಗ್ರಹ, ಸಂಶೋಧನೆ, ಓದು ೧೯೭೯ ರಿಂದ ೧೯೮೧ ರವರೆಗೆ ಮೊದಲು ಈ ಕಾದಂಬರಿ ಬರೆದು ಮುಗಿಸುತ್ತೇನೆಂದು

ತಿಳಿಸುತ್ತಾರೆ. ನಂತರ ವಿಶ್ವಕಥಾಕೋಶದ ಸಂಪಾದನೆಯಿಂದಾಗಿ ಅದನ್ನು ಬರೆಯಲಾಗದೆ ೧೯೮೫ - ೮೭ ನೇ ವರ್ಷಕ್ಕೆ ಹೋಯಿತು. ಕೊನೆಗೆ ಈ ಕಾದಂಬರಿಯನ್ನು ಬರೆಯುತ್ತೇನೋ ಇಲ್ಲವೋ ಎಂಬ ಅನುಮಾನದೊಂದಿಗೆ ಈ ಭಾಗದ ಪತ್ರಗಳ ಅಂತಿಮದಲ್ಲಿ ವಿವರಿಸುತ್ತಾರೆ.

ಅಮೃತ ಸೋಮೇಶ್ವರರಿಗೆ ಬರೆದ ಪತ್ರದಲ್ಲಿ ಅವರ 'ಅವಿಲು' ಕವನ ಸಂಕಲನ, 'ರಾಯರಾವುತೆ' ಕೃತಿಯಲ್ಲಿ 'ಅಮರಶಿಲ್ಪ ವೀರಕಲ್ಕುಡ' ಬಗ್ಗೆ ಪ್ರಸ್ತಾಪಿಸುತ್ತಾರೆ. ಆಫ್ರಿಕಾದ ಕಾಡಿನಲ್ಲಿಯೂ ಭೂತಾರಾಧನೆ ಪದ್ಧತಿ ಇದೆ. ಈ ಪದ್ಧತಿಯು ಪ್ರಾಚೀನ ಪರಂಪರೆಯೊಂದಿಗೆ ಬೆಳೆದುಕೊಂಡು ಬಂದಿದೆ ಎಂಬುದಾಗಿ ಪ್ರತಿಕ್ರಿಯಿಸುತ್ತಾರೆ. ಒಂದು ಕೃತಿಯನ್ನು ಪರಿಚಯಿಸುವಾಗ ಅಥವಾ ವಿಶ್ಲೇಷಿಸುವಾಗ ಅದಕ್ಕೆ ಪೂರಕವಾದ ವಿಶ್ವದ ಇನ್ನೊಂದು ರಾಷ್ಟ್ರದಲ್ಲಿರುವ ಪದ್ಧತಿ ಸಾಹಿತ್ಯದ ವಿಚಾರಗಳನ್ನು ನಿರಂಜನರು ಸೇರಿಸಿ ವಿವರಿಸುತ್ತಾರೆ. ಅದನ್ನು ಅವರ ಬರವಣಿಗೆಯ ಶೈಲಿ ಎನ್ನಬಹುದೇನೋ ಅಥವಾ ಅವರ ವಿಚಾರ ಸಾಹಿತ್ಯದ ಸ್ವರೂಪವೆನ್ನಬಹುದು. ಐದು ನಿಮಿಷ, ಕಾಲಕ್ಷೇಪ, ರಾಜಧಾನಿಯಿಂದ, ದಿನಚರಿಯಿಂದ, ಅಂಕಣ, ಮೊದಲಾದ ಕೃತಿಗಳನ್ನು ಲೇಖನಗಳಲ್ಲಿ ಸಾಹಿತ್ಯ, ಸಮಾಜ, ಕಲೆ, ಸಂಸ್ಕೃತಿ ಮೊದಲಾದವುಗಳನ್ನು ಚರ್ಚಿಸುವಾಗ ಅದಕ್ಕೆ ವಿಶ್ವದ ಇತರ ರಾಷ್ಟ್ರಗಳಲ್ಲಿ ಇರುವ ವಿಚಾರವನ್ನು ಒಂದಕ್ಕೊಂಡು ಸೇರಿಸುವುದು ಕೂಡ ಅವರ ವಿಚಾರ ಸಾಹಿತ್ಯದ ತಾತ್ವಿಕತೆಯಾಗಿದೆ.

'ಅದು ಇದೂ...' ಎಂಬ ಐದನೆಯ ಭಾಗದ ಪತ್ರಗಳಲ್ಲಿ ಸಾಹಿತ್ಯ ಮತ್ತು ಪ್ರಗತಿಶೀಲತೆಯನ್ನು ಕಾಮಪ್ರಚೋದಕ ಸಾಹಿತ್ಯ ಎಂದು ಅಂದಿನ ಕಾಲಘಟ್ಟದಲ್ಲಿ ತಿಳಿಸಿದ ವಿಚಾರಗಳನ್ನು, ಅನುಪಮಾರವರ ಕಣ್ಮಣಿ ಕಥೆ, ತಮ್ಮ ಬಲಗೈ ಮುರಿದುಕೊಂಡಿದ್ದ ವಿಷಯ, ವಿಮೋಚನೆ ಕಾದಂಬರಿ, ಆ ಕಾದಂಬರಿಯ ಪಾತ್ರ ಚಂದ್ರಶೇಖರ, ಚಿರಸ್ಮರಣೆ ಕಾದಂಬರಿ ಮೊದಲಾದ ವಿಚಾರಗಳನ್ನು ತಿಳಿಸುತ್ತಾರೆ. ಅನುಪಮಾರವರಿಗೆ ಕ್ಯಾನ್ಸರ್ ಬಂದಿದ್ದು ಅದರ ಚಿಕಿತ್ಸೆ ಮತ್ತು ತಮ್ಮ ಕೊನೆಯ ಕಾದಂಬರಿ 'ಪ್ರಾಗ್ಭಾರತಾ ಕಥಾ' ಎರಡೂವರೆ ಸಾವಿರ ಪುಟ ಆಗಬಹುದೆಂದು, ಅವರ ಮಕ್ಕಳಾದ ತೇಜಸ್ವಿನಿ ನಿರಂಜನ ಲಾಸ್‌ಎಂಜಲೀಸ್‌ನಲ್ಲಿ ಡಾಕ್ಟರೇಟ್ ಪದವಿಗೆ ಸಂಬಂಧಿಸಿದಂತೆ ಪ್ರಬಂಧ ಬರೆಯುತ್ತಿರುವ, ಸೀಮಂತಿನಿ ನಿರಂಜನ ಸಮಾಜ ವಿಜ್ಞಾನದಲ್ಲಿ ಎಂ.ಎ. ಕಲಿಕೆಯಲ್ಲಿ ತೊಡಗಿರುವುದನ್ನು ದಾಖಲಿಸಿದ್ದಾರೆ. ೧೯೬೦ರ ದಶಕದಲ್ಲಿ ಅವರು ಸ್ನೇಹಿತರಿಗೆ ಬರೆದ ಪತ್ರಗಳು ಲಭಿಸಿಲ್ಲವೆಂದು ಆ ಸಂದರ್ಭದಲ್ಲಿ ಅವರು ಅನೇಕ ಕಥೆ ಕಾದಂಬರಿಗಳನ್ನು ಬರೆಯಲು ತೊಡಗಿದ್ದು ಕಾರಣವಿರಬಹುದು.

ನಿರಂಜನವರು ಬರೆದ ಪತ್ರಗಳ ಮೂಲಕ ಅವರು ಅನೇಕ ವೈಯುಕ್ತಿಕ ವಿಚಾರಗಳನ್ನು ತಿಳಿಸುತ್ತಾರೆ. ಒಂದೊಂದು ಪತ್ರಗಳು ಅವರ ಕುಟುಂಬದ, ಅರೋಗ್ಯದ ಬಗ್ಗೆ ತಿಳಿಸುವ ಸಂದರ್ಭದಲ್ಲಿ ಓದುಗನು ಭಾವನಾತ್ಮಕತೆಗೆ ಒಳಗಾಗುವುದು ಸಹಜ. ಈ ಪತ್ರಗಳಲ್ಲಿ ಅವರ ಆತ್ಮ ಚರಿತ್ರೆಗೆ ಸಂಬಂಧಿಸಿದಂತೆ ಅನೇಕ ವಿಚಾರಗಳಿವೆ, ಆ ಮೂಲಕ ಕನ್ನಡ ನಾಡಿನ ಪತ್ರ ಸಾಹಿತ್ಯಕ್ಕೆ ನಿರಂಜನರವರ ಈ ಪತ್ರ ಸಂಕಲನ ಒಂದು ವಿಶಿಷ್ಟವಾದ ಕೃತಿಯಾಗಿದೆ.

ನಿರಂಜನರವರ ವಿಚಾರ ಸಾಹಿತ್ಯದ ಸ್ವರೂಪ

ನಿರಂಜನವರ ವಿಚಾರ ಸಾಹಿತ್ಯವು ತನ್ನದೇಯಾದ ಸ್ವರೂಪವನ್ನು ಒಳಗೊಂಡಿದೆ. ಅದರಲ್ಲಿ ಕೆಲವೊಂದು ಸ್ವರೂಪಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

- ಪತ್ರ ಸಾಹಿತ್ಯದ ಮೂಲಕ ವೈಯುಕ್ತಿಕ ವಿಚಾರಗಳನ್ನು ದಾಖಲಿಸುವ ಸ್ವರೂಪವನ್ನು ಒಳಗೊಂಡಿದೆ.
- ನಿರಂಜನರ ಆತ್ಮ ಚರಿತ್ರೆಯ ಎಳೆಗಳ ಸ್ವರೂಪವನ್ನು ಕಾಣಬಹುದು.
- ಕನ್ನಡ ನಾಡಿನ ಜನರಿಗೆ ವಿಶ್ವದ ಎಲ್ಲಾ ಜ್ಞಾನದ ವಿಚಾರಗಳು ತಿಳಿಯಲೆಂದು ಅಮೇರಿಕಾ, ರಷ್ಯಾ, ಯೂರೋಪ್, ಚೀನಾ ಮೊದಲಾದ ದೇಶದ ಸಾಹಿತ್ಯವನ್ನು ಪರಿಚಯಿಸುವ ಸ್ವರೂಪವನ್ನು ಹೊಂದಿದೆ.
- ನಿರಂಜನರ ವಿಚಾರ ಸಾಹಿತ್ಯವು ಟಿಪ್ಪಣಿ ಸ್ವರೂಪವನ್ನು ಹೊಂದಿದೆ.
- ನಿರಂಜನರವರು ರಾಜಧಾನಿಯಿಂದ, ದಿನಚರಿಯಿಂದ, ಅಂಕಣ ಎಂಬ ಪತ್ರಿಕೆ ಲೇಖನಗಳಲ್ಲಿ, ಕೆಲವು ಸಾಹಿತಿಗಳ, ಕಲಾವಿದರ ವ್ಯಕ್ತಿ ಚಿತ್ರಣಗಳನ್ನು ನೀಡುವುದು ವಿಚಾರ ಸಾಹಿತ್ಯದ ಸ್ವರೂಪವಾಗಿದೆ.
- ನಿರಂಜನವರ ಪ್ರತಿ ಅಂಕಣ ಅಥವಾ ಲೇಖನಗಳು ಆರಂಭವಾಗುವ ವಿಷಯಕ್ಕೆ ಸೂಕ್ತವಾದ ಘಟನೆ, ವಿಚಾರಗಳನ್ನು ಪೀಠಿಕೆಯಾಗಿ ನಂತರ ಲೇಖನದ ಮುಖ್ಯ ವಿಷಯವನ್ನು ವಿವರಿಸುವ ಸ್ವರೂಪವನ್ನು ಒಳಗೊಂಡಿದೆ.
- ಸಮಾಜದ, ಕನ್ನಡ ನಾಡಿನ ವಿವಿಧ ಸಮಸ್ಯೆಗಳು, ರಾಜ್ಯ ರಾಜಧಾನಿಯಾದ ಬೆಂಗಳೂರಿನ ವಿವಿಧ ಸಮಸ್ಯೆಗಳ ಸ್ವರೂಪವನ್ನು ಅನಾವರಣಗೊಳಿಸುತ್ತದೆ.
- ಸ್ವಾತಂತ್ರ್ಯ ಪೂರ್ವ ಪತ್ರಿಕೆಗಳು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಕೈ ಜೋಡಿಸಿದವು. ಆದರೆ ಸ್ವಾತಂತ್ರ್ಯ ನಂತರದಲ್ಲಿ ಪತ್ರಿಕೆಗಳು ಬಂಡವಾಳಶಾಹಿಯ ಹಿಡಿತಕ್ಕೆ ಒಳಗಾದ ಸ್ವರೂಪವನ್ನು ತಿಳಿಸುತ್ತದೆ.
- ಜಾತಿಯ ಸಮಸ್ಯೆ ಎಂಬುದು ಭಾರತದಲ್ಲಿ ಮಾತ್ರವಲ್ಲದೆ ವಿಶ್ವದ ಎಲ್ಲಾ ದೇಶಗಳಲ್ಲಿಯೂ ಇದೆ. ಅದನ್ನು ಭಿನ್ನ ಸ್ವರೂಪದಲ್ಲಿ ಗ್ರಹಿಸುವುದು ಕೂಡ ವಿಚಾರ ಸಾಹಿತ್ಯದ ಸ್ವರೂಪವಾಗಿದೆ.
- ರಾಷ್ಟ್ರೀಯ ಭಾವೈಕ್ಯತೆಯನ್ನು, ವಿಶ್ವಪ್ರಜ್ಞೆಯನ್ನು ಮೂಡಿಸುವ ಸ್ವರೂಪವನ್ನು ಒಳಗೊಂಡಿದೆ.
- ನಿರಂಜನರ ವಿಚಾರ ಸಾಹಿತ್ಯ ಬದುಕನ್ನು ಕೇಂದ್ರಿಕೃತವಾಗಿ ಚಿತ್ರಿಸುವ ಸ್ವರೂಪವನ್ನು ಒಳಗೊಂಡಿದೆ.
- ಪರರ ವಿಚಾರಗಳನ್ನು ಗೌರವಿಸುವ ಸ್ವರೂಪವನ್ನು ಹೊಂದಿದೆ.
- ನೇರವಾಗಿ ವಿಮರ್ಶಿಸುವ ಸ್ವರೂಪವನ್ನು ಹೊಂದಿದೆ.

ಕೊನೆ ಟಿಪ್ಪಣಿಗಳು

೧. ಅ. ನ. ಕೃ., ಹೊಸ ಹುಟ್ಟು, ಪುಟ ೧೪.

೨. ಅದೇ, ಪುಟ ೩೦.

೩. ಅದೇ, ಪುಟ ೪೭.

೪. ಅದೇ, ಪುಟ ೬೯.

೫. ಅ. ನ. ಕೃ., ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ, ಪುಟ ೪೨.

೬. ಅ. ನ. ಕೃ., ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ, ಪುಟ ೨೦.

೭. ಅದೇ, ಪುಟ ೧೨೬.

೮. ಅ. ನ. ಕೃ., ನಿಡುಮಾಮಿಡಿ ಸನ್ನಿಧಿಯವರು, ಪುಟ ೨೯.

೯. ನಿರಂಜನ, ದಿನಚರಿಯಿಂದ, ಪುಟ ೩೮.

ಅಧ್ಯಾಯ ೫

ಅ.ನ.ಕೃ. ಮತ್ತು ನಿರಂಜನ ಅವರ ಸಾಹಿತ್ಯಕ ಹಾಗೂ ಸಾಮಾಜಿಕ ಚಿಂತನೆಗಳ ಅನನ್ಯತೆ

ಸಾಹಿತ್ಯವು ಸಮಾಜದ ಅನೇಕ ವಿಚಾರಗಳ ಮೇಲೆ ಪ್ರಭಾವಿಸುತ್ತದೆ. ಸಮಾಜದಲ್ಲಿನ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ನೀಡುತ್ತದೆ. ಸಾಹಿತ್ಯವು ಸಮಾಜದ ವಿಚಾರಗಳಿಗೆ ಪ್ರತಿಕ್ರಿಯಿಸುವ ಬಗೆಯ ಮೂಲಕ ಉತ್ತಮ ಸಮಾಜವಾಗಿ ಮಾರ್ಪಡಿಸಲು ಸಾಧ್ಯ. ಸಾಹಿತ್ಯವು ಆಯಾಯ ಕಾಲಧರ್ಮಕ್ಕೆ ಅನುಗುಣವಾಗಿ ತನ್ನ ಪ್ರತಿಕ್ರಿಯೆಗಳನ್ನು ನೀಡುತ್ತದೆ. ಅದರಂತೆ ಪ್ರಗತಿಶೀಲ ಕಾಲಘಟ್ಟದಲ್ಲಿ ಸಾಹಿತ್ಯದಲ್ಲಿ ಸಾಹಿತ್ಯಕ ಮತ್ತು ಸಾಮಾಜಿಕ ಚಿಂತನೆಗಳನ್ನು ಕುರಿತಂತೆ ಅ. ನ. ಕೃ. ಮತ್ತು ನಿರಂಜನ ಅವರು ತಮ್ಮದೇಯಾದ ರೀತಿಯಲ್ಲಿ ಚಿಂತಿಸಿದ್ದಾರೆ.

ಅ. ನ. ಕೃ. ಮತ್ತು ನಿರಂಜನ ಅವರು ತಮ್ಮ ಸೃಜನಶೀಲ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆಗಳ ಹಿನ್ನೆಲೆಯಲ್ಲಿ ಹಲವು ವಿಚಾರಗಳನ್ನು ಪ್ರತಿಪಾದಿಸಿದ್ದಾರೆ. ಅದರಂತೆ ಅವರ ವಿಚಾರ ಸಾಹಿತ್ಯದಲ್ಲಿಯೂ ಕೂಡಾ ಸಾಹಿತ್ಯಕ ಹಾಗೂ ಸಾಮಾಜಿಕ ಚಿಂತನೆಗಳನ್ನು ನಾವು ಕಾಣಬಹುದು. ಆ ರೀತಿಯ ಸಾಹಿತ್ಯಕ ಹಾಗೂ ಸಾಮಾಜಿಕ ಚಿಂತನೆಗಳಲ್ಲಿ ಅನನ್ಯತೆಯನ್ನು ತಿಳಿಯಬಹುದು. ಈ ಅಧ್ಯಾಯದಲ್ಲಿ ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯ ಕೃತಿಗಳಲ್ಲಿ ವ್ಯಕ್ತವಾದ ಸಾಹಿತ್ಯಕ ಮತ್ತು ಸಾಮಾಜಿಕ ಚಿಂತನೆಗಳ ಅನನ್ಯತೆಯನ್ನು ಈ ಕೆಳಕಂಡ ಅಂಶಗಳ ಉಪಶೀರ್ಷಿಕೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

- ಸಾಹಿತ್ಯ ಮತ್ತು ಸಮಾಜ
- ಸಾಹಿತ್ಯದಲ್ಲಿ ಶೀಲ–ಅಶ್ಲೀಲ ವಿವೇಚನೆ
- ಸ್ತ್ರೀ ಮತ್ತು ಜಾತಿಯ ವಿಚಾರಗಳು

೫.೧ ಸಾಹಿತ್ಯ ಮತ್ತು ಸಮಾಜ

ಅ.ನ.ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯದಲ್ಲಿ ಸಾಹಿತ್ಯ ಮತ್ತು ಸಮಾಜವನ್ನು, ಅದರ ಧೋರಣೆ ರೀತಿ ನೀತಿಗಳನ್ನು, ಸಾಹಿತಿಯ ವಿಚಾರಗಳನ್ನು ಹತ್ತು ಹಲವು ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. 'ಕರ್ನಾಟಕ ಹಿತ ಚಿಂತನೆ' ಯೆಂಬ ಕೃತಿಯಲ್ಲಿನ 'ಸಾಹಿತಿಯ ಲಕ್ಷ್ಯ' ಎಂಬ ಲೇಖನದಲ್ಲಿ ಕನ್ನಡ ಸಾಹಿತ್ಯವನ್ನು ಚಾರಿತ್ರಿಕವಾಗಿ ಗಮನಿಸಿ ಜೈನರು, ವೀರಶೈವರು, ಬ್ರಾಹ್ಮಣರು ಮೊದಲಾದವರು ಸಾಹಿತ್ಯದಲ್ಲಿ ಧರ್ಮ ಶ್ರದ್ಧೆಯನ್ನು ಸಾರಿದ್ದಾರೆ. ಕನ್ನಡ ನಾಡಿನಲ್ಲಿ ಇರುವ ಧರ್ಮ ಸಮನ್ವಯತೆಗೆ ಇದು ಕೂಡ ಸಹಾಯಕಾರಿಯಾಗಿದೆ. ಆದರೆ ಜನತೆಗೆ ಬೇಕಾಗಿರುವುದು ಲೌಕಿಕ ವಿಷಯಗಳು, ಆದರೆ ಪ್ರಾಚೀನ ಕರ್ನಾಟಕದ ಸಾಹಿತಿಗಳು ಲೌಕಿಕ ವಿಷಯಗಳನ್ನು ಎತ್ತಿಕೊಳ್ಳುವುದು ತಪ್ಪೆಂದು ಭಾವಿಸಿ ಪರಿಶುದ್ಧವಾದ, ಪವಿತ್ರವಾದ ಸಾಹಿತ್ಯವನ್ನು ಸೃಷ್ಟಿಸುವಲ್ಲಿ ಪ್ರಾಚೀನ ಕನ್ನಡ ಕವಿಗಳಿಗೆ ಧಾರ್ಮಿಕ ಸಾಹಿತ್ಯವೊಂದನ್ನು ಸೃಷ್ಟಿಸುವುದೇ ಮುಖ್ಯವಾಗಿತ್ತು. ಏಕೆಂದರೆ ಪ್ರಾಚೀನ ಕವಿಗಳ

ಗಮನ ಅಥವಾ ಲಕ್ಷ್ಯವಿದ್ದದ್ದೇ ಧರ್ಮದ ಕಡೆಗೆ. ಆದರೆ ಬ್ರಿಟಿಷರು ಭಾರತಕ್ಕೆ ಬಂದಾಗಿನಿಂದ ಸಾಮಾಜಿಕ, ಶೈಕ್ಷಣಿಕ ಮೊದಲಾದ ರಂಗದಲ್ಲಿ ಬದಲಾವಣೆಯಾದಂತೆ ಸಾಹಿತ್ಯದಲ್ಲಿಯೂ, ಸಾಹಿತ್ಯ ರಂಗದಲ್ಲಿಯೂ ಬದಲಾವಣೆಯನ್ನು ಕಂಡಿತು.

ಅದರಂತೆ ನವೋದಯ ಕಾಲಘಟ್ಟದ ಸಾಹಿತಿಗಳು ಜನತೆಗಳ ಜೀವನಕ್ಕೆ ಸಂಬಂಧವಾದ ವಸ್ತುಗಳನ್ನು ಆಯ್ದುಕೊಂಡರೂ ವಿಚಾರ ಅವರದೇ ಆಗಿತ್ತು. ಇಲ್ಲಿ ಸಾಹಿತಿಗಳಾದವರು ಸಂಪ್ರದಾಯ ಬದ್ಧತೆ, ನೀತಿ, ಧರ್ಮ, ಶೀಲ ಈ ರೀತಿಯ ಪುರಾತನ ಮೌಲ್ಯಕ್ಕೆ ಮಾರು ಹೋಗಿದ್ದರು. ಸಾಹಿತ್ಯದ ಉದ್ದೇಶ ಮನುಷ್ಯನನ್ನು ಉತ್ತಮರನ್ನಾಗಿ ಮಾಡುವಂಥದಲ್ಲ, ವಿವೇಕಿಗಳನ್ನಾಗಿ, ವಿಚಾರ ಪರರನ್ನಾಗಿ ಮಾಡುವುದು ಸಾಹಿತ್ಯದ ಪ್ರಮುಖ ಉದ್ದೇಶವಾಗಿರಬೇಕೆಂದು ಅ.ನ.ಕೃ. ರವರು ತಿಳಿಸುತ್ತಾರೆ. ಜೊತೆಗೆ ಈ ರೀತಿಯ ಸಾಹಿತಿಗಳ ಲಕ್ಷ್ಯ ಬರಬೇಕಾದರೆ ಪುರಾತನ ಪ್ರವೃತ್ತಿಯ ಮನೋಭಾವನೆಯನ್ನು ಬಿಡಬೇಕೆಂದು ವಿಶ್ಲೇಷಿಸುತ್ತಾರೆ.

ನಿರಂಜನರವರು 'ಪುಷ್ಪಹಾರ' ಎಂಬ ಕೃತಿಯ 'ಜವಾಹರಾರರು ಮತ್ತು ಸಾಹಿತ್ಯ' ಎಂಬ ಪತ್ರದಲ್ಲಿ ಹಿಂದೂ ಪತ್ರಿಕೆಯಲ್ಲಿ ಸಾಹಿತ್ಯವನ್ನು ಕುರಿತು ಪಿ.ಇ.ಎನ್. ಅಂತರಾಷ್ಟ್ರೀಯ ಸಂಸ್ಥೆ (ಕವಿಗಳ, ಪ್ರಬಂಧಕಾರರ, ಕಾದಂಬರಿಕಾರರ ಮತ್ತು ಬರಹಗಾರರ ಸಂಸ್ಥೆ) ಸಮ್ಮೇಳನದಲ್ಲಿ ಉದ್ಘಾಟನೆ ಭಾಷಣ ಮಾಡಿದ ನೆಹರೂರವರು ಸಾಹಿತ್ಯಕ್ಕಿಂತ ಹಸಿದವನಿಗೆ ನೀತಿಯನ್ನು ಬೋಧಿಸುವುದಕ್ಕಿಂತಲೂ ನಾವು ಹೊಟ್ಟೆ ತುಂಬಿಸಬೇಕು ಎಂಬ ಮಾತನ್ನು ಒಪ್ಪುವ ನಿರಂಜನರವರು ಸಾಹಿತ್ಯವು ಧರ್ಮ ಮತ್ತು ನೀತಿಯನ್ನು ಬೋಧಿಸುವುದಕ್ಕಿಂತ ಹಸಿವು ನಿವಾರಣೆಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಪಂಚವಾರ್ಷಿಕ ಯೋಜನೆಗಳಲ್ಲಿ ಸಾಹಿತ್ಯದ ಬೆಳವಣಿಗೆ ಹೆಚ್ಚಿನ ಪ್ರಯೋಜನವಾಗಬಹುದೆಂದು ಸಾಹಿತ್ಯ ಅಕಾಡಮಿಗಳನ್ನು ಸ್ಥಾಪಿಸಿದರು. ಪಂಚ ವಾರ್ಷಿಕ ಯೋಜನೆಗಳಿಗೂ, ಸಾಹಿತ್ಯಕ್ಕೂ ಸಂಬಂಧವಿಲ್ಲವೆಂದು ಆದರೆ ಈ ಪಂಚವಾರ್ಷಿಕ ಯೋಜನೆಗಳ ಹಿಂದೆ ಮಾನವೀಯ ಸ್ಫೂರ್ತಿಗಳು ಇರಬೇಕು ಅಂತಹ ಸ್ಫೂರ್ತಿಯನ್ನು ನೀಡುವುದು ಸಾಹಿತಿಗಳು. ಸಾಹಿತಿಗಳ ಗಮನವು ಜನರ ಭಾವನೆಗಳಿಗೆ ಅನುಗುಣವಾಗಿ ಸ್ಪೂರ್ತಿಯನ್ನು, ಅಂತಃಸತ್ವನ್ನು ಹುಟ್ಟಿಸುವುದು ಬರಹಗಾರನ ಕರ್ತವ್ಯವಾಗಿದೆ. ಆದರೆ ಸಾಹಿತ್ಯ ಮತ್ತು ಸಾಹಿತಿಯ ಉದ್ದೇಶ ಅಂತಃಸತ್ವವನ್ನು ಪ್ರತಿಯೊಬ್ಬ ಬರಹಗಾರ ಒದಗಿಸುವುದು ಸಾಧ್ಯವೇ? ಎಂದು ಪ್ರಶ್ನಿಸುವ ನಿರಂಜನರು ಎಲ್ಲಾ ಸಾಹಿತಿಗಳಲ್ಲಿ ಅಥವಾ ಬರಹಗಾರರಲ್ಲಿ ಅಂತಃಸತ್ವವನ್ನು ಕಾಣಲು ಸಾಧ್ಯವಿಲ್ಲ ಎಂದು ವಿಶ್ಲೇಷಿಸುತ್ತಾರೆ. 'ನಾಡಿ' ನಿರಂಜನರವರ ಆಯ್ದು ಪತ್ರಗಳಲ್ಲಿ ಪ್ರಥಮ ಬಂಡಾಯ ಸಾಹಿತ್ಯ ಸಮ್ಮೇಳನ ೧೯೭೫ರಲ್ಲಿ ನಡೆದ ಸಂದರ್ಭದಲ್ಲಿ ನಿರಂಜನರು ಪತ್ರದಲ್ಲಿ ಪ್ರಸ್ತಾಪಿಸಿರುವ ವಿಷಯಗಳಲ್ಲಿ ಸಾಹಿತಿಗಳನ್ನ ಕುರಿತಂತೆ ಸಾಹಿತಿಗಳಲ್ಲಿ ಎರಡು ರೀತಿಯವರು ಇರುತ್ತಾರೆ. ಅವರಲ್ಲಿ ಮೊದಲಿನವರು ಸಮಕಾಲೀನ ಬದುಕಿಗೆ ಪ್ರತಿಸ್ಪಂದನೆ, ಬದಲಾವಣೆಗೆ ಹೋರಾಡುವವರು, ಮತ್ತೊಂದು ಬಗೆಯ ಸಾಹಿತಿಗಳಲ್ಲಿ ಸಮಕಾಲೀನತೆಯ ಬದುಕಿನ ಘಟನೆಗಳನ್ನು ಗುರುತಿಸದೇ ತಮ್ಮ ಭ್ರಮೆಗಳಲ್ಲಿ ತೇಲಾಡುವ ಸಾಹಿತಿಗಳು ಎಂದು ಎರಡು ಬಗೆಯನ್ನು ತಿಳಿಸುತ್ತಾರೆ. ಅ.ನ.ಕೃ ಸಾಹಿತಿಯ ಲಕ್ಷ್ಯ ಯಾವ ಕಡೆ ಹೋಗುತ್ತದೆ ಎಂದು ತಿಳಿಸಿದರೆ ನಿರಂಜನರವರು ಸಾಹಿತಿಗಳ ಲಕ್ಷ್ಯದಲ್ಲಿ ಅಂತಃಸತ್ವವನ್ನು ಹುಟ್ಟಿಸುವ ವಿಚಾರದೊಂದಿಗೆ ಸಾಹಿತಿಗಳಲ್ಲಿ ಇರುವ ಎರಡು ರೀತಿಯ ಮನೋಧೋರಣೆಯನ್ನು ತಿಳಿಸುತ್ತಾರೆ.

ಅ.ನ.ಕೃರವರು 'ಸಾಹಿತ್ಯ ಮತ್ತು ಯುಗಧರ್ಮ' ಎಂಬ ಕೃತಿಯ 'ಶ್ರಮಜೀವಿ ಮತ್ತು ಸಾಹಿತ್ಯ' ಎಂಬ ಲೇಖನದಲ್ಲಿ ಹೊಟ್ಟೆ ಬಟ್ಟೆ ಹಾಗೂ ಭಾಷೆಯೇ ಪ್ರಧಾನವಾಗಿರುವ ಜನ ಸಾಮಾನ್ಯರಿಗೆ ಅಥವಾ ಶ್ರಮಜೀವಿಗೆ ಸಾಹಿತ್ಯದಿಂದ ಏನು ಪ್ರಯೋಜನವಿಲ್ಲ ಎನ್ನುವವರಿಗೆ ಸಾಹಿತ್ಯವೆಂಬುದು ಕೇವಲ ಪಂಡಿತರ, ಅರಮನೆಯ, ವಿದ್ಯೆ ಕಲಿತವರ ಸೊತ್ತಾಗಿದ್ದರಿಂದ ಅದು ಜನಸಾಮಾನ್ಯರನ್ನು ಅಜ್ಞಾನದಿಂದ ಎಚ್ಚರಿಸುವ ಕೆಲಸವನ್ನು ಮಾಡಲಿಲ್ಲ, ಆದರೆ ಸಾಹಿತ್ಯದ ಉದ್ದೇಶ ವೈಯುಕ್ತಿಕವಾದುದಲ್ಲ, ಸಾಹಿತ್ಯ ಆಹಾರವನ್ನು, ಬಟ್ಟೆಯನ್ನು ಒದಗಿಸದೇ ಇರಬಹುದು. ಆದರೆ ಅವನ ಮನಸ್ಸಿಗೆ ಆನಂದವನ್ನು ನೀಡಿ ಅನ್ನವನ್ನು ಒದಗಿಸಲು ಪ್ರೇರಣೆ ನೀಡುವಂತದ್ದು, ಆ ಪ್ರೇರಣೆಗಾಗಿಯೇ ಸಾಹಿತ್ಯವು ಬೇಕು ಎಂಬುದಾಗಿ ಚರ್ಚಿಸುತ್ತಾರೆ.

ಸಾಹಿತ್ಯ ಧೋರಣೆಯೆಂಬುದು ಯುಗಧರ್ಮಕ್ಕೆ ಅನುಗುಣವಾಗಿಯೇ ನಿರ್ಮಾಣವಾಗಬೇಕು. ಅದು ಯಾವುದೇ ಕಾರಣಕ್ಕೂ ರಾಜರನ್ನು ಆಶ್ರಯಿಸದೇ, ದೇವರು ಮತ್ತು ಧರ್ಮವನ್ನು ಆಶ್ರಯಿಸದೇ ಜನಪದವನ್ನು ಆಶ್ರಯಿಸಿ ನಡೆಯಬೇಕು. ಯಾವ ಸಾಹಿತ್ಯ ಜನಪದವನ್ನು ಆಶ್ರಯಿಸಿ ನಡೆಯುತ್ತದೋ ಆ ಸಾಹಿತ್ಯ ಚಿರಕಾಲವಾಗಿ ಉಳಿಯುತ್ತದೆ ಎಂದು ಸಾಹಿತ್ಯ ಧೋರಣೆಯನ್ನು ಕುರಿತಂತೆ ತಿಳಿಸುತ್ತಾರೆ. ಮುಂದುವರಿದು ಕಾರ್ಲ್ಸ್‌ಮಾರ್ಕ್ಸ್‌ನ ವಿಚಾರಧಾರೆಗೆ ಜೋತು ಬಿದ್ದವರ ಹಾಗೆ ವ್ಯಕ್ತಿವಾದಿಯಾಗಬೇಕೇ ಅಥವಾ ಉಪನಿಷತ್ತಿನ ಋಷಿಗಳಂತೆ ಮಾನವವಾದಿಗಳಾಗಬೇಕೇ ಎಂದು ಅ.ನ.ಕೃ ಸಾಹಿತಿಗಳು ವ್ಯಕ್ತಿವಾದಿಗಳಿಗಿಂತ ಮಾನವತಾವಾದಿಗಳಾಗಬೇಕು. ಅದು ಭಾರತೀಯತನದ ಉಪನಿಷತ್ತುಗಳಲ್ಲಿದೆ. ಅದರಂತೆ ಸಾಹಿತಿಯು ನಡೆಯಬೇಕೆಂದು ಆತ ವ್ಯಕ್ತಿವಾದಿ ಆಗಬಾರದೆಂಬುದು ಅವರ ನಿಲುವು.

'ಸಾಹಿತ್ಯದಲ್ಲಿ ವ್ಯಷ್ಟಿ ಸಮಷ್ಟಿವಾದ' ಎಂಬ ಲೇಖನದಲ್ಲಿ ಅ.ನ.ಕೃರವರ ವಿಶ್ವ ಸಾಹಿತ್ಯದ ಹಿನ್ನಲೆಯಲ್ಲಿ ಎರಡು ಮಹಾಯುದ್ಧಗಳನ್ನು ಎದುರಿಸಿದ ರಷ್ಯಾ ದೇಶವು ಬೆಳವಣಿಗೆಗೊಳ್ಳಲು ಅಲ್ಲಿನ ರಾಜಕೀಯ ಶಕ್ತಿ ಲೆನಿನ್, ಸ್ಟಾಲಿನ್ ಮೊದಲಾದವರು ಜೊತೆಗೆ ಸಾಹಿತಿಗಳಾದ ಮ್ಯಾಕ್ಸಿಂ ಗಾರ್ಕಿ, ಮಯಾಕೊವಸ್ಕಿ, ಅಲೆಕ್ಸಿ, ಟಾಲ್‌ಸ್ಟಾಯ್ ಮೊದಲಾದವರ ಸಾಹಿತ್ಯವು ಸಾಂಘಿಕ ಮುಖದ ಕಡೆಗೆ ತಿರುಗಿ ಅಲ್ಲಿ ಸಮಷ್ಟಿವಾದವು ಬೆಳೆಯಿತು. ಅಮೇರಿಕಾದ ಸಾಹಿತ್ಯದಲ್ಲಿ ವ್ಯಕ್ತಿವಾದವು ಬೆಳೆದು ಇಡೀ ಜಾನಪದ ಸ್ವರೂಪವನ್ನು ಕಳೆದುಕೊಂಡಿತು. ಬಂಡವಾಳಗಾರರ ಕೈಗೆ ಸಿಲುಕಿ ಸಾಹಿತ್ಯವು ಬಂಡವಾಳವಾಹಿಯ ಮುಖವಾಣಿಯಾಗದೆ ವಿಶ್ವಶಾಂತಿ, ವಿಶ್ವಪ್ರೇಮ, ವಿಶ್ವಮೈತ್ರಿಯನ್ನು ಸಾರಿದೆ. ಅದೇ ರೀತಿ ಫ್ರಾನ್ಸಿನಲ್ಲಿ ಮಹಾಕ್ರಾಂತಿ ಉಂಟಾಗಲು ವಾಲ್ಟೇರ್, ರೂಸೋ, ವಿಕ್ಟರ್ ಹ್ಯೂಗೋ ಮೊದಲಾದ ಸಾಹಿತಿಗಳಿಂದ ಸಾಧ್ಯವಾಯಿತು. ಆದರೆ ಕಾಲಕ್ರಮೇಣ ಫ್ರಾನ್ಸ್‌ನಲ್ಲಿ ವ್ಯಕ್ತಿವಾದವೇ ಬೆಳೆಯಿತು.

ಸಾಹಿತ್ಯ ಕೆಲವು ದೇಶಗಳಲ್ಲಿ ಸಮಷ್ಟಿವಾದವನ್ನು ಹೇಳಿದರು ಕಾಲಕ್ರಮೇಣ ಅವು ವ್ಯಕ್ತಿವಾದಕ್ಕೆ ಇಳಿದವು. ಈ ವ್ಯಕ್ತಿವಾದವು ಜೀವನವೆಂಬುದು ನಿರರ್ಥಕತೆ, ಜೀವನ ಕ್ಷಣಿಕ, ನಿರಾಶದಾಯಕ ಅದರಲ್ಲಿ ಯಾವುದೇ ಸತ್ಯವಿಲ್ಲವೆಂದು ತಿಳಿದು ಭಾವಕ್ಕೂ, ಅನುಭವಕ್ಕೂ ಯಾವುದೇ ಸಂಬಂಧವಿಲ್ಲವೆಂದು ಸಾರಿದೆ. ಕವಿಯು ಯಾವುದೇ ಜನಪದದಿಂದ ದೂರ ಉಳಿದ ವ್ಯಕ್ತಿಯಾಗುವುದಿಲ್ಲ, ಆತ ಜನಪದದಲ್ಲಿಯೇ ಒಬ್ಬನಾಗುತ್ತಾನೆ. ಆದರೆ ಪಾಶ್ಚಾತ್ಯ ದೇಶದಲ್ಲಿ ವ್ಯಕ್ತಿವಾದವು ಸಮಷ್ಟಿಯ ಕಲ್ಯಾಣದಲ್ಲಿ ಒಳಗೊಳ್ಳದೆ ವ್ಯಷ್ಟಿಯೆಂಬುದೆ ಸಮಷ್ಟಿಯೆಂದು ಆಕ್ರಮಿಸಿ

ಸಿಲುಕಿದರ ಪರಿಣಾಮವಾಗಿ ವಿಶ್ವದಲ್ಲಿ ಎರಡು ಮಹಾಯುದ್ಧಗಳು ನಡೆದವು. ಸರ್ವಾಧಿಕಾರಿಗಳು ಉದಯಿಸಲು ಕಾರಣವಾಯಿತು. ಪಾಶ್ಚಾತ್ಯದೇಶಗಳ ಈ ರೀತಿಯ ವ್ಯಷ್ಟಿವಾದ ಮತ್ತು ಸಮಷ್ಟಿವಾದಕ್ಕೆ ಸೇತುವೆಯಾಗಿ ಭಾರತವೊಂದೇ ಉತ್ತರ ನೀಡುವ ದಾರಿದೀಪವಾಗಿದೆ. ವ್ಯಕ್ತಿಯು ಬೆಳೆಯಬೇಕಾಗಿದ್ದು ಅದು ಸಮಷ್ಟಿಯ ಚಿಂತನೆಯೊಂದಿಗೆ ಸಾಗಬೇಕು. ಅದು ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಯಿಂದ ಸಾಧ್ಯ ಎಂದು ವಿಶ್ಲೇಷಿಸುತ್ತಾರೆ.

ನಿರಂಜನರವರು 'ಐದು ನಿಮಿಷ'ಎಂಬ ಕೃತಿಯ 'ಮಾನವನ ಕ್ರಿಯಾಶಕ್ತಿ' ಎಂಬ ಲೇಖನದಲ್ಲಿ ಸಾಹಿತ್ಯವನ್ನಾಗಲೀ, ಸಂಸ್ಕೃತಿಯನ್ನಾಗಲೀ ಭಾರತದಲ್ಲಿ ಎರಡು ರೀತಿಯಲ್ಲಿ ನೋಡಬೇಕಾಗಿದೆ. ಒಂದು ಎಚ್ಚೆತ್ತ ನವಭಾರತದ ದೃಷ್ಟಿಯಿಂದ, ಮತ್ತೋಂದು ದೇಶದ ಸಾಹಿತ್ಯವನ್ನು ಅಭ್ಯಾಯಿಸುವಾಗ ಏಕ ಪಕ್ಷೀಯವಲ್ಲದ ಸಮಗ್ರ ದೃಷ್ಟಿಯಿಂದ ನೋಡಬೇಕು. ಆದರೆ ನಮ್ಮಲ್ಲಿ ಸಮಗ್ರ ದೃಷ್ಟಿಯು ಬೆಳೆದಿಲ್ಲ. ಭಾರತೀಯರು ಏಕ ಪಕ್ಷೀಯವಾಗಿ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ನೋಡುತ್ತಾರೆ. ಅ.ನ.ಕೃ.ರವರು ವಿಶ್ವಸಾಹಿತ್ಯದಲ್ಲಿರುವ ವ್ಯಷ್ಟಿ, ಸಮಷ್ಟಿವಾದಕ್ಕೆ ಭಾರತದ ವಾದವೇ ಸೇತುವೆಯಾಗಿ ನೋಡಿದರೆ, ನಿರಂಜನರವರು ಭಾರತೀಯರಲ್ಲಿ ಸಮಗ್ರ ದೃಷ್ಟಿಕೋನ ಬೆಳೆಯದೇ ನವಭಾರತ ದೃಷ್ಟಿಕೋನವು ಬೆಳೆಯದೇ ಏಕ ಪಕ್ಷೀಯ ದೃಷ್ಟಿಕೋನದಿಂದ ನೋಡುವುದು ಸರಿಯಲ್ಲವೆಂದು ಭಾರತೀಯರಿಗೆ ಹೊಸ ದೃಷ್ಟಿ ಕೋನದ ಕಡೆ ಹೋಗದ ಮನಃಸ್ಥಿತಿಯನ್ನು ವಿಶ್ಲೇಷಿಸುತ್ತಾರೆ.

ಭಾರತೀಯ ಸಾಹಿತ್ಯ ವಾದವೇ ಪಾಶ್ಚಾತ್ಯ ದೇಶದ ವ್ಯಷ್ಟಿ, ಸಮಷ್ಟಿ ವಾದಕ್ಕೆ ಉತ್ತರವಾಗಿ ನೋಡುವ ಅ.ನ.ಕೃ.ರವರು ಭಾರತೀಯ ಸಾಹಿತ್ಯವಾದ ಎಂದರೇನು? ಎಂಬುದನು ವಿಶ್ಲೇಷಿಸುವುದಿಲ್ಲ. ನಿರಂಜನರವರು ಯಾವುದು ಭಾರತೀಯ ಸಾಹಿತ್ಯ ಎಂಬುದಕ್ಕೆ ಮಹಾಭಾರತ, ರಾಮಾಯಣ, ಪುರಾಣಕಥೆಗಳು, ಉಪನಿಷತ್ತುಗಳು, ಸಂಸ್ಕೃತ ಮಹಾಕಾವ್ಯ ಇವೆಲ್ಲಾವುಗಳನ್ನ ಭಾರತೀಯ ಸಾಹಿತ್ಯವೆಂದು ಹಿಂದೆ ಗುರುತಿಸಿದ್ದಾರೆ. ಇಂದೂ ಯಾವುದನ್ನು ಭಾರತೀಯ ಸಾಹಿತ್ಯವೆಂದು ಕರೆಯಬೇಕು. ಆರ್.ಕೆ. ನಾರಾಯಣರವರ ಇಂಗ್ಲೀಷ್‌ನ ಕಾದಂಬರಿಗಳೇ ಅಥವಾ ರವೀಂದ್ರನಾಥ ಟಾಗೋರರ ಬರಹಗಳನ್ನೇ ಅಥವಾ ಆಕಾಡಮಿ ಪಾರಿತೋಷಕಗಳನ್ನು ಪಡೆದ ವಿವಿಧ ಭಾಷೆಗಳ ಸಾಹಿತ್ಯವನ್ನೇ? ಎಂದು ಪ್ರಶ್ನಿಸುತ್ತಾರೆ.

ವಿದೇಶಿಯರು ಸಾಧಾರಣವಾಗಿ ಇಂಗ್ಲೀಷ್ ಭಾಷೆಯಲ್ಲಿ ದೊರೆತ ಭಾರತೀಯ ಲೇಖಕರು ಬರೆದ ಕೃತಿಗಳನ್ನು ಭಾರತೀಯ ಸಾಹಿತ್ಯವೆಂದು ಗುರುತಿಸುತ್ತಾರೆ. ಆದರೆ ಆ ಸಾಹಿತ್ಯ ಭಾರತೀಯ ಇತರ ಭಾಷೆಗಳಲ್ಲಿ ದೊರೆಯುವುದಿಲ್ಲ. ಆ ರೀತಿಯ ಸಾಹಿತ್ಯ ಕೃತಿ ಭಾರತೀಯರ ಮೇಲೆ ಹೆಚ್ಚು ಪರಿಣಾಮವನ್ನುಂಟು ಮಾಡುವುದಿಲ್ಲ. ಕಳೆದ ೨೦ ವರ್ಷಗಳಲ್ಲಿ ಭಾರತೀಯ ಸಾಹಿತ್ಯ ರೂಪುಗೊಳ್ಳುವಲ್ಲಿ ಸರಕಾರವು ಯಾವುದೇ ರೀತಿಯ ಕಾರ್ಯಕ್ರಮವನ್ನು ರೂಪಿಸದೇ ಅಕಾಡಮಿಯನ್ನು ಸ್ಥಾಪಿಸಿ ತಾನು ತಟಸ್ಥ ಧೋರಣೆ ತಾಳಿತ್ತು. ಸಾಹಿತ್ಯ ಅಕಾಡಮಿ ಬರೀ ಪ್ರಶಸ್ತಿಗಳನ್ನು ನೀಡುವುದಕ್ಕೆ ಮಾತ್ರ ಸೀಮಿತವಾಗಿ ಭಾರತೀಯ ಸಾಹಿತ್ಯವು ಹುಟ್ಟುವ ಮೊದಲೇ ಅದನ್ನು ಸಮಾಧಿ ಮಾಡಲಾಯಿತು. ಸಮಾಜದ ಸ್ವಾಸ್ಥ್ಯಕ್ಕೆ ಸಂಬಂಧಿಸಿದಂತೆ ಸಾಹಿತ್ಯ ವಹಿಸಬೇಕಾದ ಪಾತ್ರ ಬಹಳ ಹಿರಿದಾಗಿದೆ. ಭಾರತದ ಬೇರೆ ಬೇರೆ ಭಾಷೆಗಳ ಶ್ರೇಷ್ಠವಾದ ಸಾಹಿತ್ಯವನ್ನೆಲ್ಲ ಹಿಂದಿ ಭಾಷೆಗೆ ಅನುವಾದ ಮಾಡುವ ಮೂಲಕ ಭಾರತೀಯ ಸಾಹಿತ್ಯವನ್ನ ಸೃಷ್ಟಿಸಿ ರಾಷ್ಟ್ರೀಯ ಭಾವೈಕ್ಯತೆಯನ್ನು

ಉಂಟುಮಾಡಬಹುದಿತ್ತು. ಇದರಿಂದ ಸಾಹಿತ್ಯದ ಮುಖಾಂತರ ಭಾರತೀಯತ್ವದ ಕಲ್ಪನೆ ಜನರಲ್ಲಿ ಮೂಡುತ್ತಿತ್ತು. ಈಗಿನ ಪರಿಸ್ಥಿತಿಯಲ್ಲಿ ಇಂಗ್ಲೀಷ್ ಮೂಲಕವೇ ಕಾರ್ಯವಾಗಬೇಕೆಂದು, ಭಾರತೀಯ ಸಾಹಿತ್ಯ ಹೇಗೆ ರೂಪುಗೊಳ್ಳಬೇಕೆಂದು ನಿರಂಜನರು ತಿಳಿಸುತ್ತಾರೆ.

ಅ.ನ.ಕೃರವರು 'ಸಾಹಿತ್ಯ ಮತ್ತು ಯುಗಧರ್ಮ'ಎಂಬ ಕೃತಿಯಲ್ಲಿ ವೀರಶೈವ ಸಾಹಿತ್ಯದ ಸ್ವರೂಪವನ್ನು ಕುರಿತಂತೆ ಸಮಸ್ತ ಜನರು ಬದುಕಬೇಕೆಂದು ನಿರ್ಮಾಣವಾದ ಸಾಹಿತ್ಯವಾಗಿದೆ. ಬಸವಣ್ಣನಿಂದ ಹಿಡಿದು ಸರ್ವಜ್ಞನ ವರೆಗೂ ವೀರಶೈವ ಸಾಹಿತ್ಯದ ವ್ಯಾಪ್ತಿಯನ್ನು ಗುರುತಿಸುತ್ತಾರೆ. ಇದನ್ನು ಅನುಭವ ಸಾಹಿತ್ಯವೆಂದು ನೋಡಬೇಕು ಹೊರತು, ವೀರಶೈವ ಸಾಹಿತ್ಯವೆಂದು ಸಂಕುಚಿತಾರ್ಥದಲ್ಲಿ ನೋಡುವುದಲ್ಲ, ಇದು ಮನುಷ್ಯನಲ್ಲಿ ವಿನಯದ ಅವಶ್ಯಕತೆ, ನಾನು ನನ್ನದು ಎಂಬ ಭಾವನೆ ಸರಿಯಲ್ಲ, ಜೀವನದ ಒಳಗು-ಹೊರಗು ಶುದ್ಧರಾಗುವುದು. ನಡೆನುಡಿಗಳಲ್ಲಿ ಸಮನ್ವಯತೆ ಇದರ ಸ್ವರೂಪವಾಗಿದೆ. ಸಾಹಿತ್ಯವನ್ನು ಸಾಮಾನ್ಯ ಜನರ ಮನೆಗೆ ತಂದು ಮುಟ್ಟಿಸಿದ ಕೀರ್ತಿ ವೀರಶೈವ ಸಾಹಿತ್ಯದಾಗಿದೆ ಎಂದು ಚರ್ಚಿಸುತ್ತಾರೆ.

ನಿರಂಜನರು ವೀರಶೈವ ಸಾಹಿತ್ಯದ ವಿಚಾರಗಳನ್ನು ಎಲ್ಲೂ ಚರ್ಚಿಸದಿದ್ದರೂ ವಿಶ್ವ ಸಾಹಿತಿಗಳ ಶ್ರೇಷ್ಠ ಕೃತಿಗಳನ್ನು ಪರಿಚಯಾತ್ಮಕವಾಗಿ ಅವರ ವಿಚಾರ ಸಾಹಿತ್ಯದಲ್ಲಿ ವಿಶ್ಲೇಷಿಸುತ್ತಾರೆ. ಆ ಮೂಲಕ ಕನ್ನಡದ ಓದುಗನಿಗೆ ವಿಶ್ವ ಪ್ರಜ್ಞೆ ಮೂಡಿ ಸಂಕುಚಿತಾರ್ಥಗಳಿಗೆ ಒಳಗಾಗದೆ ವಿಶಾಲ ಭಾವನೆ ಬೆಳೆದು ಭಾಷೆ, ಪ್ರದೇಶ, ದೇಶೀಯ ಎಂದು ಯೋಚಿಸದೆ ವಿಶ್ವ ಪ್ರಜೆಯಾಗಿ ಅತನ ವ್ಯಕ್ತಿತ್ವ ಅರಳಲಿ ಎಂಬ ದೃಷ್ಟಿಕೋನದೊಂದಿಗೆ ವಿಶ್ವ ಸಾಹಿತ್ಯವನ್ನು, ವಿಶ್ವ ಸಾಹಿತ್ಯದ ತಿಳುವಳಿಕೆಯ ಅಗತ್ಯತೆಯನ್ನು ಅಲ್ಲಲ್ಲಿ ಪ್ರತಿಪಾದಿಸುತ್ತಾರೆ.

ಅ.ನ.ಕೃರವರು ಭಾರತೀಯ ಸಾಹಿತ್ಯವನ್ನು ಕುರಿತಂತೆ ತಮ್ಮ 'ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ' ಎಂಬ ಕೃತಿಯಲ್ಲಿ ಸಾಹಿತ್ಯವನ್ನು ಆನೇಕ ಮಾದರಿಗಳಲ್ಲಿ ವಿಂಗಡಿಸಿದ್ದಾರೆ. ಅದರಲ್ಲಿ ಧರ್ಮಕ್ಕೆ ಅನುಗುಣವಾಗಿ ವಿಂಗಡಿಸುವುದು ಒಂದಾಗಿದೆ. ಸಾಹಿತ್ಯವನ್ನು ಈ ರೀತಿಯಿಂದ ವಿಂಗಡಿಸಬಾರದು ಕಾರಣವೆಂದರೆ ಸಾಹಿತ್ಯವು ಸರ್ವ ಸಮಾನತೆಯನ್ನು ಬಯಸುವುದಾಗಿದೆ. ಪುರಾತನ ಗ್ರೀಕ್‌ರಲ್ಲಿ ಮಾನವರ ವ್ಯಕ್ತಿತ್ವ, ಸೌಂದರ್ಯ, ಸಾಹಸಗಳು ಪ್ರಧಾನವಾದರೆ, ಭಾರತೀಯರಲ್ಲಿ ಧರ್ಮವೇ ಪ್ರಧಾನವಾಗಿದೆ ಎಂಬ ಅಂಶವನ್ನು 'ಸಾಹಿತ್ಯ ಮತ್ತು ಧರ್ಮ' ಎಂಬ ಲೇಖನದಲ್ಲಿ ಪ್ರತಿಪಾದಿಸುತ್ತಾರೆ. ಭಾರತೀಯ ಸಾಹಿತ್ಯವು ಧರ್ಮ ಕೇಂದ್ರಿತವಾದ ಒಂದು ಸ್ವರೂಪವನ್ನು ಹೊಂದಿತ್ತು ಎಂದು ವಿಶ್ಲೇಷಿಸುತ್ತಾರೆ.

ಸಾಹಿತ್ಯ ಮತ್ತು ಜೀವನ ಎಂಬ ಕೃತಿಯಲ್ಲಿ 'ಬೆಳೆಯುತ್ತಿರುವ ಕನ್ನಡ ಸಾಹಿತ್ಯ' ಎಂಬ ಲೇಖನದಲ್ಲಿ ಕನ್ನಡ ಸಾಹಿತ್ಯದ ಮೇಲೆ ಸಂಸ್ಕೃತ ಸಾಹಿತ್ಯದ ಪ್ರಭಾವವಿದ್ದು ಪ್ರಗತಿಯ ದೃಷ್ಟಿ ಯಾವಾಗಲು ಹೊಸ ಹೊಸ ದಾರಿಯನ್ನು ಕಾಣುತ್ತದೆ. ಆದರೆ ಧರ್ಮವೇ ಕನ್ನಡ ಸಾಹಿತ್ಯದ ಮೇಲೆ ಪ್ರಭಾವ ಬೀರಿದ ಸಂದರ್ಭದಲ್ಲಿ ಜನತೆಗಾಗಿ ಸಾಹಿತ್ಯವು ನಿರ್ಮಾಣವಾಗದೇ ಇರುವುದು ಒಂದು ವಿಪರ್ಯಾಸವಾಗಿದೆ. ಸಾಹಿತ್ಯದ ಕಾರ್ಯವು ಪ್ರಗತಿಯ ಕಲ್ಪನೆಯನ್ನು ಪ್ರಚೋದನೆಗೊಳಿಸಬೇಕು. ಸಾಹಿತ್ಯವು ಜೀವನದ ಆನೇಕ ಸಮಸ್ಯೆಗಳಿಗೆ ಪರಿಹರಿಸುವ ಸಾಧನವಾಗಬೇಕು. ದುರ್ಬಲರಿಂದ ದುರ್ಬಲರಿಗಾಗಿ ಹುಟ್ಟಿದ ರೋದನ ಸಾಹಿತ್ಯದಿಂದ ಸಮಾಜಕ್ಕೆ ಯಾವುದೇ ರೀತಿಯಲ್ಲಿ ಪ್ರಯೋಜನಕಾರಿಯಾಗುವುದಿಲ್ಲ. ಸಾಹಿತ್ಯದಲ್ಲಿ ಶಕ್ತಿ ಮತ್ತು ಸೌಂದರ್ಯಗಳು ನಿರ್ಧಾರವಾಗುವುದು

ಸಾಹಿತ್ಯ, ಕಲೆ ಜೀವನವನ್ನು ಸೃಷ್ಟಿಸುವುದೋ ಅಥವಾ ಆಶ್ರಿಯಿಸುವುದೋ ಎನ್ನುವ ನಿರ್ಧಾರದ ಮೇಲೆ ಅವಲಂಬಿತವಾಗಿರುತ್ತದೆ.

ಸಾಹಿತ್ಯವು ಒಂದೊಂದು ವೇಳೆ ಜೀವನದ ಪ್ರತಿಬಿಂಬವು ಆಗುತ್ತದೆ ಎಂಬ ಅ.ನ.ಕೃರವರ ನಿಲುವಿನಲ್ಲಿ ಜೀವನದ ವಾಸ್ತವ ಚಿತ್ರಣವನ್ನು ಸಾಹಿತ್ಯವು ಪ್ರತಿಬಿಂಬಿಸುತ್ತದೆ. ಹಲವು ಸಾಹಿತ್ಯಗಳಲ್ಲಿ ಧರ್ಮವನ್ನು ಉಳಿಸಲು ಅವತಾರ ಪುರುಷನು ಜನ್ಮತಾಳಿ ಹೇಗೆ ಧರ್ಮವನ್ನು ರಕ್ಷಿಸುತ್ತಾನೋ ಹಾಗೆಯೇ ಸಾಹಿತ್ಯದಲ್ಲಿ ಅವತಾರ ಪುರುಷ (ಶ್ರೇಷ್ಠ ಸಾಹಿತಿ)ನ್ನು ನಿರೀಕ್ಷಿಸುವ ಕೆಲವು ಸಾಹಿತಿಗಳು ತಮ್ಮ ಕರ್ತವ್ಯದಿಂದ ವಿಮುಖವಾಗಿ ಸಮಾಜಕ್ಕೆ ಪ್ರತಿಬಿಂಬತವಾದ ಸಾಹಿತ್ಯವನ್ನು ಸೃಷ್ಟಿಸುವುದಿಲ್ಲ. ಈ ರೀತಿಯ ದೃಷ್ಟಿಕೋನದ ಸಾಹಿತಿಗಳಿಂದ ಸಾಹಿತ್ಯವಾಗಲೀ, ದೇಶವಾಗಲೀ ಪ್ರಗತಿಯನ್ನು ಕಾಣಲು ಅಸಾಧ್ಯವಾಗಿದೆ. ಸಾಮಾನ್ಯವಾದ ಕಲ್ಲನ್ನು ಒಬ್ಬ ಕಲಾವಿದ ಶಿಲ್ಪವಾಗಿ, ಕಲೆಯಾಗಿ ಕೆತ್ತುವ ಕೌಶಲ ಹಾಗೆಯೇ ಸಾಹಿತಿಗಳು ಕೂಡ ಯಾವುದೇ ಸಾಹಿತ್ಯದ ಪ್ರಕಾರವನ್ನು ತಮ್ಮ ಜೀವನದ ಅನುಭವದ ಆನಂದದಿಂದ ತುಂಬಿಕೊಂಡು ಅದನ್ನು ಸಾಹಿತ್ಯದಲ್ಲಿ ಕಾಣಿಸಬೇಕು. ಸಾಹಿತಿಯಲ್ಲಿ ವಿಷಯದ ಅನುಭವದ ಭಂಡಾರವಿದ್ದು ಅದನ್ನು ಉತ್ತಮವಾಗಿ ನಿರ್ವಹಿಸುವ ಬಗೆಯನ್ನು ತಿಳಿಯದಿದ್ದರೆ ಅರೀತಿಯ ಸಾಹಿತ್ಯದಿಂದ ಸಮಾಜಕ್ಕೆ ಯಾವುದೇ ಪ್ರಯೋಜನವಾಗುವುದಿಲ್ಲವೆಂದು ವಿಶ್ಲೇಷಿಸುತ್ತಾರೆ.

ಕನ್ನಡದಲ್ಲಿ ಚರ್ವಿತ ಚರ್ವಣವನ್ನು ಬಿಟ್ಟು ಸ್ವತಂತ್ರ ವಿಚಾರಗಳು ಸ್ವಕಪೋಲ ಕಲ್ಪಿತ ವಿಷಯಗಳನ್ನು ಒಳಗೊಂಡ ಸಾಹಿತ್ಯವೇ ಕಾಣುತ್ತಿದೆ, ಜೀವನ ಚರಿತ್ರೆ, ವಿಮರ್ಶೆ ಮೊದಲಾದವು ಕೂಡ ಸಾಹಿತ್ಯದಲ್ಲಿ ಬರಬೇಕಿದೆ. ವಿಜ್ಞಾನ ಮತ್ತು ಇತಿಹಾಸದ ಕಡೆಗೆ ನಾವು ಕಣ್ಣೆತ್ತಿಯೂ ನೋಡುವುದಿಲ್ಲ. ಈ ರೀತಿಯ ಧೋರಣೆಯನ್ನು ಹೊಂದಿದ್ದರೆ ಕನ್ನಡ ಸಾಹಿತ್ಯವು ಹೇಗೆ ಸರ್ವೋತ್ತೋಮುಖವಾಗಿ ಬೆಳೆಯಲು ಸಾಧ್ಯ? ಎಂದು ಅ.ನ.ಕೃರವರು ಪ್ರಶ್ನಿಸುತ್ತಾರೆ. ಕನ್ನಡ ಸಾಹಿತ್ಯ ಬೆಳೆಯ ಬೇಕಾದರೆ ಒಂದೇ ಮಾದರಿಯಲ್ಲಿ ಇರದೆ ಹಲವು ವಿಚಾರಗಳನ್ನು, ವಸ್ತುಗಳನ್ನು ಹೊಂದಿರುವ ಮೂಲಕ ಸಾಹಿತ್ಯ ಸೃಷ್ಟಿಗೊಂಡು ಆ ಮೂಲಕ ಕನ್ನಡ ಸಾಹಿತ್ಯ ಬೆಳವಣಿಗೆ ಹೊಂದಬೇಕೆಂಬ ದೃಷ್ಟಿಕೋನವನ್ನು ಪ್ರತಿಪಾದಿಸುತ್ತಾರೆ.

ನಿರಂಜನವರು 'ಕಾಲಕ್ಷೇಪ' ಎಂಬ ವಿಚಾರ ಸಾಹಿತ್ಯದ ಕೃತಿಯ 'ಬರಹಗಾರ ಮತ್ತು ವಸ್ತು' ಎಂಬ ಲೇಖನದಲ್ಲಿ ಉತ್ತಮ ಬರಹಗಾರರಾದವರಿಗೆ ಎರಡು ರೀತಿಯ ಸಂಪತ್ತು ದೂರಕಬೇಕೆಂದು ಒಂದು ಅನುಭವ, ಇನ್ನೊಂದು ನಿರೀಕ್ಷಣೆ, "ಆಳವಾದ ಅನುಭವವಿರುವ ವಸ್ತುವನ್ನು ಎತ್ತಿಕೊಂಡು ಸೃಷ್ಟಿಯಾಗುವುದು ಮಾತ್ರ ಬೆಲೆ ಬಾಳುವಂತಹ ಸಾಹಿತ್ಯ"[೧] ವೆಂದು ಕೆಲವರು ಭಾವಿಸಬಹುದು. ಬರಹಗಾರನಿಗೆ ಉತ್ತಮವಾದ ಅನುಭವದ ವಸ್ತುವಿನಿಂದ ಉತ್ತಮ ಸಾಹಿತ್ಯ ರೂಪುಗೊಳ್ಳುತ್ತದೆ ಎಂಬುದಕ್ಕೆ ಅನುಪಮಾ ನಿರಂಜನರವರ 'ಡಾಕ್ಟರ್ ಡೈರಿ' ಕತೆ ಪ್ರಕಟವಾದಾಗ ಆ ಕತೆಯನ್ನು ವಿಮರ್ಶಿಸಿದ ಎಲ್.ಎಸ್ ಶೇಷಗಿರಿರಾಯರು ಈ ಕತೆಯನ್ನ ಬರೆದವರು ಡಾಕ್ಟರ್ ಇರಬಹುದು ಅಥವಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ ಇರಬೇಕೆಂದು ಊಹಿಸಿದರು. ಅದು ಸತ್ಯವು ಕೂಡ ಅಗಿತ್ತು.ಅನುಪಮಾರವರು ಆ ಕತೆಯನ್ನು ಬರೆದಾಗ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದರು. ಅದೇ ರೀತಿಯಲ್ಲಿ 'ಸರ್ಜನ್ ದಿನಚರಿಯಿಂದ' ಕತೆಯಲ್ಲಿಯೂ ಕೂಡ ಅದೇ ಅನುಭವವಿತ್ತು. ಅನುಭವವಿರುವುದರಿಂದ ಉತ್ತಮ ಕಾವ್ಯ ಬರುತ್ತವೆ ಎಂದು ನಿರ್ಧರಿಸಿದರೆ ಅತ್ಯಲ್ಪ ಕೃತಿಗಳು ನಿರ್ಮಾಣವಾಗುವುದು. ಬರಹಗಾರನಿಗೆ ವಸ್ತು ಸಂಗ್ರಹಕ್ಕೆ ಇನ್ನೊಂದು ಮಾರ್ಗವಿದೆ ಅದು

ನಿರೀಕ್ಷಣೆಯಿಂದ ಸಾಧ್ಯ. ಒಬ್ಬ ಬರಹಗಾರ ಸುತ್ತುಮುತ್ತಲಿನ ಬದುಕನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಾನೋ ಅಷ್ಟೇ ವಾಸ್ತವವಾಗಿ ಪಾತ್ರಗಳು ಆತನ ಕೃತಿಯಲ್ಲಿ ಮೂಡುತ್ತವೆ.

ನಿರೀಕ್ಷಣೆಯ ಸಾಮರ್ಥ್ಯವೆಂಬುದು ಬರಹಗಾರರಲ್ಲಿ ಹೆಚ್ಚಾದಷ್ಟು ಕೃತಿಯ ಬೆಲೆಯು ಕೂಡ ಹೆಚ್ಚಾಗುತ್ತದೆ. ಉದಾಹರಣೆಯಾಗಿ ತ್ರಿವೇಣಿಯವರ ಕಾದಂಬರಿ 'ಬೆಕ್ಕಿನ ಕಣ್ಣು'. ಇದೊಂದು ಮಾನಸಿಕ ರೋಗಕ್ಕೆ ಸಂಬಂಧಿಸಿದ ಕಥಾವಸ್ತುವಾಗಿದೆ. ಸಮಾಜದಲ್ಲಿ ಮಾನಸಿಕ ರೋಗಿಗಳ ಪರಿಚಯ, ವ್ಯಕ್ತಿಯ ಗುಣ ಮೊದಲಾದವುಗಳನ್ನು ನಿರೀಕ್ಷಣೆಗಳಿಂದಲೇ ಮನಃಶಾಸ್ತ್ರದ ಹಿನ್ನೆಲೆಯಲ್ಲಿ ಪಾತ್ರಗಳನ್ನು ನೈಜವಾಗಿ ಚಿತ್ರಿಸಿದ್ದಾರೆ. ಇಲ್ಲಿ ತ್ರಿವೇಣಿಯರು ವೈದ್ಯರು ಅಲ್ಲ ಅಥವಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಯೂ ಆಗಿರಲಿಲ್ಲ. ಸಮಾಜವನ್ನು ಉತ್ತಮ ನಿರೀಕ್ಷಣೆಯಿಂದ ಒಬ್ಬ ಬರಹಗಾರ ಉತ್ತಮವಾದ ಕಾಲಕೃತಿಯನ್ನು ಸೃಷ್ಟಿಸಲು ಸಾಧ್ಯವೆಂದು ಬರಹಗಾರನ ವಸ್ತುವಿಗೆ ಸಂಬಂಧಿಸಿದಂತೆ ಅನುಭವ ಮತ್ತು ನಿರೀಕ್ಷಣೆಗಳು ಬಹಳ ಮುಖ್ಯವೆಂದು ತಿಳಿಸುತ್ತಾರೆ.

ನಿರಂಜನರವರು ಚರ್ವಿತ ಚರ್ವಣಗಳ, ಸಪ್ಪೆ ವಸ್ತುಗಳ ಗಡಿಯನ್ನು ದಾಟಿ ನಮ್ಮ ಸಾಹಿತ್ಯ ಮೆಲ್ಲನೆ ಮುಂದುವರಿಯುತ್ತಿದೆ. ಆಧುನಿಕ ಸಾಹಿತ್ಯವು ಭಿನ್ನ, ವಸ್ತು, ತಂತ್ರ ಪಾತ್ರಗಳನ್ನು ಸೃಷ್ಟಿಸುವ ಮೂಲಕ ಸಾಹಿತ್ಯ ಬೆಳೆಯಲು ಬರಹಗಾರನಿಗೆ ಆಳವಾದ ಅನುಭವ ಮತ್ತು ಸೂಕ್ಷ್ಮವಾದ ನಿರೀಕ್ಷಣೆಗಳು ಬಹಳ ಮುಖ್ಯ ಪಾತ್ರ ವಹಿಸುತ್ತವೆ. ಸಾಹಿತ್ಯದಲ್ಲಿ ಬರೆದದ್ದು ಕಲಾತ್ಮಕವಾಗಿರಬೇಕೆಂದು ಅದು ಮೂಲಭೂತವಾದ ಅಂಶವಾಗಿದೆ. ಕಲಾತ್ಮಕತೆಯಿಲ್ಲದೆ ಹೋದರೆ ವೈದ್ಯರು ಬರೆದ ಔಷದೀಯ ಚೀಟಿಯ ಹಾಗೆ, ಗುಮಾಸ್ತರ ಲೆಕ್ಕ ಪತ್ರದ ಹಾಗೆ, ಗೃಹಣಿಯ ಸಾಮಾನು ಪಟ್ಟಿಯ ಹಾಗೆ ಆದಿತ್ತು. ಹಾಗಾಗಿ ಅನುಭವ, ನಿರೀಕ್ಷಣೆಯ ಜೊತೆಗೆ ಸಾಹಿತಿಯಾದವನಿಗೆ ಕಲಾತ್ಮಕತೆಯಿಂದ ಬರೆಯುವ ಶೈಲಿಯು ಮುಖ್ಯವೆಂದು ಚರ್ಚಿಸುತ್ತಾರೆ. ಅ.ನ.ಕೃ ರವರು ಸಾಹಿತಿಯ ಅನುಭವದಿಂದ ಹೊಸ ಹೊಸ ಸಾಹಿತ್ಯ ಪ್ರಕಾರಗಳ ಕಡೆ ಗಮನ ಹರಿಸಿ ಉತ್ತಮ ಸಾಹಿತ್ಯ ಸೃಷ್ಟಿಸಬೇಕು ಎಂದು ಹೇಳಿದರೆ, ಸಾಹಿತಿಯಾದವನಿಗೆ ಉತ್ತಮ ಸಾಹಿತ್ಯ ಸೃಷ್ಟಿಸಲು ಅನುಭವ ಮಾತ್ರವಲ್ಲದೇ ನಿರೀಕ್ಷಣೆ, ಕಲಾತ್ಮಕತೆಯಿಂದ ಬರೆಯುವ ಶೈಲಿ ಇವುಗಳು ಅವಶ್ಯಕ ಎಂಬುದನ್ನು ನಿರಂಜನರವರು ತಿಳಿಸುತ್ತಾರೆ.

'ಬೆಳೆಯುತ್ತಿರುವ ಕನ್ನಡ ಸಾಹಿತ್ಯ' ಎಂಬ ಲೇಖನದಲ್ಲಿ ಅ.ನ.ಕೃ ರವರು ಸಾಹಿತಿಯ ನಾಟಕವಾಗಲೀ, ಕಾದಂಬರಿಯಾಗಲೀ ಅಥವಾ ವಿಮರ್ಶೆಯಾಗಲೀ ಸಾಹಿತ್ಯದ ಬರವಣಿಗೆಯಲ್ಲಿ ತೊಡಗಿಕೊಂಡಿದ್ದರು ಆತ ತನ್ನ ಜೀವನದ ಆನಂದದಿಂದ ತುಂಬಿಕೊಂಡು ಅದನ್ನು ಸಾಹಿತ್ಯದಲ್ಲಿ ಪ್ರತಿಬಿಂಬಿಸಬೇಕು. ಸಾಹಿತಿಗೆ ವಿಪುಲವಾದ ವಿಷಯ ಭಂಡಾರವಿದ್ದರು ಆತ ಅದನ್ನು ಉತ್ತಮವಾಗಿ ನಿರ್ವಹಿಸುವ ಬಗೆಯನ್ನು ತಿಳಿಯದಿದ್ದರೆ ಅದು ಬರೀ ವಿಷಯಗಳ ಸಂಗ್ರಹದಿಂದ ವರ್ತಮಾನ ಪತ್ರಿಕೆಯ ಹಾಗೆ ವರದಿಯಾಗುತ್ತದೆಯೇ ಹೊರತು ಸಾಹಿತ್ಯವಾಗುವುದಿಲ್ಲ. ಹಾಗೆಯೇ ಸಾಹಿತಿ ನಿರೂಪಣಾ ಶಕ್ತಿ ಪಡೆದಿದ್ದರು ಸಾಲದು, ವಿಷಯ ಸಂಗ್ರಹ ಅಥವಾ ಅನುಭವ ಮತ್ತು ನಿರೂಪಣಾ ಶಕ್ತಿ ಸೇರಿ ಅದನ್ನು ಸಮನ್ವಯಗೊಳಿಸಬಲ್ಲ ಚೇತನದ ಬೆಂಬಲ ಬೇಕು. ಸಾಹಿತ್ಯ ನಿರ್ಮಾಣದಲ್ಲಿ ವಿಷಯ ಸಂಗ್ರಹ, ನಿರೂಪಣಾ ಶಕ್ತಿ ಮತ್ತು ಇವೆರಡನ್ನು ಸಮನ್ವಯಗೊಳಿಸುವ ಶಕ್ತಿ ಇವುಗಳಿಂದ ಸತ್ವಶಾಲಿಯಾದ ಸಾಹಿತ್ಯ ನಿರ್ಮಾಣವಾಗುತ್ತದೆ ಎಂದು ಪ್ರತಿಪಾದಿಸುತ್ತಾರೆ.

ಸಜೀವ ಸಾಹಿತ್ಯ ಕೃತಿಯ 'ವಿಮರ್ಶಕನ ಹಾದಿ' ಎಂಬ ಲೇಖನದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಅಲ್ಲಿ ವಿಮರ್ಶಾ ಸಾಹಿತ್ಯ ಬೆಳೆಯದೆ ಇರಲು ಕಾರಣವೆಂದರೆ

ಇದೀ ಪ್ರಾಚೀನ ಕನ್ನಡ ಸಾಹಿತ್ಯ ಅರಮನೆಗಳತ್ತ ಮುಖ ಮಾಡಿತು. ಸಾಹಿತ್ಯಕ್ಕೆ ವಿಮರ್ಶಕ ಬೇಕೆ? ವಿಮರ್ಶನ ಹಂಗಿಲ್ಲದೆ ಸಾಹಿತ್ಯ ಬೆಳೆಯಲಾರದೆ ಎಂಬೆರಡು ಪ್ರಶ್ನೆಗಳನ್ನು ಎತ್ತುತ್ತಾರೆ. ಕವಿಯು ಸೃಷ್ಟಿಸಿದ ಸಾಹಿತ್ಯದ ಜೊತೆಗೆ ಓದುಗನ ಬಳಿ ಒಯ್ಯಲು ಸಹೃದಯನ ನೆರವು ಬೇಕು. ಕವಿಯು ಬಳಸಿದ ಭಾಷೆ, ರಚನೆ, ಲಲಿತವಾಗಿರುವುದರಿಂದ ಓದುಗನ ಮನಸ್ಸಿಗೆ ಮುಟ್ಟುತ್ತದೆ. ಓದುಗನು ಕ್ರಿಯಾತ್ಮಕವಾಗಿ ಅಲ್ಲದಿದ್ದರು ಮಾನಸಿಕವಾಗಿ ಮಹಾಕವಿಯಾಗಿರದಿದ್ದರೆ ಕವಿಯು ಬರೆದ ವಿಚಾರವನ್ನು ಅನುಭವಿಸಲಾರ. ಕವಿ, ವಿಮರ್ಶಕ ಒಂದೇ ಹಾದಿಯಲ್ಲಿ ನಡೆಯುತ್ತಾರೆ. ಕವಿಯು ಒಂದು ಕಲಾಕೃತಿಯಲ್ಲಿ ಒಂದು ವಿಷಯವನ್ನು ಇಡಿಯಾಗಿ ಹೇಳಿದರೆ, ವಿಮರ್ಶಕ ಅದನ್ನು ಬಿಡಿ ಬಿಡಿಯಾಗಿ ನೋಡುತ್ತಾನೆ. ಕವಿ ಕೆಲವೊಮ್ಮೆ ಮುಚ್ಚಿ ಹೇಳಿದ ವಿಚಾರವನ್ನು ವಿಮರ್ಶಕ ಬಿಚ್ಚಿ ಹೇಳುತ್ತಾನೆ. ಇವು ಕವಿ ಮತ್ತು ವಿಮರ್ಶಕನಿಗೆ ಇರುವ ವ್ಯತ್ಯಾಸಗಳಾಗಿ ಅ.ನ.ಕೃ ಗುರುತಿಸುತ್ತಾರೆ.

ಅರಿಸ್ಟಾಟಲ್, ಲೆಸ್ಸಿಂಗ್, ಡ್ರೈಡನ್ ಮೊದಲಾದ ಪಾಶ್ಚಿಮಾತ್ಯ ಮೀಮಾಂಸಕರು ವಿಮರ್ಶಕನ ಹಾದಿಯನ್ನು ನಿರ್ದೇಶಿಸಿದರು. ಆದರೆ ಇಂದು ಸಾಹಿತಿಯು ಬರೆದ ಎಲ್ಲಾ ವಿಷಯಗಳನ್ನು ವೈಯಕ್ತಿಕವಾಗಿ ನೋಡುವ ದೃಷ್ಟಿಕೋನ ಬಿಟ್ಟು ಸಾಮೂಹಿಕವಾಗಿ ನೋಡುವ ಕ್ರಮ ಬೆಳೆಯುತ್ತಿದೆ. ಕನ್ನಡದಲ್ಲಿ ನವೋದಯ ಕಾಲಘಟ್ಟದಿಂದ ವಿಮರ್ಶೆಯು ಬೆಳೆದು ಬಂದಿದ್ದು ಅದು ರಸ ವಿಮರ್ಶೆಯಾಗಿದೆ. ಕವಿಯ ಭಾವಕ್ಕಿಂತ ರಸವೇ ಮುಖ್ಯವಾಗಿತ್ತು. ಕವಿಯು ಅನೇಕ ವರ್ಷಗಳ ಸಾಧನೆಯ ಪ್ರಯತ್ನದಿಂದ ಬರೆದ ಕೃತಿಯನ್ನು ವಿಮರ್ಶಕ ಒಂದೇ ಏಟಿನಿಂದ ಒಡೆಯುವ ಪ್ರಯತ್ನವನ್ನು ಮಾಡುವ ಮೂಲಕ ವಿಮರ್ಶೆ ಎಂಬುದು ವ್ಯಕ್ತಿ ಕೇಂದ್ರಿತ ಧೋರಣೆಯಾಗುತ್ತಿರುವುದು ಸರಿಯಿಲ್ಲವೆಂದು, ಕಟುವಾಗಿ ಬರೆದು ಕವಿಯ ಹೃದಯಕ್ಕೆ ಕಿರುಕುಳ ಕೊಡುವ ವಿಮರ್ಶಕನ ಮನಃಸ್ಥಿತಿಯನ್ನು ಹಾಗೂ ವಿಮರ್ಶೆಯ ಹೆಸರಿನಲ್ಲಿ ಕೃತಿಯನ್ನು ವಿಮರ್ಶಿಸುವುದಕ್ಕಿಂತ ಕವಿಯನ್ನು ವಿಮರ್ಶಿಸುವ ಧೋರಣೆಯು ಕೂಡಾ ಸರಿಯಲ್ಲ. ಕ್ರಿಯಾತ್ಮಕವಾದ ಸಾಹಿತ್ಯ ಎಷ್ಟು ಮುಖ್ಯವೋ, ಅಷ್ಟೇ ಮುಖ್ಯವಾಗಿ ಕ್ರಿಯಾತ್ಮಕವಾದ ವಿಮರ್ಶಕನು ಮುಖ್ಯ. ವಿಮರ್ಶಕನು ತಾನು ಕೂಡ ಒಬ್ಬ ಸಹೃದಯನೆಂದು ತಿಳಿದರೆ ಕ್ರಿಯಾತ್ಮಕ ವಿಮರ್ಶೆಯ ಸೃಷ್ಟಿಯು ಸಾಧ್ಯವಾಗುತ್ತದೆ ಎಂದು ವಿಮರ್ಶಕನ ಹಾದಿ ಹೇಗೆ ಇರಬೇಕೆಂದು ವಿಶ್ಲೇಷಿಸುತ್ತಾರೆ.

'ಸಾಹಿತ್ಯ ಮತ್ತು ಜೀವನ' ಕೃತಿಯ 'ವಿಮರ್ಶಕ' ಎಂಬ ಲೇಖನದಲ್ಲಿ ಮಾರ್ಗದರ್ಶಿಯಾಗಿ, ಜ್ಞಾನದೂತನಾಗಿ ಅ.ನ.ಕೃ ವಿಮರ್ಶಕನನ್ನು ನೋಡುತ್ತಾರೆ. ಜನತೆಯ ಹತ್ತಿರ ಉತ್ತಮ ಸಾಹಿತಿಗಳ ಕೃತಿಗಳು ಹೋಗಬೇಕು ಇಲ್ಲವಾದರೆ ಆ ಜ್ಞಾನವನ್ನು ಅವರಲ್ಲಿಗೆ ಕೊಂಡುಹೋಗಿ ಹಂಚಿ ತಿಳುವಳಿಕೆಯನ್ನುಂಟು ಮಾಡುವ ಕೆಲಸ ವಿಮರ್ಶಕನು ಮಾಡಬೇಕು. ವಿಮರ್ಶಕರು ಗ್ರಂಥವನ್ನು ವಿಮರ್ಶಿಸುವುದರ ಬದಲು ಕೃತಿಗಾರರನ್ನು ವಿಮರ್ಶಿಸುತ್ತಾರೆ. ವಿಮರ್ಶಕ ಸಂಬಂಧ ಯಾವಾಗಲೂ ಜನತೆಯೊಂದಿಗೆ ಇರಬೇಕೆ ಹೊರತು ಕವಿಯೊಂದಿಗಲ್ಲ. ಕೆಲವು ಕನ್ನಡದ ವಿಮರ್ಶಕರು ಬರಹಗಾರನ ಮೇಲಿನ ಪ್ರೀತಿಯಿಂದ ಗೌರವದಿಂದ ಕೃತಿಯನ್ನು ವಿಮರ್ಶಿಸುತ್ತಾರೆ. ಬರಹಗಾರನನ್ನು ವೈಭವೀಕರಿಸುವ, ಬೇಕಾದವರಿಗೆ ಮನ್ನಣೆ ನೀಡುವ ಮತ್ತು ಬೇಡದವರ ಖಂಡನೆ ಮಾಡುವ ದೃಷ್ಟಿಕೋನ ಉತ್ತಮ ವಿಮರ್ಶಕನ ಧೋರಣೆಗಳಲ್ಲ ಎಂಬುದಾಗಿ ದಾಖಲಿಸುತ್ತಾರೆ.

ಅ.ನ.ಕೃ ವಿಮರ್ಶಕ ಮತ್ತು ವಿಮರ್ಶಕನ ಹಾದಿ ಹೇಗೆ ಇರಬೇಕೆಂದು ಚರ್ಚಿಸಿದರೆ ನಿರಂಜನರವರು ಸಾಹಿತಿಗಳ ಕಮಿಟ್‌ಮೆಂಟ್‌ಗೆ ಸಂಬಂಧಿಸಿದಂತೆ 'ಬುದ್ಧಿ ಭಾವ ಬದುಕು' ಕೃತಿಯಲ್ಲಿ

ಕಮಿಟ್‌ಮೆಂಟ್ ಯಾರಿಗೆ ? ಯಾವುದಕ್ಕೆ ಎಂಬ ಲೇಖನದಲ್ಲಿ ಕಮಿಟ್‌ಮೆಂಟ್ ಎಂಬ ಪದದ ಅರ್ಥವು ಭಿನ್ನ ಸ್ವರೂಪವನ್ನು ಪಡೆದಿದೆ. ವಚನಬದ್ಧ ವ್ಯಕ್ತಿ, ವಚನ ಬದ್ಧತೆ, ಹಣದ ವಿಚಾರ ಬಂದಾಗ ತುಂಬಾ ಕಮಿಟ್‌ಮೆಂಟ್ಸ್ ಇವೆ, ಕಟ್ಟುಪಾಡು, ಕಮಿಟ್ ಆದವನು, ಕಟ್ಟುಪಾಡಿಗೆ ಒಳಗಾದವನು ಎಂಬ ಅನೇಕ ಅರ್ಥಗಳಿವೆ. ಹಾಗೆಯೇ ಒಂದು ತತ್ವಕ್ಕೆ, ರಾಜಕೀಯ ಪಕ್ಷಕ್ಕೆ, ರಾಜಕೀಯ ದರ್ಶನಕ್ಕೆ, ಸಾಮಾಜಿಕ ಸಿದ್ಧಾಂತಕ್ಕೆ, ಸಂಘಟನೆಗೆ, ಧೋರಣೆಗೆ ಹೀಗೆ ಭಿನ್ನ ಭಿನ್ನವಾದ ಕಮಿಟ್‌ಮೆಂಟ್ ಇರುತ್ತದೆ. ಗ್ರೀಕ್ ಮಹಾ ಕಾವ್ಯ ಬರೆದ ಹೋಮರ್, ಮಹಾಭಾರತ ಬರೆದ ವ್ಯಾಸರಿಗೆ ಕಮಿಟ್‌ಮೆಂಟ್ ಇತ್ತೇ ಅಥವಾ ಇಲ್ಲವೇ? ಎಂದು ಪ್ರಶ್ನಿಸುತ್ತಾರೆ.

ಭಾರತ ಮತ್ತು ಗ್ರೀಸ್‌ನಲ್ಲಿ ಬೆಳೆದು ಬಂದ ಕಾವ್ಯಗಳು, ಆಧುನಿಕ ಚೀನಿ ನೀತಿ ಕಥೆಗಳು ಎಲ್ಲವೂ ಸಮಾಜದ ಒಳಿತಿಗಾಗಿ ಬಂದಂತಹ ಕಮಿಟೆಡ್, ಯಾವುದೋ ನೀತಿ ಮತ್ತು ತತ್ವಕ್ಕೆ ಸಂಬಂಧಿಸಿದ ವಿಚಾರಕ್ಕೆ ಮಹಾಶಿಲ್ಪಿ ಮೈಕೆಲೆಂಜೆಲೋ, ಮಿಲ್ಟನ್, ಗಯಟೆ, ಲಿಯಾನಾರ್ಡ್ ಡಾ ವಿಂಚಿ ಇವರೆಲ್ಲರದು ಕೂಡ ಅಸಾಧಾರಣ ಕಮಿಟ್‌ಮೆಂಟ್ ಆಗಿದೆ. ಕನ್ನಡದಲ್ಲಿಯೂ ಪಂಪ, ಸರ್ವಜ್ಞ, ಆಧುನಿಕ ಕನ್ನಡದ ನವೋದಯದ ದ.ರಾ. ಬೇಂದ್ರೆ, ಕುವೆಂಪು ಇವರಿಗೆ ತಮ್ಮ ಕಮಿಟ್‌ಮೆಂಟ್ ಅರಿವು ಇತ್ತೇ ಎಂಬುದು ಒಂದು ಕಾಲಘಟ್ಟದ ಸಾಹಿತಿಗಳಲ್ಲಿ ಆ ರೀತಿಯ ಧೋರಣೆ ಇತ್ತೇ ಇಲ್ಲವೊ ಅದು ತಿಳಿಯದು. ಆದರೆ ಒಂದು ಉತ್ತಮ ಕೃತಿಗಳಲ್ಲಿ ವಿಚಾರ–ಧೋರಣೆಗಳಿಂದ ಸಮಾಜಕ್ಕೆ ಒಳಿತನ್ನು ಬೀರುವ ಅಂಶಗಳು, ಪ್ರಭಾವಿಸುವ, ಪ್ರೇರೇಪಿಸುವ ಮೂಲಕ ಸಮಾಜವನ್ನು ಪ್ರತಿನಿಧಿಸಿದರೆಂದು ವಿಶ್ಲೇಷಿಸುತ್ತಾರೆ.

ನಂತರ ಕೆಲವು ಕಾಲಘಟ್ಟದ ಬರಹಗಾರರು ಕಮಿಟ್‌ಮೆಂಟ್ ಮೂಲಕವೇ ಆ ಕಾಲಘಟ್ಟದ ವಿಚಾರಗಳಿಗೆ ಪ್ರತಿಕ್ರಿಯಿಸಿದ್ದಾರೆ. ಭಾರತದಲ್ಲಿ ಶರತ್ ಚಂದ್ರ, ಪ್ರೇಮ್‌ಚಂದ್‌ರು ತಮ್ಮ ಕತೆ ಕಾದಂಬರಿಗಳಿಂದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರೇರಣೆ ನೀಡಿದ್ದಾರೆ. ಕಲಾವಿದರು, ಬರಹಗಾರರು ತಮ್ಮ ಬರವಣಿಗೆಯ ಮೂಲಕ ಜನತೆಯನ್ನು ಪ್ರೇರೇಪಿಸಿದ್ದು ಕೂಡ ಕಮಿಟ್‌ಮೆಂಟ್ ಆಗಿದೆ. ವಿಮರ್ಶಕರಾದವರು ಪಾರದರ್ಶಕ, ದೂರದರ್ಶಕದ ಮೂಲಕ ಬರವಣಿಗೆಯಲ್ಲಿ ಕಮಿಟ್‌ಮೆಂಟ್ ಹುಡುಕುವುದನ್ನು ಕಾಣಬಹುದೆಂದು ತಿಳಿಸುವ ನಿರಂಜನರು ಆ ಮೂಲಕ ವಿಮರ್ಶಕರ ವಿಮರ್ಶೆ ದಾಟಿಯನ್ನು ಪರೋಕ್ಷವಾಗಿ ತಿಳಿಸುತ್ತಾರೆ. ಹೋಮರ್, ವ್ಯಾಸರವರಿಗೆ ಕಮಿಟ್‌ಮೆಂಟ್ ಬಗ್ಗೆ ಅರಿವೇ ಇರಲಿಲ್ಲವೆಂದು ಸಾಮಾಜಿಕ ನೀತಿ ನಿಯಮಗಳಿಗೆ ಅನುಗುಣವಾಗಿ ಒಬ್ಬರಿಗಿಂತ ಇನ್ನೊಬ್ಬರು ಭಿನ್ನವಾಗಿ ಬರೆದರು.

ಒಬ್ಬ ಲೇಖಕ ಅಥವಾ ಕಲಾವಿದ, ವಿಮರ್ಶಕ ಕಮಿಟ್‌ಮೆಂಟ್ ಎಂಬ ಅಣೆಪಟ್ಟಿ ಕಟ್ಟಿಕೊಂಡು ಒಂದು ಉತ್ತಮ ಕೃತಿಗಳನ್ನು ರಚಿಸಬಹುದು ಅಥವಾ ರಚಿಸದೇ ಇರಬಹುದು. ಆದರೆ ಕಮಿಟ್‌ಮೆಂಟ್ ಹೆಸರಿನಲ್ಲಿ ತಮ್ಮ ಮಾನವೀಯತೆಯನ್ನು ಕಳಚಿಡಬಾರದು. ಅನುಕಂಪ, ಕರುಣೆ, ಬದುಕಿನ ಆರಾಧನೆ, ಸತ್ಯದ ಮಾರ್ಗ, ಅನ್ಯಾಯಕ್ಕೆ ವಿರುದ್ಧವಾದ ನಿಲುವು ಇವೆಲ್ಲವೂ ಕಮಿಟ್‌ಮೆಂಟ್‌ಗಳೇ ಆಗಿವೆ. ಕಮಿಟ್‌ಮೆಂಟ್‌ಗಳು ಇರಬೇಕಾದುದು ಬದುಕಿಗೆ, ನಾಶಗೊಳ್ಳದ ಬದುಕಿಗಾಗಿ ಇರಬೇಕು. ಬದುಕನ್ನು ಉತ್ತಮಪಡಿಸಲು ಯಾವುದೋ ಸಾಧ್ಯವೋ ಅಂತಹ ಕಮಿಟ್‌ಮೆಂಟನ್ನು ಸ್ವಾಗತಿಸುತ್ತೇನೆ ಎಂದು ನಿರಂಜನರವರು ಕಮಿಟ್‌ಮೆಂಟ್‌ಗೆ ಸಂಬಂಧಿಸಿದಂತೆ ಚರ್ಚಿಸುತ್ತಾರೆ.

'ಸಾಹಿತ್ಯ ಮತ್ತು ಇತಿಹಾಸ ಪ್ರಜ್ಞೆ' ಎಂಬ ಲೇಖನದಲ್ಲಿ ಇತಿಹಾಸ ಪ್ರಜ್ಞೆ ಎಂಬುದು ಆಳುವವನಿಗೂ ಪ್ರಜೆಗಳಿಗೂ, ಸಾಮಾಜಿಕ ಪ್ರಜ್ಞೆ ಎಷ್ಟು ಅಗತ್ಯವೋ ಅಷ್ಟೇ ಲೇಖಕನಿಗೂ ಮುಖ್ಯವಾದುದುದು. ಈ ಪ್ರಜ್ಞೆಯಿಂದ ಬರಹಗಾರ ಉತ್ತಮ ಕೃತಿ ಸೃಷ್ಟಿಸಲು ಸಾಧ್ಯ ನಾಳೆಯೆಂಬುದನ್ನು ಉತ್ತಮವಾಗಿ ಸಾಹಿತ್ಯ ಕೃತಿ ಸೃಷ್ಟಿಸಲು ಈ ಇತಿಹಾಸ ಪ್ರಜ್ಞೆಯಿಂದಾಗಿ ಸಾಧ್ಯವಾಗುತ್ತದೆ. 'ಸಾಹಿತಿ ಮತ್ತು ಸಮಾಜ' ಎಂಬ ಲೇಖನದಲ್ಲಿ ಇವೆರಡರಲ್ಲಿ ಸಂಬಂಧವಿದೆ. ಕೆಲವರು ಆತ್ಮನಂದಕ್ಕಾಗಿ ಬರೆಯುತ್ತಿದ್ದೇನೆ ಎಂದರು ಅವರು ಅದನ್ನು ಒಬ್ಬರೆ ಇಟ್ಟುಕೊಳ್ಳುವುದಿಲ್ಲ. ನಾಲ್ಕಾರು ಜನರಿಗೆ ಕೊಟ್ಟು ಪ್ರಶಂಸೆ ಬಂದಾಗ ಸಂತೋಷ ಪಡುವರು. ಈ ರೀತಿಯ ಹೊಗಳಿಕೆಯಿಂದ ಆನಂದ ಸಿಗುತ್ತದೆ ಎನ್ನುವುದು ಸುಳ್ಳೆಂದು, ಬರೆದು ಮುಗಿಸುವವರೆಗೆ ಕೃತಿಯು ಸಾಹಿತಿಯ ಸ್ವತ್ತು ಆಗಿದ್ದು ನಂತರ ಅದು ಜನತೆಯ ಸ್ವತ್ತು. ಬರಹಗಾರನಿಗೆ ಬರೆಯಲು ಸ್ವಾತಂತ್ರ್ಯವಿರುವಂತೆ ಆ ಕೃತಿಯನ್ನು ಓದುವನಿಗೂ ಅಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವಿದೆ. ಸಾಹಿತಿಯಾದವನ ಪ್ರಮುಖ ಜವಬ್ದಾರಿಯೆಂದರೆ ತನ್ನ ಕೃತಿಗಳ ಮೂಲಕ ಸಮಾಜವನ್ನು ರೂಪಿಸುವುದು. ಹಾಗೆಯೇ ಚರ್ವಿತ ಚರ್ವಣದ ವಸ್ತುವನ್ನು ಬರೆದು ಪ್ರಕಟಿಸುವುದು ಕೂಡ ಅನುಭವವಿಲ್ಲದೇ ಇರುವುದು ವಸ್ತುವಿನ ಅಭಾವದಿಂದಾಗಿದೆ. ವಾಸ್ತವವಾದದ ಆಧಾರದ ಮೇಲೆ ಬರೆಯುವನಿಗೆ ವಸ್ತುವಿನ ಅಭಾವವಿಲ್ಲವೆಂದು, ಬದುಕಿನಲ್ಲಿ ಶ್ರದ್ದೆ, ಜನರೊಡನೆ ಸಂಪರ್ಕ, ಮಾನವೀಯತೆ ಇರುವವರಿಗೆ ಸ್ಫೂರ್ತಿಯು ಬತ್ತುವುದಿಲ್ಲವೆಂದು, ಸಮಾಜದಿಂದ ದೂರವಾದವರಿಗೆ ಕಲ್ಪನಾಶಕ್ತಿ, ಇನ್ನೊಂದು ಭಾಷೆಯ ಕೃತಿಯನ್ನು ಅವಲಂಬಿಸುವವರಿಗೆ ಮಾತ್ರ ವಸ್ತುವಿಗೆ ಬರಗಾಲ ಬರುತ್ತದೆ ಎಂದು 'ವಸ್ತು ಇಲ್ಲದ ಕೃತಿ' ಲೇಖನದಲ್ಲಿ ವಿಶ್ಲೇಷಿಸುತ್ತಾರೆ.

ರಾಷ್ಟ್ರೀಯ ಭಾವೈಕ್ಯತೆಯನ್ನು ಜನತೆಯಲ್ಲಿ ಉಂಟು ಮಾಡಲು ಅ.ನ.ಕೃರವರು ಸ್ವಾತಂತ್ರ್ಯ ನಂತರ ಭಾರತದಲ್ಲಿ ಜಾತಿ, ಮತ, ಪ್ರಾಂತ್ಯ, ಭಾಷೆ ಮೊದಲಾದವುಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿರುವುದರಿಂದ ಜಾತಿ, ಮತ, ಭಾಷೆಗಳ ಹೆಸರಿನಲ್ಲಿ ಆನೇಕ ದುರ್ಘಟನೆಗಳು ನಡೆದು ರಾಷ್ಟ್ರದ ಐಕ್ಯತೆಗೆ ಬಲವಾದ ಪೆಟ್ಟು ಬಿದ್ದಿದೆ. ಇದನ್ನು ಸರಿಪಡಿಸಲು ವ್ಯಕ್ತಿ ತನ್ನ ಹಿತವನ್ನು ಮರೆತು ಸಮಷ್ಟಿಯ ಹಿತವನ್ನು ಬಯಸುತ್ತಾನೋ ಆಗ ಭಾವೈಕ್ಯತೆಯು ಮೂಡುತ್ತದೆ. ಈ ಸಮಷ್ಟಿ ಹಿತವನ್ನು ನಮ್ಮ ಉಪನಿಷತ್ತು, ಜಗತ್ತಿನ ಎಲ್ಲಾ ಮಹಾನ್ ಪುರುಷರು ಹೇಳಿದ ವಿಚಾರಗಳನ್ನು ಅನುಸರಿಸುವುದರ ಜೊತೆಗೆ ಅನ್ಯೈಕ್ಯತೆಯನ್ನು ಹೋಗಲಾಡಿಸಬಹುದೆಂದು ಅ.ನ.ಕೃರವರು ಸಾರ್ಥಕ ಸಾಹಿತ್ಯ ಕೃತಿಯ 'ಭಾವೈಕ್ಯತೆ' ಎಂಬ ಲೇಖನದಲ್ಲಿ ಚರ್ಚಿಸುತ್ತಾರೆ.

ರಾಷ್ಟ್ರೀಯ ಭಾವೈಕ್ಯತೆಯನ್ನು ಉಂಟು ಮಾಡಲು ಕೇಂದ್ರ ಸಾಹಿತ್ಯ ಅಕಾಡಮಿ ಮೊದಲಾದ ಅನೇಕ ಸಂಘ ಸಂಸ್ಥೆಗಳು, ವಿವಿಧ ಉಪನ್ಯಾಸ, ಕಾರ್ಯಾಗಾರ, ಶಿಬಿರಗಳನ್ನು ಏರ್ಪಡಿಸುತ್ತದೆ. ರಾಷ್ಟ್ರೀಯ ಭಾವೈಕ್ಯತೆ ಮೂಡಿಸುವಲ್ಲಿ ಲೇಖಕರ ಪಾತ್ರ ಹೇಗಿರಬೇಕೆಂದು, ಭಾರತದ ಉಪಾಧ್ಯಕ್ಷರಾದ ಡಾ. ಜಾಕೀರ್ ಹುಸೇನ್ ರವರು "ಭಾಷಣಗಳಿಂದ ಪ್ರಯೋಜನವಿಲ್ಲ. ಅದರಿಂದೇನೂ ರಾಷ್ಟ್ರೀಯ ಭಾವೈಕ್ಯ ಸಾಧಿಸುವುದಿಲ್ಲ, ಮಾತು ಕಡಿಮೆ ಮಾಡಬೇಕು. ಕೃತಿಯಲ್ಲಿ ಅದನ್ನು ತೋರಬೇಕು"[3] ಎಂಬ ಹೇಳಿಕೆಯೊಂದಿಗೆ ಯಾವುದೇ ಉಪನ್ಯಾಸ, ಶಿಬಿರ, ಕಾರ್ಯಾಗಾರ ಭಾಷಣಗಳಿಂದ ರಾಷ್ಟ್ರೀಯ ಭಾವೈಕ್ಯತೆಯನ್ನು ಉಂಟು ಮಾಡಲು ಸಾಧ್ಯವಿಲ್ಲ. ಲೇಖಕರು ತಮ್ಮ ಬರವಣಿಗೆಯ ಮೂಲಕ ಅಥವಾ ಸಾಹಿತ್ಯ ಕೃತಿಯ ಮೂಲಕ ಓದುಗನನ್ನು ರಾಷ್ಟ್ರೀಯ ಭಾವೈಕ್ಯತೆಯನ್ನುಂಟು ಮಾಡುವಂತೆ ಪ್ರೇರೇಪಿಸಬೇಕು. ಜನತೆಯಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸಲು ಸಾಹಿತಿಯ

ಜವಾಬ್ದಾರಿಯನ್ನು ಅಂಕಣ ಕೃತಿಯ 'ಭಾಷಣದಿಂದ ಭಾವೈಕ್ಯ' ಎಂಬ ಲೇಖನದಲ್ಲಿ ನಿರಂಜನರು ತಿಳಿಸುತ್ತಾರೆ.

ಚೀನಾವು ಭಾರತದ ಮೇಲೆ ೧೯೬೧ ರಲ್ಲಿ ಆಕ್ರಮಣ ಮಾಡಿದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ರಾಷ್ಟ್ರ ರಕ್ಷಣೆಗೆ ಸಾಹಿತಿಗಳು ಏನು ಮಾಡಬಹುದೆಂದು ಚರ್ಚಿಸಲು ಸಭೆ ಕರೆದಿದ್ದರು. ಆಗ ಅನೇಕ ಬರಹಗಾರರು ಸಾಹಿತಿಗಳು ತಮ್ಮ ಕವಿತೆ, ನಾಟಕ ಮೊದಲಾದವುಗಳಿಂದ ರಾಷ್ಟ್ರ ರಕ್ಷಣೆಗಾಗಿ ದುಡಿಯಬೇಕೆಂದು, ಶತ್ರು ನಮ್ಮ ಗಡಿಯಿಂದ ಹಿಮ್ಮೆಟ್ಟುವವರೆಗೂ ಸಾಹಿತ್ಯದ ಮೂಲಕ ಜನತೆಯಲ್ಲಿ ರಾಷ್ಟ್ರ ರಕ್ಷಣೆಗೆ ಪ್ರೇರಣೆ ನೀಡುವಂತ, ನಾಡಿನ ಸೇವೆಗೆ ಒದಗುವಂತೆ ಮಾಡಲು ಶ್ರಮಿಸಬೇಕೆಂದು ತಿಳಿಸಿದರು. ಅದಕ್ಕೆ ಪ್ರತಿಕ್ರಿಯೆಯಾಗಿ ನಿರಂಜನರವರು ಗಡಿಯಿಂದ ಶತ್ರು ಹಿಮ್ಮೆಟಿಸುವವರಿಗೆ ಮಾತ್ರವಲ್ಲದೆ ನಂತರವು ಸಾಹಿತಿಯು ಜನತೆಯ ಕಲ್ಯಾಣಕೋಸ್ಕರ ದುಡಿಯಬೇಕು. ಈ ಸಂದರ್ಭದಲ್ಲಿ ಪ್ರಜಾಪ್ರತಿನಿಧಿಯೊಬ್ಬರು ಕೆ.ವಿ. ಪುಟ್ಟಪ್ಪ ಮೊದಲಾದ ಪ್ರತಿಭಾವಂತರನ್ನು ಈ ಕಾರ್ಯಕ್ಕೆ ಉಪಯೋಗಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ನಿರಂಜನರವರು ಕಲಾವಿದರನ್ನು, ಬರಹಗಾರರನ್ನು ಉಪಯೋಗಿಸಿಕೊಳ್ಳುವುದು ಚೀನಾದ ಮಾದರಿಯದು, ಅದು ನಮ್ಮ ದೇಶಕ್ಕೆ ಅಗತ್ಯವಿಲ್ಲವೆಂದು, ಭಾರತದ ಬರಹಗಾರನಿಗೆ, ಕಲಾವಿದನಿಗೆ ದೇಶಾಭಿಮಾನ ಕಲಿಸಿ ಕೊಡುವುದು ಅವಶ್ಯಕವಿಲ್ಲವೆಂದು ಅದು ಸರಕಾರದಿಂದ ಆಗುವಂತದ್ದಲ್ಲ. ಒಬ್ಬ ಸಾಹಿತಿಯ ಒಳಗಿನ ಒತ್ತಡದಿಂದಲೇ ಉತ್ತಮ ಕಲಾಕೃತಿ ಹೊರಹೊಮ್ಮುತ್ತದೆ. ಹಾಗೆ ರಾಷ್ಟ್ರ ರಕ್ಷಣೆಯೆಂಬುದು ನಮ್ಮ ಸಾಹಿತಿಗಳ ಅಂತರ್ ಮನಸ್ಸಿನಲ್ಲಿದೆ. ಅದರ ನಿರ್ಮಾಣಕ್ಕಾಗಿ ರಕ್ಷಣೆಗಾಗಿ ಅದು ಸಾಹಿತ್ಯ ಕೃತಿಯ ರೂಪದಲ್ಲಿ ಪ್ರಕಟವಾಗುತ್ತದೆ ಎಂದು ನಿರಂಜನರು ಕನ್ನಡ ನಾಡಿನ ಸಾಹಿತಿಯ ಅಥವಾ ಭಾರತೀಯ ಸಾಹಿತಿಯ ವ್ಯಕ್ತಿತ್ವವನ್ನು 'ರಾಷ್ಟ್ರ ರಕ್ಷಣೆ; ಒಳಗಿನ ಒತ್ತಡ' ಎಂಬ ಅಂಕಣದಲ್ಲಿ ಪ್ರತಿಪಾದಿಸುತ್ತಾರೆ. ಕನ್ನಡ ನಾಡಿನ ಸಾಹಿತಿಯ ಮನಸ್ಸಿನಲ್ಲಿ ರಾಷ್ಟ್ರರಕ್ಷಣೆ, ರಾಷ್ಟ್ರದ ಹಿತವೆಂಬುದು ಆತನ ಅಂತರ್ ಮನಸ್ಸಿನಲ್ಲಿರುತ್ತದೆ. ಅದನ್ನು ಮೂಡಿಸಲು ಯಾವುದೇ ವ್ಯಕ್ತಿ, ಸಂಸ್ಥೆಯಿಂದ ಸಾಧ್ಯವಿಲ್ಲವೆಂದು ಸಾಹಿತಿಯ ಮನಃಸ್ಥಿತಿಯು ರಾಷ್ಟ್ರ ರಕ್ಷಣೆಗಾಗಿ ಸದಾ ತುಡಿಯುತ್ತಿರುತ್ತದೆ.

ಕಾಲಕ್ಷೇಪ ಕೃತಿಯಲ್ಲಿ ನಿರಂಜನರವರು 'ಆತುರದಿಂದ ಅಧೋಗತಿ' ಎಂಬ ಲೇಖನದಲ್ಲಿ ಬರಹಗಾರನಾದವನು ಬರೆದ ಕೃತಿಯನ್ನು ಮುಗಿಸಿದ ಮೇಲೆ ಆ ಕೃತಿಯನ್ನು ಪುನಃ ಪುನಃ ಸ್ವಯಂ ತಿದ್ದಬೇಕೆಂದು, ಹಾಗೆಯೇ ತಿದ್ದುವುದರಿಂದ ಆ ಕೃತಿಯು ಮತ್ತಷ್ಟು ಪರಿಪಕ್ವವಾಗುತ್ತದೆ. ನಂತರ ಅದನ್ನು ಪ್ರಕಟಣೆಗೆ ಕೊಡಬೇಕೆಂದು, ಒಮ್ಮೆ ಬರೆದಿದ್ದುದೆ ಅಂತಿಮ ಎಂಬ ಭಾವನೆ ಉತ್ತಮ ಬರಹಗಾರನ ಲಕ್ಷಣವಲ್ಲ. ಸಾಹಿತ್ಯದಲ್ಲಿ ನೊಬೆಲ್ ಪಾರಿತೋಷಕ ಪಡೆದ ಅರ್ನೆಸ್ಟ್ ಹೇಮಿಂಗ್ ತನ್ನ 'ಮುದುಕ ಮತ್ತು ಸಮುದ್ರ' ಕಾದಂಬರಿ, ರಷ್ಯಾದ ಟಾಲ್ ಸ್ಟಾಯ್ ಬರೆದ 'ಯುದ್ಧ ಮತ್ತು ಶಾಂತಿ' ಅವರೆಲ್ಲಾ ಹೀಗೆ ತಮ್ಮ ಕೃತಿಗಳನ್ನು ತಿದ್ದಿದ ಪರಿಣಾಮವೇ ಉತ್ತಮ ಕೃತಿಯಾಗಿ ಮಾರ್ಪಟ್ಟವು. ಒಳ್ಳೆಯ ಸಾಹಿತ್ಯ ಸೃಷ್ಟಿಯಾಗಬೇಕಾದರೆ ಯುವ ಬರಹಗಾರರು ತಮ್ಮ ಅಹಂಭಾವವನ್ನು ಬಿಟ್ಟು ಪುನಃ ಪುನಃ ಬರೆದ ಹಸ್ತ ಪ್ರತಿಯನ್ನು ತಿದ್ದುವ ಮೂಲಕ ಮತ್ತಷ್ಟು ಆ ಕೃತಿಯನ್ನು ಉತ್ತಮಪಡಿಸಬೇಕೆಂದು ಅನಂತರ ಆ ಹಸ್ತ ಕೃತಿಯನ್ನು ಪ್ರಕಟಣೆಗೆ ಕೊಡಬೇಕೆಂದು ಸಲಹೆ ನೀಡುತ್ತಾರೆ.

ಸಾಹಿತಿಯ ದೇಶ ಪ್ರೇಮವನ್ನು ನಿರಂಜನರು ಸಾಹಿತಿಯ ಒಳಗಿನ ಒತ್ತಡದಿಂದಲೇ ಪ್ರಕಟವಾಗುವುದನ್ನು ಗುರುತಿಸುತ್ತಾರೆ. ಅ. ನ. ಕೃ. ರವರು ರವೀಂದ್ರನಾಥ ಟಾಗೋರರ ದೇಶ ಪ್ರೇಮವನ್ನೂ ಮತ್ತು ಅವರ ಸಾಹಿತ್ಯದ ಹಿನ್ನಲೆಯಲ್ಲಿ ರವೀಂದ್ರರು ಪೂರ್ಣ ಸ್ವಾತಂತ್ರ್ಯವನ್ನು ಬಯಸಿದವರು. ೧೯೧೬ ನೋಬೆಲ್ ಪಾರಿತೋಷಕ ಲಭಿಸಿದಾಗ ಡಬ್ಲ್ಯು ಬಿ. ಯೇಟ್ಸ್ ಮೊದಲಾದ ವ್ಯಕ್ತಿಗಳ ಮನ್ನಣೆ ದೊರಕಿದ್ದರಿಂದ ಅವರು ಯೂರೋಪ್‌ನಲ್ಲಿ ನೆಲಸಬಹುದಿತ್ತು. ಆದರೆ ಅವರು ಅದನ್ನೆಲ್ಲಾ ತಿರಸ್ಕರಿಸಿ ಭಾರತದಲ್ಲಿ ನೆಲೆ ನಿಂತರು. ೧೯೧೯ ರಲ್ಲಿ ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ವಿರೋಧಿಸಿ ತಮಗೆ ನೀಡಿದ 'ನೈಟ್ ವುಡ್' ಪ್ರಶಸ್ತಿಯನ್ನು ಬ್ರಿಟಿಷರಿಂದ ತಿರಸ್ಕರಿಸಿದರು. ಇವೆಲ್ಲಾ ಭಾರತೀಯ ಸಾಹಿತಿಯ ದೇಶ ಪ್ರೇಮದ ಮನಃಸ್ಥಿತಿಯಿಂದಾಗಿಯೇ ಎಂದು ಬರೀ ರವೀಂದ್ರನಾಥ ಟಾಗೋರರು ಮಾತ್ರವಲ್ಲದೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಅನೇಕ ಸಾಹಿತಿಗಳ ಮನಃಸ್ಥಿತಿ ಹಾಗೆಯೇ ಇತ್ತು. ದೇಶ ಪ್ರೇಮದ ಒಂದು ಮಾದರಿಯಾಗಿ ರವೀಂದ್ರರ ವ್ಯಕ್ತಿತ್ವವನ್ನು 'ಸಜೀವ ಸಾಹಿತ್ಯ' ಕೃತಿಯ 'ರವೀಂದ್ರನಾಥ ಟಾಗೋರರ ದೇಶ ಪ್ರೇಮ ಮತ್ತು ಕಲಾರಾಧನೆ' ಎಂಬ ಲೇಖನದಲ್ಲಿ ತಿಳಿಸುತ್ತಾರೆ.

ಹೊಸಹುಟ್ಟು ಕೃತಿಯ 'ನಮ್ಮ ಸಾಹಿತ್ಯದಲ್ಲಿ ನವಚೇತನ' ಎಂಬ ಲೇಖನದಲ್ಲಿ ಸಂಸ್ಕೃತಿಯು ಹೇಗೆ ಒಂದು ಕಾಲದಿಂದ ಮತ್ತೊಂದು ಕಾಲದಲ್ಲಿ ಬದಲಾವಣೆಗೊಳ್ಳುತ್ತದೆಯೋ ಅದೇ ರೀತಿಯಲ್ಲಿ ಸಾಹಿತ್ಯ ಕೂಡ ಬದಲಾವಣೆಗೆ ಒಳಗಾಗುತ್ತದೆ. ಪ್ರಾಚೀನ ಸಾಹಿತ್ಯದಲ್ಲಿ ಧಾರ್ಮಿಕ ವಿಚಾರಗಳು ಪ್ರತಿಪಾದಿಸಿದರೆ ವಚನ ಮತ್ತು ದಾಸ ಸಾಹಿತ್ಯದಲ್ಲಿ ಭಿನ್ನ ಧೋರಣೆಗಳನ್ನು ತಾಳಿದವು. ಇಂದಿನ ಸಾಹಿತ್ಯವು ಶುದ್ದ ದೇಶಿಯ ಸಾಹಿತ್ಯವಲ್ಲವೆಂದು ಕೇವಲ ಪಾಶ್ಚಿಮಾತ್ಯರ ಆಚಾರ-ವಿಚಾರಗಳ ಅನುಕರಣೆವೆಂದು ಹೇಳುವವರು ಇದ್ದಾರೆ. ಆದರೆ ಕನ್ನಡ ಸಾಹಿತ್ಯ ಪರಂಪರೆಯನ್ನು ಗಮನಿಸಿದಾಗ ಆಯಾಯಾ ಕಾಲಘಟ್ಟದ ಮೇಲೆ ಪ್ರಭಾವ ಬೀರಿದ ಅಂಶಗಳನ್ನು ಹೀರಿಕೊಂಡು ಬೆಳೆದಿದೆ. ಈ ರೀತಿಯಲ್ಲಿ ಸಾಹಿತ್ಯವು ಆಯಾಯ ಕಾಲಘಟ್ಟದ ಆತ್ಮ ಜ್ಞಾನವನ್ನು ಬೆಳಗುವ ಕಾರ್ಯ ಸಾಹಿತ್ಯದ್ದು ಆಗಬೇಕು ಅದೇ ಸಾಹಿತ್ಯದ ಧೋರಣೆಯಾಗಿರಬೇಕು.

ಪ್ರಗತಿಶೀಲ ಕಾಲಘಟ್ಟದಲ್ಲಿ ಕಥೆ ಮತ್ತು ಕಾದಂಬರಿಗಳಿಗೆ ಬಹಳ ಮಹತ್ವವಾದ ಸ್ಥಾನವನ್ನು ಕೊಡಲಾಗಿತ್ತು. ಈ ಹಿನ್ನಲೆಯಲ್ಲಿ ಅ.ನ. ಕೃರವರು ಕಥೆ ಮತ್ತು ಕಾದಂಬರಿಗಳ ದೃಷ್ಟಿಕೋನ, ರೀತಿ, ಗುರಿ ಮೊದಲಾದವುಗಳನ್ನು ತಮ್ಮದೆಯಾದ ರೀತಿಯಲ್ಲಿ ಪ್ರತಿಪಾದಿಸುತ್ತಾರೆ. 'ಕನ್ನಡದಲ್ಲಿ ಸಣ್ಣಕಥೆಗಳು' ಎಂಬ ಲೇಖನದಲ್ಲಿ ಜನತೆಯ ಅಭಿರುಚಿಗಳು ಕಾಲಕ್ಕೆ ತಕ್ಕಂತೆ ಬದಲಾಗುತ್ತವೆ. ಅದೇ ರೀತಿಯಲ್ಲಿ ಸಾಹಿತ್ಯವು ಅನುಕರಿಸುವಂತಾಗಿದೆ. ಕಥೆಯಿರಬಹುದು, ಕಾದಂಬರಿಯಿರಬಹುದು ಅಥವಾ ನಾಟಕಗಳಿರಬಹುದು ಅವು ಕೂಡ ಆಯಾಯ ಕಾಲದಲ್ಲಿ ಜನರ ಅಭಿರುಚಿಗೆ ತಕ್ಕಂತೆ ಮನ್ನಣೆಗಳಿಸುತ್ತದೆ. ಹಾಗೆಯೇ ಸಣ್ಣಕಥೆಗಳು ಕೂಡ ೧೯೩೦ರ ನಂತರ ಮನ್ನಣೆಯನ್ನು ಪಡೆದವು. ಆದರೆ ಕನ್ನಡ ಸಾಹಿತ್ಯದಲ್ಲಿ ಜನತೆಯ ಅಭಿರುಚಿಯ ಅನುಗುಣವಾಗಿ ಗ್ರಂಥಗಳನ್ನು ರಚಿಸುವ ಪರಿಸ್ಥಿತಿಯು ನಿರ್ಮಾಣವಾಗಲಿಲ್ಲ. ಕಥೆಗಾರನ ದೃಷ್ಟಿಕೋನವು ಕೃತಿಯ ಮುಖ್ಯ ಅಂಶದ ಮೇಲೆ ಚಲಿಸಬೇಕು, ಆದರೆ ಕಥೆಗಾರನು ತಾವು ಕೃತಿಯನ್ನು ಬರೆಯುವ ಉದ್ದೇಶ ಒಂದು ಇದ್ದರೆ, ಯೋಚಿಸುವುದು ಬೇರೆ, ಕೊನೆಗೆ ಕೇಳಿದವರಿಗೆ ಹೇಳುವುದೊಂದು ಈ ರೀತಿಯ ಮನೋದೌರ್ಬಲ್ಯವನ್ನು ಕಥೆಗಾರ ಹೊಂದಬಾರದೆಂದು ಕಥೆಗಾರನಿಗೆ ಸಲಹೆಯನ್ನು ನೀಡುತ್ತಾರೆ.

ಸಣ್ಣಕಥೆಗಳ ರಚನೆಗೆ ಪ್ರೇರಣೆ ನೀಡಿದ್ದು ಇಷ್ಟ ಧರ್ಮದ ಮಂಡನೆ, ಪರಮತ ಸಹಿಷ್ಣುತೆಗಳ ಕಡೆಗೆ ತಿರುಗಿದು, ಸರ್ವಧರ್ಮ ಸಮನ್ವಯತೆ ಒಳಪಟ್ಟಿದ್ದು, ಜೀವನವನ್ನು ಬಿಡಿ ಬಿಡಿಯಾಗಿ ನೋಡಿ ಯಾವುದಾದರೂ ಒಂದು ಜೀವಸತ್ವವನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸುವುದು ಜನಜೀವನದ ಪ್ರತಿಬಿಂಬಿತವಾದ ವಿಷಯವೇ ಸಣ್ಣ ಕತೆಯ ಗುರಿಯಾಗಿತ್ತು. ಕನ್ನಡದ ಕಾದಂಬರಿ ಪ್ರಕಾರವನ್ನು ಕುರಿತಂತೆ ಅ.ನ.ಕೃ ರವರ ಸಜೀವ ಸಾಹಿತ್ಯ ಕೃತಿಯ 'ಕಾದಂಬರಿಯ ಭಾವ ಪ್ರವಾಹ' ಎಂಬ ಪ್ರಬಂಧದಲ್ಲಿ ಕನ್ನಡದಲ್ಲಿ ಕೆಂಪು ನಾರಾಯಣನಿಂದ ಆರಂಭಗೊಂಡ ಕಾದಂಬರಿ ತದ ನಂತರ ಎಂ.ಎಸ್. ಪುಟ್ಟಣ್ಣರವರ 'ಮಾಡಿದ್ದುಣ್ಣೊ ಮಾರಾಯ', ಕೆರೂರು ವಾಸು ದೇವಚಾರ್ಯರ 'ಇಂದಿರಾ' ಇವು ನವೋದಯದ ಉದಯಕ್ಕೆ ಯಾವುದೇ ಕಾರಣವಾಗಲಿಲ್ಲ. ಬಿ.ಎಂ. ಶ್ರೀಯವರ ಇಂಗ್ಲೀಷ್ ಗೀತೆಗಳು, ಆಲೂರು ವೆಂಕಟರಾಯರ 'ಕರ್ನಾಟಕ ಗತ ವೈಭವ' ಇವೆರಡೂ ನವೋದಯ ಸಾಹಿತ್ಯಕ್ಕೆ ನಾಂದಿಯಾಯಿತ್ತು. ಆದರೆ ಮುಂದೆ ಬಂದ ಅನೇಕ ನವೋದಯ ಸಾಹಿತಿಗಳು ಜನಸಾಮಾನ್ಯರನ್ನು ಮೆಚ್ಚಿಸುವ ಅವರಿಗೆ ವಿವೇಕ ಮತ್ತು ವಿಚಾರವನ್ನು ನೀಡುವ ಪ್ರಯತ್ನವನ್ನು ಮಾಡದೆ ಅವರ ದೃಷ್ಟಿ ಅರಮನೆ, ಗುರುಮನೆಗಳ ಕಡೆಗೆ ಇತ್ತು. ಪಂಪ, ರನ್ನ, ಪೊನ್ನರ ಸಾಹಿತ್ಯವು ಯಾವ ಕಾರಣಕ್ಕೆ ಜನಸಾಮಾನ್ಯರ ಕಡೆ ಬರಲಿಲ್ಲವೋ ಅದೇ ಕಾರಣದಿಂದಾಗಿ ಜನಸಾಮಾನ್ಯರಿಗೆ ಅವಶ್ಯವಾಗುವಂತಹ ಸಾಹಿತ್ಯವನ್ನು ನವೋದಯ ಕಾಲಘಟ್ಟದಲ್ಲಿ ಬರಲಿಲ್ಲ. ಇವರು ಕೂಡ ಅರಮನೆ, ಗುರುಮನೆಗಳ ಪಕ್ಷವನ್ನೇ ವಹಿಸಿದವರಾಗಿ ಅ.ನ.ಕೃ ನೋಡುತ್ತಾರೆ.

ಕಾವ್ಯ, ನಾಟಕ, ಎರಡೂ ಪಂಡಿತ ರಂಜನೆಯ ಸಾಧನಗಳೆಂದು, ಕಥೆ, ಕಾದಂಬರಿ, ಲಾವಣಿ ಎಂಬುದು ಜನತೆಯ ಸಾಧನಗಳೆಂದು ವಿಂಗಡಿಸುವುದನ್ನು ಅಲ್ಲಗಳೆಯುವ ಅ. ನ. ಕೃ. ಸಾಹಿತ್ಯವೆಂಬುದು ಜನತಾಮುಖಿಯಾಗಿರಬೇಕೆಂದು, ಬಿ. ಎಂ. ಶ್ರೀಯವರು ಕಾದಂಬರಿಕಾರರಾಗಿದ್ದರೆ ಅಂದೇ ನವೋದಯ ಕಾದಂಬರಿ ಬೆಳೆಯುತ್ತಿತ್ತು ಎಂದು ಗ್ರಹಿಸುತ್ತಾರೆ. ಕಾದಂಬರಿಯ ಪ್ರವಾಹವು ಯುರೋಪ್‌ನಲ್ಲಿ ಬೆಳೆದು ಕಾರ್ಮಿಕರ ರೈತರ ಗುಡಿಸಲಿಗೆ, ವಿದ್ಯಾರ್ಥಿಗಳ ರೂಮುಗಳಿಗೆ ತಲುಪಿಸಿದ ಕೀರ್ತಿ ಕಾದಂಬರಿಗೆ ಸೇರಿದೆ. ಆ ಮೂಲಕ ಸಾಹಿತ್ಯವು ಜನ ಸಾಮಾನ್ಯರ ಬಳಿಗೆ ಹೋಯಿತು. ಸ್ವಾತಂತ್ರ್ಯ ಪೂರ್ವದಲ್ಲಿ ವೃತ್ತ ಪತ್ರಿಕೆಗಳು ಯಾವುದೇ ಲಾಭಕ್ಕಾಗಿ ನಡೆಯದೇ ಜನತೆಯನ್ನು ಎಚ್ಚರಿಸುವ ಕೆಲಸವನ್ನು ಮಾಡಿವೆ. ಹೋರಾಟಕ್ಕೆ ಸಂಘಟಿಸಿದ ವಸ್ತುಗಳು ಕಾದಂಬರಿಗಳ ವಸ್ತುಗಳಾದವು. ಅದೇ ಮಾದರಿಯಲ್ಲಿ ಕಾದಂಬರಿಯ ವಸ್ತು ಎಂಬುದು ಸಮಕಾಲೀನ ಸಮಾಜದ ಚಿತ್ರಣವನ್ನು ನೀಡುವ ವಸ್ತುವಾಗಿರಬೇಕು. ಇವತ್ತಿನ ಸಾಹಿತಿಗಳು ಪ್ರತಿಪಾದಿಸುವ ಅಂತರರಾಷ್ಟ್ರೀಯತ್ವ, ವಿಶ್ವಪ್ರಜ್ಞೆಯೆಂಬುದು ಪ್ರಾಚೀನ ಭಾರತೀಯರಲ್ಲಿಯೇ ಇರುವ 'ವಿಶ್ವ ಕುಟುಂಬತ್ವ'ದ ಧೋರಣೆಯೇ ಆಗಿದೆ ಎಂದು ತಿಳಿಸುತ್ತಾರೆ.

ಕನ್ನಡ ಸಾಹಿತ್ಯವು ಆದರ್ಶವನ್ನೇ ಬೋಧಿಸಿಕೊಂಡ ಬಂದ ಸಂದರ್ಭದಲ್ಲಿ ಅ.ನ.ಕೃ. ರವರು 'ಸಾಹಿತ್ಯ ಮತ್ತು ಯುಗಧರ್ಮ' ಎಂಬ ಕೃತಿಯಲ್ಲಿ ಕಾದಂಬರಿಯ ವಾಸ್ತವತೆ ಎಂಬ ಲೇಖನದಲ್ಲಿ ಕಾದಂಬರಿಯು ವಾಸ್ತವವನ್ನು ಹೇಳಬೇಕು. ಸಾಹಿತ್ಯವು ಸಮಷ್ಟಿವಾದವನ್ನು ಬೋಧಿಸಿದರೂ ಭಾರತೀಯ ಜೀವನ ಆದರ್ಶದ ಮನಃಸ್ಥಿತಿಯಲ್ಲಿ ಅದನ್ನು ಮಸುಕು ಮಾಡಿತ್ತು. ಫ್ರಾನ್ಸ್‌ನಲ್ಲಿ ಹುಟ್ಟಿಕೊಂಡ ವಾಸ್ತವವಾದ ಕಾಲಕ್ರಮೇಣ ಕರ್ನಾಟಕದಲ್ಲಿ ಚಿಗುರೊಡೆದರ ಫಲವೇ ಕಾದಂಬರಿಯಾಗಿದೆ. ವಾಸ್ತವ ಜೀವನವನ್ನು ಸಮಾಜವನ್ನು ನಮ್ಮ ಸಾಹಿತ್ಯವು ತೋರಲಿಲ್ಲ. ಆದರ್ಶವನ್ನು ನಮ್ಮ ಸಾಹಿತ್ಯ ಬೋಧಿಸಿಕೊಂಡು ಬಂದುದರಿಂದಾಗಿ ವಾಸ್ತವವಾದವನ್ನು

ಕಾದಂಬರಿಯಲ್ಲಿ ಪ್ರಚುರಪಡಿಸಿದರೆ ಅದು ಅಶ್ಲೀಲ ಸಾಹಿತ್ಯ ಎಂದು ಹಣೆಪಟ್ಟಿ ಕಟ್ಟುವ ಮೂಲಕ ಸಂಪ್ರದಾಯ ಸಾಹಿತ್ಯವು ಒಂದು ಆದರ್ಶ ಪ್ರಪಂಚದಲ್ಲಿ ವಿಹರಿಸಿತ್ತು. ಜೊತೆಗೆ ಲಾಕ್ಷಣೀಕರು ಕೂಡ ದುರಂತ ಚಿತ್ರಗಳನ್ನು ಸಾಹಿತ್ಯದಲ್ಲಿ ಚಿತ್ರಿಸಲು ಇಚ್ಛೆಪಡಲಿಲ್ಲ. ಇದರಿಂದಾಗಿ ನಮ್ಮ ಸಾಹಿತ್ಯದಲ್ಲಿ ವಾಸ್ತವವಾದಕ್ಕೆ ಕೂಡಲೇ ಪೆಟ್ಟು ಬಿದ್ದಿತ್ತು ಎಂದು ಕನ್ನಡ ಸಾಹಿತ್ಯದಲ್ಲಿ ವಾಸ್ತವವಾದ ಏಕೆ ಬೆಳೆಯಲಿಲ್ಲ ಎಂಬುದನ್ನು ವಿವರಿಸಿರುತ್ತಾರೆ.

ವಾಸ್ತವ ಕಾದಂಬರಿಕಾರನ ಕರ್ತವ್ಯವೆಂಬುದು ಜೀವನ ಚಿತ್ರಣವನ್ನು ಸಾಹಿತ್ಯದಲ್ಲಿ ಪ್ರಕಟಪಡಿಸಿದರೆ ಮುಗಿಯುವುದಿಲ್ಲ. ಈ ರೀತಿಯ ಸಮಾಜಕ್ಕೆ, ಜೀವನಕ್ಕೆ, ಕಾರಣಗಳೇನು ಎಂದು ವಿಮರ್ಶಾತ್ಮಕವಾಗಿ ಯೋಚಿಸುವ ಬಗೆಯನ್ನು ಸೃಷ್ಟಿಸುವುದು ಸಾಹಿತ್ಯದಲ್ಲಿ ಬಹಳ ಮುಖ್ಯವಾದುದಾಗಿದೆ. ಸಮಾಜದ ವಾಸ್ತವತೆಯನ್ನು ಪ್ರತಿನಿಧಿಸುವ ಕಾದಂಬರಿಗಳು ಸಾಮಾಜಿಕ ಜೀವನ, ಸಾಮಾಜಿಕ ಸಮಸ್ಯೆಗಳು, ರಾಜಕೀಯ ಜೀವನ, ಕಲೆ ಮೊದಲಾದವುಗಳ ಮೇಲೆ ಕಾದಂಬರಿಗಳು ವಾಸ್ತವ ನೆಲೆಗಟ್ಟಿನಲ್ಲಿ ಮೂಡಿದೆ. ಕನ್ನಡ ವಾಸ್ತವ ಕಾದಂಬರಿಗಳ ವಿಚಾರ ವಾಹಿನಿಯಲ್ಲಿ ಅನುಕಂಪ, ಪುನರ್ ವಿಮರ್ಶೆ, ಸಾಮ್ಯವಾದ, ನಿರ್ಭಯತೆ, ಜನಪದ ದೃಷ್ಟಿಯನ್ನು ಒಳಗೊಂಡಿದೆ. ಈ ಎಲ್ಲಾ ಅಂಶಗಳು ವಾಸ್ತವವಾದಿ ಕಾದಂಬರಿಗಳು ರೂಪುಗೊಳ್ಳಲು ಬಂದು ವೇದಿಕೆ ಸೃಷ್ಟಿಯಾಯಿತು. ಸಾಮ್ಯವಾದವನ್ನು ಅಲ್ಲಗಳೆಯುವ ಅ.ನ.ಕೃ. ಕಾರ್ಲ್ ಮಾರ್ಕ್ಸ್‌ನ ತತ್ವದಿಂದ ರಷ್ಯಾದ ಮಾರ್ಗವಾಗಿ ಬಂದಿತ್ತೆಂದು ಭಾವಿಸುವ ಜನರು ನಮ್ಮ ಅರಣ್ಯಕಗಳಲ್ಲಿಯೇ ಅದರ ತತ್ವ ಅಡಗಿದೆ ಮತ್ತು ಭಾರತ ಸಮಾಜವು ಅದೇ ತತ್ವದಿಂದ ನಿರ್ಮಾಣಗೊಂಡಿದೆ. ಆ ತತ್ವದ ಮೇಲೆ ಕನ್ನಡ ಕಾದಂಬರಿಕಾರ ಸಾಮ್ಯವಾದಿಯಾಗಿರುವುದು. ನಮ್ಮ ಪ್ರಾಚೀನ ಕನ್ನಡ ಕಾದಂಬರಿಗಾರರು, ಯಾರೂ ಕೂಡಾ ವರ್ಗವಾದ, ಬಂಡವಾಳವಾದ, ಜಾತಿವಾದಗಳನ್ನು ಅಂಗೀಕರಿಸಿಲ್ಲ ಮತ್ತು ಸಾಮ್ಯವಾದದ ತಿರುಳುಗಳು ಹುಟ್ಟಿದ್ದೇ ಭಾರತದಲ್ಲಿ ಎಂಬುದಾಗಿ ವಿಶ್ಲೇಷಿಸುತ್ತಾರೆ.

ಕಾದಂಬರಿಯಲ್ಲಿ ವಾಸ್ತವಿಕತೆಯ ಸ್ಥಾನವನ್ನು ತಿಳಿಸುವ ಅ.ನ.ಕೃ. ರವರು ಸಂಸ್ಕೃತಿಯ ವಿಶ್ವ ರೂಪ ಕೃತಿಯ 'ಸಾಹಿತ್ಯದಲ್ಲಿಯ ವಾಸ್ತವಿಕತೆಯ ಸ್ಥಾನ' ಎಂಬ ಲೇಖನದಲ್ಲಿ ಆಧುನಿಕ ಕನ್ನಡ ಸಾಹಿತ್ಯವನ್ನು ಆದರ್ಶ ಮತ್ತು ವಾಸ್ತವಿಕ ಎಂಬುದಾಗಿ ವಿಭಾಗಿಸಿದ್ದು ಕ್ರೈಸ್ತ ದರ್ಶನದ ಪ್ರಭಾವದಿಂದಾಗಿ ಎಂದು ಭಾವಿಸುತ್ತಾರೆ. ಕಂಡದ್ದನ್ನು ಕಂಡ ಹಾಗೇ ವ್ಯಕ್ತಪಡಿಸಿದರೆ ಸಾಹಿತ್ಯವಾಗುವುದಿಲ್ಲ ಅದು ವೃತ್ತ ಪತ್ರಿಕೆಯಾಗುತ್ತದೆ. ಕವಿಯು ಅಥವಾ ಬರಹಗಾರ ಯಾವ ಭಾವನೆಯ ರೂಪದಲ್ಲಿ ಕೃತಿಯನ್ನು ಕೊಡುತ್ತಾನೆಯೋ ಅದನ್ನು ತಿಳಿದೇ ನಾವು ಆದರ್ಶ, ವಾಸ್ತವವಾದ ಸ್ವರೂಪವನ್ನು ಗ್ರಹಿಸಬೇಕು. ಕನ್ನಡ ಪ್ರಾಚೀನ ಸಾಹಿತ್ಯವು ಆದರ್ಶವನ್ನು ಇಟ್ಟುಕೊಂಡು ಅವಾಸ್ತವ ಸಾಹಿತ್ಯ ನಿರ್ಮಾಣ ಮಾಡಿದೆ. ಅಂದಿನ ಆದರ್ಶಗಳು ಇಂದೂ ಅವಾಸ್ತವವಾಗಿ ಕಾಣುವುದು, ಆದರ್ಶವಾದಿಗಳು ಕನಸಿನಲ್ಲಿ ವಿಹರಿಸಿದರೆ ವಾಸ್ತವವಾದಿಗಳು ನಿಜ ಜೀವನವನ್ನು ದಾಖಲಿಸುವ ಕಡೆ ಹೋಗುತ್ತಾರೆ. ಸಾಹಿತ್ಯವನ್ನು ನೀತಿ ಮಾನದಂಡದಿಂದ ಅಳತೆ ಮಾಡದೆ ಜೀವನ ದರ್ಶನ ಮಾಡಿಸಬೇಕು. ಧರ್ಮ ಹಾಗೂ ಮತಗಳ ಗ್ರಂಥಗಳು ನೀತಿಯನ್ನು ಬಯಸಬಹುದು ಆದರೆ ಸಾಮಾನ್ಯ ಓದುಗನು ಜೀವನವನ್ನು ಸಾಹಿತ್ಯದಲ್ಲಿ ಅಪೇಕ್ಷಿಸಿದಾಗ ಆದರ್ಶವಿರಬಹುದು, ವಾಸ್ತವವಿರಬಹುದು, ಅತಿ ವಾಸ್ತವ ಯಾವುದಕ್ಕೂ ಸಾಹಿತಿ ಹಿಂಜರಿಯಬಾರದು ಯಾವುದೋ ಉಳಿಯಬೇಕೋ ಅದು ಉಳಿಯುತ್ತದೆ ಎಂದು ಚರ್ಚಿಸುತ್ತಾರೆ. ಉತ್ತಮವಾದುದು ಜನತೆಗೆ

ಪ್ರಿಯವಾದುದರ ಸಾಹಿತ್ಯ ಉಳಿಯುತ್ತದೆ. ವಾಸ್ತವ, ಅವಾಸ್ತವ, ಆದರ್ಶ ಎಂಬೆಲ್ಲಾವುಗಳನ್ನು ಯೋಚಿಸುವ ಅಗತ್ಯವಿಲ್ಲ ಎಂಬುದಾಗಿ ಸಾಹಿತ್ಯದ ಸ್ವರೂಪವನ್ನು ಅ.ನ.ಕೃ ತಮ್ಮದೇಯಾದ ರೀತಿಯಲ್ಲಿ ಪ್ರತಿಪಾದಿಸುತ್ತಾರೆ.

ನಿರಂಜನರವರು ಕೂಡ ಕಥೆ ಮತ್ತು ಕಾದಂಬರಿಯ ಪ್ರಕಾರವನ್ನು ಕುರಿತಂತೆ ತಮ್ಮದೆಯಾದ ರೀತಿಯಲ್ಲಿ 'ಬುದ್ಧಿ ಭಾವ ಬದುಕು' ಎಂಬ ಕೃತಿಯಲ್ಲಿ ೧೯೫೨ ರಲ್ಲಿ ಬರೆದ 'ಕಥೆಯಲ್ಲಿ ವಸ್ತುವಿನ ಆಯ್ಕೆ'ಎಂಬ ಲೇಖನದಲ್ಲಿ ಕತೆಗಾರ ತನ್ನ ಜೀವನ ಸಂಸ್ಕಾರ, ವರ್ಗ ಪ್ರಭಾವ ಮೊದಲಾದವುಗಳ ಹಿನ್ನಲೆಯಲ್ಲಿ ಕಥಾವಸ್ತುವನ್ನು ಆಯ್ದುಕೊಳ್ಳುತ್ತಾನೆ. ಪಂಜೆ ಮಂಗೇಶ ರಾಯರಿಂದ ಹಿಡಿದು ಇಂದಿನ ತನಕ ಕತೆಗಳ ವಸ್ತುವಿನಲ್ಲಿ ಹೊಸತನವಿದೆ. ನವೋದಯ ಕಾಲಘಟ್ಟದ ಕತೆಗಳಲ್ಲಿ ಸಮಾಜ ಸೇವೆ, ಸಮಾಜ ಸುಧಾರಣೆ, ಆದರ್ಶಗಳು ಮೊದಲಾದವುಗಳು ಕಂಡು ಬಂದರೆ, ಶಿವರಾಮ ಕಾರಂತ, ಅ.ನ.ಕೃ ರವರ ಕತೆಗಳಲ್ಲಿ ಸಮಾಜ ಪದ್ಧತಿಯನ್ನು ವಿಮರ್ಶಿಸುವ ದೃಷ್ಟಿಯಲ್ಲಿ ಬೆಳೆದವು. ಪ್ರಗತಿಶೀಲ ಕತೆಗಳಲ್ಲಿ ಆದರ್ಶದ ಬದಲು ವಾಸ್ತವವಾದದ ವಸ್ತುಗಳನ್ನು ಕತೆಗಳಲ್ಲಿ ಕಾಣಬಹುದು.

೧೯೬೪ ರಲ್ಲಿ ಬರೆದ 'ಕನ್ನಡ ಸಣ್ಣಕತೆ ಮೇಲೆ ಪಶ್ಚಿಮದ ಪ್ರಭಾವ' ಎಂಬ ಲೇಖನದಲ್ಲಿ ಮನುಷ್ಯ ಮಾತನಾಡ ತೊಡಗಿದಾಗಲೇ ಕತೆ ಕಟ್ಟಲು ಸಿದ್ಧನಾದುದು. ಆದರೆ ಅದನ್ನು ಕೆಲವರು ಒಪ್ಪದೇ ಪಶ್ಚಿಮ ಸಾಹಿತ್ಯದ ಪ್ರಭಾವದಿಂದ ನಮ್ಮಲ್ಲಿ ನವೋದಯ ಕಾಲಘಟ್ಟದಲ್ಲಿ ಕತೆಯು ಬೆಳೆದು ಬಂದಿತ್ತು ಎಂದು ವಾದಿಸುವವರು ಇದ್ದಾರೆ. ಆದರೆ ಕಥೆ ಹೇಳುವ ಪ್ರವೃತ್ತಿ ನಮ್ಮಲ್ಲಿ ಮೊದಲೇ ಇತ್ತು. ಪಂಚತಂತ್ರ ಕಥೆಗಳ ಮೂಲಕ ಹಿತೋಪದೇಶ, ಬುದ್ದನ ಜಾತಕ ಕಥೆಗಳು, ಸಂಸ್ಕೃತದಲ್ಲಿ ರಚಿತವಾದ ಅಸಂಖ್ಯವಾದ ಕಥೆಗಳು ಇವೆಲ್ಲವೂ ಕೂಡ ವಿಶ್ವ ಸಾಹಿತ್ಯಕ್ಕೆ ನಮ್ಮ ಕಾಣಿಕೆಗಳಾಗಿವೆ. ಆ ಹಿನ್ನಲೆಯಿಂದ ಪಾಶ್ಚಾತ್ಯ ಕಥಾ ಪ್ರಕಾರಕ್ಕೂ ಮತ್ತು ನಮ್ಮ ಕಥಾ ಪ್ರಕಾರಕ್ಕೆ ಸಂಬಂಧವಿಲ್ಲವೆಂದು, ಅಮೇರಿಕಾ, ರಷ್ಯಾ, ಇಂಗ್ಲೆಂಡನ ಸಣ್ಣ ಕಥೆ ಪರಂಪರೆಯಲ್ಲಿ ಬಾಲ್ಜಾಕನು ಬದುಕಿನ ರುದ್ರ ರಮ್ಯ ಚಿತ್ರಗಳು, ಮ್ಯಾಕ್ಸಿಂ ಗಾರ್ಕಿ ಜನತೆಗಾಗಿ ಬರೆದು ಪರಿಸ್ಥಿತಿಯ ವಿರುದ್ಧ ಬಂಡಾಯ ಹೇಳುವ ಹೊಸ ಮಾನವನನ್ನು ಚಿತ್ರಿಸಿದ, ಇಂಗ್ಲೆಂಡನಲ್ಲಿ ರಮ್ಯತೆಯನ್ನು ಬಿಟ್ಟು ರಾಲ್ಫ್ ಮೊದಲಾದವರು ರಷ್ಯಾದ ಗಾರ್ಕಿಯ ರೀತಿಯಲ್ಲಿ ಬರೆದರು ಎಂದು ಪಶ್ಚಿಮದ ಸಣ್ಣ ಕಥಾ ಪರಂಪರೆ ಹೇಗೆ ಭಿನ್ನ ಹಾದಿಯನ್ನು ಹಿಡಿಯಿತು ಎಂದು ವಿಶ್ಲೇಷಿಸುತ್ತಾರೆ.

ಆದರೆ ಕನ್ನಡದ ಮೊದಲ ಹಂತದ ಕಥೆಗಾರರಿಗೆ ಇಂಗ್ಲೀಷ್ ಸಾಹಿತ್ಯದ ಪ್ರೇರಣೆ ಪ್ರಭಾವಿಸಿದೆ. ನವೋದಯ ಕಾಲಘಟ್ಟದ ಸಣ್ಣ ಕಥೆಗಳಲ್ಲಿ ಸಾಂಪ್ರಾದಾಯಿಕ ಕಥನಶೈಲಿ, ರಂಜಕತೆ, ರಮ್ಯತೆಯನ್ನು ಕಾಣಬಹುದು. ಪ್ರಗತಿಶೀಲರಲ್ಲಿ ಲೇಖನಿಯನ್ನು ಆಯುಧವನ್ನಾಗಿ ಮಾರ್ಪಡಿಸಿದರು. ಆದರೆ ನವ್ಯ ಮಾರ್ಗದ ಕಥೆಯು ಪಾತಾಳ ಗರಡಿ ಎಂಬ ಧೋರಣೆಯಲ್ಲಿ ಬೆಳೆದಿದೆ. ಕನ್ನಡದ ಸಣ್ಣ ಕತೆಗಳಲ್ಲಿ ಸುತ್ತಮುತ್ತಲಿನ ಬದುಕು, ರಂಜಕತೆ, ವಿಸ್ಮಯದ ಅಂಶ, ಕಲ್ಪನೆಯ ಅಶ್ವಾರೋಹಣ, ಸಮಾಜಪ್ರಜ್ಞೆ, ರಾಷ್ಟ್ರ ಪ್ರಜ್ಞೆ ಇವೆಲ್ಲಾ ಇರುವುದರೊಂದಿಗೆ ಕಿರಿದಾದುದರಲ್ಲಿ ಹಿರಿದಾದ ಅರ್ಥವನ್ನು ಹೇಳುವ ಪ್ರವೃತ್ತಿ ಅಥವಾ ಸ್ವರೂಪ ಕನ್ನಡ ಸಣ್ಣ ಕಥೆಗಳಿಗೆ ಇದೆ ಎಂದು ತಿಳಿಸುತ್ತಾರೆ. ಆ ಮೂಲಕ ಕನ್ನಡ ಸಣ್ಣ ಕತೆಗಳು ಪಾಶ್ಚಾತ್ಯ ಸಾಹಿತ್ಯದಿಂದ ಎರವಲು ಪಡೆಯದೇ ಇಂಗ್ಲೀಷ್ ಶಿಕ್ಷಣದ ಪ್ರಭಾವದಿಂದ ಬೆಳೆದವು. ಪಾಶ್ಚಾತ್ಯ ಸಣ್ಣ ಕತೆಗಳ ಸ್ವರೂಪವೇ ಬೇರೆ ಕನ್ನಡದ ಸಣ್ಣ ಕತೆಗಳ ಸ್ವರೂಪವೇ ಬೇರೆ ಬೇರೆಯಾಗಿದೆ ಎಂಬುದನ್ನು ವಿವರಿಸುತ್ತಾರೆ.

'ನಾಡಿ; ನಿರಂಜನರ ಆಯ್ದ ಪತ್ರಗಳ ಸಂಕಲನ'ದಲ್ಲಿ ಮಂಗಳೂರಿನ ಎನ್ ಸುಬ್ಬರಾಯರಿಗೆ ಬರೆದ ೨೦/೧೧/೧೯೮೦ ರ ಪತ್ರದಲ್ಲಿ ನಿರಂಜನರು ತಮ್ಮ ನೂರು ಕಥೆಗಳ ಸಂಪುಟ ಪ್ರಕಟಿಸಲು ರಾಷ್ಟ್ರ ಬಂಧು ಪ್ರಕಾಶಕರು ಲಭಿಸಿದ್ದಾರೆ. ಆದರೆ ನಿರಂಜನರ ಬಳಿ ನಾಲ್ಕೈದು ಕಥೆಗಳು ಮಾತ್ರ ಲಭ್ಯವಿದ್ದು ತಾವು ಕಿಶೋರ, ಕತೆಗಾರ, ಕುಳಕುಂದ ಶಿವರಾಯ, ಶಿವರಾಯ ಎಂಬ ಹೆಸರಿನಿಂದ ಬರೆದಿದ್ದು. ಆ ಹೆಸರಿನಲ್ಲಿರುವ ಎಲ್ಲಾ ಕಥೆಗಳನ್ನು ಸಂಗ್ರಹಿಸಿ ಕೊಡಬೇಕೆಂದು ತಮ್ಮ ನೂರು ಕಥೆಗಳ ಒಂದು ಸಂಪುಟವನ್ನು ಹೊರತರಬೇಕೆಂಬ ಮಹತ್ವಾಕಾಂಕ್ಷೆಯನ್ನು ವ್ಯಕ್ತಪಡಿಸುತ್ತಾರೆ. ಆ ಮೂಲಕ ಒಬ್ಬ ಬರಹಗಾರನ ಸಂಪೂರ್ಣ ಕಥೆಗಳು ಒಂದೇ ಸಂಪುಟದಲ್ಲಿ ಬರಬೇಕೆಂದು, ಎಲ್ಲ ಕಥೆಗಳು ಒಂದೆ ಕಡೆ ಓದುಗರಿಗೆ ದೊರಕಬೇಕೆಂಬ ನಿರಂಜನರವರ ದೃಷ್ಟಿಮಾತ್ರವಲ್ಲದೆ ಓದುಗರ ದೃಷ್ಟಿಯು ಕೂಡ ಆಗಿದೆ. ಮುಂದೆ ಐ.ಬಿ.ಎಚ್ ಸಂಸ್ಥೆಯವರು 'ಧ್ವನಿ ಕಥಾಸಮುಚ್ಚಯ ಭಾಗ ೧ ಮತ್ತು ೨' ಎಂಬ ಹೆಸರಿನಲ್ಲಿ ಅವರ ಸಮಗ್ರ ಕಥೆಗಳನ್ನು ಹೊರ ತಂದಿರುವುದನ್ನು ಕಾಣಬಹುದು.

ಅ.ನ.ಕೃ. ರವರು ಕನ್ನಡ ಕಾದಂಬರಿಯ ಭಾವ ಪ್ರವಾಹದ ಬಗ್ಗೆ ಚರ್ಚಿಸಿದರೆ ನಿರಂಜನರವರು ಕನ್ನಡ ಕಾದಂಬರಿಯ ಹಿರಿಯ ಪರಂಪರೆಯನ್ನು ಕುರಿತಂತೆ 'ಪುಷ್ಪಹಾರ' ಕೃತಿಯಲ್ಲಿ ೧೮೯೯ ರಲ್ಲಿ ಗುಲವಾಡಿ ವೆಂಕಟರಾಯರ 'ಇಂದಿರಾ ಬಾಯಿ' ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿರಿಯರ ನೆನೆಪಿನಲ್ಲಿ ಆ ಕಾದಂಬರಿಯ ಘಟನೆಗಳನ್ನು ನೆನಪಿರುವುದೆಂದು, ಕನ್ನಡದ ಎರಡನೇಯ ಕಾದಂಬರಿ ಬೋಳಾರ ಬಾಬುರಾಯ ಕಾದಂಬರಿ 'ವಾಗ್ದೇವಿ' ಯು ಸಂಪೂರ್ಣವಾಗಿ ಮಠದಲ್ಲಿ ನಡೆಯುವ ಸಾಂಸಾರಿಕ ವಿಚಾರಗಳು, ರಾಜಕೀಯ ಮೊದಲಾದವುಗಳನ್ನು ತಿಳಿಸುವ ಕಾದಂಬರಿಯಾಗಿದೆ. ೧೯೦೩ ರ ಗುಲವಾಡಿ ಅಣ್ಣಾಜಿ ರಾಯ ಬರೆದ 'ರೋಹಿಣಿ' ಕಾದಂಬರಿ, ಕೆರೂರು ವಾಸುದೇವ ಚಾರ್ಯರು ಬರೆದ ಸ್ವತಂತ್ರ ಸಾಮಾಜಿಕ ಕಾದಂಬರಿ 'ಇಂದಿರೆ' (೧೯೦೮), ೧೯೧೩ರಲ್ಲಿ ಪ್ರಕಟವಾದ ಎಂ.ಎಸ್ ಪುಟ್ಟಣ್ಣನವರ 'ಮಾಡಿದ್ದುಣ್ಣೊ ಮಹರಾಯ' ಹೀಗೆ ಕನ್ನಡ ಕಾದಂಬರಿಯು ಹಿರಿಯದಾದ ಪರಂಪರೆಯನ್ನು ಹೊಂದಿದೆ. ಅದನ್ನು ಬೆಳೆಸಿಕೊಂಡು ಹೋಗುವ ಹೊಣೆಗಾರಿಕೆ ಇಂದಿನ ಸಾಹಿತಿಗಳ ಮೇಲೆ ಇದೆ ಎಂಬುದಾಗಿ ಕನ್ನಡ ಕಾದಂಬರಿಯ ಹಿರಿಯ ಪರಂಪರೆ ಎಂಬ ಲೇಖನದಲ್ಲಿ ತಿಳಿಸುತ್ತಾರೆ. ಕನ್ನಡ ಕಾದಂಬರಿಯ ಪರಂಪರೆಯನ್ನು ಗಮನಿಸಿದರೆ ಅಂದಿನ ಸಮಕಾಲೀನ ಸಾಮಾಜಿಕ ಚಿತ್ರಣ ಸಮಸ್ಯೆಗಳನ್ನು ತಿಳಿಸುವ ವಸ್ತು, ಪಾತ್ರ, ಸಂಭಾಷಣೆಗಳು ಆಯಾಯ ಕಾಲಘಟ್ಟದ ಕಾದಂಬರಿಗಳಲ್ಲಿ ವ್ಯಕ್ತವಾಗಬೇಕು ಎಂಬ ದೃಷ್ಟಿಯನ್ನು ಹೊಂದಿದೆ.

ಕಾದಂಬರಿ ಎನ್ನುವುದು ಬರಿಯ ಕಟ್ಟು ಕತೆಯಲ್ಲ, ಅದು ಅನುಭವದಿಂದ ನಿರ್ಮಿತವಾದ ಸಾಹಿತ್ಯವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಆಸ್ಟ್ರೇಲಿಯಾದ ಕ್ರಂಪ್ ಎಂಬ ಕಾದಂಬರಿಕಾರ ತನ್ನ ಕಾದಂಬರಿಯನ್ನು ಬರೆಯಲು ಅನುಭವಕ್ಕಾಗಿ ಒಂದು ನಿರ್ಜನ ಪ್ರದೇಶದ ದ್ವೀಪದಲ್ಲಿ ಒಬ್ಬಂಟಿಯಾಗಿ ಬದುಕಬಹುದು ಎಂಬುದಕ್ಕೆ ತಾನೆ ಸ್ವಲ್ಪ ಕಾಲ ಇದ್ದು, ಅದರಿಂದ ಅನುಭವ ಪಡೆದು ಮಾಡಿದ ಸಾಹಸದ ಕಥೆಯೇ ಮುಂದೆ ಕಾದಂಬರಿಯಾಗಿ ಬರೆಯಲು ಪ್ರೇರಣೆ ಪಡೆದ ವಿಚಾರವನ್ನು ಅಂಕಣ ಕೃತಿಯ 'ಕಾದಂಬರಿಯ ಹುಟ್ಟು' ಎಂಬ ಲೇಖನದಲ್ಲಿ ಕಾದಂಬರಿಯನ್ನು ಬರೆಯಲು ಬರಹಗಾರನಿಗೆ ಅನುಭವವು ಮುಖ್ಯವಾಗುತ್ತದೆ ಎಂಬುದನ್ನು ಸೂಚಿಸುತ್ತಾರೆ. 'ದಿನಚರಿಯಿಂದ' ಎಂಬ ಪತ್ರಿಕಾ ಅಂಕಣಗಳ ಸಂಕಲನ ಕೃತಿಯಲ್ಲಿ 'ತೆರೆದ ಮನಸ್ಸು' ಎಂಬ ಅಂಕಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಕನ್ನಡ ಅಧ್ಯಯನ ಸಂಸ್ಥೆ ಏರ್ಪಡಿಸಿದ 'ಪ್ರಬುದ್ಧ ಕರ್ನಾಟಕ' ಪತ್ರಿಕೆಯ ೫೦ ನೇ ವರ್ಷದ ಸಂದರ್ಭದಲ್ಲಿ ಕನ್ನಡ ಕಾದಂಬರಿಯ ಪ್ರಪಂಚವನ್ನು ಕುರಿತ

ವಿಚಾರಗೋಷ್ಠಿಯಲ್ಲಿ ಗಿರಡ್ಡಿ ಗೋವಿಂದ ರಾಜು ರವರು ಕಾದಂಬರಿಯನ್ನು ನವೋದಯ, ಪ್ರಗತಿಶೀಲ, ನವ್ಯ ಎಂದು ವಿಭಾಗಿಸಬಹುದೆಂದು ಹೇಳಿದ ವಿಷಯಕ್ಕೆ ನಿರಂಜನರವರು ಯಾವುದೇ ನವೋದಯ ಕವಿಗಳು ನಾವು ನವೋದಯ ಕಾದಂಬರಿ ಬರೆದನೆಂದು, ಹಾಗೆಯೇ ಪ್ರಗತಿಶೀಲ ಕಾಲಘಟ್ಟದ ಬರಹಗಾರನು ತಾನು ಪ್ರಗತಿಶೀಲ ಕಾದಂಬರಿ ಬರೆದನೆಂದು ಹೇಳಿಕೊಳ್ಳುವುದಿಲ್ಲ. ಆದರೆ ನವ್ಯದವರು ಮಾತ್ರ ಅದನ್ನು ನವ್ಯ ಕಾದಂಬರಿಯೆಂದು ಸಮರ್ಥಿಸುವುದು ಸರಿಯಿಲ್ಲವೆಂದು ಪ್ರಾಮಾಣಿಕವಾದ ಬರಹಗಾರನಿಗೆ ಸಾಹಿತ್ಯವನ್ನು ಸೃಷ್ಟಿಸುವುದು ಆತನ ಹಂಬಲವಾಗಿರಬೇಕು. ಅದಕ್ಕೆ ಲೇಖಕರಿಗೆ ತೆರದ ಮನಸ್ಸು ಇರಬೇಕು. ತಮ್ಮದು ಈ ಪಂಥದ ಕಾದಂಬರಿಯೆಂದು ಹೇಳಿಕೊಳ್ಳುವುದಲ್ಲ. ಬದುಕಿನ ಹಲವಾರು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಬರಹ ಅಥವಾ ಕಾದಂಬರಿಯಾಗಬೇಕು ಎಂಬುದು ಮುಖ್ಯವಾಗಿರಬೇಕು.

ಯಾವುದೇ ಸಾಹಿತಿ ಅಥವಾ ಬರಹಗಾರ ತನ್ನ ಬರವಣಿಗೆಯ ಸಾಹಿತ್ಯವನ್ನು ಇದೇ ಪಂಥದಿಂದ ಬರೆದೆ ಎಂದು ಹೇಳಿಕೊಳ್ಳಲಾಗುವುದಿಲ್ಲ. ಹಾಗೇ ಹೇಳಿಕೊಳ್ಳುವುದು ಬರಹಗಾರನ ಲಕ್ಷಣವು ಅಲ್ಲ. 'ಉಡುಪಿಯ ನವಮಠ' ಎಂಬ ಲೇಖನದಲ್ಲಿ ಗೋಪಾಲಕೃಷ್ಣ ಅಡಿಗರು ಸೃಷ್ಟಿಸಿದ ಸಾಹಿತ್ಯ ಹೊಸಮಠದ ಹಾಗೇ, ನವ್ಯ ಸಾಹಿತ್ಯ ಪಂಥವನ್ನು ಮಠವೆಂದು ಕರೆಯುವುದು ಮಾತ್ರವಲ್ಲದೇ ಒಬ್ಬರು ನಡೆದ ದಾರಿ, ಮಾರ್ಗ, ಪಂಥದಲ್ಲಿ ಅನೇಕರು ನಡೆಯುವುದು ಹಾಗೆಯೇ ಸಾಹಿತ್ಯದಲ್ಲಿಯೂ ಕೂಡ ನವ್ಯ ಸಾಹಿತ್ಯ ಪಂಥವನ್ನು ಹೊಸಮಠವೆಂದು, ಅಡಿಗರು ಹಾಕಿಕೊಟ್ಟ ಮಾರ್ಗದಲ್ಲಿಯೇ ಹಲವು ನವ್ಯ ಬರಹಗಾರರು, ಸಾಹಿತಿಗಳು ನಡೆಯುತ್ತಿದ್ದಾರೆ. ಅಡಿಗರು ಉಡುಪಿಯ ಕುಂದಾಪುರದ ಪ್ರದೇಶದವರಾಗಿದ್ದರಿಂದ ಉಡುಪಿಯ ನವಮಠವೆಂದು, ಉಡುಪಿಯಲ್ಲಿ ಅಷ್ಟ ಮಠಗಳಿದ್ದು, ಅಡಿಗರ ಸಾಹಿತ್ಯ ಪಂಥವನ್ನು ಸೇರಿಸಿ ನವ ಮಠವೆಂದು ಅಥವಾ ಒಂಭತ್ತನೇಯ ಮಠವೆಂದು ಕರೆದರು. ಮೈಸೂರು ವಿಶ್ವ ವಿದ್ಯಾಲಯದ ೫೦ ವರ್ಷ ತುಂಬಿದ ಆಚರಣೆಯ ಸಂದರ್ಭದಲ್ಲಿ ಕನ್ನಡ ಲೇಖಕರ ಸಮ್ಮೇಳನ ನಡೆಯಿತ್ತು. ಅಲ್ಲಿ ನವ್ಯದವರೇ ಹೆಚ್ಚು ಪಾಲ್ಗೊಂಡಿದ್ದರು. ಇವರು ತಮ್ಮನ್ನು ತರುಣ ಕವಿಗಳೆಂದು ಕರೆದುಕೊಳ್ಳುತ್ತಾರೆ. ೪೦-೫೦ ವರ್ಷ ದಾಟಿದವರೆಲ್ಲ ತರುಣರಾದರೆ ತರುಣರನ್ನು ಏನೆಂದು ಕರೆಯಬೇಕು? ಎಂದು ಪ್ರಶ್ನಿಸುತ್ತಾರೆ. ಅದೇ ರೀತಿಯಲ್ಲಿ ಪ್ರಗತಿಶೀಲ ಲೇಖಕರ ಸಮ್ಮೇಳನ ಇದು ಕೂಡ ಒಂದೇ ಕೋಮಿನವರಾಗಿದ್ದು, ಅವರೆಲ್ಲಾ ಪ್ರಗತಿಶೀಲರೆಂದು ಕರೆದುಕೊಳ್ಳುವುದು ಈ ರೀತಿಯ ಧೋರಣೆಯು ಒಂದು ಮಠವೇ ಆಗಿದೆ. ಸಾಹಿತ್ಯ ದೃಷ್ಟಿಯಿಂದ ಈ ರೀತಿಯಲ್ಲಿ ಸಮ್ಮೇಳನಗಳು, ಪಂಥಗಳ ಹಿನ್ನಲೆಯಲ್ಲಿ ನಡೆಯಬಾರದೆಂದು ಎಲ್ಲಾ ಮೂರು ಪಂಥಗಳು ಒಂದೇ ವೇದಿಕೆಯಲ್ಲಿ ಚರ್ಚೆ ನಡೆಸುವ ಮೂಲಕ ಕನ್ನಡ ಸಾಹಿತ್ಯ ಬೆಳೆಯುವಂತಾಗಬೇಕು ಎಂಬ ಧೋರಣೆಯನ್ನು 'ಬೆಕ್ಕಿನ ಬಿಡಾರ ಬೇರೆ' ಎಂಬ ಅಂಕಣದಲ್ಲಿ ಪ್ರತಿಪಾದಿಸುತ್ತಾರೆ. 'ಪಂಚ ನದಿಗಳ ನಾವಿಕ' ಎಂಬ ಅಂಕಣದಲ್ಲಿ ಪಂಜಾಬಿನ ಸಾಹಿತಿಯಾದ ಗುರು ಮುಖ್ ಸಿಂಗ್ ಜೀತ್ ಅಂದಿನ ಪ್ರಕಾಶಕರು ಕಾದಂಬರಿ ಏನಾದರೂ ಬರೆದಿದ್ದರೆ ತನ್ನಿ ಎಂದು ಹೇಳುವುದು ಕಾದಂಬರಿಯಿಂದ ಮಾತ್ರ ಹಣಗಳಿಸಬಹುದೆಂಬ ಮನಃಸ್ಥಿತಿ, ಮತ್ತು ಇತರ ಸಾಹಿತ್ಯ ಪ್ರಕಾರಗಳಿಗಿಂತ ಕಾದಂಬರಿಗೆ ಪ್ರಕಾಶಕರು ಮತ್ತು ಜನತೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿರುವುದನ್ನು ತಿಳಿಸುವುದಾಗಿದೆ. ೧೯೪೦-೫೦ ರ ದಶಕದಲ್ಲಿಯೇ ಕಾದಂಬರಿ ಹೆಚ್ಚು ಮನ್ನಣೆ ಗಳಿಸಿದಕ್ಕೆ ಈ ಧೋರಣೆ ಒಂದು ಉದಾಹರಣೆಯಾಗಿದೆ.

'ಬುದ್ಧಿ ಭಾವ ಬದುಕು' ಕೃತಿಯ ೧೯೫೩ ರ 'ಕನ್ನಡ ಕಾದಂಬರಿಯ ಹಿರಿಯ ಪರಂಪರೆ' ಎಂಬ ಲೇಖನದಲ್ಲಿ ಕನ್ನಡ ಕಾದಂಬರಿ ಪ್ರಕಾರವು ಬೆಳೆಯಲು ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆಯಿಂದ ಮೊದಲ ಕಾದಂಬರಿಗಳು ಬೆಳೆದವು, ತದ ನಂತರ ಮಾಸ್ತಿ, ಕುವೆಂಪು, ಕಾರಂತ ಅ.ನ.ಕೃ. ಮೊದಲಾದವರು ಕಾದಂಬರಿ ಪ್ರಕಾರ ಬೆಳೆಸಿದರು, ಒಂದು ನಿರ್ದಿಷ್ಟ ಕಾಲ ಘಟ್ಟದ ಜನ ಜೀವನವನ್ನು ಇವರ ಕೆಲವು ಕಾದಂಬರಿಗಳಲ್ಲಿ ಕಾಣಬಹುದಾಗಿದೆ. ಮುಂದೆ ರಾಷ್ಟ್ರೀಯ ಹೋರಾಟಕ್ಕೂ ಕಾದಂಬರಿಯು ಪ್ರೇರಣೆ ನೀಡಿತ್ತು. ಒಂದು ಕಾಲದಲ್ಲಿ ಕನ್ನಡ ಕಾದಂಬರಿಯ ಮೇಲೆ ಆದರ್ಶವಾದ ಹಿಡಿತವನ್ನು ಹೊಂದಿತ್ತು. ಕಾಲ ಕ್ರಮೇಣ ವಾಸ್ತವವಾದವು ಕಾದಂಬರಿಗಳಲ್ಲಿ ಬೆಳೆಯುತ್ತಿದೆ ಎಂದು ಕನ್ನಡ ಕಾದಂಬರಿಯ ಬೆಳೆಯುವಿಕೆಯ ಹಿನ್ನಲೆಯಲ್ಲಿ ವಿಶ್ಲೇಷಿಸುತ್ತಾರೆ.

ನಾಡಿ: ನಿರಂಜನರ ಆಯ್ದ ಪತ್ರ ಸಂಕಲನ'ದಲ್ಲಿ ಕೃಷ್ಣ ಭಟ್ ರವರಿಗೆ ೧೦/೦೭/೧೯೭೫ ರಲ್ಲಿ ಬರೆದ ಪತ್ರದಲ್ಲಿ ಪಾರ್ಶ್ವವಾಯುವಿನಿಂದ ತುತ್ತಾಗಿದರು. 'ಮೃತ್ಯುಂಜಯ' ಕಾದಂಬರಿ ಬರೆದು ಮುಗಿಸಿದ ವಿಚಾರವನ್ನು ಪ್ರಸ್ತಾಪಿಸುತ್ತಾರೆ. ಪ್ರಾಗ್ಭರತಾ ಕಥಾ ಎಂಬ ಕಾದಂಬರಿಯು ಬರೆಯಲು ಎರಡು ವರ್ಷಗಳು ಬೇಕಾಗಿದ್ದು ಅದನ್ನು ಬರೆಯದೇ, ಮುಗಿಸದೇ ಹೋಗುವುದಿಲ್ಲ ಎಂಬ ಅವರ ಮಾತಿನಲ್ಲಿ ಅದಮ್ಯವಾದ ಬದುಕಿನ ಬಗ್ಗೆ ಇದ್ದಂತಹ ಪ್ರೀತಿ ವ್ಯಕ್ತವಾಗುತ್ತದೆ. ದಕ್ಷಿಣ ಕನ್ನಡದ ಕುಳಕುಂದದ ನೆಲ ಸೋಂಕಿದರೆ ಒಂದು ಚೇತನ ಬರುತ್ತದೆ. ಆ ಚೇತನದಿಂದಲೇ ತಾನು 'ಮೃತ್ಯುಂಜಯ' ಕಾದಂಬರಿ ಬರೆಯಲು ಸಾಧ್ಯವಾಯಿತೆಂದು ಹಾಗಾಗಿ ಮತ್ತೊಮ್ಮೆ ಆ ಪ್ರದೇಶಕ್ಕೆ ಬರುತ್ತೇನೆಂದು ಹೇಳುತ್ತಾರೆ. ಇಲ್ಲಿ ನಿರಂಜನರು ತಮ್ಮ ಹುಟ್ಟಿದ ನೆಲದ ಮೇಲೆ ಅಪಾರವಾದ ಅಭಿಮಾನವನ್ನು ಹೊಂದಿರುವುದಕ್ಕಿಂತ ಈ ನೆಲದ ಮಣ್ಣಿನಿಂದ ಹೊಸ ಚೇತನ ಲಭಿಸಿ ಕಾದಂಬರಿ ಬರೆಯಲು ಶಕ್ತಿ ನೀಡುವ ನೆಲದ ಹಿರಿಮೆಯನ್ನು ಸೂಚಿಸುತ್ತದೆ. ಒಬ್ಬ ಬರಹಗಾರನಿಗೆ ಪ್ರಭಾವಿಸುವ ಹಲವು ಅಂಶಗಳಲ್ಲಿ ಆತ ಹುಟ್ಟಿದ ಪ್ರದೇಶವು ಮುಖ್ಯವಾಗುತ್ತದೆ ಎಂಬುದು ನಿರಂಜನರವರ ಈ ಮಾತಿನಲ್ಲಿದೆ.

ಸಾಹಿತಿಯ ಬಾಲ್ಯದ ಅನುಭವ ಕೃತಿಯಲ್ಲಿ ವ್ಯಕ್ತವಾಗುತ್ತವೆ ಎಂಬ ಅಂಶವನ್ನು ೦೭-೦೧-೧೯೮೬ರಲ್ಲಿ ಪ್ರಭಾಕರ ಶಿಶಿಲರವರಿಗೆ ಬರೆದ ಪತ್ರದಲ್ಲಿ 'ಶಿಕಾರಿಯ ಸೀಳುನೋಟ ಕಥನ' ಬಗ್ಗೆ ೧೯೩೪ರಲ್ಲಿ ಸುಳ್ಯಕ್ಕೆ ಬಂದಾಗ ಅಲ್ಲಿ ಒಂದು ಹೆಬ್ಬುಲಿಯನ್ನು ತಲೆ, ಬೆನ್ನು ಕೆಳಗಾಗಿ ಬಿದಿರಿನ ಅಥವಾ ಮರದ ದಿಂಡಿಗೂ ಕಟ್ಟಿ ಮೆರವಣಿಗೆ ಮಾಡಿದ್ದರು. ಅದನ್ನು ಅಪ್ಪಯ್ಯ ಗೌಡರು ಕೊಂದರೆಂದು ಎಲ್ಲೂ ಉಲ್ಲೇಖಿಸದೇ ತಮ್ಮ ಮೃತ್ಯುಂಜಯ ಕಾದಂಬರಿಯಲ್ಲಿ ಬಾಣಕ್ಕೆ ಬಲಿಯಾದ ಸಿಂಹದ ಮೆರವಣಿಗೆಗೆ ಮೂಲ ಆಕರ ಈ ಘಟನೆಯಾಗಿದೆ ಎಂಬುದನ್ನು ಮೆಲುಕು ಹಾಕುತ್ತಾರೆ.

ಒಬ್ಬ ಬರಹಗಾರನಿಗೆ ಬಾಲ್ಯದ ಘಟನೆಗಳು ಅಥವಾ ಅನುಭವಗಳು ಹೇಗೆ ಮುಂದೆ ತಮ್ಮ ಬರಹಕ್ಕೆ ಆಕರಗಳಾಗುತ್ತವೆ ಎಂಬುದನ್ನು ಈ ಪತ್ರದ ಉಲ್ಲೇಖದಿಂದ ತಿಳಿಯಬಹುದು.

ಕಾಲಕ್ಷೇಪ ಕೃತಿಯ 'ಯಾವುದು ಮುಖ್ಯ'? ಎಂಬ ಲೇಖನದಲ್ಲಿ ಕನ್ನಡದಲ್ಲಿ ಹತ್ತಿಪ್ಪತ್ತು ಕಾದಂಬರಿ ಬರೆದು ಹೆಗ್ಗಳಿಕೆ ಪಡೆದವರು. ಬರೆಯುವ ಕಲೆಯು ಚೆನ್ನಾಗಿ ಸಾಧಿಸಿರುವ ಜನರು ಸುಲಭವಾಗಿ ಪುಟ ಸಾರ್ವಭೌಮರಾಗುತ್ತಾರೆ. ಕಾದಂಬರಿಯ ಎಲ್ಲಾ ಬರವಣಿಗೆಯ ಕೃತಿಗಳು ಉತ್ಕೃಷ್ಟವಾಗುವುದಿಲ್ಲವೆಂದು ಆದರೆ ಯೂರೋಪ್‌ನ ರಾಷ್ಟ್ರಗಳಲ್ಲಿ ಅಲೆಕ್ಸಾಂಡರ್ ಡ್ಯೂಮಾ. ಬಾಲ್ಜಾಕ್, ಲೋಪ್ ಡಿ'ವೇಗಾ ಮೊದಲಾದವರು ಸಾಕಷ್ಟು ಕೃತಿಗಳನ್ನು ಬರೆದಿದ್ದಾರೆ. ಐರೋಪ್ಯ

ಸಾಹಿತ್ಯದ ಪ್ರಮುಖರಲ್ಲಿ ಗಡಿಯಾರವಿಟ್ಟುಕೊಂಡು ದಿನಕ್ಕಿಷ್ಟು, ಗಂಟೆಗಿಷ್ಟು ಪುಟ ಎಂದು ಬರೆಯುವ ನಿಯಮವಿದೆ. ಇದು ಒಂದು ಯಾಂತ್ರಿಕ ದುಡಿಮೆಯಾಗಿದೆ. ಈ ರೀತಿಯ ಯಾಂತ್ರಿಕ ಬರಹದಿಂದ ಹೊರ ಬಂದ ಕೆಲವು ಕೃತಿಗಳು ಉಳಿಯಬಹುದು ಇಲ್ಲವೇ ಅಳಿಯಬಹುದು. ಯಾವ ಬರಹಗಾರನ ಬರವಣಿಗೆಗೆ ಬೇಡಿಕೆ ಇರುವುದರಿಂದಾಗಿ ಬರವಣಿಗೆ ವೇಗಕ್ಕೂ ಹಾಗೂ ಮಾರುಕಟ್ಟೆಗೂ ಸಂಬಂಧವಿದೆ. ತನ್ನ ಕಾದಂಬರಿಯ ಬಗ್ಗೆ ಹೆಚ್ಚು ಬೇಡಿಕೆ ಇರುವುದರಿಂದ ಒಂದೇ ಸಮನೆ ದುಡಿಯುವುದು ಜೀವನಾಶ್ಯಕವಾದ ಹಣಕ್ಕಾಗಿ ಬರಹಗಾರ ಈ ರೀತಿ ವರ್ತಿಸುತ್ತಾನೆ.

ಈ ರೀತಿಯ ಹಣದ ದೃಷ್ಟಿಯೇ ಕಾದಂಬರಿಯನ್ನು ಕೆಲವು ಬರಹಗಾರರು ಬರೆಯಲು ಧೋರಣೆಯಾಗಿದೆ. ಆದರೆ ಈ ರೀತಿಯ ಧೋರಣೆ ಸರಿಯಲ್ಲ. ಓದುಗರು ಕೆಲವೊಮ್ಮೆ ಕಾದಂಬರಿ ಬರೆಯಲು ನೀವು ಎಷ್ಟು ದಿನ ಅಥವಾ ಎಷ್ಟು ಸಮಯ ತೆಗೆದುಕೊಂಡಿರಿ ಎಂದು ಕೆಲವು ಕಾದಂಬರಿಕಾರರನ್ನು ಪ್ರಶ್ನಿಸುತ್ತಾರೆ. ಅದಕ್ಕೆ ಉತ್ತರವಾಗಿ ನಿರಂಜನರವರು ಬರಹಗಾರನಾದ ಕಾದಂಬರಿಕಾರ ಒಂದು ಕೃತಿಯನ್ನು ಬರೆಯಲು ವೇಗ ಮುಖ್ಯವಲ್ಲ, ಪುಟ ಸಂಖ್ಯೆ ಮುಖ್ಯವಲ್ಲ, ಕೃತಿಯ ಗುಣಮುಖ್ಯವೆಂದು ವಿಶ್ಲೇಷಿಸುತ್ತಾರೆ. ಅ.ನ.ಕೃ. ಕಾದಂಬರಿಯಲ್ಲಿ ವಾಸ್ತವಿಕತೆಯನ್ನು ಮತ್ತು ಅದರ ಭಾವ ಪ್ರವಾಹವನ್ನು ಚರ್ಚಿಸಿದರೆ, ನಿರಂಜನರವರು ಕಾದಂಬರಿಕಾರನ ಮನಃಸ್ಥಿತಿ ಮತ್ತು ಓದುಗರ ಮನಃಸ್ಥಿತಿ ಯಾವ ಬಗೆಯದು ಎಂಬುದನ್ನು ತಿಳಿಸುತ್ತಾರೆ.

'ಅಪವಾಚನವಾದವರಿಗೆ ಔಷಧ' ಎಂಬ ಲೇಖನದಲ್ಲಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರವು ಜನತೆಗೆ ಅತೀ ಹೆಚ್ಚಾಗಿ ಓದಿ ಅದರಿಂದ ಬಿಡುಗಡೆ ಹೊಂದಬೇಕಾದರೆ ಕಾದಂಬರಿಯನ್ನುಳಿದ ಸಾಹಿತ್ಯದ ಇತರ ಪ್ರಕಾರಗಳಾದ ಜಾನಪದ ಕೃತಿಗಳು, ಸಣ್ಣಕತೆಗಳನ್ನು ಓದಬಹುದೆಂದು ಕಾದಂಬರಿಯ ಸೆಳೆತದಿಂದ ಬಿಡುಗಡೆಯಾಗಲು ಓದುಗರಿಗೆ ಸಲಹೆಯನ್ನು ನೀಡುತ್ತಾರೆ.

ನಿರಂಜನರವರು ಕಾದಂಬರಿಯನ್ನು ಕುರಿತಂತೆ ಅ.ನ.ಕೃರವರಿಗಿಂತ ಭಿನ್ನವಾದ ವಿಚಾರಗಳನ್ನು ಮಂಡಿಸುತ್ತಾರೆ. ಅ.ನ.ಕೃ ವಿಚಾರ ಸಾಹಿತ್ಯದಲ್ಲಿ ಸಾಹಿತ್ಯ ಮತ್ತು ಸಮಾಜ ವಿಚಾರಗಳಿಗೆ ತಮ್ಮದೇ ಆದ ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ. ಅದಕ್ಕೆ ಭಿನ್ನವಾದ ರೀತಿಯಲ್ಲಿ ನಿರಂಜನರು ತಮ್ಮ ವಿಚಾರ ಸಾಹಿತ್ಯದಲ್ಲಿ ಪ್ರತಿಪಾದಿಸುತ್ತಾರೆ. ಆ ಭಿನ್ನವಾದ ಅಂಶಗಳನ್ನು ಈ ಕೆಳಕಂಡಂತೆ ಇನ್ನು ಹಲವು ವಿಷಯಗಳಿಂದ ಸ್ಪಷ್ಟಪಡಿಸಬಹುದು.

'ಅಂಕಣ' ಕೃತಿಯ 'ಕಾದಂಬರಿ ವಿಜಯ' ಎಂಬ ಲೇಖನದಲ್ಲಿ ಫ್ರಾನ್ಸ್‌ನ ಲೇಖಕ ಅಲೆಕ್ಸಾಂಡರ್ ಡ್ಯೂಮಾ ಹೆಚ್ಚಿನ ಕಾದಂಬರಿಗಳನ್ನು ಬರೆದಿದ್ದನು. ಕಾದಂಬರಿಯನ್ನು ಬರೆಯಲು ಬೇರೆಯವರನ್ನು ನೇಮಕ ಮಾಡಿಕೊಳ್ಳುತ್ತಿದ್ದನು. ಆ ರೀತಿಯ ಶ್ರೇಷ್ಠ ಕಾದಂಬರಿಕಾರರಾಗಿ ಅ.ನ.ಕೃ ಸಾಧನೆಯನ್ನು ಗಮನಿಸಬಹುದೆಂದು, ಡ್ಯೂಮಾ ರೀತಿಯಲ್ಲಿ ಅ.ನ.ಕೃ. ನೇಮಿಸಿಕೊಂಡು ಕಾದಂಬರಿ ಬರೆಯುತ್ತಿರಲಿಲ್ಲ. ಅವರು ಒಬ್ಬರೇ ಬರೆಯುತ್ತಿದ್ದರು. "ಹಾಗೆ ನೋಡಿದರೆ ವಾಲ್ಟೇರ್‌ನ ಕ್ರಾಂತಿ ಮನೋಭಾವ, ಬಾಲ್ಝಾಕನ ಸತ್ಯನಿಷ್ಠೆ, ಜೋಲಾನ ವರ್ಣ ವೈವಿಧ್ಯ, ಫ್ಲಾಬೇರ್‌ನ ಅನುಕಂಪ, ಸ್ಟೆಂಡಾಲನ ಕಲಾವಂತಿಕೆ, ಹ್ಯೂಗೋನ ಮಾನವೀಯತೆ ಇವೆಲ್ಲಾವನ್ನು ಒಳಗೊಂಡಿರುವ ವ್ಯಕ್ತಿ ಅ.ನ.ಕೃ."[೩] ಎಂದು ಅಭಿಪ್ರಾಯಿಸುತ್ತಾರೆ.

ನಿರಂಜನರವರು ಇಲ್ಲಿ ಅ.ನ.ಕೃ.ರವರ ಕಾದಂಬರಿಯ ಬರವಣಿಗೆಯ ಶೈಲಿಯನ್ನು ವಿಶ್ವದ ಶ್ರೇಷ್ಠ ಸಾಹಿತಿಗಳ ಬರವಣಿಗೆಯ ಒಂದೊಂದು ಅಂಶಗಳೆಲ್ಲಾ ಸೇರಿ ಶ್ರೇಷ್ಠ ಕಾದಂಬರಿಕಾರರಾಗಿ ನೋಡುತ್ತಾರೆ. ಅ.ನ.ಕೃರವರ ವಿಚಾರಗಳ ಬಗ್ಗೆ ನಿರಂಜನರವರಿಗೆ ಎಷ್ಟೇ ವಿರೋಧಗಳಿದ್ದರೂ ಅವರನ್ನು ಪುಟ ಸಾರ್ವಭೌಮರಾಗಿ ನೋಡದೇ 'ಕಾದಂಬರಿಗಳ ಸಾರ್ವಭೌಮನಾಗಿಯೇ' ಕಾಣುತ್ತಾರೆ. ಮಾತ್ರವಲ್ಲದೇ ಆಧುನಿಕ ಕನ್ನಡ ಸಾಹಿತ್ಯದ ಕೋಲಾಹಲ ಕಾರಕ ಸಾಹಿತಿಯಾಗಿಯೂ ನೋಡುತ್ತಾರೆ. ಅ.ನ.ಕೃ ಕಾದಂಬರಿಗಳನ್ನು ಬರೆಯುವುದು ದೊಡ್ಡದಲ್ಲ. ನೂರು ಕಾದಂಬರಿಗಳನ್ನು ಬರೆಯುವುದು ಸಾಧನೆ. ಒಂದು ಸಿಗರೇಟು ಸೇದಿ ಮುಗಿಸುವಷ್ಟರಲ್ಲಿ ಅ.ನ.ಕೃರವರು ಒಂದು ಕಾದಂಬರಿ ಬರೆಯಲು ವಸ್ತುವಿಗೆ ಅಡಿಪಾಯವನ್ನು ಹಾಕುವರು ಇದು ಅವರ ಪ್ರತಿಭೆ ಎಂದು ನಿರಂಜನರವರು ನೋಡುತ್ತಾರೆ.

ಸಾಹಿತ್ಯ ವಲಯದಲ್ಲಿ ನಡೆಯುವ ಟೀಕೆಗಳು ಒಮ್ಮೊಮ್ಮೆ ವೈಯುಕ್ತಿಕ ಮಟ್ಟಕ್ಕೆ ಹೋಗುವ ವಿಚಾರವನ್ನು ನಿರಂಜನರವರು 'ಗುಡಿಯಲ್ಲಿ ದುರ್ಗಂಧ' ಎಂಬ ಅಂಕಣದಲ್ಲಿ ಫ್ರಾನ್ಸ್‌ನ ಮೇರು ಬರಹಗಾರನಾದ ಸ್ರಾಂಕೂ ಮಾರಿಯಾಂಕ್ ಮತ್ತು ರೋಜರ್ ಫೀರೆಫಿತೆ ನಡುವೆ ವಾದ ವಿವಾದಗಳು ಹಬ್ಬಿಕೊಂಡಿತ್ತು. ಫೀರೆಫಿತೆ ಬರೆದ 'ವಿಶಿಷ್ಟ ಸ್ನೇಹ' ಎಂಬ ಕಾದಂಬರಿ ರೋಮನ್ ಕ್ಯಾಥೋಲಿಕ್ ಶಾಲೆಯಲ್ಲಿ ಇಬ್ಬರು ವಿದ್ಯಾರ್ಥಿಗಳ ನಡುವೆ ನಡೆಯುವ ಸಲಿಂಗರತಿ ಸಂಬಂಧದ ಕಥಾವಸ್ತು. ಇದು ಚಲನಚಿತ್ರವಾಗುವ ಸಂದರ್ಭದಲ್ಲಿ ಅಸಹ್ಯವಾದ ಕಾದಂಬರಿಯೆಂದು ಮಾರಿಯಾಂಕ್ ಟೀಕಿಸಿದರು. ಮುಂದೆ ಈ ಟೀಕೆ ವೈಯುಕ್ತಿಕ ವಿಚಾರಗಳ ನಡುವೆ ಇವರಿಬ್ಬರಲ್ಲಿ ಟೀಕೆ, ಚರ್ಚೆಗಳು, ವಾದಗಳು ನಡೆದವು. ಇದು ೧೯೬೪ರಲ್ಲಿ ಬರೀ ಫ್ರೆಂಚ್ ಸಾಹಿತ್ಯಕ್ಕೆ ಮಾತ್ರವಲ್ಲ ಎಲ್ಲಿ ಬೇಕಾದರೂ ನಡೆಯುತ್ತದೆ. ಸಾಹಿತ್ಯ ಚರ್ಚೆ ಆರಂಭವಾಗುವುದು ಸಾಹಿತಿಗಳ ನಡುವೆ ಆದರೆ ಅದು ಅಂತಿಮವಾಗುವುದು ವೈಯುಕ್ತಿಕ ಟೀಕೆಗಳಿಂದ ಕಲೆ, ಸಾಹಿತ್ಯ ಗುಡಿಯಲ್ಲಿಯು ಈ ರೀತಿಯ ಅಪವಿತ್ರವಿದೆಯೆಂದು ಚರ್ಚಿಸುತ್ತಾರೆ.

ನಿರಂಜನ ಮತ್ತು ಅ.ನ.ಕೃರವರ ನಡುವೆಯೂ ಇದೇ ಮಾದರಿಯಲ್ಲಿ ಕೆಲವೊಂದು ಟೀಕೆ-ಚರ್ಚೆಗಳು ವೈಯಕ್ತಿಕ ಮಟ್ಟದಲ್ಲಿ ನಡೆದಿವೆ. ಅ.ನ.ಕೃರರು ನಿರಂಜನರವರ ಮೇಲೆ ಕೋಪ ತೀರಿಸಿಕೊಳ್ಳಲು 'ಕನ್ನಡಮ್ಮನ ಗುಡಿಯಲ್ಲಿ' ಎಂಬ ಕಾದಂಬರಿ ಬರೆದರು. ಆ ಕಾದಂಬರಿಯಲ್ಲಿ ಬರುವ ಮೂರ್ತಿ, ನಾಯಕ – ಅ.ನ.ಕೃರವರೆಂದು, ಖಳನಾಯಕ – ಹುನಗುಂದ ಈಶ್ವರರಾಯ (ನಿರಂಜನರವರ ಹೆಸರು ಕುಳಕುಂದ ಶಿವರಾಯ) ಎಂಬುದನ್ನು ಇಲ್ಲಿ ಗಮನಿಸಬಹುದು. ಈ ಕಾದಂಬರಿಯ ವಿರುದ್ಧವಾಗಿ ಪ್ರಜಾವಾಣಿಯ ಸಾಪ್ತಾಹಿಕ ಪುರವಾಣಿಯಲ್ಲಿ 'ಕನ್ನಡಮ್ಮನ ಗುಡಿಯಲ್ಲಿ ಅಕ್ಷರ ವ್ಯಭಿಚಾರ' ಎಂಬ ಶೀರ್ಷಿಕೆಯಲ್ಲಿ ಟೀಕಿಸಿ ನಿರಂಜನರವರು ಲೇಖನಗಳನ್ನು ಬರೆದಿದ್ದರು. "ಹುನಗುಂದ ಈಶ್ವರರಾಯ ಅಷ್ಟು ಕೆಟ್ಟವನು ಎಂದು ಅ.ನ.ಕೃ ಅವರು ಚಿತ್ರಿಸಲು ಈಶ್ವರರಾಯ ನೆನಾದರು ಮೂರ್ತಿಯ ಹೆಂಡತಿಯನ್ನು ಹೊತ್ತುಕೊಂಡು ಹೋಗಿದ್ದನೇ? ಎನ್ನುವ ಅರ್ಥ ಬರುವ ವಾಕ್ಯಗಳನ್ನು ನಿರಂಜನರು ಬರೆದಿದ್ದರು"[೪] ಎಂದು ಬಿ. ಎ. ವೈಕುಂಠ ರಾಜುರವರು ಅಭಿಪ್ರಾಯಿಸುತ್ತಾರೆ. ಆ ಮೂಲಕ ಪ್ರಗತಿಶೀಲ ಸಾಹಿತ್ಯ ಚಳುವಳಿಯ ಪ್ರಮುಖ ಲೇಖಕರಾದ ಅ.ನ.ಕೃ. ಮತ್ತು ನಿರಂಜನರ ನಡುವೆ ಸಾಹಿತ್ಯ ವಿಚಾರವಾಗಿ ಟೀಕೆಗಳು, ಚರ್ಚೆಗಳು, ವಾದಗಳು ಮಾತ್ರ ನಡೆಯದೆ, ಕೆಲವೊಮ್ಮೆ ವೈಯುಕ್ತಿಕ ಮಟ್ಟದಲ್ಲಿಯೂ ಇವರಿಬ್ಬರ ನಡುವೆ ಚರ್ಚೆ, ವಾದಗಳು, ಸಂಘರ್ಷಗಳು ನಡೆದಿವೆ ಎಂಬುದಕ್ಕೆ ಇದೊಂದು ಸ್ಪಷ್ಟ ಉದಾಹರಣೆಯಾಗಿದೆ. ಇದಕ್ಕೆ ಮತ್ತೊಂದು

ಉದಾಹರಣೆಯಾಗಿ ಅ.ನ.ಕೃ. ನಿರಂಜನರವರ ಮೇಲೆ 'ಕಾಮ್ರೇಡ್ ಗಣೇಶ' ಎಂಬ ಕಾದಂಬರಿ ಬರೆದಿದ್ದು ಕೂಡ ಇದಕ್ಕೆ ಸಾಕ್ಷಿಯಾಗಿದೆ.

ಅ.ನ.ಕೃರವರು 'ಸಾಹಿತ್ಯ ಮತ್ತು ಜೀವನ' ಎಂಬ ಕೃತಿಯಲ್ಲಿ 'ಹಾಸ್ಯರಸ' ಮತ್ತು 'ಕನ್ನಡ ಸಾಹಿತ್ಯದಲ್ಲಿ ಹಾಸ್ಯ' ಎಂಬ ಎರಡು ಲೇಖನಗಳಲ್ಲಿ ರಸಗಳಲ್ಲಿ ಹಾಸ್ಯರಸವೆಂಬುದು ಮನುಷ್ಯನ ಜೀವನದ ಅಪೂರ್ಣತೆಯನ್ನು ಉತ್ಪ್ರೇಕ್ಷಿಸಿ ತೋರಿಸುವಂಥದ್ದು ಜೊತೆಗೆ ಹಾಸ್ಯವು ಹುಟ್ಟುವುದು ಸಾಮಾಜಿಕ ನಡೆಯ ವಿಪರ್ಯಾಸದಿಂದ ಮತ್ತು ಬುದ್ಧಿ, ಅಂತಃಕರಣಗಳ ಸಮಾಗಮದಿಂದ. ಸಾಹಿತ್ಯದಲ್ಲಿ ಮಾತ್ರವಲ್ಲದೇ ನಾಟಕ, ಚಿತ್ರಕಲೆಗಳಲ್ಲಿಯೂ ಹಾಸ್ಯವೆಂಬುದು ಸಾಮಾನ್ಯವಾದುದಾಗಿದೆ. ಕನ್ನಡ ಸಾಹಿತ್ಯದಲ್ಲಿ ಹಾಸ್ಯವನ್ನು ಹೆಚ್ಚಾಗಿ ಬಳಸಿಕೊಂಡಿರುವುದನ್ನು ಸಂಕ್ಷಿಪ್ತವಾಗಿ ತಿಳಿಸುವ ಅ.ನ.ಕೃರವರು ಶ್ರೀರಂಗ, ಕೈಲಾಸಂರವರ ನಾಟಕಗಳಲ್ಲಿರುವ ಹಾಸ್ಯವನ್ನು ಉದಾಹರಿಸುತ್ತಾರೆ. ಸಾಹಿತ್ಯದಲ್ಲಿ ಹಾಸ್ಯರಸದ ಪೋಷಣೆ ಇಲ್ಲದೇ ಕೃತಿಯೇ ಆಗುವುದೇ ಇಲ್ಲ ಎಂದು ತಿಳಿಸುತ್ತಾರೆ. ಈ ಹಿನ್ನೆಲೆಯಲ್ಲಿ ಹಾಸ್ಯದ ಬಗ್ಗೆ ಪರಿಚಯಾತ್ಮಕವಾಗಿ ವಿವರಿಸುತ್ತಾರೆ.

ಕನ್ನಡ ಸಾಹಿತ್ಯದ ಮೇಲೆ ಅನೇಕ ಕಾಲಘಟ್ಟದಲ್ಲಿ ಅನೇಕ ವಿಚಾರಗಳು, ರಸಗಳು ಪ್ರಭಾವಿಸಿದೆ. ಹಾಗೆಯೇ ೧೯೬೨ರಲ್ಲಿ ವೀರರಸವು ಕೂಡಾ ಪ್ರಭಾವಿಸಿದೆ. ಚೀನಾ ಆಕ್ರಮಣದಿಂದ ಕನ್ನಡನಾಡಿನ ಪ್ರಖ್ಯಾತ ಕವಿಗಳಿಂದ ಹಿಡಿದು ಅನಾಮಿಕರವರೆಗೂ ರಾಷ್ಟ್ರಾಭಿಮಾನವನ್ನು ಪ್ರಕಟಿಸಿರುವ ಕವಿತೆಗಳನ್ನು ಪಟ್ಟಿ ಮಾಡಿ ನಿರಂಜನರವರು ಕೆ.ಎಸ್. ನರಸಿಂಹಸ್ವಾಮಿ, ಸಿದ್ಧಯ್ಯ ಪುರಾಣಿಕ್, ನಿಸಾರ್ ಅಹಮದ್, ಎಂ.ಆರ್. ಶರ್ಮ, ಕೆ.ಜಿ. ಗೋಪಾಲಕೃಷ್ಣ, ಭರಮಲಿಂಗಪ್ಪ, ನರಸಿಂಗಯ್ಯ, ಬಿ.ವಿ.ಕೋಟೇಶ್ವರ ಮೊದಲಾದವರ ಕವಿತೆಗಳನ್ನು ಅಂಕಣ ಕೃತಿಯ 'ಕವಿಫಿರಂಗಿಯಿಂದ ಹಾಡಿನ ಸಿಡಿಗುಂಡು' ಎಂಬ ಲೇಖನದಲ್ಲಿ ಚರ್ಚಿಸುತ್ತಾರೆ. ಉತ್ಕಟವಾದ ಭಾವನೆಗಳ ಪ್ರದರ್ಶನಕ್ಕೆ ಕಾವ್ಯವೇ ಉತ್ತಮವೆಂದು, ಉದ್ವಿಗ್ನ ವಿಚಾರಗಳು ಹಾಡಾಗಿ ಹೊರ ಹೊಮ್ಮುತ್ತದೆ ಮತ್ತು ಪರಿಣಾಮಕಾರಿಯಾಗಿರುತ್ತದೆ. ಅದೇ ರೀತಿಯಲ್ಲಿ ರೇಣುಕಾ ಪ್ರಸಾದ್‌ರವರು ಸಂಪಾದಿಸಿದ ಕುವೆಂಪುರವರಿಂದ ಹಿಡಿದು ೧೯೬೨ರ ವರೆಗಿನ ಕವಿಗಳ ತ್ರೈಮಾಸಿಕ ಕನ್ನಡ ಕಾವ್ಯಗಳ ಸಂಕಲನ 'ಯುದ್ಧಗೀತೆಗಳು' ಕೂಡ ವೀರರಸದ ಪ್ರತಿಪಾದನೆಯೇ ಆಗಿದೆ ಎಂಬುದನ್ನು ವಿಶ್ಲೇಷಿಸುತ್ತಾರೆ. ೧೯೬೨ರ ಕಾವ್ಯಗಳ ಹಿನ್ನೆಲೆಯಲ್ಲಿ 'ವೀರ ರಸವು' ಹೇಗೆ ಕನ್ನಡ ಸಾಹಿತ್ಯದಲ್ಲಿ ಪ್ರಭಾವಿಸಿದೆ ಎಂಬುದನ್ನು ಇಲ್ಲಿ ಗಮನಿಸಬಹುದು.

ಅ.ನ.ಕೃರವರು ಸಾಹಿತ್ಯ ಮತ್ತು ಸಮಾಜದ ಧೋರಣೆಗಳು ಹೇಗೆ ಇರುತ್ತವೆ ಎಂಬುದನ್ನು ತಮ್ಮ 'ಪೊರಕೆ' ಎಂಬ ಹರಟೆಗಳ ಸಂಕಲನದಲ್ಲಿ 'ಪುಸ್ತಕ ಕೊಳ್ಳುವುದು' ಎಂಬ ಹರಟೆಯಲ್ಲಿ ಸಮಕಾಲೀನ ಸಾಹಿತಿಗಳಿಗೆ ಪುಸ್ತಕ ಓದುವ ಹವ್ಯಾಸವೂ ಇಲ್ಲದಾಗಿದೆ. ಕನ್ನಡ ಪುಸ್ತಕವೆಂದರೆ ಕಾಣಿಕೆಯಾಗಿ ಬರಬೇಕೆಂಬ ದೃಷ್ಟಿ ಕೆಲವು ಸಾಹಿತಿಗಳಲ್ಲಿದೆ. ಹಾಗೆಯೇ ಕೆಲವು ಕನ್ನಡ ಪ್ರಕಾಶನ ಸಂಸ್ಥೆಗಳು ಮತ್ತು ಕನ್ನಡ ಪುಸ್ತಕಗಳನ್ನು ಮಾರಾಟ ಮಾಡುವವರ ತಂತ್ರದಲ್ಲಿ ಒಂದಾದ ಪುಸ್ತಕವಿಲ್ಲವೆಂದು ಹೇಳಿ ಆ ಪುಸ್ತಕವನ್ನು ಹುಡುಕುವ ಹಾಗೆ ಮಾಡಿ ಒಂದೇ ಪ್ರತಿಯಿದೆ ಎಂದು ಹೇಳುವುದು ನಂತರ ಆ ಪುಸ್ತಕವನ್ನು ಹೆಚ್ಚು ಬೆಲೆಗೆ ಮಾರಾಟ ಮಾಡುವುದು ಕೂಡಾ ಲಾಭದ ತಂತ್ರವಾಗಿದೆ. ಈ ರೀತಿಯ ದೃಷ್ಟಿ ಬೆಳೆದರೆ ಕನ್ನಡ ಸಾಹಿತ್ಯ ಹೇಗೆ ಬೆಳವಣಿಗೆ ಹೊಂದಲು ಸಾಧ್ಯ. 'ಗ್ರಂಥ ವಿಮರ್ಶೆ' ಎಂಬ ಹರಟೆಯಲ್ಲಿ ಡಿ.ವಿ.ಜಿಯವರ ಜೀವನ ಸೌಂದರ್ಯ ಮತ್ತು ಸಾಹಿತ್ಯ

ಎಂಬ ವಿಮರ್ಶೆ ಪುಸ್ತಕ ಉತ್ತಮವಾಗಿದೆ. ವಿಮರ್ಶೆಯೆಂಬುದು ವೈಯುಕ್ತಿಕವಾದುದು, ಅದು ಕವಿ ಮನಸ್ಸಿನ ಕ್ರಿಯೆ ಪ್ರತಿಕ್ರಿಯಗಳನ್ನು ಅಳೆಯುವುದು ಅವನ ಕೆಲಸವಾಗಿದೆ. ಆ ದೃಷ್ಟಿಯಲ್ಲಿ ವಿಮರ್ಶಕನ ಕೆಲಸ ನಡೆಯಬೇಕೆಂದು ಕನ್ನಡದಲ್ಲಿ ಶಾಸ್ತ್ರೀಯವಾಗಿ ವಿಮರ್ಶೆ ಮಾಡುವ ಒಂದು ಪತ್ರಿಕೆಯು ಇಲ್ಲದೆ ಇರುವುದು ಒಂದು ದೊಡ್ಡ ಕೊರತೆಯಾಗಿದೆ. ಕನ್ನಡ ಸಾಹಿತ್ಯ ಮತ್ತು ಕೃತಿಗಳ ವಿಮರ್ಶೆಗಾಗಿ ಒಂದು ಪ್ರತ್ಯೇಕ ಸಾಹಿತ್ಯ ವಿಮರ್ಶಾ ಪತ್ರಿಕೆಯ ಅಗತ್ಯತೆಯನ್ನು ಪ್ರತಿಪಾದಿಸುತ್ತಾರೆ.

ಅ.ನ.ಕೃರವರು, ಕಿರಿಯ ಸಾಹಿತಿಗಳಿಗೆ ಕೆಲವೊಂದು ಮಾರ್ಗದರ್ಶನವನ್ನು 'ಸಾರ್ಥಕ ಸಾಹಿತ್ಯ' ಎಂಬ ಲೇಖನದಲ್ಲಿ ನೀಡುತ್ತಾರೆ. ಇದು ಮಣಿಪಾಲದಲ್ಲಿ ನಡೆದ ೪೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣವು ಆಗಿದೆ. ಇದರಲ್ಲಿ ಅ.ನ.ಕೃರವರು ಹಣಕ್ಕಾಗಿ, ಯಶಸ್ಸಿಗಾಗಿ ಬರೆಯದೇ ದೇಶಕ್ಕಾಗಿ, ಸಮಾಜಕ್ಕೆ ಒಳಿತಾಗುವ ರೀತಿಯಲ್ಲಿ ಬರೆಯಬೇಕೆಂದು, ಅಸತ್ಯ, ಅಧರ್ಮ, ಅಹಿತವಾದುದನ್ನು ಬರೆಯಬಾರದೆಂದು, ಬರೆದಿದ್ದನ್ನು ಥಟ್ಟನೆ ಮುದ್ರಿಸದೆ ಸ್ವಲ್ಪಕಾಲ ಬಿಟ್ಟು ನೋಡಿ ಅದರಲ್ಲಿರುವ ದೋಷಗಳನ್ನು ಸರಿಮಾಡಿ ನಂತರ ಮುದ್ರಿಸಬೇಕು. ತಿಳಿಯದ ವಿಷಯಕ್ಕೆ, ಪಾಂಡಿತ್ಯ ಪ್ರದರ್ಶನಕ್ಕೆ ಕೈ ಹಾಕದೇ ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ಬರೆದರೆ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಯಾರನ್ನು ಅನುಕರಿಸದೆ ನಿಮ್ಮದೇ ಆದ ದೃಷ್ಟಿಕೋನ, ವಿಚಾರಗಳಿಂದ ಬರೆಯುವಂತಾಗಲೀ ಎಂದು ಸಲಹೆಗಳನ್ನು ನೀಡುತ್ತಾರೆ.

ರಾಜಕೀಯ, ಸಾಮಾಜಿಕ, ಶೈಕ್ಷಣಿಕ ರಂಗದಲ್ಲಿ ಹೇಗೆ ಕೋಮುವಾದ ಭಾವನೆಗಳು ಬೆಳೆದು ಅವುಗಳನ್ನು ಕಲುಷಿತಗೊಳಿಸುತ್ತಿರುವ ಹಾಗೆಯೇ ಸಾಹಿತ್ಯದಲ್ಲಿಯೂ ಕೂಡ ಕೋಮುವಾರು ಭೂತ ಬೆಳೆಯುತ್ತಿದೆ ಅದಕ್ಕೆ ಸಂಬಂಧಿಸುತ್ತಿದಂತೆ ಜಿ.ಪಿ ರಾಜರತ್ನಂರವರ 'ತೀರ್ಥಂಕರ, ತೀರ್ಥಂಕರದ' ಬಗ್ಗೆ ಎದ್ದ ವಾದ, ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ 'ಚೆನ್ನಬಸವ ನಾಯಕ' ಕಾದಂಬರಿಯ ಬಗ್ಗೆ ನಡೆಯುತ್ತಿರುವ ವಾದಗಳು ಸಾಹಿತ್ಯವನ್ನು ಜಾತಿ, ಮತಗಳ ಕೀಳುಮಟ್ಟಕ್ಕೆ ಇಳಿಸುವ ಪ್ರಯತ್ನವು ಖಂಡನೀಯವಾದುದು, ಒಂದು ಕೃತಿಯ ಬಗ್ಗೆ ಬರೆಯುವ, ಮಾತನಾಡುವ ಅಧಿಕಾರ ಆ ಕೃತಿ ಕರ್ತನ ಜಾತೀಯವರಿಗೆ ಮೀಸಲಾಗಿರಬೇಕೆಂಬ ವಾದವನ್ನು ಅ.ನ.ಕೃ. ಅವರು ಖಂಡಿಸುತ್ತಾರೆ.

ಸಾಹಿತ್ಯ ಕೃತಿಯ ನಿಷೇಧದ ಬಗ್ಗೆ ಸಮಾಜದ ಧೋರಣೆಯನ್ನು ನಿರಂಜನರವರು ವಿಶುಕುಮಾರ್‌ರವರು ಬರೆದ 'ಕರಾವಳಿ' ಕಾದಂಬರಿಯನ್ನು ಪತ್ರಿಕೆಯಲ್ಲಿ ಧಾರವಾಹಿಯ ರೂಪದಲ್ಲಿ ಪ್ರಕಟಿಸಬಾರದೆಂದು, ಅದು ಕಡಲತೀರದ ಬದುಕನ್ನು ಚಿತ್ರಿಸುವಂಥದ್ದು, ಆದ್ದರಿಂದ ಅದನ್ನು ಮುಟ್ಟುಗೋಲು ಹಾಕಿಕೊಳ್ಳುವ ಒತ್ತಡ ಬಂದ ಸಂದರ್ಭ, ಸಾಹಿತಿಗೆ ಯಾವುದೇ ಜಾತಿ, ಮತ, ಪಂಥಗಳ ಭೇದವಿಲ್ಲವಾದ್ದರಿಂದ ಆ ಬರಹಗಾರನ ಸ್ವಾತಂತ್ರ್ಯವನ್ನು ಹತ್ತಿಕ್ಕುವುದು ಸರಿಯಲ್ಲವೆಂದು ಸಾಹಿತ್ಯ ಸೃಷ್ಟಿಕಾರ್ಯ ಎಲ್ಲರಿಂದಲೂ ಸಾಧ್ಯವಿಲ್ಲ. ಆ ಸಾಮರ್ಥ್ಯ ಇರುವವರನ್ನು ಸಮಾಜ ಗೌರವಿಸಬೇಕು. ಅವನನ್ನು ಅವನ ಬರವಣಿಗೆಯನ್ನು ನಿಷೇಧಿಸುವ ಮಾತನಾಡುವುದು ಸರಿಯಲ್ಲ. ಹಿಂದೆ ಕುವೆಂಪುರವರು 'ಕಾನೂರು ಸುಬ್ಬಮ್ಮ ಹೆಗ್ಗಡತಿ', ಕಾರಂತರ 'ಚೋಮನದುಡಿ', 'ಬೆಟ್ಟದ ಜೀವ', ಮಾಸ್ತಿಯವರ 'ಚೆನ್ನಬಸವನಾಯಕ', ಈಗ 'ಕರಾವಳಿ' ಕಾದಂಬರಿ.

ನಿರಂಜನರವರು ಸಾಹಿತಿಯ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಪ್ರಯತ್ನಕ್ಕೆ ವಿರುದ್ಧವಾದ ಪ್ರತಿಕ್ರಿಯೆಯನ್ನು ನೀಡುತ್ತಾರೆ. 'ಚೆನ್ನಬಸವ ಕರಾವಳಿಗೆ ಬಂದ' ಲೇಖನದಲ್ಲಿ ಮಾಸ್ತಿಯವರ ಕಾದಂಬರಿ ಚೆನ್ನಬಸವ ನಾಯಕನನ್ನು ಜಾತಿ ಮತಗಳ ಹಿನ್ನೆಲೆಯಲ್ಲಿ ನಿಷೇಧಿಸಲು ಹೊರಟ

ಪ್ರಯತ್ನದ ಮುಂದುವರೆದ ಭಾಗವಾಗಿ ವಿಶುಕುಮಾರರ 'ಕರಾವಳಿ' ಕಾದಂಬರಿಯನ್ನು ನಿಷೇಧಿಸಲು ಬಂದ ರೀತಿ ಮತ್ತು ಇತ್ತೀಚೆಗೆ ಬಂಜಗೆರೆ ಜಯಪ್ರಕಾಶರ 'ಆನುದೇವಾ ಹೊರಗಣ'ವನ್ನು ನಿಷೇಧಿಸುವಂತೆ ಮಾಡಿದ ಪ್ರಯತ್ನಗಳು ಇವೆಲ್ಲವೂ ಕೂಡ ಸಾಹಿತ್ಯವನ್ನು ಜಾತಿ,ಮತ, ಪಂಥಗಳನ್ನು ತಂದು ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ, ನಿಷೇಧಿಸುವ ತಂತ್ರವಾಗಿ ಇಂದಿಗೂ ಇದೆ. ಅ.ನ.ಕೃ ಮತ್ತು ನಿರಂಜನರವರು ತಮ್ಮ ವಿಚಾರ ಸಾಹಿತ್ಯದಲ್ಲಿ ಲೇಖಕನಿಗೆ ಸ್ವಾತಂತ್ರ್ಯವಿದೆ. ಆತ ಯಾವುದೇ ಜಾತಿ, ಮತ, ಪಂಥಗಳಿಗೆ ಸೇರಿದವನಲ್ಲ ಸಾಹಿತ್ಯ ಕೃತಿಯನ್ನು ಸಾಹಿತ್ಯದ ಧೋರಣೆಯಿಂದ ನೋಡಬೇಕೆ ಹೊರತು ಜಾತಿ, ಮತ, ಪಂಥಗಳ ಭಾವನೆಗಳಿಂದಲ್ಲ.

'ಕಾಲಕ್ಷೇಪ' ಕೃತಿಯ 'ಹೊಸಲೇಖಕರ ಸಮಸ್ಯೆ' ಎಂಬ ಲೇಖನದಲ್ಲಿ ಬರವಣಿಗೆ ಎಂಬುದು ಒಂದು ಕಲೆಯಾಗಿದೆ. ಅದು ಸಂಗೀತದ ಹಾಗೆ, ಎಲ್ಲರೂ ಹೇಗೆ ಸಂಗೀತಗಾರರು ಆಗುವುದಿಲ್ಲವೋ ಹಾಗೆಯೇ ಬರಹಗಾರರು ಆಗುವುದಿಲ್ಲ. ಬರಹಗಾರರಾಗಲು ಪ್ರತಿಭೆ ಮತ್ತು ಬರವಣಿಗೆಯ ರೂಪದಲ್ಲಿ ವ್ಯಕ್ತಪಡಿಸುವ ಸಾಮರ್ಥ್ಯವಿರಬೇಕು. ಕೆಲವು ಹೊಸಲೇಖಕರಿಗೆ ಪ್ರತಿಭೆ ಇದ್ದರು ಬರವಣಿಗೆಯ ಸಾಮರ್ಥ್ಯ, ಪ್ರೋತ್ಸಾಹ ದೊರಕದೇ ಸಾಹಿತ್ಯದ ಕಡೆಗೆ ಮುಖಮಾಡುವುದಿಲ್ಲ. ಹೊಸಲೇಖಕರಿಗೆ ಸಾಹಿತ್ಯವನ್ನು ಬರೆಯಲು ನೀಡುವ ಯಾವುದೇ ಶಿಕ್ಷಣ ಪದ್ಧತಿ ಇಲ್ಲ. ಒಳ್ಳೆಯ ಬರಹಗಾರನಾಗುವುದು ಹೇಗೆಂದು ಕಲಿಸಿಕೊಡುವ ವ್ಯವಸ್ಥೆಯೇ ಇಲ್ಲವಾಗಿದೆ. ನಮ್ಮಲ್ಲಿ ಬರಹಗಾರನಾಗುವುದು ಸ್ವಯಂ ಶಿಕ್ಷಣವಾಗಿದೆ. ಸಾಹಿತ್ಯ ಸೃಷ್ಟಿಯ ಕಾಲದಲ್ಲಿ ಬರಹಗಾರನಿಗೆ ನೆರವಾಗುವವರು ಯಾರು ಇಲ್ಲ ಅದರಂತೆ ಸಾಹಿತ್ಯ ಸೃಷ್ಟಿಯಾದ ನಂತರವು ಅಷ್ಟೇ. ಯುವ ಬರಹಗಾರರಿಗೆ ಯಾವುದೇ ಪ್ರೋತ್ಸಾಹ ಲಭಿಸುವುದಿಲ್ಲವೆಂದು ನಿರಂಜನರವರು ವಿವರಿಸುತ್ತಾರೆ.

'ಪುಷ್ಪಹಾರ' ಕೃತಿಯ 'ಸಾಹಿತ್ಯ ನಿರ್ಮಾಣ ಶಾಲೆ' ಎಂಬ ಲೇಖನದಲ್ಲಿ ಕೇಂದ್ರಸರಕಾರವು ಫೋರ್ಡ್ ಫೌಂಡೇಶನ್ ವತಿಯಿಂದ ನಾಲ್ಕು ಸಾಹಿತ್ಯ ನಿರ್ಮಾಣ ಶಾಲೆಗಳನ್ನು ತೆರೆಯಲು ಯೋಜನೆ ರೂಪಿಸಿದ್ದಾರೆ. ಹೊಸದಾಗಿ ಅಕ್ಷರಸ್ಥರಾದವರಿಗೆ ವಯಸ್ಕರಿಗೆ ಸಾಹಿತ್ಯವನ್ನು ಹೇಗೆ ನಿರ್ಮಿಸಬೇಕೆಂದು, ಬರಹಗಾರರಿಗೆ ಶಾಲೆಯಲ್ಲಿ ಶಿಕ್ಷಣ ಕೊಡಲಾಗುವುದು ಇದರ ಉದ್ದೇಶವಾಗಿದೆ. ಸಾಹಿತ್ಯ ನಿರ್ಮಾಣ ಶಾಲೆ ತೆರೆಯುವುದಕ್ಕಿಂತ ಮೊದಲು ನಮ್ಮ ಜನರನ್ನು ಸಾಕ್ಷರರನ್ನಾಗಿ ಮಾಡಬೇಕು. ಸಾಕ್ಷರರೇ ಆಗದೇ ಹೇಗೆ ಸಾಹಿತ್ಯ ನಿರ್ಮಾಣ ಮಾಡಲು ಸಾಧ್ಯ. ಇದರಿಂದ ಸಾಹಿತ್ಯ ಶಾಲೆಗಳು ನಿರ್ಮಾಣವಾಗಬಹುದು ಆದರೆ ಸಾಕ್ಷರರಾಗುವುದಿಲ್ಲ, ಸರಕಾರದಿಂದ, ಸರಕಾರದ ಸಾಹಿತ್ಯ ಶಾಲೆಗಳಿಂದ ಸಾಹಿತ್ಯ ನಿರ್ಮಾಣದ ಮಾಡಲು ಸಾಧ್ಯವಿಲ್ಲ ಎಂಬ ಧೋರಣೆಯನ್ನು ನಿರಂಜನರು ಪ್ರತಿಪಾದಿಸುತ್ತಾರೆ. ಆ ಮೂಲಕ ಯಾವುದೋ ಒಂದು ಸಂಸ್ಥೆಯನ್ನು ನಿರ್ಮಾಣ ಮಾಡಿ ಸಾಹಿತ್ಯವನ್ನು ಸೃಷ್ಟಿಸಲು ಸಾಧ್ಯವಿಲ್ಲ. ಸಾಹಿತಿಯಾಗಲು ಪ್ರತಿಭೆಯ ಸಾಮರ್ಥ್ಯ, ಅನುಭವ, ಅದನ್ನು ಬರವಣಿಗೆಯಲ್ಲಿ ಇಳಿಸುವ ಕೌಶಲ ಇವುಗಳಿಂದ ಸಾಹಿತ್ಯ ನಿರ್ಮಾಣವಾಗುತ್ತದೆಯೇ ಹೊರತು, ಸರ್ಕಾರ ನಿರ್ಮಿಸುವ ಸಾಹಿತ್ಯ ನಿರ್ಮಾಣ ಶಾಲೆಗಳಿಂದ ಸಾಧ್ಯವಿಲ್ಲ.

ಸ್ವಾತಂತ್ರ್ಯ, ಸಮಾಜವಾದ, ಸಾಹಿತ್ಯ ಸೇವೆ, ಸಮಾಜಸೇವೆ ಎಂಬ ಪದಗಳು ಪ್ರಸ್ತುತ ಕಾಲಘಟದಲ್ಲಿ ಅರ್ಥವನ್ನು ಕಳೆದುಕೊಂಡಿವೆ. ಅದನ್ನು 'ಜಾತಿಗೆಟ್ಟ ಪದಗಳು' ಎಂಬ ಲೇಖನದಲ್ಲಿ ನಿರಂಜನರವರು ಸಮಾಜವಾದ ಪದವನ್ನು ಒಂದು ಕಾಲದಲ್ಲಿ ತೆಗೆದುಕೊಂಡರೆ ಕ್ರಾಂತಿಕಾರಿಯ ಕ್ರೂರ ಚಿತ್ರವನ್ನು ನೀಡುತ್ತಿತ್ತು. ಆದರೆ ನೆಹರೂ ನೇತೃತ್ವದ ಕಾಂಗ್ರೇಸ್ ಸರಕಾರ ಸಮಾಜವಾದದ

ಸ್ಥಾಪನೆಯೇ ತಮ್ಮ ಗುರಿಯಾಗಿದೆಯೆಂದು, ಕಮ್ಯೂನಿಸ್ಟರು ಮೊದಲು ಪ್ರಜಾಪ್ರಭುತ್ವ ಸ್ಥಾಪನೆ ಮೊದಲ ಗುರಿ, ನಂತರ ಸಮಾಜವಾದದ ನಿಲುವು ಅವರದಾಗಿತ್ತು. "ಸಮಾಜವಾದ ಎನ್ನುವುದು ಎಲ್ಲರಿಗೂ ಬೇಕಾದ ಪದ. ನಮ್ಮ ದೇಶದಲ್ಲಿ ಸಮಾಜವಾದಕ್ಕೆ ವಿರೋಧಿಗಳಿಲ್ಲ, ಅನಾಮಧೇಯರಾದ ರೈತ, ಕೂಲಿಕಾರರಿಂದ ಹಿಡಿದು ಗುತ್ತಿಗೆ ಬಂಡವಾಳಗಾರರಾದ ಟಾಟಾ ಬಿರ್ಲಾರವರವರೆಗೂ ಎಲ್ಲರೂ ಸಮಾಜವಾದದ ಬೆಂಬಲಿಗರೇ"[೫] ಎಂದು ನಿರಂಜನರು ಅಭಿಪ್ರಾಯಿಸುತ್ತಾರೆ.

ಇದೊಂದು ಚಾರಿತ್ರಿಕ ಪದವಾಗಿ ಮಹತ್ವ ಪಡೆದಿದೆ ಹೊರತು, ಅದರ ಅರ್ಥ ಏನೆಂದು ಪ್ರತಿಪಾದಿಸುವ ಗೊಡವೆಗೆ ಯಾರೂ ಹೋಗುವುದಿಲ್ಲ. ಒಪ್ಪಿಗೆಯಾಗಲೀ ಅಥವಾ ಆಗದಿರಲೀ ಅದಕ್ಕೆ ಮನ್ನಣೆಯನ್ನು ಕೊಡಬೇಕಾದದು ಒಂದು ಫ್ಯಾಶನ್ ಆಗಿರುವ ರೀತಿಯನ್ನು ತಿಳಿಸುತ್ತದೆ.

'ಸಮಾಜಸೇವೆ' ಎಂಬ ಪದವೂ ಕೂಡ ತನ್ನ ಅರ್ಥವನ್ನು ಕಳೆದುಕೊಂಡಿದೆ. ಒಂದು ಕಾಲದಲ್ಲಿ ಸಮಾಜಸೇವೆ, ಸುಧಾರಣೆ ಎಂಬ ಪದಗಳು ಬಹಳ ಅರ್ಥವನ್ನು ಪಡೆದಿದ್ದವು. ಸಮಾಜಸೇವೆ ಎಂಬುದು ಇಂದೂ ಮನುಷ್ಯನ ಬದುಕಿನ ಗುರಿಯಾಗಿಲ್ಲ ಅದು ಸ್ವಹಿತಕ್ಕೆ ಸಂಬಂಧಿಸಿದ್ದು ಆಗಿದೆ. ಅದೇ ಮಾದರಿಯಲ್ಲಿ ಇನ್ನೊಂದು ಪದ 'ಸಾಹಿತ್ಯ ಸೇವೆ' ಎಂಬುದಾಗಿದೆ. ಈ ಹಿಂದೆ ಸಾಹಿತ್ಯಸೇವೆಯಾಗಿತ್ತು. ಆದರೆ ಇಂದೂ ಸಾಹಿತ್ಯ ಎಂಬುದು ಸೇವೆಯಾಗದೇ ಅದರಲ್ಲಿ ಬರುವ ಹಣದಿಂದ, ಜೀವನ ನಡೆಸುವ, ಸರಕಾರದ ಸೌಲಭ್ಯಗಳನ್ನು ಪಡೆದುಕೊಳ್ಳುವ ದೃಷ್ಟಿ ಬೆಳೆದಿದೆ. ಅದೇ ರೀತಿ 'ಕನ್ನಡದ ಸೇವೆ' ಎಂಬುದು ನಾಡು, ನುಡಿಗೆ, ಜನಪದಗಳಿಗೆ ಸಂಬಂಧಿಸಿದ ಶಕ್ತಿಯನ್ನು ಉದ್ದೀಪನಗೊಳಿಸುವುದು ಆಗಿತ್ತು. ಆದರೆ ಅದರ ಮಹತ್ವವು ಕಳೆದುಕೊಂಡು ಅದರಿಂದ ಲಾಭ ಮಾಡಿಕೊಳ್ಳುವುದು, ಕನ್ನಡಾಂಬೆಯ ಭಕ್ತ ಎಂಬ ಮುದ್ರೆ ಅಥವಾ ಕನ್ನಡದ ಹೋರಾಟಗಾರ ಎಂದು ಬಿಂಬಿಸಿಕೊಂಡು ಅದರ ರಕ್ಷೆಯ ಕೆಳಗೆ ಏನಾದರೂ ಕೆಟ್ಟ ಕೆಲಸಗಳನ್ನು ಮಾಡಿದರೂ ನಡೆಯುತ್ತದೆ ಎಂಬ ಭಾವನೆ. ಹೀಗೆ 'ಜಾತ್ಯಾತೀತಪದ', 'ಸರಕಾರಿ ಸೇವೆ' ಮೊದಲಾದ ಪದಗಳು ತಮ್ಮದೇಯಾದ ಮಹತ್ವವನ್ನು ಕಳೆದುಕೊಂಡಿರುವುದನ್ನು ಕಾಣಬಹುದು.

ಅ.ನ.ಕೃರವರು ತಮ್ಮ ವಿಚಾರ ಸಾಹಿತ್ಯದಲ್ಲಿ ಸಾಹಿತ್ಯ, ಸಾಹಿತಿಯ ವ್ಯಕ್ತಿತ್ವ, ಪ್ರಕಟಣೆ, ಕೃತಿಚೌರ್ಯ, ಮುನ್ನುಡಿಗಾರರ ದೃಷ್ಟಿಕೋನ, ಸಾಹಿತ್ಯದಲ್ಲಿ ರಾಜಕಾರಣ ಮೊದಲಾದ ವಿಚಾರಗಳನ್ನು ಚರ್ಚಿಸದೇ ಇರುವುದನ್ನು ಕಾಣಬಹುದು ಈ ವಿಚಾರಗಳಿಗೆ ನಿರಂಜನರವರು ತಮ್ಮದೇ ಆದ ರೀತಿಯಲ್ಲಿ ಪ್ರತಿಪಾದಿಸಿದ್ದಾರೆ.

'ಬರಹಗಾರನ ಬದುಕು' ಎಂಬುದು ಅ.ನ.ಕೃರವರು ಬರೆದ ಆತ್ಮಕಥೆಯಾಗಿದೆ. ಇಲ್ಲಿ ಅ.ನ.ಕೃರವರ ಇಡೀ ಬದುಕಿನ ಚಿತ್ರಣವನ್ನು ನಾವು ಕಾಣಬಹುದು. ಆದರೆ ನಿರಂಜನರವರು ಬರೆದ 'ಬರಹಗಾರನ ಬದುಕು' ಎಂಬ ಲೇಖನ 'ಪುಷ್ಪಹಾರ' ಕೃತಿಯಲ್ಲಿದೆ. ಇಲ್ಲಿ ನಿರಂಜನರವರು ಕನ್ನಡ ಸಾಹಿತಿಯ ಅಥವಾ ಬರಹಗಾರ ಬದುಕು ಹೇಗೆ ಇದೆ ಎಂಬುದನ್ನು ತಿಳಿಸುವ ಲೇಖನವಾಗಿದೆ. ಕನ್ನಡ ಸಾಹಿತಿಯಾದವನ್ನು ಕಲಾವಿದರಾದವರ ಬದುಕಿನಲ್ಲಿ ಅಗತ್ಯವಾದ ವಸ್ತುಗಳನ್ನೂ ಕೊಂಡುಕೊಳ್ಳುವ ಸಾಮರ್ಥ್ಯವಿರುವುದಿಲ್ಲ. ಆದರೆ ಷುಂಡೆಕೋ ಎಂಬ ರಷ್ಯಾದ ಪ್ರಜೆ ಮೈಸೂರಿನಲ್ಲಿ ಭಾರತ – ರಷ್ಯಾ ಸಾಂಸ್ಕೃತಿಕ ಸಂಘಟನೆಗೋಸ್ಕರ ಭೇಟಿಕೊಟ್ಟಾಗ ರಷ್ಯಾದಲ್ಲಿ ಬರಹಗಾರನ ಸಂಪಾದನೆಯು ಉತ್ತಮವಾಗಿದೆ. ಪ್ರಕಾಶನ ಮಾಡುವ ಸಂಸ್ಥೆಯ ಅಧಿಕಾರಿಗಳಿಗೆ ಸಾಹಿತ್ಯವೆಂದರೇನು ಎಂಬುದು ತಿಳಿದಿದ್ದು ಆ ಕೃತಿಗಳನ್ನು ಪ್ರಕಟಿಸಲು ಸಹಾಯಕವಾಗಿದೆ. ಪ್ರಖ್ಯಾತ ಬರಹಗಾರರು

ವಿಮರ್ಶಕರಾಗಿದ್ದು, ಹೊಸ ಬರಹಗಾರರಿಗೆ ನೆರವು ನೀಡಲು ಪ್ರತಿಯೊಂದು ಜಿಲ್ಲೆಯಲ್ಲಿ ಬರಹಗಾರರ ಸಂಘವಿದೆ. ಆ ಹೊಸ ಬರಹಗಾರ ಹಸ್ತಪ್ರತಿ ಓದಿ, ಮಾರ್ಗದರ್ಶನ ನೀಡಿ ಪ್ರಕಟಣೆಗೆ ಸಹಕರಿಸುತ್ತಾರೆ. ಬರಹಗಾರನಿಗೆ ಸಂಪಾದನೆಯಲ್ಲಿ ಸಮಾನತೆ ಇಲ್ಲದೇ ಇದ್ದರು ಕಡಿಮೆ ದೊರಕಬಹುದು. ಆದ್ದರಿಂದ ಬರಹಗಾರ ತನ್ನ ಬೌದ್ಧಿಕ ಬೆಳವಣಿಗೆ, ಸೌಕರ್ಯಗಳಿಗಾಗಿ ಆ ಹಣವನ್ನು ವಿನಿಯೋಗಿಸುತ್ತಾರೆ.

ಇಷ್ಟೆಲ್ಲಾ ಬರಹಗಾರನಿಗೆ ದೊರೆಯಬೇಕಾದರೆ ಬರಹಗಾರ ಸರಕಾರದ ಅಡಿಯಾಳಗಬೇಕಲ್ಲವೇ? ಎಂದು ಪ್ರಶ್ನಿಸಬಹುದು. ಪ್ರಾಚೀನ ರಷ್ಯನ್ ಸಾಹಿತ್ಯದಿಂದ ಆಧುನಿಕ ಸೋವಿಯತ್ ಸಾಹಿತ್ಯದವರೆಗೂ ಅಧ್ಯಯನ ಮಾಡಿದರೆ ಸರಕಾರದ ಹಿಡಿತದಲ್ಲಿ ರಚಿತವಾಗಿದೆಯೇ ಅಥವಾ ಬರಹಗಾರನ ವಿಚಾರಗಳು ಪ್ರತಿಪಾದಿಸಿವೆ ಎಂಬುದನ್ನು ತಿಳಿಯಬಹುದು. ವ್ಯಕ್ತಿ ಸ್ವಾತಂತ್ರ್ಯವೆಂಬುದು ರಷ್ಯಾದ ಸಮಾಜದಲ್ಲಿ ಸಾಮೂಹಿಕ ಹಿತದೊಂದಿಗೆ ಬೆರೆತಿದೆ. ಯಾವ ಕಾಲದಲ್ಲಿಯೂ ಬರಹಗಾರನಿಗೆ ಹಣವೊಂದೇ ಮುಖ್ಯವಾಗಿರುವುದಿಲ್ಲ. ವ್ಯಕ್ತಿತ್ವವನ್ನು ಮಾರಿ ಹಣಕ್ಕೋಸ್ಕರ ಬರೆದು ಒಳ್ಳೆಯ ಬರಹಗಾರ ಎಂದೂ ಉದ್ಧಾರವಾಗಿಲ್ಲ ಎಂದು ಚರ್ಚಿಸುತ್ತಾರೆ.

ವ್ಯಕ್ತಿತ್ವದೊಂದಿಗೆ ಬರಹವಿರಬೇಕೆ ಹೊರತು, ವ್ಯಕ್ತಿತ್ವ ಇಲ್ಲದ ಯಾವುದೇ ಬರಹಗಾರನ ಉತ್ಕೃಷ್ಠ ಪುಸ್ತಕಗಳನ್ನು ಜನ ಓದಲು ಬಯಸುವುದಿಲ್ಲ ಎಂಬ ದೃಷ್ಟಿಯಲ್ಲಿ ಬರಹಗಾರನಿಗೆ ಹಣಕ್ಕಿಂತ ವ್ಯಕ್ತಿತ್ವ ವಿಕಾಸವೇ ಮುಖ್ಯ. ಕನ್ನಡ ಸಾಹಿತಿಗಳಿಗೆ ಹಣ ಬರದೇ ಇದ್ದರೂ, ಸಂಪಾದನೆ ಇಲ್ಲದೇ ಇದ್ದರೂ, ಸಾಹಿತ್ಯದಲ್ಲಿ ತೊಡಗುವ, ಬರೆಯುವ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಆಶಯವಿದೆ. ಇಲ್ಲಿ ನಿರಂಜನರು ರಷ್ಯಾದ ಸಾಹಿತಿಗಳ ಬದುಕು ಮತ್ತು ಕನ್ನಡ ನಾಡಿನ ಸಾಹಿತಿಗಳು ಹೊಂದಿರುವ ಬದುಕನ್ನು ತೌಲನಿಕವಾಗಿ ವಿವರಿಸುತ್ತಾರೆ.

ಇದಕ್ಕೆ ಪೂರಕವಾದ ನಿರಂಜನರ ಲೇಖನ 'ಐದು ನಿಮಿಷ' ಎಂಬಲ್ಲಿ 'ಮೊದಲ ಮುದ್ರಣ ೧,೫೦,೦೦೦ ಪ್ರತಿಗಳು' ಎಂಬಲ್ಲಿ ರಷ್ಯಾದಲ್ಲಿ ಕೃಷ್ಣನ್ ಚಂದನ್‌ರವರು ಬರೆದ 'ಜ್ವಾಲಾ ಕುಸುಮ' ಎಂಬುದು ರಷ್ಯಾದಲ್ಲಿ ೧೫೦೦೦೦ ಪ್ರತಿಗಳು ಪ್ರಕಟಗೊಂಡಿವೆ. ರಷ್ಯಾದಲ್ಲಿ ರಷ್ಯನ್ ಮಾತ್ರವಲ್ಲದೇ ಹದಿನೆಂಟು ಭಾಷೆಗಳಿದ್ದು ಪ್ರಪಂಚದ ಯಾವುದೇ ಭಾಷೆಯಲ್ಲಿ ಒಂದು ಒಳ್ಳೆಯ ಸಾಹಿತ್ಯ ಕೃತಿ ಬಂದರು ಅದನ್ನು ತಮ್ಮ ಭಾಷೆಗೆ ಅನುವಾದಿಸಿ, ಪ್ರಕಟಿಸುವುದು ಅಲ್ಲಿ ಸಾಮಾನ್ಯ ನಿಯಮವಾಗಿದೆ. ಆದರೆ ಕನ್ನಡದಲ್ಲಿ ಪ್ರಾಚೀನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉತ್ತಮ ಕೃತಿಗಳನ್ನು ಕೊಂಡುಕೊಳ್ಳುವವರಿಲ್ಲ. ವೈಜ್ಞಾನಿಕ ಗ್ರಂಥಗಳ ಮಾರಾಟವು ಅಷ್ಟಕ್ಕಷ್ಟೇ. ಲಲಿತ ಸಾಹಿತ್ಯದಲ್ಲಿ ಒಂದು ಉತ್ತಮ ಕೃತಿ ಬಂದರೂ ಅದು ಹೆಚ್ಚು ಖರ್ಚಾಗುವುದಿಲ್ಲ. ಒಂದು ಸಾವಿರ ಪ್ರತಿಯೊಂದಿಗೆ ಒಂದು ಕೃತಿ ಪ್ರಕಟವಾದರೆ ಅದು ಮಾರಾಟವಾಗಲು ಎರಡು – ಮೂರು ವರ್ಷಗಳಾದರೂ ಬೇಕಾದೀತು ಎಂದು ಹೇಳುತ್ತಾರೆ.

ಕನ್ನಡ ಸಾಹಿತಿಯ ಸ್ಥಿತಿಯನ್ನು, ಸಾಹಿತಿಯಿಂದ ದೊರೆಯುವ ಫಲ ಕಡಿಮೆಯಿದೆ. ಸಾಹಿತ್ಯದಲ್ಲಿ ತೊಡಗಿ ಬದುಕಬೇಕಾದರೆ ಆ ಸಾಹಿತಿಗೆ ಒಳ್ಳೆಯ ಉದ್ಯೋಗವಿರಬೇಕು. ಇಲ್ಲವೇ ಕೃಷಿ ಜಮೀನು, ಸ್ವಂತ ಮನೆ ಇದ್ದರೆ ಮಾತ್ರ ಸಾಹಿತ್ಯದಲ್ಲಿ ಬದುಕಲು ಸಾಧ್ಯ. ಸಾಹಿತ್ಯವನ್ನು ತನ್ನ ಸಾಹಿತ್ಯ ಕೃತಿಗಳನ್ನು ನಂಬಿ ಅದರಲ್ಲಿ ಜೀವನ ನಡೆಸುವ ಯಾವುದೇ ಒಬ್ಬ ಸಾಹಿತಿಯು ಕನ್ನಡದಲ್ಲಿಲ್ಲ ಎಂಬುದಾಗಿ ಕನ್ನಡನಾಡಿನ ಸಾಹಿತಿಗಳ ವಾಸ್ತವ ಸ್ಥಿತಿಯನ್ನು ತಿಳಿಸುತ್ತಾರೆ.

ದೀಪಾವಳಿಗಾಗಿ ಒಬ್ಬ ಸೋದರಿ ಮತ್ತೊಬ್ಬ ಸೋದರಿಗೆ ಬರೆದ ಪತ್ರ, ಆ ಪತ್ರದಲ್ಲಿರುವ ಸರಳತೆ, ಕಾಗದದ ವೈಖರಿಯನ್ನು ಕಂಡು ನಿರಂಜನರು ಪ್ರತಿಭೆಯನ್ನು ಕುರಿತಂತೆ 'ಕಾಲಕ್ಷೇಪ' ಕೃತಿಯ 'ಸುಪ್ತ ಪ್ರತಿಭೆ' ಎಂಬ ಲೇಖನದಲ್ಲಿ ಸಾಮಾನ್ಯವಾಗಿ ಸಾಹಿತಿಗಳಾದವರು ಸಾಮಾನ್ಯ ಮನುಷ್ಯರಲ್ಲ ಎಂದು ಪ್ರಚಾರ ಮಾಡುತ್ತಾರೆ. ಜನರು, ಓದುಗರು ಕೂಡಾ ಸುಲಭವಾಗಿ ಆ ರೀತಿಯ ಭ್ರಮೆಗೆ ಒಳಗಾಗುತ್ತಾರೆ. ಸಾಹಿತಿಯಾದವನು ಅತಿ ಮಾನವ, ಆತ ಬರೆಯಬೇಕಾದರೆ ಸ್ಫೂರ್ತಿ ಬರಬೇಕೆಂದು, ಆ ಸಾಹಿತ್ಯ ಶಕ್ತಿ ಅವನಿಗೆ ದೈವದತ್ತವಾಗಿ ಬಂದಿದೆ ಎಂಬ ನಿಲುವನ್ನು ಹೊಂದಿರುವುದು ಶುದ್ಧ ಬುರುಡೆ ಎಂದು ನಿರಂಜನರು ಭಾವಿಸುತ್ತಾರೆ.

ಪ್ರತಿಯೊಬ್ಬರಲ್ಲೂ ಒಂದೊಂದು ರೀತಿಯ ಪ್ರತಿಭೆಗಳಿದ್ದು, ಅವು ಅವಕಾಶ ದೊರೆತಾಗ ವಿಕಾಸಗೊಳ್ಳುತ್ತವೆ. ಆ ಅವಕಾಶ ಪ್ರೋತ್ಸಾಹಗಳು ದೊರೆಯದೇ ಹೋದಾಗ ಆ ಪ್ರತಿಭೆ ಕುಂಠಿತಗೊಳ್ಳುತ್ತದೆ. ಕೆಲವರಿಗೆ ಲೀಲಾಜಾಲವಾಗಿ ಇಲ್ಲವೇ ಸತತ ಪರಿಶ್ರಮದಿಂದ ತಮ್ಮ ಪ್ರತಿಭೆಯನ್ನು ಪ್ರಕಟಿಸುತ್ತಾ ಬರುತ್ತಾರೆ. ಅಂಥವರನ್ನು ಕಂಡು ಪ್ರತಿಭೆ ದೈವದತ್ತವಾದುದೆಂದು ಹೊಗಳುವುದು ಸರಿಯಲ್ಲ, ಇದಕ್ಕೆ ಆ ಸೋದರಿ ಬರೆದ ಪತ್ರದಲ್ಲಿ ಆ ಮಹಿಳೆಯು ಈಗಿನ ಸಾಹಿತ್ಯವನ್ನು ಸೂಕ್ಷ್ಮ ನಿರೀಕ್ಷಣೆಯಿಂದ, ಕನ್ನಡ ಸಾಹಿತ್ಯದ ಅಧ್ಯಯನದಿಂದ, ಸ್ವಲ್ಪ ಪರಿಶ್ರಮ ಪಟ್ಟರೆ ಒಳ್ಳೆಯ ಬರಹಗಾರ್ತಿಯಾಗಿ ರೂಪುಗೊಳ್ಳಲು ಸಾಧ್ಯವಿದೆ. ಹಾಗೆ ಆಗಲು ಸ್ವಲ್ಪ ಬಿಡುವು, ಯೋಗ್ಯ ಸನ್ನಿವೇಶ, ಸಾಕಷ್ಟು ಅವಕಾಶ ಮೊದಲಾದವುಗಳು ದೊರೆಯಬೇಕು. ಸಾಹಿತಿಯಾಗಿ ಅಥವಾ ಒಬ್ಬ ಬರಹಗಾರನಾಗಿ ರೂಪುಗೊಳ್ಳಲು ಯಾವುದು ಅವಶ್ಯಕವೆಂದು ವಿಶ್ಲೇಷಿಸುತ್ತಾರೆ.

'ಬುದ್ಧಿ ಭಾವ ಬದುಕು' ಎಂಬ ಕೃತಿಯ 'ಬರೆಯುವುದು ಯಾತಕೋಸ್ಕರ' ಎಂಬ ಲೇಖನವನ್ನು ೧೯೫೭ರಲ್ಲಿ ನಿರಂಜನರು ಬರೆದಿದ್ದಾರೆ. ಬರಹಗಾರ ಒಬ್ಬ ವಿದ್ಯಾರ್ಥಿಯ ಹಾಗೆ, ಸತತ ಅಧ್ಯಯನ, ಬದುಕನ್ನು ನೋಡುವ ದೃಷ್ಟಿ, ಮಾನವೀಯ ದೃಷ್ಟಿ, ಪ್ರಾಮಾಣಿಕತೆ, ಸದ್ಗುಣಗಳು ಇವೆಲ್ಲಾ ಕೃತಿಯಲ್ಲಿ ಬರಹಗಾರನ ವ್ಯಕ್ತಿತ್ವವನ್ನು ಪ್ರಭಾವಿಸುತ್ತವೆ. ಈ ರೀತಿಯ ಉತ್ತಮ ವ್ಯಕ್ತಿತ್ವವು ಬರಹಗಾರನಲ್ಲಿದ್ದರೆ ಕೃತಿಯು ಉತ್ತಮವಾಗಿರುತ್ತದೆ. ಸಾಹಿತ್ಯ ಸೃಷ್ಟಿಯಲ್ಲಿ ಅಪೂರ್ಣವಾದ ಆನಂದವನ್ನು ಉಂಟು ಮಾಡುವುದು, ತಾನು ಪಡೆದ ಅನುಭವ ಇತರರಿಗೂ ದೊರಕಬೇಕೆಂಬ ದೃಷ್ಟಿಯಿಂದ ಬರಹಗಾರ ಕೃತಿಯನ್ನು ಬರೆಯುತ್ತಾನೆ. ಕೀರ್ತಿ, ಆತ್ಮಾನಂದ, ಹಣ ಸಂಪಾದನೆ ಎಂಬ ಹೆಸರಿನಿಂದ ಕರೆಯುವುದು ಸರಿಯಲ್ಲವೆಂದು ವಿಶ್ಲೇಷಿಸುತ್ತಾರೆ. ಆ ಮೂಲಕ ಸಾಹಿತಿಗೆ ಹಣಕ್ಕಿಂತ, ಕೀರ್ತಿಗಿಂತ, ಆತ್ಮಾನಂದಕ್ಕಿಂತ, ತಾನು ಪಡೆದ ಅನುಭವವು ಇತರರು ಪಡೆಯುವಂತಾಗಲೀ ಎಂಬ ಆಶಯವೊಂದೇ ನಿಜವಾದ ಸಾಹಿತಿಯ ದೃಷ್ಟಿಕೋನವಾಗಿದೆ.

'ಸಾಹಿತಿ ಮತ್ತು ಸಾಮಾಜಿಕ ನೀತಿ' ಎಂಬ ಲೇಖನದಲ್ಲಿ ನಿರಂಜನರು ಮೊದಲಿಗೆ ಎರಡು ಪ್ರಶ್ನೆಗಳನ್ನು ಕೇಳುತ್ತಾರೆ. ಮೊದಲನೆಯದು ನಮಗೆ ಎಂತಹ ಸಾಹಿತ್ಯ ಬೇಕು? ಎರಡನೇಯದು ಎಂತಹ ಸಮಾಜ ಬೇಕು, ಈ ಎರಡು ಪ್ರಶ್ನೆಗೆ ಒಂದೇ ಬಗೆಯ ಉತ್ತರ ಲಭ್ಯವಾಗುವುದಿಲ್ಲ. ಸಾಹಿತಿಯಾದವನು ತನ್ನ ಕೃತಿಗಳಲ್ಲಿ ಸಮಾಜದಲ್ಲಿರುವ ಅನೇಕ ಸಮಸ್ಯೆಗಳನ್ನು ಚಿತ್ರಿಸಿ ಸೂಕ್ತ ಪರಿಹಾರವನ್ನು ನೀಡುತ್ತಾನೆ. ಆದರೆ ಸಾಹಿತಿಗಳಲ್ಲಿ ಎರಡು ರೀತಿಯವರು ಇದ್ದಾರೆ. ಸರಕಾರದ ಆಕಾಶವಾಣಿ, ಅಕಾಡೆಮಿಗಳ ಸೇವೆಗೆ ಸಿದ್ಧರಾದವರು ಇವರು ಸರಕಾರದ ಯೋಜನೆಗಳು, ಸರಕಾರದ

ಪರ ನಿಲುವುಗಳನ್ನೂ ತಮ್ಮ ಸಾಹಿತ್ಯದಲ್ಲಿ ಬರೆಯುವವರು, ಮತ್ತೊಬ್ಬರು ದರ್ಶನಕ್ಕೆ ತತ್ವಕ್ಕೆ ದಾಸರಾಗಿ ಸಾಹಿತ್ಯ ಸೃಷ್ಟಿಸುವವರು.

ಸಮಾಜದ ಆಗು-ಹೋಗುಗಳನ್ನು ರಾಜಕೀಯದವರು ನಿರ್ಧರಿಸುತ್ತಾರೆ ಹೊರತು ಸಾಹಿತಿಗಳಲ್ಲ. ದರ್ಶನ ಗ್ರಂಥದ ಪ್ರಭಾವಕ್ಕೆ ಒಳಗಾದವರು ಕುಮಾರವ್ಯಾಸ ಭಾರತ, ರಾಮಾಯಣದ ಕೃತಿಗಳನ್ನು ಅಗ್ಗದ ಬೆಲೆಗೆ ಸರಕಾರದಿಂದ ತಂದು ಮಾರಾಟ ಮಾಡಬಹುದು. ಸಮಾಜ ಆ ಕೃತಿಗಳನ್ನು ಓದಿ ಒಳ್ಳೆಯ ಪ್ರೇರಣೆಗೆ ಒಳಗಾದರೆ ಎಂಬ ಪ್ರಶ್ನೆಗೆ ಸರಿಯಾದ ಉತ್ತರ ದೊರಕುವುದಿಲ್ಲ. ಹಾಗಾಗಿ ಸಾಮಾಜಿಕ ನೀತಿಯನ್ನು ಸಾಹಿತ್ಯ ರೂಪಿಸುತ್ತದೆ ಎಂದು ಹೇಳಲು ಸಾಧ್ಯವಾಗುವುದಿಲ್ಲ ಎಂಬ ಹಿನ್ನೆಲೆಯಲ್ಲಿ ಸಾಹಿತ್ಯವು ಸಾಮಾಜಿಕ ನೀತಿಯನ್ನು ನಿರ್ಧರಿಸುವುದಿಲ್ಲ ಎಂಬುದಾಗಿ ವಿವರಿಸುವರು.

ಯುಗ ಧರ್ಮಕ್ಕೆ ಅನುಗುಣವಾಗಿ ಕೆಲವೊಂದು ಉನ್ನತ ಕೃತಿಗಳು ರಚನೆಗೊಂಡಿದ್ದರು ಚಿರಕಾಲದಲ್ಲಿ ಉಳಿಯುತ್ತವೆ. ಅಂತಹ ಕೃತಿಯು ಸೃಷ್ಟಿಗೂ ದೈನಂದಿನ ಸಾಮಾಜಿಕ ರೀತಿಗೂ ಸಂಬಂಧವಿಲ್ಲ. ಉತ್ತಮ ಕೃತಿಗಳು ಬಂದು ಕಾಲಾವಾದಿಯ ಪೀಳಿಗೆಗೆ ಸಂಬಂಧಿಸಿದ್ದಲ್ಲ, ಅದು ಯುಗಕ್ಕೆ ಸಂಬಂಧಿಸಿದ್ದು ಎಂದು ನಿರಂಜನರು ವಿವರಿಸುತ್ತಾರೆ.

'ದಿನಚರಿಯಿಂದ' ಎಂಬ ಪತ್ರಿಕಾ ಅಂಕಣ ಲೇಖನದಲ್ಲಿ 'ಬಣ್ಣದ ಬರವಣಿಗೆ' ಎಂಬ ಲೇಖನದಲ್ಲಿ ನಿರಂಜನರವರು ರಾಜಮಹಾರಾಜರೇ ಇರಲಿ, ಸರ್ವಾಧಿಕಾರಿಗಳೇ ಇರಲಿ ಅಥವಾ ಜನತೆಯಿಂದ ಆರಿಸಿಬಂದ ನಾಯಕನಾಗಿರಲಿ, ಆತನಿಗೆ ಬರೆಯುವ ವಿಷಯದಲ್ಲಿ ಆಸಕ್ತಿಯಿರುತ್ತದೆ. ಸಮಾಜಕ್ಕೆ ಹಿತ ಎಂಬುದು ಎಲ್ಲ ರಾಷ್ಟ್ರಗಳಿಗೆ ಸಂಬಂಧಿಸಿದರು ಅದು ಬೇರೆ ಬೇರೆಯಾಗಿರುತ್ತದೆ. ಅದಕ್ಕೆ ಕಾರಣವೇನೆಂದರೆ ಸಾಮಾಜಿಕ ಚೌಕಟ್ಟನ್ನು ನಿರ್ಮಾಣ ಮಾಡುವುದೇ ರಾಜಕೀಯ ವ್ಯವಸ್ಥೆಯನ್ನು ಆಧರಿಸುವುದಾಗಿದೆ. ಹಾಗಾಗಿ ಯಾವುದೇ ರಾಜಕೀಯ ನಾಯಕರು, ತಮ್ಮದೇ ಆದ ನಿರ್ದಿಷ್ಟ ಗುರಿ, ಉದ್ದೇಶಗಳನ್ನು ಹೊಂದಿದ್ದು, ಅವರು ಸಮಾಜದ ದೃಷ್ಟಿಯಿಂದ ಅಪೇಕ್ಷಣಿಯವಲ್ಲವೆಂದು ತಮಗೆ ಅನುಕೂಲವಾದುದನ್ನು ಒಪ್ಪುತ್ತಾರೆ, ಇಲ್ಲವಾದುದನ್ನು ಅಲ್ಲಗಳೆಯುತ್ತಾರೆ. ಹಾಗಾಗಿ ವಿವೇಕವುಳ್ಳ, ಅನುಭವವುಳ್ಳ ಬರಹಗಾರ ತನ್ನ ಹೊಣೆಗಾರಿಕೆಯನ್ನು ತಿಳಿದವನಾಗಿ ಆತ ಸಮಾಜದ, ರಾಷ್ಟ್ರದ ಉನ್ನತಿಗೆ ಬಯಸುತ್ತಾನೆ. ಯಾರಲ್ಲಿ ವಿವೇಕವೆಂಬುದು ಹೆಚ್ಚಿರುತ್ತದೆಯೋ ಅವರಿಂದ ಉತ್ತಮ ಸಾಹಿತ್ಯ ಸೃಷ್ಟಿಯಾಗುತ್ತದೆ, ಯಾರಲ್ಲಿ ಕಡಿಮೆ ಇರುತ್ತದೆಯೋ ಅವರಿಂದ ಉತ್ತಮ ಸಾಹಿತ್ಯ ಸೃಷ್ಟಿಯಾಗದೇ ಇರಬಹುದು. ಅದರಿಂದಾಗಿ ಸಾಹಿತ್ಯ ಸೃಷ್ಟಿಯಲ್ಲಿ ಏರುಪೇರುಗಳಾಗುತ್ತವೆ. ಲೇಖಕನಿರಬಹುದು ಅಥವಾ ಕಲಾವಿದನಾಗಲೀ ಆತ ಸೃಷ್ಟಿಸುವ ಕಲಾಕೃತಿ ಆತನ ಸ್ವಾತಂತ್ರ್ಯ ಮತ್ತು ಅನುಭವವನ್ನು ಆಧಾರಿಸಿದೆ.

ಸಾಹಿತ್ಯ ಎಂದರೇನು? ಎಂಬುದಕ್ಕೆ ನಿರಂಜನರವರು ತಮ್ಮ 'ಅಂಕಣ' ಕೃತಿಯ 'ಮಿನುಗುವ ನಕ್ಷತ್ರ' ಎಂಬ ಲೇಖನದಲ್ಲಿ ಸಾಹಿತ್ಯವೆಂಬುದು ತತ್ವಜ್ಞಾನವು ಆಗಿದೆ, ಅದರಂತೆ ವಿಜ್ಞಾನವು ಆಗಿದ್ದು ಅದು ಸತ್ಯವನ್ನು ಪ್ರತಿಪಾದಿಸುವ ಸೌಂದರ್ಯ ಮೀಮಾಂಸೆ ಎಂಬುದಾಗಿ ತಿಳಿಸುತ್ತಾರೆ. ಅದೇ ಸಾಹಿತ್ಯವನ್ನು ಕುರಿತಂತೆ ನಿರಂಜನರವರು 'ದಿನಚರಿಯಿಂದ' ಅಂಕಣಗಳ ಕೃತಿಯಲ್ಲಿ "ಈ ಜಗತ್ತಿನಲ್ಲಿ ಸಾಹಿತ್ಯ ಸ್ವತಂತ್ರವಾಗಿರುವುದು ಆಫ್ರಿಕಾದಲ್ಲಿ ಮಾತ್ರ ಯಾಕೆಂದರೆ ಅಲ್ಲಿ ಸಾಹಿತ್ಯವೇ ಇಲ್ಲ"[೬] ಎಂದು ನಿರಂಜನರು ಅಭಿಪ್ರಾಯಿಸುತ್ತಾರೆ.

ಸಾಹಿತ್ಯವನ್ನು ಸಮಾಜದ ಧಾರ್ಮಿಕ, ರಾಜಕೀಯ, ಸಾಮಾಜಿಕ ವಿಚಾರಗಳು ಪ್ರಭಾವಿಸಿವೆ ಮತ್ತು ಸಾಹಿತಿಯನ್ನು ನಿಯಂತ್ರಿಸುತ್ತಿವೆ. ಆ ಮೂಲಕ ನೈಜ ವಾಸ್ತವದ ಬದುಕು ಸಾಹಿತ್ಯದಲ್ಲಿ ವ್ಯಕ್ತವಾಗುವುದಿಲ್ಲ. ಹಾಗಾಗಿ ಸಾಹಿತ್ಯ ಸ್ವತಂತ್ರವಾಗಿಲ್ಲವೆಂದು, ಅದು ಎಲ್ಲಿ ಸ್ವತಂತ್ರವಾಗಿದ್ದರೆ ಆ ರಾಷ್ಟ್ರದಲ್ಲಿ ಸಾಹಿತ್ಯವೇ ಇರುವುದಿಲ್ಲ ಎಂಬುದಾಗಿ ಸಾಹಿತ್ಯಕ್ಕೆ ಸ್ವಾತಂತ್ರ್ಯ ಎಂಬುದಿಲ್ಲ, ಎಲ್ಲಾ ದೇಶಗಳಲ್ಲಿಯೂ ಸಾಹಿತ್ಯವಿದ್ದರು ಅದನ್ನು ಒಂದಲ್ಲಾ ಒಂದು ವಿಚಾರಗಳು ನಿಯಂತ್ರಿಸುತ್ತವೆ. ಸಾಹಿತ್ಯಕ್ಕೆ ಸ್ವಾತಂತ್ರ್ಯವಿಲ್ಲದ ಸ್ಥಿತಿಯನ್ನು ಈ ವಾಕ್ಯ ಧ್ವನಿಸುತ್ತದೆ.

ಹೆಸರಾಂತ ಬರಹಗಾರರಿಂದ ಹೊಸ ಲೇಖಕರು ಮುನ್ನುಡಿಯನ್ನು ಬರೆಸುವುದು ಅದರಿಂದ ತಮ್ಮ ಕೃತಿ ಉತ್ತಮವಾದುದೆಂದು ಓದುಗರಲ್ಲಿ ಆಸಕ್ತಿ ಮೂಡಿಸಲು ಸಹಾಯಕ ಎಂಬ ಭಾವನೆಯಿದೆ. ಜೊತೆಗೆ ಪ್ರಖ್ಯಾತರಿಂದ, ಪ್ರಸಿದ್ಧ ಬರಹಗಾರರಿಂದ ಮುನ್ನುಡಿ ಬರೆಸಿದರೆ ಗ್ರಂಥ ಮಾರಾಟಕ್ಕೆ ಅನುಕೂಲವಾಗುತ್ತದೆ ಎಂಬ ಭಾವನೆಯ ಬೆಳೆದಿದೆ. ಭಾಷಣ ಮಾಡುತ್ತಾನೆ ಎಂದು ತಿಳಿದರೆ ಹೇಗೆ ಸಂಘ ಸಂಸ್ಥೆಯವರು ಭಾಷಣಕಾರರಿಗೆ ಮುಗಿ ಬೀಳುತ್ತಾರೋ ಹಾಗೆಯೇ ಒಂದೆರೆಡು ಕೃತಿಗಳಿಗೆ ಮುನ್ನುಡಿ ಬರೆದರೆ ಎಲ್ಲಾ ಬರಹಗಾರರು ಮುನ್ನುಡಿಗಾಗಿ ದುಂಬಾಲು ಬೀಳುವುದು. ಕೆಲವರು ವಿಮರ್ಶಾತ್ಮಕವಾಗಿ ಮುನ್ನುಡಿ ಬರೆದರೆ, ಇನ್ನು ಕೆಲವರು ಪೀಠಿಕೆ ರೂಪದಲ್ಲಿ ಬರೆಯುತ್ತಾರೆ. ಮುನ್ನುಡಿಗಳನ್ನು ಕುರಿತಂತೆ ಕವಿ, ನಾಟಕಕಾರ, ವಿಮರ್ಶಕ, ಕಾದಂಬರಿಕಾರ ಎಂದು ಸಾಹಿತ್ಯದಲ್ಲಿ ಸ್ಥಾನ ಪಡೆದಿರುವಂತೆ ಮುನ್ನುಡಿಕಾರನಿಗೂ ಒಂದು ಸ್ಥಾನವನ್ನು ನೀಡಬೇಕೆಂದು ಅಂಕಣ ಕೃತಿಯ 'ಶ್ರೀಮಾನ್ ಮುನ್ನುಡಿಕಾರರು' ಎಂಬ ಲೇಖನದಲ್ಲಿ ಚರ್ಚಿಸುತ್ತಾರೆ. ಮುನ್ನುಡಿಗೆ ಮತ್ತು ಮುನ್ನುಡಿಗಾರರ ಬಗ್ಗೆ ಭಿನ್ನವಾದ ವಿಚಾರವನ್ನು ಪ್ರತಿಪಾದಿಸುತ್ತಾರೆ.

ಭಾರತದಲ್ಲಿ ಒಬ್ಬ ಕೃತಿಕಾರ ಅಥವಾ ಸಾಹಿತಿಯ ಬದುಕಿನಲ್ಲಿ ಬಹಳ ಮುಖ್ಯವಾಗಿ ಮೂರು ವಿಚಾರಗಳು ಪಾತ್ರವಹಿಸುತ್ತದೆ. ಅವರಲ್ಲಿ ಪ್ರಕಾಶಕ, ಪುಸ್ತಕ ವ್ಯಾಪಾರಿ ಮತ್ತು ಓದುಗ ಇವು ಬರಹಗಾರನ ಮೇಲೆ ಒಂದು ಕೃತಿ ಬರೆದ ನಂತರ ಪ್ರಮುಖವಾಗಿ ಪ್ರಭಾವಿಸುತ್ತವೆ. ಪಾಶ್ಚಾತ್ಯರಲ್ಲಿ ಸಾಹಿತ್ಯ ದಲ್ಲಾಳಿಗಳಿಗೆ ಹೆಚ್ಚಿನ ಆದ್ಯತೆಯಿದೆ. ಈ ಸಾಹಿತ್ಯ ದಲ್ಲಾಳಿಗಳ ಕೆಲಸ ಗೌರವದ ಮತ್ತು ಸಂಪಾದನೆಯ ಕೆಲಸವಾಗಿದೆ. ಗ್ರಂಥ ಕರ್ತನಿಗೆ ಈ ಸಾಹಿತ್ಯ ದಲ್ಲಾಳಿಗಳು ಪ್ರಕಟಣೆಗಾಗಿ ಪ್ರಕಾಶರನ್ನು ಗೊತ್ತು ಮಾಡುತ್ತಾರೆ. ನಿಯತಕಾಲಿಕೆಗಳಲ್ಲಿ, ವಿದೇಶಿ ಆವೃತ್ತಿಗಳ ಹಕ್ಕುಗಳಿಗೆ, ಚಲನಚಿತ್ರ ನಿರ್ಮಾಪಕ ಸಂಸ್ಥೆಗಳೊಂದಿಗೆ ಮೊದಲಾದ ರೀತಿಯಲ್ಲಿ ವ್ಯವಹರಿಸುತ್ತಾರೆ. ಗ್ರಂಥ ಕರ್ತನಿಗೆ ಹಣ ಬರುವ ವಿವಿಧ ಮಾರ್ಗಗಳನ್ನು ಮಾಡಿಕೊಟ್ಟು ಅದರಿಂದ ೧೦% ತನ್ನ ಮೊತ್ತವನ್ನು ತೆಗೆದುಕೊಳ್ಳುತ್ತಾನೆ. ಇನ್ನೊಂದು ಕಾದಂಬರಿ ಬರೆಯಲು ಪ್ರಕಾಶಕರಿಂದ ಮುಂಗಡ ಹಣವನ್ನು ಗ್ರಂಥಕರ್ತನಿಗೆ ಮುಟ್ಟಿಸುವ ಕೆಲಸವನ್ನು ಮಾಡುತ್ತಾನೆ. ಈ ರೀತಿಯ ಸಾಹಿತ್ಯ ದಲ್ಲಾಳಿಗಳು ಒಂದು ಸಾಹಿತ್ಯ ಕೃತಿಯನ್ನು ಬೇರೆ ಬೇರೆಯಲ್ಲಿ ಪ್ರಕಟಿಸುವ ಮೂಲಕ ಗ್ರಂಥಕರ್ತನಿಗೆ ಒಂದು ರೀತಿಯಲ್ಲಿ ಸಹಾಯ ಮಾಡುವ ಅದರಿಂದ ತಾನು ಲಾಭವನ್ನು ಗಳಿಸುತ್ತಾ ಹೋಗುವುದು ವಿದೇಶಿಗಳಲ್ಲಿ ಬೆಳೆದು ಬಂದಿದೆ ಎಂದು 'ದಿನಚರಿಯಿಂದ' ಅಂಕಣಗಳ ಕೃತಿಯಲ್ಲಿ 'ಸರಸೋತಮ್ಮನ ಪರಿಚಾರಿಕೆ ಲಕ್ಷ್ಮಿ' ಎಂಬ ಲೇಖನದಲ್ಲಿ ಚರ್ಚಿಸುತ್ತಾರೆ.

ಇದೇ ವಿಚಾರವಾಗಿ ಇದೇ ಕೃತಿಯಲ್ಲಿ ನಿರಂಜನರು 'ಸಾಹಿತ್ಯದ ಅಂಗಡಿ' ಎಂಬ ಲೇಖನದಲ್ಲಿ ಕನ್ನಡದ ನವೋದಯ ಕಾಲಘಟ್ಟದಲ್ಲಿನ ಪ್ರಕಾಶಕರು ಕವಿ ಕಾವ್ಯ ಪಕ್ಷಪಾತಿಗಳಾಗಿದರು.

ಪ್ರಕಾಶನವು ಸಾಹಿತ್ಯ ಸೇವೆ ಎಂಬುದಾಗಿತ್ತು. ಆದರೆ ಕಾಲಕ್ರಮೇಣ ಹಣ ಮಾಡುವ, ವ್ಯಾವಹಾರಿಕ ಅಥವಾ ವಾಣಿಜ್ಯ ವೃತ್ತಿಯಾಗಿ ಮಾರ್ಪಟ್ಟ ನಂತರ ಉದ್ದಿಮೆಯಾಗಿ ಪ್ರಕಾಶನಗಳು ಬೆಳೆದಿದ್ದರು, ಕನ್ನಡ ಪುಸ್ತಕ ಪ್ರಪಂಚದಲ್ಲಿ ಎಲ್ಲವು ಚೆನ್ನಾಗಿದೆ ಎನ್ನಲಾಗುವುದಿಲ್ಲ ಎಂದು ಕನ್ನಡ ಪುಸ್ತಕ ಪ್ರಕಾಶನ ಸಂಸ್ಥೆಗಳ ಧೋರಣೆಯನ್ನು ತಿಳಿಸುತ್ತಾರೆ.

ಇಟಲಿಯಲ್ಲಿ ಪುಸ್ತಕ ಕೊಳ್ಳುವವರ ಸಂಖ್ಯೆ ಕಡಿಮೆಯಾದಂತೆ ಅಲ್ಲಿ ಪುಸ್ತಕ ವ್ಯಾಪಾರಿ ಮತ್ತು ಗ್ರಾಹಕನಿಗೂ ಸಂಬಂಧ ಬೆಳೆಯುವಂತೆ 'ವಾಚಕರ ಸಪ್ತಾಹ'ವನ್ನು ಏರ್ಪಟ್ಟು ಮಾಡಲಾಗಿದೆ. ಇದರಿಂದಾಗಿ ಓದುಗ ಮತ್ತು ವ್ಯಾಪಾರಿ ಸ್ನೇಹಿತರೆಂದು ಮಾರ್ಗದರ್ಶಿಗಳು ಎಂಬ ಭಾವನೆ ಬೆಳೆಸುವುದು ಮುಖ್ಯ ಉದ್ದೇಶವಾಗಿದೆ. ಭಾರತದಲ್ಲಿ ಪ್ರಕಾಶಕರು, ವ್ಯಾಪಾರಿಗಳು, ಗ್ರಂಥಕರ್ತರು ನೀರಿನ ಸೆಳೆತ ಯಾವ ಕಡೆ ಇರುತ್ತದೆಯೋ ಆ ಕಡೆಗೆ ಸಾಗುವಂತವರಾಗಿದ್ದಾರೆ. ಸಾಹಿತ್ಯ ಮತ್ತು ಸಮಾಜಕ್ಕೆ ಹತ್ತಿರವಾದ ಸಂಬಂಧವಿದ್ದ ಅದರಲ್ಲಿ ನೀತಿ ಎಂಬುದು ಬಹಳ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ಆ ನೀತಿ ನಿಯಮಗಳನ್ನು ಪ್ರಕಾಶಕರು ಪಾಲಿಸದಂತಹ ಸ್ಥಿತಿಯಿಂದಾಗಿ ಪ್ರಸಕ್ತ ವ್ಯಾಪಾರಸ್ಥರಲ್ಲಿ ಅಸೂಯೆ, ಅಹಿತಕರ ಮೇಲಾಟಗಳು, ಪ್ರಧಾನ ಪ್ರವೃತ್ತಿಗಳಾಗಿ ಒಬ್ಬರ ಪ್ರಕಟಣೆಗಳನ್ನು ಇನ್ನೊಬ್ಬರು ತೆಗೆದುಕೊಳ್ಳುವುದಿಲ್ಲ. ಪ್ರಕಾಶನ ದೃಷ್ಟಿ ಮತ್ತು ಪ್ರಕಾಶನ ಸಂಸ್ಥೆಗಳ ಮನಃಸ್ಥಿತಿ ಬರೀ ಲಾಭದ ದೃಷ್ಟಿಯಿಂದ ಯೋಚಿಸಿದರೆ ಸಾಹಿತ್ಯ ಪ್ರಸಾರವಾಗಲು ಸಾಧ್ಯವಿಲ್ಲ ಎಂದು ವಿಶ್ಲೇಷಿಸುತ್ತಾರೆ. ಆ ಮೂಲಕ ಭಾರತದಲ್ಲಿನ ಪ್ರಕಾಶಕರ ಮನಃಸ್ಥಿತಿ ಮತ್ತು ಪಾಶ್ಚಾತ್ಯರಲ್ಲಿನ ಪ್ರಕಾಶಕರ ಸಾಹಿತ್ಯ ದಲ್ಲಾಳಿಗಳ ನಡುವೆ ಇರುವ ಅಂತರವು ತಿಳಿಯುತ್ತದೆ.

"ಸ್ವತಃ ಪ್ರಕಾಶಕರಾದ ಇರ್ವಿಂಗ್ ಕ್ರಿಸ್ಟಲ್ ಹೇಳಿರುವಂತೆ ಪುಸ್ತಕ ಪ್ರಕಾಶನವು ಅಮೇರಿಕಾದಲ್ಲಿ ಒಂದು ವೃತ್ತಿಯಲ್ಲ ಅದು ವ್ಯಾಪರೋದ್ಯಮ, ನಮ್ಮಲ್ಲಿ"?[೭] ಎಂದು ನಿರಂಜನರು ಅಭಿಪ್ರಾಯಿಸುತ್ತಾರೆ. ನಮ್ಮಲ್ಲಿಯೂ ಕೂಡ ಪುಸ್ತಕ ಪ್ರಕಾಶನ ಎಂಬುದು ಸಾಹಿತ್ಯ ಸಂಸ್ಕೃತಿಯನ್ನು ಪ್ರಚಾರ ಮಾಡುವ ಸಾಧನವಾಗದೇ, ವೃತ್ತಿಯೂ ಕೂಡ ಆಗದೇ ವ್ಯಾಪಾರವಾಗಿ, ಒಂದು ಉದ್ಯಮವಾಗಿ ಬೆಳೆದಿದೆ. ಈ ರೀತಿಯ ಉದ್ಯಮದಿಂದ ನಾಡಿನ ಸಾಂಸ್ಕೃತಿಕ ವಿಚಾರಗಳನ್ನು ಬೆಳೆಸಲು ಸಾಧ್ಯವಿಲ್ಲ. ಎಲ್ಲಿ ವ್ಯವಹಾರವಿರುತ್ತದೆಯೋ ಅಲ್ಲಿ ಸಮಾಜವನ್ನು ಕಟ್ಟುವ, ಸಾಂಸ್ಕೃತಿಕ ಪರಂಪರೆಯನ್ನು ಬೆಳೆಸಲು ಸಾಧ್ಯವಿಲ್ಲ.

ಪ್ರಕಾಶಕರು ಹೆಚ್ಚಿನವರು ವ್ಯವಹಾರಿಕ ದೃಷ್ಟಿಯವರಾಗಿದ್ದು ಪ್ರಚಾರ ಪರಿಣತರು ಕೂಡ ಆಗಿದ್ದಾರೆ. ಒಂದು ಪುಸ್ತಕದ ಪ್ರಕಟಣೆಯ ಉದ್ಘಾಟನಾ ಸಮಾರಂಭಗಳನ್ನು ಇಟ್ಟುಕೊಂಡು ಜಾಹೀರಾತು ಇಲ್ಲದೆ ಬಂದಂತಹ ಗೆಳೆಯರ ಮುಂದೆ ಪುಸ್ತಕ ಪ್ರಚಾರವನ್ನು ಮಾಡುತ್ತಾರೆ. ಒಬ್ಬ ಕೃತಿಕಾರನ ೨೫ನೇ, ೫೦ನೇ, ೧೦೦ನೇ ಕೃತಿಗಳ ಲೋಕಾರ್ಪಣೆಗಾಗಿ ದೊಡ್ಡ ಸಮಾರಂಭ ಮಾಡಲು ಹಿಂಜರಿಯುವುದಿಲ್ಲ ಈ ರೀತಿಯ ಕಾರ್ಯಕ್ರಮಗಳಿಂದ ಗ್ರಂಥಕರ್ತ ಮತ್ತು ಪ್ರಕಾಶಕರಿಗೆ ಸಮಾಜದಲ್ಲಿ ಒಂದು ಘನತೆ ಲಭಿಸುತ್ತದೆ. ಪ್ರಕಾಶಕರ ಪುಸ್ತಕ ಪ್ರಚಾರದ ವಿವಿಧ ಆಯಾಮಗಳನ್ನು ಅಂಕಣ ಕೃತಿಯ 'ಊಟಕ್ಕೆ ಬರಬೇಕು' ಎಂಬ ಲೇಖನದಲ್ಲಿ ಚರ್ಚಿಸುತ್ತಾರೆ.

ಭಾರತದ ಪ್ರಮುಖ ಪ್ರಕಾಶನ ಸಂಸ್ಥೆಯಾದ 'ಏಷ್ಯಾ ಪಬ್ಲಿಶಿಂಗ್ ಹೌಸ್' ರವರು ಕೂಡ 'ಸಾಹಿತ್ಯ ಔತಣಕೂಟ' ಎಂಬ ಹೊಸ ಯೋಜನೆಯ ಮೂಲಕ ಲೇಖಕರ, ವಿದ್ಯಾವಂತರ, ಬುದ್ಧಿ ಜೀವಿಗಳನ್ನು ಒಂದೆಡೆ ಸೇರಿಸಿ ಭೋಜನಗಳನ್ನು ಏರ್ಪಡಿಸಿ ವಿಚಾರ ವಿನಿಮಯದೊಂದಿಗೆ ಪುಸ್ತಕ

ಪ್ರಚಾರ ಮಾಡುವ ದೃಷ್ಟಿಯೇ ಆಗಿದೆ. ಈ ರೀತಿಯ ಯೋಜನೆಗಳು ಒಂದು ಅನುಕರಣೀಯವಾದುದು. ಇಂತಹ ಔತಣಕೂಟಗಳನ್ನು ದೇಶಿಯ ಭಾಷೆಯ ಪ್ರಕಾಶಕರು ಏರ್ಪಡಿಸಿದರೆ ಬಡ ಲೇಖಕರಿಗೆ ಸಾಮಾಜಿಕ ಸ್ಥಾನಮಾನಗಳು ಸಿಗಬಹುದು. ಜೊತೆಗೆ ಮಧುರ ಭಾಂಧವ್ಯ, ಸ್ನೇಹವು ಮೂಡುವುದು, ಹಿಂದೆ ಬರಹಗಾರನೇ ಊಟದ ಏರ್ಪಟ್ಟು ಮಾಡಬೇಕಾಗಿತ್ತು. ಆ ಜವಾಬ್ದಾರಿಯನ್ನು ಪ್ರಕಾಶಕ ತೆಗೆದುಕೊಂಡರೆ ಉತ್ತಮವಾದುದೆಂದು ನಿರಂಜನರು ಭಾವಿಸುತ್ತಾರೆ.

ಪುಸ್ತಕ ಉದ್ಘಾಟನೆ, ಪ್ರಕಟಣೆ, ಮಾರಾಟ ಎಂಬುದೆಲ್ಲಾ ಇಂದೂ ಇದೆ ಮಾದರಿಯಲ್ಲಿ ನಡೆಯುತ್ತಿರುವುದಾಗಿದೆ. ಪ್ರಕಾಶಕರ ವ್ಯಾವಹಾರಿಕ ದೃಷ್ಟಿ, ಸಾಹಿತಿಯ ಸಾಮಾಜಿಕ ಘನತೆ ಅಡಗಿದೆಯೇ ಹೊರತು ಹಿಂದೆ ಇದ್ದ ಸಾಹಿತ್ಯ ಸೇವೆ ಎಂಬ ಧೋರಣೆಯಲ್ಲ. ಕಾಲಕ್ಕೆ ತಕ್ಕಂತೆ ಸಾಹಿತ್ಯವು ಹೇಗೆ ಬದಲಾಗುತ್ತದೆಯೋ ಅದೇ ರೀತಿ ಪ್ರಕಾಶಕರ ದೃಷ್ಟಿಯು ಮಾರಾಟದ ರೀತಿಯೂ ಬದಲಾವಣೆಗೊಂಡಿದೆ.

ಕೃತಿಚೌರ್ಯವನ್ನು ಕುರಿತಂತೆ ನಿರಂಜನರವರು 'ಅಂಕಣ' ಕೃತಿಯಲ್ಲಿ 'ಹಕ್ಕುಗಳನ್ನು ಕಾದಿರಿಸಲಾಗಿದೆ' ಎಂಬ ಲೇಖನದಲ್ಲಿ ಕೆಲವು ಚಲನಚಿತ್ರ ನಿರ್ಮಾಪಕರು, ನಿರ್ದೇಶಕರು ಎಲ್ಲಾ ಭಾಷೆಗಳ ಕಥೆಗಳ ಸನ್ನಿವೇಶ, ಘಟನೆಗಳನ್ನು ಒಂದೊಂದು ಎಳೆಗಳನ್ನು ಕದ್ದು ಚಲನಚಿತ್ರ ಮಾಡುವುದು, ನಾಲ್ಕಾರು ಕಥೆಗಳನ್ನು ಓದಿ ತಮ್ಮದೆಯಾದ ರೀತಿಯಲ್ಲಿ ಕಥೆ ಬರೆದು ಚಿತ್ರ ಮಾಡುತ್ತಾರೆ. ಬಡ ಲೇಖಕನಿಗೆ ಕಾಪಿರೈಟ್ ಶಾಸನದ ರಕ್ಷಣೆ ಇರಬಹುದು, ಆದರೆ ಅದರಿಂದ ಯಾವುದೇ ಪ್ರಯೋಜನವಿಲ್ಲ, ಕಾರಣವೆಂದರೆ ನಮ್ಮಲ್ಲಿ ಬೇರೆ ರಾಷ್ಟ್ರಗಳಿರುವಂತೆ 'ಲಿಟರರಿ ಎಜೆಂಟ್'ಗಳು ಇರುವುದಿಲ್ಲ. ವಕೀಲನನ್ನು ಗೊತ್ತು ಮಾಡಲು ಸಾಧ್ಯವಿಲ್ಲದ ಪರಿಸ್ಥಿತಿ ಮತ್ತು ತನ್ನ ಸ್ಥಿತಿಯನ್ನು ಇನ್ನೊಬ್ಬರೊಡನೆ ಹೇಳಿಕೊಂಡು ಸುಮ್ಮನಾಗಬೇಕು. ಚಲನಚಿತ್ರ ತಂತ್ರಜ್ಞನರು ಕಥೆಗಳನ್ನು ಕೃತಿಚೌರ್ಯಕ್ಕೆ ಒಳಪಡಿಸದೇ ಕಥೆಯ ಸಾರಾಂಶ, ಘಟನೆ, ಸನ್ನಿವೇಶಗಳನ್ನು ಬೇರೆ ನಾಲ್ಕರ ಕಥೆ, ಕಾದಂಬರಿಗಳಿಂದ ಪಡೆದು ಸಿನಿಮಾ ನಿರ್ಮಾಣ ಮಾಡುವ ಮೂಲಕ ಹೇಗೆ ಕೃತಿಚೌರ್ಯರಿಂದ ಪಾರಾಗುತ್ತಾರೆ ಎಂಬುದನ್ನು ತಿಳಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಅನೇಕ ಚಲನಚಿತ್ರಗಳು ಇದೇ ಮಾದರಿಯಲ್ಲಿವೆ. ಕಥೆ, ಕಾದಂಬರಿಗಳ ಕೆಲವೊಂದು ಸನ್ನಿವೇಶ, ಘಟನೆಗಳನ್ನು ಕದ್ದು ತಮ್ಮದೇಯಾದ ರೀತಿಯಲ್ಲಿ ಅವುಗಳಿಗೆ ಕೆಲವೊಂದು ಸನ್ನಿವೇಶಗಳನ್ನು ಸೇರಿಸಿ ಚಲನಚಿತ್ರ ತಯಾರು ಮಾಡುವುದು ಇಂದಿಗೂ ನಾವು ಕಾಣುತ್ತೇವೆ. ಕೃತಿಚೌರ್ಯದ ಬಗ್ಗೆ ಚಲನಚಿತ್ರ ನಿರ್ದೇಶಕರು, ನಿರ್ಮಾಪಕರನ್ನು ಕೇಳಿದರೆ ಅವರು ನಾವು ಕೃತಿಚೌರ್ಯವನ್ನು ಮಾಡಿಲ್ಲವೆಂದು ಅದರಿಂದ ಪ್ರೇರಣೆ ಪಡೆದಿದ್ದೇವೆ ಎಂದು ವಾದಿಸುತ್ತಾರೆ.

ಅನೇಕ ಪಾಶ್ಚಾತ್ಯ ಲೇಖಕರು ಕೂಡ ಕಳೆದ ಮೂವತ್ತೈದು ವರ್ಷಗಳಲ್ಲಿ ಹೊಸಗನ್ನಡ ಸಾಹಿತ್ಯದ ಬರಹಗಾರರ ಪ್ರೇರಣೆ ಪಡೆದಿದ್ದಾರೆ. ಇಂಗ್ಲೆಂಡ್, ಅಮೇರಿಕಾ, ಫ್ರಾನ್ಸ್, ಜರ್ಮನಿ, ಇಟಲಿ, ರಷ್ಯಾ, ಮೊದಲಾದ ದೇಶಗಳಲ್ಲಿ ಕಾದಂಬರಿ ಕೃತಿಗಳನ್ನು ನೋಡಿದರೆ ಆಧುನಿಕ ಕನ್ನಡ ಕೃತಿಗಳ ಕೆಲವೊಂದು ಪಡಿನೆಳಲನ್ನು ಕಾಣಬಹುದು. ಕೃತಿಚೌರ್ಯವೆಂಬುದು ಷೇಕ್ಸ್‌ಪಿಯರ್, ಬರ್ನಾಡ್‌ಷಾ ಮೊದಲಾದವರನ್ನು ಬಿಟ್ಟಿಲ್ಲ. ವಿದೇಶಿಗರು ಕನ್ನಡ ಕೃತಿಗಳ ಕೃತಿಚಾರ್ಯವನ್ನು ಮಾಡಿದರ ವಿಚಾರವಾಗಿ 'ಕೃತಿಚೋರರಿಂದ ರಕ್ಷಣೆ' ಎಂಬ ಲೇಖನದಲ್ಲಿ ಚಲನಚಿತ್ರದವರು ಮಾತ್ರವಲ್ಲದೆ ವಿದೇಶಿ ಬರಹಗಾರರು ಕನ್ನಡದ ಕೃತಿಗಳನ್ನು ಕೃತಿಚೌರ್ಯ ಮಾಡಿರುವುದನ್ನು ವಿಶ್ಲೇಷಿಸುತ್ತಾರೆ.

ಕೃತಿಚೌರ್ಯದ ಬಗ್ಗೆ ಭಾರತೀಯ ಸಂವಿಧಾನದಲ್ಲಿ ಶಾಸನವಿದ್ದರೂ ಅದರಿಂದ ಹೆಚ್ಚಿನ ಶಿಕ್ಷೆಗಳನ್ನು ಕೃತಿಚೌರ್ಯ ಮಾಡಿದವರು ಅನುಭವಿಸುವುದಿಲ್ಲ. ಹಾಗಾಗಿ ಕೃತಿಚೌರ್ಯದ ಮಾತುಗಳು ಕೂಡ ಇತ್ತೀಚಿನ ದಿನಗಳಲ್ಲಿಯು ಅಲ್ಲಲ್ಲಿ ನಾವು ಕೇಳುತ್ತಿರುತ್ತೇವೆ. ಈ ವಿಚಾರವನ್ನು ಕುರಿತು ೧೯೭೦ರಲ್ಲಿಯೇ ತಮ್ಮ ಅಂಕಣ ಕೃತಿಯಲ್ಲಿ ನಿರಂಜನರು ಭಿನ್ನವಾಗಿ ಚರ್ಚಿಸುತ್ತಾರೆ.

ಕಾಲಕ್ಷೇಪ ಕೃತಿಯ 'ಸತ್ತವರಿಗೊಂದು ಸ್ಮಾರಕ' ಎಂಬ ಲೇಖನದಲ್ಲಿ ಜೊಕೊಸ್ಲೊವಾಕಿಯಾ ದೇಶದ ಪ್ರಖ್ಯಾತ ಕವಿ, ಬರಹಗಾರ, ಪತ್ರಿಕೋದ್ಯಮಿ, ಜಾನ್‌ಸಿರುದಾನನ ೧೨೦ನೇ ಜಯಂತಿಯನ್ನು ಆಚರಿಸುವ ಸಂದರ್ಭದಲ್ಲಿ ಆತನ ಇಡೀ ಬರಹಗಳನ್ನು ಹಲವಾರು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಆಮೂಲಕ ಆ ಬರಹಗಾರರನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ದೃಷ್ಟಿ ಈ ವಿಚಾರದಲ್ಲಿದೆ. ಆದರೆ ಕನ್ನಡದಲ್ಲಿ ಮುದ್ದಣ ಕವಿಯು ಹೊಸ ಪೀಳಿಗೆಯ ಎಷ್ಟು ಜನರಿಗೆ ತಿಳಿದಿದೆ. ನವೋದಯ ಕಾಲಘಟ್ಟ ಇರಬಹುದು ಅಥವಾ ಅದರ ಹಿಂದಿನ ತಲೆಮಾರಿನ ಬರಹಗಾರರು ಅವರ ಸಾಹಿತ್ಯ ಕೃತಿಗಳ ಪರಿಚಯ ಇಂದೂ ಹೆಚ್ಚಿನ ಕನ್ನಡಿಗರಿಗೆ ಇಲ್ಲವಾಗಿದೆ. ಸಾಹಿತ್ಯ, ಕಲೆ, ಸಂಸ್ಕೃತಿಯ ಉಳಿವಿಗಾಗಿ ಕಾಣಿಕೆ ಕೊಟ್ಟಂತಹ ಮಹಾನ್ ಬರಹಗಾರರನ್ನು, ಕಲಾವಿದರನ್ನು ಸ್ಮಾರಕಗೊಳಿಸುವ ಅವರನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯವಾಗಬೇಕು. ಅವರ ಕುಟುಂಬಗಳಿಗೆ ಆರ್ಥಿಕ ಸಹಾಯ ನೀಡಲು ಸಹಾಯ ನಿಧಿ ಸ್ಥಾಪಿಸಬೇಕೆಂದು ಆ ಮೂಲಕ ನಾಡಿಗೆ ಸೇವೆ ಸಲ್ಲಿಸಿದ ಕುಟುಂಬದವರ ಒಳಿತನ್ನು ಸಮಾಜವು ಮಾಡಬೇಕೆಂದು ತಿಳಿಸುತ್ತಾರೆ.

ಹೀಗೆ ಸತ್ತವರಿಗೊಂದು ಸ್ಮಾರಕ ಅವರ ಗ್ರಂಥಗಳ ಪುನರ್ ಮುದ್ರಣದ ಮೂಲಕ ಮುಂದಿನ ತಲೆಮಾರಿಗೆ ಪರಿಚಯಿಸುವ ಕಾರ್ಯ ಮಾಡಬೇಕು ಎಂಬ ನಿಲುವನ್ನು ಪ್ರತಿಪಾದಿಸುತ್ತಾರೆ.ಆದರೆ ನಿರಂಜನರವರ ಕೆಲವೊಂದು ಸೃಜನಶೀಲ ಕೃತಿಗಳು, ವಿಮರ್ಶೆ. ರಾಜಕೀಯ ಬರಹಗಳು ಅವರು ಮರಣಿಸಿದ ನಂತರವು ಪುನರ್ ಮುದ್ರಣಗೊಂಡಿಲ್ಲದೆ ಇರುವುದು ಒಂದು ದುರಂತವೇ ಆಗಿದೆ. ಈ ಮೇಲ್ಕಂಡ ಎಲ್ಲಾ ಅನೇಕ ವಿಚಾರಗಳಲ್ಲಿ ನಿರಂಜನರು ಅ.ನಕೃರವರ ವಿಚಾರಗಳ ಸಾಹಿತ್ಯಕ್ಕಿಂತ ಭಿನ್ನವಾದ ತಮ್ಮ ವಿಚಾರಗಳನ್ನು ಸಾಹಿತ್ಯ ಮತ್ತು ಸಮಾಜಕ್ಕೆ ಸಂಬಂಧಿಸಿದಂತೆ ತಮ್ಮ ವಿಚಾರ ಸಾಹಿತ್ಯದಲ್ಲಿ ಪ್ರತಿಪಾದಿಸುತ್ತಾರೆ. ಅವರ ವಿಚಾರ ಸಾಹಿತ್ಯದಲ್ಲಿ ಸಾಮ್ಯತೆಗಿಂತ ಭಿನ್ನತೆಯನ್ನು ಇಲ್ಲಿ ಕಾಣಬಹುದಾಗಿದೆ.

೫.೨ ಸಾಹಿತ್ಯದಲ್ಲಿ ಶೀಲ-ಅಶ್ಲೀಲ ವಿವೇಚನೆ

ಪ್ರಗತಿಶೀಲ ಕಾಲಘಟ್ಟದ ಸಾಹಿತ್ಯವನ್ನು ಕುರಿತಂತೆ ನವೋದಯ ಕಾಲಘಟ್ಟದ ಪ್ರಮುಖ ಸಾಹಿತಿಗಳು ಅಶ್ಲೀಲ ಸಾಹಿತ್ಯವೆಂದು ಟೀಕಿಸಿದಾಗ ಅದಕ್ಕೆ ಪ್ರತಿಕ್ರಿಯೆಯಾಗಿ ಸಾಹಿತ್ಯದಲ್ಲಿ ಯಾವುದೇ ರೀತಿಯ ಶೀಲ-ಅಶ್ಲೀಲ ಎಂದು ವಿಂಗಡಿಸುವುದಲ್ಲ ಎಂಬುದಕ್ಕೆ ಅ.ನ.ಕೃ ಉತ್ತರ ರೂಪವಾಗಿ 'ಸಾಹಿತ್ಯ ಮತ್ತು ಕಾಮ ಪ್ರಚೋದನೆ' ಕೃತಿಯಲ್ಲಿ ತಮ್ಮದೇಯಾದ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ. "ಸಾಹಿತ್ಯದಲ್ಲಿ ಶೀಲಾಶ್ಲೀಲದ ವಿವೇಚನೆ ದಾರ್ಶನಿಕ ಮಟ್ಟದಲ್ಲಿ ಅವ್ಯಾಹತವಾಗಿ ನಡೆಯುತ್ತಲೇ ಬಂದಿದೆ. ಹೀಗಿರುವಾಗ ಯಾವೊಂದು ಸಾಮಾಜಿಕ- ಮಾನವಿಕ ಸಂಸ್ಕಾರವು ಇಲ್ಲದೇ ಅಶ್ಲೀಲವನ್ನು ಪ್ರತ್ಯಕ್ಷವಾಗಿ ಕೀಳು ಅಭಿರುಚಿಯ ಪೂರೈಕೆಗೆ ಬಳಸಿದಾಗ ಜಾಗತಿಕ ಸಮಾಜ ಅದನ್ನೆಂತು ಸಹಿಸಲು ಸಾಧ್ಯ? ಇದರಲ್ಲಿ ಜಿಜ್ಞಾಸೆ ಮಾಡುವಂತಹ ವಿಚಾರ ತಾನೇ ಏನು? ಕಣ್ಣಿನ ಮಟ್ಟಕ್ಕೆ ಕಸವೆಂದು ಕಾಣುವುದನ್ನು ರಸವಿರಬಹುದೆನೋ ಎಂಬ ಅನುಮಾನದಿಂದ ತರ್ಕಿಸುವ ಪ್ರಶ್ನೆಯೂ ಏಳುವುದಿಲ್ಲ

ಕಸ ಕಂಡಾಗ ಅದನ್ನು ಗುಡಿಸುವುದೊಂದೇ ಸಾಧುವಾದ ಕರ್ತವ್ಯ"[೮] ಎಂದು ಡಿ. ವಿ. ಕೆ. ಮೂರ್ತಿಯವರು ಅಭಿಪ್ರಾಯಿಸುತ್ತಾರೆ. ಆ ಮೂಲಕ ಸಾಹಿತ್ಯದಲ್ಲಿ ಅಶ್ಲೀಲತೆಯು ಸರಿಯಲ್ಲ ಅದನ್ನು ಸಾಹಿತ್ಯದಿಂದ ಹೊರಹಾಕಬೇಕೆಂದು ತಿಳಿಸುತ್ತಾರೆ. ಯಾವುದೇ ಪದ, ಸಂಭಾಷಣೆ, ಘಟನೆ ಯಾವುದೇ ಆಗಿರಲಿ ಅದು ತಾನು ತಾನಾಗಿ ಅಶ್ಲೀಲವೆನಿಸುವುದಿಲ್ಲ. ಲೇಖಕನ ಮನೋಧರ್ಮದಿಂದ ಅಶ್ಲೀಲ ಅಲ್ಲವೇ, ಹೌದು ಎಂದು ನಿರ್ಧಾರವಾಗುತ್ತದೆ ಎಂದು ತಿಳಿಸುತ್ತಾರೆ.

ಅ.ನ.ಕೃ ರವರು ಸಾಹಿತ್ಯ ಮತ್ತು ಕಾಮಪ್ರಚೋದನೆಯ ಕೃತಿಯಲ್ಲಿ ಶೀಲಾ–ಅಶ್ಲೀಲತೆಗೆ ಸಂಬಂಧಿಸಿದಂತೆ ಸಂಪ್ರದಾಯವಾದಿಗಳು ನೀತಿಯ ಮಾನದಂಡದಿಂದಲೇ ಸಾಹಿತ್ಯವನ್ನು ನೋಡುವುದರಿಂದ ಪ್ರಗತಿಶೀಲ ಕಾಲಘಟ್ಟದ ಸಾಹಿತ್ಯವು ಸಮಾಜದಲ್ಲಿನ ವಾಸ್ತವ ಚಿತ್ರಣಗಳಾದ ವೇಶ್ಯಾ ಸಮಸ್ಯೆ ಮೊದಲಾದವುಗಳನ್ನು ಸಾಹಿತ್ಯದ ಮೂಲಕ ಎಚ್ಚರಗೊಳಿಸುವ, ಸಾಮಾಜಿಕ ಸಮಸ್ಯೆಗಳನ್ನು ವಾಸ್ತವವಾಗಿ ಕಥೆ ಕಾದಂಬರಿಗಳಲ್ಲಿ ನೈಜವಾಗಿ ಚಿತ್ರಿಸುವುದರಿಂದ ಅಶ್ಲೀಲವೆಂದು ಕರೆಯುವುದು ಸರಿಯಲ್ಲ. "ಇದು ಅಶ್ಲೀಲವಲ್ಲ, ಸತ್ಯದ ಬೆಳ್ಳಿಯ ಬೆಳಕಿನ ಮೇಲೆ ವಿಕೃತಿಯ ಮುಸುಕನ್ನು ಹಾಕುವುದು ಅಶ್ಲೀಲ, ಸೂಳೆಯ ಸಂಕಷ್ಟಗಳನ್ನು ವಿವರಿಸುವುದು ಅಶ್ಲೀಲವಲ್ಲ, ಉದರಂಭರಣಕ್ಕೆ ಹೆಣ್ಣು ಮಕ್ಕಳನ್ನು ಸೂಳೆಗಾರಿಕೆಗೆ ದೂಡುವ ಸಮಾಜದ ನಡೆನುಡಿ ಅಶ್ಲೀಲ"[೯] ಎಂದು ಅ.ನ.ಕೃ ಅಭಿಪ್ರಾಯಿಸುತ್ತಾರೆ.

ಆ ಮೂಲಕ ಅ.ನ.ಕೃ ರವರು ನಾಡು, ನುಡಿಗಳು ಆದರ್ಶವನ್ನು, ನೈತಿಕತೆಯನ್ನು, ನೀತಿಯಲ್ಲಿ ಸಾಹಿತ್ಯದಲ್ಲಿ ರಚಿಸಿಕೊಂಡು ಸಮಾಜದ ವಾಸ್ತವ ಚಿತ್ರಣವನ್ನು ಸೃಷ್ಟಿಸದೇ ಅದಕ್ಕೆ ಮುಸುಕು ಹಾಕುವುದು ಸರಿಯಲ್ಲ. ಹೊಟ್ಟೆಗಾಗಿ ಹೆಣು ್ಣಮಕ್ಕಳನ್ನು ವೇಶ್ಯೆಗಳ ವೃತ್ತಿಗೆ ದೂಡುವ ಸಮಾಜದ ರೀತಿ ನೀತಿಗಳು ಅಶ್ಲೀಲವೆಂದು ತಿಳಿಸುತ್ತಾರೆ.

ಕಾಮ ಎಂಬ ಪದದ ಅರ್ಥಕ್ಕೆ ನಿಘಂಟಿನಲ್ಲಿ ಆಸೆ, ಬಯಕೆ, ಕಾಮದೇವ, ಪ್ರೀತಿ, ಮೋಹ ಮೊದಲಾಗಿ ಅ. ನ. ಕೃ. ಅರ್ಥೈಸುತ್ತಾರೆ. ಇಂದೂ ಕಾಮಕ್ಕೆ ಅಶ್ಲೀಲವೆಂದು ಅಪವ್ಯಾಖ್ಯೆಯನ್ನು ಮಾಡಲಾಗಿದೆ. ಆದರೆ ನಮ್ಮ ಪ್ರಾಚೀನರು ಅಶ್ಲೀಲತೆಯ ದೃಷ್ಟಿಯಿಂದ ಕಾಮವನ್ನು ನೋಡಿಲ್ಲ. ಹಾಗೆ ಏನಾದರೂ ಅಶ್ಲೀಲತೆಯ ದೃಷ್ಟಿಯಿಂದ ನೋಡಿದರೆ ಪುರುಷಾರ್ಥಗಳಲ್ಲಿ (ಧರ್ಮ, ಅರ್ಥ, ಕಾಮ, ಮೋಕ್ಷ) ಕಾಮವನ್ನು ಏಕೆ ಸೇರಿಸುತ್ತಿದ್ದರು ಎಂದು ಪ್ರಶ್ನಿಸುತ್ತಾರೆ. ಪ್ರಗತಿಶೀಲ ಸಾಹಿತ್ಯದ ದೃಷ್ಟಿಯನ್ನು ವಿಮರ್ಶಕರು ಇಂದ್ರಿಯಾಸಕ್ತಿಗಳನ್ನು ಕೆರಳಿಸುವುದರಿಂದ ಕಾಮ ಪ್ರಚೋದನೆಯಾಗಿ, ಅಶ್ಲೀಲವಾಗಿ ಗುರುತಿಸುವ ಧೋರಣೆಯನ್ನು ಅ.ನ.ಕೃ ಖಂಡಿಸುತ್ತಾರೆ. "ಇಂದ್ರಿಯಾಸಕ್ತಿಯನ್ನು ಕೆರಳಿಸುವುದಕ್ಕೆ ಸಾಹಿತ್ಯವೇ ಬೇಕೇನು? ಕಾಫಿ, ಚಹಾ, ಸಿಗರೇಟು, ಮಾದಕ ದ್ರವ್ಯಗಳು, ಸುಗಂಧ, ರಸನುಡಿ, ಬಣ್ಣ, ಹಾಡು, ನಿಸರ್ಗ ಸೌಂದರ್ಯ, ಸೃಷ್ಟಿಯಾದ ಭೋಜನಗಳು ಇಂದ್ರಿಯಗಳನ್ನು ಕೆರಳಿಸಬಲ್ಲವು. ಕೊಳೆತ ಕೋಳಿಯ ಮೊಟ್ಟೆ, ತಂಗಳೂಟ, ದುರ್ಗಂಧ, ಪೆಟ್ರೋಲ್ ವಾಸನೆ ಇವೂ ಇಂದ್ರಿಯಗಳನ್ನು ಕೆರಳಿಸಬಲ್ಲವೆ?"[೧೦] ಎಂದು ಅ.ನ.ಕೃ ಅಭಿಪ್ರಾಯಿಸುತ್ತಾರೆ.

ಇಂದ್ರಿಯಾಸಕ್ತಿಗಳನ್ನು ನಮ್ಮ ಸುತ್ತಮುತ್ತಲಿನ ಅನೇಕ ವಿಚಾರಗಳು, ವಿಷಯಗಳು ಕೆರಳಿಸುತ್ತವೆ. ಆದರೆ ಪ್ರಗತಿಶೀಲ ಸಾಹಿತ್ಯ ಮಾತ್ರ ಆ ಧೋರಣೆಯನ್ನು ಹೊಂದಿದೆ ಎಂಬುದನ್ನು ಅಲ್ಲಗಳೆಯುತ್ತಾರೆ. ಆ ಮೂಲಕ ಪ್ರಗತಿಶೀಲ ಸಾಹಿತ್ಯವನ್ನು ಅಶ್ಲೀಲವೆಂದು ತಿಳಿಸುವ ಪ್ರಯತ್ನ ಮಾಡಿದವರಿಗೆ ತಮ್ಮದೆಯಾದ ರೀತಿಯಲ್ಲಿ ಉತ್ತರಿಸುತ್ತಾರೆ.

ಕಾಮದ ಪ್ರಶ್ನೆ ಹೇಗೆ ಇದೆಯೋ, ಅದೇ ರೀತಿ ಶೀಲ-ಅಶ್ಲೀಲದ ಪ್ರಶ್ನೆಯನ್ನು ತೆಗೆದುಕೊಂಡು ಇದನ್ನು ಅಳತೆ ಮಾಡುವ ಮಾನದಂಡ ಯಾವುದೆಂದು ಪ್ರಶ್ನಿಸುತ್ತಾರೆ "ಒಂದು ಕಾಲದಲ್ಲಿ ಬಾಲ್ಯವಿವಾಹ ಶೀಲ, ಇಂದದು ಅಶ್ಲೀಲ; ಒಂದು ಕಾಲದಲ್ಲಿ ವಿಧವಾ ವಿವಾಹ ಅಶ್ಲೀಲ, ಇಂದದು ಶೀಲ; ಸುರಪಾನ ಮುಸಲ್ಮಾನರಿಗೆ ಅಶ್ಲೀಲ, ಕ್ರೈಸ್ತರಿಗೆ ಶೀಲ; ದಾಡಿ ಬಿಡುವುದು ಮುಸಲ್ಮಾನರಿಗೆ ಶೀಲ, ಹಿಂದುಗಳಿಗೆ ಅಶ್ಲೀಲ; ಸಾಕಾರ ಪೂಜೆ ಹಿಂದುಗಳಿಗೆ ಶೀಲ, ಮುಸ್ಲಿಮರಿಗೆ, ಜೈನರಿಗೆ, ಬೌದ್ಧರಿಗೆ ಅಶ್ಲೀಲ; ಹೆಣ ಸುಡುವುದು, ಹಿಂದುಗಳಲ್ಲಿ ಕೆಲವರಿಗೆ ಶೀಲ, ಹಿಂದುಗಳಲ್ಲೇ ಕೆಲವರಿಗೆ, ಮುಸ್ಲಿಮರಿಗೆ, ಕ್ರೈಸ್ತರಿಗೆ ಅಶ್ಲೀಲ; ಮಾಂಸಾಹಾರ ಕೆಲವು ಹಿಂದುಗಳಿಗೆ ಶೀಲ, ಕೆಲವು ಹಿಂದುಗಳಿಗೆ ಅಶ್ಲೀಲ"[೧೧] ಎಂದು ಅಭಿಪ್ರಾಯಿಸುತ್ತಾರೆ. ಶೀಲ-ಅಶ್ಲೀಲತೆ ಎಂಬುದು ನಾವು ನೋಡುವ ದೃಷ್ಟಿಕೋನದಲ್ಲಿ ಇರುತ್ತದೆ. ಒಂದು ಕಾಲಘಟ್ಟದಲ್ಲಿ ಇದ್ದ ಶೀಲವು ಮತ್ತೊಂದು ಕಾಲಘಟ್ಟಕ್ಕೆ ಅಶ್ಲೀಲವಾಗಬಹುದು. ಅಶ್ಲೀಲವಾಗಿರುವುದು ಶೀಲವಾಗಬಹುದು ಅದನ್ನು ನಿರ್ಧರಿಸುವುದು ಹೇಗೆ? ಹಾಗೆಯೇ ಸಾಹಿತ್ಯದಲ್ಲಿಯ ಶೀಲಾ ಅಶ್ಲೀಲತೆಯನ್ನು ಗುರುತಿಸುವುದು ಸರಿಯಲ್ಲವೆಂದು ವಿವರಿಸುತ್ತಾರೆ.

ಪ್ರಗತಿಶೀಲ ಕಾಲಘಟ್ಟದ ಕಥೆ ಕಾದಂಬರಿಗಳನ್ನು ಮಡಿವಂತ ಸಾಹಿತಿಗಳು ಅಶ್ಲೀಲವೆಂದು ಕಲ್ಪನೆ ನೀಡಿದರು. ಮಡಿವಂತ ಲೇಖಕರಲ್ಲಿನ ಕೃತಿಗಳಲ್ಲಿಯು ಅಶ್ಲೀಲವೆನಿಸಬಹುದಾದ ಭಾಗಗಳು ಇರುತ್ತವೆ. "ಎಷ್ಟೆ ಮಡಿವಂತನಾಗಿದ್ದರೂ ಅವನು ಸಾಹಿತಿಯಾದರೆ, ಕಲಾವಿದನಾದರೆ ಜೀವನದ ಮಹೋನ್ನತ ವಿಷಯವಾದ ಲೈಂಗಿಕ ಪ್ರವೃತ್ತಿ ಮತ್ತು ಆಚಾರವನ್ನು ಪ್ರಸ್ತಾಪಿಸದೆ ಗತ್ಯಂತರವೇ ಇಲ್ಲ"[೧೨] ಎಂದು ಅ.ನ.ಕೃ ಅಭಿಪ್ರಾಯಿಸುತ್ತಾರೆ. ಮಾನವನ ಮೂಲಭೂತ ಅವಶ್ಯಕತೆಗಳಾದ ಆಹಾರ, ನಿದ್ರೆ, ಎಷ್ಟು ಮುಖ್ಯವೋ, ಕಾಮವು ಅಷ್ಟೆ ಮುಖ್ಯವಾದುದು, ಹಾಗಾಗಿ ಲೈಂಗಿಕ ಪ್ರವೃತ್ತಿಯನ್ನು ಸಾಹಿತ್ಯದಲ್ಲಿ ಸಾಹಿತಿಯು ಚಿತ್ರಿಸಬೇಕಾಗುತ್ತದೆ.

ಕಲೆ ಮತ್ತು ನೀತಿಯನ್ನು ಎಂದಿಗೂ ಒಟ್ಟಾಗಿ ಸೇರಿಸಬಾರದು. ನೀತಿಯ ಮಾನದಂಡದಿಂದ ಕಲೆಯನ್ನು ಅಳೆಯಲುಬಾರದು. ಕಾಮ ಪ್ರಚೋದನೆ ಎಂಬ ಶಬ್ದವು ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದೆ ಹೊರತು ಸಾಹಿತ್ಯ ಮತ್ತು ಕಲಾ ಪ್ರಪಂಚಕ್ಕೆ ಸೇರಿದಲ್ಲ. ಹಾಗೆಯೇ ಅಶ್ಲೀಲ ಎಂಬ ಶಬ್ದವು ನೀತಿ ಶಾಸ್ತ್ರಕ್ಕೆ ಸೇರಿದೆ ಅದನ್ನು ಸಾಹಿತ್ಯಕ್ಕೆ ಸೇರಿಸುವುದಲ್ಲ. ಹೀಗೆ ಒಂದು ಶಾಸ್ತ್ರಕ್ಕೆ ಸೇರಿದ ಶಬ್ದಗಳನ್ನು ಇನ್ನೊಂದು ಶಾಸ್ತ್ರಕ್ಕೆ ಸೇರಿಸಿದರೆ ಅದು ಅಪಾರ್ಥಕ್ಕೆ ಎಡೆಮಾಡಿಕೊಡುತ್ತದೆ ಎಂದು ವಿಶ್ಲೇಷಿಸುತ್ತಾರೆ.

ಪ್ರಗತಿಶೀಲ ಕಾಲಘಟ್ಟದ ಮತ್ತೊಬ್ಬ ಬರಹಗಾರರಾದ ತಿ.ತಾ. ಶರ್ಮರು ಕೂಡ 'ಅಶ್ಲೀಲ ಸಾಹಿತ್ಯ' ಎಂಬ ಪ್ರಬಂಧದಲ್ಲಿ ಕಲೆಗೂ ನೀತಿಗೂ ಸಂಬಂಧವಿಲ್ಲ ಕಲೆಯು ನೀತಿಯನ್ನು ಪ್ರಚಾರ ಮಾಡುವ ಸಾಧನವಲ್ಲ, ಏಕೆಂದರೆ ಗ್ರೀಕ್‌ನ ಕೆಲವು ಪ್ರತಿಮೆಗಳು ನಗ್ನವಾಗಿವೆ. ಸಾಹಿತ್ಯದಲ್ಲಿಯೂ ಕೂಡ ಹಾಗೆಯೇ ಕೆಲವೊಮ್ಮೆ ಸಮಾಜದಲ್ಲಿನ ವಿಚಾರಗಳನ್ನು ನಗ್ನವಾಗಿ ಚಿತ್ರಿಸಬೇಕಾಗುತ್ತದೆ. ನವೋದಯ ಕಾಲಘಟ್ಟದ ಸಾಹಿತಿಗಳು ಸಾಹಿತ್ಯವು ನೀತಿಯನ್ನು ಬೋಧಿಸಬೇಕು ಎಂಬ ಮನಃಸ್ಥಿತಿಯನ್ನು ಹೊಂದಿರುವವರು. ಆದರೆ ಸಾಹಿತ್ಯ ನೀತಿಯನ್ನು ಬೋಧಿಸುವುದಲ್ಲ ಅದು ವಾಸ್ತವ ಸಮಾಜದ ಪ್ರತಿಬಿಂಬವಾಗಿದೆ. ಅದರಿಂದ ವಾಸ್ತವ ಸಮಾಜ ಹೇಗೆ ಇರುತ್ತದೆಯೋ ಅದೇ ರೀತಿಯಲ್ಲಿ ಸಾಹಿತ್ಯ ಕೃತಿಗಳು ಚಿತ್ರಿಸಬೇಕಾಗುತ್ತವೆ. ವಾಸ್ತವ ಚಿತ್ರಣ ನೀಡದೇ ನೀತಿಯನ್ನು ಸಾರುವ ದೃಷ್ಟಿಯಿಂದ ಸಾಹಿತ್ಯ ಕೃತಿಯನ್ನು ಚಿತ್ರಿಸಬಾರದು.

ಶೀಲಾ ಅಶ್ಲೀಲತೆಯ ವಿಚಾರವಾಗಿ ಸಾಹಿತಿಯಾಗಲೀ, ವಿಮರ್ಶಕವಾಗಲೀ ನಿರ್ಧರಿಸುವುದಲ್ಲ ಅದು ಕನ್ನಡ ಓದುಗನಿಗೆ ಬಿಟ್ಟ ವಿಚಾರ. ತನಗೆ ಬೇಕಾದುದನ್ನು ಆತ ಸ್ವೀಕರಿಸುತ್ತಾನೆ. ಬೇಡವಾದುದನ್ನು ತಿರಸ್ಕರಿಸುತ್ತಾನೆ. ಎಂದು ಶೀಲಾ ಅಶ್ಲೀಲತೆಯ ವಿಚಾರವಾಗಿ ಅ.ನ.ಕೃ ಸಾಹಿತ್ಯ ಮತ್ತು ಕಾಮ ಪ್ರಚೋದನೆ ಕೃತಿಯಲ್ಲಿ ಚರ್ಚಿಸುತ್ತಾರೆ.

ಅ.ನ.ಕೃರವರು ತಮ್ಮ 'ಸಾಹಿತ್ಯ ಮತ್ತು ಕಾಮ ಪ್ರಚೋದನೆ'ಯ ಕೃತಿಯ ಹಿನ್ನಲೆಯಲ್ಲಿ ಸಾಹಿತ್ಯದಲ್ಲಿ ಶೀಲ-ಅಶ್ಲೀಲತೆಯ ವಿಚಾರಗಳನ್ನು ಚರ್ಚಿಸಿದರೆ, ಅದಕ್ಕೆ ಭಿನ್ನವಾದ ರೀತಿಯಲ್ಲಿ ನಿರಂಜನರು ಕಲಾವಿದನ ಕೃತಿಗಳ ಹಿನ್ನಲೆಯಲ್ಲಿ ಶೀಲಾ – ಅಶ್ಲೀಲತೆಯನ್ನು, ಸಾಹಿತ್ಯ ಮತ್ತು ಕಲಾ ಕೃತಿ ಕಾಮ ಪ್ರಚೋದನೆಯನ್ನುಂಟು ಮಾಡುತ್ತದೆ ಎಂಬ ವಿಚಾರವನ್ನು 'ಕಾಲಕ್ಷೇಪ' ಎಂಬ ಕೃತಿಯ 'ಅಶ್ಲೀಲತೆಯ ಆರೋಪ' ಎಂಬ ಲೇಖನದಲ್ಲಿ ಮೌಲ್ಯಗಳಲ್ಲಿ ಯಾವುದು ಸ್ಥಿರಮೌಲ್ಯಗಳೆಂಬುದೇ ಇಲ್ಲ. ಒಂದು ಕಾಲದಲ್ಲಿ ಇದ್ದಂತಹ ಅಸಭ್ಯವೆನ್ನಿಸಿದ್ದು ಇನ್ನೊಂದು ಕಾಲದಲ್ಲಿ ಅದು ಸಭ್ಯವಾಗುತ್ತದೆ. ಒಂದು ಕಾಲದಲ್ಲಿ ಅಕ್ಷಮ್ಯವೆನ್ನಿಸಿದ್ದು ಇನ್ನೊಂದು ಕಾಲಘಟ್ಟದಲ್ಲಿ ಕ್ಷಮ್ಯವಾಗುತ್ತದೆ. ಹೀಗೆ ಕ್ಷಮ್ಯ ಮತ್ತು ಸಭ್ಯ ಎಂದು ನಿರ್ಧರಿಸುವವರು ಯಾರು? ಎಂದು ಪ್ರಶ್ನಿಸುತ್ತಾರೆ.

ಮುಂಬಯಿ ಪೊಲೀಸರು ಕಲಾವಿದನಾದ ಚಿತ್ರಕಾರ ಅಕ್ಬರ್ ಪದ್ಮೂಮಿ ಮೇಲೆ ಆತ ಎರಡು ಅಶ್ಲೀಲ ಕಲಾಕೃತಿಗಳನ್ನು ರಚಿಸಿದನೆಂದು ಆರೋಪಿಸಿ ಅವನನ್ನು ನ್ಯಾಯಾಲಯಕ್ಕೆ ತಂದು ನಿಲ್ಲಿಸಿದನ್ನು ಉದಾಹರಣೆಯಾಗಿ ನೀಡುವುದರ ಮೂಲಕ ಯಾವುದು ಅಶ್ಲೀಲವೆಂದು ಪ್ರಶ್ನಿಸುತ್ತಾರೆ. ಕೆಲವರು ನಾವು ಬರೆಯುವುದು ಅಶ್ಲೀಲವಲ್ಲ. ಅಶ್ಲೀಲತೆಯಿರುವುದು ನೋಡುವವರ ದೃಷ್ಟಿಯಲ್ಲಿ, ಓದುವವರ ದೃಷ್ಟಿಯಲ್ಲಿ ಎಂದು ಹೇಳುವುದರಲ್ಲಿ ಸ್ವಲ್ಪಮಟ್ಟಿಗೆ ಸತ್ಯವಿದೆ. ಆದರೆ ಇದನ್ನು ನಿರಂಜನರು ಸಂಪೂರ್ಣವಾಗಿ ಒಪ್ಪದೆ, ಬರೆಯುವ ಚಿತ್ರಿಸುವ ಕಲಾಕೃತಿ ಅಶ್ಲೀಲ ಹೌದೆ, ಅಲ್ಲವೇ ಎಂಬುದು ಬರಹಗಾರನಿಗೂ ಚಿತ್ರಕಾರನಿಗೂ ಇರಬೇಕಾದ ದೃಷ್ಟಿಯಾಗಿದೆ ಎಂದು ಭಿನ್ನ ದೃಷ್ಟಿಯಲ್ಲಿ ಉತ್ತರಿಸುತ್ತಾರೆ. ಹಾಗೆಯೇ ಅಶ್ಲೀಲವೆಂದು ಹೇಳಿ ಸಾಹಿತ್ಯ ಅಥವಾ ಕಲೆಯನ್ನು ಸರಕಾರ ನಿಯಂತ್ರಣವೇರುವುದನ್ನು ನಿರಂಜನರು ಒಪ್ಪುವುದಿಲ್ಲ, ಅದು ಜನತೆಗೆ ಬಿಟ್ಟಿದ್ದು ಜನತೆ ನಿರ್ಧರಿಸಬೇಕೆಂದು, ಯಾವುದೇ ರೀತಿಯ ನಿಯಂತ್ರಣವಿಲ್ಲದೆ ಕಲಾವಿದ ತನ್ನ ಕೃತಿಯನ್ನು ರಚಿಸಬೇಕು ಮತ್ತು ವಾತಾವರಣವೇ ಅವನ ಮೇಲಿನ ನಿಯಂತ್ರಣವಾಗಿ ಜನಹಿತವನ್ನು ಗಮನದಲ್ಲಿಟ್ಟುಕೊಂಡು ಆ ಕೃತಿ ನಿರ್ಮಿತವಾಗಬೇಕು. ಕವಿ ಮತ್ತು ಕಲಾವಿದ ತನಗೆ ತಾನೇ ಜನತೆ, ಸಮಾಜ ದೃಷ್ಟಿಯಲ್ಲಿ ಯಾವುದು ಸರಿ, ಯಾವುದು ತಪ್ಪು ಯಾವುದು ಶೀಲ-ಯಾವುದು ಅಶ್ಲೀಲ ಎಂದು ನಿರ್ಧರಿಸಿಕೊಳ್ಳುವಂತಾಗಬೇಕು ಎಂದು ವಿಶ್ಲೇಷಿಸುತ್ತಾರೆ.

'ಇದು ಕಾಮ ಪ್ರಚೋದಕವಲ್ಲ' ಎಂಬ ಲೇಖನದಲ್ಲಿ ಅಶ್ಲೀಲದ ಆರೋಪದಲ್ಲಿ ಕಲಾವಿದ, ಚಿತ್ರಕಾರ ಅಕ್ಬರ್ ಪದ್ಮೂಮಿ ನಿರ್ದೋಷಿಯೆಂದು ನ್ಯಾಯಾಧೀಶರು ತೀರ್ಪು ಕೊಟ್ಟರು. ನ್ಯಾಯಾಧೀಶರ ತೀರ್ಪು "ಕಲಾಪ್ರತಿಭೆಯ ಸೃಷ್ಟಿಯಾದ ಒಂದು ಚಿತ್ರ, ಬೇರೆ ಹಿನ್ನಲೆಯಲ್ಲಿ ಅಶ್ಲೀಲವೆಂದು ಕೂಡ ಪರಿಗಣಿಸಲ್ಪಡಬಹುದಾದ ಹಾವ ಭಾವಗಳನ್ನು ತೋರಿದ ಮಾತ್ರಕ್ಕೆ ಅಶ್ಲೀಲವಾಗುವುದಿಲ್ಲ ಕಲೆಯ ದೃಷ್ಟಿಯಿಂದ ಆ ಚಿತ್ರ ತಾನು ರೂಪಿಸುವ ವಸ್ತುವಿನ ಬಗೆಗೆ ಪ್ರಾಮಾಣಿಕತೆ ತೋರಿಸುತ್ತದೆಯೋ ಹೊರತು ಬೇರೇನು ಅಲ್ಲ"[೧೩] ಎಂದು ಹೇಳಿದ್ದನ್ನು ನಿರಂಜನರು ದಾಖಲಿಸಿದ್ದಾರೆ. ಮುಂದುವರಿದು ಹಾವಭಾವಗಳನ್ನು ಚಿತ್ರಿಸುವ ತೀರ ಕಟ್ಟು ನಿಟ್ಟಾಗಿ ಕಲಾವಿದನು

ವರ್ತಿಸಿಲ್ಲ. ಅಲ್ಲದೆ ಪ್ರಣಯಗಳನ್ನು ಚಿತ್ರಿಸುವಾಗ ಅಣ್ಣ ತಂಗಿಯರ ಹಾವಭಾವಗಳನ್ನು ಚಿತ್ರಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು, ಈ ಚಿತ್ರ ಪ್ರದರ್ಶನವನ್ನು ಗಮನಿಸಿದಾಗ ಈ ಕಲಾಕೃತಿಯ ನೋಡಿದವರ ಮಟ್ಟ, ಭಾವ, ವಿನ್ಯಾಸ ಇವೆಲ್ಲವನ್ನು ಗಮನಿಸಿ ಅದು ಅಶ್ಲೀಲವಲ್ಲವೆಂದು ನ್ಯಾಯಾಧೀಶರು ಹೇಳಿದ್ದಾರೆ ಎಂದು ನಿರಂಜನರು ವಿವರಿಸುತ್ತಾರೆ.

ನಿರಂಜನರು ಬಹಳ ಮುಖ್ಯವಾಗಿ ಮನುಷ್ಯನಲ್ಲಿ ಸ್ವಾಭಾವಿಕವಾಗಿ ದೌರ್ಬಲ್ಯಗಳಿವೆ. ಆ ದೌರ್ಬಲ್ಯಗಳನ್ನು ಕಲೆಯ ಮೂಲಕ ದುರುಪಯೋಗ ಪಡಿಸಿಕೊಳ್ಳುವುದು ಅಕ್ಷಮ್ಯ ಅಪರಾಧವೆಂದು, ನೋಡುಗರಲ್ಲಿ, ಓದುವವರಲ್ಲಿ ವಿಕೃತ ಕಾಮವನ್ನು ಕೆರಳಿಸುವುದನ್ನೇ ಗುರಿಯಾಗಿಟ್ಟುಕೊಂಡು ಬರೆದ ಕೃತಿಯೂ ಅಪರಾಧವಾಗುತ್ತದೆ ಅದು ಕಲಾ ಸೃಷ್ಟಿಯಾಗದು ಅದು ಹೊಲಸು, ಹೊಲಸಿಗಾಗಿ ನಿರ್ಮಾಣವಾದ ಸಾಹಿತ್ಯ ಅಥವಾ ಕೃತಿಯೊಂದು ಆಗುತ್ತದೆ. ಕಲೆಯೆಂಬುದು ಎಂದಿಗೂ ಹೊಲಸನ್ನು ಸಮಾಜದಲ್ಲಿ ನಿರ್ಮಾಣ ಮಾಡಲು ಇಚ್ಚಿಸುವುದಿಲ್ಲ, ಕಲೆಯು ಜೀವನದ ಪ್ರತಿಬಿಂಬವಾಗಿದೆ. ಅದರಿಂದ ಜನತೆಯನ್ನು ಎಚ್ಚರಿಸುವ ಸಾಧನವಾಗಿ ನಿರಂಜನರು ನೋಡುತ್ತಾರೆ ಹೊರತು ಶೀಲ ಅಶ್ಲೀಲತೆಯಿಂದಲ್ಲ.

ಕೆಲವು ಚಲನಚಿತ್ರಗಳಲ್ಲಿ, ಲೈಂಗಿಕ ಜ್ಞಾನ ಹೆಸರಿನಲ್ಲಿ, ವರ್ಣ ರಂಜಿತ ಪತ್ರಿಕೆಗಳಲ್ಲಿ, ವಿದೇಶಿ ಸಿನಿಮಾದ ಪೋಸ್ಟರ್‌ಗಳನ್ನು ಗೋಡೆಯ ಮೇಲೆ ಅಂಟಿಸುವುದು, ಇವೆಲ್ಲವು ಹೊಲಸಿನ ನಿರ್ಮಾಣವಾಗುತ್ತಿರುವುದನ್ನು ನಮ್ಮ ನ್ಯಾಯ ರಕ್ಷಕರು ಗಮನಿಸಲ್ಲವೆಂದು ಇದರಿಂದ ಸಮಾಜವನ್ನು ಎಚ್ಚರಿಸುವ ಕೆಲಸವಾಗಬೇಕು ಇಲ್ಲವಾದರೆ ಯುವ ಸಮೂಹ ಕೆಟ್ಟದಾರಿಯನ್ನು ಹಿಡಿಯುತ್ತಾರೆ. ಮೇಲಿನ ಯಾವುದೇ ವಿಚಾರಗಳನ್ನು ಗಮನಿಸಿದ್ದರು ಸರಕಾರವು ಸಾಹಿತಿ ಮತ್ತು ಕಲಾವಿದನನ್ನು ನಿಯಂತ್ರಿಸುವ ಕೆಲಸ ಮಾಡುತ್ತದೆ. ಕಾಮಪ್ರಚೋದಕವಲ್ಲದಿದ್ದರು ಅದನ್ನು ಕಾಮ ಪ್ರಚೋದಕದ ಹೆಸರಿನಿಂದ ನಿಯಂತ್ರಿಸಲು ಬಯಸುತ್ತಾರೆ. ಅ.ನ.ಕೃರವರು ಪ್ರಗತಿಶೀಲ ಕಾಲಘಟ್ಟದ ಸಾಹಿತ್ಯದ ವಿಚಾರಗಳಿಗೆ ಬಂದಂತಹ ಟೀಕೆ, ವಿಮರ್ಶೆ ಮತ್ತು ಅವರ ಕಾದಂಬರಿಗಳಾದ ನಗ್ನ ಸತ್ಯಾ, ನಟಸಾರ್ವಭೌಮ ಮೊದಲಾದವುಗಳಿಗೆ ಬಂದ ವಿಮರ್ಶೆಯಲ್ಲಿ ಇದೊಂದು ಕಾಮಪ್ರಚೋದಕ ಸಾಹಿತ್ಯ, ಅಶ್ಲೀಲವೆಂದು ಜರಿದ ಉತ್ತರವಾಗಿ ಸಾಹಿತ್ಯ ಮತ್ತು ಕಾಮಪ್ರಚೋದನೆ ಕೃತಿಯಲ್ಲಿ ಯಾವುದು ಶೀಲ, ಯಾವುದು ಅಶ್ಲೀಲ ಎಂಬುದಕ್ಕೆ ಪ್ರತಿಕ್ರಿಯಿಸುತ್ತಾರೆ. ಅದಕ್ಕೆ ನಿರಂಜನರವರು ಭಿನ್ನವಾಗಿ ತಮ್ಮ ವಿಚಾರವನ್ನು ಸಾಹಿತ್ಯರಲ್ಲಿ ಶೀಲಾ– ಅಶ್ಲೀಲತೆಗೆ ಸಂಬಂಧಿಸಿದಂತೆ ಸರಕಾರವೇ ಅಶ್ಲೀಲ, ಕಾಮಪ್ರಚೋದಕವೆಂದು ಕೃತಿಯನ್ನು ಕಲೆಯನ್ನು ಮುಟ್ಟಗೋಲು ಹಾಕುವುದಲ್ಲ, ಅದರ ಬದಲು ಕಲೆ ಮತ್ತು ಸಾಂಸ್ಕೃತಿಕ ವಿಚಾರಗಳಿಗೆ ಹಿರಿಯರಾದವರನ್ನು ಪ್ರಾತಿನಿಧಿಕವಾಗಿ ನೇಮಿಸಿ ಇಂಥ ವಿಚಾರಗಳನ್ನು ಇತ್ಯರ್ಥ ಮಾಡಬೇಕೆಂದು ಅದರಿಂದಾಗಿ ಜನತೆಗೆ ಹಿತವಾಗುತ್ತದೆ. ಅದನ್ನು ಹೊರತುಪಡಿಸಿ ಪೊಲೀಸರ, ನ್ಯಾಯಾಧೀಶರ ಕೈಗೆ ಒಪ್ಪಿಸುವುದು ಸರಿಯಲ್ಲವೆಂದು ತಿಳಿಸುತ್ತಾರೆ.

ಅಶ್ಲೀಲ ಸಾಹಿತ್ಯವೆಂಬುದು ಯುವ ಸಮೂಹವನ್ನು ಹದಿಹರೆಯದವರನ್ನು ಹೇಗೆ ತನ್ನ ಕಡೆ ಸೆಳೆದುಕೊಂಡ ಅವುಗಳಿಂದ ಹೊರಬರಲಾರದ ಸ್ಥಿತಿಗೆ ತಲುಪಿಸಿದೆ ಎಂಬುದನ್ನು ನಿರಂಜನರವರು 'ಅಂಕಣ' ಕೃತಿಯಲ್ಲಿ ತಿಳಿಸುತ್ತಾರೆ. ಜರ್ಮನಿಯಲ್ಲಿ ಹದಿಹರೆಯದ ವಿದ್ಯಾರ್ಥಿಗಳಲ್ಲಿ ವಿದ್ಯಾಧಿಕಾರಿಗಳು ವಾಚನಾಭಿರುಚಿಯನ್ನು ತಿಳಿಯಲು ಮುಂದಾದಾಗ ಸಾವಿರಾರುಗಟ್ಟಲೆ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಹತ್ತಿರ ಅಸಹ್ಯ ಕಾಮಪ್ರಚೋದಕ ಪುಸ್ತಕಗಳು ಲಭಿಸಿದವು. ಅದು ಜರ್ಮನಿ.

ಜಪಾನ್, ಜಾವಾ ಯಾವುದೇ ಆಗಲೀ, ಪೂರ್ವ ದೇಶವೋ ಅಥವಾ ಪಶ್ಚಿಮವೋ, ಮುಂದುವರಿದ ಅಥವಾ ಹಿಂದುಳಿದ ದೇಶವಾಗಲೀ ಈ ರೀತಿಯ ಕೆಟ್ಟ ಸಾಹಿತ್ಯವೆಂಬುದು ಯಾವ ತಾರತಮ್ಯವನ್ನು ಮಾಡುವುದಿಲ್ಲವೆಂದು, ಈ ರೀತಿಯ ಪುಸ್ತಕಗಳನ್ನು ಕೆಲವು ಪ್ರಕಾಶಕರು ಮುದ್ರಿಸಿ ಲಾಭಗಳಿಸುವ ಉದ್ದೇಶದಿಂದ ಯುವ ಸಮೂಹವನ್ನು ಕೆಟ್ಟದಾರಿಗೆ ತಳ್ಳುತ್ತಿದ್ದಾರೆ. ಇದೊಂದು ಅಂತರಾಷ್ಟ್ರೀಯ ಕಾಯಿಲೆಯಾಗಿದೆ. ಈ ಕಾಯಿಲೆಗೆ ದೇಶ, ಭಾಷೆ, ಮೊದಲಾದ ಪರಿಮಿತಿ ಎಂಬುದು ಇಲ್ಲ. ಮಕ್ಕಳ ಸಾಹಿತ್ಯ ದಾರಿದ್ರ್ಯವಿರುವ ಜರ್ಮನಿಯಲ್ಲಿ ಹೀಗಿದ್ದರೆ ನಮ್ಮಲ್ಲೇನು ಕಡಿಮೆ ಇಲ್ಲವೆಂದು, ಸಮಾಜ ಹೇಗೆ ಇರುತ್ತದೆಯೋ ಹಾಗೆಯೇ ಸಾಹಿತ್ಯವು ಕೂಡ. ಕೆಟ್ಟ, ಅಸಹ್ಯ, ಕಾಮ ಪ್ರಚೋದಕ ಸಾಹಿತ್ಯದಿಂದ ಹೊರ ಬರುವಂತೆ ಮಕ್ಕಳಿಂದ ಹಿಡಿದು ಹಿರಿಯರ ತನಕವು ಸದಭಿರುಚಿಯನ್ನು ಬೆಳೆಸಬೇಕೆಂದು 'ಅಲ್ಲೂ ಅದೇ ಕಥೆ, ಇಲ್ಲೂ.......' ಎಂಬ ಲೇಖನದಲ್ಲಿ ಚರ್ಚಿಸುತ್ತಾರೆ.

ನಲ್ವತ್ತನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನದ ನಿರ್ಣಯದಲ್ಲಿ ಇತ್ತೀಚೆಗೆ ಅಶ್ಲೀಲ ಸಾಹಿತ್ಯ ಹೆಚ್ಚು ನಿರ್ಮಾಣವಾಗುತ್ತಿದೆ ಅದನ್ನು ತಡೆಗಟ್ಟಲು ಸರಕಾರ ಕ್ರಮಕೈಗೊಳ್ಳಬೇಕು ಎಂಬ ನಿರ್ಣಯ ತೆಗೆದುಕೊಂಡರು. ನಿರಂಜನರವರು ಆ ನಿರ್ಣಯಕ್ಕೆ ಸರಕಾರವೇನೋ ಅಶ್ಲೀಲ ಸಾಹಿತ್ಯ, ನಾಟಕ ಇವುಗಳನ್ನು ನಿಯಂತ್ರಿಸಲು ಕಾನೂನನ್ನು ಜಾರಿಗೆ ತರಬಹುದು ಆದರೆ ಇದು ಕಾನೂನಿನಿಂದ ಮಾಡುವುದಕ್ಕಿಂತ ಸ್ವತಃ ಸಾಹಿತಿಗಳೇ ತಮ್ಮ ಪಾಲಿನ ಕರ್ತವ್ಯವೆಂದು ತಿಳಿದುಕೊಂಡು ಮಕ್ಕಳಿಗೆ ಬಾಲ್ಯದಿಂದಲೇ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸದಭಿರುಚಿ ಹುಟ್ಟಿಸಲು ತಂದೆ ತಾಯಿಗಳಿಗೆ, ಶಿಕ್ಷಕರಿಗೆ ನೆರವಾಗಬೇಕು. ಆ ಮೂಲಕ ಯುವ ಸಮೂಹ ಆಶ್ಲೀಲ ಸಾಹಿತ್ಯದ ಕಡೆಗೆ ಆಕರ್ಷಣೆಗೆ ಒಳಗಾಗುವುದಿಲ್ಲವೆಂದು, ಕನ್ನಡ ಸಾಹಿತ್ಯಕ್ಕೆ ಮಾತ್ರ ಅಶ್ಲೀಲ ಸಾಹಿತ್ಯದ ಕಾಯಿಲೆಯಾಗಿಲ್ಲವೆಂದು ಈ ಕಾಯಿಲೆಯು ಎಲ್ಲಾ ಭಾಷೆಗಳ ಸಾಹಿತ್ಯ ಮತ್ತು ಸಮಾಜದ ಕಾಯಿಲೆಯಾಗಿದೆ. ಈ ಸಮಾಜದ ಕಾಯಿಲೆಗಳಿಗೆ ಸಾಹಿತಿಯು ಪರಿಹಾರವನ್ನು ನೀಡಬೇಕು. ಶಾಸನದ ಮೂಲಕ ಎಲ್ಲಾ ಅಶ್ಲೀಲ ಸಾಹಿತ್ಯವನ್ನು ಅಳಿಸಿ ಬಿಡಬಹುದೆಂಬುದು ಸುಳ್ಳು. ಈ ರೀತಿಯಿಂದ ಸಾಹಿತ್ಯದಲ್ಲಿ ಕಳ್ಳಭಟ್ಟಿಗೆ ಪ್ರೋತ್ಸಾಹ ನೀಡುವಂತಾಗುತ್ತದೆ ಎಂದು 'ಸಾಹಿತ್ಯದಲ್ಲಿ ಕಳ್ಳಭಟ್ಟಿ' ಎಂಬ ಅಂಕಣದಲ್ಲಿ ಚರ್ಚಿಸುತ್ತಾರೆ.

ಅಶ್ಲೀಲ ಸಾಹಿತ್ಯದ ಕಡೆ, ಕಾಮಪ್ರಚೋದಕ ಸಾಹಿತ್ಯದ ಕಡೆ ಯುವ ಸಮೂಹ ಹೋಗದ ರೀತಿಯಲ್ಲಿ ನೋಡಿಕೊಳ್ಳುವ ಕರ್ತವ್ಯ ಸಾಹಿತಿಗಳ ಮೇಲೆ ಇದೆ. ಸಾಹಿತಿಯು ತನ್ನ ಬರವಣಿಗೆಯ ಮೂಲಕ ಸ್ವಾಸ್ಥ ಸಮಾಜವನ್ನು ನಿರ್ಮಾಣ ಮಾಡಬೇಕೆಂಬ ಧೋರಣೆ ನಿರಂಜನರವರದಾಗಿದೆ. ಇಂಡಿಯನ್ ಪೀನಲ್ ಕೋಡ್ ೨೯೨ನೇ ಕಲಂನಲ್ಲಿ ಅಶ್ಲೀಲ ಸಾಹಿತ್ಯದ ಮಾರಾಟಗಾರರನ್ನು ಶಿಕ್ಷೆಗೆ ಗುರಿಪಡಿಸುತ್ತಾರೆ. ಆದರೆ ಯಾವುದು ಅಶ್ಲೀಲ ಸಾಹಿತ್ಯವೆಂದು ವಿವರಿಸಿಲ್ಲ. ಹಾಸನದ ರಾಜರಾಮರ ಕಾಂತಾಪುರ ಕಾದಂಬರಿಗೆ ಅಶ್ಲೀಲವೆಂದು ಎದ್ದ ಪ್ರಶ್ನೆಗೆ ಇದೊಂದು 'ಅಪೂರ್ಣ ತೀರ್ಪು' ಎಂಬ ಲೇಖನದಲ್ಲಿ ಕಾಂತಾಪುರ ಅಥವಾ ಸೂಳೆಗೇರಿ ಎಂದರೆ ಸರಿಯಾಗುತ್ತದೆ. ಕಾಂತಾಪುರ ಎಂದರೆ ಊರು ಹಾಗೆಯೇ ಸೂಳೆಗೇರಿ ಎಂದರು ಕೂಡ ಒಂದು ಊರು ಆಗುವುದಿಲ್ಲವೇ. ಹಾಗೆಯೇ ಅಶ್ಲೀಲವೆಂಬುದು ಕೂಡ ಒಬ್ಬೊಬ್ಬರ ದೃಷ್ಟಿ ಕಾಲಕಾಲಕ್ಕೆ ಬದಲಾವಣೆಯನ್ನು ಹುಟ್ಟಿಸುವ ಭ್ರಮೆಯ ಮಾಯಾವಿನಿ ಎಂದು ವಿಶ್ಲೇಷಿಸುತ್ತಾರೆ.

ಅ.ನ.ಕೃರವರಿಗಿಂತ ಭಿನ್ನವಾದ ರೀತಿಯಲ್ಲಿ ಅಶ್ಲೀಲತೆಯ ವಿಚಾರವನ್ನು ನಿರಂಜನರು ಪ್ರತಿಪಾದಿಸುತ್ತಾರೆ. ಯುವ ಸಮೂಹ ಅಥವಾ ಹದಿಹರೆಯದವರು ಆಶ್ಲೀಲ, ಕಾಮ ಪ್ರಚೋದಕ

ಸಾಹಿತ್ಯದ ಕಡೆ ಹೋಗದ ರೀತಿಯಲ್ಲಿ ಮಾಡಬೇಕಾದರೆ ಲೈಂಗಿಕ ಶಿಕ್ಷಣವನ್ನು ನೀಡಬೇಕು ಎಂಬ ವಾದವು ಕೂಡ ಇದೆ. ಇದಕ್ಕೆ ಪೂರಕವಾದ ನಿರಂಜನರವರ 'ಅಂಕಣ' ಕೃತಿಯಲ್ಲಿ 'ಕಿರಿಯರಿಗೆ ಲೈಂಗಿಕ ಶಿಕ್ಷಣ' ಎಂಬ ಲೇಖನದಲ್ಲಿ ತಮ್ಮದೆಯಾದ ರೀತಿಯಲ್ಲಿ ಚರ್ಚಿಸುತ್ತಾರೆ. ನ್ಯಾಷ್‌ನಲ್ ಕಾಲೇಜಿನ ಪ್ರಾಂಶುಪಾಲರಾದ ಡಾ. ನರಸಿಂಹಯ್ಯನವರು ಒಮ್ಮೆ ನಿರಂಜನರವರನ್ನು ಭೇಟಿಯಾದಾಗ ಅನುಪಮಾರವರಿಂದ ವಿದ್ಯಾರ್ಥಿನಿಯರಿಗೆ ಲೈಂಗಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಉಪನ್ಯಾಸವನ್ನು ನೀಡಬೇಕೆಂದು ಆಮೂಲಕ ಅವರಿಗೆ ಲೈಂಗಿಕ ಶಿಕ್ಷಣದ ಅರಿವು ಮೂಡಿಸುವ ಕಾರ್ಯವಾಗಬೇಕು ಎಂದು ತಿಳಿಸುತ್ತಾರೆ. ಅದಕ್ಕೆ ನಿರಂಜನರು ಪತ್ರಿಕೆಯಲ್ಲಿ ಓದಿದ ಜರ್ಮನಿಯ ಶಾಲೆಯ ಹೊಸ ಪಠ್ಯಕ್ರಮದಲ್ಲಿ 'ಲೈಂಗಿಕ ಅಭ್ಯಾಸ' ಎಂಬ ಪುಸ್ತಕದಲ್ಲಿ ಅನೇಕ ವಿಚಾರಗಳನ್ನು ಭಾವಚಿತ್ರಗಳು, ವರ್ಣ, ನಕಾಶೆಗಳ ಮೂಲಕ ಜ್ಞಾನವನ್ನು ನೀಡುವುದು, ಇದೇ ಮಾದರಿಯಲ್ಲಿ ನಮ್ಮ ಶಾಲಾ ಕಾಲೇಜಿನ ಪಠ್ಯಪುಸ್ತಕದಲ್ಲಿ ಕೂಡ ವಿದ್ಯಾರ್ಥಿಗಳಿಗೆ ಲೈಂಗಿಕ ಶಿಕ್ಷಣದ ಅರಿವನ್ನು ನೀಡಬಹುದೆಂದು, ರಷ್ಯಾದಲ್ಲಿ ಡಾ.ಬೊದಾಕೋಲ್ ರವರು ನಡೆಸಿದ ಅಧ್ಯಯನದಿಂದ ಹೆಚ್ಚಿನವರು ತಮ್ಮ ಲೈಂಗಿಕ ವಿಷಯಗಳನ್ನು ಹುಡುಗರು ತಮ್ಮ ವಯಸ್ಸಿನವರಿಂದ ಪಡೆದಿದ್ದು, ಅದರಲ್ಲಿ ಕೆಲವರು ಕಡಿಮೆ, ಹೆಣ್ಣು ಮಕ್ಕಳು ತಾಯಿ ತಂದೆಯವರಿಂದ ಜ್ಞಾನ ಪಡಿದಿದ್ದಾರೆ. ನಮ್ಮಲ್ಲಿ ಹೆಣ್ಣು ಮಕ್ಕಳಿಗೆ ತಾಯಿಯಿಂದ ಲೈಂಗಿಕ ಶಿಕ್ಷಣ ನೀಡಬಹುದು. ತಂದೆಯಿಂದ ಹೆಣ್ಣು ಮಕ್ಕಳಿಗೆ ಲೈಂಗಿಕ ಶಿಕ್ಷಣ ನೀಡಲು ಭಾರತೀಯ ಸಮಾಜದಲ್ಲಿ ಸಾಧ್ಯವಾಗುವುದಿಲ್ಲ, ಏಕೆಂದರೆ ಇಂದಿಗೂ ಭಾರತೀಯ ಸಮಾಜದಲ್ಲಿ ಲೈಂಗಿಕ ಶಿಕ್ಷಣ ಮತ್ತು ಜ್ಞಾನದ ಬಗ್ಗೆ ಜನತೆಯಲ್ಲಿ ಮಡಿವಂತಿಕೆ ಹೆಚ್ಚಾಗಿದೆ.

ಸರಿಯಾಗಿ ಕಿರಿಯರಿಗೆ ಲೈಂಗಿಕ ಶಿಕ್ಷಣವನ್ನು ನೀಡಬೇಕು ಇಲ್ಲವಾದರೆ ಅಪಾಯವಾಗುವುದು. ಲೈಂಗಿಕ ಜ್ಞಾನದಿಂದಲ್ಲ ಅದರ ಅಭಾವದಿಂದ ಹೆಚ್ಚು ಅನಾಹುತಗಳು ಆಗುತ್ತಿವೆ ಎಂದು ನಿರಂಜನರು ಚರ್ಚಿಸುತ್ತಾರೆ. ಆ ಮೂಲಕ ಹದಿಹರೆಯದವರಿಗೆ ಲೈಂಗಿಕ ಶಿಕ್ಷಣವನ್ನು ನೀಡಬೇಕು ಎಂಬ ವಾದವನ್ನು ನಿರಂಜನರು ನಮ್ಮ ಮುಂದೆ ಇಡುತ್ತಾರೆ. ಪರದೇಶದಲ್ಲಿ ಮಾತ್ರವಲ್ಲ ನಮ್ಮ ದೇಶದಲ್ಲಿಯೇ ಕಿರಿಯರಿಗೆ ಲೈಂಗಿಕ ಶಿಕ್ಷಣ ನೀಡಬೇಕಾಗಿದೆ ಎಂದರೆ ಅದಕ್ಕೆ ಸಮ್ಮತಿ ಕೊಡುವವರು ಎಷ್ಟು ಇರಬಹುದೆಂದು ನಿರಂಜನರು ಸಂಶಯವನ್ನು ವ್ಯಕ್ತಪಡಿಸುತ್ತಾರೆ. ಭಾರತೀಯ ಸಮಾಜ ಲೈಂಗಿಕ ಶಿಕ್ಷಣವನ್ನು ನೀಡುವುದಕ್ಕೆ ಸಮ್ಮಿತಿಸಲಾರದೆಂದು ಸಮ್ಮಿತಿಸಿದರು ಅದರ ಶೇಕಡವಾರು ಅಲ್ಪ ಪ್ರಮಾಣದಾಗಿದೆ ಎನ್ನುವರು. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ದೊಡ್ಡೇರಿ ವೆಂಕಟಗಿರಿರಾಯರು. ವಿದ್ಯಾರ್ಥಿಗಳಿಗೆ ಅಥವಾ ಕಿರಿಯರಿಗೆ ಯಾವಾಗ ಲೈಂಗಿಕ ಶಿಕ್ಷಣ ಕೊಡಬೇಕು, ಯಾರು ಕೊಡಬೇಕು, ಹೇಗೆ ಕೊಡಬೇಕು ಎಂಬುದನ್ನು 'ಇಂದಿನ ವಿಧ್ಯಾಭ್ಯಾದ ಪಠ್ಯಕ್ರಮದಲ್ಲಿ ಲೈಂಗಿಕ ಶಿಕ್ಷಣ' ಎಂಬ ಲೇಖನದಲ್ಲಿ ಚರ್ಚಿಸುವುದನ್ನು ಗಮನಿಸಬಹುದು.

ಲೈಂಗಿಕ ಶಿಕ್ಷಣದ ಬಗ್ಗೆ ಭಾರತೀಯ ಸಮಾಜವು ಎಂದಿಗೂ ಮುಕ್ತವಾಗಿ ತಿಳಿದುಕೊಳ್ಳಲು ಬಯಸುವುದಿಲ್ಲವೆಂದು, ಪ್ರಸ್ತುತ ಕಾಲಘಟ್ಟದಲ್ಲಿಯು ಕೂಡ ಲೈಂಗಿಕ ಶಿಕ್ಷಣದ ಬಗ್ಗೆ ಅಲ್ಲೊಮ್ಮೆ ಇಲ್ಲೊಮ್ಮೆ ಚರ್ಚೆಗಳು ಆಗುತ್ತಿವೆಯೇ ಹೊರತು, ಮುಕ್ತವಾಗಿ ಅದರ ಜ್ಞಾನವನ್ನು ವಿದ್ಯಾರ್ಥಿಗಳಿಗೆ, ಕಿರಿಯರಿಗೆ, ನಮ್ಮ ಯುವ ಸಮೂಹಕ್ಕೆ ನೀಡಲು ಹಿಂಜರಿಯುವ ರೀತಿಯನ್ನು ಕಾಣಬಹುದು. ಲೈಂಗಿಕ ಶಿಕ್ಷಣದ ಬಗ್ಗೆ ಜ್ಞಾನ ನೀಡುವುದು ಸರಿಯಲ್ಲವೆಂಬ ಭಾವನೆ ಭಾರತೀಯರ ಮನಃಸ್ಥಿತಿಯಲ್ಲಿದೆ. ಹೀಗಾಗಿ ಇಂದೂ ೨೧ನೇ ಶತಮಾನದಲ್ಲಿ ಕೂಡ ಯುವ ಸಮೂಹ ಸರಿಯಾದ

ಲೈಂಗಿಕ ಶಿಕ್ಷಣದ ಅಭಾವದಿಂದಾಗಿ ತಪ್ಪು ದಾರಿಯಲ್ಲಿ ಅವುಗಳನ್ನು ಪಡೆಯಲು ಹೋಗಿ ಸಮಾಜದಲ್ಲಿ ಅನಾಹುತಗಳು ಘಟಿಸುತ್ತಿರುವುದನ್ನು ಕಾಣಬಹುದು.

೫.೩ ಸ್ತ್ರೀ ಮತ್ತು ಜಾತಿಯ ವಿಚಾರಗಳು

ಸ್ತ್ರೀ ಮತ್ತು ಜಾತಿಯ ವಿಚಾರಗಳನ್ನು ಕುರಿತಂತೆ ಅ.ನ.ಕೃ ಮತ್ತು ನಿರಂಜನರವರ ಸೃಜನಶೀಲ ಬರವಣಿಗೆಯಲ್ಲಿ ತಿಳಿಸಿರುವುದು ಮಾತ್ರವಲ್ಲದೇ ಅವರ ವಿಚಾರ ಸಾಹಿತ್ಯದಲ್ಲಿಯೂ ಕೂಡಾ ಸ್ತ್ರೀ ಮತ್ತು ಜಾತೀಯ ವಿಚಾರಗಳನ್ನು ತಮ್ಮದೇಯಾದ ರೀತಿಯಲ್ಲಿ ವಿಶ್ಲೇಷಿಸುತ್ತಾರೆ.

ಭಾರತದಲ್ಲಿ ಸ್ತ್ರೀಯರು ಪ್ರಾಚೀನ ಕಾಲದಿಂದಲೂ ಉನ್ನತ ಸ್ಥಾನಮಾನಗಳನ್ನು ಸಮಾಜವು ನೀಡಿತ್ತು. ಕಾಲಕ್ರಮೇಣ ಅವರನ್ನು ಪುರುಷರ ಅನುವರ್ತಿಯಾಗಿ, ಅಬಲೆಯರನ್ನಾಗಿಸಿದರು. ಅವರ ವ್ಯಕ್ತಿತ್ವ, ಗುಣ, ವೈಶಿಷ್ಟ್ಯಗಳನ್ನು ವಿನಾಶಗೊಳಿಸಲಾಯಿತು. ಜೀವನದ ಎಲ್ಲಾ ರಂಗದಲ್ಲಿಯೂ ಪುರುಷನೇ ಮುಂದಾಳತ್ವ ವಹಿಸಿದ್ದು, ಹೆಣ್ಣನ್ನು ದಾಸ್ಯದ ಸಂಕೋಲೆಯಲ್ಲಿ ಬಂಧಿಸಿಟ್ಟಿದ್ದಾನೆ. ಈ ರೀತಿಯಲ್ಲಿ ಪುರುಷ ವರ್ತಿಸುವುದು, ಆತ್ಮವನ್ನು ಕಳೆದುಕೊಂಡು ಜಗತ್ತನ್ನು ಜಯಿಸಿದರೆ ಅದರಿಂದ ಏನು ಫಲವಿಲ್ಲವೆಂದು, ಪುರುಷನ ಏಳಿಗೆಯಲ್ಲಿ ಆತ್ಮದ ಸ್ಥಾನವನ್ನು ಹೆಣ್ಣಿಗೆ ಅ.ನ.ಕೃರವರು ನೀಡುತ್ತಾರೆ. ಹಿಂದೆ ಸ್ತ್ರೀಯರ ಮಾನ ಪ್ರಾಣ ರಕ್ಷಣೆಗಾಗಿ ಯೋಧರು ಬರುತ್ತಿದ್ದರು. ಆದರೆ ಇಂದೂ ಆಕೆಯ ಮಾನ ಪ್ರಾಣ ರಕ್ಷಣೆಯ ಹೊಣೆಯು ಅವಳದೇ ಆಗಿದೆ. ಪುರುಷ ಪ್ರಧಾನ ವ್ಯವಸ್ಥೆಯು ಇಂದಿನ ಸ್ತ್ರೀಯನ್ನು ದಾಸ್ಯದ ಸಂಕೋಲೆಯಲ್ಲಿ ಬಂಧಿಸಿದ್ದಾರೆ. ಏಕೆಂದರೆ ಮಹಿಳೆಯರು ಎಲ್ಲಾ ರಂಗದಲ್ಲಿಯೂ ಪುರುಷನಿಗಿಂತ ಮುಂದೆ ಬಂದರೆ ಇಡೀ ಆಡಳಿತ ಜವಾಬ್ದಾರಿ ತೆಗೆದುಕೊಂಡು ಸಮಾಜವನ್ನು ಅಜ್ಞಾನ, ನಿರುದ್ಯೋಗ ಬಡತನದಲ್ಲಿ ಉಳಿಯುಂತೆ ಮಾಡುತ್ತಾರೆ, ಎಂದು ಮನಸ್ಸಿನಲ್ಲಿಯೇ ಸ್ತ್ರೀಯರಿಂದ ಈ ರೀತಿಯ ಅಪಾಯಗಳಾಗುತ್ತವೆ ಎಂದು ಭಾವಿಸಿ ಇಡೀ ಸಮಾಜವನ್ನು ಪುರುಷ ತನ್ನ ಹಿಡಿತದಲ್ಲಿ ಇಟ್ಟುಕೊಂಡಿದ್ದಾನೆ. ಆದರೆ ಆಧುನಿಕ ಸ್ತ್ರೀಯ ಆಸೆಯು ರಾಷ್ಟ್ರ ಸೇವೆಯಲ್ಲಿ ತಾನು ಕೂಡಾ ಭಾಗಿಯಾಗಿ ಪುರುಷನ ಸರಿಸಮಾನಳಂತೆ ಆತ್ಮಗೌರವದಿಂದ ಬದುಕುವುದಾಗಿದೆ. ಆಧುನಿಕ ಸ್ತ್ರೀಯ ಧೋರಣೆಯನ್ನು ಕುರಿತಂತೆ 'ಹೊಸಹುಟ್ಟು' ಕೃತಿಯ 'ಭಾರತ ಮಹಿಳೆಯರ ಬಂಧ ವಿಮೋಚನೆ' ಎಂಬ ಪ್ರಬಂಧದಲ್ಲಿ ಅ.ನ.ಕೃ. ವಿಶ್ಲೇಷಿಸುತ್ತಾರೆ. ಆಧುನಿಕ ಸ್ತ್ರೀ ವಿಚಾರಕ್ಕೆ ಸಂಬಂಧಿಸಿದಂತೆ ಆಕೆಯಲ್ಲಿಯೂ ಕೂಡಾ ರಾಷ್ಟ್ರಕ್ಕೆ ಸೇವೆಯನ್ನು ಮಾಡಬೇಕೆಂಬ ಹಂಬಲ, ಪುರುಷನಿಗೆ ಸರಿಸಮಾನಳಾಗಿ ಬದುಕುವ, ಆತ್ಮಗೌರವವನ್ನು ಹೊಂದುವ ಮನಃಸ್ಥಿತಿಯು ಇದೆ ಎಂಬುದಾಗಿ ಸ್ತ್ರೀಯನ್ನು ಗುರುತಿಸುತ್ತಾರೆ.

'ಪುರುಷಧರ್ಮ' ಎಂಬ ಪ್ರಬಂಧದಲ್ಲಿ ಅ.ನ.ಕೃರವರು ಪ್ರಾಚೀನ ಭಾರತದಲ್ಲಿ ಸ್ತ್ರೀಯು ಪುರುಷನಿಗೆ ಸರಿಸಮಾನಳಾಗಿದ್ದಳು ಎಂಬುದಕ್ಕೆ ಜೀವನದಲ್ಲಿ ಯಾವುದೇ ಆಧಾರಗಳಿಲ್ಲ. ಆದರೆ ಸಾಹಿತ್ಯಗಳಲ್ಲಿ ದೊರಕುತ್ತದೆ. ಪ್ರಾಚೀನ ಭಾರತದಲ್ಲಿ ಸ್ತ್ರೀಯನ್ನು ದೇವತೆಯ ರೂಪದಲ್ಲಿಯೂ, ಮತ್ತೊಂದು ಕಡೆ ಆಕೆಯನ್ನು ಗೌಪ್ಯವಾಗಿಡುವುದು ನಡೆದುಕೊಂಡು ಬಂದಿದೆ. ಸ್ತ್ರೀಯನ್ನು ಮಕ್ಕಳನ್ನು ಹೆರುವ ಯಂತ್ರವಾಗಿ, ಇಡೀ ಅವಳ ಜಗತ್ತು ಪುರುಷನ ಕಾಮಶೃಂಗಾರದ ಅಲಂಕೃತ ಕೊಠಡಿಯಲ್ಲಿ ಮತ್ತು ಪಾಕಶಾಲೆಯಲ್ಲಿ ಮುಗಿಯಬೇಕು ಎಂಬ ಪುರುಷನ ಮನಃಸ್ಥಿತಿಯನ್ನು ಖಂಡಿಸುತ್ತಾರೆ. ತನ್ನ ಕರ್ತವ್ಯವನ್ನು ನಿರ್ವಹಿಸಲು ಸರಿಯಾದ ಯೋಗ್ಯತೆಯನ್ನು ಸಂಪಾದಿಸಿಕೊಳ್ಳದೇ ಪುರುಷನು ಸ್ತ್ರೀಯ ಮೇಲೆ ದಬ್ಬಾಳಿಕೆ ಮಾಡುವುದು, ನಾಚಿಕೆ ತರುವಂತದ್ದಾಗಿದೆ. ಪುರುಷನು ಸ್ತ್ರೀಯನ್ನು ತನ್ನ ಲೌಕಿಕ

ಸುಖಗಳ ತುತ್ತಾಗಿ ಪರಿಭಾವಿಸಿ ತಾನು ವಿನಾಶಗೊಂಡಲ್ಲದೆ ಆಕೆಯನ್ನು ನಾಶ ಮಾಡುತ್ತಿದ್ದಾನೆ. ಪುರುಷ ಪ್ರಧಾನ ವ್ಯವಸ್ಥೆಯು ಸ್ತ್ರೀಯನ್ನು ತನ್ನ ಆಸೆ–ಆಕಾಂಕ್ಷೆಗಳ ಈಡೇರಿಕೆಗಾಗಿ ಬಳಸಿಕೊಂಡು ತನ್ನನ್ನು ಮತ್ತು ಆಕೆಯಲ್ಲಿರುವ ಉದಾತ್ತ ಅಂಶಗಳನ್ನು ನಾಶ ಮಾಡುತ್ತಿದ್ದಾನೆ ಎಂದು ಅ.ನ.ಕೃರವರು ಇಂದಿನ ಸಮಾಜದಲ್ಲಿ ವ್ಯಕ್ತಿ ಅಥವಾ ಮಾನವ ಕಲ್ಯಾಣವು ಸ್ತ್ರೀಯ ಕಲ್ಯಾಣದೊಂದಿಗೆ ಅಡಗಿದೆ ಎಂಬ ನಿಲುವನ್ನು ಪ್ರತಿಪಾದಿಸುತ್ತಾರೆ.

'ಮಹಿಳೆಯರ ಪ್ರಗತಿ' ಎಂಬ ಪ್ರಬಂಧದಲ್ಲಿ ಅ.ನ.ಕೃರವರು ಕರ್ನಾಟಕದಲ್ಲಿ 'ಲೇಡಿಸ್ ಕಾನ್‌ಫರೆನ್ಸ್' ಮತ್ತು 'ಕರ್ನಾಟಕ ಮಹಿಳಾ ಪರಿಷತ್ತು', ಮಹಿಳೆಯರ ಪ್ರಗತಿಗಾಗಿ ಚರ್ಚಿಸಬೇಕು. ಅವರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಲ್ಲಿ ಆತ್ಮರಕ್ಷಣೆ ಮತ್ತು ಮಾನರಕ್ಷಣೆಗೆ ಅವಶ್ಯಕವಾದ ಕ್ರಮಗಳನ್ನು ಹುಡುಕಬೇಕಾಗಿದೆ. ಕನ್ನಡ ಭಾಷೆ ಕೂಡಾ ಬ್ರಿಟಿಷರಿಂದ, ಮುಸಲ್ಮಾನ ಅರಸರ ದಬ್ಬಾಳಿಕೆಯಿಂದ ಉಳಿದಿರುವುದೇ ಹೆಣ್ಣು ಮಕ್ಕಳಿಂದ, ಹಿಂದೂ ಕಾನೂನಿನಲ್ಲಿ ಮಹಿಳೆಯರಿಗೆ ಇರುವ ಗೌಣ ಸ್ಥಾನದ ನಿರ್ಮೂಲನೆಗಾಗಿ ಸಮ್ಮೇಳನಾಧಿಕಾರಿಗಳು ಗಮನಕೊಡಬೇಕು. ಸ್ತ್ರೀಗೆ ಸಮಾನಾಧಿಕಾರ ಮತ್ತು ಹಕ್ಕನ್ನು ದೊರಕಿಸಿಕೊಡುವಲ್ಲಿ ಈ ರೀತಿಯ ಸಮ್ಮೇಳನಗಳು ನಡೆಯಬೇಕು. ವರ್ಷ ವರ್ಷ ಯಾವುದೋ ಸೀರೆ, ಬಳೆ, ಚಿತ್ರದ ಹಾಡುಗಳು ಇವುಗಳ ಕುರಿತು ಚರ್ಚಿಸಿದರೆ ಸಾಲದು, ಮಹಿಳೆಯರು ಇಂದಿನ ಪರಿಸ್ಥಿತಿಗನುಗುಣವಾಗಿ ಅವರ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಸಲಹೆಯನ್ನು ನೀಡುತ್ತಾರೆ.

Lady, Female ಮತ್ತು Woman ಎಂದು ಇಂಗ್ಲೀಷ್‌ನಲ್ಲಿ ಹೆಣ್ಣು ಎಂಬ ಶಬ್ದಕ್ಕೆ ಹಲವಾರು ಅರ್ಥಗಳಿವೆ, ಲೇಡಿಯೆಂದರೆ ತನಗೂ ಪ್ರಯೋಜನವಿಲ್ಲದ, ಮನೆ, ಸಮಾಜ ಮತ್ತು ದೇಶಕ್ಕೂ ಪ್ರಯೋಜನವಿಲ್ಲದ ಒಂದು ಬಣ್ಣದ ಗೊಂಬೆ ಎಂದು ಅರ್ಥವಿದೆ. ಅದರಂತೆ ಫೀಮೇಲ್ ಎಂದರೆ ಸ್ತ್ರೀಲಿಂಗಕ್ಕೆ ಸೇರಿದ ಪದವಾಗಿದ್ದು ಕ್ರಿಮಿಕೀಟ, ಪ್ರಾಣಿ, ಮೃಗ ಎಂಬರ್ಥ ಬರುತ್ತದೆ. ಉಮನ್ ಎಂದರೆ ಆದರ್ಶ ಸ್ತ್ರೀ, ಆದರ್ಶ ತಾಯಿ, ಪತ್ನಿ, ಸಹೋದರಿ, ನಾಗರಿಕೆ ಎಂಬೆಲ್ಲಾ ಅರ್ಥಗಳು ಬರುತ್ತದೆ. 'ಸಾಹಿತ್ಯ ಮತ್ತು ಕಾಮಪ್ರಚೋದನೆ'ಯೆಂಬ ಕೃತಿಯಲ್ಲಿ ಅ. ನ. ಕೃ. ರವರು ಈ ರೀತಿಯ ಅರ್ಥಗಳನ್ನು ಸ್ತ್ರೀ ಎಂಬ ಪದಕ್ಕೆ ನೀಡುತ್ತಾರೆ.

ಕರ್ನಾಟಕದಲ್ಲಿ ನಡೆಯುವ ಯಾವುದೇ ಲೇಡಿ ಕಾನ್‌ಫರೆನ್ಸ್‌ಗಳು, ಫೀಮೇಲ್ ಸಮ್ಮೇಳನಗಳೆಂದು ನಡೆಯದೇ ಉಮನ್ ಕಾನ್‌ಫರೆನ್ಸ್‌ಗಳು, ಸಮ್ಮೇಳನಗಳೆಂದು ನಡೆಯಲಿ ಎಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ. ಅಸ್ಪೃಶ್ಯತೆಯ ನಿವಾರಣೆಗಾಗಿ ಈ ರೀತಿಯ ಸಮ್ಮೇಳನಗಳು ಅಸ್ಪೃಶ್ಯ ಸ್ತ್ರೀಯರ ಸಂಪರ್ಕ, ಸಹವಾಸದೊಂದಿಗೆ ಅವರಿಗೆ ದೇವಾಲಯದ ಪ್ರವೇಶಾಧಿಕಾರವನ್ನು ನೀಡುವ ಮೂಲಕ ಅಸ್ಪೃಶ್ಯತೆಯನ್ನು ನಿವಾರಣೆ ಮಾಡಬೇಕು ಎಂದು ಸ್ತ್ರೀ ಪರ ಚಿಂತನೆಗಳನ್ನು ಪ್ರತಿಪಾದಿಸುತ್ತಾರೆ.

'ಸಾಹಿತ್ಯ ಮತ್ತು ಕಾಮ ಪ್ರಚೋದನೆ' ಎಂಬ ಕೃತಿಯಲ್ಲಿ ಅ.ನ.ಕೃ. ರವರು ಹೆಣ್ಣಿನ ಜೀವನ ವೇಳಾಪಟ್ಟಿಯನ್ನು ನಿರ್ಧರಿಸಿದವರು ಪುರುಷರೇ ಆಗಿದ್ದಾರೆ. ಮತ್ತು ಅವಳ ಬದುಕಿನಲ್ಲಿ ಕೆಲವೊಂದು ಆದರ್ಶಗಳನ್ನು ಸೂಚಿಸಿದ್ದಾರೆ. ಇದು ಸ್ತ್ರೀಯ ಆದರ್ಶವಾಗದೇ ಅದು ಪುರುಷನ ಆದರ್ಶಗಳಾಗಿವೆ. ಇವು ಗಂಡಿಗೆ ಅನುಕೂಲವಾಗುವ ಆದರ್ಶಗಳಾಗಿವೆ. ಪುರುಷ ಯಾವಾಗ ಸ್ತ್ರೀಯನ್ನು ಶೋಷಣೆ

ಮಾಡಲು ಪ್ರಾರಂಭಿಸಿದನೋ ಅಂದೇ ನಮ್ಮ ನೈತಿಕ, ಮಾನಸಿಕ, ಸಾಮಾಜಿಕ, ರಾಷ್ಟ್ರೀಯ ಜೀವನ ಅವನತಿಯ ದಾರಿಯನ್ನು ಹಿಡಿಯಿತು ಎಂದು ವಿಶ್ಲೇಷಿಸುತ್ತಾರೆ. ಗಂಡಿನ ಆದರ್ಶಗಳನ್ನು ಪುರುಷ ಸ್ತ್ರೀಯ ಮೇಲೆ ಒತ್ತಾಯಪೂರ್ವಕವಾಗಿ ಹೇರಿ ಅವುಗಳನ್ನು ಸಮಾಜದಲ್ಲಿ ನಡೆಸಿಕೊಂಡು ಹೋಗಲು ಸ್ತ್ರೀಯ ಮೇಲೆ ಶೋಷಣೆ ಮಾಡಲು ಪ್ರಾರಂಭಿಸಿದರಿಂದಲೇ ನಮ್ಮ ಸಾಮಾಜಿಕ ಜೀವನ, ನೈತಿಕ ಜೀವನ, ಅಧಃಪತನ ಹಿಡಿಯಿತು. ಭಾರತೀಯ ಸಮಾಜ ಅವನತಿಯ ಹಾದಿ ತುಳಿಯಲು ಕಾರಣವಾದ ಅಂಶವೆಂದು ಗ್ರಹಿಸುತ್ತಾರೆ.

ಸ್ತ್ರೀಯನ್ನು ಪುರುಷ ಶೋಷಣೆಗೆ ಒಳಪಡಿಸಿ ಆ ಮೂಲಕ ತಾನು ನಾಶಗೊಂಡಿಲ್ಲದೆ ಸ್ತ್ರೀಯನ್ನು ಸಮಾಜವನ್ನು ಅಧಃಪತನಕ್ಕೆ ಪುರುಷ ಪ್ರಧಾನ ವ್ಯವಸ್ಥೆ ಒಳಪಡಿಸಿತು. ಅ.ನ.ಕೃ ತಮ್ಮದೇಯಾದ ವಿಚಾರ ಸಾಹಿತ್ಯದಲ್ಲಿ ಸ್ತ್ರೀಪರ ಧೋರಣೆಯನ್ನು ಪ್ರತಿಪಾದಿಸುತ್ತಾರೆ. ಜಾತಿಯ ವಿಚಾರಗಳಿಗೆ ಸಂಬಂಧಿಸಿದಂತೆ ವಿಚಾರಸಾಹಿತ್ಯದಲ್ಲಿ ಹೆಚ್ಚು ಚರ್ಚಿಸದ ಅ.ನ.ಕೃ.ರವರು 'ಸಂಸ್ಕೃತಿಯ ವಿಶ್ವರೂಪ' ಎಂಬ ಕೃತಿಯಲ್ಲಿ 'ಅಸ್ಪೃಶ್ಯತೆಯ ನಿರ್ಮೂಲನೆ' ಎಂಬ ಪ್ರಬಂಧದಲ್ಲಿ ಅಸ್ಪೃಶ್ಯತೆ ಸಮಸ್ಯೆ ಎಂಬುದು ಭಾರತದಲ್ಲಿ ಧರ್ಮ, ರಾಷ್ಟ್ರ, ಜೀವನ, ಸಂಸ್ಕೃತಿಗೆ ಮಾತ್ರ ಸವಾಲು ಹಾಕದೆ ಮಾನವತೆಗೂ ಸವಾಲು ಹಾಕಿದೆ. ಭಗವದ್ಗೀತೆಯಲ್ಲಿ ಹುಟ್ಟಿದ ಮೂಲವನ್ನು ಗಣನೆಗೆ ತೆಗೆದುಕೊಳ್ಳದೆ ಗುಣಕ್ಕೆ ಮನ್ನಣೆ ನೀಡಿದೆ. ಮನುವಿನ ಕಾಲದಲ್ಲಿ ಚಾತುರ್ವರ್ಣ್ಯವಲ್ಲದೆ ಐದನೇ ವರ್ಣವು ಹುಟ್ಟಿಕೊಂಡಿರಬೇಕು. ಅದನ್ನು ಮನು ದಸ್ಯು, ಚಂಡಾಲರೆನಿಸಿಕೊಂಡು ಅಸ್ಪೃಶ್ಯರಾಗಿರಬೇಕು ಎಂದು, ಅಸ್ಪೃಶ್ಯ ಜಾತಿ ಹೇಗೆ ನಿರ್ಮಾಣವಾಗಿರಬೇಕೆಂದು, ಉಳಿದ ಸವರ್ಣೀಯರಿಂದ ನ್ಯಾಯ, ವಿಶ್ವಾಸ, ಗೌರವ ದೊರಕಿಲ್ಲದ ವಿಚಾರವನ್ನು ಅ.ನ.ಕೃ. ಖಂಡಿಸುತ್ತಾರೆ. ಕರ್ನಾಟಕದಲ್ಲಿ ಅಸ್ಪೃಶ್ಯತೆಯ ನಿವಾರಣೆಗಾಗಿ ಎರಡು ಪ್ರಯತ್ನಗಳಾದವುದನ್ನು ಅ.ನ.ಕೃ. ಗುರುತಿಸುತ್ತಾರೆ. ಮೊದಲನೆಯದು ೧೨ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಿಂದ, ಎರಡನೇಯದು ಹದಿನಾರನೇಯ ಶತಮಾನದ ವೈಷ್ಣವ ಮತ ಪ್ರಚಾರಕರಾದ ಪುರಂದರದಾಸರು, ಹರಿದಾಸರಿಂದಾಗಿ, ಬಸವಣ್ಣನವರು, ವರ್ಗರಹಿತ, ಜಾತ್ಯಾತೀತವಾದ ಸಮಾಜವನ್ನು ನಿರ್ಮಾಣ ಮಾಡಲು ಪ್ರಯತ್ನಿಸಿದರು, ಹರಿದಾಸರು ಅದೇ ದಾರಿಯಲ್ಲಿ ಹೋದರು ಕಾಲಕ್ರಮೇಣ ಈ ಎರಡು ಪಂಥಗಳ ಅನುಯಾಯಿಗಳು ಅಸ್ಪೃಶ್ಯತೆಯನ್ನು ಮತ್ತೆ ಎತ್ತಿ ಹಿಡಿದರು.

ವಿವೇಕಾನಂದರು, ಗಾಂಧೀಜಿ, ಕಬೀರರು ಮೊದಲಾದ ಅನೇಕ ಮಹನೀಯರುಗಳು ಅಸ್ಪೃಶ್ಯತೆಯ ನಿರ್ಮೂಲನೆಗಾಗಿ ಶ್ರಮಿಸಿದರು. ಸರಕಾರದಿಂದ ಕಾನೂನುಗಳಿಂದ ಅಸ್ಪೃಶ್ಯತೆಯನ್ನು ನಿವಾರಿಸಲು ಸಾಧ್ಯವಿಲ್ಲ. ಪ್ರತಿಯೊಬ್ಬ ಭಾರತೀಯರ ಅಂತರಂಗ ಶುದ್ಧಿಯಾಗುವ ಮೂಲಕ ನಡೆಯಬೇಕಾಗಿದೆ. ಆರ್ಥಿಕ ಸ್ಥಿತಿಯೂ ಸುಧಾರಿಸಿದಂತೆ ಅವರ ಸಾಮಾಜಿಕ ಸ್ಥಿತಿಯು ಸುಧಾರಿಸಿದರೆ ಅಸ್ಪೃಶ್ಯತೆಯು ನಿವಾರಣೆಯಾಗುತ್ತದೆ ಎಂದು ಭಾವಿಸುವುದು ತಪ್ಪು, ಆರ್ಥಿಕ ಸ್ವಾತಂತ್ರ್ಯ ಪಡೆದ ಅಸ್ಪೃಶ್ಯರು ಅಧಿಕಾರ ಸ್ಥಾನಕ್ಕೆ ಬಂದ ನಂತರ ಮೇಲ್ವರ್ಗದ ಹಿಂದೂಗಳ ರೀತಿಯಲ್ಲಿಯೇ ನಡೆದುಕೊಳ್ಳುತ್ತಾರೆ ಎಂದು ವಿಶ್ಲೇಷಿಸುತ್ತಾರೆ.

ಪ್ರಗತಿಶೀಲ ಕಾಲಘಟ್ಟದ ಅನೇಕ ಲೇಖಕರು ಅಸ್ಪೃಶ್ಯತೆಯ ನಿವಾರಣೆಯ ಬಗ್ಗೆ ಜಾತಿಯಸಮಸ್ಯೆಗಳನ್ನು ಕುರಿತಂತೆ ಸೃಜನಶೀಲ ಬರಹಗಳಲ್ಲಿ, ವಿಚಾರಶೀಲ ಬರಹಗಳಲ್ಲಿ ಮುಖ್ಯ ಸಾಮಾಜಿಕ ಸಮಸ್ಯೆಯಿಂದ ಸಮಾಜವು ಬಿಡುಗಡೆಗೊಳ್ಳಬೇಕೆಂಬ ದೃಷ್ಟಿಕೋನವಿದೆ. ಅದೇ

ಮಾದರಿಯಲ್ಲಿ ಅ.ನ.ಕೃರವರು ಕೂಡಾ ಅಸ್ಪೃಶ್ಯತೆಯ ನಿರ್ಮೂಲನಕ್ಕೆ ಸಂಬಂಧಿಸಿದಂತೆ ತಮ್ಮ ದೃಷ್ಟಿಕೋನವನ್ನು ಈ ಪ್ರಬಂಧದಲ್ಲಿ ವಿವರಿಸಿದ್ದಾರೆ.

ನಿರಂಜನರು ಸ್ತ್ರೀ ವಿಚಾರಗಳಿಗೆ ಸಂಬಂಧಿಸಿದಂತೆ ಪುಷ್ಪಹಾರ ಕೃತಿಯ 'ಹೆಣ್ಣು-ಗಂಡು' ಎಂಬ ಪತ್ರದಲ್ಲಿ ಸಾಧನಳನ್ನು ನಿರಂಜನರರು ಒಬ್ಬರನ್ನೊಬ್ಬರು ಏಕವಚನದಲ್ಲಿ ಸಂಭೋಧಿಸುವುದು ಕೂಡಾ ಸಮಾಜ ಅದನ್ನು ಒಪ್ಪದೇ ಇರಬಹುದು. ಆದರೆ ಭಾರತೀಯ ಸಮಾಜ ಮಾತ್ರವಲ್ಲದೆ ಪಾಶ್ಚಾತ್ಯರ ಆಧುನಿಕ ಸಮಾಜವು ಕೂಡಾ ಹೆಣ್ಣನ್ನು ಶೋಷಿಸುವ, ಸ್ತ್ರೀ-ಪುರುಷನಂತೆ ಸಮಾನತೆಯನ್ನು ನೀಡಿಲ್ಲವೆಂದು ಲಾರ್ಡ್ ಟೆನಿಸ್‌ನು ಬರೆದ ಕವಿತೆಯ ಸಾಲುಗಳನ್ನು ಅನುವಾದಿಸುತ್ತಾರೆ.

> "ಹೊಲದಲ್ಲಿ ಗಂಡಸು, ಅಡುಗೆ ಮನೆಯಲ್ಲಿ ಹೆಂಗಸು,
> ಕರವಳ ಗಂಡಸಿನ ಕೈಗೆ, ಸೂಜಿ ಹೆಂಗಸಿಗೆ
> ಗಂಡಸು ಮೆದಳು, ಹೆಂಗಸು ಹೃದಯ
> ಅಣತಿ ಕೊಡುವವನು ಗಂಡಸು, ಪಾಲಿಸುವಾಕೆ ಹೆಂಗಸು"[೧೪]

ಹತ್ತೊಂಬತ್ತನೆಯ ಶತಮಾನದಲ್ಲಿ ಕವಿ ಹೀಗೆ ಬರೆದರೆ ಹೆಣ್ಣಿಗೆ ಸಮಾನತೆ ಎಲ್ಲಿ ಇದೆ ಎಂದು ಪಾಶ್ಚಾತ್ಯ ಸ್ತ್ರೀಯರ ಹಿನ್ನಲೆಯಲ್ಲಿ ತಿಳಿಸುತ್ತಾರೆ. ಭಾರತದ ಸಂವಿಧಾನದಲ್ಲಿ ಸ್ತ್ರೀ ಪುರುಷರಿಬ್ಬರಿಗೂ ಸಮಾನವಾದ ಅವಕಾಶವನ್ನು ಕೊಟ್ಟಿದೆ. ಆದರೆ ಆ ಸಮಾನ ಅವಕಾಶಗಳು ಕಾನೂನಿನ ಪುಸ್ತಕದಲ್ಲಿ ಮಾತ್ರ, ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣನ್ನು ಆದಿಶಕ್ತಿಯಾಗಿ ನೋಡುವ ಭಾರತೀಯ ಸಮಾಜ ಇಷ್ಟೊಂದು ನಿಕೃಷ್ಟವಾಗಿ ಹೆಣ್ಣನ್ನು ನಡೆಸಿಕೊಳ್ಳುವುದು ಎಷ್ಟು ಸರಿ? ಎಂದು ಪ್ರಶ್ನಿಸುತ್ತಾರೆ. ಸ್ತ್ರೀ-ಪುರುಷರು ಸರಿಸಮಾನರು ಎಂದರೆ ಎಷ್ಟೋ ಜನ ಮೂಗು ಮುರಿಯುವವರು ಇದ್ದಾರೆ. ಹೆಣ್ಣಿನ ಬಂಧನ ಬಿಡುಗಡೆ ಎಂಬ ಮಾತುಗಳೆಲ್ಲಾ ಬರಿ ಬುರುಡೆ ಎನ್ನುವ ಜನರು ಕೂಡಾ ಇದ್ದಾರೆ. ಸ್ತ್ರೀಯನ್ನು ಪುರುಷನ ಸರಿಸಮಾನವಾಗಿ ಎಂದೂ ಭಾರತೀಯ ಸಮಾಜವು ಪರಿಗಣಿಸುವುದಿಲ್ಲ ಇದು ಭಾರತೀಯ ಸಮಾಜದಲ್ಲದೆ ಪಾಶ್ಚಾತ್ಯರಲ್ಲಿಯೂ ಇದೆ ಧೋರಣೆಯಿದೆ ಎಂದು ಲಾರ್ಡ್ ಟೆನಿಸನ್‌ನ ಕವಿತೆಯ ಹಿನ್ನಲೆಯಲ್ಲಿ ತಿಳಿಸುತ್ತಾರೆ. ಅ.ನ.ಕೃ ಭಾರತೀಯ ಸಮಾಜದಲ್ಲಿ ಸ್ತ್ರೀಯನ್ನು ಪುರುಷ ದಾಸ್ಯದಲ್ಲಿ ಹಿಡಿದಿಟ್ಟುಕೊಂಡಿರುವಂತೆ ಚರ್ಚಿಸಿದರೆ ಪಾಶ್ಚಾತ್ಯ ಮತ್ತು ಭಾರತೀಯ ಎರಡು ಸಮಾಜಗಳು ಕೂಡಾ ಸ್ತ್ರೀಯನ್ನು ಸರಿಸಮಾನವಾಗಿ ನೋಡುವುದಿಲ್ಲ ಎಂದು ನಿರಂಜನರು ಗ್ರಹಿಸುತ್ತಾರೆ. ಮುಂದುವರಿದು ಪಾಶ್ಚಾತ್ಯ ಸಮಾಜಗಳಲ್ಲಿಯೂ ಹೆಣ್ಣನ್ನು ಪುರುಷನ ಹತೋಟಿಯಲ್ಲಿಯೇ ಇಟ್ಟಿರುವುದನ್ನು ಸೂಚಿಸುತ್ತಾ ಸ್ತ್ರೀ ಶೋಷಣೆ ಎಂಬುದು ಜಗತ್ತಿನಾದ್ಯಂತ ಇದೆ ಎಂದು ಪಾಶ್ಚಾತ್ಯ ವಿಚಾರಗಳ ಹಿನ್ನಲೆಯಲ್ಲಿ ತಿಳಿಸಿದ್ದಾರೆ.

ವರದಕ್ಷಿಣೆ ಎಂಬುದು ಭಾರತೀಯ ಸಮಾಜದಲ್ಲಿ ಒಂದು ಪಿಡುಗು. ವರದಕ್ಷಿಣೆಯ ಸಮಸ್ಯೆಯಿಂದಾಗಿ ಅನೇಕ ಭಾರತೀಯ ಹೆಣ್ಣುಮಕ್ಕಳು ದೈಹಿಕ, ಮಾನಸಿಕ ಸಮಸ್ಯೆಗಳಿಗೆ ಒಳಗಾಗಿದ್ದಾರೆ. ಎಷ್ಟೋ ಹೆಣ್ಣು ಮಕ್ಕಳು ಈ ಸಮಸ್ಯೆಯಿಂದಾಗಿ ವಿವಾಹವಾಗದೆ ಉಳಿದಿದ್ದಾರೆ. ಇಂಥ ಪರಿಸ್ಥಿತಿಯನ್ನು ನೋಡಿದ ರೇಣು ಚಕ್ರವರ್ತಿ ಎಂಬ ಬಂಗಾಳದ ಮಹಿಳೆಯು ಪಾರ್ಲಿಮೆಂಟ್ ಸದಸ್ಯರಾಗಿದ್ದರು. ಅವರು ವರದಕ್ಷಿಣೆ ನಿಷೇಧಿಸುವ ಮಸೂದೆಯನ್ನು ಜಾರಿಗೆ ತರಲು ಮುಂದಾದರು. ಆ ಮಸೂದೆಯಿಂದಾಗಿ ಸ್ತ್ರೀಯರ ಆರ್ಥಿಕ ಸಮಾನತೆಯನ್ನು, ಸ್ವಾತಂತ್ರ್ಯವನ್ನು ಸಾಧ್ಯಗೊಳಿಸಲು, ಹೆಣ್ಣು ಮಕ್ಕಳ ಮದುವೆಗಾಗಿ

ತಾಯಿ-ತಂದೆಯವರು ಪಡುತ್ತಿರುವ ಕಷ್ಟವನ್ನು ಬಗೆಹರಿಸುವ, ಮದುವೆಯ ವಿಷಯದಲ್ಲಿ ಯಾವುದೇ ನಿಬಂಧನೆ ಇಲ್ಲವೇ ಸಮಾನವಾದ ಆಯ್ಕೆಗೆ ಅವಕಾಶ ನೀಡುವ ಒಂದು ಸದುದ್ದೇಶದಿಂದ ಪಾರ್ಲಿಮೆಂಟಿನಲ್ಲಿ ತರಲು ಮುಂದಾದರು ಎಂಬುದನ್ನು ಕಾಲಕ್ಷೇಪ ಕೃತಿಯ 'ಹೆಣ್ಣು ಎಂದರೆ ಹಸುವಲ್ಲ' ಎಂಬ ಪ್ರಬಂಧದಲ್ಲಿ ನಿರಂಜನರು ತಿಳಿಸುತ್ತಾರೆ.

ಆಂಧ್ರ ಪ್ರಾಂತ್ಯ ರಚನೆಯ ಸಮಸ್ಯೆ, ಕಾಶ್ಮೀರದ ಸಮಸ್ಯೆಗಳಲ್ಲಿ, ನಮ್ಮ ರಾಜಕಾರಣಿಗಳು ಮುಳುಗಿರುವಾಗ ಈ ಮಹಿಳಾ ಸಮಸ್ಯೆಯನ್ನು ಚರ್ಚಿಸಲಿದ್ದಾರೆಯೇ ಎಂದು ಅನುಮಾನ ವ್ಯಕ್ತಪಡಿಸುತ್ತಾರೆ. ಪಾರ್ಲಿಮೆಂಟಿನಲ್ಲಿರಬಹುದು, ರಾಜ್ಯ ವ್ಯವಸ್ಥೆಯಲ್ಲಿರಬಹುದು, ಸಮಾಜ ವ್ಯವಸ್ಥೆಯಲ್ಲಿ ಇಂತಹ ಮಸೂದೆಗೆ ಬೆಂಬಲ ಸಿಗುವುದು ಅನುಮಾನವೆಂದು ಪ್ರತಿಕ್ರಿಯಿಸುತ್ತಾರೆ. ಈ ಲೇಖನವನ್ನು ೧೯೫೭ರಲ್ಲಿ ಬರೆದಿದ್ದು ಈ ಲೇಖನದಿಂದಲೇ ವರದಕ್ಷಿಣೆ ನಿಷೇಧ ಜಾರಿಗೆ ತರಬೇಕಾದ ಅಗತ್ಯತೆಯನ್ನು ನಿರಂಜನರು ಪ್ರತಿಪಾದಿಸುತ್ತಾರೆ. ಇದಾದ ಎಂಟು ವರ್ಷಗಳ ತರುವಾಯ ಅಂದರೆ ೧೯೬೪ರಲ್ಲಿ ವರದಕ್ಷಿಣೆ ನಿಷೇಧ ಕಾನೂನು ಜಾರಿಗೆ ಬಂದಿರುವುದನ್ನು ನಾವು ಇಲ್ಲಿ ನೆನೆಯಬಹುದು. ಸ್ತ್ರೀಪರ ಕಾಳಜಿಯ ಬಗ್ಗೆ ನಮ್ಮ ಪಾರ್ಲಿಮೆಂಟ್, ಸಮಾಜ, ರಾಜಕೀಯ ವ್ಯವಸ್ಥೆ ಹೇಗೆ ವರ್ತಿಸುತ್ತದೆ ಎಂಬುದನ್ನು ಈ ಘಟನೆಯ ಹಿನ್ನಲೆಯಲ್ಲಿ ತಿಳಿಯಬಹುದು. ಪಾರ್ಲಿಮೆಂಟ್‌ನಲ್ಲಿ ಕಾನೂನಿನ ಮೂಲಕ ವರದಕ್ಷಿಣೆ ನಿಷೇಧ ಜಾರಿಗೆ ಬಂದಿದೆ. ಪ್ರಸ್ತುತ ಕಾಲದಲ್ಲಿಯೂ ಈ ಸಾಮಾಜಿಕ ಪಿಡುಗು ನಿರಂಜನರು ತಿಳಿಸಿದ ಹಾಗೆ ಸಾಮಾಜಿಕ ವ್ಯವಸ್ಥೆಯಲ್ಲಿ ಬೆಂಬಲ ದೊರಕದೆ ಹೆಮ್ಮರವಾಗಿ ಇಂದೂ ಬೆಳೆದು ನಿಂತಿದೆ.

ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿ ೫೦ ವರ್ಷ ಪೂರ್ಣಗೊಳ್ಳುವ ಸಂದರ್ಭದಲ್ಲಿ ೧೯೬೫ರಲ್ಲಿ ಹೆಣ್ಣು ಮಕ್ಕಳ ಪದವಿಯ ಸಂದರ್ಭದಲ್ಲಿ ರಾಜ್ಯಪಾಲರಾದ ವಿ.ವಿ.ಗಿರಿಯವರು ಸಮಾನತೆಗೆ ಸಂಬಂಧಿಸಿದಂತೆ ಮಂತ್ರಿ ಮಂಡಲದಲ್ಲಿ ಅರ್ಧದಷ್ಟು ಸ್ಥಾನವನ್ನು ಮಹಿಳೆಯರಿಗೆ ನೀಡಬೇಕೆಂದು ತಿಳಿಸಿದಾಗ ಅದಕ್ಕೆ ಪ್ರತಿಕ್ರಿಯಿಸಿದ ನಿರಂಜನರು, ಗಂಡಸರು, ಬಸ್ಸಿನಲ್ಲಿ ಸೀಟು ಬಿಟ್ಟುಕೊಡಬಹುದೇನೋ ಆದರೆ ಅಧಿಕಾರದ ಸೀಟನ್ನು ಬಿಟ್ಟುಕೊಡುವುದಿಲ್ಲ. ಪುರುಷನ ಮನಃಸ್ಥಿತಿಯು ಹೇಗೆ ಇರುತ್ತದೆ ಎಂಬುದನ್ನು 'ರಾಜಧಾನಿಯಿಂದ' ಕೃತಿಯ 'ಪದವಿ ಪೂಜೆ' ಎಂಬ ಅಂಕಣದಲ್ಲಿ ತಿಳಿಸುತ್ತಾರೆ. ಅ.ನ.ಕೃ ಭಾರತೀಯ ಪರಂಪರೆಯಲ್ಲಿ ಸ್ತ್ರೀ ಶೋಷಣೆಯ ವಿಚಾರಗಳನ್ನು ತಿಳಿಸಿದರೆ ನಿರಂಜನರು ಭಾರತೀಯ ಪುರುಷರ ಮನಃಸ್ಥಿತಿ ಮತ್ತು ಪಾಶ್ಚಾತ್ಯದಲ್ಲಿಯೂ ಕೂಡಾ ಸ್ತ್ರೀ ಸಮಾನತೆ ಎಂಬುದಿಲ್ಲ ಮತ್ತು ವರದಕ್ಷಿಣೆ ನಿಷೇಧದ ಹಿನ್ನಲೆಯಲ್ಲಿ ತಮ್ಮ ಸ್ತ್ರೀಪರ ವಿಚಾರಗಳನ್ನು ದಾಖಲಿಸುತ್ತಾರೆ.

ಜಾತೀಯ ವಿಚಾರಗಳಿಗೆ ಅಸ್ಪೃಶ್ಯತೆಯ ನಿರ್ಮೂಲನೆಯ ಅಗತ್ಯತೆಯನ್ನು ಪ್ರತಿಪಾದಿಸುವ ಅ.ನ.ಕೃರವರಿಗಿಂತ ಭಿನ್ನವಾಗಿ ನಿರಂಜನರು ದಕ್ಷಿಣ ಆಫ್ರಿಕಾದಲ್ಲಿರುವ ವರ್ಣಭೇದ ನೀತಿಗೆ ಸಂಬಂಧಿಸಿದಂತೆ 'ಪುಷ್ಪಹಾರ' ಕೃತಿಯ 'ದೇವರ ದೃಷ್ಟಿಯಲ್ಲಿ ಸಮಾನರಾದ ಮಕ್ಕಳು' ಎಂಬ ಪತ್ರದಲ್ಲಿ ಬ್ರಿಟಿಷ್ ಸಾಮ್ರಾಜ್ಯವು ಕೆನ್ಯಾದಲ್ಲಿ ನರಬೇಟೆಯು ನಡೆಯುತ್ತಿರುವುದು ಕೂಡಾ ಶೋಷಣೆಯ ಭಾಗವಾಗಿದೆ. ನೈರೋಬಿಯಲ್ಲಿ ಕರಿ ಬಿಳಿಯರ ನಡುವೆ ನಡೆದ ಪ್ರೇಮದ ಕಥೆಯ ಹಿನ್ನಲೆಯಲ್ಲಿ ಐರೋಪ್ಯ ಹೀಲಿ ಉಪಾಧ್ಯಾಯನಾಗಿದ್ದ ಆತನು ಆಫ್ರಿಕದಲ್ಲಿನ ಜನ ಕಿಕ್‌ಯೂ ಜನಾಂಗದವರಿಗೆ ಪಾಠ ಹೇಳುವುದು. ೧೯ನೇ ವಯಸ್ಸಿನ 'ಜಾಯ್ಸ್' ಎಂಬ ಹೆಣ್ಣಿಗೆ ಮನಸೋತು ಕಿಕುಯು ಪದ್ಧತಿಗೆ ಅನುಗುಣವಾಗಿ ಅವರು ೧೯೪೯ರಲ್ಲಿ ಮದುವೆಯಾದರು. ಐರೋಪ್ಯರು ಆ ಮದುವೆಗೆ ಮನ್ನಣೆ ನೀಡಲಿಲ್ಲ. ಅಸ್ಪೃಶ್ಯರಂತೆ ನೈರೋಬಿಯಿಂದ ಏಳು ಮೈಲಿ ದೂರ ಈ ದಂಪತಿಗಳು ವಾಸಮಾಡಿದರು.

ಹೀಲಿಯನ್ನು ಉಪಾಧ್ಯಾಯ ವೃತ್ತಿಯಿಂದ ತೆಗೆಯಲಾಯಿತು. ಜೀವನ ಕಷ್ಟದಿಂದ ನಡೆಸಬೇಕಾಯಿತು. ಇವರಿಗೆ ಒಂದು ಹೆಣ್ಣು ಮಗು ಜನಿಸಿತ್ತು. ಈ ಸಂದರ್ಭದಲ್ಲಿ ಹೀಲಿಯನ್ನು ಇಂಗ್ಲೀಷರು ಬಂಧಿಸಿ 'ಮಾವ್ ಮಾವ್' ಕೈದಿಗಳ ಜೊತೆ ಸೆರೆಮನೆಯಲ್ಲಿಟ್ಟರು. ನಂತರ ಆತ ಕಿಕುಯು ಪದ್ಧತಿಯ ಬದಲು ಇನ್ನೊಮ್ಮೆ ಅಧಿಕೃತವಾಗಿ ಇಂಗ್ಲೀಷರ ರೀತಿಯಂತೆ ಮದುವೆಯಾಗಿದ್ದರಿಂದ ಇಂಗ್ಲೆಂಡಿನಲ್ಲಿ ವಾಸ ಮಾಡಲು ಅವರಿಗೆ ಅವಕಾಶ ನೀಡಿದರು.

ಅಂದರೆ ಈ ಘಟನೆಯ ಮೂಲಕ ನಿರಂಜನರವರು ಭಾರತದಲ್ಲಿ ಅಂತರ್‌ಜಾತೀಯ, ಅಂತರ್‌ಧರ್ಮಗಳ ವಿವಾಹಗಳನ್ನು ಸಮಾಜ ಹೇಗೆ ನೋಡುತ್ತದೆಯೋ ಅದೇ ರೀತಿಯಲ್ಲಿ ಯೂರೋಪ್ ಅಥವಾ ಇಂಗ್ಲೇಂಡ್‌ನಲ್ಲಿ ಬಿಳಿಯ ಹೀಲಿಯು ಕರಿಯ ಜಾಯ್ಸ್‌ಳನ್ನು ಕಿಕುಯು ಪಂಗಡದ ರೀತಿ ಮದುವೆಯಾಗುವುದನ್ನು ನಿಷೇಧಿಸುವುದು. ಸಮಾಜದಿಂದ ಅವರನ್ನು ಬಹಿಷ್ಕರಿಸುವುದು, ಕಾರಾಗೃಹದಲ್ಲಿಡುವುದು, ಆದರೆ ಬಿಳಿಯರ ರೀತಿಯಲ್ಲಿ ಮದುವೆಯಾದ ನಂತರ ಅವರಿಗೆ ಬದುಕಲು ಇಂಗ್ಲೆಂಡ್‌ನಲ್ಲಿ ಅವಕಾಶ ಕೊಡುವುದು, ಇವೆಲ್ಲಾ ಕರಿಯ ಬಿಳಿಯರ ನಡುವೆ ಇರುವ ವರ್ಣ ದ್ವೇಷದ ಹೀನ ಮುಖವನ್ನು ತೆರೆದಿಡುತ್ತದೆ. ಯೇಸುಕ್ರಿಸ್ತರ ದೃಷ್ಟಿಯಲ್ಲಿ ಎಲ್ಲಾ ಮಕ್ಕಳು ಸಮಾನರು ಎಂದು ಪ್ರತಿಪಾದಿಸುವ ಕ್ರೈಸ್ತ ಅನುಯಾಯಿಗಳಿಂದಲೇ ಗಡಿಪಾರು, ಶೋಷಣೆ, ಅವಮಾನವನ್ನು ಬಿಳಿಯ ಹೀಲಿ ಮತ್ತು ಕರಿಯ ಜಾಯ್ಸ್‌ರವರು ಅನುಭವಿಸಬೇಕಾಯಿತು. ಜಾತಿ, ವರ್ಣದ ಹೆಸರಿನಿಂದ ಜಗತ್ತಿನ ನಾನಾ ಕಡೆ ಇನ್ನೂ ಈ ರೀತಿಯ ಘಟನೆಗಳು ನಡೆಯುತ್ತಿವೆ. ಮನುಷ್ಯ ಪ್ರಾಣಿ ನಿಜವಾದ ಮನುಷ್ಯನಾಗುವ ತನಕ ಇಂತಹ ಘಟನೆಗಳು ನಡೆಯುತ್ತಲೇ ಇರುತ್ತದೆ.

ಭಾರತೀಯ ಸಂಸ್ಕೃತಿಯ ಸಾಮಾಜಿಕ ಸಮಸ್ಯೆಗಳಲ್ಲಿ ಅಸ್ಪೃಶ್ಯತೆಯು ಒಂದಾಗಿದೆ. ಅದನ್ನು ನಿರ್ಮೂಲನಾ ಮಾಡಬೇಕಾದ ರೀತಿಯನ್ನು ಅ.ನ.ಕೃರವರು ತಿಳಿಸುತ್ತಾರೆ. ನಿರಂಜನರವರು ಕಿನ್ಯಾದ ನೈರೋಬಿಯಾದಲ್ಲಿ ನಡೆದ ಒಂದು ಘಟನೆಯ ಹಿನ್ನಲೆಯಲ್ಲಿ ಕರಿಯ ಮತ್ತು ಬಿಳಿಯರ ನಡುವೆ ಇರುವ ವರ್ಣ ದ್ವೇಷದ ಹೀನ ಮುಖವನ್ನು ತೆರೆದಿಡುತ್ತಾರೆ. ಭಾರತದಲ್ಲಿನ ಅಸ್ಪೃಶ್ಯ ಸಮಸ್ಯೆಯ ಹಾಗೆ ಜಗತ್ತಿನ ನಾನಾ ಕಡೆ ವರ್ಣ ಭೇದ ನೀತಿಯು ಇಂದು ಇದೆ. ಆ ಮೂಲಕ ಮಾನವ ಸಾಮಾಜಿಕ ವ್ಯವಸ್ಥೆಯಲ್ಲಿ ಇದರಿಂದ ಬಿಡುಗಡೆಗೊಳ್ಳಲು ನಾನಾ ಕಾನೂನು ಜಾರಿಗೆ ತಂದರು ಅವುಗಳು ಕೂಡಾ ಮತ್ತಷ್ಟು ಜಟಿಲಗೊಳ್ಳುತ್ತಿವೆ. ನಿರಂಜನರು ಹೇಳುವ ಹಾಗೆ ಎಂದು ಮನುಷ್ಯ ಪ್ರಾಣಿ ಮಾನವನಾಗುತ್ತಾನೋ ಅಂದೇ ಈ ರೀತಿಯ ಸಾಮಾಜಿಕ ಪಿಡುಗುಗಳಿಂದ ಬಿಡುಗಡೆ ಸಾಧ್ಯ.

ವರ್ಣದ್ವೇಷ ಎಂಬುದು ಯಾವ ರೀತಿಯಲ್ಲಿ ಇದೆ ಎಂಬುದಕ್ಕೆ ನಿರಂಜನರವರು ತಮ್ಮ 'ಕಾಲಕ್ಷೇಪ' ಕೃತಿಯ 'ಅಸಹ್ಯ! ಅಸಹ್ಯ!' ಎಂಬ ಲೇಖನದಲ್ಲಿ ದಕ್ಷಿಣ ಆಫ್ರಿಕಾದಲ್ಲಿರುವ ವರ್ಣಭೇದ ನೀತಿಯು ಕರಿಯರು ಮತ್ತು ಬಿಳಿಯರ ನಡುವಿನ ತಾರತಮ್ಯವು ಇಂದೂ ಕೂಡ ಬೆಳೆದುಬಂದಿದೆ. ಬಿಳಿಯ ವರ್ಣದ ಇಂಗ್ಲೆಂಡ್‌ನ ಮಂತ್ರಿಯಾಗಿದ್ದ ಸ್ಟಾಫರ್ಡ್ ಕ್ರಿಪ್ಸ್‌ರ ಮಗಳು ಪೆಗ್ಗಿ ಮತ್ತು ಕರಿಯರ ನೀಗ್ರೋ, ಉತ್ತರ ಆಫ್ರಿಕಾದ ಆಷಂತಿ ಎಂಬುದೊಂದು ಪಂಗಡದ ಯುವ ಮುಖ್ಯಸ್ಥ ಅಪ್ಪಯ ನಡುವೆ ಲಂಡನ್ನಿನಲ್ಲಿ ವಿವಾಹವಾಗುತ್ತಾರೆ. ಇದನ್ನು ತಿಳಿದ ಆಫ್ರಿಕಾದ ಕೇಪ್‌ಟೌನ್‌ನಲ್ಲಿ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮಾತನಾಡಿದ ಚಾರ್ಲ್ಸ್ ಸ್ಟುವರ್ಟ್ ಎಂಬ ದಕ್ಷಿಣ ಆಫ್ರಿಕಾದ ನ್ಯಾಯಮೂರ್ತಿ ಆ ವಿವಾಹವು ಅಸಹ್ಯವೆಂದು ಟೀಕಿಸಿದನು. ಒಂದು ವೇಳೆ ದಕ್ಷಿಣ ಅಮೇರಿಕದಲ್ಲೋ, ದಕ್ಷಿಣ ಆಫ್ರಿಕಾದಲ್ಲಿ ಈ ವಿವಾಹವೇನಾದರೂ ನಡೆದಿದ್ದರೆ ವಧೂವರರು ಜೀವಂತವಾಗಿ ಉಳಿಯುತ್ತಿದ್ದರೋ ಇಲ್ಲವೋ ಎಂದು

ನಿರಂಜನರವರು ವರ್ಣ ತಾರತಮ್ಯದಿಂದಾಗಿ ಕರಿಯರು ಮತ್ತು ಬಿಳಿಯರು ಪರಸ್ಪರ ಪ್ರೀತಿಸಿ ಮದುವೆಯಾಗಲು ಯಾವುದೇ ಕಾರಣಕ್ಕೂ ಬಿಡುತ್ತಿರಲಿಲ್ಲ ಎಂಬುದಾಗಿ ಚರ್ಚಿಸುತ್ತಾರೆ.

ದಕ್ಷಿಣ ಆಫ್ರಿಕಾದ ಕುಸ್ತಿಪಟು ಜೆಕ್‌ಟೂಲಿ ಇಂಗ್ಲೆಂಡ್‌ಗೆ ಪ್ರವಾಸಕ್ಕೆ ಹೋಗಿ ಹಿಂತಿರುಗಿದಾಗ ಆ ದೇಶದ ಭಾಂದವರು ಜೋಹನ್ಸ್‌ಬರ್ಗ್‌ನಲ್ಲಿ ಸ್ವಾಗತ ಸಮಾರಂಭಕ್ಕೆ ಸಿದ್ಧತೆ ಮಾಡಿದರು. ಇದನ್ನು ತಿಳಿದ ಬಿಳಿಯ ಅಧಿಕಾರಿಗಳು ಆ ಸ್ವಾಗತ ಸಿದ್ಧತೆಗಳನ್ನು ರದ್ದುಗೊಳಿಸಿದರು. ಅದು ಆತ ಕರಿಯ ಎಂಬ ಕಾರಣಕ್ಕೆ ಸ್ವಾಗತಿಸುವುದು, ಆ ಮೂಲಕ ಗೌರವಿಸುವುದನ್ನು ಬಿಳಿಯರು ಸಹಿಸುವುದಿಲ್ಲ. ಇದೇ ನೀಗ್ರೋ ಮಹಿಳೆಯರಿಗೆ ಹಣ ಕೊಟ್ಟು ನೀಗ್ರೋ ವೇಶ್ಯೆರೊಡನೆ ಬಿಳಿಯರು ಕಾಲಕಳೆಯುತ್ತಾರೆ. ಆಗ ಅವರಲ್ಲಿ ವರ್ಣ ತಾರತಮ್ಯ ಕಾಣಲಾಗದೆಂದು ವಿಶ್ಲೇಷಿಸುತ್ತಾರೆ.

ನಿರಂಜನರವರು ಮುಂದುವರಿದು ಇವೆಲ್ಲಾ ವರ್ಣದ್ವೇಷವೆಂದು ತಿಳಿದರೆ ತಪ್ಪಾಗುತ್ತದೆ. ಇದರ ಹಿಂದೆ ಇರುವುದು ಸುಲಿಗೆಯ ತತ್ವವೆಂದು, ಆಫ್ರಿಕಾದಲ್ಲಿ ನೆಲೆಸಿರುವ ಬಿಳಿಯರು ಭೂಮಾಲೀಕರು ಅಥವಾ ತೋಟದ ಹಾಗೂ ಗಣಿಗಳ ಒಡೆಯರಾದವರು, ಕರಿಯರು ಅವರ ಕೆಳಗೆ ದುಡಿಯುವವರು ಬಿಳಿಯರ ಮನೋಭಾವವೆಂದರೆ ಅವರೆಲ್ಲಾ ತಮಗೆ ಬಾಗಿ ನಡೆಯಬೇಕೆಂಬ ಮನಃಸ್ಥಿತಿ, ಕರಿಯರಿಗೆ ವಿದ್ಯಾಭ್ಯಾಸದ ಅವಕಾಶಗಳನ್ನು ನಿರಾಕರಿಸಲಾಗಿದೆ. ಏಕೆಂದರೆ ಶಿಕ್ಷಣ ದೊರೆತು ಎಲ್ಲಿ ತಮ್ಮ ವಿರುದ್ಧವಾಗಿ ನಿಲ್ಲುತ್ತಾರೆ ಎಂಬ ಭಾವನೆಯಿಂದ, ಬಿಳಿಯರ ಹೆಣವನ್ನು ಕರಿಯರು ಮುಟ್ಟಬಾರದೆಂದು, ಬಿಳಿಯರ ವಸತಿಗಳಿಗಿಂತ ದೂರವಾಗಿ ಕರಿಯರು ಇರಬೇಕು. ಕರಿಯರು ವಾಸಿಸುವ ಪ್ರದೇಶದಲ್ಲಿ ಮೂರು–ನಾಲ್ಕು ಕೊಠಡಿಗಳ ಮನೆಗಳಿವೆ. ಆ ಮನೆಯಲ್ಲಿ ಹತ್ತರಿಂದ ಇಪ್ಪತ್ತರ ತನಕ ಕರಿಯರು ವಾಸಮಾಡಬೇಕು. ಅವರ ಮನೆಗಳಿಗೆ ಯಾವುದೇ ವಿದ್ಯುತ್ ದೀಪದ ನೀರಿನ ಸೌಲಭ್ಯವನ್ನು ನೀಡಲಾಗಿಲ್ಲ. ಜೊತೆಗೆ ಕರಿಯರೇ ತಮ್ಮ ಖರ್ಚಿನಲ್ಲಿ ಮನೆಯನ್ನು ಸುಧಾರಣೆ ಮಾಡುವಂತಿಲ್ಲ. ಹೀಗೆ ಬಿಳಿಯರು ಕರಿಯರನ್ನು ದಕ್ಷಿಣ ಆಫ್ರಿಕಾದಲ್ಲಿ ವರ್ಣ ತಾರತಮ್ಯದ ಮೂಲಕ ಶೋಷಿಸುತ್ತಾರೆಂದು ನಿರಂಜನರು ಚರ್ಚಿಸುತ್ತಾರೆ.

ಕೊನೆ ಟಿಪ್ಪಣಿಗಳು

೧. ನಿರಂಜನ, ಕಾಲಕ್ಷೇಪ, ಪುಟ ೧೨೬.

೨. ನಿರಂಜನ, ಅಂಕಣ, ಪುಟ ೬೭.

೩. ಅದೇ, ಪುಟ ೩೭೯.

೪. ವೈಕುಂಠರಾಜು ಬಿ. ವಿ., ಸಾಹಿತ್ಯ ಸಂವಾದ, ಪುಟ ೩೪.

೫. ನಿರಂಜನ, ಪುಷ್ಪಹಾರ, ಪುಟ ೨೭೫.

೬. ನಿರಂಜನ, ದಿನಚರಿಯಿಂದ, ಪುಟ ೬೪.

೭. ನಿರಂಜನ, ಅಂಕಣ, ಪುಟ ೨೨೪.

೮. ಮೂರ್ತಿ ಡಿ. ವಿ. ಕೆ., ಜೀವನ ಮೌಲ್ಯಗಳು ಮತ್ತು ಸಾಹಿತ್ಯ, ಪುಟ ೩೯.

೯. ಅ. ನ. ಕೃ., ಸಾಹಿತ್ಯ ಮತ್ತು ಜೀವನ, ಪುಟ ೭೧.

೧೦. ಅ. ನ. ಕೃ. ಸಾಹಿತ್ಯ ಮತ್ತು ಕಾಮಪ್ರಚೋದನೆ, ಪುಟ ೧೨೦.

೧೧. ಅದೇ, ಪುಟ ೧೨೧.

೧೨. ಅದೇ, ಪುಟ ೧೫೯.

೧೩. ನಿರಂಜನ, ಕಾಲಕ್ಷೇಪ, ಪುಟ ೮೭.

೧೪. ನಿರಂಜನ, ಪುಷ್ಪಹಾರ, ಪುಟ ೯೨.

ಅಧ್ಯಾಯ ೬

ಅ. ನ. ಕೃ. ಮತ್ತು ನಿರಂಜನ ಅವರ ವಿಚಾರ ಸಾಹಿತ್ಯದಲ್ಲಿ ಕಲೆ, ಸಂಸ್ಕೃತಿ ಹಾಗೂ ನಾಡು ನುಡಿ ಚಿಂತನೆಗಳು

ಸಂಸ್ಕೃತಿಯ ಅವಿಭಾಜ್ಯ ಅಂಗಗಳಲ್ಲಿ ಕಲೆಗಳು ಕೂಡಾ ಸೇರಿವೆ. ಒಂದು ಸಂಸ್ಕೃತಿಯ ಶ್ರೀಮಂತ ಪರಂಪರೆಯಲ್ಲಿ ಕಲೆಯು ಬಹಳ ಮಹತ್ವದ ಪಾತ್ರವನ್ನು ವಹಿಸಿದೆ. ಸಂಸ್ಕೃತಿಯೊಂದಿಗೆ ಕಲೆಗಳು ಬೆಳೆದುಕೊಂಡು ಬಂದಿವೆ. ಕಲೆಗಳಿಲ್ಲದ ಸಂಸ್ಕೃತಿಯನ್ನು ಗುರುತಿಸಲು ಸಾಧ್ಯವಿಲ್ಲ. ಸಮಾಜದ ಸಾಂಸ್ಕೃತಿಕ ಪರಂಪರೆಗೆ ಕಲೆಗಳು ತಮ್ಮದೇಯಾದ ರೀತಿಯಲ್ಲಿ ಕಾಣಿಕೆಯನ್ನು ನೀಡಿವೆ. ಅದರಂತೆ ಸಾಹಿತ್ಯ ಕೃತಿಗಳಲ್ಲಿ ಕಲೆ ಮತ್ತು ಸಂಸ್ಕೃತಿಯನ್ನು ಕುರಿತಂತೆ ಕಾಣಬಹುದು. ಪ್ರತಿಯೊಂದು ಸಂಸ್ಕೃತಿಯ ಪ್ರತೀಕವಾಗಿ ಕಲೆಗಳನ್ನು ನಾವು ನೋಡಬಹುದು.

ಸೃಜನಶೀಲ ಸಾಹಿತ್ಯವಿರಬಹುದು, ಸೃಜನೇತರ ಸಾಹಿತ್ಯವಿರಬಹುದು, ಕಲೆ ಮತ್ತು ಸಂಸ್ಕೃತಿಯ ವಿಚಾರಗಳನ್ನು ಸಾಹಿತ್ಯದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸಾಹಿತಿಯು ಅಥವಾ ಬರಹಗಾರ ಪ್ರಸ್ತಾಪಿಸಿರುತ್ತಾನೆ. ಪ್ರಗತಿಶೀಲ ಕಾಲಘಟ್ಟದ ಪ್ರಮುಖ ಲೇಖಕರಾದ ಅ. ನ. ಕೃ. ಮತ್ತು ನಿರಂಜನ ಅವರು ತಮ್ಮ ವಿಚಾರ ಸಾಹಿತ್ಯದಲ್ಲಿ ಕಲೆ ಮತ್ತು ಸಂಸ್ಕೃತಿ ಹಾಗೂ ನಾಡು ನುಡಿಗಳನ್ನು ಕುರಿತಂತೆ ಅನೇಕ ವಿಚಾರಗಳನ್ನು ಚರ್ಚಿಸಿದ್ದಾರೆ. ಅ. ನ. ಕೃ. ಅವರು ಕನ್ನಡ ಭಾಷೆ, ಕನ್ನಡ ನಾಡು ಮೊದಲಾದ ವಿಚಾರಗಳಲ್ಲಿ ಹೆಚ್ಚು ಆಸಕ್ತಿ ಹೊಂದಿದವರಾಗಿದ್ದು ಅವರ ಅನೇಕ ಬರವಣಿಗೆಗಳಲ್ಲಿ ಈ ವಿಚಾರಗಳು ಪ್ರತಿಪಾದಿಸಲ್ಪಟ್ಟಿವೆ. ಕನ್ನಡ ನಾಡು ನುಡಿಗಾಗಿ ಹೋರಾಟ ಮಾಡಿರುವ ನಿದರ್ಶನಗಳು ಕೂಡಾ ಇವೆ. ಭಾರತೀಯ ಸಂಸ್ಕೃತಿ ಮತ್ತು ಕನ್ನಡ ಸಂಸ್ಕೃತಿಯ ಮೇಲೆ ಅಪಾರವಾದ ಅಭಿಮಾನವನ್ನು ಅ. ನ. ಕೃ. ಅವರು ಹೊಂದಿದ್ದರು. ನಿರಂಜನರವರು ಕಮ್ಯುನಿಸ್ಟ್ ಚಿಂತನೆಗಳಿಗೆ ಮಾರು ಹೋಗಿದ್ದರು. ಕಲೆ ಮತ್ತು ಸಂಸ್ಕೃತಿ, ನಾಡು ನುಡಿ ವಿಚಾರಗಳಿಗೆ ಸಂಬಂಧಿಸಿದಂತೆ ತಮ್ಮ ವಿಚಾರ ಸಾಹಿತ್ಯದಲ್ಲೂ ಅನೇಕ ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ.

ಈ ಅಧ್ಯಾಯದಲ್ಲಿ ಅ. ನ. ಕೃ. ಮತ್ತು ನಿರಂಜನ ಅವರ ವಿಚಾರ ಸಾಹಿತ್ಯದಲ್ಲಿ ಕಲೆ ಮತ್ತು ಸಂಸ್ಕೃತಿ ಹಾಗೂ ನಾಡು ನುಡಿ ಚಿಂತನೆಗಳಿಗೆ ಸಂಬಂಧಿಸಿದಂತೆ ಸಾಮ್ಯತೆ ಇದೆಯೇ ಅಥವಾ ಭಿನ್ನತೆಗಳೇನಾದರೂ ಇವೆಯೇ? ಎಂಬುದನ್ನು ಚರ್ಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಅಧ್ಯಾಯಕ್ಕೆ ಪೂರಕವಾಗುವಂತೆ ಎರಡು ಉಪ ಶೀರ್ಷಿಕೆಗಳನ್ನು ತೆಗೆದುಕೊಳ್ಳಲಾಗಿದೆ.

- ಕಲೆ ಮತ್ತು ಸಂಸ್ಕೃತಿ ಕುರಿತ ಚಿಂತನೆಗಳು

- ಕನ್ನಡ ನಾಡು ನುಡಿ ವಿಚಾರಗಳು

೬.೧ ಕಲೆ ಮತ್ತು ಸಂಸ್ಕೃತಿ ಕುರಿತ ಚಿಂತನೆಗಳು

ಭಾರತೀಯ ಸಂಸ್ಕೃತಿಯ ಪ್ರತೀಕವಾಗಿ ಕಲೆಗಳಿವೆ. ನಾಟಕ, ಸಂಗೀತ, ನೃತ್ಯ, ಚಿತ್ರಕಲೆ, ವಾಸ್ತುಶಿಲ್ಪ ಎಲ್ಲವನ್ನು ಇವು ಒಳಗೊಂಡಿವೆ. ಭಾರತೀಯ ಸಂಸ್ಕೃತಿಯ ಪರಂಪರೆಯೊಂದಿಗೆ ಕಲೆಗಳು ಬೆಳೆದು ಬಂದಿವೆ. ಇದನ್ನು ಅ.ನ.ಕೃ ಮತ್ತು ನಿರಂಜನರವರು ತಮ್ಮ ವಿಚಾರ ಸಾಹಿತ್ಯದಲ್ಲಿ ಹೇಗೆ ನೋಡಿದ್ದಾರೆ. ಆ ವಿಚಾರ ಸಾಹಿತ್ಯದಲ್ಲಿ ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಸಾಮ್ಯತೆಯಿದೆಯೇ ಅಥವಾ ಭಿನ್ನತೆಗಳೇನಾದರು ಇದೆಯೇ ಎಂಬುದನ್ನು ಇಲ್ಲಿ ಚರ್ಚಿಸಲಾಗುವುದು.

ಅ.ನ.ಕೃ.ರವರು ಭಾರತದಲ್ಲಿ ಕಲೆಯೆಂಬುದು ಧರ್ಮದ ತಳಹದಿಯ ಮೇಲೆ ಬೆಳೆದು ಬಂದಿದೆ. ಅದು ಜನಜೀವನದ ಮೇಲೆ ಪ್ರಭಾವವನ್ನು ಬೀರಿದೆ. ಕಲೆ ಮತ್ತು ಸಾಹಿತ್ಯಗಳು ಯಾವುದೇ ರೀತಿಯ ಸಂಕುಚಿತ ಚೌಕಟ್ಟಿಗೆ ಒಳಗಾಗದೆ ಜಾತಿ, ಧರ್ಮ, ಪಂಥ, ಕೋಮು, ಭಾಷೆ ಮತ್ತು ಪ್ರಾಂತ್ಯಗಳ ಇತಿಮಿತಿಗಳಿಂದ ಕಲುಷಿತಗೊಳ್ಳದೆ ಪರಂಪರೆಯೊಂದಿಗೆ ಬಂದಂತಹ ಆಧ್ಯಾತ್ಮಿಕ ಶಕ್ತಿಯಿಂದ ಕಲೆಗಳು ಬೆಳೆದು ಬಂದಿವೆ ಎಂಬುದಾಗಿ ವಿವರಿಸಿರುತ್ತಾರೆ.

ಸಂಸ್ಕೃತಿಯೆಂದರೆ ಸಾಮಾನ್ಯವಾಗಿ ಒಂದು ಜನ ಸಮುದಾಯದ ಒಟ್ಟು ಜೀವನ ಮೊತ್ತವೆನ್ನ ಬಹುದು. ಸಂಸ್ಕೃತಿ ಎಂಬುದಕ್ಕೆ ನಿರ್ದಿಷ್ಟವಾದ ಅರ್ಥವನ್ನು ತಿಳಿಸಲು ಸಾಧ್ಯವಿಲ್ಲ. ಹಾಗಾಗಿ ಅ.ನ.ಕೃ. ರವರು 'ಸಂಸ್ಕೃತಿಯೆಂದರೇನು'? ಎಂಬ ಪ್ರಬಂಧದಲ್ಲಿ ಸಂಸ್ಕೃತಿಯಲ್ಲಿ ಎರಡು ರೀತಿಗಳಿವೆ. ಅದರಲ್ಲಿ ಪ್ರಾಪಂಚಿಕ ಭೋಗವನ್ನು ಸಂಸ್ಕೃತಿ ಎಂದು ಭಾವಿಸುವ ಒಂದು ವರ್ಗ, ಪಾರಾಮಾರ್ಥಿಕ ಪ್ರಗತಿಯನ್ನು ಸಂಸ್ಕೃತಿಯೆಂದು ಭಾವಿಸುವ ಮತ್ತೊಂದು ವರ್ಗವಿದೆ. ಭಾರತೀಯ ಸಂಸ್ಕೃತಿಯು ಎರಡನೇ ವರ್ಗವನ್ನು ಪ್ರತಿನಿಧಿಸುತ್ತದೆ. ಭಾರತದಲ್ಲಿ ಇತರ ಪ್ರಾಂತ್ಯಗಳಲ್ಲಿಯೂ ಪರಂಪರಾಗತವಾದ ಒಂದು ಸಾಂಸ್ಕೃತಿಕ ಇತಿಹಾಸವಿದ್ದು, ಬೇರೆ ಬೇರೆ ಪ್ರಾಂತ್ಯಗಳಲ್ಲಿ ಸೇವೆ ಸಲ್ಲಿಸಿದ ಸಾರ ಸರ್ವಸ್ವವನ್ನೇ ಭಾರತೀಯ ಸಂಸ್ಕೃತಿಯೆಂದು ವಿಶ್ಲೇಷಿಸುತ್ತಾರೆ.

ದೇಶದಲ್ಲಿರುವ ರಾಜಕಾರಣ ಮತ್ತು ಸಂಸ್ಕೃತಿಯು ಒಂದಕ್ಕೊಂದು ಬೆಸೆದುಕೊಂಡಿದೆ. ಕನ್ನಡ ನಾಡಿನ ಅನೇಕ ರಾಜ ಮನೆತನಗಳು ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ಕಾಣಿಕೆ ನೀಡಿದ್ದು, ಅದು ಇಂದಿಗೂ ಚಿರಸ್ಥಾಯಿಯಾಗಿದೆ. ಅದನ್ನು ಹಂಪೆ, ಬಾದಾಮಿ, ಐಹೊಳೆ, ಪಟ್ಟದಕಲ್ಲು ಮೊದಲಾದ ಕಡೆ ಕಾಣಬಹುದು. ಸಂಸ್ಕೃತಿಯನ್ನು ದೇಶವಾಚಕವಾಗಿ ಮತ ಧರ್ಮಗಳ ಸೂಚಕವಾಗಿ ಗುರುತಿಸಬಹುದು. ಪಾಶ್ಚಾತ್ಯರು ಪ್ರಾಪಂಚಿಕ ಜೀವನದ ಭೋಗವನ್ನು ಸಂಸ್ಕೃತಿಯೆಂದು ಪರಿಭಾವಿಸುದಕ್ಕಿಂತ, ಭಾರತೀಯರ ಪಾರಾಮಾರ್ಥಿಕ ಪ್ರಗತಿಯನ್ನು ಸಂಸ್ಕೃತಿಯೆಂದು ಭಾವಿಸುವ ರೀತಿ ಉತ್ತಮವಾದದಾಗಿದೆ. ಪ್ರಾಪಂಚಿಕ ಭೋಗವನ್ನು ಬಯಸಿದ ಕಾರಣದಿಂದಲೇ ಜಗತ್ತಿನಲ್ಲಿ ಎರಡು ಮಹಾ ಯುದ್ಧಗಳು ನಡೆದವು. ಈ ಪ್ರವೃತ್ತಿಯ ಸಂಸ್ಕೃತಿಯ ಪರಿಹಾರಕ್ಕೆ ಭಾರತೀಯ ಸಂಸ್ಕೃತಿಯ ಪಾರಾಮಾರ್ಥಿಕ ಪ್ರಗತಿಯು ಅವಶ್ಯಕವೆಂದು ಭಾರತೀಯ ಸಂಸ್ಕೃತಿಯ ಪ್ರತಿಪಾದಕರಾಗಿ ಜಗತ್ತಿನ ಹಲವು ಸಮಸ್ಯೆಗಳಿಗೆ ಭಾರತೀಯ ಸಂಸ್ಕೃತಿಯಿಂದ ಮಾತ್ರ ಪರಿಹಾರವನ್ನು ಕಾಣಬಹುದೆಂಬ ನಿಲುವನ್ನು ತಿಳಿಸುತ್ತಾರೆ.

ಧರ್ಮಕ್ಕೆ ಸಾಮರಸ್ಯ ಮೂಡಿಸುವ ಶಕ್ತಿಯಿದೆಯೆಂದರೆ ನಮಗೆ ಬೇಕು, ವಿರಸ ಮೂಡಿಸುವ ರಾಕ್ಷಸಿ ಶಕ್ತಿಯಾದಲ್ಲಿ ಅದರ ಸಂಪರ್ಕವು ಬೇಡ. ಕಲೆಗಳ ಮೇಲೆ ಧರ್ಮ ಪ್ರಭಾವಿಸಿದರೂ

ಭಾರತೀಯ ಕಲೆಗಳು ಯಾವುದೇ ಜಾತಿ, ಮತ, ಪಂಥ ಭಾಷೆಗಳಿಂದ ಕಲುಷಿತಗೊಂಡಿಲ್ಲವಾದುದರಿಂದ ಇವುಗಳ ನೆರವಿನಿಂದ ಜನತೆಯಲ್ಲಿ ಸೌಹಾರ್ದತೆ, ಸಹಿಷ್ಣುತೆ, ಪ್ರೇಮಗಳನ್ನು ಬೆಳೆಸಬಹುದು. ಆದರೆ ಮತಗಳಿಂದ ಇದು ಸಾಧ್ಯವಾಗುವುದಿಲ್ಲವೆಂದು ವಿಶ್ಲೇಷಿಸುತ್ತಾರೆ. ಆ ಮೂಲಕ ಕಲೆಗಳಿಗೆ ಜನತೆಯನ್ನು ಒಗ್ಗೂಡಿಸುವ. ಸೌಹಾರ್ದತೆಯನ್ನು ಮೂಡಿಸುವ ಶಕ್ತಿಯಿದೆ ಎಂಬುದನ್ನು ಅ.ನ.ಕೃ.ರವರು ಸಜೀವ ಸಾಹಿತ್ಯ ಕೃತಿಯ 'ಸಂಸ್ಕೃತಿಯೆಂದರೇನು' ಎಂಬ ಪ್ರಬಂಧದಲ್ಲಿ ಚರ್ಚಿಸುತ್ತಾರೆ.

ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ತಿಳಿಸುವ ಅ.ನ.ಕೃ.ರವರು ಹೊರಗಿನ ವಿಚಾರಧಾರೆಗಳನ್ನು ಭಾರತೀಯ ಸಂಸ್ಕೃತಿ ಸ್ವೀಕರಿಸಿದರೂ ಅದು ತನ್ನತನವನ್ನು ಬಿಟ್ಟುಕೊಟ್ಟಿಲ್ಲ. ಇಹಕ್ಕಿಂತ ಪರಕ್ಕೆ ಹೆಚ್ಚಾಗಿ ಆದ್ಯತೆಯನ್ನು ನೀಡಿರುವುದು ಮಾತ್ರವಲ್ಲದೇ ಭಾರತೀಯ ಸಂಸ್ಕೃತಿಯು ಎಂದೂ ಆಗಿ ಹೋದ ಕತೆಯಲ್ಲ ಅದು ಇಂದಿಗೂ ಜನ ಜೀವನದಲ್ಲಿ ಬೆರೆತಿದೆ. ಹಲವು ಪ್ರಕಾರಗಳಲ್ಲಿ, ವಿಧಗಳಲ್ಲಿ ಬೆಳೆದಿದ್ದರು ಒಂದು ಏಕತೆಯೊಂದಿಗೆ ಸಮಷ್ಟಿಯತೆಯನ್ನು ತಿಳಿಸುತ್ತದೆ ಎಂದು ವಿವರಿಸುತ್ತಾರೆ.

ನಿರಂಜನರವರು ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದಂತೆ ಹಿಮಾಲಯದ ದಳ್ಳುರಿ ಎಂಬ ರಾಜಕೀಯ ದಾಖಲೆಯಲ್ಲಿ ಏಷ್ಯಾ ಖಂಡದ ಪ್ರಬಲ ರಾಷ್ಟ್ರಗಳಲ್ಲಿ ಒಂದಾದ ಭಾರತವು ಅತ್ಯಂತ ಪ್ರಾಚೀನ ಸಂಸ್ಕೃತಿಯಲ್ಲಿ ಹಿರಿದಾದ ಸ್ಥಾನವನ್ನು ಹೊಂದಿದೆ. ಐದು ಸಾವಿರ ವರ್ಷಗಳ ಹಿಂದೆಯೇ ಉತ್ತಮ ನಾಗರಿಕ ಸಮಾಜವನ್ನು ನಿರ್ಮಾಣ ಮಾಡಿಕೊಂಡಿದ್ದು ಸತ್ಯ, ಅಹಿಂಸೆ, ಮಾನವೀಯತೆ, ದಯೆ, ಶಾಂತಿ ಮೊದಲಾದ ಉದಾತ್ತ ಗುಣಗಳನ್ನು ಸಾಧಿಸಿದವರಾಗಿದ್ದಾರೆ. ಬುದ್ಧ, ಮಹಾವೀರ ಮೊದಲಾದವರು ಈ ನಾಡಿನಲ್ಲಿ ಜನಿಸಿ ವಿಶ್ವಕ್ಕೆ ಶಾಂತಿಯ ಮಂತ್ರವನ್ನು ಬೋಧಿಸಿದರು, ಪ್ರಜೆಗಳ ಕಲ್ಯಾಣದಲ್ಲಿ ರಾಜನ ಕಲ್ಯಾಣವಿದೆ ಎಂಬ ಸ್ಥಿತಿಯನ್ನು ಇಲ್ಲಿನ ಅರಸರು ರೂಢಿಸಿಕೊಂಡಿದ್ದರು. ಪರಮತ ಸಹಿಷ್ಣುತೆ ಎಂಬುದು ಈ ದೇಶದ ಮೂಲ ಮಂತ್ರವಾಗಿದೆ. ಕ್ರಿಸ್ತೋದಯಕ್ಕೆ ಮುನ್ನವೇ ತಕ್ಷಶಿಲಾ, ನಳಂದಾ ಮೊದಲಾದ ವಿಶ್ವವಿದ್ಯಾಲಯಗಳಿದ್ದು ಬೇರೆ ಬೇರೆ ದೇಶಗಳಿಂದ ಇಲ್ಲಿ ಶಿಕ್ಷಣ ಪಡೆಯಲು ಬರುತ್ತಿದ್ದರು. ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳು ಮೊದಲೇ ಬೆಳವಣಿಗೆಗೊಂಡಿದ್ದವು.

ನಿರಂಜನರವರ ಕಾಲಕ್ಷೇಪ ಕೃತಿಯ 'ಭಾರತೀಯ ಸಂಸ್ಕೃತಿ' ಎಂಬ ಲೇಖನದಲ್ಲಿ ಹಲವಾರು ಸಂಸ್ಕೃತಿಗಳ ದಬ್ಬಾಳಿಕೆಗೆ ಒಳಗಾಗಿದ್ದರೂ ಭಾರತೀಯ ಸಂಸ್ಕೃತಿ ಉಳಿದುಕೊಂಡು ಬಂದಿದೆ. ಭಾರತೀಯ ಸಂಸ್ಕೃತಿಯ ಗುಣಗಳಲ್ಲಿ ಬಹಳ ಮುಖ್ಯವಾದ ಗುಣ ಪರಮತ ಸಹಿಷ್ಣುತೆ ಎಂಬುದಾಗಿದೆ. ಅಮೇರಿಕಾದಲ್ಲಿ ಪರಮತ ಸಹಿಷ್ಣುತೆ ಎಂಬುದಿಲ್ಲ. ಅಲ್ಲಿ ಪೂರ್ವಾಗ್ರಹ ಪೀಡಿತವಾದ ಚಾರ್ಲಿ ಚಾಪ್ಲಿನ್ನ ವಿಚಾರವನ್ನು ಉದಾಹರಣೆಯಾಗಿ ನೀಡಿ, ಆತ ಕಮ್ಯುನಿಸ್ಟ್ ಎಂದು ಸಂಶಯ ಮೂಡಿ ಅಮೇರಿಕಾದಲ್ಲಿ ಅವನನ್ನು ಹೊರ ಹಾಕಲು ಯತ್ನಿಸುತ್ತಿದ್ದ ಸಂದರ್ಭ, ಅದೇ ಸಮಯದಲ್ಲಿ ಭಾರತದ ಪ್ರಧಾನಿಯಾಗಿದ್ದ ಜವಾಹರ್‌ಲಾಲ್ ನೆಹರೂರವರು ಸ್ವಿಟ್ಸರ್‌ಲ್ಯಾಂಡ್‌ನಲ್ಲಿ ಬ್ರಿಟನ್ ರಾಣಿಗೆ ಕಿರೀಟ ಪ್ರದಾನವಾದಾಗ ಅಲ್ಲಿ ಉಳಿದುಕೊಂಡಿದ್ದರು. ಒರ್ಗನ್ ಸ್ಟಾಕಿನಲ್ಲಿ ಚಾರ್ಲಿ ಚಾಪ್ಲಿನ್ ನೆಹರೂರವರನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಭಾರತದಲ್ಲಿ ನೆಹರೂರವರು ಕಮ್ಯುನಿಷ್ಟರು ಎಂದರೆ ಹುರಿದು ಬೀಳುವರು. ಅದೇ ಸಮಯದಲ್ಲಿ ಚಾರ್ಲಿ ಚಾಪ್ಲಿನ್‌ನನ್ನು

ಅಮೇರಿಕಾದಿಂದ ಈತ ಕಮ್ಯುನಿಸ್ಟನೆಂದು ಗಡಿಪಾರು ಮಾಡಲಾಗಿತ್ತು. ಅಮೇರಿಕಾದ ದೃಷ್ಟಿಯಿಂದ ಆತ ಅಪಾಯಕಾರಿ ವ್ಯಕ್ತಿಯಾಗಿದ್ದರು, ಚಾಪ್ಲಿನ್ ನೀಡಿದ ಔತಣಕೂಟಕ್ಕೆ ನೆಹರೂ ಹೋಗಿದ್ದರು. ನೆಹರೂರವರು ಅಮೇರಿಕಾದ ಯಾವುದೇ ದುರಾಗ್ರಹಕ್ಕೆ ಒಳಗಾಗಲಿಲ್ಲ. ಏಕೆಂದರೆ ಭಾರತೀಯತ್ವ ಎಂಬುದು ಹೃದಯದಿಂದ ತಿಳಿಯುವುದು. ಭಾರತೀಯತ್ವ ಎಂಬುದು ಇಲ್ಲಿನ ಪ್ರಜೆಗಳಲ್ಲಿ ಹೃದಯದಲ್ಲಿ ಅಡಗಿರುತ್ತದೆ ಎಂದು ಪ್ರತಿಪಾದಿಸುತ್ತಾರೆ.

ನಿರಂಜನರವರ ಐದು ನಿಮಿಷ ಕೃತಿಯ 'ಮೈಸೂರು ಸರಕಾರದ ಸಂಸ್ಕೃತಿ ಪ್ರಚಾರ' ಎಂಬ ಲೇಖನದಲ್ಲಿ ಕರ್ನಾಟಕದ ಮುಖ್ಯಮಂತ್ರಿಯಾದ ಕೆಂಗಲ್ ಹನುಮಂತಯ್ಯನವರು, ವಿದ್ಯಾಸಚಿವರಾದ ರಾಮಚಂದ್ರ ರಾಯರು ಜನರಲ್ಲಿ ನೀತಿ. ನಿಷ್ಠೆ, ದೈವಭಕ್ತಿ, ಧರ್ಮಶ್ರದ್ಧೆ, ಸದ್ಗುಣಗಳು ಬೆಳೆಯಲು ಪ್ರಾಚೀನ ಕೃತಿಗಳು ಸಹಾಯವಾಗುತ್ತದೆ ಎಂದು ಅವುಗಳನ್ನು ಪ್ರಕಟಿಸುವ ಮೂಲಕ ಸಂಸ್ಕೃತಿಯ ಪ್ರಸಾರವು ನಡೆಯುತ್ತದೆ ಇದರಿಂದ ಜನರಲ್ಲಿ ಸನ್ಮಾರ್ಗ ಮೂಡಿ ದೇಶ ಉನ್ನತಿಯನ್ನು ಸಾಧಿಸುತ್ತದೆ. ಸಂಸ್ಕೃತಿಯ ಉಳಿವಿನಲ್ಲಿ ಪ್ರಾಚೀನ ಕೃತಿಗಳು ಸಹಾಯಕವಾಗುತ್ತವೆ ಎಂಬ ನಿಲುವಿಗೆ ಸಂಬಂಧಿಸಿದಂತೆ ಇದರಲ್ಲಿ ಒಬ್ಬರು ನೀತಿ ಭೋದನೆಯ ಪ್ರಚಾರಕರು ಎಂದು ತಿಳಿದುಕೊಂಡಿದ್ದರೆ, ಮತ್ತೊಬ್ಬರ ಆಸ್ತಿಕತೆಯ ಪ್ರಚಾರವೆಂದು ತಿಳಿದುಕೊಂಡಿದ್ದಾರೆ ಎಂಬುದಾಗಿ ಸಂಸ್ಕೃತಿಯನ್ನು ಕುರಿತಂತೆ ತಮ್ಮದೇಯಾದ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ.

ಒಂದು ಕಾಲಘಟ್ಟದ ಸಾಮಾಜಿಕ, ರಾಜಕೀಯ, ಆರ್ಥಿಕ ಸಂಬಂಧಗಳಿಗೆ ಅನುಗುಣವಾಗಿ ಸಂಸ್ಕೃತಿಯ ಬದಲಾವಣೆಗೊಳ್ಳುತ್ತದೆ. ಒಮ್ಮೊಮ್ಮೆ ಒಂದು ಸಂಸ್ಕೃತಿಯ ಗರ್ಭದಲ್ಲಿಯೇ ನ್ಯಾಯವಾದ ಉತ್ತರಾಧಿಕಾರಿಯಾದ ಇನ್ನೊಂದು ಸಂಸ್ಕೃತಿ ಹುಟ್ಟುತ್ತದೆ. ಸಾಮಾಜಿಕ ಸಾಂಸ್ಕತಿಕ ವಿಚಾರಗಳು ಪ್ರಭಾವಕ್ಕೆ ಸಿಲುಕಿ ಸಮಾಜವು ಕೂಡಾ ಪ್ರಭಾವಕ್ಕೆ ಒಳಗಾಗುತ್ತದೆ. ಸಂಸ್ಕೃತಿ ಮತ್ತು ಸಮಾಜಕ್ಕೆ ನಿಕಟವಾದ ಒಂದು ಸಂಬಂಧವಿದ್ದು ಅದು ಸಂಸ್ಕೃತಿಯ ಮೇಲೆ ಪ್ರಭಾವಿಸುತ್ತಲೇ ಇರುತ್ತದೆ ಎಂದು ವಿಶ್ಲೇಷಿಸುತ್ತಾರೆ.

ಸಂಸ್ಕೃತಿಯೆಂಬುದು ಹೀಗೆ ಇರಬೇಕೆಂದು ತಿಳಿಯುವುದು ತಪ್ಪು. ಪ್ರಾಚೀನ ಸಾಹಿತ್ಯ ಕೃತಿಗಳ ಪರಿಚಯ ಮಾಡುವುದು ಒಳ್ಳೆಯದು, ಅದು ಹಳ್ಳಿಗಳಿಗೆ ಮಾತ್ರ ಸೀಮಿತವಾಗದೇ ನಗರಗಳಿಗೂ ಸಾಗಬೇಕು. ಮೊದಲಿಗೆ ಹಸಿದವನಿಗೆ ಅನ್ನವನ್ನು, ರೈತನಿಗೆ ತನ್ನ ಹೊಲ ದುಡಿಮೆಗೆ ಸಂಬಂಧಿಸಿದಂತೆ ಅವನಿಗೆ ಒಂದಿಷ್ಟು ನೆಮ್ಮದಿ ಇದ್ದರೆ ಮಾತ್ರ ಆತ ಸಂಸ್ಕೃತಿಯ ವಿಷಯದಲ್ಲಿ ತಲೆ ಹಾಕುತ್ತಾನೆ. ಇಲ್ಲವಾದರೆ ಇಲ್ಲವೆಂದು, ಮನುಷ್ಯನಿಗೆ ಮೊದಲಿಗೆ ಆಹಾರ, ಬಟ್ಟೆ, ವಸತಿಗಳು ಮುಖ್ಯವೆಂದು ನಂತರ ಸಂಸ್ಕೃತಿಯೆಂದು ತಿಳಿಸುತ್ತಾರೆ.

ಅ.ನ.ಕೃ. ಸಂಸ್ಕೃತಿಯೆಂದರೇನು ಎಂಬುದಕ್ಕೆ ಪಾರಾಮಾರ್ಥಿಕ ಪ್ರಗತಿಯನ್ನು ಸಾಧಿಸುವುದು ಭಾರತೀಯ ಸಂಸ್ಕೃತಿಯಾಗಿದೆ. ಇದರಿಂದ ವಿಶ್ವದ ಹಲವು ಸಮಸ್ಯೆಗಳನ್ನು ಪರಿಹರಿಸಬಹುದೆಂದು ತಿಳಿಸುತ್ತಾರೆ. ನಿರಂಜನರವರು ಮನುಷ್ಯನಿಗೆ ಮೊದಲು ತನ್ನ ಮೂಲಭೂತ ಅವಶ್ಯಗಳಾದ ಆಹಾರ, ಬಟ್ಟೆ, ವಸತಿ, ದುಡಿಮೆ ಮೊದಲಾದವುಗಳ ಸಮಸ್ಯೆಗೆ ಪರಿಹಾರ ದೊರಕಿದರೆ ನಂತರ ಸಂಸ್ಕೃತಿಯ ವಿಚಾರಗಳಿಗೆ ತನ್ನ ಮನಸ್ಸಿನಲ್ಲಿ ಗಮನ ಕೊಡುತ್ತಾರೆ. ಮೊದಲಿಗೆ ಮನುಷ್ಯನ ವೈಯುಕ್ತಿಕ ಸಮಸ್ಯೆಗಳಿಗೆ ಪರಿಹಾರ ದೊರಕಬೇಕು ನಂತರ ಸಂಸ್ಕೃತಿ, ಸಾಹಿತ್ಯ, ಕಲೆ, ಸಂಗೀತ ಅವುಗಳಿಗೆ ಆದ್ಯತೆ

ಇಲ್ಲವಾದರೆ ಇಲ್ಲವೆಂಬ ಧ್ವನಿ ನಿರಂಜನರವರ ಲೇಖನದಲ್ಲಿ ಅಡಗಿದೆ. ಆ ಮೂಲಕ ಸಂಸ್ಕೃತಿಗೆ ಸಂಬಂಧಿಸಿದಂತೆ ಭಿನ್ನವಾದ ದೃಷ್ಟಿಕೋನವನ್ನು ಇಬ್ಬರು ನೀಡುತ್ತಾರೆ.

ಅ.ನ.ಕೃ.ರವರು ಕರ್ನಾಟಕ ಹಿತಚಿಂತನೆ ಎಂಬ ಕೃತಿಯಲ್ಲಿ 'ಕಲೆಯ ಗುರಿ' ಪ್ರಬಂಧದಲ್ಲಿ ಲಲಿತ ಕಲೆಗಳಲ್ಲಿರುವ ದೇಶದ ಪ್ರಮುಖ ಐತಿಹಾಸಿಕ ಸ್ಥಳಗಳಾದ ಅಜಂತಾ, ಎಲ್ಲೋರ, ಐಹೊಳೆ, ಬಾದಾಮಿ ಮೊದಲಾದ ಕಡೆ ನಮ್ಮ ಜನರ ಪ್ರಕೃತಿ ಪ್ರೇಮ, ಧರ್ಮ ಶ್ರದ್ಧೆಗೆ ಇವುಗಳು ಸಾಕ್ಷಿಯಾಗಿವೆ. ಕಲೆಯ ಗುರಿ ಎಂಬುವುದು ಸೌಂದರ್ಯ ಅನುಭವ ನೀಡುವುದು ಮಾತ್ರವಲ್ಲದೆ ಜ್ಞಾನೋದಯಕ್ಕೆ ಅವಶ್ಯಕವಾದ ಸಾಧನವಾಗಿದೆ. 'ಕಲೆಗಾಗಿ ಕಲೆ' ಎಂಬ ತತ್ವವನ್ನು ಪ್ರತಿಪಾದಿಸಿದವರು ಕಲಾವಿದರು ಕಲೆ ದೈವದತ್ತವಾದುದು, ಅದು ಕೆಲವರ ಸೊತ್ತು ಎಂಬ ತತ್ವದಿಂದಾಗಿ ಜನಸಾಮಾನ್ಯರಲ್ಲಿದ್ದ ಕಲೆಯ ಬಗ್ಗೆ ಆಸಕ್ತಿಯು ಕಡಿಮೆಯಾಯಿತು. 'ಕಲೆಗಾಗಿ ಕಲೆ' ಎಂಬ ತತ್ವವನ್ನು ಪ್ರತಿಪಾದಿಸಿದ ಕಲಾವಿದರು ಕಲೆಯ ಹೆಸರಿನಲ್ಲಿ ಜನತೆಯಿಂದ ದೂರವಾದರು. ಫ್ರೆಂಚ್‌ನಲ್ಲಿ ಕೋತಿಗಳ ಚೆಲ್ಲಾಟ. ಆನೆಗಳ ನೀರಾಟ, ಗೊಲ್ಲತಿ ಬಟ್ಟೆ ಹೊತ್ತು ನಡೆದಿರುವುದು, ಹಳ್ಳಿಯ ಹೆಣ್ಣು ಮಗಳು ಹೊಲದಲ್ಲಿ ಕೆಲಸ ಮಾಡುತ್ತಿರುವುದು ಮೊದಲಾದವುಗಳ ರೀತಿಯಲ್ಲಿ ನಿತ್ಯ ಜೀವನದ ಚಿತ್ರಗಳು ಇವೆ. ಅಜಂತದಲ್ಲಿಯು ಎಲ್ಲಾ ವರ್ಗದ ಚಿತ್ರಗಳಿದ್ದು ಅವು ಕೂಡ ಜನತೆಗಾಗಿ ಬರೆದ ಕಲೆಯೇ ಆಗಿವೆ. ಆಯಾಯ ಕಾಲಘಟ್ಟದ ಸಾಮಾನ್ಯ ಜನರ ಜೀವನವನ್ನು ವಸ್ತು ನಿಷ್ಠವಾಗಿ ಚಿತ್ರಿಸುವುದೇ ಕಲೆಯಾಗಿದೆ. ಕಲೆಯನ್ನು ಮತ್ತು ಕಲೆಯ ಗುರಿಯನ್ನು ಅದು ಜನತೆಯಿಂದ ದೂರವಾಗಲು ಕಾರಣವಾದ 'ಕಲೆಗಾಗಿ ಕಲೆ' ಎಂಬ ತತ್ವದ ಹಿನ್ನಲೆಯಲ್ಲಿ ವಿಶ್ಲೇಷಿಸುತ್ತಾರೆ.

ಸಾಹಿತ್ಯ ಸಮಾರಾಧನೆಯ ಕೃತಿಯ 'ಕಲೆಯಲ್ಲಿ ಹೂ ಬಳ್ಳಿ' ಎಂಬ ಲೇಖನದಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ಕಲೆಯನ್ನು ಮತ್ತು ಕಲೆಯಲ್ಲಿ ಹೂಗಳನ್ನು ಹೇಗೆ ಬಳಸಿಕೊಂಡಿದ್ದಾರೆ ಎಂಬುವುದಕ್ಕೆ ಭಾರತೀಯರಲ್ಲಿ ಮಲ್ಲಿಕಾ, ಚಂಪಕಾ, ಓಕುಳ, ಕೇತಕಿ, ಇರುವಂತಿ, ಪದ್ಮ ಮೊದಲಾದ ಹೂಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ಪದ್ಮಪುಷ್ಪಕ್ಕೆ ವಿಶಿಷ್ಠ ಸ್ಥಾನವಿದೆ. ಸೃಷ್ಟಿಯ ಅಸ್ತಿ ಭಾರ ಪದ್ಮಪುಷ್ಪವಾಗಿದೆ. ವೇದಗಳ ಕಾಲದಲ್ಲಿಯೇ ಪರಿಶುದ್ಧತೆ, ತೇಜಸ್ಸು, ಬೆಳಕುಗಳ ಸಂಕೇತವಾಗಿ, ಲಕ್ಷ್ಮಿಗೂ ಪದ್ಮಕ್ಕೂ ಸಂಬಂಧವಿದೆ. ಹಾಗೆಯೇ ಬೌದ್ಧ ಯುಗದಲ್ಲಿ ಪದ್ಮ ಹೂವಿಗೆ ಪರಿಶುದ್ಧತೆಯ ಸಂಕೇತವಿದೆ. ಇದೆ ಹಿನ್ನೆಲೆಯಲ್ಲಿ ಭಾರತೀಯ ಕಲಾವಿದರು ಭಾರತೀಯ ದೇವತಾರಾಧನೆಯ ಸಂಕೇತವಾಗಿ ಕಲೆಯಲ್ಲಿ ಹೂವನ್ನು ನೋಡಿದರು. ಆದರೆ ಭಾರತೀಯರ ಜೀವನಕ್ಕೆ ಮೊಘಲರ ಸಂಪರ್ಕದಿಂದಾಗಿ ಕಲೆಯಲ್ಲಿ ಹೂ ಬಳ್ಳಿ ಮೊದಲಾದವುಗಳನ್ನು ಚಿತ್ರಿಸಲು ಸಾಧ್ಯವಾಯಿತು. ಆಧುನಿಕ ಕಲಾವಿದರ ಚಿತ್ರಗಳಲ್ಲಿಯೂ ಹೂ ಬಳ್ಳಿ ಚಿತ್ರಿಸಿರುವುದಕ್ಕೆ ನಂದಾಲಾಲ ಬಸುರವರು ಕಲೆಯಲ್ಲಿ ಸಂಪ್ರದಾಯ ಬದ್ಧತೆ ಕಂಡರೆ, ಮನೀಷಿಡೆಯವರ ಚಿತ್ರಗಳಲ್ಲಿ ಸಂಪ್ರದಾಯತೀತತೆ ಕಾಣಬಹುದು. ನಂದಲಾಲರ ಚಿತ್ರದಲ್ಲಿ ಬಡವನ ಗುಡಿಸಲು ಚಿತ್ರಿಸುವಾಗ ಬಡತನಕ್ಕೆ ಪ್ರಾಧಾನ್ಯತೆ ಕೊಡುವುದು, ಆತನ ಗುಡಿಸಲು ಸುತ್ತಲು ಇರುವ ಹೂ ಬಳ್ಳಿಗಳು ಆತನ ಬಡತನದ ಸಂಕೇತವಾಗಿಯೇ ಚಿತ್ರಿತವಾಗುತ್ತದೆ. ಆದರೆ ಮನೀಷಿಡೆಯವರಲ್ಲಿ ಜೀವನ ದೃಷ್ಟಿ ಕಾಣಬಹುದು. ಬಡವನ ಗುಡಿಸಲಿನಲ್ಲಿ ಸುತ್ತ ಬೆಳೆಯುವ ಚೆಂಡು ಹೂವಾಗಲೀ, ಕಣಿಗಲೇ ಹೂವಾಗಲಿ, ತೇಜಃಪುಂಜವಾಗಿ ಇರುತ್ತದೆ. ಅನ್ನಕ್ಕೆ, ಬಡತನಕ್ಕೆ ಅಭಾವವಿರಬಹುದು ಆದರೆ ಭಾವಕ್ಕೆ ಬಡತನವಿಲ್ಲ ಎಂಬ ದೃಷ್ಟಿಯಲ್ಲಿ ವಿಶ್ಲೇಷಿಸುತ್ತಾರೆ.

ಸಂಸ್ಕೃತಿ ಮತ್ತು ಕಲೆಗೆ ಸಂಬಂಧಿಸಿದಂತೆ ಅ.ನ.ಕೃ.ರವರ ವಿಚಾರಗಳಲ್ಲಿ ಸಂಪ್ರದಾಯತೆ ಕಾಣಬಹುದು. ನಿರಂಜನರವರ ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಅವರ ವಿಚಾರಗಳಲ್ಲಿ ಸಂಪ್ರದಾಯ ಬದ್ಧತೆಯಿದ್ದರು ಅವರ ವೈಚಾರಿಕ ಬರಹಗಳಲ್ಲಿ ಜೀವನ ದೃಷ್ಟಿಯನ್ನು ವ್ಯಕ್ತಪಡಿಸುತ್ತಾರೆ. ಅ.ನ.ಕೃ ಸಾಂಪ್ರದಾಯಿಕ ಚೌಕಟ್ಟಿನಲ್ಲಿಯೇ ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದರೆ, ನಿರಂಜನರವರು ಅವುಗಳು ಜೀವನಕ್ಕೆ ಎಷ್ಟು ಅವಶ್ಯಕವಾದುದು ಎಂಬುದನ್ನು ವಿಶ್ಲೇಷಿಸುತ್ತಾರೆ. ಈ ಹಿನ್ನಲೆಯಲ್ಲಿ ಅವರ ಈ ಕೆಳಕಂಡ ಆಂಶಗಳ ಹಿನ್ನಲೆಯಲ್ಲಿ ಮತ್ತಷ್ಟು ಗ್ರಹಿಸಬಹುದು.

'ಭಾರತೀಯ ಸಂಸ್ಕೃತಿಯಲ್ಲಿ ಶ್ರೀ ಕೃಷ್ಣನ ಪಾತ್ರ' ಎಂಬ ಲೇಖನದಲ್ಲಿ ಅ.ನ.ಕೃ.ರವರು ಈ ನಾಡಿನ ಸಂಸ್ಕೃತಿಯ ನಿತ್ಯ ಜೀವನದಲ್ಲಿ ಕಲೆ, ಸಾಹಿತ್ಯ, ಜ್ಞಾನ, ಭಕ್ತಿ, ವೈರಾಗ್ಯ ಪಡೆದು ಭಾರತದ ಹಿರಿಮೆಯನ್ನು ಹೆಚ್ಚಿಸಿದವರಲ್ಲಿ ರಾಮ ಮತ್ತು ಕೃಷ್ಣರು ಮುಖ್ಯರು. ಕನ್ನಡ ಕವಿಗಳು ಕೂಡಾ ಕೃಷ್ಣನ ಪಾತ್ರ ಮತ್ತು ವ್ಯಕ್ತಿತ್ವವನ್ನು, ಮಧ್ಯಕಾಲೀನ ಚಿತ್ರಕಲೆಯ ಮೇಲೆ ಗೀತಾಗೋವಿಂದ ಪ್ರಭಾವ, ರಜಪೂತ ಸಂಪ್ರದಾಯದ ಅಭಿಸಾರಿಕೆ, ಕೊಳಲು ಕೃಷ್ಣ, ಕೃಷ್ಣಲೀಲೆ, ಗೋಪಾಲ, ಕಾಳೀಯ ಮರ್ದನ, ಪಾಕಶಾಲೆಯಲ್ಲಿ ರಾಧೆ, ಕೃಷ್ಣ ಸುಧಾಮ ಮೊದಲಾದ ಚಿತ್ರಗಳನ್ನು ಪರಿಚಯಾತ್ಮಕವಾಗಿ ವಿವರಿಸಿ ಭಾರತೀಯ ಸಂಸ್ಕೃತಿಯಲ್ಲಿ ಶ್ರೀ ಕೃಷ್ಣನ ಪಾತ್ರವು ಕಲೆ, ಸಾಹಿತ್ಯ, ಚಿತ್ರಕಲೆ ವಾಸ್ತುಶಿಲ್ಪ ಮೊದಲಾದವುಗಳಲ್ಲಿ ಪ್ರಭಾವಿಸಿದೆ ಎಂಬುದನ್ನು ವಿವರಿಸುತ್ತಾರೆ.

ಸಜೀವ ಸಾಹಿತ್ಯ ಎಂಬ ಕೃತಿಯ 'ಸಂಸ್ಕೃತಿ ಮತ್ತು ಲಲಿತ ಕಲೆಗಳು' ಎಂಬ ಪ್ರಬಂಧದಲ್ಲಿ ಭಾರತದಲ್ಲಿ ಲಲಿತ ಕಲೆಗಳ ಮೇಲೆ ಆಧ್ಯಾತ್ಮ ಎಂಬುದು ಹೆಚ್ಚು ಪ್ರಭಾವಿಸಿದೆ. ಗ್ರೀಕರ ಲಲಿತ ಕಲೆಗಳು ಸಾಮಾಜಿಕ, ರಾಜಕೀಯ ಜೀವನದ ಪ್ರತಿಬಿಂಬವಾಗಿದ್ದರೆ, ನಮ್ಮಲ್ಲಿ ಭಾರತೀಯ ಸಮ್ಯಕ್ ಜೀವನದ ಪ್ರತಿಬಿಂಬವಾಗಿದೆ. ಭಾರತೀಯರಲ್ಲಿ ಜೀವನ ವಿಕಾಸವಾದಂತೆ ಲಲಿತ ಕಲೆಗಳು ಕೂಡಾ ವಿಕಸನಗೊಂಡಿದೆ. ಅಭಿಜಾತ ಕಲೆಗೂ ಜಾನಪದ ಕಲೆಗೂ ಯುರೋಪ್‌ನಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಪಾಶ್ಚಾತ್ಯರು ಪ್ರಕೃತಿಯ ಪ್ರತಿಕೃತಿ ಹಾಗೂ ಸಮಕಾಲೀನ ಪರಿಸ್ಥಿತಿಯ ಪ್ರತಿಬಿಂಬವಾಗಿ ಕಲೆಯನ್ನು ನೋಡಿದರೆ, ಭಾರತೀಯರ ಜೀವನವನ್ನು ಹಸನು ಮಾಡುವುದಕ್ಕೆ ಕಲಾವಿದರು ಪ್ರಯತ್ನಿಸಿದರು. ಪಾಶ್ಚಾತ್ಯ ಮತ್ತು ಭಾರತೀಯರ ದೃಷ್ಟಿಕೋನವನ್ನು ಲಲಿತ ಕಲೆಗಳಲ್ಲಿ ನೋಡುವ ಮೂಲಕ ಯುರೋಪ್‌ನ ಲಲಿತ ಕಲೆಗಳಿಗಿಂತ ಭಾರತೀಯ ಲಲಿತ ಕಲೆಗಳು ಜನತೆಯ ಪರವಾಗಿ, ಜನತೆಯ ಬದುಕನ್ನು ಹಸನು ಮಾಡುವುದಕ್ಕಾಗಿ ಇತ್ತು ಎಂಬುದಾಗಿ ಅ.ನ.ಕೃ.ರವರು ಗ್ರಹಿಸುತ್ತಾರೆ. ಭಾರತದಲ್ಲಿ ವೈದಿಕ, ಜೈನ, ಬೌದ್ಧರ ಶಿಲ್ಪಗಳು ಜೀವನದ ಭವ್ಯತೆಯ ಆರಾಧನೆಯ ಮೇಲೆ ಇದೆ. ಭಾರತೀಯ ಲಲಿತ ಕಲೆಗಳು ಮಾರ್ಗ ಮತ್ತು ದೇಶಿ ಎಂಬ ಎರಡು ರೀತಿಯಲ್ಲಿ ಬೆಳೆದರು ಅದರ ಮೂಲತತ್ವ ಆಧ್ಯಾತ್ಮಿಕವಾಗಿದೆ. ಕನ್ನಡ ಸಾಹಿತ್ಯದಲ್ಲಿ ಇರುವಂತೆ ಮಾರ್ಗ, ದೇಶಿಯ ಎಂಬ ಪದ್ಧತಿಗಳು ಲಲಿತ ಕಲೆಗಳಲ್ಲೂ ಇದೆ ಎಂಬುದಾಗಿ ಗ್ರಹಿಸುತ್ತಾರೆ.

ಮಧ್ಯಕಾಲೀನದಲ್ಲಿ ಹೊರಗಿನ ಪ್ರಭಾವಕ್ಕೆ ತಾತ್ಕಾಲಿಕವಾಗಿ ಮನಸೋತ ಭಾರತೀಯ ಸಂಸ್ಕೃತಿ ತನ್ನ ಸ್ವಾಮ್ಯವನ್ನು ಮತ್ತೆ ಸ್ಥಾಪಿಸಿರುವುದನ್ನು ಕಾಣಬಹುದು. ದಕ್ಷಿಣ ಭಾರತದ ಲಲಿತ ಕಲೆಗಳ ಮೇಲೆ ಮುಸ್ಲಿಂ ಸಂಸ್ಕೃತಿ ಪ್ರಭಾವ ಬೀರದೆ ಇರಲು ಇಲ್ಲಿ ಸುಧೀರ್ಘವಾದ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯು ಕಾರಣವಾಗಿದೆ. ಭಾರತೀಯ ಸಂಸ್ಕೃತಿ ದಕ್ಷಿಣ ಭಾರತದಲ್ಲಿ ಲಲಿತ ಕಲೆಗಳಲ್ಲಿ ಉಳಿಯಲು ವಿಜಯನಗರ ಸಾಮ್ರಾಜ್ಯದ ಹಿನ್ನಲೆಯಲ್ಲಿ ಪ್ರತಿಪಾದಿಸುತ್ತಾರೆ. ಮುಂದೆ ಬ್ರಿಟಿಷರು

ಭಾರತಕ್ಕೆ ಬಂದ ನಂತರ ಲಲಿತ ಕಲೆಗಳಲ್ಲಿ ಅನೇಕ ಬದಲಾವಣೆಗಳಾಯಿತು. ರಜಪೂತ ಸಂಪ್ರದಾಯವು ಬುಡಕಟ್ಟಿಗೆ ಸೇರಿದ ಚಿತ್ರಕಲೆಯು 'ಜಯಪುರಂ ಕಲಂ' ಆದದ್ದು, ಹಳ್ಳಿಗಳಿಗೆ ಸೇರಿ 'ಪಹರಿ ಕಲಂ' ಆಗಿದೆ. ಈ ರೀತಿಯ ಬದಲಾವಣೆಗಳು ದೇಶದ ಲಲಿತ ಕಲೆಗಳ ಮೇಲೆ ಬ್ರಿಟಿಷರು ಭಾರತಕ್ಕೆ ಬಂದ ನಂತರ ಬದಲಾವಣೆಗಳಾಗಲು ಕಾರಣವಾದ ಅಂಶವನ್ನು ಅ.ನ.ಕೃ ತಿಳಿಸುತ್ತಾರೆ.

ಭಾರತೀಯ ಲಲಿತ ಕಲೆಗಳು ಆಧ್ಯಾತ್ಮಕ್ಕೆ ಹೆಚ್ಚು ಒಲವು ನೀಡಿವೆ. ಇಹ ಜೀವನವನ್ನು ರಾಗ ದ್ವೇಷಗಳಿಂದ ಬಿಡುಗಡೆ ಮಾಡುವುದು ಇದರ ಉದ್ದೇಶಗಳಲ್ಲಿ ಒಂದಾಗಿದೆ. ಭಾರತೀಯ ಲಲಿತಕಲೆಗಳು ಯಾವುದೇ ವರ್ಗ ಜಾತಿ, ಮತ, ರಾಷ್ಟ್ರಗಳ ಸೊತ್ತಾಗದೆ ಲೋಕ ಕಲ್ಯಾಣವನ್ನೇ ಪ್ರತಿಪಾದಿಸುವುದು ಎಂದು ಭಾರತೀಯ ಲಲಿತ ಕಲೆಗಳನ್ನು ಭಾರತೀಯ ಸಂಸ್ಕೃತಿಯ ಹಿನ್ನಲೆಯಲ್ಲಿ ಸಂಸ್ಕೃತಿಯ ಪ್ರತಿಪಾದಕರಾಗಿ ಅ.ನ.ಕೃ. ನೋಡುತ್ತಾರೆ.

ನಿರಂಜನರವರು ಕಲೆ ಮತ್ತು ಸಂಸ್ಕೃತಿಯನ್ನು ಅವರ ವೈಚಾರಿಕ ಬರಹಗಳಲ್ಲಿ ಸಂಪ್ರಾದಾಯತೆ ಕಾಣದಿದ್ದರು, ಜೀವನ ದೃಷ್ಟಿಯ ಹಿನ್ನಲೆಯಲ್ಲಿ ಕೋಲಾರದ ಹತ್ತಿರ ಒಂದು ಪುಟ್ಟ ಹಳ್ಳಿ ಶಿವಾರಪಟ್ಟಣ ಇದನ್ನು ಗಂಗರ ಅರಸ ಎರಡನೇ ಶಿವಮಾರ ಕಟ್ಟಿದ ಊರಾಗಿದೆ. ಅಲ್ಲಿನ ಶಿಲ್ಪಿಗಳು ದೇವಾನುದೇವತೆಗಳನ್ನು ಭಕ್ತಿಯಿಂದಲೇ ಕೆತ್ತುತ್ತಾರೆ. ಆದರೆ ಅದನ್ನು ಕಲಾವಿದ ದುಡಿಮೆಗಾಗಿ ಆ ಶಿಲ್ಪವನ್ನು ದಲ್ಲಾಳಿಗಳು ಬಂದು ಚಿಲ್ಲರೆ ಹಣ ಕೊಟ್ಟು ಹೋಗುತ್ತಾರೆ. ದಲ್ಲಾಳಿಯು ಹಳ್ಳಿಯಿಂದ ತೆಗೆದುಕೊಂಡು ಹೋಗಿ ಬೇರೆ ಬೇರೆ ಕಡೆ ಮಾರಾಟ ಮಾಡುವರು. ಕೆಲವೊಮ್ಮೆ ಆ ಶಿಲ್ಪಗಳು ವಿದೇಶಗಳಿಗೂ ಹೋಗಬಹುದು. ಅದರೆ ಅದನ್ನು ಕೆತ್ತಿದ್ದ ತಿಪ್ಪಣ್ಣಾಚಾರಿ ವಿದೇಶಕ್ಕೆ ಹೋಗುವ ಅವಕಾಶವೇ ಸಿಗುವುದಿಲ್ಲ. ಶಿವಾರಪಟ್ಟಣ ಕಲ್ಲಿನ ಶಿಲ್ಪಿಯ ಬದುಕು ಕತ್ತಲೆಯಲ್ಲಿಯೇ ಕಳೆದು ಹೋಗುತ್ತದೆ. ಅವರು ಸಹಕಾರ ಸಂಘ ಸ್ಥಾಪಿಸಿಕೊಂಡಿದ್ದರೂ ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ತನ್ನ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಬೇಕು ಎಂದುಕೊಂಡಿದ್ದರು ಅದು ಸಾಧ್ಯವಾಗದೆ ಹೋಗಬಹುದು. ಶಿಲ್ಪದಲ್ಲಿ ಸಾಂಪ್ರದಾಯಿಕ ಶಿಲ್ಪ ಶಾಸ್ತ್ರ ಅಧ್ಯಯನ ಮಾಡದೆ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕಲಿಯುವುದು ಅಗತ್ಯವೆಂದು ಶಿಲ್ಪಿ ಮನಗಂಡಿದ್ದಾನೆ. ಅಖಿಲ ಭಾರತ ಕುಶಲ ಕಲೆಗಳ ಮಂಡಲದ ಪ್ರಾದೇಶಿಕ ನಕ್ಷಾ ಕೇಂದ್ರ ಶಿವಾರಪಟ್ಟಣದ ಶಿಲ್ಪ ಕಲೆಯನ್ನು ಬೆಳೆಸಲು ಕಾರ್ಯ ಪ್ರವೃತ್ತವಾಗಿದೆ. ಆದರೆ ಮೊದಲಿನ ಗಂಗರ ಅರಸ ಕಟ್ಟಿದ ಶಿವಮಾರ ಪಟ್ಟಣವಾಗದು ಎಂಬ ನಿಲುವು 'ಶಿವಾರ ಪಟ್ಟಣದ ಶಿಲ್ಪಿ' ಎಂಬ ರಾಜಧಾನಿಯಿಂದ ಕೃತಿಯಲ್ಲಿ ತಿಳಿಸುತ್ತಾರೆ. ಆ ಮಾತಿನಲ್ಲಿ ವಾಸ್ತುಶಿಲ್ಪ, ಶಿಲ್ಪ ಕಲೆಗೆ ಅರಸರ ಕಾಲದಲ್ಲಿ ದೊರೆತ ಪ್ರೋತ್ಸಾಹ, ಬೆಳವಣಿಗೆಗೆ ಪೂರಕವಾದ ವಾತಾವರಣ ಇಂದು ಪ್ರಜಾಪ್ರಭುತ್ವ ರಾಷ್ಟ್ರದ ಸರಕಾರದಲ್ಲಿ ಕಾಣಲಾಗುತ್ತಿಲ್ಲ. ಹಾಗೂ ಆ ಶಿಲ್ಪಿಗಳ ಬದುಕು ಉತ್ತಮಗೊಳ್ಳುತ್ತಿಲ್ಲವೆಂಬ ವಿಚಾರವನ್ನು ಪರೋಕ್ಷವಾಗಿ ಧ್ವನಿಸುತ್ತದೆ.

ಕಲೆಗೆ ಭಾಷೆಯೆಂಬುದು ಇಲ್ಲ, ಪೂರ್ವ ಪಶ್ಚಿಮ, ಪಾಶ್ಚಾತ್ಯ ಮತ್ತು ಪೌರತ್ಯ ಎಂಬ ಭೇದ ಭಾವವಿಲ್ಲವೆಂದು, ಕಲೆಯೆಂಬುದು ವರ್ಗ, ಜಾತಿ, ಮತ ಯಾವುದೇ ಪಂಗಡಕ್ಕೆ ಸೀಮಿತವಾದು ದಲ್ಲವೆಂಬುದಕ್ಕೆ ನಿರಂಜನರವರು ಅಮೇರಿಕಾದ ಇಪ್ಪತ್ತೊಂದರ ತರುಣ ಖ್ಯಾತ ನರ್ತಕ ಬಾಲ ಸರಸ್ವತಿಯವರ ಕೃಷ್ಣಾ ನೀ ಬೇಗನೆ ಬಾರೋ ನೃತ್ಯಕ್ಕೆ ಮನಸೋತ ಜಾನ್ ಬಿ. ಹಿಗ್ಗಿನ್ಸ್ ಭಾರತಕ್ಕೆ ಬಂದು ಭಾರತೀಯ ಸಂಸ್ಕಾರವನ್ನು ನೋಡಿ ಇಲ್ಲಿನ ಕರ್ನಾಟಕ ಸಂಗೀತವನ್ನು ಕಲಿತು, ಭಾರತೀಯ ಸಂಗೀತಗಾರನು ನಾಚಿಕೆ ಪಡುವಂಥ ತನ್ನ ಪಾಂಡಿತ್ಯವನ್ನು ಮೆರೆದವನು. ಈತನ ಸಾಧನೆಯಿಂದ

ಪಶ್ಚಿಮ ಪಶ್ಚಿಮವೇ, ಪೂರ್ವ ಪೂರ್ವವೇ ಎಂದವರು ಯಾರು? ಎಂದು ಪ್ರಶ್ನಿಸುತ್ತಾರೆ. ಕಲೆಯ ಲೋಕದಲ್ಲಿ ಅಂಥದಕ್ಕೆ ಆಸ್ಪದವಿಲ್ಲ, ಕಲೆಯೇ ಮುಖ್ಯ ಉಳಿದಲ್ಲೆವು ಕೂಡ ಅಮುಖ್ಯವಾಗಿರುತ್ತದೆ ಎಂಬುದನ್ನು 'ಹಿಗ್ಗಿನ್ಸ್ ಭಾಗವತರ್' ಎಂಬ ಅಂಕಣದಲ್ಲಿ ತಿಳಿಸುತ್ತಾರೆ.

ಸಂಗೀತ ನೃತ್ಯಗಳು ಭಾವೈಕ್ಯತೆಯನ್ನು ಬೆಳೆಸುವ ಸಾಧನಗಳಾಗಿವೆ. ಮಣಿಪುರಿ ನೃತ್ಯವನ್ನು ಕನ್ನಡ ನಾಡಿಗೆ ಅಸ್ಸಾಂನ ಕಲಾವಿದರ ತಂಡವೊಂದು ಬಂದಿದ್ದು, ಮಣಿಪುರಿ ಮತ್ತು ಕನ್ನಡ ಭಾಷೆಗೆ ಒಂದಕ್ಕೊಂದು ಸಂಬಂಧವಿಲ್ಲದಿದ್ದರೂ ಅವರು ನೃತ್ಯದ ಮೂಲಕ ಮನಸ್ಸನ್ನು ಸೆರೆ ಹಿಡಿಯುವಂತದ್ದಾಗಿದೆ. ಕೃಷ್ಣನ ಬಾಲ್ಯ ಲೀಲಾದ ನೃತ್ಯ ಎಲ್ಲರಿಗೂ ಮೆಚ್ಚುಗೆಯಾಗುವುದರಿಂದ ಇಂಥಹ ನೃತ್ಯಗಳಿಂದ ಸಾವಿರ ಭಾಷಣಗಳು ಮೂಡಿಸದಂಥ ಭಾವೈಕ್ಯತೆಯನ್ನು ಒಂದು ನೃತ್ಯವು ಉಂಟು ಮಾಡುತ್ತದೆ. ಇದು ಕಲೆಗೆ ಇರುವ ಸಾಮಾರ್ಥ್ಯವಾಗಿದೆ ಎಂದು ನಿರಂಜನವರು 'ಕಡಪಾ ಕಾಡಪ್ಪನಾದರು' ಎಂಬ ಲೇಖನದಲ್ಲಿ ವಿವರಿಸುತ್ತಾರೆ.

ಕಲೆಯ ಸಾಮರ್ಥ್ಯ ಎಂಬುದು ಭಾಷಣಗಳಿಂದ ಸಾಧಿಸಲಾಗದ ಆನೇಕ ರೀತಿಯ ವಿಚಾರಗಳನ್ನು ಕಲೆ, ನೃತ್ಯ, ಶಿಲ್ಪ, ವಾಸ್ತುಶಿಲ್ಪಿಗಳು ಕೂಡ ಮಾಡಿಸುತ್ತವೆ. ಕಲೆಯ ಬಗ್ಗೆ ಜನತೆಯ ದೃಷ್ಟಿ ಹೇಗೆ ಇರುತ್ತದೆ ಎಂಬುದಕ್ಕೆ 'ನಾವು ನಾಲ್ವರು' ಎಂಬ ಅಂಕಣದಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಚಿತ್ರಕಲಾ ಪ್ರದರ್ಶನಗಳನ್ನು ಆಗಿಂದಾಗ್ಗೆ ಏರ್ಪಡಿಸುವುದು, ಕಲಾವಿದನು ತನ್ನ ಕೃತಿ ಜನರಿಗೆ ಮೆಚ್ಚುಗೆಯಾಗಲಿ, ಶ್ರೀಮಂತ ಪೋಷಕರು ತನ್ನ ಕೃತಿಗಳನ್ನು ತೆಗೆದುಕೊಳ್ಳಲಿ ಎಂಬ ಧೋರಣೆ ಕೂಡ ಕಲೆಯೇ ಆಗಿದೆ. ಈ ರೀತಿಯ ಕಲಾಕೃತಿಗೆ ಬೆಲೆ ಕಟ್ಟಲು ಆಗದು, ಬೆಲೆ ಕಟ್ಟುವುದು ಮತ್ತು ಕೊಳ್ಳುವುದು ಸಾಮರ್ಥ್ಯದ ಮೇಲೆ. ವಿದೇಶಗಳಲ್ಲಿ ಈ ಚಿತ್ರಗಳು ಸಾವಿರಾರು ರೂಪಾಯಿಗಳಿಗೆ ಬೆಲೆ ಬಾಳುವುದು, ಆದರೆ ಅವರಿಗೆ ಅಲ್ಲಿಗೆ ಹೋಗಲಾಗದ ಸ್ಥಿತಿ ಉಂಟಾಗಿ ಇಲ್ಲಿಯೇ ಪ್ರದರ್ಶನ ಇಟ್ಟಿದ್ದರೆಂದು ಕಲೆಯ ಪೋಷಣೆಯ ಬೆಳವಣಿಗೆಯಲ್ಲಿ ಸಹಕರಿಸಬೇಕಾದ ಜನತೆ ಆಡುವ ಮಾತೊಂದೇ 'ನಿಮಗೆ ಒಳ್ಳೆಯದಾಗಲಿ' ಎಂದು ಸಾಧಾರಣವಾಗಿ ಹೇಳುತ್ತಾರೆ. ಇಲ್ಲಿ ಕೃತಿಗಿಂತ ಮಾತೇ ಮನ್ನಣೆ ಪಡೆದಿದೆ. ಈ ರೀತಿಯ ಜನರ ದೃಷ್ಟಿಕೋನ ಭಾರತೀಯರಲ್ಲಿದೆ.

ಲಲಿತ ಕಲೆಗಳನ್ನು ಕುರಿತಂತೆ ಅಂಕಣ ಕೃತಿಯ 'ಎಣ್ಣೆ ಸೀಗೆ ನಂಟು' ಎಂಬ ಲೇಖನದಲ್ಲಿ "ರಾಜಕಾರಣ ಹಾಗೂ ಲಲಿತ ಕಲೆಯ ಸಂಬಂಧ ಬಹಳ ಹಳೆಯದು, ಇತಿಹಾಸದ ಹಾಗೂ ವೃತ್ತಾಂತ ಕಾಲದ ವಿಶಾಲ ಪಡಸಾಲೆಯಲ್ಲಿ, ಮೊಗಸಾಲೆಯಲ್ಲಿ, ಜಗಲಿ ಉದ್ಯಾನವನಗಳಲ್ಲಿ ಇದು ಪ್ರತಿಧ್ವನಿಸುತ್ತಲೇ ಇರುತ್ತದೆ"[೧] ಎಂದು ನಿರಂಜನರವರು ಅಭಿಪ್ರಾಯಿಸುತ್ತಾರೆ. ರಾಜಕಾರಣ ಮತ್ತು ಲಲಿತ ಕಲೆಗಳ ಸಂಬಂಧವನ್ನು ಪರಿಕ್ಷೀಸಿದರೆ ಅದು ಎಣ್ಣೆ ಸೀಗೆಕಾಯಿ ಸಂಬಂಧದಂತೆ ಒಂದಕ್ಕೊಂದು ಜೊತೆಯಾಗಿದ್ದವು. ಒಂದು ಮತ್ತೊಂದಕ್ಕೆ ಕ್ರಿಯೆಯನ್ನು ನೀಡಿದರೆ, ಪ್ರತಿಕ್ರಿಯೆಗಳನ್ನು ನೀಡುತ್ತಾ ಬಂದಿವೆ. ಕೆಲವೊಮ್ಮೆ ಸಂಘರ್ಷಗಳಿಗೂ ಎಡೆಮಾಡಿಕೊಡುತ್ತದೆ ಎಂಬ ನಿಲುವನ್ನು ಪ್ರತಿಪಾದಿಸುತ್ತದೆ. ಅ.ನ.ಕೃ. ಭಾರತೀಯ ಲಲಿತ ಕಲೆಗಳು ಆಧ್ಯಾತ್ಮಕ್ಕೆ ಹೆಚ್ಚು ಗಮನ ನೀಡಿದೆ ಎಂದರೆ, ನಿರಂಜನರವರು ಇತಿಹಾಸದ ತಕ್ಕಡಿಯಿಂದ ರಾಜಕಾರಣ ಮತ್ತು ಲಲಿತ ಕಲೆಗಳ ಸಂಬಂಧದ ನಡುವಿನ ತೀಕ್ಷ್ಣ ಪ್ರತಿಕ್ರಿಯೆಗಳನ್ನು ಕುರಿತಂತೆ ಮಾರ್ಮಿಕವಾಗಿ ತಿಳಿಸುತ್ತಾರೆ.

ಭಾರತೀಯ ಸಂಸ್ಕೃತಿಯ ಭಾಗವಾಗಿಯೇ ಕರ್ನಾಟಕ ಸಂಸ್ಕೃತಿ ಇದೆ, ಸಹಭಾಳ್ವೆ ಧಾರ್ಮಿಕ ಸಹಿಷ್ಣುತೆ ಕನ್ನಡ ನಾಡಿನಲ್ಲಿಯೂ ಇದೆ. ಈ ರೀತಿಯ ಸಂಸ್ಕೃತಿಯ ಸಂವರ್ಧನೆಗಾಗಿ ರಕ್ಷಣೆ,

ಪೋಷಣೆಗಾಗಿ ರಷ್ಯಾದ ಮಾದರಿಯಲ್ಲಿ, ಅಮೇರಿಕಾದ ಮಾದರಿಯಲ್ಲಿ ಕಟ್ಟಬೇಕು ಎಂಬ ವಾದವು ಅರ್ಥವಿಲ್ಲದ್ದು, ನಮ್ಮ ಸಂಸ್ಕೃತಿಯ ಉಳಿವು-ಪೋಷಣೆ ಎಂಬುದು ಜನತೆಯ ಅಪಾರ ಬೆಂಬಲದೊಂದಿಗೆ ಸಾಧ್ಯವಾಗಬೇಕು. ಕಲೆ ಮತ್ತು ವಾಸ್ತುಶಿಲ್ಪ, ಚಿತ್ರಕಲೆ, ನಾಟಕ ಮೊದಲಾದ ಕಲಾ ಪ್ರಕಾರಗಳನ್ನು ಊರ್ಜಿತಗೊಳಿಸಬೇಕು. ಸಂಶೋಧನಾ ಕಾರ್ಯಗಳ ಮೂಲಕ ನಾಶಗೊಳಿಸುತ್ತಿರುವ ಐತಿಹಾಸಿಕ ಪಟ್ಟಣಗಳು, ಶಿಲ್ಪಗಳು ಮೊದಲಾದವುಗಳನ್ನು ಪುನರುಜ್ಜೀವನಗೊಳಿಸಬೇಕೆಂದು ಅ.ನ.ಕೃ. ತಮ್ಮ ಸಂಸ್ಕೃತಿಯೆಂದರೇನು? ಎಂಬ ಪ್ರಬಂಧದಲ್ಲಿ ಸಂಸ್ಕೃತಿಯ ರಕ್ಷಣೆಗೆ ಸಂಬಂಧಿಸಿದಂತೆ ಯಾವ ರೀತಿಯ ಕಾರ್ಯಗಳು ನಡೆಯಬೇಕು ಎಂದು ಚರ್ಚಿಸುತ್ತಾರೆ.

ಸಂಸ್ಕೃತಿಯ ವಿಚಾರಕ್ಕೆ ಸಂಬಂಧಿಸಿದಂತೆ ರಾಜಧಾನಿಯಿಂದ ಅಂಕಣಗಳ ಕೃತಿಯ 'ಪರಂಪರೆಯ ಬೆಳಕಿನಲ್ಲಿ' ಎಂಬ ಅಂಕಣದಲ್ಲಿ ೧೯೨೪ ಕಿತ್ತೂರು ಚೆನ್ನಮ್ಮ ಜನಿಸಿದ ಅಕ್ಟೋಬರ್ ೩ರಂದು ಮಹಿಳೆಯರ ದಿನಾಚರಣೆಯೆಂದು ಆಚರಿಸುವ ಮೂಲಕ ಕಿತ್ತೂರು ರಾಣಿ ಚೆನ್ನಮ್ಮ ದಿನಾಚರಣೆಯೊಂದಿಗೆ ಮಹಿಳೆಯರಿಗೆ ಗೌರವ ನೀಡುವುದಾಗಿದೆ. ರಾಜ್ಯೋತ್ಸವ ದಿನಾಚರಣೆಯ ಮೂಲಕ ಕನ್ನಡ ನಾಡು – ನುಡಿಯ ಬಗ್ಗೆ ಅಭಿಮಾನ ಹೊಂದುವುದು, ೮೦೦ನೇ ಬಸವೇಶ್ವರ ದಿನಾಚರಣೆ ಆಚರಿಸುವ ಮೂಲಕ ಬಸವಣ್ಣರವರ ಉದಾತ್ತ ವಿಚಾರಗಳನ್ನು ಕನ್ನಡ ನಾಡಿನ ಜನತೆಗೆ ತಿಳಿಸುವ ಪ್ರಯತ್ನವಾಗಿ ಪರಂಪರೆಯ ಬೆಳಕಿನಲ್ಲಿ ಹೊಸ ಸಮಾಜವನ್ನು ನಿರ್ಮಾಣ ಮಾಡುವಲ್ಲಿ ಈ ರೀತಿಯ ದಿನಾಚರಣೆಗಳು ನಡೆಯಲಿ ಎಂಬ ಆಶಯವಿದೆ. ಈ ರೀತಿಯ ದಿನಾಚರಣೆಗೆ ರಜಾ ಕೊಡಬಾರದೆ ಎಂಬ ವಿಚಾರಕ್ಕೆ ರಜೆ ಕೇಳುವುದು, ಕೊಡುವುದು ತಪ್ಪಲ್ಲ. ಆದರೆ ಅದೇ ಪಟ್ಟಿ ಬೆಳೆದು ಬರೀ ಜಯಂತಿ ದಿನಾಚರಣೆಗಳೆಂದು ರಜೆ ಕೊಟ್ಟರೆ ಸಾಲದು, ಆ ದಿನಗಳು ನಮ್ಮ ಪರಂಪರೆಗೆ ನೀಡಿದ ಕಾಣಿಕೆಗಳು ಮುಂದಿನ ಪೀಳಿಗೆಗೆ ತಿಳಿಯುವ ಪ್ರಯತ್ನ ಮಾಡಬೇಕು ಎಂಬ ನಿಲುವನ್ನು ಪ್ರಕಟಪಡಿಸುತ್ತಾರೆ. ಪರಂಪರೆಯ ಬೆಳಕಿನಲ್ಲಿ ಉತ್ತಮ ದಾರಿಯಲ್ಲಿ ಮುಂದಿನ ಪೀಳಿಗೆ ಸಾಗಬೇಕು ಎಂಬ ದೃಷ್ಟಿ ಇದೆ.

ಆದರೆ ಈ ರೀತಿಯ ಜಯಂತಿ, ದಿನಾಚರಣೆಗಳು ಇಂದು ಕೂಡ ನಡೆಯುತ್ತಿವೆ. ಇತ್ತೀಚಿನ ದಿನಗಳಲ್ಲಿ ವಾಲ್ಮೀಕಿ ಜಯಂತಿ, ಕೆಂಪೇಗೌಡ ಜಯಂತಿ, ಟಿಪ್ಪು ಜಯಂತಿಗಳೆಂದು ಸರಕಾರಗಳು ಆಚರಣೆ ಮಾಡಿ ಅಲ್ಲಿ ಅವರ ಉದಾತ್ತ ಧ್ಯೇಯ, ಉದ್ದೇಶಗಳನ್ನು ಜನತೆಗೆ ತಿಳಿಸಿ ಕೊಡುವ ಬದಲು ಜಯಂತಿ, ದಿನಾಚರಣೆಗಳು ರಾಜಕೀಯ ನಾಯಕರ ಕೆಸರೆರಚಾಟಕ್ಕೆ ಕಾರಣವಾಗುತ್ತಿರುವುದು ದುರಂತವಾಗಿದೆ. ಆ ದಿನಾಚರಣೆಯಂದು ಸಾರ್ವತ್ರಿಕ ರಜೆ ದೊರೆಯುವುದರ ಲಾಭವನ್ನು ಸಾಮಾನ್ಯ ಜನರು ಬಯಸುತ್ತಾರೆ ಹೊರತು, ಪರಂಪರೆಯ ಬೆಳಕಿನಲ್ಲಿ ಹೊಸ ಹಾದಿಯನ್ನು ನೋಡುವ ದೃಷ್ಟಿಯನ್ನು ಕಾಣಲಾಗುತ್ತಿಲ್ಲ.

ಸಂಸ್ಕೃತಿಯ ಉಳಿವಿನಲ್ಲಿ ಲಲಿತ ಕಲಾ ವಿದ್ಯೆಗಳು ಶಿಕ್ಷಣದಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಇತ್ತೀಚಿನ ದಿನಗಳಲ್ಲಿ ವಿಜ್ಞಾನ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ಕೊಡಲಾಗಿದೆ. ತಂದೆ ತಾಯಂದಿರು ಕೂಡ ವಿಜ್ಞಾನ ತರಗತಿಯೊಂದರಿಂದ ಶಿಕ್ಷಣ ದೊರಕಲಿ ಎಂಬ ಭಾವನೆ ಮೂಡಿದೆ. ವಿಜ್ಞಾನದ ವಿಷಯ ಕಲಿಕೆಯ ಜೊತೆಯಲ್ಲಿಯೂ ಮಾನವೀಯತೆ ಬೆಳೆಯಬೇಕೆಂದು, ಮಾನವೀಯತೆಯನ್ನು ಲಲಿತ ವಿದ್ಯೆಗಳು ನೀಡುತ್ತವೆ. ಇವು ಕೂಡ ವಿಜ್ಞಾನದಂತೆ ಪ್ರಮುಖವಾದುದು. ಲಲಿತ ವಿದ್ಯೆಗಳಿಲ್ಲದೆ ಸಂಸ್ಕೃತಿ ಹೇಗೆ ಪೂರ್ಣಗೊಂಡಿತ್ತೆಂದು, ವಿಜ್ಞಾನದ ಆಸಕ್ತಿಯ ಬಗ್ಗೆ ಹೆಚ್ಚು

ಮನ್ನಣೆ ಕೊಡುವುದು, ಉಳಿದ ವಿಷಯಗಳನ್ನು ಲಘುವಾಗಿ ಪರಿಗಣಿಸುವ ತಂದೆ ತಾಯಿಯರಿಗೆ ಸಂಸ್ಕೃತಿಯ ತಿಳುವಳಿಕೆಯಲ್ಲಿ ಮತ್ತು ಬೆಳವಣಿಗೆಯಲ್ಲಿ ಲಲಿತ ವಿದ್ಯೆಗಳು ಮುಖ್ಯ ಎಂಬ ನಿಲುವನ್ನು ನಿರಂಜನರು ದಿನಚರಿಯಿಂದ ಅಂಕಣ ಕೃತಿಯ 'ಅವರು ಇನ್ನಿಲ್ಲ' ಲೇಖನದಲ್ಲಿ ತಿಳಿಸುವುದು ಲಲಿತ ವಿದ್ಯೆಗಳ ಅಗತ್ಯತೆಯು ಸಮಾಜದಲ್ಲಿ ಎಷ್ಟು ಅವಶ್ಯಕವಿದೆ ಎಂಬುದನ್ನು ಸೂಚಿಸುತ್ತಾರೆ.

ಭಾರತಕ್ಕೆ ಪ್ರವಾಸಕ್ಕೆ ಬಂದ ಪರದೇಶದ ಪ್ರಜೆಗಳನ್ನು ನಾವು ಹೋಟೇಲುಗಳಲ್ಲಿ, ಟ್ಯಾಕ್ಸಿಗಳಲ್ಲಿ ಮೊದಲಾದ ಕಡೆ ಅವರು ಪ್ರವಾಸಿಗರು ಎಂದಾದರೆ ಅವರಿಗೆ ಮೋಸ ಮಾಡುವುದು, ಕೆಲವೊಂದು ಸವಲತ್ತುಗಳನ್ನು ಕೊಡದೆ ಹಣ ದೋಚುವ ಪ್ರವೃತ್ತಿ ಸರಿಯಲ್ಲದಾಗಿದೆ. ಪ್ರವಾಸೋದ್ಯಮ ಬೆಳೆಯಲು ಈ ನಾಡಿನಲ್ಲಿ ಸಾಕಷ್ಟು ಅವಕಾಶಗಳು ಇವೆ. ಹಾಗೆಂದ ಮಾತ್ರಕ್ಕೆ ವಿದೇಶಿ ವಿನಿಮಯ ಹೆಚ್ಚಾಗುತ್ತದೆ ಎಂದುಕೊಂಡು ವಿದೇಶಿ ಪ್ರವಾಸಿಗರನ್ನು ಹಣ ಪಡೆಯುವ ಗಿರಾಕಿಗಳಾಗಿ ಕಾಣಬಾರದು. ಅವರೆಲ್ಲ ನಮ್ಮ ಪರರಾಷ್ಟ್ರದ ಸೋದರರು ತಮ್ಮ ಅರಿವಿಲ್ಲದೆ ವಿಶ್ವಭ್ರಾತೃತ್ವ ಭಾವನೆ ಮೂಡಲು ಸಹಾಯಕ ಆಗುವವರು, ಈ ದೇಶಕ್ಕೆ ಬಂದು ಹೋಗುವ ಪ್ರತಿಯೊಬ್ಬ ಪ್ರಜೆಯು ಸಂದೇಶವಾಹಕನಾಗಿದ್ದಾನೆ. ಅವರಿಗೆ ರಾಜ ಮಾರ್ಯಾದೆಯನ್ನು ನೀಡಿ ಅತಿಥಿ ಸತ್ಕಾರವನ್ನು ನೀಡಿ ಅವರಿಗೆ ಗೌರವಿಸಬೇಕು ಇದು ಭಾರತೀಯ ಸಂಸ್ಕೃತಿಯ ಲಕ್ಷಣಗಳಲ್ಲಿ ಒಂದಾಗಿದೆ ಎಂದು 'ಪ್ರವಾಸಿಗೆ ರಾಜ ಮಾರ್ಯಾದೆ' ಎಂಬ ಅಂಕಣದಲ್ಲಿ ತಿಳಿಸುತ್ತಾರೆ.

ಅತಿಥಿ ಸತ್ಕಾರ, ಸೋದರತೆ ಎಂಬ ಭಾರತೀಯ ಸಂಸ್ಕೃತಿಯ ತಿರುಳು ಯಾವ ಮಾದರಿಯಲ್ಲಿ ಇರಬೇಕೆಂದು, ವಿದೇಶಿ ಪ್ರವಾಸಿಗರನ್ನು ನಾವು ನೋಡಿಕೊಳ್ಳುವ ಬಗೆಯನ್ನು. ಪ್ರಸ್ತುತ ಕಾಲಘಟ್ಟದಲ್ಲಿ ಭಾರತೀಯ ಸಂಸ್ಕೃತಿಯನ್ನು ಹೇಗೆ ಪಸರಿಸಿಬೇಕೆಂಬ ದೃಷ್ಟಿಯನ್ನು ಇಲ್ಲಿ ಕಾಣಬಹುದು. ಅ.ನ.ಕೃ ಭಾರತೀಯ ಸಂಸ್ಕೃತಿಯ ಶ್ರೇಷ್ಠತೆಯನ್ನು ಪ್ರತಿಪಾದಿಸುತ್ತಾರೆ, ನಿರಂಜನರು ಆ ಶ್ರೇಷ್ಠತೆಯನ್ನು ಜನತೆ ಹೇಗೆ ಉಳಿಸಿಕೊಂಡು ಹೋಗಬೇಕೆಂದು ಚರ್ಚಿಸುತ್ತಾರೆ. ಇದು ಕೂಡ ಇವರ ವಿಚಾರ ಸಾಹಿತ್ಯದ ಭಿನ್ನತೆಯಾಗಿದೆ.

ಸಂಸ್ಕೃತಿಗೆ ಸಂಬಂಧಿಸಿದಂತೆ ನಿರಂಜನರವರು ಖಾನ್ ಅಬ್ದುಲ್ ಗಫಾರ್ ಖಾನ್‌ರ ಆತ್ಮವೃತ್ತ 'My Life and Struggle' ಅದರಲ್ಲಿ 'ನಮ್ಮ ಸಂಸ್ಕೃತಿಯ ಪರಂಪರೆ' ಎಂಬ ಅಧ್ಯಾಯದಲ್ಲಿ ಆರ್ಯ ಸಂಸ್ಕೃತಿ ಹೇಗೆ ಅಫಘಾನಿಸ್ಥಾನ ಮೊದಲಾದ ಕಡೆ ಇತ್ತು. ಆರ್ಯನ್ ಸಂಸ್ಕೃತಿಯಿಂದ ಕಾಲಕ್ರಮೇಣ ಬುದ್ಧನ ವಿಚಾರಗಳು, ಬಾಮಿಯಾನ ಪ್ರದೇಶದಲ್ಲಿನ ಬೌದ್ಧ ಮೂರ್ತಿಗಳು ಸಾಂಸ್ಕೃತಿಕ ಪರಂಪರೆಯನ್ನು ತಿಳಿಸಿದ ವಿಚಾರವನ್ನು ತಿಳಿಸುತ್ತವೆ. ಈ ಲೇಖನದಲ್ಲಿ ಬಹಳ ಮುಖ್ಯವಾಗಿ ತಿಳಿಸುವುದೆಂದರೆ ಈ ದೇಶದ ಮುಸಲ್ಮಾನರರು ಕೂಡ ಇದೇ ಸಂಸ್ಕೃತಿಗೆ ಸೇರಿದವರು. ಅವರು ಎಲ್ಲಿಂದಲೋ ಬಂದವರು ಅಲ್ಲ ಅವರು ಕೂಡ ಭಾರತೀಯ ಸಂಸ್ಕೃತಿಯ ಮಣ್ಣಿನ ಮಕ್ಕಳೇ ಆಗಿದ್ದಾರೆ ಎಂಬ ಹಿನ್ನಲೆಯಲ್ಲಿ ವಿವರಿಸುತ್ತಾರೆ.

ಭಾರತೀಯ ಸಂಸ್ಕೃತಿಯನ್ನು ಹಿಂದೂ ಸಂಸ್ಕೃತಿಯೆಂದು ಕರೆಯುವ ಇತ್ತೀಚಿನ ದಿನಗಳಲ್ಲಿ ನಿರಂಜನರವರು ೧೯೭೦ರ ದಶಕದಲ್ಲಿ 'ದಿನಚರಿಯಿಂದ' ಕೃತಿಯಲ್ಲಿ ಈ ದೇಶದಲ್ಲಿರುವ ಯಾವುದೇ ಪ್ರಜೆಗಳು, ಮತಧರ್ಮರವರು ಈ ಭಾರತೀಯ ಸಂಸ್ಕೃತಿಯವರೇ ಆಗಿದ್ದಾರೆ. ಭಾರತೀಯ ಸಂಸ್ಕೃತಿಯ ಭಿನ್ನ ಆಯಾಮದಲ್ಲಿ ಇದು ಕೂಡ ಒಂದು ಎಂಬುದನ್ನು ನಾವು ಕಾಣಬಹುದು.

ವಿದೇಶಗಳಿಗೆ ಸ್ವಾತಂತ್ರ್ಯ ನಂತರ ಹೆಚ್ಚಿನವರು ಉದ್ಯೋಗಕ್ಕಾಗಿ, ಶಿಕ್ಷಣಕ್ಕಾಗಿ ಅನೇಕ ಕಾರ್ಯಗಳಿಗೆ ಹೋಗುತ್ತಿದ್ದಾರೆ. ಹೀಗೆ ಗಡಿ ದಾಟುವ ಎಲ್ಲರೂ ಕೂಡ ಈ ದೇಶದ ಪ್ರತಿಯೊಬ್ಬನು ಸಾಂಸ್ಕೃತಿಕ ರಾಯಭಾರಿಯಾಗಿದ್ದಾನೆ. ಭಾರತೀಯ ಸಂಸ್ಕೃತಿಯನ್ನು ಆತ ಪಸರಿಸಬೇಕಾದುದು ಆತನ ಕಾರ್ಯವಾಗಿದೆ. ಅದನ್ನು ಆತ ಎಂದಿಗೂ ಮರೆಯಬಾರದು ಎಂದು ಎಚ್ಚರಿಕೆಯ ಮಾತುಗಳನ್ನು ನಿರಂಜನರವರು 'ಕಾಮಸೂತ್ರದ ದೇಶ' ಎಂಬ ಲೇಖನದಲ್ಲಿ ತಿಳಿಸುತ್ತಾರೆ.

ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಪದವಿ ನೀಡುವ ಸಂದರ್ಭದಲ್ಲಿ ಘಟಿಕೋತ್ಸವಗಳಲ್ಲಿ ಹಾಕುವ ಬಟ್ಟೆ, ಉಡುಪುಗಳು, ಆಂಗ್ಲರ ಆಕ್ಸ್‌ಫರ್ಡ್, ಕೇಂಬ್ರಿಡ್ಜ್‌ಗಳನ್ನು ನಾವು ಅನುಸರಿಸುವುದು ಸರಿಯಲ್ಲವೆಂದು, ಭಾರತೀಯತ್ವದ ಹಿನ್ನಲೆಯಲ್ಲಿ ಆ ಉಡುಪುಗಳಿಲ್ಲ ಎಂದು ಭಾವಿಸುತ್ತಾರೆ, ಪ್ಯಾರೀಸ್, ಅಮೇರಿಕಾ ಮೊದಲಾದ ವಿಶ್ವವಿದ್ಯಾಲಯದ ಪದವಿ ಉಡುಪುಗಳನ್ನು ಅವರೇ ನಿರ್ಮಿಸಿದರು. ನಮ್ಮಲ್ಲಿ ನಳಂದ, ತಕ್ಷಶಿಲೆ ಎಂಬ ಪ್ರಾಚೀನ ವಿಶ್ವವಿದ್ಯಾಲಯಗಳು ಇದ್ದು, ಪದವಿ ಪೋಷಾಕಿಗೆ ಸಂಬಂಧಿಸಿದಂತೆ ಹೊಸ ಭಾರತೀಯ ಪರಂಪರೆಯಲ್ಲಿ ನಿರ್ಮಿಸುವ ಅಂತಃಸತ್ವ ನಮಗಿದೆ ಎಂಬುದನ್ನು 'ಶಿಕ್ಷಣದ ಸಂಕೇತ' ಎಂಬ ಲೇಖನದಲ್ಲಿ ಚರ್ಚಿಸುತ್ತಾರೆ. ಪ್ರಾಚೀನ ವಿಶ್ವವಿದ್ಯಾಲಯ, ಶಿಕ್ಷಣ, ಭಾರತೀಯ ಸಂಸ್ಕೃತಿಯ ಹಿನ್ನಲೆಯಲ್ಲಿ ಪದವಿ ನೀಡುವ ಸಂದರ್ಭದಲ್ಲಿ ಪೋಷಕನ್ನು ತರಬೇಕೆಂಬ (ಸೃಷ್ಟಿಸಬೇಕೆಂಬ) ನಿಲುವನ್ನು ಪ್ರಕಟಪಡಿಸುತ್ತಾರೆ. ಭಾರತೀಯರು ಭಾರತೀಯ ಸಂಸ್ಕೃತಿ ಶ್ರೇಷ್ಠ ಸಂಸ್ಕೃತಿ ಎಂದು ಅಭಿಮಾನವನ್ನು ಮಾತ್ರ ಬೆಳೆಸಿಕೊಂಡಿದ್ದರೆ ಸಾಲದು ಅದನ್ನು ಜೀವನಕ್ಕೆ ಅಳವಡಿಸಿಕೊಳ್ಳುವ ಬಗೆಯನ್ನು ನಿರಂಜನರು ವಿವರಿಸಿದ್ದಾರೆ.

ಅ.ನ.ಕೃ.ರವರು ತಮ್ಮ ಚಿತ್ರಕಲೆ ಎಂಬ ಕೃತಿಯಲ್ಲಿ ಭಾರತೀಯ ಚಿತ್ರಕಲೆ ಬೆಳೆದು ಬಂದ ಬಗೆಯನ್ನು ಮೂರು ವಿಭಾಗದಲ್ಲಿ ಸೂಚಿಸುತ್ತಾರೆ. ಚಿತ್ರಕಲೆಯ ಸಾಂಸ್ಕೃತಿಕ ಆಸ್ತಿಭಾರದಲ್ಲಿ ಅಜಂತಾ ಚಿತ್ರಕಲೆಯನ್ನು ಗುರುತಿಸುತ್ತಾರೆ. ಒಂದನೇ ಶತಮಾನದಿಂದ ೭ನೇ ಶತಮಾನದವರೆಗೆ ರಚಿಸಿರಬಹುದು. ಮಳೆಗಾಲದಲ್ಲಿ ಹೊರಗೆ ಹೋಗಲು ಅನುಕೂಲವಾಗದಿದ್ದರಿಂದ ಗುಹೆಗಳಲ್ಲಿಯೇ ಇದ್ದುಕೊಂಡು ಬೇಸರವನ್ನು ಕಳೆಯಲು ಗೋಡೆಗಳ ಮೇಲೆ, ಮಳಿಗೆಯ ಮೇಲೆ, ಪೂಜಾ ಸ್ಥಳಗಳಲ್ಲಿ ಬುದ್ಧನ ಜೀವನ ಚರಿತ್ರೆಗಳನ್ನು ಕೆತ್ತಿರಬಹುದಾಗಿದೆ ಎಂದು ಅ.ನ.ಕೃ. ಅಜಂತಾದ ಶಿಲ್ಪಕಲೆಗಳನ್ನು ಕೆತ್ತಲು ಕಾರಣವಾದ ಅಂಶವನ್ನು ತಿಳಿಸುತ್ತಾರೆ. ೭ನೇ ಶತಮಾನದ ನಂತರ ಹಿಂದೂ ಧರ್ಮದ ಪುನರುತ್ಥಾನದಿಂದಾಗಿ ಬೌದ್ಧ ಶಿಲ್ಪಕಲೆಗಳು ನಾಶಗೊಂಡಿರಬೇಕು ಎಂದು ಕಾರಣವನ್ನು ಸೂಚಿಸುತ್ತಾರೆ.

ಮಧ್ಯ ಕಾಲದ ವಿಕಾಸದಲ್ಲಿ ೭ನೇ ಶತಮಾನದಿಂದ ೧೬ನೇ ಶತಮಾನದವರೆಗೂ ಗುಜರಾತಿನಲ್ಲಿ ಸಂಸಾರಿಕ ಚಿತ್ರಕಲೆಯು ಬೆಳೆದಿದ್ದು, ನಂತರ ರಾಜಕೀಯ ವಿಪ್ಲವದಿಂದಾಗಿ ಹೆಚ್ಚು ಬೆಳೆಯಲಿಲ್ಲ. ಆದರೆ ಕರ್ನಾಟಕದಲ್ಲಿ ಚಾಲುಕ್ಯ, ಹೊಯ್ಸಳರ ಕೃಪೆಯಿಂದ ಭವ್ಯ ಮಂದಿರಗಳು ನಿರ್ಮಾಣವಾದವು. ಈ ಸಂಧರ್ಭದಲ್ಲಿ ಉತ್ತರ ಭಾರತದಲ್ಲಿ ಮೊಘಲರ ಆಳ್ವಿಕೆಯಿಂದಾಗಿ ಭಿನ್ನ ಹಾದಿಯನ್ನು ಹಿಡಿಯಿತು ಇದು ಮೊಘಲರ ಮಾದರಿಯಾದರೆ, ಚಿತ್ರಕಲೆಯ ಹಿಂದೂ ಶಾಖೆಯಾಗಿ 'ರಜಪೂತ' ಶಾಖೆಯೆಂದು ಕರೆಯುವುದು. ಈ ಹಿಂದೂ ಶಾಖೆಗೂ ಜಯಪುರದ ಶಾಖೆಗೂ ಭೇದವಿದೆ. ಬ್ರಿಟಿಷರು ಭಾರತಕ್ಕೆ ಬಂದ ನಂತರ ಚಿತ್ರಕಲೆಯು ನಾಶಗೊಂಡಿತು. ಆಧುನಿಕ ಪುನರುಜ್ಜೀವನದಲ್ಲಿ ಟ್ರಾವಾಂಕೂರಿನ ರಾಜಾರವಿವರ್ಮ ಪಾಶ್ಚಿಮಾತ್ಯ ಮತ್ತು ಪೌರಾತ್ಯ

ಮಾದರಿಯನ್ನು ರೂಪಿಸಿದನು. ನಂತರ ಕಲ್ಕತ್ತೆಯ ಕಲಾ ಶಾಲೆಯಿಂದ ಇ.ಬಿ. ಹ್ಯಾವೆಲ್ ಹೊಸಯುಗವನ್ನು ೧೮೯೮ರಲ್ಲಿ ಆರಂಭಿಸಿ ಚಿತ್ತದಾಸ್ಯ ವೃತ್ತಿಯನ್ನು ತೊರೆದು, ದೇಶೀಯ ಸೌಂದರ್ಯವನ್ನು ಹೊರ ತೋರಲು ತೊಡಗಿದ ತರುಣ ಚಿತ್ರಗಾರರೆಂದು, ಇಡೀ ಭಾರತೀಯ ಚಿತ್ರಕಲೆಯ ಸಂಕ್ಷಿಪ್ತ ಪರಿಚಯವನ್ನು ಮಾಡುತ್ತಾರೆ. ಭಾರತದಲ್ಲಿ ಚಿತ್ರಕಲೆ ಬೆಳೆದು ಬಂದ ಬಗೆಯನ್ನು ಅ.ನ.ಕೃ. ವಿವರಿಸುತ್ತಾರೆ. ಜೊತೆಗೆ ಭಾರತೀಯ ಸಂಸ್ಕೃತಿಯ ಪ್ರತಿಪಾದಕರಾಗಿ ಅ.ನ.ಕೃ ರವರು ಚಿತ್ರಕಲೆಯ ಕೃತಿಯು ಭಾರತೀಯ ಸಂಸ್ಕೃತಿಯ ತಿಳುವಳಿಕೆಯಲ್ಲಿ ಹೆಚ್ಚು ಮಹತ್ವ ಪೂರ್ಣವಾಗಿದೆ.

ಕಲೆಯ ಉಳಿವಿಗೆ ಸಂಬಂಧಿಸಿದಂತೆ ಅ.ನ.ಕೃ. ರವರು 'ಕನ್ನಡ ನಾಡಿನಲ್ಲಿ ಚಿತ್ರಕಲೆ' ಎಂಬ ಲೇಖನದಲ್ಲಿ ಚಿತ್ರಕಲೆಯ ಬಗ್ಗೆ ಕನ್ನಡ ನಾಡಿನಲ್ಲಿ ಯಾವುದೇ ಜ್ಞಾನವಿಲ್ಲದೆ ಇರುವುದು, 'ಫಿಲ್ಮ್ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟವಾಗುವಂತ ಸಿನಿಮಾ ತಾರೆಯರ ಚಿತ್ರಗಳೇ ಕಲೆಯೇ ಆಗಿದೆ ಎಂದು ತರುಣರು ತಿಳಿದುಕೊಂಡಿರುವುದು ಕಲೆಯ ಬಗ್ಗೆ ಅವರಿಗಿರುವ ಅಜ್ಞಾನದ ಸಂಕೇತವಾಗಿದೆ. ಕಲೆಯ ಹಿರಿಮೆಯನ್ನು ಒಬ್ಬ ಉತ್ತಮ ವಿಮರ್ಶಕ ಚಿತ್ರ ಶಾಲೆಯ ವ್ಯವಸ್ಥಾಪಕನಾಗುವುದರ ಜೊತೆಗೆ ಆ ಕಲೆಗಳ ಬಗ್ಗೆ ಪ್ರೇಕ್ಷಕರಿಗೆ ವರ್ಣಿಸುವ ಕೆಲಸದೊಂದಿಗೆ, ಚಿತ್ರಕಲೆಯನ್ನು ಪರಿಚಯಿಸುವ ಪುಸ್ತಕಗಳು ಹೊರ ಬಂದರೆ ಕನ್ನಡ ಚಿತ್ರಕಲೆಯು ಉಳಿಯುತ್ತದೆ. ಬಂಗಾಳ, ಆಂಧ್ರ ಪ್ರದೇಶದಲ್ಲಿ ಅವುಗಳ ಉಳಿವಿಗಾಗಿ ಪ್ರಯತ್ನ ನಡೆದಿದೆ. ಆದರೆ ಕನ್ನಡ ನಾಡಿನಲ್ಲಿ ಕನ್ನಡ ಚಿತ್ರಕಲೆಯ ಬಗ್ಗೆ ಸರಕಾರದ ಉಪೇಕ್ಷೆ ಮತ್ತು ಜನತೆಯ ಆಲಸ್ಯದಿಂದ ಕನ್ನಡ ನಾಡಿನ ಸಂಸ್ಕೃತಿಯ ರಾಯಭಾರಿಗಳಲ್ಲಿ ಒಂದಾದ ಚಿತ್ರಕಲೆಯು ಅವನತಿಯ ದಾರಿಯನ್ನು ಹಿಡಿದಿದೆ ಎಂದು ವಿಮರ್ಶಿಸುತ್ತಾರೆ.

'ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ' ಎಂಬ ಕೃತಿಯಲ್ಲಿ ಅ.ನ.ಕೃ.ರವರು ಕಲೆಯು ರೂಪುಗೊಳ್ಳಲು ಇರುವ ಎರಡು ಆಧಾರ ಸ್ತಂಭವೆಂದರೆ ಒಂದು ಪ್ರೀತಿ, ಮತ್ತೊಂದು ಭೀತಿ ಎಂದು ಗುರುತಿಸುತ್ತಾರೆ. ಪ್ರೀತಿಯೇ ಮಾನವನ ಹುಟ್ಟು ಗುಣವಾಗಿರುವುದಿರಂದ ಕಲೆಯು ಎಲ್ಲಾ ದೇಶಗಳಲ್ಲಿಯೂ ಒಂದಲ್ಲ ಒಂದು ರೀತಿ ರೂಪು ಪಡೆದಿದೆ. ಹಾಗೆಯೇ ಜನತೆಯಲ್ಲಿ ಅಮಾನುಷ ಶಕ್ತಿಯಲ್ಲಿನ ನಂಬಿಕೆ ಅಥವಾ ಭೀತಿಯಿಂದಾಗಿ ಕಲೆಯನ್ನು ಚಿತ್ರಿಸಿರುವುದನ್ನು ನೋಡಬಹುದು. ಜಗತ್ತಿನ ಎಲ್ಲಾ ದೇಶಗಳ ಕಲೆಗೆ ಬೆಂಬಲ ನೀಡಿರುವುದೇ ಧರ್ಮವಾಗಿದೆ. ಕೆಲವು ಸಮುದಾಯ ಅಥವಾ ಜನಾಂಗಗಳು ಧರ್ಮಗಳನ್ನು ಅತೀ ಅಕ್ರಮಿಸಿಕೊಂಡು ಹಲವು ಹೊಸ ಹೊಸ ಹಾದಿಯ ಕಲೆಯನ್ನು ತಂದರು. ಮತ್ತೆ ಕೆಲವು ಜನಾಂಗದವರು ಪರ ಮತದ ಪ್ರಭಾವಕ್ಕೆ ಸಿಲುಕಿ ತಮ್ಮ ವ್ಯಕ್ತಿ ವೈಶಿಷ್ಟ್ಯವನ್ನು ನೀಗಿಕೊಂಡು ಒಂದು ಮಿಶ್ರ ಸಂಪ್ರದಾಯದ ಚಿತ್ರಕಲೆ ರೂಪುಗೊಳ್ಳಲು ಕಾರಣವಾಯಿತು. ಅದಕ್ಕೆ ಉತ್ತರವಾಗಿ ಭಾರತದಲ್ಲಿ ಮುಸಲ್ಮಾನರ ಮತ್ತು ಮೊಘಲರ ಕಾಲದಲ್ಲಿ ಪ್ರಚಾರಕ್ಕೆ ಬಂದ ಮೊಘಲ್ ಮತ್ತು ರಜಪೂತ ಸಂಪ್ರದಾಯಗಳು ಬೆಳೆಯಲು ಸಹಾಯಕವಾಗಿತ್ತು ಎಂದು ಉದಾಹರಿಸುತ್ತಾರೆ.

ಅ.ನ.ಕೃ.ರವರು ಕಲೆಯ ಗುರಿಗೆ ಸಂಬಂಧಿಸಿದಂತೆ 'ಸಮದರ್ಶನ' ಎಂಬ ಕೃತಿಯಲ್ಲಿ ಅಜಂತಾದಲ್ಲಿರುವ ಜಾತಕ ಕತೆಗಳನ್ನು ಬಿಂಬಿಸುವ ಚಿತ್ರಗಳು ನೀತಿ, ಮೌಲ್ಯಗಳನ್ನು ಬೆಳೆಸುವಂಥದಾಗಿದೆ, ಅಜಂತಾದಲ್ಲಿರುವ ಚಿತ್ರಗಳಲ್ಲಿ ಸ್ತ್ರೀಯರ ಚಿತ್ರಗಳೆಲ್ಲವೂ ಸಾಮಾಜಿಕ ಜೀವನದಲ್ಲಿ ಉತ್ತಮ ಸ್ಥಾನ ಪಡೆದವರು. ಅಲ್ಲಿಯ ಸ್ತ್ರೀಯರು ಸಾಮಾನ್ಯವಾಗಿ ಉಳಿಗದವರು, ಕೃಷಿಕರು, ವಿವಿಧ ಕೆಲಸವನ್ನು ನಿರ್ವಹಿಸುವವರನ್ನು ಚಿತ್ರಕಾರರು ಬರೆದಿರುವುದು ಅಂದಿನ

ಸಾಮಾಜಿಕ ಜೀವನದಲ್ಲಿ ಸಾಮಾನ್ಯ ಸ್ತ್ರೀಗೂ ಹೆಚ್ಚು ಸ್ವಾತಂತ್ರ್ಯವನ್ನು, ಅವರ ಕೆಲಸವನ್ನು ಗೌರವಿಸುದರ ರೀತಿಯನ್ನು ಅ.ನ.ಕೃ.ರವರು ವ್ಯಕ್ತಪಡಿಸುತ್ತಾರೆ. ಕಲೆ, ಚಿತ್ರಕಲೆ, ಶಿಲ್ಪಕಲೆಗಳಿರಬಹುದು ಮತ್ತು ನಾಟಕ ಮೊದಲಾದವುಗಳಲ್ಲಿ ಸಾಮಾಜಿಕ ಜೀವನವನ್ನು ವ್ಯಕ್ತಪಡಿಸುವ ಮೂಲಕ ಸಾಹಿತ್ಯ ಕೃತಿಗಳು ಮಾತ್ರವಲ್ಲದೇ ಕಲೆ ಮತ್ತು ವಾಸ್ತುಶಿಲ್ಪಗಳು ಸಮಾಜದ ಕೈಕನ್ನಡಿಯಾಗಿಯೇ ಇವೆ ಎಂಬ ಆಶಯವನ್ನು ನಮ್ಮ ಮುಂದೆ ಇಡುತ್ತಾರೆ.

ನಿರಂಜನವರು ಚಿತ್ರಕಲೆಗೆ ಸಂಬಂಧಿಸಿದ ಜನರ ಧೋರಣೆಯನ್ನು 'ದಿನಚರಿಯಿಂದ' ಕೃತಿಯ 'ಮಾತಿಗಿಂತ ಕೃತಿಮೇಲು' ಎಂಬ ಲೇಖನದಲ್ಲಿ ಖ್ಯಾತ ಕಲಾವಿದರಾದ ಎಂ.ಟಿ.ವಿ.ಆಚಾರ್ಯರು ಮಹಾಭಾರತ ಚಿತ್ರಮಾಲಿಕೆಯನ್ನು ವಿಶ್ವೇಶ್ವರಯ್ಯ ವಸ್ತು ಸಂಗ್ರಹಾಲಯದಲ್ಲಿ ಬೆಂಗಳೂರಿನ ಬಸವನಗುಡಿಯಲ್ಲಿ ಏರ್ಪಡಿಸಿದರು. ಮಂತ್ರಿಗಳಿಂದ ಹಿಡಿದು ಸಾಮಾನ್ಯ ಜನತೆಯು ಆಚಾರ್ಯರ ಕಲಾಕೃತಿಯ ಬಗ್ಗೆ ಮೆಚ್ಚುಗೆ ಮಾತನಾಡಿದ್ದಾರೆ. ಚಿತ್ರಕಲೆಗೆ ಪ್ರೋತ್ಸಾಹ ನೀಡಬೇಕನ್ನುವ ರಾಜಕಾರಣಿಗಳಂತವರು ಭಾಷಣ ಮಾಡುದಕ್ಕಿಂತ ಇಂತಹ ಕಲಾವಿದರ ಕೃತಿಗಳನ್ನು ತೆಗೆದು ಚಿತ್ರಕಲೆಯನ್ನು ಪೋಷಿಸಲಿ ಎಂದು ಆಶಿಸುತ್ತಾರೆ. ಕಲೆ ಮತ್ತು ವಾಸ್ತುಶಿಲ್ಪ, ಚಿತ್ರಕಲೆ ಮೊದಲಾದವುಗಳ ಬಗ್ಗೆ ನಮ್ಮ ರಾಜಕಾರಣಿಗಳು ಪ್ರೋತ್ಸಾಹದ ಭಾಷಣಗಳನ್ನು ಮಾಡುತ್ತಾರೆ ಹೊರತು ಅದರ ಪ್ರೋತ್ಸಾಹಕ್ಕೆ ಯಾವುದೇ ಸಹಾಯ ಮತ್ತು ಸಹಕಾರವನ್ನು ನೀಡುವುದಿಲ್ಲ. ಬರೀ ಮಾತಿನಿಂದಲೇ ಕಲೆಯ ಹೊಟ್ಟೆಯನ್ನು ತುಂಬಿಸುವ ಪ್ರಯತ್ನವನ್ನು ಮಾಡುತ್ತಾರೆ. ಹೀಗೆ ರಾಜಕಾರಣಿಗಳ ಮತ್ತು ಜನತೆಯ ದೃಷ್ಟಿ ಬೆಳೆದುಕೊಂಡು ಹೋದರೆ ಕಲೆ ಹೇಗೆ ಉಳಿಯಲು ಸಾಧ್ಯ ಎಂಬ ಪ್ರಶ್ನೆ ನಮ್ಮ ಮುಂದೆ ಮೂಡುತ್ತದೆ.

೨೮ ವರ್ಷ ಸುಧೀರ್ಘ ಟೈಮ್ಸ್ ಆಫ್ ಇಂಡಿಯಾದ 'ಇಲ್ಲಸ್ಟ್ರೇಡೆಡ್ ವೀಕ್ಲಿ' ಯಲ್ಲಿ ದುಡಿದು ಪ್ರಭಾಕರ ಗಣಪತಿ ಶಿರೂರು ಎಂಬ ಚಿತ್ರಕಾರ ಉದ್ಯೋಗದಿಂದ ನಿವೃತ್ತಿಯನ್ನು ಹೊಂದಿದ್ದ ವಿಚಾರವನ್ನು 'ಹೆಣ್ಣಲ್ಲವೇ ನಮ್ಮನ್ನೆಲ್ಲಾ.........' ಲೇಖನದಲ್ಲಿ ತಿಳಿಸುತ್ತಾರೆ. ಉದ್ಯೋಗದಿಂದ ಅವರು ನಿವೃತ್ತಿ ಹೊಂದಿದ್ದರು, ಕಲೆಯಿಂದ ನಿವೃತ್ತಿಯಾಗುವುದಿಲ್ಲ ಎಂಬ ನಿರಂಜನರವರ ಮಾತಿನಲ್ಲಿ ಕಲಾವಿದನಿಗೆ, ಚಿತ್ರಕಾರನಿಗೆ ಎಂದಿಗೂ ಕಲೆಯಿಂದ ನಿವೃತ್ತಿ ಎಂಬುದಿಲ್ಲ ಎಂಬುದಾಗಿ ವಿಶ್ಲೇಷಿಸುತ್ತಾರೆ. ಆ ಮೂಲಕ ಕಲಾವಿದ ಮತ್ತು ಕಲೆಗೆ ಅಂತ್ಯವು ಇಲ್ಲ, ನಿವೃತ್ತಿಯು ಇಲ್ಲವೆನ್ನಬಹುದು.

ಎಲ್.ಎಸ್.ಶೇಷಗಿರಿಯವರು, ಡಿಪ್ಲೋಮ ವಿದ್ಯಾರ್ಥಿ ಪಟೇಲ್ ಎಂಬುವರು ಚಿತ್ರಕಾರ ಮನೋಳಿಯವರ ಸಹಕಾರದೊಂದಿಗೆ ಇತ್ತೀಚಿನ ಚಿತ್ರಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ಅದರಲ್ಲಿ ವಸ್ತು ಹೃದಯವೆಂಬುದಾಗಿತ್ತು. ಆದರೆ ಚಿತ್ರ ಪ್ರದರ್ಶನವನ್ನು ನೋಡಿ ಪ್ರತಿಕ್ರಿಯಿಸುವುದು ಹೃದಯದಲ್ಲಿ ಅಥವಾ ಮೆದುಳಿನಲ್ಲಿ ಎಂಬುದು ತಿಳಿಯದು. ಆದರೆ ಈ ರೀತಿಯ ಚಿತ್ರ ಪ್ರದರ್ಶನಗಳಿಂದ ಮನಸ್ಸಿಗೆ ಸಂತೋಷವನ್ನು ನೀಡುತ್ತದೆ. ಸಂತೋಷ ನೀಡುವುದೇ ಕಲೆಯ ಉದ್ದೇಶ ಜೊತೆಗೆ ಮನುಷ್ಯನ ನೋವಿಗೆ ಸಂತೋಷವನ್ನು ನೀಡುವ ಸಾಧನ ಕಲೆಯಾಗಿದೆ ಎಂದು 'ಹೆಪ್ಪುಗಟ್ಟಿದ ಹೃದಯ ಬೇನೆ' ಎಂಬ ಲೇಖನದಲ್ಲಿ ಚರ್ಚಿಸುತ್ತಾರೆ.

'ಪುಟ್ಟ ಪುಟ್ಟ ಹೆಜ್ಜೆ ಇಟ್ಟು.........' ಎಂಬ ಲೇಖನದಲ್ಲಿ ನಿರಂಜನರವರು ಕಲೆಗೆ ಸಂಬಂಧಿಸಿದಂತೆ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿ ಅದರಲ್ಲಿ ತೊಡಗಿಕೊಳ್ಳಲು ನಾಟಕ, ಕಲೆ, ಭಾಷಣ,

ವೇಷಭೂಷಣ ಮೊದಲಾದವುಗಳ ಬಗ್ಗೆ ತಿಳಿಸಿ ಕೊಡುವ ಒಂದು ಸಂಸ್ಥೆ ಕನ್ನಡನಾಡಿನಲ್ಲಿ ಇಲ್ಲವಾಗಿದೆ. ಕಿರಿಯರಿಗೆ ಸರಕಾರ, ಜನತೆ ಮತ್ತು ಸಮಾಜ ಯಾವ ರೀತಿಯಲ್ಲಿಯೂ ಕಲಾಪೋಷಣೆಗೆ ಸಹಕರಿಸುವ ಕಾರ್ಯಕ್ರಮಗಳು ಅಥವಾ ವೇದಿಕೆಗಳೇ ಇಲ್ಲ, ಹೀಗೆ ಆದರೆ ಮುಂದಿನ ಪೀಳಿಗೆಯವರಿಗೆ ಹೇಗೆ ಕಲೆಯ ಮೇಲೆ ಅಭಿಮಾನ ಮೂಡಲು ಸಾಧ್ಯ ಎಂಬ ನಿಲುವನ್ನು ವ್ಯಕ್ತಪಡಿಸುತ್ತಾರೆ. ಬಂಗಾಳದಲ್ಲಿರುವಂತೆ ನಮ್ಮ ಕನ್ನಡ ನಾಡಿನಲ್ಲಿಯೂ 'ಕಿರಿಯರ ರಂಗಭೂಮಿ' ಸ್ಥಾಪನೆಯಾಗಿ ಅದರಿಂದ ಮಕ್ಕಳಿಗೆ ಕಲೆಗೆ ಸಂಬಂಧಿಸಿದ ವಿಚಾರಗಳನ್ನು ತಿಳಿಯಲು ಹಾಗೂ ತೊಡಗಿಸಿಕೊಳ್ಳಲು ಸಹಕಾರಿಯಾಗುವಂತಹ ಸಂಸ್ಥೆಯ ಅಗತ್ಯತೆಯನ್ನು ಪ್ರತಿಪಾದಿಸುತ್ತಾರೆ.

ಸಮದರ್ಶನ ಎಂಬ ಕೃತಿಯ 'ಸಂಗೀತ ಮತ್ತು ಜನ ಪ್ರೋತ್ಸಾಹ' ಎಂಬ ಲೇಖನದಲ್ಲಿ ಅ.ನ.ಕೃ ರವರು ಕನ್ನಡ ನಾಡಿನಲ್ಲಿ ತ್ಯಾಗರಾಜನಿಗಿಂತ ೫೦೦ ವರ್ಷಗಳ ಹಿಂದೆಯೇ ನಿಜಗುಣ ಶಿವಯೋಗಿ, ಕನಕದಾಸ, ಪುರಂದಾರದಾಸ ಮೊದಲಾದ ಅನೇಕ ಸಂಗೀತಗಾರರು ಇದ್ದರು. ಕನ್ನಡ ನಾಡಿನಲ್ಲಿ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗಳು ಜೊತೆ ಜೊತೆಯಾಗಿ ಬೆಳೆದು ಬಂದವು. ತ್ಯಾಗರಾಜರ ಕೀರ್ತನೆಗಳು ನಮ್ಮ ಸಂಗೀತಗಾರರು ಬಹುತೇಕ ಹಾಡುವರು ಅದು ನಮ್ಮ ಅಭಿರುಚಿಯು ವಿಶಾಲವಾಗಿರಬೇಕು ಎಂಬ ಧೋರಣೆಗೆ ಸಾಕ್ಷಿಯಾಗಿದೆ. ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ ಮೊದಲಾದವರ ಕೃತಿಗಳು ನಮಗೆ ದೊರಕಬೇಕು. ಇದು ಭಾಷೆ ವ್ಯಾಮೋಹದಿಂದ ಹೇಳುವುದಲ್ಲ. ಕಲೆಯ ದೃಷ್ಟಿಯಿಂದ ಭಾಷೆಯನ್ನು ಆಲಕ್ಷಿಸಲು ಸಾಧ್ಯವಿಲ್ಲವೆಂದು ತಿಳಿಸುತ್ತಾರೆ.

ಕನ್ನಡ ನಾಡು ಹೇಗೆ ಉತ್ತರ ಕರ್ನಾಟಕ ಹಾಗೂ ಮೈಸೂರು ಭಾಗವೆಂದು ಗುರುತಿಸುತ್ತೆವೆಯೋ ಹಾಗೆಯೇ ಸಂಗೀತದ ಪರಿಸ್ಥಿತಿ ಕೂಡ ಇದೆ ಎಂಬುದಕ್ಕೆ ಅ.ನ.ಕೃ.ರವರು ಉತ್ತರ ಕರ್ನಾಟಕದಲ್ಲಿ ಕರ್ಣಾಟಿಕ್ ಸಂಗೀತವು ಕಾಣುವುದಿಲ್ಲ. ಅದೇ ರೀತಿ ಮೈಸೂರಿನಲ್ಲಿ ಹಿಂದೂಸ್ಥಾನಿ ಸಂಗೀತಕ್ಕೆ ಪ್ರವೇಶವೇ ದೊರೆತಿಲ್ಲ. ಕನ್ನಡ ನಾಡು ಒಂದಾಗಿದ್ದರೂ ಕಲೆ, ಸಾಹಿತ್ಯ, ಸಂಸ್ಕೃತಿಯಲ್ಲಿ ಭಿನ್ನ ಭಿನ್ನ ಧೋರಣೆಗಳು ಇವೆ. ಕೇಂದ್ರ ಸರ್ಕಾರವು ನಿನ್ನೆ ಮೊನ್ನೆ ಸಂಗೀತ ಕಲಿತಂಥ ಹೆಣ್ಣು ಮಕ್ಕಳಿಗೆ ರಾಷ್ಟ್ರ ಪ್ರಶಸ್ತಿಯನ್ನು ಕೊಡುತ್ತಿದೆ. ಆದರೆ ನಲ್ವತ್ತು-ಐವತ್ತು ವರ್ಷಗಳಿಂದ ಮೈಸೂರಿನಲ್ಲಿ ಸಂಗೀತ ಕ್ಷೇತ್ರದಲ್ಲಿ ಸೇವೆಯನ್ನು ಮಾಡಿದವರಿಗೆ ಗೌರವವನ್ನು ನೀಡುವುದಿಲ್ಲ ಎಂಬ ಅ.ನ.ಕೃ.ರವರ ದೃಷ್ಟಿಯಲ್ಲಿ ಕನ್ನಡ ನಾಡಿನ ಕಲಾವಿದರ ಮೇಲೆ ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯನ್ನು ತಿಳಿಸುತ್ತದೆ. ನಿನ್ನೆ ಮೊನ್ನೆ ಎಂಬುವುದು ಸ್ತ್ರೀಯನ್ನು ದೂಷಿಸುವುದಲ್ಲ, ಕನ್ನಡ ಸಂಗೀತಗಾರನಿಗೆ ಮನ್ನಣೆ ದೊರೆಕಿಲ್ಲ ಎಂಬುದು ಅಪ್ಪಟ ಕನ್ನಡಿಗನಾದ ಅ.ನ.ಕೃ ರವರ ನೋವಿನ ಧ್ವನಿಯಾಗಿದೆ. ಸಂಗೀತದ ಬಗ್ಗೆ ನಮ್ಮವರಿಗೆ ಇಲ್ಲದ ಕಾಳಜಿಯ ಜೊತೆಗೆ ಕನ್ನಡ ಕಲಾವಿದರ ಸಂಘಟನೆ ಅಗತ್ಯತೆ ಮತ್ತು ಜನರ ಪ್ರೋತ್ಸಾಹ ಸಂಗೀತದ ಉಳಿವಿಗೂ, ಸಂಸ್ಕೃತಿಯ ಉಳಿವಿಗೂ ಅಗತ್ಯವೆಂದು ಪ್ರತಿಪಾದಿಸುತ್ತಾರೆ.

ಸಂಸ್ಕೃತಿಯ ವಿಶ್ವರೂಪ ಅ.ನ.ಕೃ.ರವರು ಬರೆದ ಕೃತಿಯಲ್ಲಿ 'ಕೆ. ವಾಸುದೇವಾಚಾರ್ಯ' ಎಂಬ ಈ ಲೇಖನದಲ್ಲಿ ೯೧ ವರ್ಷದವರೆಗೂ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕೆ. ವಾಸುದೇವಾಚಾರ್ಯರಿಗೆ ರಾಷ್ಟ್ರ ಪ್ರಶಸ್ತಿ ಬಂದ ಸಂಧರ್ಭದಲ್ಲಿ ಅ.ನ.ಕೃ.ರವರು ತಂಜಾವೂರಿನ ಸಂಗೀತಗಾರರಿಗೆ ಕೇಂದ್ರ ಸರ್ಕಾರವು ಹೆಚ್ಚಿನ ಪ್ರಶಸ್ತಿಗಳನ್ನು ಪ್ರೋತ್ಸಾಹ ನೀಡಿದೆ. ಆದರೆ ಕನ್ನಡದಲ್ಲಿ ಎಪ್ಪತ್ತು ವರ್ಷ ಸಂಗೀತ ಸೇವೆ ಮಾಡಿದ್ದರೂ ಗುರುತಿಸದ ಕೇಂದ್ರ ಸರ್ಕಾರದ ಧೋರಣೆ, ದಕ್ಷಿಣಾಧಿ

ಸಂಗೀತ, ಕಲೆ, ಸಾಹಿತ್ಯ ಎಂದರೆ ಅದು ಬರೀ ಮದ್ರಾಸ್ ಎಂದು ಗುರುತಿಸುವುದು. ಮೈಸೂರಿಗೆ ಮನ್ನಣೆ ಕೊಡದೆ ಇರುವುದನ್ನು ಖಂಡಿಸುವ ಮೂಲಕ ಕನ್ನಡ ನಾಡಿನ ಸಂಗೀತಗಾರರಿಗೆ ಕಲಾವಿದರಿಗೆ ಮನ್ನಣೆ ದೊರೆಯದೆ ಇರುವುದು ಕನ್ನಡಿಗರ ಅಭಿಮಾನ ಶೂನ್ಯ ಮನಃಸ್ಥಿತಿಯೇ ಕಾರಣವೆಂದು ಭಾವಿಸುತ್ತಾರೆ.

ಈ ಹಿನ್ನಲೆಯಲ್ಲಿಯೂ ಕನ್ನಡ ನಾಡಿನವರೇ ಆದ ಸಂಗೀತಗಾರರು, ನಾಟಕಕಾರರು, ಚಿತ್ರಕಲಾಕರರನ್ನು ಪರಿಚಯಿಸುತ್ತಾರೆ. ಕನ್ನಡ ನಾಡಿನ ಕಲೆ, ಸಂಗೀತ, ನಾಟಕ ಬೆಳವಣಿಗೆಗೆ ಕೊಡುಗೆಯನ್ನು ನೀಡಿದ ಮಹಾನೀಯರುಗಳನ್ನು ಮುಂದಿನ ಪೀಳಿಗೆಗೆ ನೆನಪಿಸುವ ಅಥವಾ ಸ್ಮರಿಸುವ ಒಂದು ಪ್ರಯತ್ನವಾಗಿ ಕರ್ನಾಟಕ ಕಲಾವಿದರು ಭಾಗ ೧ ಮತ್ತು ಭಾಗ ೨ ಕೃತಿಯನ್ನು ಅ.ನ.ಕೃರವರು ಬರೆದರು. ಇದೇ ಕೃತಿಯಲ್ಲಿ ಕಲೆಯಲ್ಲಿ ಅನುಕರಣ ಎಂಬುದು, ಅದು ಪ್ರಗತಿಗೆ ವಿಘಾತವಾದುದೆಂದು ನಮಗೆ ಬೇಕಾಗುವುದು ಅನುಕರಣವಲ್ಲ, ಅನುರಣನ ಎಂಬ ಅ.ನ.ಕೃ.ರವರ ಮಾತಿನಲ್ಲಿ ನಾಡಿನ ಸಂಸ್ಕೃತಿಯ ಅನುಗುಣವಾಗಿ ಪ್ರತಿಭಾಪೂರ್ಣ, ಕಲಾಪೂರ್ಣ ನಾಟಕ, ಸಂಗೀತ, ಚಿತ್ರಕಲೆಗಳು ಬೆಳೆಯಬೇಕೆಂಬ ಧೋರಣೆಯನ್ನು ಪ್ರತಿಪಾದಿಸುತ್ತಾರೆ. ಮೈಸೂರು ಒಡೆಯರು ನೀಡಿದ ಪ್ರೋತ್ಸಾಹ ಕಾಣಿಕೆಗಳಂತೆ ಮುಂದೆ ಸರಕಾರಗಳು ನೀಡಲಿ ಎಂಬ ಆಶಯವನ್ನು ಅ.ನ.ಕೃ.ರವರು ಹೊಂದಿದ್ದಾರೆ. ತಮಿಳುನಾಡಿನಲ್ಲಿ 'ಈಸೈ' ಚಳುವಳಿಯನ್ನು ಡಾ. ಷಣ್ಮಗಂ ಚೆಟ್ಟಿಯವರು ಹುಟ್ಟು ಹಾಕಿ, ಆ ಮೂಲಕ ತಮಿಳು ಸಂಗೀತ ಉಳಿವಿಗೆ ಕಾರಣರಾದರು. ಅದೇ ರೀತಿಯಲ್ಲಿ ಕನ್ನಡ ನಾಡಿನಲ್ಲಿ ಒಂದು ಚಳುವಳಿ ಮೂಡಬೇಕೆಂಬುದು ಅ.ನ.ಕೃ.ರವರ ನಿಲುವಾಗಿದೆ. ಭಾರತೀಯ ಜೀವನದಲ್ಲಿ ಧರ್ಮ ಬೆರೆತಿರುವಂತೆ ಸಂಗೀತದಲ್ಲಿಯ ಧರ್ಮ ಬೆರೆತಿರುವುದನ್ನು ಎ. ಸುಬ್ಬರಾಯ(ಕಲಾವಿದರು ಭಾಗ ೨) ಎಂಬಲ್ಲಿ ಅ.ನ.ಕೃ ಗುರುತಿಸುತ್ತಾರೆ. ಕಾಲಕ್ರಮೇಣ ಸಂಗೀತದಲ್ಲಿ ಧರ್ಮದ ಸ್ವರೂಪ ಬದಲಾಗಿ ವ್ಯಾಪಾರ ಸಾಧನೆ ಅಡಗಿದೆ ಎಂಬುದಾಗಿ ಗುರುತಿಸುತ್ತಾರೆ. ವ್ಯಾಪಾರದ ಭಾವನೆ ಎಂದೂ ಕಲೆಗಳಲ್ಲಿ, ಕಲಾವಿದರಲ್ಲಿ ಮೂಡುತ್ತದೆಯೋ ಅಂದೇ ಆ ಕಲೆ, ಕಲಾವಿದನಿಗೆ ಅಂತ್ಯವೆಂಬುದು ಆರಂಭವಾಗುತ್ತದೆ. ಆದ್ದರಿಂದ ಕಲೆಯನ್ನು ಎಂದಿಗೂ ಲಾಭನಷ್ಟದ ಲೆಕ್ಕಾಚಾರದಲ್ಲಿ ನೋಡಬಾರದು. ಕಲೆಯು ಒಂದು ನಾಡಿನ ಸಾಂಸ್ಕೃತಿಕ ಚಳುವಳಿಯಾಗ ಬೇಕೇ ಹೊರತು ಹಣದ ವ್ಯಾಮೋಹಕ್ಕೆ ಸಿಲುಕಿ ನಾಶಗೊಳ್ಳಬಾರದು.

ನಿರಂಜನರವರು ತಮ್ಮ ರಾಜಧಾನಿಯಿಂದ ಎಂಬ ಅಂಕಣಗಳ ಸಂಕಲನ ಕೃತಿಯಲ್ಲಿ 'ಕನ್ನಡಿಗರಿಗೆ ಏನಾಗಿದೆ?' ಎಂಬ ಲೇಖನದಲ್ಲಿ ಹಿಂದೂಸ್ಥಾನೀ ಸಂಗೀತದ ಮೂಲಕ ಕನ್ನಡದ ಬಾವುಟವನ್ನು ದೇಶ ವಿದೇಶಗಳಲ್ಲಿ ಹರಡಿಸಿದ ಭೀಮಸೇನಾ ಜೋಶಿಯವರು ಕಲ್ಕತ್ತ, ಬರೋಡ, ಮುಂಬಾಯಿ, ದೆಹಲಿ ಮೊದಲಾದ ಕಡೆ ಅವರ ಸಂಗೀತ ಕಚೇರಿಗಳನ್ನು ಏರ್ಪಡಿಸಿದರೆ ಸಾವಿರಾರು ಮಂದಿ ಸಂಗೀತ ಪ್ರೇಮಿಗಳು ಸೇರುತ್ತಾರೆ. ಆದರೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಒಮ್ಮೆ ಸಂಗೀತ ಕಲೆ ಏರ್ಪಟ್ಟಾಗ ಅಲ್ಲಿಗೆ ಸಂಗೀತ ಕಲಾ ರಸಿಕರೇ ಬಂದಿರಲಿಲ್ಲ. ಇದರಿಂದ ತಿಳಿಯುವುದೆನೆಂದರೆ ಕನ್ನಡರಿಗೆ ಸಂಗೀತಗಾರರು, ಕಲಾವಿದರರ ಬಗ್ಗೆ ಗೌರವ, ಪ್ರೇಮ ಯಾವುದು ಇಲ್ಲವೆಂದು, ಅದಕ್ಕಿಂತ ಚಲನಚಿತ್ರಗಳ ನಟ ನಟಿಯರ ಮೇಲೆ ವ್ಯಾಮೋಹವಿರುವುದು. ಇವೆಲ್ಲಾ ಕನ್ನಡಿಗರಿಗೆ ಕಲೆಯ ಮೇಲೆ ಅನಾಸಕ್ತಿಯನ್ನು ಹೊಂದಿರುವುದಕ್ಕೆ ಉದಾಹರಣೆಯಾಗಿ ನೀಡುತ್ತಾರೆ.

ನಿರಂಜನರವರು 'ಅಂಕಣ' ಕೃತಿಯಲ್ಲಿ ರಕ್ಷಣಾ ನಿಧಿಗಾಗಿ ಕಲೆಯಲ್ಲಿ ತೊಡಗಿಸಿಕೊಂಡ ಪ್ರಖ್ಯಾತ ಪಿಟೀಲು ವಾದಕ ಟಿ. ಚೌಡಯ್ಯನವರು ದಕ್ಷಿಣ ಭಾರತದಾದ್ಯಂತ ತನ್ನ ಸಂಗೀತ ಕಚೇರಿಯನ್ನು ಏರ್ಪಡಿಸಿ ಅದರಲ್ಲಿ ಬಂದ ಹಣವನ್ನು, ಆಕಾಶವಾಣಿ ಸಂಗೀತ ಸಮ್ಮೇಳನದಲ್ಲಿ ರವಿಶಂಕರ್ ಮೊದಲಾದ ಕಲಾವಿದರು ತಮಗೆ ದೊರೆತ ಸಂಭಾವನೆಯನ್ನು, ಎಮ್.ಎಸ್. ಸುಬ್ಬಲಕ್ಷ್ಮಿ ತಮ್ಮ ಆಭರಣಗಳನ್ನು ನೀಡಿದ್ದು, ಬಿ.ಸರೋಜದೇವಿ ೧೦,೦೦೦/- ರೂ.ಗಳನ್ನು ರಕ್ಷಣಾ ನಿಧಿಗೆ ನೀಡಿದರು. ಹೀಗೆ ಕಲೆಯಲ್ಲಿ ತೊಡಗಿಕೊಂಡವರು ದೇಶದ ಸ್ವಾತಂತ್ರ್ಯಕ್ಕೆ ಗಂಡಾಂತರ ಬಂದಾಗ, ರಾಷ್ಟ್ರಕ್ಕೆ ವಿಪತ್ತು ಬಂದಾಗ ಕಲಾವಿದರು ನೀಡಿದ ಶ್ರೀಮಂತಿಕೆಯ ಕಾಣಿಕೆಯಾಗಿದೆ. ಕಲೆ, ಸಾಹಿತ್ಯ ಮತ್ತು ಸಂಗೀತಗಳಿಂದ ಕಲಾವಿದರು ದೇಶವನ್ನು ಶ್ರೀಮಂತಗೊಳಿಸುವುದು ಮಾತ್ರವಲ್ಲದೆ ದೇಶಕ್ಕೆ ಆಪಾಯ ಬಂದಾಗಲೂ ಅದರ ನೆರವಿಗೆ ನಿಲ್ಲುವ ಮನಃಸ್ಥಿತಿಯನ್ನು ನಿರಂಜನರವರು ದಾಖಲಿಸುತ್ತಾರೆ.

ಈ ರೀತಿಯ ಮನಃಸ್ಥಿತಿಯು ಕಲಾವಿದರಲ್ಲಿ ಬೆಳೆಯಲು ಬಹುಮುಖ್ಯ ಕಾರಣವೆನೆಂದರೆ ಮಾನವೀಯತೆ. ಭಾರತೀಯ ಕಲೆ ಸಾಹಿತ್ಯಗಳ ಪ್ರಧಾನ ಪ್ರವೃತ್ತಿಯೇ ಅದಾಗಿದೆ. ವೈರಿಗಳನ್ನು ಜಯಿಸಲು ಸಶಸ್ತ್ರ ಸೇನೆ ಹೇಗೆ ಅವಶ್ಯಕವೋ ಹಾಗೆಯೇ ರಾಷ್ಟ್ರದ ಜನತೆಯನ್ನು ಒಗ್ಗೂಡಿಸಲು ಚಿತ್ರಕಾರರು, ಶಿಲ್ಪಿಗಳು, ನಟರು, ಸಂಗೀತಗಾರರು, ಬರಹಗಾರರ ಸಾಂಸ್ಕೃತಿಕಸೇನೆಯೊಂದನ್ನು ಕಟ್ಟಬೇಕು. ಈ ರೀತಿಯ ಸಾಂಸ್ಕೃತಿಕ ಸೇನೆಯು ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಪಾಲ್ಗೊಂಡು ತಮ್ಮ ಕೃತಿಗಳ ಮೂಲಕ ಪ್ರಜೆಗಳಿಗೆ ಪ್ರೇರಣೆ ನೀಡಿತೋ ಅದೇ ಮಾದರಿಯಲ್ಲಿ ಈಗಲೂ ನಡೆಯಬೇಕಾಗಿದೆ. ಚೀನಾದಲ್ಲಿ ಮಾವೋ ತ್ಸೆತುಂಗ್ ಹೇಳಿದ್ದನ್ನು ಬರೆಯುವ ಪ್ರವೃತ್ತಿ ಇದೆ. ಆದರೆ ನಮ್ಮಲ್ಲಿ ವ್ಯಕ್ತಿ ಸ್ವಾತಂತ್ರ್ಯ ಇದೆ. ಕಲಾವಿದನಾಗಲೀ, ಚಿತ್ರಕಾರನಾಗಲೀ, ಸಂಗೀತಗಾರನಾಗಲೀ, ಸಾಹಿತಿಯಾಗಲೀ ರಾಷ್ಟ್ರದ ಸ್ವಾತಂತ್ರ್ಯ ರಕ್ಷಣೆಗಾಗಿ ತನ್ನ ಕೈಯಲಾದ್ದನ್ನು ಸಹಾಯ ಮಾಡಬಹುದು ಎಂಬುದನ್ನು 'ಕಲೆಯ ಶ್ರೀಮಂತರಿಂದ ಕಾಣಿಕೆ' ಎಂಬ ಲೇಖನದಲ್ಲಿ ಚರ್ಚಿಸುತ್ತಾರೆ.

ಸಾಹಿತ್ಯ ಮತ್ತು ಸಂಸ್ಕೃತಿಯ ಅಭಿವೃದ್ಧಿಗಾಗಿ ಸರಕಾರವು ಮಿತವ್ಯಯವನ್ನು ಸಾಧಿಸುವುದು ಸರಿಯಲ್ಲ. ಜನರನ್ನು ಬೆಸೆಯಬಲ್ಲ ಅತ್ಯಂತ ಪ್ರಬಲ ಶಕ್ತಿಯಾದ ಸಾಹಿತ್ಯ ಮತ್ತು ಲಲಿತ ಕಲೆಗಳಿಗೆ ಸರಕಾರ ಯಾವುದೇ ಕಟ್ಟುಪಾಡಿಗೆ ಒಳಗಾಗದೆ ಬಂದು ಸ್ವಾಯತ್ತೆಯನ್ನು ಹೊಂದಿದ್ದ ಸಂಸ್ಥೆಯನ್ನು ಸ್ಥಾಪಿಸಬೇಕು, ಆ ಮೂಲಕ ಸಾಹಿತ್ಯ, ಕಲೆ, ಸಂಸ್ಕೃತಿ ಪೋಷಣೆಗೆ ಸದಾ ಕಾಲ ತೊಡಗಬೇಕು ಎಂದು ೧೯೭೦ರ ದಶಕದಲ್ಲಿಯೇ ಲಲಿತ ಕಲಾ ಅಕಾಡೆಮಿಯ ಸ್ಥಾಪನೆಯ ಅಗತ್ಯತೆಯನ್ನು ನಿರಂಜನರರು 'ಮೂಗುತಿಯ ಜೊತೆಗೆ ಮೂಗಿಗೂ ಕತ್ತರಿ' ಎಂಬ ಲೇಖನ ಪ್ರತಿಪಾದಿಸುತ್ತಾರೆ.

ಕನ್ನಡ ಸಂಗೀತ ಮತ್ತು ಸಂಸ್ಕೃತಿ ಮೇಲೆ ಹಿಂದಿ ಚಿತ್ರಗಳ ಹಾಡುಗಳು ಆಕ್ರಮಿಸಿ ಮುಂದೊಂದು ದಿನ ಜನತೆಯ ನಿರಶಾದಾಯಕ ಮನಃಸ್ಥಿತಿಯಿಂದ ಕರ್ನಾಟಕ ಸಂಗೀತ ಪರಂಪರೆಯು ನಾಶಗೊಳ್ಳಬಹುದೆಂದು ತಿಳಿಸುವ ಅ.ನ.ಕೃ.ರವರ ವಿಚಾರಧಾರೆಗಳಿಗಿಂತ ಭಿನ್ನವಾಗಿ ನಿರಂಜನರವರು ಲಲಿತಕಲಾ ಅಕಾಡೆಮಿಗಳನ್ನು ಸ್ಥಾಪಿಸಿ ಅವುಗಳ ಮೂಲಕ ಕಲೆಯನ್ನು ಬೆಳೆಸಬಹುದೆಂಬ ದೃಷ್ಟಿಯನ್ನು ಪ್ರಕಟಪಡಿಸುತ್ತಾರೆ.

ಅ.ನ.ಕೃ ರವರು ಹೆಣ್ಣು ಮಕ್ಕಳ ನೃತ್ಯದಲ್ಲಿ ಪ್ರೇಕ್ಷಕರು ಸಾಮಾನ್ಯವಾಗಿ ಅವರ ದೇಹ ಸೌಂದರ್ಯ ಮತ್ತು ವಸ್ತ್ರಾಭರಣಗಳ ಚೆಲುವಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡುವುದು ಪ್ರೇಕ್ಷಕರ

ಚಪಲತೆಯ ದೃಷ್ಟಿಕೋನವಾಗಿದೆ. ನೃತ್ಯ ಕಲೆಯ ಹೆಸರಿನಲ್ಲಿ ಸ್ವಾತಂತ್ರ್ಯವನ್ನು ಸ್ತ್ರೀತತ್ವವನ್ನು ಪ್ರದರ್ಶನ ಮಾಡುವುದು ಕಲೆಯ ಅವಹೇಳನವಾಗಿದೆ. ಅ.ನ.ಕೃ. ಮಾಯಾದೇವಿಯವರ ಕಲೆ ಮತ್ತು ಜೀವನವನ್ನು ಚರ್ಚಿಸುವ ಸಂಧರ್ಭದಲ್ಲಿ ಕರ್ನಾಟಕ ಕಲಾವಿದರು ಭಾಗ ೨ ರಲ್ಲಿ ಪ್ರೇಕ್ಷಕರ ಚಪಲತೆಯ ದೃಷ್ಟಿಕೋನವನ್ನು ಚರ್ಚಿಸುತ್ತಾರೆ. ನಿರಂಜನರವರು ಕಲಾವಿದರ ಹೃದಯ ಶ್ರೀಮಂತಿಕೆಯ ಕಾರಣವಾದ ಮಾನವೀಯತೆಯನ್ನು ರಕ್ಷಣಾ ನಿಧಿಗಾಗಿ ಹಣ ನೀಡಿದ ಕಲಾವಿದರ ಮಾನವೀಯತೆಯ ಮನಃಸ್ಥಿತಿಯನ್ನು ಚರ್ಚಿಸುತ್ತಾರೆ. ಕಲೆಯೆಂಬುದು ಮಾನವೀಯತೆಯನ್ನು ಬೆಳೆಸುವ ಸಾಧನವಾಗಿ ನಿರಂಜನರವರು ನೋಡುತ್ತಾರೆ.

ಸಂಗೀತ, ಕಲೆ, ನಾಟಕ ಇವುಗಳ ಬೆಳವಣಿಗೆಯಲ್ಲಿ ಬರೀ ಪುರುಷರಲ್ಲದೆ ಸ್ತ್ರೀಯರಾದ ಗಂಗೂ ಬಾಯಿ ಹಾನಗಲ್, ನೃತ್ಯಗಾರ್ತಿ ಮಾಯಾದೇವಿ, ಚಂದ್ರಭಾಗ್, ಸಂಗೀತ ವಿದುಷಿ ನೀಲಮ್ಮ, ಸಂಗೀತ ವಿದೂಷಿ ಚೆನ್ನಮ್ಮ, ಚೊಕ್ಕಮ್ಮ ಮೊದಲಾದವರ ಸೇವೆಯನ್ನು ಅ.ನ.ಕೃ ತಿಳಿಸುತ್ತಾರೆ. ಮಾಯಾದೇವಿಯವರು 'ಅನ್ನ ಬಹುಕುರ್ವಿತ' (ಹೆಚ್ಚು ಆಹಾರ ಬೆಳೆಯಲಿ) ನೃತ್ಯದಲ್ಲಿ ರೈತರು ಕಷ್ಟಪಟ್ಟು ಉತ್ತು ಬಿತ್ತಿ, ಮಳೆಗಾಗಿ ಕಾಯುವುದು, ಮಳೆಯಿಂದ ರೈತರ ಸಂತೋಷ, ಕಾಲಕ್ರಮೇಣ ಕೈಗಾರಿಕೆಗಳು ಬಂದು ರೈತರ ಜಮೀನನ್ನು ಕಬಳಿಸುವುದು, ಹಣದ ಉಬ್ಬರ, ಕಾಳಸಂತೆಯಿಂದ ರೈತ ದುರ್ಬಲನಾಗುವುದು, ನಿರುದ್ಯೋಗ, ಕ್ಷಾಮ ಈ ರೀತಿಯ ಅನೇಕ ಸಾಮಾಜಿಕ ಸಮಸ್ಯೆಗಳನ್ನು ನೃತ್ಯಕ್ಕೆ ಅಳವಡಿಸಿಕೊಳ್ಳುವ ಮೂಲಕ ಹೊಸ ಬಗೆಯ ನೃತ್ಯಕ್ಕೆ ಕೈ ಹಾಕಿದ್ದು ಭಿನ್ನ ಧೋರಣೆಯಾಗಿದೆ ಎಂಬುದಾಗಿ ಚಿತ್ರಿಸುತ್ತಾರೆ.

ನೃತ್ಯ, ನಾಟಕ ಯಾವುದೇ ಆಗಲೀ ಸಾಂಪ್ರದಾಯಿಕತೆಯನ್ನು ಮೀರಿ ವಾಸ್ತವ ನೆಲೆಕಟ್ಟಿನಲ್ಲಿ ಸಾಮಾಜಿಕ ಸಮಸ್ಯೆಗಳಿಗೆ ಉತ್ತರವಾಗಿ ಕಲೆಗಳು ಅರಳಬೇಕು. ಅ.ನ.ಕೃ.ರವರು ಕಲೆಯು ಆದರ್ಶವಾಗಿ ಭಾರತೀಯ ಸಂಸ್ಕೃತಿಯ ಹಿನ್ನಲೆಯಲ್ಲಿ ಇರಬೇಕು ಎಂದರೆ ಮತ್ತೊಮ್ಮೆ ವಾಸ್ತವ ನೆಲೆಗಟ್ಟಿನಲ್ಲಿ ಇರಬೇಕು ಎಂದು ಪ್ರತಿಪಾದಿಸುತ್ತಾರೆ. ಕೆಲವೊಮ್ಮೆ ಅ.ನ.ಕೃ.ರವರ ವಿಚಾರ ಸರಣಿಗಳಲ್ಲಿ ದ್ವಂದ್ವತೆಯನ್ನು ಕಾಣಬಹುದು. ಇದನ್ನು ನಿರಂಜನರವರು ತಮ್ಮ 'ಐದು ನಿಮಿಷ' ಕೃತಿಯಲ್ಲಿ 'ಅ.ನ.ಕೃ ಅಸಂಬದ್ಧತೆ' ಎಂಬ ಪತ್ರದಲ್ಲಿ ಅವರ ವಿಚಾರಗಳಲ್ಲಿರುವ ದ್ವಂದ್ವತೆಯನ್ನು ಚರ್ಚಿಸುತ್ತಾರೆ.

ಭಾರತೀಯ ಕಲೆಗಳ ಮೇಲೆ ವಿಪರೀತ ಅಭಿಮಾನವನ್ನು ಹೊಂದಿದ್ದ ಅ.ನ.ಕೃ ರವರು ತಮ್ಮ ವೈಚಾರಿಕ ಬರಹಗಳಲ್ಲಿ ನಾಟಕವನ್ನು ಕುರಿತಂತೆ 'ನಾಟಕ ಕಲೆ' ಎಂಬ ಪ್ರತ್ಯೇಕ ಕೃತಿಯನ್ನು ಕನ್ನಡನಾಡಿನ ನಾಟಕಗಳ ಬಗ್ಗೆ ಬೆಳಕನ್ನು ಚೆಲ್ಲುವ ಕೃತಿಯನ್ನು ಬರೆದಿದ್ದಾರೆ. ಜೀವನ , ಸಾಹಿತ್ಯ ಮತ್ತು ಕಲೆಗಳ ಹಾಗೆಯೇ ನಾಟಕವು ಒಂದು ವಿಶಿಷ್ಟವಾದುದು. ನಮ್ಮ ಪ್ರಾಚೀನರು ನಾಟಕ ಸಾಹಿತ್ಯವನ್ನು ತಿರಸ್ಕರಿಸಿದರು. ಪ್ರಾಚೀನ ಕಾವ್ಯಗಳಲ್ಲಿ ನಾಟಕೀಯತೆ ಅಂಶವಿದ್ದರು ನಾಟಕವು ಬೆಳೆಯದೆ ಇರಲು ಸಾಹಿತ್ಯವು ಅಂದು ರಾಜ ಮಹಾರಾಜರ ಪಡಿನೆರಳಾಗಿ ಬೆಳೆದಿದ್ದು ಒಂದು ಕಾರಣವಾಗಿದೆ. ಆದರೆ ಕನ್ನಡದಲ್ಲಿ ನಾಟಕಕಾರ ಇತರರನ್ನು ಮೆಚ್ಚಿಸುವುದಕ್ಕಿಂತ ತನ್ನ ಅಂತರಾತ್ಮವನ್ನು ಮೆಚ್ಚಿಸುವುದಕ್ಕೆ ಪ್ರಯತ್ನಿಸಬೇಕು. ಆ ನಿಟ್ಟಿನಲ್ಲಿ ನಾಟಕಗಳು ರಚನೆಗೊಳ್ಳಬೇಕು. ಕನ್ನಡ ರಂಗಭೂಮಿಯ ಸುಧಾರಣೆ, ನಾಟಕ ಸಂಗೀತಕ್ಕಿಂತ ಪಾತ್ರ ರಚನೆ, ಭಾವನಾ ಪ್ರಕಟಣೆ ಮತ್ತು ಪ್ರದರ್ಶನಗಳಿಗೆ ಹೆಚ್ಚು ಗಮನ ಕೊಡಬೇಕು, ಒಂದು ಕನ್ನಡಿಯ ಮುಂದೆ ತನ್ನ ಭಾವನೆಗಳನ್ನು ಮುಖದ ಇಂಗಿತವನ್ನು ಅಭ್ಯಾಸಿಸಿ ನಂತರ ರಂಗಭೂಮಿ ಪ್ರದರ್ಶಿಸಿದರೆ ನಾಟಕದಲ್ಲಿ ಅಭಿನಯ

ಮಾಡಲು ಉತ್ತಮ ಭಾವ ಪ್ರದರ್ಶನವಾಗಲು ಸಹಾಯಕವಾಗುತ್ತದೆ ಎಂದು 'ನಾಟಕ ಕಲೆ' ಕೃತಿಯಲ್ಲಿ ನಾಟಕಗಳ ಕುರಿತಂತೆ ತಮ್ಮದೇಯಾದ ರೀತಿಯಲ್ಲಿ ವಿವರಿಸುತ್ತಾರೆ.

'ಸಾಹಿತ್ಯ ಮತ್ತು ಜೀವನ' ಕೃತಿಯ 'ನಾಟಕ ಮತ್ತು ಸಾಮಾಜಿಕ ನಾಟಕ' ಎಂಬ ಪ್ರಬಂಧದಲ್ಲಿ ಆಧುನಿಕ ಕನ್ನಡ ವಿಚಾರಗಳು ಟಿ.ಪಿ. ಕೈಲಾಸಂ, ಶ್ರೀರಂಗರಿಂದ ಹೊಸ ಹೊಸ ರೂಪು ಪಡೆದುಕೊಂಡಿವೆ. ನಾನಾ ರೀತಿಯಲ್ಲಿ ಶೈಲಿ, ಗದ್ಯ, ಸಂಭಾಷಣೆ, ಪ್ರಯೋಗ ಮೊದಲಾದ ರೀತಿಯಲ್ಲಿ ಬೆಳೆಯುತ್ತಿರುವ ನಾಟಕ ಸಾಹಿತ್ಯವನ್ನು ಆಲಸ್ಯ ಮಾಡದೆ ಕನ್ನಡಿಗರು ನಾಟಕ ಕಲೆಯನ್ನು ಪ್ರೋತ್ಸಾಹಿಸಬೇಕು. ನಾಟಕವು ಅವನತಿ ಕಂಡರೆ ಒಂದು ಸಂಸ್ಕೃತಿಯು ಅವನತಿ ಆಗುತ್ತದೆ. ಏಕೆಂದರೆ ಜೀವ ಸಂಬಂಧಗಳನ್ನು, ಮನಸ್ಸನ್ನು ಮುದುಗೊಳಿಸುವ ವಿಚಾರದ ಹಾದಿಯಲ್ಲಿ ಮಾನವನನ್ನು ವಿಕಾಸದೆಡೆಗೆ ಕೊಂಡ್ಯೊವುದು ನಾಟಕಯಾಗಿದೆ. ಕನ್ನಡದಲ್ಲಿ ಸಾಮಾಜಿಕ ನಾಟಕವು ಇಂದು ಶೈಶವಾಸ್ಥೆಯಲ್ಲಿದೆ. ಏಕೆಂದರೆ ಸಮಾಜವು ಕೂಡ ಅದೇ ರೀತಿಯಲ್ಲಿ ಇದೆ. ಸಾಹಿತ್ಯದ ರೀತಿಯಲ್ಲಿ ನಾಟಕ ಬರೆದರೆ ಅದು ಜನಸಾಮಾನ್ಯರಿಗೆ ಮುಟ್ಟುವುದಿಲ್ಲ. ನಾಟಕ ಬೆಳೆಯಬೇಕಾದರೆ ನೋಡುವವರು, ಆಡುವವರೂ ಕೂಡ ಬೆಳೆಯಬೇಕು. ಸಾಮಾಜಿಕ ನಾಟಕ ಬೆಳೆಯದೆ ಸಮಾಜವು ಕೂಡ ಬೆಳೆಯುವುದಿಲ್ಲ, ಸಮಾಜ ಬೆಳೆಯಬೇಕಾದರೆ ನಾಟಕವು ಏಕಕಾಲಕ್ಕೆ ಸಾವಿರಾರು ವ್ಯಕ್ತಿಗಳನ್ನು ಪ್ರಭಾವಿಸಿ ಬದಲಾವಣೆ ತರುವ ಮಾಧ್ಯಮವಾಗಿರುವುದರಿಂದ ನಾಟಕ ಬೆಳೆಯಬೇಕು ಎಂಬ ಹಂಬಲವನ್ನು ವ್ಯಕ್ತಪಡಿಸುತ್ತಾರೆ.

ಕರ್ನಾಟಕ ಹಿತ ಚಿಂತನೆ ಎಂಬ ಕೃತಿಯ 'ಕರ್ನಾಟಕದಲ್ಲಿ ರಾಷ್ಟ್ರೀಯ ರಂಗಭೂಮಿ' ಎಂಬ ಪ್ರಬಂಧದಲ್ಲಿ ರಷ್ಯಾ, ಚೀನ, ಐರ್ಲೆಂಡ್‌ನಂತಹ ದೇಶಗಳು ದೇಶ ಸೇವೆಗಾಗಿ ನಾಟಕ ಕಲೆಯನ್ನು ಬಳಸಿಕೊಂಡ ಮಾದರಿಯಲ್ಲಿ ನಾವು ಜನರಿಗೆ ಶಿಕ್ಷಣವನ್ನು ಜ್ಞಾನವನ್ನು ನಾಟಕದ ಮೂಲಕ ನೀಡಬಹುದು. ಬಯಲು ನಾಟಕಗಳ ಮೂಲಕ ಹಳ್ಳಿಯಲ್ಲಿಯೇ ದೊರೆಯುವ ಸಾಧನ ಸಂಪತ್ತುಗಳನ್ನು ಅಳವಡಿಸಿಕೊಂಡು ನಾಟಕವನ್ನು ಬೆಳೆಸಬೇಕೆಂಬ ಸಲಹೆಯನ್ನು ನೀಡುತ್ತಾರೆ.

ಜನಪದದಲ್ಲಿ ಬೆಳೆದು ಬಂದ ಯಕ್ಷಗಾನ, ಬಯಲಾಟ, ಬೊಂಬೆಯಾಟದ ರೀತಿಯಲ್ಲಿ ಜನಪದ ರಂಗಭೂಮಿ ಬೆಳೆದ ಹಾಗೆ ಕನ್ನಡ ನಾಡಿನಲ್ಲಿ ಅಭಿಜಾತ ರಂಗಭೂಮಿ ಬೆಳೆಯಿತು. ಇದಕ್ಕೆ ಭದ್ರವಾದ ಬುನಾದಿ ಹಾಕಿದವರು ಮೈಸೂರಿನ ಮಹಾರಾಜರಾದ ಶ್ರೀ ಚಾಮರಾಜ ಒಡೆಯರು, ಬಸಪ್ಪ ಶಾಸ್ತ್ರಿ, ನಂಜನಗೂಡಿನ ಸುಬ್ಬಶಾಸ್ತ್ರಿ, ಅಯ್ಯ ಶಾಸ್ತ್ರಿಗಳಿಂದ ಸಂಸ್ಕೃತ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದರು. ಇದು ಕೂಡ ನಾಟಕ ಬೆಳೆಯಲು ಸಾಧ್ಯವಾಯಿತು. ನಂತರ ಇಂತಹ ನಾಟಕಗಳು ನಟನ ಪ್ರಾಧಾನ್ಯತೆಗೆ ಹೆಚ್ಚು ಒತ್ತುಕೊಟ್ಟವು ಸಂಸರು (ಸ್ವಾಮಿ ವೆಂಕಟಾದ್ರಿ ಐಯ್ಯರ್) ಐತಿಹಾಸಿಕ ನಾಟಕಗಳು, ಬಿ.ಎಂ. ಶ್ರೀರವರ ರುದ್ರ ನಾಟಕಗಳು ಬೆಳೆದವು. ಇಂದು ಸಿನಿಮಾದಿಂದ ನಾಟಕ ಕಲೆ ಅಳಿಯುತ್ತಿದೆ. ವಾಕ್ ಚಿತ್ರಗಳ ಉದಯದಿಂದ ನಾಟಕಗಳು ಅವನತಿಯ ಹಾದಿ ಹಿಡಿದವು. ನಾಟಕ ಉಳಿಯುವಂತೆ ಜನತೆಯ ಪ್ರೋತ್ಸಾಹ ಬೇಕು. ಅಮೇರಿಕಾ, ಪ್ರಾನ್ಸ್, ರಷ್ಯಾ ಮೊದಲಾದ ದೇಶಗಳಲ್ಲಿ ಸಿನಿಮಾ ಕಲೆಗೆ ವಿಶೇಷ ಸೌಲಭ್ಯವಿದ್ದರು ನಾಟಕವನ್ನು ಅವರು ಬಿಟ್ಟುಕೊಡಲಿಲ್ಲ. ಹಾಗೆಯೇ ನಾವು ಕೂಡ ಸಾಗಬೇಕೆಂಬ ಆಶಯವನ್ನು 'ಕಳೆದ ಕನ್ನಡ ನಾಟಕ' ಎಂಬ ಪ್ರಬಂಧದಲ್ಲಿ ಅ.ನ.ಕೃ ವ್ಯಕ್ತಪಡಿಸಿದ್ದಾರೆ.

ಸಮದರ್ಶನ ಕೃತಿಯಲ್ಲಿ ನಾಟಕ ಮತ್ತು ಸಿನಿಮಾಗಿರುವ ತಂತ್ರದ ವ್ಯತ್ಯಾಸವನ್ನು ವಿಶ್ಲೇಷಿಸುತ್ತಾರೆ. ವಾಕ್ ಚಿತ್ರಗಳಿಂದಾಗಿ ರಂಗಭೂಮಿಗೆ ಪ್ರಬಲವಾದ ಪೆಟ್ಟು ಕೊಟ್ಟಿತ್ತೆಂದು, ಕಲೆಯೆಂದು ನಾಟಕವನ್ನು ಗುರುತಿಸುವ ಹಾಗೆ ಚಲನಚಿತ್ರ ಕ್ಷೇತ್ರವನ್ನು ಗುರುತಿಸುವುದಿಲ್ಲ. ಕಾರಣವೇನೆಂದರೆ ಅದರ ಸ್ವರೂಪ ಭಿನ್ನವೆಂದು, ನಾಟಕವು ಕಲೆಯೆಂದು, ಚಲನಚಿತ್ರವನ್ನು ಸಾಮೂಹಿಕ ಕಲೆಯೆಂದು ಕರೆಯುವರು. ನಾಟಕದಲ್ಲಿ ನಾಟಕಕಾರ, ನಟ ಮುಖ್ಯವಾದರೆ ಚಲನಚಿತ್ರದಲ್ಲಿ ಸಂಗೀತ, ಛಾಯಚಿತ್ರಗಾರ, ಧ್ವನಿಗ್ರಾಹಕ, ಸಂಪಾದಕ ಮೊದಲಾದವು ಮಹತ್ವ ಪಡೆಯುತ್ತದೆ. ಹಾಗಾಗಿ ನಾಟಕ ಕಲೆ ಬಿಡಿ ಬಿಡಿಯಾಗಿ ಮಾಡಿದ್ದು, ಸಿನಿಮಾ ಇಡಿಯಾಗಿ ಮಾಡುವುದು. ನಾಟಕ ಕಲೆ ವ್ಯಕ್ತಿಯನ್ನು ಅವಲಂಬಿಸಿದರೆ ಚಲನಚಿತ್ರ ಯಂತ್ರಗಳನ್ನು ಅವಲಂಬಿಸಿದೆ ಎಂದು ಚರ್ಚಿಸುತ್ತಾರೆ.

ನಾಟಕ ಕಲೆಯ ಬಗ್ಗೆ ಆಳವಾದ ಜ್ಞಾನದ ಜೊತೆಗೆ ಚಲನಚಿತ್ರದ ಬಗ್ಗೆ ಅ.ನ.ಕೃರವರಿಗೆ ಜ್ಞಾನವಿತ್ತು. ಬಹಳ ಮುಖ್ಯವಾಗಿ ಸಾಹಿತ್ಯ, ಕಲೆ, ಸಂಸ್ಕೃತಿಯ ಸಂವರ್ಧನೆಗೆ ಸಿನಿಮಾವು ಎಂದಿಗೂ ಸಹಾಯ ಮಾಡಲಾರದು ಎಂಬ ದೃಷ್ಟಿಯಲ್ಲಿ ಚಲನಚಿತ್ರ ಕಲೆಯು ಯಾಂತ್ರಿಕ ಮಾಧ್ಯಮವಾಗಿದೆ. ಯಾಂತ್ರಿಕ ಮಾಧ್ಯಮಗಳಿಂದ ನಾಡಿನ ಕಲೆ, ಸಾಹಿತ್ಯ, ಸಂಗೀತವನ್ನು ಉಳಿಸಲು ಮತ್ತು ಬೆಳೆಸಲು ಸಾಧ್ಯವಿಲ್ಲ ಎಂಬ ನಿಲುವನ್ನು ಹೊಂದಿದವರಾಗಿದ್ದಾರೆ.

ನಿರಂಜನರವರು ತಮ್ಮ ವಿಚಾರ ಸಾಹಿತ್ಯದ ಕೃತಿಯಾದ ಐದು ನಿಮಿಷದಲ್ಲಿ 'ನಮ್ಮ ನಾಟ್ಯ ಕಲಾ ವಿಲಾಸಿಗಳು' ಎಂಬ ಲೇಖನದಲ್ಲಿ ಕನ್ನಡ ನಾಡಿನಲ್ಲಿದ್ದ ಅಮೆಚೂರು ನಾಟಕ ಸಂಸ್ಥೆ, ವಿದ್ಯಾರ್ಥಿ ಕಲಾವಿದರು, ಛಾಯ ಕಲಾವಿದರು, ರವಿ ಕಲಾವಿದರು, ಚಿತ್ರ ಕಲಾವಿದರು ಹೊಸ ಹೊಸ ಬಗೆಯ ನಾಟಕಗಳನ್ನು ರಚಿಸಿ ಅಭಿನಯಿಸುತ್ತಿದ್ದಾರೆ. ಅವರಿಗೆ ಸೂಕ್ತವಾದ ರಂಗಭೂಮಿಯಿಲ್ಲವೆಂದು, ರಂಗಭೂಮಿಗಾಗಿ ಈ ಎಲ್ಲಾ ಕಲಾವಿದರು ಚಳವಳಿಯನ್ನು ನಡೆಸಬೇಕೆಂದು ಆ ಮೂಲಕ ತಮ್ಮ ಸೌಲಭ್ಯವನ್ನು ಪಡೆಯಬೇಕೆಂದು ತಿಳಿಸುತ್ತಾರೆ. 'ಹೊಸ ಪೀಳಿಗೆಯ ಬರಹಗಾರ' ಎಂಬ ಲೇಖನದಲ್ಲಿ ಮಂಗಳೂರಿನ ವೆಂಕಟ ರಾವ್ ಕ್ಲಾಯಿಲ್ಕುರ್ ಎಂಬ ಬರಹಗಾರ ಜನತಾರಂಗಭೂಮಿಯನ್ನು ಸ್ಥಾಪಿಸಿಕೊಂಡು ಜನತೆಯ ಸುಖದುಃಖಗಳನ್ನು ಜನಜೀವನದ ಮೇಲೆ ಪರಿಣಾಮ ಉಂಟು ಮಾಡುವ ನಾಟಕಗಳನ್ನು, ಯಕ್ಷಗಾನ, ಬಯಲಾಟಗಳನ್ನು ಬೇಂದ್ರೆ ಮತ್ತು ಕುವೆಂಪು ಮೊದಲಾದ ಕವಿಗಳ ಕೃತಿಗಳನ್ನು ಜನತಾರಂಗ ಭೂಮಿಯ ಮೇಲೆ ತಂದು ಉತ್ತಮ ಸಂದೇಶಗಳನ್ನು ನೀಡುತ್ತಿದ್ದಾರೆ. ಈ ರೀತಿಯ ಹೊಸ ಪೀಳಿಗೆಯ ಉತ್ತಮ ಬರಹಗಾರರು ಉತ್ತಮ ಕೆಲಸವನ್ನು ನಿರ್ವಹಿಸುವವರು ಸಾಹಿತ್ಯ ಮತ್ತು ಕಲೆಯಲ್ಲಿ ಇದ್ದಾರೆ. ಯಾರೂ ಕೂಡ ಕಲೆ ನಾಶಗೊಳ್ಳುತ್ತಿದೆ ಎಂಬ ನಿರಾಶರಾಗಬಾರದೆಂದು ತಿಳಿಸುತ್ತಾರೆ.

ಅ.ನ.ಕೃ ತಮ್ಮ ನಾಟಕ ಕಲೆ ಕೃತಿಯಲ್ಲಿ 'ನಾಟಕ ಮತ್ತು ನಗರಸಭೆ' ಎಂಬ ಪ್ರಬಂಧದಲ್ಲಿ ನಗರಸಭೆಗಳು ನಾಟಕ ಮಂದಿರಗಳನ್ನು (ರಂಗಮಂದಿರ) ನಿರ್ಮಾಣ ಮಾಡಬೇಕು ಎಂದು ತಿಳಿಸುತ್ತಾರೆ. ನಿರಂಜನರು ಕಲಾವಿದರ ತಂಡಗಳೇ ಕಲಾಮಂದಿರಕ್ಕಾಗಿ ಚಳುವಳಿಯನ್ನು ನಡೆಸಿ ಅದರಿಂದ ಸರಕಾರದ ಮೂಲಕ ರಂಗ ಮಂದಿರ ನಿರ್ಮಾಣ ಮಾಡಬೇಕೆಂದು ತಿಳಿಸುತ್ತಾರೆ. ಅ.ನ.ಕೃ ಸರಕಾರ ಮತ್ತು ನಗರ ಸಭೆಗಳು ಮಾಡಲಿ ಎಂದರೆ ನಿರಂಜನ ಸರಕಾರಗಳು ಕಲೆಯೇ ಉಳಿವಿಗಾಗಿ

ಏನೂ ಮಾಡುವುದಿಲ್ಲ. ಚಳವಳಿಯ ಮೂಲಕ ಕಲಾವಿದರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕೆಂದು ನಾಟಕ, ಕಲೆಯನ್ನು ಉಳಿಸಬೇಕು ಎಂದು ಚರ್ಚಿಸುತ್ತಾರೆ.

'ಕಲಾವಿದರ ಅವಮಾನ' ಎಂಬ ಲೇಖನದಲ್ಲಿ ಚಾಮರಾಜ ಪೇಟೆಯಲ್ಲಿ ನಡೆದ ರಾಮನವಮಿ ಉತ್ಸವದಂದು ಕೊಳಲುವಾದಕ ಮಹಾಲಿಂಗಂ ಮತ್ತು ಪಿಟೀಲುವಾದಕ ಕೇಶವ ಮೂರ್ತಿ ಒಬ್ಬರೊನ್ನೊಬ್ಬರು ಜಗಳವಾಡಿಕೊಂಡರು. ಅದೇ ರೀತಿ ಮಡಿಕೇರಿಯಲ್ಲಿ ನಡೆದ 'ಇಳಂದ ಕಾದಲ್' ಎಂಬ ತಮಿಳು ನಾಟಕದಲ್ಲಿ ಎನ್.ಎನ್.ಕೃಷ್ಣನ್ ಮತ್ತು ಟಿ.ಎ.ಮಧುರಂರವರು ಒಬ್ಬರನ್ನೊಬ್ಬರು ಅವಮಾನಿಸಿಕೊಂಡಿದ್ದು ಸರಿಯಲ್ಲವೆಂದು, ಕಲಾವಿದರನ್ನು ಅವಮಾನಿಸುವುದು ಸಂಸ್ಕೃತಿಯ ಗುರುತಲ್ಲ ಎಂಬ ನಿಲುವು ನಿರಂಜನರದು.

ಕಲಾವಿದರಿಗೆ ಅವಮಾನಿಸುವುದಕ್ಕಿಂತ ಸನ್ಮಾನಿಸುವುದು ಒಂದು ಶ್ರೀಮಂತ ಸಂಸ್ಕೃತಿಯ ಸಂಕೇತ ಎಂಬುದಾಗಿ ನಿರಂಜನರವರು ನೋಡುತ್ತಾರೆ. ಕನ್ನಡ ಕಲಾವಿದರಿಗೆ ಕನ್ನಡ ನಾಡಿನಲ್ಲಿ ಹೆಚ್ಚು ಮನ್ನಣೆ ಇರಲಿ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ 'ಮತ್ತೆ ಕೃಷ್ಣನ್ – ಮಧುರಂ' ಎಂಬ ಲೇಖನದಲ್ಲಿ ಬೆಂಗಳೂರಿನಲ್ಲಿ ಕಲಾವಿದರನ್ನು ಗೌರವಿಸುವ ಸತ್ಕಾರವಿದೆ. ಹಾಗಾಗಿ 'ಎಗ್ಜಿಬಿಷನ್' ಗ್ರೌಂಡಿನಲ್ಲಿ ಸಹಸ್ರಾರು ಪ್ರೇಕ್ಷಕರ ಎದುರು ತಮಿಳಿನ 'ಪಣಂ' ನಾಟಕವನ್ನು ಆಡಿಸಲಾಯಿತು. ಈ 'ಎಗ್ಜಿಬಿಷನ್' ಸಮಿತಿಯವರು ಕನ್ನಡ ಕಲಾವಿದರಿಗೆ ಪ್ರೋತ್ಸಾಹ ಕೊಡುವುದಕ್ಕಾಗಿ ನಾಲ್ಕು ಕಾಸು ನೀಡಿ ತಮಿಳು ನಟರನ್ನು ಕರೆಸುವುದು ಸೂಕ್ತವಲ್ಲ. ಏಕೆಂದರೆ ಕನ್ನಡ ಕಲಾವಿದರ ಪ್ರೋತ್ಸಾಹದ ಉದ್ದೇಶದಿಂದ ಕನ್ನಡ ನಾಟಕವನ್ನು ಆಡಿಸದೆ ತಮಿಳು ಕಲಾವಿದರನ್ನು ಕರೆಯಿಸುವುದು ಅವರು ಪ್ರಸಿದ್ಧರೆಂದು, ಸಾವಿರಾರು ರೂಪಾಯಿ ಸಂಪಾದನೆ ಆಗುತ್ತದೆಯೆಂಬ ದೃಷ್ಟಿ ಹೊರತು ಕನ್ನಡ ಕಲಾವಿದರ ಪ್ರೋತ್ಸಾಹ ಸಹಾಯಕ್ಕೆ ಅಲ್ಲವೆಂದು ನಿರಂಜನರವರು ಚರ್ಚಿಸುತ್ತಾರೆ. ನಾಟಕ ಕಲೆಯನ್ನು ಹಣ ಮಾಡುವ ದೃಷ್ಟಿಯಿಂದ ಈ ರೀತಿಯ ಕಾರ್ಯಕ್ರಮಗಳನ್ನು ಕೆಲವು ಸಂಘ ಸಂಸ್ಥೆಯವರು ನಡೆಸುವುದು. ಇಲ್ಲಿ ಹಣ ಮಾಡುವ ದೃಷ್ಟಿ ಇದೆ ಹೊರತು, ಕನ್ನಡ ಕಲಾವಿದರ ರಕ್ಷಣೆ ಪೋಷಣೆ ಬೆಳವಣಿಗೆಯ ಯಾವುದೇ ದೃಷ್ಟಿಯನ್ನು ಕಾಣಲು ಸಾಧ್ಯವಿಲ್ಲ.

ತಮಿಳುನಾಡಿನಲ್ಲಿ ನಟರು ಚಲನಚಿತ್ರ ಕ್ಷೇತ್ರಕ್ಕೆ ಮಾರುಹೋಗಿದ್ದರೂ ರಂಗಭೂಮಿಯನ್ನು ಅವರು ಬಿಟ್ಟಿಲ್ಲ. ಚಲನಚಿತ್ರ ಕ್ಷೇತ್ರ ಮುಂದುವರೆದಿದ್ದರು ಅಲ್ಲಿ ರಂಗಭೂಮಿ ಕುಸಿದು ಬಿದ್ದಿಲ್ಲ. ಈಗಲೂ ಸುಪ್ರಸಿದ್ಧ ನಟರೆಲ್ಲರು ತಮ್ಮ ನಾಟಕದ ಗುಂಪನ್ನು ಕಟ್ಟಿಕೊಂಡು ಊರೂರು ಅಲೆದು ನಾಟಕ ಮಾಡುತ್ತಿದ್ದಾರೆ. ಕಾರಣವೆಂದರೆ ಜನಜೀವನದಲ್ಲಿ ನಾಟಕಕ್ಕೆ ಹೆಚ್ಚಿನ ಪ್ರಾಧಾನ್ಯತೆ ಇದೆ ಎಂದು ನಂಬಿದವರಾಗಿದ್ದಾರೆ. ರಂಗಭೂಮಿಯ ಮೂಲಕ ಸಮಾಜದ ಆಗು ಹೋಗುಗಳ ಮೇಲೆ ಪ್ರಭಾವ ಬೀರಬಹುದೆಂದು ದೃಷ್ಟಿ ಕೃಷ್ಣನ್ ರವರಂತಹ ಕಲಾವಿದರಿಗಿದೆ. ಬಲಿಷ್ಠ ರಂಗಭೂಮಿ ಚಳವಳಿಯನ್ನು ಕಟ್ಟಬೇಕೆಂಬ ಆಸೆ ಅವರದಾಗಿದೆ. ಅದೇ ಮಾದರಿಯಲ್ಲಿ ನಮ್ಮ ಕನ್ನಡ ಕಲಾವಿದರು ನಡೆಯಲಿ ಎಂಬ ಆಸೆಯನ್ನು ವ್ಯಕ್ತಪಡಿಸುತ್ತಾರೆ. ತಮಿಳು ಕಲಾವಿದರಿಗೆ ಇರುವ ರಂಗಭೂಮಿಯ ಮೇಲಿನ ಪ್ರೀತಿ, ಗೌರವಗಳು ಕನ್ನಡ ನಾಡಿನಲ್ಲಿ ಇಲ್ಲವೆನ್ನಬಹುದು. ಬರೀ ಚಲನಚಿತ್ರಗಳು ಬಂದಿದ್ದರಿಂದ ರಂಗಭೂಮಿ ನಾಶಗೊಂಡಿತು ಎನ್ನುವುದಕ್ಕಿಂತ ಅದರ ಪುನರುಜ್ಜೀವನಕ್ಕೆ ಕಲಾವಿದರು ಸಂಘಟಿತ ಪ್ರಯತ್ನ ಮಾಡಬೇಕೆಂಬ ಕಳಕಳಿಯನ್ನು ತಮಿಳು ಕಲಾವಿದರ ಹಿನ್ನಲೆಯಲ್ಲಿ ನಿರಂಜನರು ವಿವರಿಸುತ್ತಾರೆ.

ಅಂಕಣ ಕೃತಿಯ 'ನಾಟಕ ಕರ್ತೃ ಉಘೇ' ಎಂಬ ಲೇಖನದಲ್ಲಿ ಅಮೇರಿಕಾದಲ್ಲಿ ಮ್ಯಾಕ್ಸಿಂ ಗಾರ್ಕಿಯ ನಾಟಕಗಳ ಪ್ರದರ್ಶನದಲ್ಲಿ ಗಾರ್ಕಿಯ ತದ್ರೂಪದಲ್ಲಿ ವೇಷ ಹಾಕಿ ಕಾಣಿಸಿಕೊಳ್ಳುವ ಒಂದು ಪದ್ಧತಿ ಬೆಳೆದು ಬಂದಿದೆ. ಈ ರೀತಿ ಮಾಡುವುದರಿಂದ ನಾಟಕಕಾರರಿಗೆ ಹೆಚ್ಚಿನ ಮನ್ನಣೆ ಲಭಿಸಲಿದೆ. ನಾಟಕಕಾರರನ್ನು ನಾಟಕಗಳು ಪ್ರದರ್ಶನಗೊಳ್ಳುವ ಸಂದರ್ಭದಲ್ಲಿ ವೇಷ ಹಾಕಿ ಪ್ರೇಕ್ಷಕರ ಎದುರು ತೋರಿಸುವ ಮೂಲಕ ನಾಟಕಕಾರರು ಬೆಳಕಿಗೆ ಬರಲು ಸಾಧ್ಯ. ಆ ನಾಟಕಕಾರನ ಬಗ್ಗೆ ಒಂದು ಕಿರು ಪರಿಚಯವು ಇದರಿಂದ ಲಭಿಸುತ್ತದೆ. ಈ ರೀತಿಯ ಮನ್ನಣೆಯು ಕನ್ನಡ ನಾಟಕಕಾರನಿಗೆ ಲಭಿಸಲಿ ಎಂಬ ಆಶಯದೊಂದಿಗೆ ನಿರಂಜನರು ತಿಳಿಸುತ್ತಾರೆ.

ಆಕ್ಷೇಪಾರ್ಹ ನಾಟಕ ಪ್ರದರ್ಶನವನ್ನು ನಿಷೇಧಿಸುವ ಶಾಸನವನ್ನು ಮೈಸೂರು ಸರಕಾರ ಜಾರಿಗೆ ತರುತ್ತಿದೆ. ಈ ವಿಚಾರವಾಗಿ ನಿರಂಜನರವರು ಆಕ್ಷೇಪಾರ್ಹ ನಾಟಕವೆಂದರೆ ಸರಕಾರವನ್ನು ಉರುಳಿಸುವುದಕೋಸ್ಕರ ಹಿಂಸಾತ್ಮಕ ಮತ್ತು ವಿಧ್ವಂಸಕ ಕಾರ್ಯಗಳಲ್ಲಿ ಜನರು ತೊಡಗುವಂತೆ ಪ್ರೇರೇಪಿಸುವುದು. ಕೊಲೆ ಮತ್ತಿತ್ತರ ಹಿಂಸೆಗಳಿಗೆ ಪ್ರೇರಣೆ ನೀಡುವುದು, ಸೈನ್ಯ ಅಥವಾ ಪೋಲೀಸ್ ಪಡೆಯ ನಿಷ್ಠೆಯನ್ನು ಶಿಥಿಲಗೊಳಿಸುವುದು, ಭಾರತದಲ್ಲಿ ಒಂದು ಜನಾಂಗವನ್ನು ಇನ್ನೊಂದು ಜನಾಂಗದ ವಿರುದ್ಧ ಎತ್ತಿ ಕಟ್ಟುವುದು. ಅಸಭ್ಯ ಮತ್ತು ಅಶ್ಲೀಲ ಎಂದು ಇನ್ನು ಆಕ್ಷೇಪಾರ್ಹವಾದುದರಿಂದ ನಾಟಕ ಪ್ರದರ್ಶನಗೊಳ್ಳುವ ಮುಂಚೆ ಏಳು ದಿನಗಳೊಳಗೆ ಜಿಲ್ಲಾಧಿಕಾರಿಗೆ ಹಸ್ತ ಪ್ರತಿಯನ್ನು ನೀಡಬೇಕು. ಈ ಮೇಲ್ಕಂಡ ವಿಚಾರಗಳಿದ್ದರೆ ಆ ನಾಟಕವನ್ನು ನಿಷೇಧ ಮಾಡಲಾಗುತ್ತದೆ. ಈ ರೀತಿಯ ಕಾನೂನುಗಳನ್ನುಜಾರಿಗೆ ತರುವುದು ರಾಜ್ಯಾಂಗದಲ್ಲಿರುವ ಲೇಖನ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂಥದ್ದು ಆಗಿದೆ. ಇದರ ಬಗ್ಗೆ ಸರಕಾರವು ಕೂಡ ಚಿಂತಿಸಬೇಕು ಎಂದು 'ಕಡಿವಾಣವೋ, ಖಡ್ಗವೋ?' ಎಂಬ ಅಂಕಣದಲ್ಲಿ ವಿಶ್ಲೇಷಿಸುತ್ತಾರೆ.

ಸ್ವಾತಂತ್ರ್ಯ ನಂತರ ಭಾರತದಲ್ಲಿ ಕಲಾವಿದರಿಗೆ ಗೌರವವಿಲ್ಲ ಅವರನ್ನು ನಡೆಸಿಕೊಳ್ಳುವ ರೀತಿಯು ಸರಿಯಲ್ಲ. ಅಸ್ಸಾಂನ ಕಲಾವಿದರ ತಂಡ ಅಂತರಾಜ್ಯ ಸಾಂಸ್ಕೃತಿಕ ತಂಡಗಳ ವಿನಿಮಯ ಕಾರ್ಯಕ್ರಮಕ್ಕೆ ಅವರು ದೂರದ ಅಸ್ಸಾಂನಿಂದ ಮೈಸೂರಿಗೆ ಬರಲು ತೃತೀಯ ದರ್ಜೆಯ ರೈಲ್ವೆ ಟಿಕೇಟನ್ನು ಸರಕಾರ ನೀಡಿದೆ. ಅದೇ ರೀತಿಯಲ್ಲಿ ಬೆಂಗಳೂರಿನ ಕಲಾವಿದರು ಮದರಾಸಿಗೆ ಹೋದಾಗ ಜಾಲಾರ್ ಪೇಟೆಯಲ್ಲಿ ಇಳಿದು ರೈಲ್ವೆ ಸ್ಟೇಷನ್‌ನಲ್ಲಿ ರಾತ್ರಿ ಕಳೆದು ಮರುದಿನ ಪ್ಯಾಸೆಂಜರ್ ರೈಲಿನಲ್ಲಿ ಪ್ರಯಾಣಿಸಿದರು. ಇದು ನಮ್ಮ ಸರಕಾರಗಳು ಸಾಂಸ್ಕೃತಿಕ ರಾಯಭಾರಿಗಳಾದ ಕಲಾವಿದರನ್ನು ನೋಡುವ ದೃಷ್ಟಿಯಾಗಿದೆ. 'ಲೋಕದ ಡೊಂಕನ್ನು ತಿದ್ದುವ ಮುನ್ನ' ಎಂಬ ಲೇಖನದಲ್ಲಿ ವಿದೇಶಿ ಕಲಾವಿದರಿಗೆ ರಾಜಾತಿಥ್ಯವನ್ನು ನೀಡುವ ಸರಕಾರಗಳು ಈ ದೇಶದ ಕಲಾವಿದರಿಗೆ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸುವುದಿಲ್ಲ. ಈ ದೇಶದ ಕಲಾವಿದರ ಬಗ್ಗೆ ಕಾಳಜಿಯನ್ನು ಕೂಡ ವಹಿಸುವುದಿಲ್ಲವೆಂದು ಅದು ಇಂದಿಗೂ ಕೂಡ ನಡೆದು ಬರುತ್ತಿರುವುದನ್ನು ನಾವು ಕಾಣಬಹುದು.

ಆಕಾಶವಾಣಿಯ ಕಾರ್ಯಕ್ರಮಗಳಿಗೆ ಲೇಖಕರು, ಕಲಾವಿದರು ಹೆಚ್ಚು ಬರುವುದಿಲ್ಲವೆಂಬ ಆಪಾದನೆಯಿದೆ. ಇದಕ್ಕೆ ಬಹು ಮುಖ್ಯವಾದ ಕಾರಣವೆಂದರೆ ಕಲಾವಿದರು ಚಲನ ಚಿತ್ರ ಉದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ. ಅಲ್ಲಿ ಉದಾರವಾದ ಸಂಭಾವನೆ ದೊರಕುವುದರಿಂದ ಎಂಬುದು ಒಂದೇ ಕಾರಣವಲ್ಲ. ಬಹಳ ಮುಖ್ಯವಾಗಿ ಆಕಾಶವಾಣಿ ಕೇಂದ್ರದ ಅಧಿಕಾರಿಗಳ ವರ್ತನೆಯು

ಕಲಾವಿದರಿಗೆ ಅಸಮಾಧಾನ ಉಂಟುಮಾಡುತ್ತವೆ. ಆಕಾಶವಾಣಿಯಲ್ಲಿ ಒಂದು ನಾಟಕಕ್ಕಾಗಿ ಕಲಾವಿದರು ಮೂರು-ನಾಲ್ಕು ದಿನ ಬರಬೇಕಾಗುತ್ತದೆ. ಇದರಿಂದಾಗಿ ಆ ಕಲಾವಿದನ ಇನ್ನಿತರ ಕೆಲಸಗಳಿಗೆ ಸಮಸ್ಯೆಯಾಗುತ್ತದೆ. ವಾಹನ, ತಿಂಡಿ, ತಿನಿಸುಗಳ ಖರ್ಚು ಮೊದಲಾದುವುಗಳನ್ನು ಆಕಾಶವಾಣಿಯಿಂದ ಬರುವ ಹಣದಿಂದ ಮೇಲ್ವಿಚಾರಣೆ ಮಾಡಲಾಗುವುದಿಲ್ಲ. ಲೇಖಕನಿಗೆ ಕೂಡ ಇದೆ ಸಮಸ್ಯೆ ಇದ್ದು ಪ್ರದರ್ಶನ ನಾಟಕಗಳನ್ನು ಬರೆಯುವುದಕ್ಕಿಂತ ಆಕಾಶವಾಣಿ ನಾಟಕಗಳನ್ನು ಬರೆಯುವುದು ಸುಲಭ ಸಾಧ್ಯವಿಲ್ಲ. ಇದಕ್ಕೆ ಹೆಚ್ಚಿನ ಸಮಯಾವಕಾಶವನ್ನು ನಾಟಕಕಾರ ವಿನಿಯೋಗಿಸಬೇಕು ಎಂದು 'ಶಾರದೆಯಲ್ಲ ಲಕ್ಷ್ಮಿ' ಎಂಬ ಅಂಕಣದಲ್ಲಿ ಕಲಾವಿದರ ಜೀವನ ನಿರ್ವಹಣೆಗಾಗಿ ಚಲನ ಚಿತ್ರ ಮಾಧ್ಯಮದ ಕಡೆ ಹೆಚ್ಚು ಹೋಗುತ್ತಿರುವ ದೃಷ್ಟಿಯನ್ನು ನಿರಂಜನರು ಪಟ್ಟಿ ಮಾಡುತ್ತಾರೆ.

'ದಿನಚರಿಯಿಂದ' ಎಂಬ ಅಂಕಣಗಳ ಸಂಕಲನದ ಕೃತಿಯ 'ಸರಕಾರಿ ನಾಟಕ' ಎಂಬ ಲೇಖನದಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನು ಉಂಟು ಮಾಡಲು ಗೀತಾನಾಟಕಗಳ ಮೂಲಕ ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳೆಸಲು ಕರ್ನಲ್ ಹೇಮಚಂದ್ರ ಗುಪ್ತರನ್ನು ನೇಮಿಸಲಾಯಿತು. ಆ ಸಂದರ್ಭದಲ್ಲಿ ನಿರಂಜನರವರ ಶ್ರೇಷ್ಠ ಕಲೆಗಳು ಸದಾ ಕಾಲವು ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸಿ, ಸಾಮಾಜಿಕ ದುಶ್ಚಟಗಳಿಂದ ಸಮಾಜ ದೂರ ಇರುವಂತೆ ಮಾಡುತ್ತವೆ. ಆದರೆ ಇದೊಂದು ಸರಕಾರಿ ಪ್ರಾಯೋಜಿತ ನಾಟಕ ಮಂಡಳಿಯಾಗಿದೆ. ಅದಕ್ಕೆ ಕರ್ನಲ್ ಹೇಮಚಂದ್ರರಂತವರನ್ನು ನೇಮಕ ಮಾಡಿದರೆ ಹೇಗೆ ಸಾಧ್ಯವಾಗುತ್ತದೆ. ಇವರು ಪ್ರದರ್ಶಿಸುವ ನಾಟಕಗಳು ಶ್ರೇಷ್ಠ ನಾಟಕ ಪ್ರದರ್ಶನವಾಗುತ್ತವೆ ಹೊರತು ಶ್ರೇಷ್ಠ ನಾಟಕಗಳಾಗುವುದಿಲ್ಲ. ಪ್ರಸ್ತುತ ಬೌದ್ಧಿಕ ಜಗತ್ತು ನಿರಾಶೆಯ, ಹತಾಶೆಯ ಭಾವನೆಯಲ್ಲಿದೆ. ಶ್ರೇಷ್ಠ ನಾಟಕಕಾರರನ್ನು ಸಾಮಾಜಿಕ ಪರಿಸರ ರೂಪಿಸಲಾಗದಂತಹ ಪರಿಸ್ಥಿತಿಯಲ್ಲಿ ಇರುವುದರಿಂದ ಹೇಮಚಂದ್ರ ಗುಪ್ತಾರಂತರವರ ನಾಟಕ ಪ್ರದರ್ಶನಗಳು ಜನತೆಗೆ ದೊರಕುತ್ತವೆಯೇ ಹೊರತು ಶ್ರೇಷ್ಠ ನಾಟಕಗಳು ದೊರಕುವುದಿಲ್ಲ. ನಾಟಕಗಳ ಪ್ರದರ್ಶನದಿಂದ, ರಂಗವಿನ್ಯಾಸದಿಂದ ಜನರು ಮೆಚ್ಚುವುದಕ್ಕಿಂತ ನಾಟಕ ಕೃತಿಯು ಸಮಾಜದ ಸಮಸ್ಯೆಗೆ ಪರಿಹಾರವು, ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವ ತಂತ್ರ, ವಸ್ತುಗಳು ಅದರಲ್ಲಿರಬೇಕು. ಸಾಮಾಜಿಕ ಪರಿಸರವೆಂಬುದು ಶ್ರೇಷ್ಠ ನಾಟಕಗಾರರನ್ನು, ಕೃತಿಯನ್ನು ನಿರ್ಮಿಸುತ್ತದೆಯೇ ಹೊರತು ಸರಕಾರಗಳಲ್ಲ. ಆ ರೀತಿಯ ಸಾಮಾಜಿಕ ಒತ್ತಡಗಳೇ ನಾಟಕಕಾರನಿಂದ ಉತ್ತಮ ಕೃತಿ ಹೊರಬರುವಂತೆ ಮಾಡುತ್ತವೆ ಎಂಬ ಅಂಶವನ್ನು ಇಲ್ಲಿ ಗುರುತಿಸಬಹುದಾಗಿದೆ.

ಭಾರತದಲ್ಲಿ ಚಲನಚಿತ್ರ ನಿರ್ಮಾಣ ಎಂಬುದು ಇಂದು ವ್ಯಾಪಾರವಾಗಿದೆ. ವಾಣಿಜ್ಯ ಚಟುವಟಿಕೆಯು ಕೂಡ ಆಗಿದೆ. ಅದು ಕಲೆಯೆಂಬುದು ಒಂದು ನೆಪ ಮಾತ್ರವಾಗಿದೆ. ಇಲ್ಲಿ ಹಣವೇ ದೇವರಾಗಿ, ಅನಕ್ಷರಸ್ಥರೇ ಪ್ರಜೆಗಳಾಗಿ ಇರುವ ಮಾಧ್ಯಮವಾಗಿದೆ. ಅನೀತಿಯ ದೃಶ್ಯ, ಅಸಹ್ಯದ ಸಂಭಾಷಣೆಗಳಿದ್ದು ಇವುಗಳಿಗೆ ಕಾನೂನು ರೀತಿಯ ಕತ್ತರಿಗಳೇ ಬೀಳುವುದಿಲ್ಲ. ಚಲನಚಿತ್ರ ನಿರ್ಮಾಪಕರು ಒಂದು ರೀತಿಯಲ್ಲಿ ನೈಟ್ ಕ್ಲಬ್ ನಡೆಸುವ ಮಾಲೀಕರ ರೀತಿಯಾಗಿದೆ. ಇಂಥವರಿಂದ ಇಂದು ಕಲೆಯ ಬಗ್ಗೆ ಪಾಠವನ್ನು ಕೇಳುವ ದುರ್ದೈವದ ದಿನಗಳಲ್ಲಿದ್ದೇವೆ. ಚಿತ್ರರಂಗದಲ್ಲಿ ಅಲ್ಲೊಬ್ಬ ಇಲ್ಲೊಬ್ಬರು ಉತ್ತಮ ಕಲೋಪಾಸಕರು ಇದ್ದರು, ಇವರ ಮುಂದೆ ಅವರು ಗೌಣರಾಗುತ್ತಾರೆ ಎಂದು 'ಹುತ್ತ-ಹಾವು-ಪುಂಗೀನಾದ' ಎಂಬ ಲೇಖನದಲ್ಲಿ ಚಲನ ಚಿತ್ರವೆಂಬುದು

ಕಲೆಯ ಮಾಧ್ಯಮವಾಗಿಲ್ಲ, ಅಲ್ಲಿ ವ್ಯವಹಾರಿಕ ಲಾಭ, ವ್ಯಾಪಾರದ ದೃಷ್ಟಿ ಅಡಗಿರುವ ಅಂಶವನ್ನು ದಾಖಲಿಸಿದ್ದಾರೆ.

ಅ.ನ.ಕೃರವರು ಸಿನಿಮಾ ಮತ್ತು ನಾಟಕಗಳಿಗಿರುವ ತಂತ್ರವನ್ನು ಕುರಿತಂತೆ ತಿಳಿಸಿದರೆ, ಚಲನಚಿತ್ರ ಮಾಧ್ಯಮ ಹೇಗೆ ವ್ಯಾಪಾರದ ಉದ್ಯಮವಾಗಿ ಕಲೆಯ ಹೆಸರಿನಲ್ಲಿ ಕಲೆಯನ್ನು ನಾಶಮಾಡುತ್ತಿರುವುದನ್ನು ನಿರಂಜನರು ವಿಶ್ಲೇಷಿಸುತ್ತಾರೆ. ನಿರಂಜನರು ರಂಗಭೂಮಿಯನ್ನು ಉಳಿಸಬೇಕಾದರೆ ಭಾರತೀಯ ಇತರ ಪ್ರಾದೇಶಿಕ ಭಾಷೆಗಳ ಉತ್ತಮ ನಾಟಕವನ್ನು ಬೇರೆ ಬೇರೆ ಭಾಷೆಗಳಿಗೆ ಭಾಷಾಂತರಿಸಿ ಅವು ರಾಷ್ಟ್ರವ್ಯಾಪಿಯಾಗುವಂತೆ ಮಾಡಬೇಕು ಮತ್ತು ಆ ರೀತಿಯ ನಾಟಕಗಳನ್ನು ಕನ್ನಡ ನಾಡಿನಲ್ಲಿ ಪ್ರದರ್ಶಿಸಬೇಕು ಎಂಬುದಾಗಿ ಕನ್ನಡ ರಂಗಭೂಮಿಯನ್ನು ಉಳಿಸಲು ಪರಿಹಾರವನ್ನು ನೀಡುತ್ತಾರೆ.

'ರಾಜಧಾನಿಯಿಂದ' ಕೃತಿಯ 'ನಿರ್ಮಲೆ ಮತ್ತು ಸುಂದರಿ' ಎಂಬ ಅಂಕಣದಲ್ಲಿ ಚಲನಚಿತ್ರಗಳು ಬಂದು ನಾಟಕವು ನಾಶವಾಯಿತು ಎಂಬ ಅ.ನಕೃರವರ ವಾದವನ್ನು ನಿರಂಜನರವರು ಒಪ್ಪುವುದಿಲ್ಲ. ಕನ್ನಡ ನಾಟಕಕ್ಕಿಂತ ಬೇರೆ ಭಾರತೀಯ ಭಾಷೆಗಳ ಚಿತ್ರ ಮೇಲು ಎನ್ನುವವರು ಕನ್ನಡ ನಾಡಿನಲ್ಲಿ ಇದ್ದಾರೆ. ನಮ್ಮ ಚಲನ ಚಿತ್ರೋದ್ಯಮಕ್ಕೆ ನಾಟಕವನ್ನು ಕೊನೆಗಾಣಿಸುವ ಶಕ್ತಿಯಿಲ್ಲ. ಚಲನಚಿತ್ರ ಉದ್ಯಮ ಬೆಳೆಯಲು ಸರಕಾರ ಸ್ಟುಡಿಯೋ ನಿರ್ಮಾಣಕ್ಕೆ ನೆರವು, ಉತ್ಸವಗಳು, ಪಾರಿತೋಷಕಗಳು ಕನ್ನಡ ನಿರ್ಮಾಪಕರಿಗೆ ಧನ ಸಹಾಯ ಮಾಡುತ್ತದೆ. ಈ ರೀತಿಯ ಸಹಾಯ, ಸರಕಾರಗಳು ನಾಟಕ ಕಲೆಗೆ ನೀಡುತ್ತಿಲ್ಲ. ಈ ರೀತಿಯ ಸರಕಾರದ ಧೋರಣೆ ಮತ್ತು ಜನತೆಯ ಬೇರೆ ಭಾಷೆಗಳ ನಾಟಕ-ಸಿನಿಮಾ ಮೇಲಿನ ಅವಲಂಬನೆಯಿಂದಾಗಿ ನಮ್ಮ ನಾಟಕ ಕಲೆ ನಾಶವಾಗುತ್ತಿದೆ ಎಂದು ಚರ್ಚಿಸುತ್ತಾರೆ. ನಿರಂಜನರು ಚರ್ಚಿಸಿದ ಈ ವಿಚಾರ ಇಂದಿಗೂ ಕೂಡ ಪ್ರಸ್ತುತವಾಗಿದೆ. ಕನ್ನಡಿಗರು ಕನ್ನಡದ ಚಲನಚಿತ್ರಗಳನ್ನು ನೋಡದೆ ಪರಭಾಷೆ ಚಿತ್ರಗಳ ವ್ಯಾಮೋಹಕ್ಕೆ ಒಳಗಾಗಿರುವುದು ಇಂದೂ ನಮ್ಮ ಕಣ್ಣ ಮುಂದೆಯೇ ಕಾಣುತ್ತಿದೆ.

ಸರಕಾರವೇ ಕನ್ನಡದ ಚಲನಚಿತ್ರ ಪ್ರೇಮಿಗಳಿಗಾಗಿ, ನಟನಟಿಯರಿಗಾಗಿ, ನಿರ್ಮಾಪಕರಿಗಾಗಿ, ಫಿಲ್ಮ್ ಸ್ಟುಡಿಯೋ ಒಂದನ್ನು ರಾಜಧಾನಿಯಲ್ಲಿ ನಿರ್ಮಾಣ ಮಾಡಲು ಮುಂದಾಗಿದೆ. ಜೊತೆಗೆ ಸರಕಾರವೇ ಚಲನ ಚಿತ್ರಗಳನ್ನು ನಿರ್ಮಿಸುತ್ತದೆಯಂತೆ. ಈ ರೀತಿ ಸರಕಾರ ಚಲನಚಿತ್ರಕ್ಕೆ ಆದ್ಯತೆ ನೀಡಿ ಉಳಿದ ಲಲಿತ ಕಲೆಗಳ ಬಗ್ಗೆ ಅಸಡ್ಡೆ ತೋರುವುದು ಸರಿಯಲ್ಲ. ವಿಜ್ಞಾನಿ ದಿವಂಗತ ಬಾಬಾರವರು ತಮ್ಮ ಕಚೇರಿಗಳ ಗೋಡೆಗಳನ್ನು ಅಲಂಕರಿಸುವುದಕ್ಕೆ ಚಿತ್ರಗಳನ್ನು ಕೊಳ್ಳುತ್ತಿದ್ದರು. ಈ ರೀತಿಯಲ್ಲಿ ಅಧಿಕಾರಿಗಳು ನಡೆದುಕೊಂಡು ಕಲೆ, ಕಲಾವಿದರನ್ನು ಉಳಿಸಬೇಕು, ಬೆಳಸಬೇಕು ಎಂದು ಕಲೆಯ ಉಳಿವಿಗೆ ಒಂದು ಮಾರ್ಗವನ್ನು 'ಜನತಾ ಸ್ಟುಡಿಯೋ' ಎಂಬ ಅಂಕಣದಲ್ಲಿ ತಿಳಿಸುತ್ತಾರೆ.

ಸರಕಾರದ ಜನತಾ ಸ್ಟುಡಿಯೋದ ಬಗ್ಗೆ ಚರ್ಚಿಸುವ ನಿರಂಜನರು ಅದೇ ಮಾದರಿಯಲ್ಲಿ ರಷ್ಯಾದ ಚಲನಚಿತ್ರ ಮಾಧ್ಯಮಕ್ಕೆ ಸಂಬಂಧಿಸಿದಂತೆ 'ಬಿಂಬ-ಪ್ರತಿಬಿಂಬಗಳ ಆಟ' ಎಂಬ ಲೇಖನದಲ್ಲಿ ಬೆಂಗಳೂರಿನಲ್ಲಿ 'ಸೋವಿಯತ್ ಚಲನಚಿತ್ರ ಸಪ್ತಾಹ' ಆರಂಭವಾಗಿದೆ. ರಷ್ಯಾದ ಚಲನಚಿತ್ರಗಳು ಅಮೇರಿಕಾ ಚಿತ್ರಗಳ ಹಾಗೇ ಭಾರತೀಯ ಮಾರುಕಟ್ಟೆಯನ್ನು ವ್ಯಾಪಿಸಿಲ್ಲ. ಆದರೆ ಸರ್ವಾಧಿಕಾರಿ ರಾಷ್ಟ್ರವಾದರೂ ಪ್ರದರ್ಶಕರ ಮನಸ್ಸನ್ನು ನೋಯಿಸದಂತೆ ಯಾವ ಚಲನಚಿತ್ರಗಳನ್ನಾದರು ಅವರು ಪ್ರದರ್ಶನ ಮಾಡಬಹುದು. ತಮ್ಮದೇಯಾದ ಅತ್ಯಾಧುನಿಕವಾದ

ಸ್ಟುಡಿಯೋಗಳನ್ನು ಕಟ್ಟಿಕೊಂಡಿದ್ದಾರೆ. ಪ್ರತಿಯೊಂದು ಒಕ್ಕೂಟದ ಗಣರಾಜ್ಯದಲ್ಲಿ ಸ್ಟುಡಿಯೋಗಳಿದ್ದು, ತಮ್ಮ ಪ್ರಾದೇಶಿಕ ಭಾಷೆಯಲ್ಲಿಯೇ ಚಿತ್ರಗಳನ್ನು ನಿರ್ಮಿಸುತ್ತಾರೆ. ಮಕ್ಕಳಿಗಾಗಿ, ಯುವಕರಿಗಾಗಿ ಪ್ರತ್ಯೇಕ ಸ್ಟುಡಿಯೋಗಳಿವೆ. ಚಲನಚಿತ್ರ ಮಂಡಳಿ ಇದೆ. ಅದು ಸಚಿವ ಸಂಪುಟದ ಅಧೀನದಲ್ಲಿರುತ್ತದೆ. ಕಮ್ಯೂನಿಸ್ಟ್ ರಾಷ್ಟ್ರಗಳ ಜೊತೆ ಜಂಟಿಯಾಗಿ ಚಿತ್ರಗಳನ್ನು ನಿರ್ಮಿಸಿ ರಾಜಕೀಯ ಸಿದ್ಧಾಂತದ ಚೌಕಟ್ಟಿನಲ್ಲಿ ಸಾಹಿತ್ಯ, ಚಿತ್ರಕಲೆಗಳಂತೆ ಚಲನಚಿತ್ರವು ಪ್ರಭಾವಿಸಿದೆ. ರಷ್ಯಾದ ಕಲಾವಿದರಿಗೆ ಅಲ್ಲಿನ ಪತ್ರಿಕೆಗಳಲ್ಲಿ ಹೆಚ್ಚು ಪ್ರಚಾರ ಸಿಗದಿದ್ದರು, ಉತ್ತಮ ಶ್ರೇಷ್ಠ ಚಲನ ಚಿತ್ರಗಳನ್ನು ನಿರ್ಮಿಸುತ್ತಿದ್ದಾರೆ ಎಂದು ರಷ್ಯಾದ ಚಲನಚಿತ್ರ ಮಾಧ್ಯಮವನ್ನು ಕುರಿತಂತೆ ಚರ್ಚಿಸುತ್ತಾರೆ. ಕಮ್ಯುನಿಸ್ಟ್ ರಾಷ್ಟ್ರವಾದರು ಕಲೆ, ಸಾಹಿತ್ಯವನ್ನು ಅರಳಿಸುವ ಕಾರ್ಯದಲ್ಲಿ ರಷ್ಯಾವು ತನ್ನದೇ ಆದ ರೀತಿಯಲ್ಲಿ ಪ್ರೋತ್ಸಾಹವನ್ನು ನೀಡುತ್ತಿದೆ. ಆದರೆ ಪ್ರಜಾಪ್ರಭುತ್ವ ರಾಷ್ಟ್ರವಾದ ನಮ್ಮ ದೇಶದಲ್ಲಿ ಸಾಹಿತ್ಯ, ಕಲೆಗಳ ಪ್ರೋತ್ಸಾಹಕ್ಕಾಗಿ ಅನೇಕ ಸಂಸ್ಥೆಗಳನ್ನು ಸರಕಾರ ಸ್ಥಾಪಿಸಿದರೂ ಆ ಸಂಸ್ಥೆಗಳಿಂದ ಉತ್ತಮವಾದ ಕೆಲಸಗಳೇ ನಡೆಯುತ್ತಿಲ್ಲ. ಈ ಸಂಸ್ಥೆಗಳು ಕೇವಲ ಪ್ರಶಸ್ತಿ, ಪಾರಿತೋಷಕಗಳನ್ನು ನೀಡುವುದಕ್ಕೆ ಮಾತ್ರ ಸೀಮಿತವಾಗಿದೆ. ಅದು ರಾಜ್ಯ, ರಾಷ್ಟ್ರದ ಯಾವುದೇ ಸಾಹಿತ್ಯ, ಕಲೆ ಅಕಾಡಮಿಗಳು ಒಂದು ರೀತಿಯ ಋಣಾತ್ಮಕ ಮನಃಸ್ಥಿತಿಯಲ್ಲಿ ವ್ಯವಹರಿಸುತ್ತಿವೆ.

ಯಕ್ಷಗಾನ ಕಲೆಯ ವಿಚಾರವಾಗಿ ಅ.ನ.ಕೃ ತಮ್ಮ ವಿಚಾರ ಸಾಹಿತ್ಯದಲ್ಲಿ ಎಲ್ಲಿಯೂ ಕೂಡ ಪ್ರಸ್ತಾಪಿಸಿಲ್ಲ. ಆದರೆ ನಿರಂಜನರವರು ಯಕ್ಷಗಾನ ಕಲೆಗೆ ಸಂಬಂಧಿಸಿದಂತೆ 'ಅಂಕಣ' ಪತ್ರಿಕಾ ಲೇಖನಗಳ ಸಂಕಲನದಲ್ಲಿ 'ಯಕ್ಷಗಾನದ ಬಯಲಲ್ಲಿ ಕಾರಂತ ಚಕ್ರ' ಎಂಬ ಲೇಖನದಲ್ಲಿ ೮೦೦ ವರ್ಷಗಳ ಹಿಂದೆಯೇ ಕರ್ನಾಟಕದ ಕರಾವಳಿ, ಮಲೆನಾಡು, ಮೂಡುಸೀಮೆಗಳಲ್ಲಿ 'ಏಕ್ಕಲಗಾನ' ಎಂಬ ಹೆಸರಿನೊಂದಿಗೆ ಬೇರೆ ಬೇರೆ ರೀತಿಯಲ್ಲಿ ಹರಡಿಕೊಂಡಿದೆ. ಯಕ್ಷಗಾನವು ಚಿತ್ತಾಕರ್ಷಕವಾದ ನೃತ್ಯ, ರೂಪ, ಅರ್ಥದಾರಿಗಳ ಚತುರ ಸಂವಾದಗಳು ರಾತ್ರಿಯಲ್ಲಿ ನಡೆಯುವ ದೊಡ್ಡ ಆಟವಾಗಿದೆ. ಜೊತೆಗೆ ಚಲನ ಚಿತ್ರ, ಸಂಗೀತ ಕಛೇರಿಗಳ ಹಾಗೇ ಮೂರೇ ಗಂಟೆಗಳಲ್ಲಿಯೂ ಯಕ್ಷಗಾನ ನಡೆದು ಕಲೆಯ ಔತಣವನ್ನು ನೀಡಬಲ್ಲ ಕಲಾಪ್ರಕಾರವಾಗಿದೆ. ಯಕ್ಷಗಾನ ಕಲಾ ಪ್ರಕಾರದಲ್ಲಿ ಶಿವರಾಮ ಕಾರಂತರು ಅನೇಕ ಪ್ರಯೋಗಶೀಲತೆಯನ್ನು ತಂದು ಕಲೆಯನ್ನು ಬೆಳೆಸಲು ಸಹಕಾರಿಯಾದರು. ಈ ರೀತಿಯ ಸುಧಾರಣೆ, ಬದಲಾವಣೆಗಳು ಕಲೆಯಲ್ಲಿ ಆಗಬೇಕೆಂದು, ಯಕ್ಷಗಾನದಲ್ಲಿ ಇತ್ತೀಚಿನ ದಿನಗಳಲ್ಲಿ ಭಾಗವತರು ಪ್ರೇಕ್ಷಕರ ದೃಷ್ಟಿಗೆ ಬೀಳುವಂತೆ ಮೇಕಪ್ ಸಹಿತ ರಂಗದ ಮೇಲೆ ತರಬೇಕು, ಸ್ತ್ರೀ ಪಾತ್ರಗಳನ್ನು ಸ್ತ್ರೀಯರೇ ಮಾಡುವಂತಾಗಬೇಕು. ಚಂಡೆ, ಮದ್ದಳೆ, ಪಿಟೀಲು, ಕ್ಲಾರಿಯಾನೇಟ್, ಸಾಕ್ಸೋಫೋನ್, ವಾದ್ಯಮೇಳಗಳು ಒಟ್ಟಾಗಿ ವೇದಿಕೆಗೆ ಎದುರಾಗಿ ಪ್ರೇಕ್ಷಕರ ಮುಂಭಾಗದಲ್ಲಿ ಸ್ಥಾನ ಪಡೆಯಬೇಕು. ಟೇಪ್‌ರೆಕಾರ್ಡರ್‌ನ ಸಹಾಯದಿಂದ ಸನ್ನಿವೇಶದ ಹಿನ್ನೆಲೆಯಲ್ಲಿ ಧ್ವನಿಗಳನ್ನ ಬಳಸಬೇಕು. ಹೊಸ ಹೊಸ ಪ್ರಯೋಗಗಳ ಮೂಲಕ ಕರ್ನಾಟಕ ಮತ್ತು ಅದರನ್ನೊಳಗೊಂಡ ಭಾರತದ ಪ್ರೇಕ್ಷಕರನ್ನು ಸೆರೆಹಿಡಿಯಬೇಕು ಎಂದು ಸಲಹೆಯನ್ನು ನೀಡುತ್ತಾರೆ. ಆ ಮೂಲಕ ಇವುಗಳನ್ನು ಅಳವಡಿಸಿಕೊಂಡು ಪ್ರಧಾನ ಕಲೆಯಾದ ಯಕ್ಷಗಾನವನ್ನು ಮುಂದಿನ ಪೀಳಿಗೆಗೆ ತಲುಪಿಸಬೇಕು, ಕಲೆಯಲ್ಲಿ ನೂತನ ವಿಧಾನಗಳು, ಸುಧಾರಣೆಗಳು ನಡೆಯಬೇಕು ಎಂಬ ನಿಲುವು ನಿರಂಜನರವರದಾಗಿದೆ.

ಅ.ನ.ಕೃ ಕನ್ನಡನಾಡಿನ ನಾಟಕ ಕಲೆ ಅವನತಿಯಾಗಲು ವಾಕ್ ಚಿತ್ರಗಳ ಪ್ರಭಾವದಿಂದ ಎಂದು ಭಾವಿಸಿದರೆ, ನಿರಂಜನರವರು ಕನ್ನಡದ ನಾಟಕ ಕಲೆಯು, ಕನ್ನಡ ಚಲನ ಚಿತ್ರದಿಂದ

ನಾಶಗೊಳ್ಳದೆ ಜನತೆಯ ಬೇರೆ ಭಾಷೆಗಳ ನಾಟಕ, ಚಲನಚಿತ್ರಗಳ ಮೇಲೆ ಅವಲಂಬಿಸಿರುವುದರಿಂದ ನಮ್ಮ ಕಲೆಗಳು ನಾಶಗೊಳ್ಳುತ್ತಿವೆ ಎಂದು ವಿವೇಚಿಸುತ್ತಾರೆ. ರಷ್ಯಾದಂತಹ ಕಮ್ಯೂನಿಷ್ಟ್ ಸರಕಾರಗಳು ಸ್ಟುಡಿಯೋಗಳನ್ನು ನಿರ್ಮಿಸಿ ಚಲನ ಚಿತ್ರ ಉದ್ಯಮ ಬೆಳೆಯಲು ಮಾಡಿದ ಕಾರ್ಯವನ್ನು ತಿಳಿಸುತ್ತಾರೆ. ಕರ್ನಾಟಕ ಸರಕಾರವು ಜನತಾ ಸ್ಟುಡಿಯೋ ನಿರ್ಮಾಣ ಮಾಡಬೇಕೆಂದು ೧೯೭೦ರ ದಶಕದಲ್ಲಿ ನಿರ್ಧರಿಸಲಾಗಿದೆ. ಆದರೆ ಇಂದು ಕೂಡ ಯಾವುದೇ ರೀತಿಯ ಸ್ಟುಡಿಯೋಗಳು ನಿರ್ಮಾಣವಾಗದೇ ಇರುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಅ.ನ.ಕೃ ಮತ್ತು ನಿರಂಜನರ ವಿಚಾರ ಸಾಹಿತ್ಯದಲ್ಲಿ ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಕೆಲವೊಂದು ವಿಚಾರಗಳಲ್ಲಿ ಸಾಮ್ಯತೆ ಕಂಡುಬಂದರೇ ಮತ್ತು ಕೆಲವು ಸಂದರ್ಭದಲ್ಲಿ ಭಿನ್ನತೆಯನ್ನು ಕಾಣಬಹುದಾಗಿದೆ. ಅ.ನ.ಕೃ ಮತ್ತು ನಿರಂಜನರವರು ಕಲೆ ಮತ್ತು ಸಂಸ್ಕೃತಿಗೆ ಸಂಬಂಧಸಿದಂತೆ ಭಿನ್ನಭಿನ್ನವಾದ ವಿಚಾರಗಳನ್ನು ತಮ್ಮ ವಿಚಾರ ಸಾಹಿತ್ಯದ ಬರವಣಿಗೆಯ ಕೃತಿಯಲ್ಲಿ ಮತ್ತು ಲೇಖನಗಳಲ್ಲಿ ಪ್ರಕಟಪಡಿಸಿದ್ದಾರೆ.

೬.೨ ಕನ್ನಡ ನಾಡು ನುಡಿ ವಿಚಾರಗಳು

ಅ.ನ.ಕೃರವರು ಬರೆದ 'ಕನ್ನಡ ದಾರಿ' ಎಂಬ ಕೃತಿಯಲ್ಲಿ 'ದಿವಾನ ಸಾಹೇಬರವರ ಕನ್ನಡ ಪ್ರಚಾರ' ಎಂಬ ಲೇಖನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂದಿನ ಮೈಸೂರು ಸರಕಾರದ ದಿವಾನರು ಸಂಚರಿಸಿ ಕನ್ನಡ ಭಾಷೆಯ ಬೆಳವಣಿಗೆ ಕಾರ್ಯ ಪ್ರವೃತ್ತರಾಗಿರುವುದನ್ನು ಶ್ಲಾಘಿಸುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮುಸಲ್ಮಾನರು, ಕ್ರೈಸ್ತರು ಯಾವ ಧರ್ಮವನ್ನು ಅವರು ಅನುಸರಿಸಿದ್ದರು ಕನ್ನಡಿಗರೇ ಆಗಿದ್ದಾರೆ. ಹಿಂದೆ ಕನ್ನಡಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸಿದ ಸಮುದಾಯಗಳೇ ಆಗಿವೆ. ಕನ್ನಡದಲ್ಲಿ ಶಿಕ್ಷಣವು ಮಾತೃಭಾಷೆಯಲ್ಲಿಯೇ ಸಿಗಬೇಕು ಎಂಬುದು ಅ.ನ.ಕೃ.ರವರ ನಿಲುವಾಗಿದೆ.

ಅ.ನ.ಕೃ. ಕರ್ನಾಟಕದ ಏಕೀಕರಣದ ವಿಚಾರಗಳನ್ನು ತಮ್ಮ 'ಅಖಂಡ ಕರ್ನಾಟಕ' ಹಾಗೂ 'ಬಳ್ಳಾರಿಯ ಸಮಸ್ಯೆ ಮತ್ತು ಕರ್ನಾಟಕ ಪ್ರಾಂತ್ಯ' ಎಂಬ ಕೃತಿಯಲ್ಲಿ ಚಾರಿತ್ರಿಕ ಹಿನ್ನೆಲೆಯಲ್ಲಿ ಗ್ರಹಿಸುತ್ತಾರೆ. ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿದಂತೆ ಅ.ನ.ಕೃರವರ ವಿಚಾರಗಳನ್ನು ಈ ಕೆಳಕಂಡಂತೆ ವಿಶ್ಲೇಷಿಸಬಹುದು.

೧೯೦೫ರಲ್ಲಿ ಬಂಗಾಳದ ವಿಭಜನೆಯಿಂದಾಗಿ ಈ ದೇಶದಲ್ಲಿದ್ದ ಅನೇಕ ಬಹು ಸಂಖ್ಯಾತರ ಭಾಷೆಗೆ ಅಡ್ಡಿ ಉಂಟಾಗಿದ್ದರಿಂದ ೧೯೫೭ರಲ್ಲಿ ಏಕೀಕರಣ ಚಳುವಳಿ ರೂಪುಗೊಳ್ಳುವ ಮೊದಲೇ ಭಾಷಾವಾರು ಪ್ರಾಂತ್ಯಗಳ ವಿಂಗಡನೆಯನ್ನು ಕುರಿತು ಬಂದು ಸಂಘಟಿತ ಹೋರಾಟದ ಪ್ರಯತ್ನದ ಮನಃಸ್ಥಿತಿ ಇತ್ತು ಎಂದು ಅ.ನ.ಕೃ. ಗ್ರಹಿಸುತ್ತಾರೆ. ಬಳ್ಳಾರಿ ಸಮಸ್ಯೆಗೂ ಕರ್ನಾಟಕ ಏಕೀಕರಣಕ್ಕೂ ಸಂಬಂಧವಿದೆ. ಐತಿಹಾಸಿಕವಾಗಿ, ಭೌಗೋಳಿಕವಾಗಿ, ಜನಮತದ ಅನುಸಾರವಾಗಿ ಆಂಧ್ರದವರಿಗೆ ಬಳ್ಳಾರಿ ಜಿಲ್ಲೆಯ ಮೇಲೆ ಯಾವ ಹಕ್ಕು ಕೂಡ ಇರಲಿಲ್ಲ. ಅದಕ್ಕೆ ೧೯೨೧ರಲ್ಲಿ ಪ್ರಕಟವಾದ 'ಎನ್. ಸಿ. ಕೇಳ್ಕರ್ ಸಮಿತಿಯ ವರದಿ' ಯನ್ನು ಆಧಾರಿಸಿ ಬಳ್ಳಾರಿ ಜಿಲ್ಲೆಯ ಆಲೂರು, ಅದವಾನಿ ಮತ್ತು ರಾಯದುರ್ಗ ತಾಲೂಕುಗಳನ್ನು ಆಂಧ್ರ ಪ್ರಾಂತ್ಯ ಕಾಂಗ್ರೇಸ್ ಸಮಿತಿಗೆ ಒಪ್ಪಿಸಿದಾಗಿನಿಂದಲೇ ಈ ಸಮಸ್ಯೆ ಹುಟ್ಟಿಕೊಂಡಿತ್ತು.

೧೯೪೮ರ ಎಸ್. ಕೆ. ದಾರ್ ಸಮಿತಿಯಾಗಲೀ, ೧೯೪೯ರ 'ಜೆವಿಪಿ' (ಜವಾಹರ್‌ಲಾಲ್ ನೆಹರೂ, ವಲ್ಲಭಬಾಯಿ ಪಟೇಲ್, ಪಟ್ಟಾಭಿ ಸೀತಾರಾಮಯ್ಯ) ಸಮಿತಿಯಾಗಲೀ ಬಳ್ಳಾರಿಯ ಜಿಲ್ಲೆಯನ್ನು ಒಟ್ಟಾಗಿಯಾಗಲೀ ಅಥವಾ ಬಿಡಿ ಬಿಡಿಯಾಗಲೀ ಆಂಧ್ರರಿಗೆ ಒಪ್ಪಿಸುವ ಯಾವುದೇ ಉಲ್ಲೇಖಗಳು ಇರಲಿಲ್ಲ. ಪೊಟ್ಟಿ ಶ್ರೀ ರಾಮುಲುರವರ ನಿಧನವರೆಗೂ ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಬೇಕೆಂಬ ಯಾವುದೇ ಪ್ರಬಲವಾದ ಚಳುವಳಿ ಆಂಧ್ರದಲ್ಲಿ ನಡೆಯಲಿಲ್ಲ. ಪೊಟ್ಟಿ ಶ್ರೀ ರಾಮುಲು ನಿಧನ ನಂತರ ಆಂಧ್ರದಲ್ಲಿ ಉಂಟಾದ ಪ್ರಕ್ಷುಬ್ಧ ವಾತಾವರಣದಿಂದಾಗಿ ಕೇಂದ್ರ ಸರಕಾರದ ಮೇಲೆ ಸರ್ ರಾಧಾಕೃಷ್ಣನ್, ಪಟ್ಟಾಭಿ ಸೀತಾ ರಾಮಯ್ಯ, ವಿ. ವಿ. ಗಿರಿ, ಸರ್ ರಾಮಮೂರ್ತಿ ಮೊದಲಾದ ಆಂಧ್ರದವರ ಪ್ರಭಾವಕ್ಕೆ ಸಿಲುಕಿ ಅವಸರವಾಗಿ ಆಂಧ್ರ ಪ್ರಾಂತ್ಯ ನಿರ್ಮಾಣಕ್ಕೆ ಒಪ್ಪಿಗೆಯನ್ನು ನೀಡಿದರು ಹಾಗೂ ಕನ್ನಡ ನಾಡಿನ ಕೆಲವು ಭಾಗಗಳನ್ನು ಆಂಧ್ರಕ್ಕೆ ನೀಡಿದರು.

ಆದರೆ ಆಂಧ್ರ ಪ್ರಾಂತ್ಯ ರಚನೆಯಾದ ನಂತರ ಕಾಶ್ಮೀರ ಸಮಸ್ಯೆ, ಅಹಾರ ಸಮಸ್ಯೆ, ದೊಡ್ಡ ದೊಡ್ಡ ಕೈಗಾರಿಕೆಗಳು, ಜಲಾಶಯಗಳು, ಪ್ರಯೋಗ ಕ್ಷೇತ್ರಗಳು, ಆಣೆಕಟ್ಟುಗಳ ಸ್ಥಾಪನೆಯಿಂದಾಗಿ ಭಾಷಾವಾರು ಪ್ರಾಂತ್ಯಗಳನ್ನು ವಿಂಗಡಿಸುವುದು ದೇಶದ ಹಿತಕ್ಕೆ ಒಳ್ಳೆಯದಲ್ಲ ಎಂದು ನೆಹರೂರವರು ಕರ್ನಾಟಕ ಏಕೀಕರಣವನ್ನು ವಿರೋಧಿಸಿದರು. ೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಮಹಾಧಿವೇಶನದಲ್ಲಿ ಕರ್ನಾಟಕ ಪ್ರಾಂತ್ಯ ರಚನೆಯ ಬಗ್ಗೆ ಗಾಂಧೀಜಿಯವರು ಒಪ್ಪಿಗೆಯನ್ನು ನೀಡಿದರು. ನೆಹರೂ ಮತ್ತು ಇತರ ಕಾಂಗ್ರೆಸ್ ನಾಯಕರ ಧೋರಣೆಯು ಕೂಡ ಇದೇ ಆಗಿತ್ತು.

'ಕರ್ನಾಟಕ ಹಿತ ಚಿಂತನೆ' ಎಂಬ ಅ.ನ.ಕೃ ಅವರ ಕೃತಿಯ 'ಕರ್ನಾಟಕ ಪ್ರಾಂತ್ಯ ನಿಯೋಜನೆ' ಎಂಬ ಪ್ರಬಂಧದಲ್ಲಿ, ಚಿಕ್ಕ ಪ್ರಾಂತ್ಯಗಳಾದ ಸಿಂಧ್, ಒರಿಸ್ಸಾ, ವಾಯುವ್ಯ ಗಡಿ ಪ್ರದೇಶಗಳ ವಿಸ್ತೀರ್ಣ, ಜನಸಂಖ್ಯೆ, ಆದಾಯ, ಒಟ್ಟು ಲೆಕ್ಕ ಹಾಕಿ ಅ.ನ.ಕೃ.ರವರು ಇಂಥ ಚಿಕ್ಕ ಪ್ರಾಂತ್ಯಗಳೇ ಸ್ವತಂತ್ರ ಪ್ರಾಂತ್ಯಗಳಾಗಿವೆ, ಕರ್ನಾಟಕ ಇವೆಲ್ಲವುದಕ್ಕಿಂತ ವಿಸ್ತೀರ್ಣದಲ್ಲಿ, ಜನಸಂಖ್ಯೆಯಲ್ಲಿ, ವಾರ್ಷಿಕ ಆದಾಯದಲ್ಲಿ, ಸಮಪಾಲು ಹೊಂದಿದ್ದು ಇವೆಲ್ಲ ಪ್ರಮುಖ ಅಂಶಗಳಿಂದ ಕರ್ನಾಟಕ ಪ್ರಾಂತ ರಚನೆ ಅವಶ್ಯಕ ಎಂಬ ವಾದವನ್ನು ನಮ್ಮ ಮುಂದೆ ಇಡುತ್ತಾರೆ.

ಹೈದರಾಬಾದಿನ ಅರಸರು, ಉತ್ತರ ಕರ್ನಾಟಕದ ಕೆಲ ಸಂಸ್ಥಾನದ ಅರಸರುಗಳು ಮರಾಠಿಯವರಾಗಿದ್ದು, ಮೈಸೂರಿನ ರಾಜಸೇವಾಸಕ್ತರ ತಂಡ, ಕರ್ನಾಟಕ ಕಾಂಗ್ರೇಸಿನ ಒಳಗಿರುವ ಕೆಲ ಪಿತೂರಿಗಳು ಏಕೀಕರಣವನ್ನು ವಿರೋಧಿಸುತ್ತಾರೆ. ಇದಕ್ಕೆ ಕಾರಣವೆಂದರೆ ಕರ್ನಾಟಕದ ಕೆಲವು ಪ್ರದೇಶಗಳು, ಮದ್ರಾಸ್ ಸರಕಾರ, ಮುಂಬೈ ಸರಕಾರಕ್ಕೆ ಲಾಭವನ್ನು ತಂದುಕೊಡುವ ಪ್ರಾಂತ್ಯಗಳಾಗಿವೆ. ಕೆಲವು ಮರಾಠಿ ಭಾಷೆಯ ಅರಸರು ಇದೇ ಕಾರಣಕ್ಕೆ ಕರ್ನಾಟಕ ಪ್ರಾಂತ್ಯ ನಿಯೋಜನೆಗೆ ವಿರೋಧಿಸುವುದರಿಂದ ಜನತೆಯು ಇದರ ಅರಿವನ್ನು ಪಡೆಯಬೇಕು. ಜನತೆಗೆ ಕರ್ನಾಟಕ ಪ್ರಾಂತ್ಯ ರಚನೆಯಾಗಲು ರಾಜಕೀಯ ನಾಯಕರುಗಳು ವಿರೋಧಿಸುವ ಕಾರಣಗಳನ್ನು ಅ.ನ.ಕೃ ನೀಡುತ್ತಾರೆ.

ಐದು ರೀತಿಯ ಜಿಲ್ಲೆಯನ್ನು ಒಳಗೊಂಡ ಪ್ರಾಂತ್ಯ ರಚಿಸಿ, ಪ್ರಜಾ ಪ್ರತಿನಿಧಿಯನ್ನು ಸ್ಥಾಪಿಸಬೇಕು. ಹದಿನೆಂಟನೇ ವರ್ಷಕ್ಕೆ ಮೇಲ್ಪಟ್ಟ ಎಲ್ಲರಿಗೂ ಮತದಾನದ ಹಕ್ಕು ನೀಡಬೇಕು. ಮಂತ್ರಿ ಮಂಡಲವೇ ಪ್ರಧಾನ ಮಂತ್ರಿಯನ್ನು ಸೂಚಿಸಬೇಕು. ಪ್ರಾಂತ್ಯದ ಕೇಂದ್ರ ಕಾರ್ಯಾಲಯ ಮತ್ತು

ಪ್ರಜಾ ಶಾಸನ ಸಭೆಯ ಕಾರ್ಯಾಲಯ ಹುಬ್ಬಳ್ಳಿಯಲ್ಲಿರಬೇಕು. ಈ ರೀತಿ ರಚನೆಗೊಂಡ ಕರ್ನಾಟಕ ಪ್ರಾಂತ್ಯ ಸರಕಾರದ ಭಾಷೆ, ಆಡಳಿತದಲ್ಲಿ, ಶಿಕ್ಷಣದಲ್ಲಿ ಜನತೆಯ ಭಾಷೆಯಾಗಿ ಕನ್ನಡ ಪ್ರಥಮ ಸ್ಥಾನವನ್ನು ಪಡೆಯಬೇಕು. ಇದಕ್ಕೆ ಸಹಾಯಕವಾಗಿ ಹಿಂದಿ ಮತ್ತು ಇಂಗ್ಲೀಷ್‌ಗಳನ್ನು ಬಳಸಬಹುದೆಂದು ಅ.ನ.ಕೃ ಸಲಹೆಯನ್ನು ನೀಡುತ್ತಾರೆ.

೧೯೨೧ರಲ್ಲಿಯೇ ಉತ್ತರ ಕರ್ನಾಟಕದಲ್ಲಿ ಶಾಂತ ಕವಿ, ರೊದ್ದ ಶ್ರೀನಿವಾಸರಾಯರು, ಡೆಪ್ಯೂಟಿ ಚೆನ್ನಬಸಪ್ಪ, ಆಲೂರು ವೆಂಕಟರಾಯರು ಕನ್ನಡವನ್ನು ಸಂಘಟಿಸಿದರು. ಕೌಜಲಗಿ ಶ್ರೀನಿವಾಸರಾಯರು, ಕಡಪಾ ರಾಘವೇಂದ್ರರಾಯರು ಮುದವೀಡು ಕೃಷ್ಣರಾಯರು, ಕಾರ್ನಾಡು ಸದಾಶಿವ ರಾಯರು, ಉತ್ತರ ಕರ್ನಾಟಕ ಮತ್ತು ದಕ್ಷಿಣ ಕನ್ನಡದಲ್ಲಿ ಕನ್ನಡ ಭಾಷೆ ಜೀವಂತವಾಗಿರುವಂತೆ ಹಲವು ಕಾರ್ಯಗಳನ್ನು ಮಾಡಿದವರಾಗಿದ್ದಾರೆ. ಕರ್ನಾಟಕ ಪ್ರಾಂತ್ಯ ನಿರ್ಮಾಣದ ಅವಶ್ಯಕತೆಯನ್ನು ಮೈಸೂರೇತರರು ಗ್ರಹಿಸಿದಷ್ಟು ಮೈಸೂರು ಪ್ರಾಂತ್ಯದವರು ಗ್ರಹಿಸಲಿಲ್ಲ, ಕರ್ನಾಟಕ ಪ್ರಾಂತ್ಯದ ಪ್ರಶ್ನೆಯನ್ನೆತ್ತಿಕೊಂಡು ಮೈಸೂರಿನ ಕಲಾವಿದರು, ಸಾಹಿತಿಗಳು, ೧೯೨೪ರಲ್ಲಿಯೇ ಕರ್ನಾಟಕ ಪ್ರಾಂತ್ಯ ರಚನೆಯನ್ನು ಪ್ರಸ್ತಾಪಿಸಿದರು. ಅಲ್ಲಿನ ರಾಜಕೀಯ ಮುಖಂಡರು ಮತ್ತು ಜನತೆಯ ಗಮನವು ಆ ಕಡೆ ಬೀಳಲಿಲ್ಲ. ಕರ್ನಾಟಕ ಪ್ರಾಂತ್ಯ ನಿರ್ಮಾಣ ಮಾಡುವುದಕ್ಕೆ ಮೈಸೂರಿನವರು ಒಪ್ಪುವುದಿಲ್ಲ. ಕರ್ನಾಟಕ ಪ್ರಾಂತ್ಯ ರಚನೆಯಾದರೆ ಲಿಂಗಾಯತರ ಪ್ರಾಬಲ್ಯಕ್ಕೆ ಸಿಕ್ಕಿ ಉಳಿದವರು ಹಿಂಸೆಗೀಡಾಗುತ್ತಾರೆ ಎಂಬ ಭಾವನೆ ಮೂಡಿದ್ದು, ಎಲ್ಲರಿಗಿಂತ ಹೆಚ್ಚಾಗಿ ಒಕ್ಕಲಿಗರಲ್ಲಿ ಈ ಭಾವನೆ ಹೆಚ್ಚು ಮೂಡಿದೆ. ಅದರಲ್ಲಿ ಮೈಸೂರು ಅಸ್ಸೆಂಬ್ಲಿ ಅಧ್ಯಕ್ಷರಾದ ವೆಂಕಟಪ್ಪನವರಂಥವರು ತಮ್ಮ ಜಾತೀಯವರ (ಒಕ್ಕಲಿಗರ) ಪ್ರಾಶಸ್ತ್ಯಕ್ಕೆ ಎಲ್ಲಿ ಧಕ್ಕೆ ಬರುವುದೋ ಎನ್ನುವ ಭೀತಿಯಿದೆ. ಕರ್ನಾಟಕ ಪ್ರಾಂತ್ಯ ರಚನೆಯಿಂದಾಗಿ ಒಕ್ಕಲಿಗರ ಪರಿಸ್ಥಿತಿ ಈಗಿರುವುದಕ್ಕಿಂತಲೂ ಸುಧಾರಿಸುತ್ತದೆ. ಒಂಭತ್ತು ಜಿಲ್ಲೆಗಳ ಆಡಳಿತವನ್ನು ದಕ್ಷತೆಯಿಂದ ನಡೆಸಬಲ್ಲ ಮೈಸೂರಿಗರು ಕರ್ನಾಟಕದ ಉಳಿದ ಎಂಟು ಜಿಲ್ಲೆಗಳ ಆಡಳಿತವನ್ನು ಇಷ್ಟೇ ದಕ್ಷತೆಯಿಂದ ನಡೆಸಬಲ್ಲರೆಂಬ ನಂಬಿಕೆ ವೆಂಕಟಪ್ಪನವರಿಗೆ ಇಲ್ಲವೇ? ಎಂದು ಪ್ರಶ್ನಿಸುತ್ತಾರೆ. ಪ್ರತಿಯೊಂದು ಪ್ರಾಂತ ಸರಕಾರ ಮತ್ತು ಕೇಂದ್ರ ಸರಕಾರಕ್ಕೆ ದಕ್ಷ ಅಧಿಕಾರಿಗಳನ್ನು ರಫ್ತುಮಾಡುತ್ತಿರುವ ಮೈಸೂರಿಗರು ಕರ್ನಾಟಕ ಪ್ರಾಂತ್ಯಾಧಿಕಾರವನ್ನು ನಡೆಸಬಲ್ಲವರು ಇದ್ದಾರೆ ಎಂದು ಅ.ನ.ಕೃ. ಉತ್ತರಿಸುತ್ತಾರೆ. ಕರ್ನಾಟಕ ಪ್ರಾಂತ್ಯ ರಚನೆಯಾದರೆ ಮೈಸೂರು ಭಾಗದ ಒಕ್ಕಲಿಗರಿಗೆ ಆದ್ಯತೆ ದೊರಕುವುದಿಲ್ಲ ಎಂಬ ಪ್ರಶ್ನೆಗೆ ಅ.ನ.ಕೃ.ರವರು ಉತ್ತರವನ್ನು ನೀಡುತ್ತಾರೆ.

ಉತ್ತರ ಕರ್ನಾಟದದಲ್ಲಿ ಈಗ ಪ್ರಬಲರಾಗಿರುವ ವೀರಶೈವರು ಕರ್ನಾಟಕ ಪ್ರಾಂತ್ಯ ರಚನೆಯಾದಲ್ಲಿ ಅವರು ಪ್ರಭಾವಿಯಾಗುತ್ತಾರೆ ಎನ್ನುವ ವಾದಕ್ಕೆ ಅ.ನ.ಕೃರವರು ಸುಮಾರು ಎರಡು ಕಾಲು ಕೋಟಿ ಜನಸಂಖ್ಯೆಯುಳ್ಳ ಕರ್ನಾಟಕ ಪ್ರಾಂತ್ಯ ರಚನೆಯಾದರೆ ವೀರಶೈವರು ೩೦–೩೫ ಲಕ್ಷ ಜನರಿದ್ದಾರೆ. ಇದರಲ್ಲಿ ಹೆಚ್ಚು ಜನ ಒಕ್ಕಲುತನ ಮಾಡುವರು, ವೀರಶೈವರು ಪ್ರಬಲರಾಗಿರುವ ಉತ್ತರ ಕರ್ನಾಟಕದಲ್ಲಿ ಜನ ಸಂಖ್ಯೆಯನ್ನೆ ತೆಗೆದುಕೊಂಡರೆ ವೀರಶೈವರು ಬಹು ಸಂಖ್ಯಾತರಲ್ಲ, ರೆಡ್ಡಿಗಳು, ಕಮ್ಮೆಗಳು, ಬೇಡರು, ಕುರುಬರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊಗವೀರರು, ಬಂಟರು, ಬಿಲ್ಲವರು, ಮೈಸೂರಿನಲ್ಲಿ ಒಕ್ಕಲಿಗರು ಇದ್ದಾರೆ. ಹೀಗೆ ಜನಸಂಖ್ಯೆಯನ್ನು ಗಮನಿಸಿದರೆ ಕರ್ನಾಟಕದಲ್ಲಿ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಬೇರೆ ಬೇರೆ ಸಮುದಾಯಗಳು ಇವೆ.

ಕರ್ನಾಟಕ ಪ್ರಾಂತ್ಯ ರಚನೆಯಾದರೆ ವೀರಶೈವರು ಅಥವಾ ಲಿಂಗಾಯತರು ಪ್ರಬಲರಾಗುತ್ತಾರೆ ಎಂಬ ವಾದವೇ ಸುಳ್ಳು ಎಂಬುದಾಗಿ ಉತ್ತರಿಸುತ್ತಾರೆ.

ಕರ್ನಾಟಕ ಏಕೀಕರಣಕ್ಕೆ ಇವೇ ವಿಚಾರಗಳಲ್ಲದೆ ಮತ್ತೆ ಕೆಲವೊಂದು ವಿಚಾರಗಳು ಏಕೀಕರಣಕ್ಕೆ ತಡೆಯನ್ನುಂಟು ಮಾಡುತ್ತಿವೆ. ಅವುಗಳಲ್ಲಿ ಬಹಳ ಮುಖ್ಯವಾಗಿ ಕೇಂದ್ರ ಸರಕಾರದಲ್ಲಾಗಲೀ, ಮುಂಬಯಿ, ಮದ್ರಾಸ್ ಮಂತ್ರಿಮಂಡಲದಲ್ಲಿ, ಅಖಿಲ ಭಾರತ ಕಾಂಗ್ರೇಸ್ ಕಾರ್ಯ ಸಮಿತಿಯಲ್ಲಾಗಲೀ ಪ್ರಭಾವ ಶಾಲಿಯಾದ ಕನ್ನಡಿಗರು ಇಲ್ಲ. ಕರ್ನಾಟಕ ಪ್ರಾಂತ್ಯ ರಚನೆಯಾದರೆ ಮದ್ರಾಸ್‌ನ ಅಧೀನದಲ್ಲಿದ್ದ ಕನ್ನಡದ ಭಾಗಗಳು ತಮ್ಮ ಕೈ ಬಿಟ್ಟು ಹೋಗುತ್ತವೆ ಎಂದು ಮದರಾಸಿನ ಆಡಳಿತಗಾರರ ದೃಷ್ಟಿ ಹಾಗೂ ಭಾಷಾವಾರು ಪ್ರಾಂತ್ಯ ವಿಂಗಡಣೆಗೊಂಡರೆ ಮುಂಬಯಿ ಪಟ್ಟಣವು ಬಹು ಸಂಖ್ಯಾತರಾದ ಮಹಾರಾಷ್ಟ್ರದ ಕೈ ವಶವಾಗುತ್ತದೆ ಎಂಬ ಪಟೇಲರ ಭೀತಿಯು ಒಂದು ಕಡೆ ಇದೆ. ಕರ್ನಾಟಕದ ಬಂದರು ವ್ಯಾಪಾರ ಮುಂಬಯಿಗೆ ಇಲ್ಲವಾಗುತ್ತದೆ ಮತ್ತು ಕರ್ನಾಟಕ ಆಶ್ರಿತ ಸಂಸ್ಥಾನಗಳು, ಕರ್ನಾಟಕಕ್ಕೆ ಸೇರುವುದರಿಂದ ಅವು ಮಹಾರಾಷ್ಟ್ರಕ್ಕೆ ಇಲ್ಲವಾಗುತ್ತವೆ ಎಂಬ ದೃಷ್ಟಿ ಇವೆಲ್ಲಾ ಕಾರಣಗಳಿಂದ ಕರ್ನಾಟಕ ಏಕೀಕರಣಕ್ಕೆ ತಡೆಯಾಗಿದ್ದನ್ನು ಅ.ನ.ಕೃ. ತಮ್ಮ ವಿಚಾರ ಸಾಹಿತ್ಯದಲ್ಲಿ ಗುರುತಿಸುತ್ತಾರೆ.

ಕರ್ನಾಟಕದ ಹೊರಗೆ ಮೇಲ್ಕಂಡ ವಿಚಾರಗಳು ಏಕೀಕರಣಕ್ಕೆ ತಡೆಯನ್ನು ನೀಡಿದರೇ, ಕರ್ನಾಟಕ ಒಳಗಿನ ವಾತಾವರಣವು ಕೂಡ ಅಷ್ಟೆ ಅಸಹ್ಯಕರವಾಗಿತ್ತು. ಉತ್ತರ ಕರ್ನಾಟಕದ ಸಂಸ್ಥಾನಗಳು, ಹೈದರಾಬಾದ್, ತಮಿಳುನಾಡಿನ ಕನ್ನಡ ಭಾಗಗಳು, ಆಂಧ್ರದ ಕನ್ನಡಭಾಗಗಳು, ಮೈಸೂರು, ಕೊಡಗು ಕೂಡಿಸಿದ ಪ್ರಾಂತ್ಯ ರಚನೆಯಾದರೆ ಮೈಸೂರು ರಾಜಧಾನಿಯಾಗಿ ಮೈಸೂರಿನ ಅರಸರು ಕರ್ನಾಟಕದ ಪ್ರಭುಗಳಾಗಿರುವುದು ಎಂದು ಮೈಸೂರಿಗರ ನಿಲುವಾಗಿತ್ತು. ಕನ್ನಡದ ಗಡಿಗಳನ್ನು ಕಾಯ್ದುಕೊಳ್ಳಬೇಕಾದುದು ಮೈಸೂರಿನ ದೃಷ್ಟಿಯಿಂದ ಅಗತ್ಯವಾಗಿದೆ. ತುಂಗಭದ್ರ, ಆಂಧ್ರಕ್ಕೆ ಸೇರಿದರೆ, ಉತ್ತರ ಕನ್ನಡ ಜಿಲ್ಲೆ ಮಹಾರಾಷ್ಟ್ರಕ್ಕೆ ಸೇರಿದರೆ, ಮೈಸೂರಿಗೆ ಆಗುವ ನಷ್ಟವನ್ನು ಮೈಸೂರಿಗರು ಗಮನಿಸಬೇಕು. ಕನ್ನಡ ನಾಡಿನಲ್ಲಿ ಮೈಸೂರಿಗೆ ಹಿರಿಯಣ್ಣನ ಸ್ಥಾನವಿದೆ. ಕಿರಿಯರ ಹಿತರಕ್ಷಣೆ ಮಾಡುವುದು ಹೇಗೆ ಹಿರಿಯಣ್ಣನ ಕರ್ತವ್ಯವಾಗಿರುತ್ತದೆಯೋ, ಅದೇ ರೀತಿಯಲ್ಲಿ ಕನ್ನಡ ಗಡಿ ಪ್ರದೇಶಗಳನ್ನು ಕಾಯುವ ಮೂಲಕ ಶೋಷಣೆಗೆ ಒಳಗಾಗಿರುವ ಕನ್ನಡ ಬಂಧುಗಳ ಹಿತರಕ್ಷಣೆ ಮಾಡುವುದು ಮೈಸೂರಿಗರ ಆದ್ಯ ಕರ್ತವ್ಯವಾಗಿದೆ. ಮೈಸೂರಿನ ಭಾಗದವರು ಮೈಸೂರಿನ ಪ್ರಾಂತ್ಯ ಮಾತ್ರ ಕನ್ನಡ ನಾಡು ಎಂದು ಭಾವಿಸದೆ ಕನ್ನಡ ಎಲ್ಲೆಲ್ಲಿ ಇದೆಯೋ ಅದೆಲ್ಲ ಕನ್ನಡ ನಾಡಿಗೆ ಸೇರಿದ್ದು ಮತ್ತು ಅಲ್ಲಿನ ಕನ್ನಡಿಗರ ರಕ್ಷಣೆಯ ಜವಾಬ್ದಾರಿಯನ್ನು ಮೈಸೂರಿಗರು ನೋಡಬೇಕೆಂದು ತಿಳಿಸುತ್ತಾರೆ.

ಆಂಧ್ರ ಪ್ರಾಂತ್ಯಕ್ಕೆ ಅದವಾನಿ, ಆಲೂರು, ರಾಯದುರ್ಗ ತಾಲೂಕುಗಳನ್ನು ಖಂಡಿತವಾಗಿ ಸೇರಿಸಬಾರದು. ಅದರಂತೆ ಕೊಡಗು ಹಾಗೂ ಕಾಸರಗೋಡು ತಾಲೂಕುಗಳು ಕೇರಳ ಪ್ರಾಂತ್ಯಕ್ಕೆ ಸೇರಬೇಕೆಂದು ಕೇರಳಿಗರು ಚಳುವಳಿಯನ್ನು ನಡೆಸುತ್ತಿದ್ದಾರೆ. ಮಹಾರಾಷ್ಟ್ರದವರು ಬೆಳಗಾವಿಯನ್ನು ಕಬಳಿಸಲು ಸಂಚು ಹೂಡುತ್ತಿದ್ದಾರೆ. ಇದರ ವಿರುದ್ಧವಾಗಿ ಕನ್ನಡಿಗರು ಹೋರಾಡಬೇಕು ಮತ್ತು ಕೇಂದ್ರ ಸರಕಾರದ ಅಭಿಪ್ರಾಯ ರೂಪಿಸಬೇಕಾದದ್ದು ಆದ್ಯ ಕರ್ತ್ಯವಾಗಿದೆ. ಇಲ್ಲವಾದಲ್ಲಿ ಈ ಪ್ರಾಂತ್ಯಗಳನ್ನು ಕನ್ನಡಿಗರು ಕಳೆದುಕೊಳ್ಳಬೇಕಾಗುತ್ತದೆ ಎಂದು ಚರ್ಚಿಸುತ್ತಾರೆ.

ಆಲೂರು, ಅದವಾನಿ, ರಾಯದುರ್ಗ ತಾಲೂಕಿನಲ್ಲಿ ೧೯೨೧ರ ಜನಗಣತಿಯಂತೆ ಹೆಚ್ಚು ಕನ್ನಡ ಭಾಷಿಗರು ಇದ್ದರು. ಆದರೆ ೧೯೫೧ರ ಜನಗಣತಿಯಲ್ಲಿ ಈ ತಾಲೂಕಿನ ಕನ್ನಡಿಗರ ಸಂಖ್ಯೆ ೬,೭೭,೫೭೫, ತೆಲುಗರ ಸಂಖ್ಯೆ ೩,೭೫,೫೪೧ ಎಂದು. ಆದರೆ ಇದನ್ನು ೧೯೫೩ರಲ್ಲಿ ಜಸ್ಟಿಸ್ ಮಿಶ್ರಾರವರು ಕನ್ನಡಿಗರಿಗೆ ಅನ್ಯಾಯವಾಗಿದೆ ಎಂದು ಒಪ್ಪಿಕೊಳ್ಳದೆ ಆಂಧ್ರಕ್ಕೆ ಸೇರಿಸಿರುವುದು ಸರಿಯಲ್ಲ. ಈ ಮೂರು ತಾಲೂಕುಗಳನ್ನು ಮೈಸೂರಿಗೆ ಸೇರಿಸಬೇಕು. ಇದರಿಂದ ಕಾಂಗ್ರೆಸ್ ಪಕ್ಷದ ಭವಿಷ್ಯದ ದೃಷ್ಟಿಯಿಂದಲು ಒಳ್ಳೆಯದು. ಆಂಧ್ರದಲ್ಲಿ ಕಾಂಗ್ರೆಸ್ ದುರ್ಬಲವಾಗಿ, ಕಮ್ಯುನಿಷ್ಟ್ ಮತ್ತು ಪ್ರಜಾ ಸೋಷಿಯಲಿಸ್ಟ್ ಪಕ್ಷಗಳು ಪ್ರಬಲವಾಗಿವೆ. ಕರ್ನೂಲಿನತ್ತ ಕಮ್ಯುನಿಸ್ಟ್ ಪ್ರಾಬಲ್ಯವುಳ್ಳ ತೆಲಂಗಾಣ, ಇತ್ತ ಅನಂತಪುರಗಳ ಮಧ್ಯೆ ಸೇರಿಕೊಂಡ ಅದವಾನಿಯು ಕಮ್ಯುನಿಸ್ಟ್ ಪ್ರಭಾವಕ್ಕೆ ಒಳಗಾಗುವುದರಲ್ಲಿ ಸಂಶಯವಿಲ್ಲ. ಕಮ್ಯುನಿಸ್ಟರ ದುಷ್ಟಶಕ್ತಿಯನ್ನು ವಿರೋಧಿಸಲು ಸಮರ್ಥವಾಗಿರುವುದು ಕರ್ನಾಟಕ ಮಾತ್ರ ಎಂದು ಕಾಂಗ್ರೆಸ್ ಪಕ್ಷ ತನ್ನ ಅಧಿಕಾರಕ್ಕಾಗಿ ಈ ಮೂರು ತಾಲೂಕುಗಳನ್ನು ಆಂಧ್ರಕ್ಕೆ ಸೇರಿಸಿದ ರಾಜಕೀಯ ನಿಲುವನ್ನು ಭಿನ್ನವಾಗಿ ಅ.ನ.ಕೃ ಇದರಿಂದ ಕಾಂಗ್ರೆಸ್‌ಗೆ ಒಳಿತಾಗುವುದಿಲ್ಲ. ಕಮ್ಯುನಿಷ್ಟ್ ಪಾರ್ಟಿಗೆ ಈ ತಾಲೂಕಿಗಳಿಂದ ರಾಜಕೀಯ ಸ್ಥಾನ ಲಭಿಸುತ್ತದೆ ಎಂದು ತಿಳಿಸುತ್ತಾರೆ. ಕಾಂಗ್ರೆಸಿಗೆ ಅಧಿಕಾರ ಸಿಗದೆ ಕಮ್ಯುನಿಸ್ಟ್ ಪ್ರಾಬಲ್ಯಗೊಳ್ಳಲು ಸಹಕಾರಿಯಾಗುತ್ತದೆ ಎಂದು ತಿಳಿಸುವ ಅ.ನ.ಕೃ ಈ ಮೊದಲು ಕಾಂಗ್ರೆಸ್ ಪಕ್ಷವು ಕಮ್ಯುನಿಸ್ಟ್ ಸರಕಾರವನ್ನು ಮತ್ತು ಪಕ್ಷವನ್ನು ಹೆಚ್ಚು ವಿಚಾರಗಳಲ್ಲಿ ದ್ವೇಷಿಸುತ್ತಿತ್ತು. ಹಾಗಾಗಿ ಈ ವಿಚಾರದ ಮೂಲಕ ತಾತ್ವಿಕ ಚೌಕಟ್ಟಿನ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಉತ್ತರಿಸುತ್ತಾರೆ. ಕನ್ನಡ ನಾಡಿನ ಭಾಗಗಳನ್ನು ಆಂಧ್ರಕ್ಕೆ ಸೇರಿಸಿದರೆ ಅದರಿಂದ ಕಾಂಗ್ರೆಸ್ ಪಕ್ಷಕ್ಕೆ ಲಾಭವಾಗುತ್ತದೆಂಬ ದೃಷ್ಟಿಯು ಮುಂದೆ ಅದೇ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ಸಿಗದೆ ಕಮ್ಯುನಿಸ್ಟ್ ಪಕ್ಷ ಪ್ರಾಬಲ್ಯಗೊಳ್ಳಲು ಇದು ಸಹಾಯಕವಾಗುತ್ತದೆ.

ಅನೇಕ ವರ್ಷಗಳಿಂದ ಮದ್ರಾಸ್ ಸರಕಾರ ಬಳ್ಳಾರಿ ಸಂಪತ್ತನ್ನು ಕಬಳಿಸುತ್ತಾ ಬಳ್ಳಾರಿಯ ಜನರಿಗೆ ಯಾವುದೇ ಸೌಲಭ್ಯವನ್ನು ನೀಡದೆ ವಂಚಿಸಿದ್ದಾರೆ. ಈಗ ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರಿರುವುದರಿಂದ ಮೈಸೂರು ಸರಕಾರ ಮತ್ತು ಕನ್ನಡ ನಾಡಿನ ನಾಯಕರು ಸಂಪತ್ತಿನ ಒಂದು ಭಾಗ ನ್ಯಾಯವಾಗಿ ಕನ್ನಡಿಗರಿಗೆ ಲಭಿಸಬೇಕೆಂದು ಕೇಂದ್ರ ಸರಕಾರದ ಗಮನಕ್ಕೆ ತರಬೇಕು ಎಂದು ಚರ್ಚಿಸುತ್ತಾರೆ.

ಕರ್ನಾಟಕ ಏಕೀಕೃತವಾಗಬಾರದೆಂದು ಅನೇಕ ವಿರೋಧಿಗಳು ಅನೇಕ ತಂತ್ರವನ್ನು ಹೆಣೆದ ವಿಚಾರಗಳಲ್ಲಿ ಬಹಳ ಮುಖ್ಯವಾದವುಗಳೆಂದರೆ,

- ಮೈಸೂರು ರಾಜ್ಯದೊಂದಿಗೆ ಕರ್ನಾಟಕದ ಇತರ ಪ್ರದೇಶಗಳು ಒಂದುಗೂಡಿದರೆ ಉತ್ತರ ಕರ್ನಾಟಕದ ಜನ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಜನ ಮೈಸೂರಿನ ಮಹಾರಾಜರನ್ನು ಅಂಗೀಕರಿಸುವುದಿಲ್ಲ.

- ಮೈಸೂರು ಸಂಸ್ಥಾನ, ಶಿಕ್ಷಣ, ಆರೋಗ್ಯ, ಕೈಗಾರಿಕೆ, ವ್ಯಾಪಾರ ವಾಣಿಜ್ಯಗಳಲ್ಲಿ ಅಭಿವೃದ್ಧಿಗೊಂಡಿದ್ದು, ಮೈಸೂರು ಕರ್ನಾಟಕದೊಂದಿಗೆ ಬೆರೆತರೆ ಆರ್ಥಿಕ ಪರಿಸ್ಥಿತಿ ಏರುಪೇರಾಗಿ ಮೈಸೂರಿನ ಜನ ನಿರ್ಗತಿಕರಾಗುತ್ತಾರೆ.

- ಮೈಸೂರಿನಲ್ಲಿ ತಮಿಳರು, ತೆಲುಗರು, ಮಲೆಯಾಳಿಗರು ಇದ್ದಾರೆ. ಕರ್ನಾಟಕ ರಚನೆಯಾದರೆ ಇತರರಿಗೆಲ್ಲಾ ತೊಂದರೆಯಾಗುತ್ತದೆ.

- ಮೈಸೂರಿಗೆ ವಿಶಿಷ್ಟ ಸಂಸ್ಕೃತಿ ಇದೆ. ಕರ್ನಾಟಕ ಪ್ರಾಂತ್ಯದೊಂದಿಗೆ ಮೈಸೂರು ವಿಲೀನವಾದರೆ ಆ ಸಂಸ್ಕೃತಿ ನಾಶವಾಗುತ್ತದೆ.

ಈ ರೀತಿಯ ಏಕೀಕರಣಕ್ಕೆ ಸವಾಲಾದ ವಿಚಾರಗಳಿಗೆ ಅ.ನ.ಕೃರವರು ಮೈಸೂರಿನ ಅರಸರು ಪ್ರಜಾಪ್ರಭುತ್ವ ವಾದಿಯಾಗಿದ್ದು ಮೈಸೂರಿಗರು ಹೇಗೆ ಗೌರವವನ್ನು ನೀಡುತ್ತಾರೋ ಹಾಗೆಯೇ ಉಳಿದ ಪ್ರದೇಶದವರು ರಾಜರ ಪ್ರಮುಖಾಧಿಕಾರವನ್ನು ಒಪ್ಪಿಕೊಂಡಿದ್ದಾರೆ. ಮೈಸೂರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಬೆಳೆದಿದ್ದರು ಬಳ್ಳಾರಿ ಜಿಲ್ಲೆಯ ಖನಿಜ ಸಂಪತ್ತು, ಉತ್ತರ ಕರ್ನಾಟಕದ ಹತ್ತಿ, ಸೇಂಗಾಯಿ, ದಕ್ಷಿಣ ಕನ್ನಡ ಜಿಲ್ಲೆಯ ಮೀನಿನ ವ್ಯಾಪಾರದ ನೆರವು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಲಭಿಸಲಿದೆ. ಮೈಸೂರಿಗೆ ಬಂದರಿನ ಸೌಕರ್ಯವು ಲಭಿಸಿ ವ್ಯಾಪಾರ ವಹಿವಾಟಿಗೆ ಇದರಿಂದ ಅನುಕೂಲವಾಗುತ್ತದೆ. ಮೈಸೂರಿನ ಹಾಗೇ ಬಂಗಾಳ, ಮಹಾರಾಷ್ಟ್ರ, ಗುಜರಾತ್ ಮೊದಲಾದ ಪ್ರಾಂತ್ಯಗಳಲ್ಲಿ ಬೇರೆ ಬೇರೆ ಭಾಷೆಗಳನ್ನಾಡುವ ಜನ ಸಮುದಾಯವಿದೆ. ಅಲ್ಲಿಗೆ ಇರದ ಸಮಸ್ಯೆ ಮೈಸೂರಿನಲ್ಲಿರುವ ಇತರ ಭಾಷಿಕರಿಗೆ ಬರುತ್ತದೆ ಎಂಬ ವಾದದಲ್ಲಿ ಸತ್ಯವಿಲ್ಲ. ಕಾರಣವೆಂದರೆ ಕನ್ನಡ ನಾಡಿನ ಜನತೆ ಸಹಬಾಳ್ವೆಯನ್ನು ಮೈಗೂಡಿಸಿಕೊಂಡವರು. ಉತ್ತರ ಕರ್ನಾಟಕದ ಸಂಸ್ಕೃತಿಯಿಂದ ಮೈಸೂರಿನ ಸಂಸ್ಕೃತಿ ಅವನತಿಯಾಗುತ್ತದೆ ಎಂಬುದು ಸರಿಯಾದ ವಾದವಲ್ಲ. ಕನ್ನಡ ನಾಡಿನ ಸಂಸ್ಕೃತಿಗೂ ಮೈಸೂರಿನ ಸಂಸ್ಕೃತಿಗೂ ಸಂಬಂಧವಿದ್ದು ಯಾವುದೇ ವ್ಯತ್ಯಾಸವಿರುವುದಿಲ್ಲ. ಮೈಸೂರಿನ ಹೊಯ್ಸಳ ಶಿಲ್ಪ ಸಂಪ್ರದಾಯ ಉತ್ತರ ಕರ್ನಾಟಕಕ್ಕೆ ಹೋಗಿ ಅಲ್ಲಿನ ಚಾಲುಕ್ಯ ಶಿಲ್ಪ ಸಂಪ್ರದಾಯ ಮೈಸೂರಿಗೆ, ಅಲ್ಲಿನ ಹಿಂದೂಸ್ತಾನಿ, ಜಾನಪದ, ಚಿತ್ರಕಲೆ ಇಲ್ಲಿಗೆ, ಇಲ್ಲಿನ ಸಂಗೀತ, ಭರತನಾಟ್ಯ ಮೊದಲಾದ ಕಲೆ, ಸಾಹಿತ್ಯ, ಸಂಗೀತ, ಜಾನಪದ, ವಾಸ್ತುಶಿಲ್ಪಿ, ಆಚಾರ–ವಿಚಾರ ವ್ಯವಹಾರದಲ್ಲಿ ಕೊಂಡುಕೊಳ್ಳುವಿಕೆ ನಡೆದು ಮತ್ತಷ್ಟು ಕರ್ನಾಟಕ ಸಾಂಸ್ಕೃತಿಕವಾಗಿ ಬಲಿಷ್ಠವಾಗುತ್ತದೆ. ಮೈಸೂರು, ಮಂಗಳೂರು, ಧಾರವಾಡ ಸಂಸ್ಕೃತಿ ಎನ್ನುವ ಮಾತುಗಳಿಗೆ ಯಾವುದೇ ಅರ್ಥವಿಲ್ಲ, ಕನ್ನಡ ಮಾತನಾಡುವ ಎಲ್ಲಾ ಜನಗಳ ಜೀವನವನ್ನು ಹಾಸುಹೊಕ್ಕಾಗಿ ಹೊಂದಿಕೊಂಡಿರುವುದೇ ಕನ್ನಡ ಸಂಸ್ಕೃತಿಯಾಗಿದೆ. ಕರ್ನಾಟಕ ಏಕೀಕರಣವಾದರೆ ಮೈಸೂರಿಗೆ ಅದರಿಂದ ಅಪಾರವಾದ ನಷ್ಟವಾಗುತ್ತದೆ ಎನ್ನುವವರಿಗೆ ಅ.ನ.ಕೃ ನಷ್ಟಕ್ಕಿಂತ ಮೈಸೂರಿಗೆ ಲಾಭವಾಗುತ್ತದೆ ಎಂಬುದನ್ನು ವಿಸ್ತಾರವಾಗಿ ಚರ್ಚಿಸಿ ಕರ್ನಾಟಕ ಏಕೀಕರಣದ ಅಗತ್ಯತೆಯನ್ನು ಪ್ರತಿಪಾದಿಸುತ್ತಾರೆ.

'ಅಖಂಡ ಕರ್ನಾಟಕ' ಎಂಬ ಕೃತಿಯಲ್ಲಿ ಅ.ನ.ಕೃ.ರವರು 'ಕೊಡಗಿನ ಸಮಸ್ಯೆ' ಎಂಬ ಲೇಖನದಲ್ಲಿ ಕನ್ನಡನಾಡು ಒಂದಾಗಬೇಕು, ಒಂದೇ ಅಧಿಕಾರದ ಸೂತ್ರದಲ್ಲಿ, ರಾಜ್ಯಾಂಗದಲ್ಲಿ ಬರಬೇಕು ಎಂದು ಚಳುವಳಿ ನಡೆಯುತ್ತಿರುವ ಸಂದರ್ಭದಲ್ಲಿ ಕೊಡಗು ಕರ್ನಾಟಕದೊಂದಿಗೆ ವಿಲೀನವಾದರೆ ಅದು ಸಂಪೂರ್ಣವಾಗಿ ನಿರ್ನಾಮ ಹೊಂದುತ್ತದೆ ಎಂಬ ಅಭಿಪ್ರಾಯವು ರಾಜಕೀಯ ನಾಯಕರ ದೃಷ್ಟಿಯಾಗಿದೆ. ಕೊಡಗು ಒಂದು ಸ್ವತಂತ್ರವಾಗಿಯೇ ಉಳಿಯಬೇಕು. ಕೊಡವರು ಒಂದು ಪ್ರತ್ಯೇಕ ಜನಾಂಗ ಅವರು ಕರ್ನಾಟಕದೊಂದಿಗೆ ಬೆರೆಸಲು ಸಾಧ್ಯವಿಲ್ಲ ಎಂಬ ವಾದಕ್ಕೆ ಅ.ನ.ಕೃರವರು, ಕೊಡಗಿಗೂ ಮೈಸೂರಿಗೂ ನಿಕಟ ಸಂಬಂಧವಿರುವುದರಿಂದಾಗಿ ಮೈಸೂರಿಗೆ ಕೊಡಗನ್ನು ನೀಡುವುದು ಒಳ್ಳೆಯದು. ಕೊಡಗಿನ ವಿದ್ಯಾವಂತ ತರುಣರಿಗೆ ಮೈಸೂರಿನಲ್ಲಿ

ಮೊದಲಿನಿಂದಲೂ ವಿದ್ಯೆ, ಉದ್ಯೋಗಗಳನ್ನು ನೀಡಿದೆ. ಕೊಡಗಿನ ಇಂದಿನ ಆರ್ಥಿಕ ಸ್ಥಿತಿಯಲ್ಲಿ ಅದು ಸ್ವತಂತ್ರವಾಗಿ, ಪ್ರಾಂತ್ಯವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಪ್ರತಿವರ್ಷ ಕೇಂದ್ರ ಸರಕಾರ ನೀಡುವ ಶುಲ್ಕದೊಂದಿಗೆ ಆ ಪ್ರಾಂತ್ಯ ಆಡಳಿತಾಧಿಕಾರ ನಡೆಯುತ್ತಿದೆ. ನಾಳೆ ಕೇಂದ್ರ ಸರಕಾರ ನೀಡುವ ಶುಲ್ಕ ನಿಂತರೆ ಹೇಗೆ ರಾಜ್ಯಾಡಳಿತ ನಡೆಸಲು ಸಾಧ್ಯ? ಎಂದು ಪ್ರಶ್ನಿಸುತ್ತಾರೆ. ಇಂದಲ್ಲ ಅಥವಾ ನಾಳೆ ಕೊಡಗು ತನ್ನ ವರಮಾನದಿಂದಲೇ ಒಂದು ಸರಕಾರ ನಡೆಸಲು ಸಮರ್ಥವಾಗಿಲ್ಲ. ಅದರ ಕಚ್ಚಾ ಮಾಲುಗಳನ್ನು ಮಾರಾಟ ಮಾಡಬೇಕಾದರೆ ಮಂಗಳೂರಿನ ಬಂದರು ಹಾಗೂ ಮೈಸೂರಿನ ರೈಲ್ವೆ ಸೌಕರ್ಯಗಳು ಬೇಕು. ಕೊಡಗಿನ ಆರ್ಥಿಕ ಸ್ಥಿತಿ ಸುಧಾರಿಸಲೂ ಕರ್ನಾಟಕ ಸರಕಾರದಿಂದ ಸಾಧ್ಯ. ಕೊಡಗಿನಲ್ಲಿ ಒಟ್ಟು ೧,೭೪,೯೭೬ ಜನಸಂಖ್ಯೆ ಇದೆ. ಇದರಲ್ಲಿ ೪೦,೦೦೦ ಕೊಡವರು, ಉಳಿದಂತೆ ಒಕ್ಕಲಿಗರು, ಹವ್ಯಕರು, ಲಿಂಗಾಯತರು ಇತರ ಮತದವರಿದ್ದು ಒಂದೇ ಸಮುದಾಯದವರಿಗೆ ಸೇರಿದ ಪ್ರದೇಶವಾಗಿಲ್ಲ. ಕೊಡಗು ಕೇಳುತ್ತಿರುವುದು ಸ್ವತಂತ್ರ ಅಧಿಕಾರ. ಭಾರತ ಸರಕಾರಕ್ಕೂ ತಮಗೂ ಯಾವುದೇ ಸಂಬಂಧ ಬೇಡವೆಂದು, ಕೊಡಗಿನ ನಾಲ್ಕು ಜನ ಉದ್ಯೋಗಕ್ಕಾಗಿ ಉಳಿದ ಜನ ಸಮುದಾಯವನ್ನು ಬಲಿ ಕೊಡಲು ಒಪ್ಪುವುದಿಲ್ಲ. ಸ್ವತಂತ್ರ ಕರ್ನಾಟಕದಲ್ಲಿ ಕೊಡಗು ಕೂಡ ಸಮಾವೇಶಗೊಂಡು ತನ್ನ ಸಾಧನೆಯನ್ನು ಕೈಗೊಳ್ಳಬೇಕು. ಈ ಎಲ್ಲಾ ಕಾರಣಗಳಿಂದ ಕೊಡಗು ಪ್ರದೇಶ ಮೈಸೂರಿಗೆ ಸೇರಬೇಕೆಂದು ತಮ್ಮದೇಯಾದ ರೀತಿಯಲ್ಲಿ ವಿವರಿಸುತ್ತಾರೆ.

'ಕರ್ನಾಟಕ ಹಿತ ಚಿಂತನೆ' ಎಂಬ ಕೃತಿಯ 'ಕರ್ನಾಟಕಕ್ಕೆ ದುಡಿಯುವ ನಾಯಕರು' ಎಂಬ ಲೇಖನದಲ್ಲಿ ಕರ್ನಾಟಕ ಏಕೀಕೃತಗೊಳ್ಳಲು ಯಾವ ರೀತಿಯ ನಾಯಕರ ಅಗತ್ಯತೆ ಕನ್ನಡ ನಾಡಿಗೆ ಇದೆ ಎಂಬುದನ್ನು ಅ.ನ.ಕೃರವರು ತಿಳಿಸುತ್ತಾರೆ. ಕಾಂಗ್ರೇಸ್ ಮತ್ತು ನೆಹರೂರವರು ೧೯೨೧ರಲ್ಲಿ ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿದಂತೆ ಸ್ಪಷ್ಟ ನಿರ್ಧಾರವನ್ನು ಹೊಂದಿದ್ದರು. ಆದರೆ ಮುಂದೆ ಆ ನಿರ್ಧಾರದಂತೆ ಅವರು ನಡೆದುಕೊಳ್ಳಲಿಲ್ಲ. ತಮಿಳುನಾಡಿನಲ್ಲಿ ಚಕ್ರವರ್ತಿ ರಾಜಗೋಪಾಲಾಚಾರಿ (ರಾಜಾಜಿ), ತೆಲುಗಿನಲ್ಲಿ ಪಟ್ಟಾಬಿ ಸೀತಾರಾಮಯ್ಯ, ಆಂಧ್ರದಲ್ಲಿ ಪ್ರಕಾಶಂ, ಮಹಾರಾಷ್ಟ್ರದಲ್ಲಿ ಶಂಕರ ರಾವ್ ದೇವ್ ಏಕೀಕರಣಕ್ಕಾಗಿ ದುಡಿಯುತ್ತಿದ್ದಾರೆ. ಆದರೆ ಕರ್ನಾಟಕದಲ್ಲಿ ಯಾವ ನಾಯಕರು ಕೂಡ ಕರ್ನಾಟಕದ ಏಕೀಕರಣಕ್ಕಾಗಿ ದುಡಿಯುವ ನಾಯಕರಿಲ್ಲ. ಕನ್ನಡಿಗರು, ಕರ್ನಾಟಕದ ನಾಯಕರ ಮನಃಸ್ಥಿತಿಯನ್ನು ತಿಳಿದು ಇಂಥ ನಾಯಕರ ಪೊಳ್ಳುತನಗಳನ್ನು ಖಂಡಿಸುವ ಪ್ರವೃತ್ತಿ ಬೆಳೆಯಬೇಕು. ಯುವ ಸಮುದಾಯ ಸಂಘಟಿತರಾಗಿ ನಾಡಸೇವೆಗೆ ಮುನ್ನುಗ್ಗಬೇಕು. ಪರ ಪ್ರಾಂತ್ಯಗಳ, ಪರಭಾಷೆಗಳ ವ್ಯಾಮೋಹದಿಂದ ಕನ್ನಡ ನಾಡಿಗೆ ಆಗುತ್ತಿರುವ ಅನ್ಯಾಯವನ್ನು ಅರ್ಥ ಮಾಡಿಕೊಳ್ಳಬೇಕು. ಕರ್ನಾಟಕಕ್ಕಾಗಿ ದುಡಿಯುವ ಯಾವ ನಾಯಕರು ಇಲ್ಲದೇ ಇರುವುದು ಕರ್ನಾಟಕದ ದೌರ್ಭಾಗ್ಯವೇ ಆಗಿದೆ.

ಧಾರವಾಡದಲ್ಲಿ ಯುವಕರನ್ನು ಏಕೀಕರಣಕ್ಕಾಗಿ ಎಚ್ಚರಿಸಲು ಮಹಾಸಭೆಯೊಂದು ನಡೆದು ಅಲ್ಲಿ ಕರ್ನಾಟಕ ಸೇವಾ ಮಂಟಪ, ಗಡಿ ಸಮಿತಿ, ಸಂಪರ್ಕ ಸಮಿತಿ, ಆಡಳಿತ ಸಮಿತಿ, ಕರ್ನಾಟಕ ಪುನರ್‌ರಚನಾ ಸಮಿತಿ, ಪ್ರಚಾರ ಸಮಿತಿ, ಕರ್ನಾಟಕ ಸ್ವಯಂ ಸೇವಕರ ಬಲ ನಿಧಿ ಸಂಗ್ರಹಿಸುವ ಮೊದಲಾದ ಸಮಿತಿಗಳ ಸ್ಥಾಪನೆಯ ಮೂಲಕ ಏಕೀಕರಣವನ್ನು ಸಂಘಟಿಸಲು ಸಮ್ಮೇಳನದಲ್ಲಿ ತೆಗೆದುಕೊಂಡ ಈ ಮೇಲ್ಕಂಡ ನಿರ್ಣಯಗಳು, ನಿರ್ಧಾರಗಳು ದೊಡ್ಡ ಸಮಸ್ಯೆಗಳಾಗಿದೆ. ಏಕೆಂದರೆ ಅವುಗಳ ನಾಯಕತ್ವವನ್ನು ವಹಿಸಿಕೊಳ್ಳುವ ನಾಯಕರೇ ಇಲ್ಲದ ಪ್ರಸಂಗವನ್ನು ಅ.ನ.ಕೃ ತಿಳಿಸುತ್ತಾರೆ. ಕರ್ನಾಟಕದ ಗಡಿಗಳ ಕೆಲವು ಭಾಗಗಳನ್ನು ನುಂಗಲು ಕರ್ನಾಟಕದ ನೆರೆಹೊರೆಯ ರಾಜ್ಯದ

ನಾಯಕರುಗಳ ಹೊಂಚು ಹಾಕುವಿಕೆ, ಕರ್ನಾಟಕದ ಗಡಿ ಪ್ರದೇಶಗಳಲ್ಲಿ ಗಣತಿದಾರರು, ಅದರಲ್ಲೂ ತಮಿಳು, ಮರಾಠಿ, ತೆಲುಗು, ಮಲಯಾಳಂನ ಗಣತಿದಾರರು ಭಾಷೆಯನ್ನು ಅದಲು-ಬದಲು ಮಾಡಿ ಸುಳ್ಳು ಲೆಕ್ಕ ನೀಡಿದ್ದಾರೆ. ಕರ್ನಾಟಕದ ಗಡಿ ಪ್ರದೇಶಗಳನ್ನು ತಮ್ಮ ಪ್ರಾಂತ್ಯಕ್ಕೆ ಸೇರಿಸಿಕೊಳ್ಳುತ್ತಿರುವ ರೀತಿ, ಇವುಗಳ ವಿರುದ್ಧ ಹೋರಾಟ ಮಾಡುವ ಜನ ಸಮೂಹವಿಲ್ಲದೆ ಮತ್ತು ಅವರ ನಾಯಕತ್ವವನ್ನು, ಜವಾಬ್ದಾರಿಯನ್ನು ಹೊರದೇ ಏಕೀಕರಣ ಸಾಧ್ಯವಿಲ್ಲವೆಂಬ ದೃಷ್ಟಿಯಲ್ಲಿ ವಿವರಿಸುತ್ತಾರೆ.

ಕನ್ನಡ ನಾಡಿನ ಏಕೀಕರಣಕ್ಕೆ ಸಂಬಂಧಿಸಿದಂತೆ ರಾಜಕೀಯ ನೇತಾರರ ಪೊಳ್ಳುತನಗಳು, ಏಕೀಕರಣವಾಗದೇ ಇರುವಂತೆ ನೋಡಿಕೊಳ್ಳುವ ತಂತ್ರಗಳು, ಉತ್ತರ ಕರ್ನಾಟಕ ಮತ್ತು ಮೈಸೂರು ಭಾಗದಲ್ಲಿನ ಲಿಂಗಾಯುತ, ಒಕ್ಕಲಿಗರು ತಮ್ಮ ಅಧಿಪತ್ಯ ಅಥವಾ ಪ್ರಭಾವ ಕಡಿಮೆಯಾಗುತ್ತದೆ ಎಂಬ ಭಾವನೆ, ಕೇಂದ್ರ ಸರಕಾರ ಮತ್ತು ಕಾಂಗ್ರೇಸ್ ನಾಯಕರ ಇಬ್ಬಗೆತನ, ಏಕೀಕರಣವಾಗದ ರೀತಿಯಲ್ಲಿ ನೋಡಿಕೊಳ್ಳುವ ವಾದಗಳು, ಈ ವಾದಗಳಿಗೆ ಉತ್ತರವಾಗಿ ಅ.ನ.ಕೃ ಅನೇಕ ವಿಚಾರಗಳನ್ನು ದಾಖಲಿಸಿ ಕರ್ನಾಟಕ ಏಕೀಕರಣದ ಅಗತ್ಯತೆಯನ್ನು ಪ್ರತಿಪಾದಿಸುತ್ತಾರೆ.

ಕನ್ನಡ ಮತ್ತು ಕರ್ನಾಟಕ ಏಕೀಕರಣವನ್ನು ಕುರಿತಂತೆ ನಿರಂಜನರು ತಮ್ಮದೆಯಾದ ರೀತಿಯಲ್ಲಿ ತಮ್ಮ ವಿಚಾರ ಸಾಹಿತ್ಯದಲ್ಲಿ ಪ್ರತಿಪಾದಿಸುತ್ತಾರೆ. 'ಪುಷ್ಪಹಾರ' ಕೃತಿಯ 'ಸೋತವರ ವಿಜಯದಶಮಿ' ಎಂಬ ಪತ್ರದಲ್ಲಿ ವಿಜಯದಶಮಿ ಹಬ್ಬವನ್ನು ಮೈಸೂರು ಸಂಸ್ಥಾನದಲ್ಲಿ ನಾಡ ಹಬ್ಬವನ್ನಾಗಿ, ರಾಷ್ಟ್ರೀಯವಾಗಿ ಆಚರಿಸುವ ಉದ್ದೇಶವಾದರು ಏನು? ಎಂದು ಪ್ರಶ್ನಿಸುತ್ತಾರೆ. ಕನ್ನಡನಾಡು ವಿವಿಧ ಪ್ರಾಂತ್ಯಗಳಲ್ಲಿ ಸೇರಿದೆ, ಒಡೆದ ಕನ್ನಡ ನಾಡನ್ನು ಒಂದೆಡೆ ಸೇರಿಸಲು, ಕನ್ನಡಿಗರೆಲ್ಲಾ ಒಂದೇ ಆಡಳಿತಕ್ಕೆ ಒಳಪಟ್ಟು, ತಮಗೆ ಒಪ್ಪುವ ಅಭ್ಯುದಯವನ್ನು ಕನ್ನಡಿಗರಿಗೇ ಸೇರಿಸಬೇಕೆಂಬ ಹಿರಿಯಾಸೆಗಾಗಿ ಕೈಗೊಂಡ ಸಾಧನೆಯಾಗಿ ನಾಡಹಬ್ಬ ಆಚರಣೆಯಾಗಿದೆ. ಈ ರೀತಿಯಾಗಿ ಬಳ್ಳಾರಿಯ 'ರೈತ' ಪತ್ರಿಕೆಯಲ್ಲಿ ಬರೆದ ಲೇಖನಕ್ಕೆ ಪ್ರತಿಕ್ರಿಯಿಸಿ ನಿರಂಜನರವರು ಕೇವಲ ಮನರಂಜನೆಗಾಗಿ, ಕಾಟಾಚಾರಕ್ಕಾಗಿ, ನಾಡಹಬ್ಬವನ್ನು ಆಚರಿಸುತ್ತಿದ್ದೇವೆ. ಕರ್ನಾಟಕ ಏಕೀಕರಣದ ಹೋರಾಟಕ್ಕಾಗಿ ಸೈನಿಕರನ್ನು ಈ ನಾಡಹಬ್ಬ ಸಿದ್ದಗೊಳಿಸಬೇಕು. ಕರ್ನಾಟಕ ಏಕೀಕರಣವಾಗದೆ ಅಥವಾ ಪ್ರಾಂತ್ಯ ರಚನೆಯಾಗದೇ, ನಾಡೇ ಇಲ್ಲದೇ ನಾಡಹಬ್ಬ ಆಚರಣೆಯ ಅಗತ್ಯತೆ ಇದೆಯೇ ಏಕೀಕರಣವನ್ನು ಸಾಧಿಸಲಾಗದೇ ಸೋತವರು ಆದ ಕಾರಣ ವಿಜಯದಶಮಿ ಹಬ್ಬವೆಂಬುದು ಕನ್ನಡಿಗರಿಗೆ ಸೋತವರ ವಿಜಯದಶಮಿ ಎಂದು ನಾಡ ಹಬ್ಬದ ಆಚರಣೆಯನ್ನು ಏಕೀಕರಣದ ಹಿನ್ನೆಲೆಯಲ್ಲಿ ನೋಡುವ ನಿರಂಜನರ ದೃಷ್ಟಿಯೇ ಭಿನ್ನವಾಗಿದೆ.

ಇದೇ ಕೃತಿಯಲ್ಲಿ ಆಲೂರು ವೆಂಕಟರಾಯರ ವ್ಯಕ್ತಿತ್ವವನ್ನು ತಿಳಿಸುವ ನಿರಂಜನರು ೧೯೦೫ರಲ್ಲಿ ಬಂಗಾಳದ ವಿಭಜನೆಯಿಂದಾಗಿ ಭಾಷಾವಾರು ಪ್ರಾಂತ್ಯ ವಿಂಗಡನೆಗೆ ಒಂದು ವೇದಿಕೆ ಪಡೆಯಲು ಸಹಾಯಕವಾಯಿತು ಎಂದು ಚಾರಿತ್ರಿಕ ಹಿನ್ನೆಲೆಯಲ್ಲಿ ನಿರಂಜನರು ಗುರುತಿಸುತ್ತಾರೆ. ಬಳ್ಳಾರಿಯ ಪ್ರಾಂತ್ಯಕ್ಕೆ ಸಂಬಂಧಿಸಿದಂತೆ 'ಬದಲಾವಣೆಯ ಒಂದು ಮುಖ' ಎಂಬ ಪತ್ರದಲ್ಲಿ ಬಳ್ಳಾರಿಯ ಪ್ರಾಂತ್ಯವು ಮೈಸೂರಿನ ಜೊತೆಗೆ ಸೇರಿದ್ದು, ಮೈಸೂರಿನ ಕನ್ನಡಿಗರು ತಾವು ವಾಸಿಸುವ ಸಣ್ಣ ಪ್ರದೇಶವೇ ಕನ್ನಡ ನಾಡು ಎಂದು ತಿಳಿದರೆ ಅದು ಜನತೆಯ ತಪ್ಪಲ್ಲ ಅದು ರಾಜ್ಯ ವ್ಯವಸ್ಥೆಯು ತಪ್ಪಾಗಿ ಗ್ರಹಿಸುತ್ತಾರೆ. ಅ.ನ.ಕೃ. ಬಳ್ಳಾರಿ ಪ್ರಾಂತ್ಯದ ಸಮಸ್ಯೆಯನ್ನು ಬಿಡಿ ಬಿಡಿಯಾಗಿ ತಿಳಿಸಿದರೆ

ನಿರಂಜನರವರು ಬಳ್ಳಾರಿ ಪ್ರಾಂತ್ಯ ಮೈಸೂರಿಗೆ ಸೇರಿದ ವಿಚಾರವನ್ನು ತಿಳಿಸುತ್ತಾರೆ. ಅ.ನ.ಕೃ.ರವರು ಬಳ್ಳಾರಿಯ ಪ್ರಾಂತ್ಯದ ಆಲೂರು, ಅದವಾನಿ, ರಾಯದುರ್ಗಾಗಳನ್ನು ಆಂಧ್ರಕ್ಕೆ ಸೇರಿಸಿದ ಬಗೆಯನ್ನು ಚರ್ಚಿಸುತ್ತಾರೆ. ಆದರೆ ನಿರಂಜನರು ಕನ್ನಡ ಮಾತನಾಡುವ ಮೈಸೂರು ಪ್ರದೇಶದವರು ಇದೆ ಮಾತ್ರ ಕನ್ನಡ ನಾಡು ಎಂದು ಭಾವಿಸಬಾರದೆಂದು, ಕನ್ನಡ ನಾಡು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಸೇರಿದೆ. ಅದನ್ನೆಲ್ಲಾ ಏಕೀಕರಣ ಸಾಧಿಸುವ ಮೂಲಕ ಕನ್ನಡನಾಡು ಒಂದಾಗಬೇಕು. ಈ ರೀತಿಯ ಕಾರ್ಯದಲ್ಲಿ ಮೈಸೂರು ರಾಜ್ಯಾಂಗ ಪ್ರಮುಖವಾದ ಕಾರ್ಯ ನಿರ್ವಹಿಸಬೇಕೆಂದು ತಿಳಿಸುತ್ತಾರೆ.

ಕರ್ನಾಟಕ ಏಕೀಕರಣವು ಸಂಘಟಿತ ಪ್ರಯತ್ನದ ಹೋರಾಟದ ಫಲವಾಗಲಿಲ್ಲ. ಈ ವಿಚಾರಕ್ಕೆ ಸಂಬಂಧಿಸಿದಂತೆ ನಿರಂಜನರವರು ಕರ್ನಾಟಕ ಏಕೀಕರಣಕ್ಕಾಗಿ ತಡೆಯುಂಟು ಮಾಡಿದ ವಿಷಯಗಳನ್ನು ಚರ್ಚಿಸುತ್ತಾರೆ. 'ಮುಂದುವರಿದ ಜನ ಹಿಂದೆ ಉಳಿದ ವಿಚಾರ' ಎಂಬ ಪತ್ರದಲ್ಲಿ ಹಳೆಯ ಮೈಸೂರಿನ ಭಾಗದ ಜನರು ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದುವರಿದಿದ್ದರು ಅವರು ಏಕೀಕರಣವನ್ನು ವಿರೋಧಿಸುತ್ತಾರೆ. ಇದಕ್ಕೆ ಬಹು ಮುಖ್ಯ ಕಾರಣವೆಂದರೆ ಕನ್ನಡ ಪ್ರಾಂತ್ಯ ರಚನೆಯಾದರೆ ಲಿಂಗಾಯುತರು ಅಥವಾ ವೀರಶೈವರ ಪ್ರಭಾವ ಹೆಚ್ಚಿ ಮೈಸೂರು ಪ್ರಾಂತ್ಯದ ಒಕ್ಕಲಿಗರ ಪ್ರಭಾವ ಕಡಿಮೆಯಾಗುತ್ತದೆಂದು ೧೯೦೭ರಿಂದ ಪ್ರಕಟಗೊಳ್ಳುತ್ತಿರುವ 'ಒಕ್ಕಲಿಗರ ಪತ್ರಿಕೆ'ಯಲ್ಲಿಯು ಇದೇ ವಿಚಾರಗಳು ಪ್ರತಿಪಾದಿಸಿರುವುದು ಸರಿಯಲ್ಲ. ಕನ್ನಡ ಜನಕ್ಕೆಲ್ಲ ಒಂದೇ ಜನಾಂಗವೆಂದು ಏಕೀಕರಣವಾದರೆ ಒಕ್ಕಲಿಗರ ಪ್ರಭಾವ ಕಡಮೆಯಾಗುತ್ತದೆ ಎಂಬ ಭಾವನೆ ಬಿತ್ತುವುದನ್ನು ಪತ್ರಿಕೆ ನಡೆಸುವವರು ಎಚ್ಚೆತ್ತುಕೊಳ್ಳಬೇಕಾಗಿದೆ. ಜಾತಿ, ಮತಗಳ ಸಂಕುಚಿತಾರ್ಥಕ್ಕೆ ಬಲಿಯಾಗಿ ಕನ್ನಡ ಸಮುದಾಯಗಳು ಏಕೀಕರಣವನ್ನು ಬಲಿಕೊಡಬಾರದೆಂಬ ತಮ್ಮ ನಿಲುವನ್ನು ಪ್ರಕಟಪಡಿಸುತ್ತಾರೆ.

ಐದು ನಿಮಿಷ ಕೃತಿಯ 'ಜಾತೀಯತೆ ಮತ್ತು ಏಕೀಕರಣ' ಎಂಬ ಲೇಖನದಲ್ಲಿ ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕದಲ್ಲಿ ಮಂಗಳವೀಡು ಶ್ರೀನಿವಾಸ ರಾಯರು ಕರ್ನಾಟಕ ಏಕೀಕರಣಕ್ಕಾಗಿ ಮೂವತ್ತು ವರ್ಷ ದುಡಿದವರು ಅಪ್ಪಟ ಕಾಂಗ್ರೇಸಿಗರು, ಅವರು ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪ್ರಾಂತ್ಯ ರೂಪುಗೊಂಡಾಗ ಯಾವುದೇ ಒಂದು ಜಾತಿಯ ಪ್ರಾಬಲ್ಯಕ್ಕೆ ಒಳಗಾಗುತ್ತೇವೆ ಎಂಬ ಭೀತಿಗೆ ಒಳಗಾಗಬಾರದೆಂದು, ದುರುದ್ದೇಶ ಸಾಧನೆಗಾಗಿ ಕೆಲವರು ಜಾತಿಯ ಪ್ರಶ್ನೆಯನ್ನೆತ್ತಿಕೊಂಡು ಕರ್ನಾಟಕದಲ್ಲಿ ಅತೀ ಪ್ರಬಲವಾದ ವೀರಶೈವ ಸಮಾಜವು ಪ್ರಬಲವಾಗುತ್ತದೆ ಎಂಬುದು ಸುಳ್ಳು ಆಗಿದೆ. ಕರ್ನಾಟಕದ ಪ್ರಶ್ನೆಯನ್ನು ಜಾತಿಯ ಪ್ರಶ್ನೆಯನ್ನಾಗಿ ಮಾಡಬಾರದೆಂದು ನಿರಂಜನರು ಇಲ್ಲಿ ತಿಳಿಸುತ್ತಾರೆ.

ಅದೇ ರೀತಿಯಲ್ಲಿ ಬೆಂಗಳೂರಿನಿಂದ ಹೊರಡುತ್ತಿರುವ ಒಕ್ಕಲಿಗರ ಪತ್ರಿಕೆಯಲ್ಲಿ ಇತ್ತೀಚಿನ ದಿನಗಳಲ್ಲಿ ಏಕೀಕರಣ ವಿರೋಧಿ ಲೇಖನಗಳು ಬಂದಿವೆ. ಇವು ಒಂದು ನಿರ್ಧಿಷ್ಟ ಜನ ವಿಭಾಗದ ಅಭಿಪ್ರಾಯವಾಗುವುದಿಲ್ಲ. ಆದರೆ ಆಳದಲ್ಲಿರುವ ಅಪೇಕ್ಷಣಿಯವಲ್ಲದ ಕೆಲವು ವಿಷಯಗಳನ್ನು ಹೊರ ತೆಗೆಯಲು ಈ ಲೇಖನ ಕಾರಣವಾಗುತ್ತದೆ. ಹಾಗಾಗಿ ನಾವೆಲ್ಲ ಕನ್ನಡ ಜಾತಿ, ಕನ್ನಡ ಜನಾಂಗಕ್ಕೆ ಸೇರಿದವರೆಂದು ಈ ಜಾತಿಯ ರೋಗಕ್ಕೆ ಇರುವ ಔಷಧಿಯೆಂದರೆ ಪ್ರಗತಿ ಹೊಂದುತ್ತಿರುವ ವಿಜ್ಞಾನದ ಪ್ರಭಾವಕ್ಕೆ ನಾವು ಒಳಗಾಗಬೇಕು. ವೈಜ್ಞಾನಿಕ ದೃಷ್ಟಿಕೋನವು ಬೆಳೆದು ಜಾತಿ, ಪಂಥಗಳೆಲ್ಲ ಮನೆಯೊಳಗಿರಲಿ, ತಮ್ಮ ಸಾರ್ವಜನಿಕ ಬದುಕು ಶುದ್ಧವಾಗಿರಲಿ ಎಂಬ ಭಾವನೆ ಮೂಡಬೇಕು.

ಆಂಧ್ರದಲ್ಲಿ ಜಾತಿ ಎಂದರೆ 'ಆಂಧ್ರ ಜಾತಿ' ಅಥವಾ 'ಆಂಧ್ರ ಜನಾಂಗ'. ಅದೇ ಮಾದರಿಯಲ್ಲಿ ನಮ್ಮಲ್ಲೂ ಜಾತಿಗೆ ವಿಶಾಲ ಅರ್ಥ ಬರಬೇಕು. ಕನ್ನಡ ಜಾತಿ, ಕನ್ನಡ ಜನಾಂಗ ಎಂಬ ಉದಾತ್ತ ವಿಚಾರಗಳು ಉದಯಿಸಬೇಕೆಂದು ಏಕೀಕರಣಕ್ಕೆ ತಡೆಯೊಡ್ಡುವ ಜಾತಿ ಪ್ರಶ್ನೆಗೆ ಹೊಸ ವ್ಯಾಖ್ಯಾನವನ್ನು ನಿರಂಜನರು ನೀಡುತ್ತಾರೆ. ಅ.ನ.ಕೃ ಏಕೀಕರಣಕ್ಕೆ ಕರ್ನಾಟಕದಲ್ಲಿ ವೀರಶೈವ ಜಾತಿ ಮತ್ತು ಹಳೆಯ ಮೈಸೂರು ಭಾಗದಲ್ಲಿ ಒಕ್ಕಲಿಗರು ವಿರೋಧಿಸುವ ರೀತಿಗೆ ಅದಕ್ಕೆ ಉತ್ತರವನ್ನು ನೀಡಿದರೆ, ನಿರಂಜನರು ಏಕೀಕರಣಕ್ಕೆ ಜಾತಿಯ ಪ್ರಶ್ನೆಯನ್ನು ತರಬಾರದೆಂಬ ನಿಲುವನ್ನು ಪ್ರಕಟಿಸುತ್ತಾರೆ.

ಪುಷ್ಪಹಾರ ಕೃತಿಯ 'ರಾಜಕೀಯ ರೋಗ' ಎಂಬ ಪತ್ರದಲ್ಲಿ ಕನ್ನಡ ನಾಡಿನ ರಾಜಕೀಯ ಮುಖಂಡರು ಗಾಳಿ ಬಂದ ಕಡೆ ಕೊಡೆ ಹಿಡಿಯುವ ಸಮಯ ಸಾಧಕತನದಿಂದಾಗಿ ಏಕೀಕರಣಕ್ಕೆ ಅಡ್ಡಿಯುಂಟಾದ ವಿಷಯಗಳಲ್ಲಿ ಒಂದಾಗಿದೆ. ಮೈಸೂರಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಕರ್ನಾಟಕ ಪ್ರಾಂತ್ಯ ರಚನೆಗೆ ಸ್ಪಷ್ಟ ನಿಲುವನ್ನು ತೆಗೆದುಕೊಂಡಿದ್ದಾರೆ. ಆದರೆ ನೆಹರೂರವರು ಕರ್ನಾಟಕ ಪ್ರಾಂತ್ಯ ರಚನೆಗೆ ಸಹಕರಿಸದೇ ಇರುವುದು ಮತ್ತು ಕರ್ನಾಟಕ ಕಾಂಗ್ರೆಸ್ ಸದಸ್ಯರು ಮೌನವಾಗಿದ್ದಾರೆ. ಮೈಸೂರಿನ ಕಾಂಗ್ರೆಸಿಗರು ಕರ್ನಾಟಕ ಪ್ರಾಂತ್ಯ ರಚನೆಗೆ ಯಾವುದೇ ಸಾಕ್ಷಿಯನ್ನು ಕೊಡಬಾರದೆಂಬ ನಿಲುವನ್ನು ಹೊಂದಿದ್ದಾರೆ. ರಾಜ್ಯಗಳನ್ನು ಸಂಘಟಿಸುವುದು ಆಡಳಿತ ದೃಷ್ಟಿಯಿಂದ ಆಗಬೇಕೇ ಹೊರತು ಭಾಷೆಯಿಂದ ಅಲ್ಲ ಎಂಬ ನಿಲುವು ಎಸ್. ನಿಜಲಿಂಗಪ್ಪನವರದ್ದಾಗಿದೆ. ಆಂಧ್ರದ ಏಕೀಕರಣಕ್ಕಾಗಿ ಭಾಷಾವಾರು ಪ್ರಾಂತ್ಯ ನಿರ್ಮಾಣಕ್ಕೆ ಪಾರ್ಲಿಮೆಂಟ್ ಸೂಚನೆ ಕೊಟ್ಟಾಗ ನಿಜಲಿಂಗಪ್ಪನವರೇ ಅದನ್ನು ವಿರೋಧಿಸಿದರು. ಈ ರೀತಿಯ ಕನ್ನಡ ನಾಡಿನ ರಾಜಕೀಯ ನಾಯಕರು ಒಂದು ಕಡೆ ಕನ್ನಡ ಪ್ರಾಂತ್ಯ ರಚನೆಯಾಗಬೇಕು ಎಂದು, ಮತ್ತೊಂದು ಕಡೆ ಅದಕ್ಕೆ ವಿರುದ್ಧವಾದ ನಿಲುವು ತೆಗೆದುಕೊಳ್ಳುತ್ತಾರೆ. ಈ ರೀತಿಯ ರಾಜಕೀಯ ವ್ಯಕ್ತಿಗಳು ಕರ್ನಾಟಕ ಪ್ರಾಂತ್ಯ ರಚನೆಗೆ ಅಡ್ಡಿಯಾಗಿ ಕರ್ನಾಟಕದ ಕಾಂಗ್ರೆಸ್ ಸದಸ್ಯರೇ ಇರುವುದನ್ನು ಚರ್ಚಿಸುತ್ತಾರೆ.

ಅ.ನ.ಕೃ ಕರ್ನಾಟಕ ಏಕೀಕರಣವನ್ನು ಸಾಧಿಸಲು ನಮ್ಮಲ್ಲಿ ನಾಯಕತ್ವ ಇಲ್ಲದೇ ಇರುವುದನ್ನು ಚರ್ಚಿಸಿದರೆ ನಿರಂಜನರು ನಾಯಕರ ದ್ವಂದ್ವ ನಿಲುವುಗಳನ್ನು ಚರ್ಚಿಸುತ್ತಾರೆ. ತಮಿಳುನಾಡಿನಲ್ಲಿ ರಾಜಾಜಿ, ತೆಲುಗಿನಲ್ಲಿ ಪ್ರಕಾಶಂ, ಪಟ್ಟಾಭಿ ಸೀತಾರಾಮಯ್ಯ, ಮಹಾರಾಷ್ಟ್ರದಲ್ಲಿ ಶಂಕರರಾವ್ ದೇವ್‌ರವರ ನಾಯಕತ್ವದ ರೀತಿಯಲ್ಲಿ ಏಕೀಕರಣ ಸಾಧಿಸಲು ಅ.ನ.ಕೃ ಬಯಸುತ್ತಾರೆ. ನಿರಂಜನರವರು 'ಹುತಾತ್ಮ ಶ್ರೀ ರಾಮುಲು ತುಳಿದ ದಾರಿ' ಎಂಬ ಐದು ನಿಮಿಷ ಕೃತಿಯ ಲೇಖನದಲ್ಲಿ ಪೊಟ್ಟಿ ಶ್ರೀ ರಾಮುಲುರವರು ಆಂಧ್ರ ಪ್ರಾಂತ್ಯ ರಚನೆಗಾಗಿ ಉಪವಾಸ ಸತ್ಯಾಗ್ರಹ ಮಾಡಿ ಐವತ್ತೊಂದನೆಯ ದಿನ ಸಾವನ್ನಪ್ಪಿದರು. ಇದರಿಂದ ಆಂಧ್ರದಲ್ಲಿ ಅಶಾಂತಿ ಉಂಟಾಗಿ ಅಪಾರ ಪ್ರಮಾಣ ಆಸ್ತಿ ಪಾಸ್ತಿಗಳು ನಷ್ಟವಾಗಿ ಆಂಧ್ರ ಪ್ರಾಂತ್ಯ ರಚನೆಯಾಯಿತು. ಇದಕ್ಕೆ ಕಾರಣವಾದ ಪೊಟ್ಟಿ ಶ್ರೀ ರಾಮುಲುರವರ ತ್ಯಾಗವಾಗಿದೆ. ವ್ಯಕ್ತಿವಾದದಲ್ಲಿ ತಮಗೆ ನಂಬಿಕೆ ಇಲ್ಲವೆಂದು, ಒಂದು ದೇಶ ಇಲ್ಲವೇ ಒಂದು ಜನಾಂಗದ ಕೆಲಸವನ್ನು ಒಬ್ಬನೇ ಮಾಡಿದನೆಂಬುದು ಒಂದು ಸಂಶಯದ ವಿಷಯವಾಗಿದೆ. ಹಾಗೆಯೇ ಜನತೆಯ ಆಸೆಯನ್ನು ಈಡೇರಿಸುವ ಕಾರ್ಯದಲ್ಲಿ ಉಪವಾಸ ಪ್ರಮುಖ ಅಸ್ತ್ರ ಎಂಬುದನ್ನು ಒಪ್ಪುವುದಿಲ್ಲವೆಂದು ವ್ಯಕ್ತಿ ವಾದವನ್ನು ಮತ್ತು ಸತ್ಯಾಗ್ರಹವನ್ನು ತಿರಸ್ಕರಿಸುತ್ತಾರೆ. ಆದರೆ ಅ.ನ.ಕೃ ವ್ಯಕ್ತಿ ವಾದವನ್ನು ಒಪ್ಪುತ್ತಾರೆ. ಇದು ಕೂಡ ಅವರ ವಿಚಾರ

ಸಾಹಿತ್ಯದ ಭಿನ್ನತೆಯೇ ಆಗಿದೆ. ವ್ಯಕ್ತಿವಾದವನ್ನು ತಿರಸ್ಕರಿಸುವ ನಿರಂಜನರು ನಿಷ್ಕಾಳಂಕ ತ್ಯಾಗದ ಪೊಟ್ಟಿ ಶ್ರೀ ರಾಮುಲುರವರ ಧ್ಯೇಯವನ್ನು ಮೆಚ್ಚುತ್ತಾರೆ.

ಕನ್ನಡ ಪ್ರಾಂತ್ಯವು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಹಂಚಿ ಹೋಗಿದೆ, ಮದ್ರಾಸಿನ ಮಂತ್ರಿ ರಾಜಗೋಪಾಲ ಚಾರಿಯವರಲ್ಲಿ ಎರಡು ಕನ್ನಡ ಜಿಲ್ಲೆಗಳು, (ದಕ್ಷಿಣ ಕನ್ನಡ, ಉತ್ತರ ಕನ್ನಡ) ಮೊರಾರ್ಜಿಯವರ ಕೈ ಕೆಳಗೆ ನಾಲ್ಕು ಕನ್ನಡ ಜಿಲ್ಲೆಗಳು, ನಿಜಾಮರ ಅಧೀನದಲ್ಲಿದ್ದ ಮೂರು ಕನ್ನಡ ಜಿಲ್ಲೆಗಳು, ಕೊಡಗು ಇವೆಲ್ಲಾ ಒಂದುಗೂಡಿಸಿ ಕರ್ನಾಟಕ ಪ್ರಾಂತ್ಯವನ್ನು ಕಟ್ಟಬೇಕು. ಇದನ್ನು ಕಟ್ಟುವವರು ಯಾರು? ಎಂದು ಪ್ರಶ್ನಿಸುತ್ತಾರೆ. ಏಕೀಕರಣ ಚಳುವಳಿಯ ನಾಯಕರ ಮೇಲೆ ದೊಡ್ಡ ಜವಾಬ್ದಾರಿಯಿದ್ದು ಪೊಟ್ಟಿ ಶ್ರೀ ರಾಮುಲುರವರ ಹಾಗೆ ಯಾವ ವ್ಯಕ್ತಿಯೂ ಬಲಿಯಾಗದೇ, ಅರಾಜಕತೆಯನ್ನು ಸೃಷ್ಟಿಸಿದೆ, ಕನ್ನಡಿಗರ ಸಾಮೂಹಿಕ ಹೋರಾಟದಿಂದ, ರಾಜಕೀಯದಿಂದ ದೂರವಿರುವ ಎಲ್ಲರೊಂದಿಗೂ ಏಕೀಕರಣಕ್ಕೆ ಸಂಬಂಧಿಸಿದ ಮುಂದಿನ ಕ್ರಮ ಕೈಗೊಳ್ಳಲು ಚರ್ಚಿಸಿ ಹೋರಾಟ ಮಾಡಬೇಕು ಇಲ್ಲವಾದರೆ ಮುಂದೊಂದು ದಿನ ಪರಿತಪಿಸಬೇಕಾಗುತ್ತದೆ ಎಂಬ ಎಚ್ಚರಿಕೆಯ ಮಾತುಗಳನ್ನು ಹಾಗೂ ಯಾವ ಮಾರ್ಗದಲ್ಲಿ ಏಕೀಕರಣವಾಗಬೇಕೆಂದು ಸೂಚಿಸುತ್ತಾರೆ.

ಅಂಕಣ ಕೃತಿಯ 'ಕರ್ಮ ಕಥೆ' ಎಂಬ ಅಂಕಣದಲ್ಲಿ ನಿರಂಜನರವರು ಕರ್ನಾಟಕದ ಏಕೀಕರಣ ಸಾಧಿಸಲು ತೊಡಕಾಗಿರುವ ಸಮಸ್ಯೆಗಳು, ಕನ್ನಡ ನಾಡಿನ ಭಾಗಗಳನ್ನು ಕುರಿತಂತೆ ಸರಿಯಾದ ದಾಖಲೆ ಇಲ್ಲದೇ ಇರುವುದು, ಇದ್ದರೂ ಅವುಗಳನ್ನು ಸಂಗ್ರಹಿಸುವವರು ಯಾರೂ ಇಲ್ಲ. ನೂತನ ಕರ್ನಾಟಕ ಅಥವಾ ನವ ಮೈಸೂರು ಹಲವು ಭಾಗಗಳಲ್ಲಿ ಹರಡಿಕೊಂಡಿದೆ. ಏಕೀಕರಣವಾಗಬೇಕಾದರೆ ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳು ಮರಾಠರ ಅಧೀನದಲ್ಲಿದ್ದವು. ನಂತರ ಅವು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟವು. ಈಗ ಮೈಸೂರು ಭಾಗ ಉನ್ನತಿಗೊಂಡಿದ್ದರು ಆರು ಜಿಲ್ಲೆಗಳಿಗೆ ಸಂಬಂಧಿಸಿದ ದಾಖಲೆಗಳು ಎಲ್ಲಿದ್ದಾವೆ ಎಂಬುದೇ ತಿಳಿಯದಾಗಿದೆ. ಅದರಂತೆ ದಕ್ಷಿಣ ಕನ್ನಡ, ಬಳ್ಳಾರಿ, ಮದ್ರಾಸ್ ಪ್ರಾಂತ್ಯದಲ್ಲಿದ್ದ ಅವುಗಳ ಕಡತಗಳು ಇಲ್ಲವೆಂದು ಅವುಗಳನ್ನು ಕೇಳುವ ಹಕ್ಕು ಜನರಿಗೆ ಇದೆ. ಇದಕ್ಕೆ ಸರಕಾರವು ಉತ್ತರ ಕೊಡಬೇಕು. ಕನ್ನಡ ನಾಡಿನ ಸ್ಥಳಗಳ ಬಗ್ಗೆ ಸರಕಾರವು ದಾಖಲೆಯನ್ನು ಸರಿಯಾಗಿ ಸಂಗ್ರಹಿಸದೆ ಇರುವುದು ಕೂಡ ಏಕೀಕರಣಕ್ಕೆ ಅಡ್ಡಿ ಉಂಟು ಮಾಡುವ ಅಂಶಗಳಲ್ಲಿ ಒಂದಾಗಿದೆ.

'ಏಕೀಕರಣ ಮತ್ತು ಆಧ್ಯಾತ್ಮ' ಎಂಬ ಲೇಖನದಲ್ಲಿ ಏಕೀಕರಣ ಎಂಬುದು ಅನ್ನ ಬಟ್ಟೆಯ ಪ್ರಶ್ನೆಯಾಗಿ, ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಶ್ನೆಯಾಗಿ ನಿರಂಜನರವರು ನೋಡುತ್ತಾರೆ. ಅಂದಾನಪ್ಪ ದೊಡ್ಡ ಮೇಟಿಯವರು ಜಕ್ಕಲಿ ಗ್ರಾಮದಲ್ಲಿ ಏಕೀಕರಣದ ಧ್ವನಿ ನಿಂತ ಸಂದರ್ಭದಲ್ಲಿ ಏಕೀಕರಣ ಸಾಧಿಸಲು ಆತ್ಮಶಕ್ತಿ ಬೇಕು ಎಂದು ಹೇಳುತ್ತಾರೆ. ಅದಕ್ಕೆ ನಿರಂಜನರವರು ಏಕೀಕರಣದ ಸಾಧನೆಗೆ ಯಜ್ಞ, ದೇವಾಲಯ, ಇಗರ್ಜಿ, ಮಸೀದಿಗಳು ಮೊದಲಾದ ಕಡೆ ವಿಶೇಷ ಪ್ರಾರ್ಥನೆಯನ್ನು ಮಾಡುವುದು ಸಾಧುವಲ್ಲವೇ? ಎಂದು ಪ್ರಶ್ನಿಸುತ್ತಾರೆ. ಇದೇ ಮಾದರಿಯಲ್ಲಿ ಆಧ್ಯಾತ್ಮದ ಹಿನ್ನೆಲೆಯಲ್ಲಿ ಆತ್ಮ ಶಕ್ತಿಯಿಂದ ಏಕೀಕರಣವಾದರೆ ನಿಯೋಗ, ಸಭೆ, ಸಮ್ಮೇಳನಗಳು, ಚಳುವಳಿ ಯಾವುದು ಬೇಕಾಗಿಲ್ಲ. ಗಂಟೆಗಟ್ಟಲೆ ಮಾತನಾಡಬಲ್ಲ ಭಾಷಣಕಾರರು ಬೇಕಾಗಿಲ್ಲ, ಆತ್ಮ ಬಲವೊಂದಿದ್ದರೆ ಎಲ್ಲವೂ ಸರಿ ಹೋಗುತ್ತದೆಯೇ ಎನ್ನುವ ಮೂಲಕ ಏಕೀಕರಣದೊಂದಿಗೆ ತಮ್ಮ ಸ್ವಾರ್ಥ

ಸಾಧನೆಯನ್ನು ಸಾಧಿಸುವವರಿಗೆ, ಆಧ್ಯಾತ್ಮದ ಹಿನ್ನೆಲೆಯಲ್ಲಿ ಪರಿಹಾರ ಸೂಚಿಸುವವರಿಗೆ ನಿರಂಜನರು ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಾರೆ.

'ಹುಚ್ಚೇಶ್ವರರ ಹೊಸ ಯೋಜನೆ' ಎಂಬ ಲೇಖನದಲ್ಲಿ ಮುಂಬಯಿ ಕರ್ನಾಟಕದಲ್ಲಿ ಪರಿಚಿತರಾದ ಹುಚ್ಚೇಶ್ವರ ಮುದ್ಗಲರವರು ಕರ್ನಾಟಕಕ್ಕೆ ಹೊಸ ರಾಜಧಾನಿ ಕಟ್ಟಬೇಕೆಂದು ಅದು ಹೊಸ ವಿಜಯನಗರವೇ ಆಗಬೇಕಾಗಿದೆ. ಈ ರಾಜಧಾನಿ ಕಟ್ಟಲು ಎಲ್ಲಾ ಪ್ರೌಢಶಾಲಾ ವಿದ್ಯಾರ್ಥಿಗಳು ಆರೆಂಟು ವಾರ ವಿಜಯನಗರಕ್ಕೆ ಒಂದು ರಾಜಧಾನಿ ಕಟ್ಟಲು ಸಹಕರಿಸಬೇಕು. ಯುವಕ-ಯುವತಿಯರು ರಾಜಧಾನಿ ನಿರ್ಮಾಣವಾಗುವವರೆಗೂ ಬ್ರಹ್ಮಚಾರಿಗಳಾಗಿರಬೇಕು ಎಂದು ತಿಳಿಸುತ್ತಾರೆ. ಈ ವಿಚಾರವನ್ನು ನಿರಂಜನರವರು ಈ ಕನ್ನಡ ಕಲಿ ಇರುವುದು ಮುಂಬಯಿಯಲ್ಲಿ. ಮುಂಬಯಿಯಲ್ಲಿ ನೆಲಸಿ ಇಂಥವರಿಂದ ಕನ್ನಡ ನಾಡನ್ನು ಕಟ್ಟುವ ಕೆಲಸ ಸಾಧ್ಯವಿಲ್ಲವೆಂದು, ಆತ್ಮಶಕ್ತಿಯಿಂದ ಇನ್ನೆಲ್ಲೊ ಕುಳಿತು ಏಕೀಕರಣ ಸಾಧಿಸಬಹುದು ಎಂಬುವವರಿಗೆ ನಿರಂಜನರು ಇಂತವರಿಂದ ಏಕೀಕರಣ ಅಥವಾ ಕರ್ನಾಟಕ ಪ್ರಾಂತ್ಯ ರಚನೆಯಾಗದು ಎಂಬುದನ್ನು ತಿಳಿಸುತ್ತಾರೆ.

ಅ.ನ.ಕೃರವರು ತಮ್ಮ ವಿಚಾರ ಸಾಹಿತ್ಯದಲ್ಲಿ ಮೈಸೂರಿಗರಿಗೆ ಕರ್ನಾಟಕ ಏಕೀಕರಣವಾಗುವುದು ಹೆಚ್ಚು ಆಸಕ್ತಿ ಇಲ್ಲವೆಂಬುದನ್ನು ನಾನಾ ರೀತಿಯ ಕಾರಣಗಳನ್ನು ಚರ್ಚಿಸಿದ ರೀತಿಯಲ್ಲಿಯೇ, ನಿರಂಜನರವರ 'ಮೈಸೂರು ಮತ್ತು ಏಕೀಕರಣ' ಎಂಬ ಲೇಖನದಲ್ಲಿ ಮೈಸೂರಿಗರಿಗೆ ಏಕೀಕರಣದ ಬಗ್ಗೆ ದ್ವಂದ್ವ ನಿಲುವುಗಳಿವೆ. ಮೈಸೂರಿನ ಹೊರಗೆ ಬಂದಾಗ ಕರ್ನಾಟಕ ಏಕೀಕರಣದ ಬಗ್ಗೆ ಮಾತನಾಡುವ ರಾಜಕೀಯ ಮುಖಂಡರು ಮೈಸೂರಿಗೆ ಬಂದಾಗ ತಟಸ್ಥ ಧೋರಣೆಯನ್ನು ಪ್ರಕಟಿಸುತ್ತಾರೆ. ಹೊರಗೆ ಅರಸೊತ್ತಿಗೆಯನ್ನು ತೆಗಳಿ, ಒಳ ಬಂದೊಡನೆ ರಾಜಭಕ್ತಿಯನ್ನು ತೋರಿಸುವುದನ್ನು ಕಾಣಬಹುದು. ಮೈಸೂರಿನಲ್ಲಿ ಕನ್ನಡ ನಾಡಿನ ಕಲ್ಪನೆ ಮೂಡಿಸುವುದರಲ್ಲಿ ಸಾಹಿತಿಗಳು ಪ್ರಮುಖರಾಗಿದ್ದಾರೆ. ಏಕೀಕರಣವನ್ನು ಕುರಿತಂತೆ ಪ್ರಚಾರ ಮಾಡಿದ ಸಾಹಿತ್ಯ ಪರಿಷತ್ತು ಕರ್ನಾಟಕ ಏಕೀಕರಣವೆಂಬುದು ರಾಜಕೀಯ ಪ್ರಶ್ನೆಯಾಗಿರುವುದರಿಂದ ಸಾಹಿತಿಗಳು ತಟಸ್ಥ ಧೋರಣೆಯನ್ನು ತಳೆದಿದ್ದಾರೆ. ಸಾಹಿತ್ಯ ಪರಿಷತ್ತು ಕರ್ನಾಟಕ ಎಂದೂ ಕೂಗಾಡಿದರೆ ಎಲ್ಲಿ ಮೈಸೂರು ಸರಕಾರದಿಂದ ದೊರೆಯಬೇಕಾದ ಸಹಾಯಧನ ಎಲ್ಲಿ ದೊರೆಯುವುದಿಲ್ಲ ಎಂಬ ಭಾವನೆಯಿಂದ ಏಕೀಕರಣದಿಂದ ತಟಸ್ಥವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಮೈಸೂರಿನ ಪ್ರಾಂತ್ಯದಲ್ಲಿ ಏಕೀಕರಣಕ್ಕೆ ಸಂಬಂಧಿಸಿದಂತೆ ತಟಸ್ಥ ಧೋರಣೆ ತಳೆಯಲು ಕಾರಣವಾದ ಅಂಶವನ್ನು ಮತ್ತು ಮೈಸೂರು ಸರಕಾರದ ಮುಖ್ಯಮಂತ್ರಿಯಾದ ಕೆ.ಸಿ.ರೆಡ್ಡಿಯವರು ಕರ್ನಾಟಕ ಏಕೀಕರಣಕ್ಕೆ ಬೆಂಬಲಿಗರಾಗಿಲ್ಲ. ಹನುಮಂತಯ್ಯನವರು ಅಡ್ಡಗೋಡೆಯ ಮೇಲೆ ದೀಪವಿಟ್ಟ ಹಾಗೆ ಮಾತನಾಡುವುದು, ಮೈಸೂರು ಕಾಂಗ್ರೇಸಿನಲ್ಲಿ ಏಕೀಕರಣಕ್ಕೆ ಒಮ್ಮತವಿಲ್ಲ ಎಂಬುದನ್ನು ತಿಳಿಸುತ್ತದೆ. ಹಾಗಾಗಿ ಮೈಸೂರಿನ ಮಧ್ಯಮ ವರ್ಗದ ಜನರಲ್ಲಿ ಕರ್ನಾಟಕ ಪ್ರಾಂತ ರಚನೆಯ ವಿಷಯದಲ್ಲಿ ಆಸಕ್ತಿ ಇಲ್ಲ. ಅಷ್ಟು ಮಾತ್ರವಲ್ಲದೇ ಉತ್ತರ ಕರ್ನಾಟಕದ ಬರಡು ಭೂಮಿಗಳ ಮೇಲೆ ಮೈಸೂರಿನ ಸಂಪತ್ತನ್ನು ಸುರಿಯಬೇಕೆಂಬ ತಪ್ಪು ಕಲ್ಪನೆಯನ್ನು ಹೊಂದಿದ್ದಾರೆ. ಮೈಸೂರಿನ ಪ್ರದೇಶದಲ್ಲಿ ಕರ್ನಾಟಕ ಪ್ರಾಂತ್ಯ ರಚನೆಗೆ ಏಕೆ ಆಸಕ್ತಿಯನ್ನು ತೋರುತ್ತಿಲ್ಲ ಎಂಬ ವಿಚಾರವನ್ನು ಪಟ್ಟಿ ಮಾಡುತ್ತಾರೆ.

ಮುಂದುವರಿದು ನಿರಂಜನರು ಕರ್ನಾಟಕ ಪ್ರಾಂತ್ಯ ರಚನೆಯಾದರೆ ಮೈಸೂರಿಗೆ ಏನೆಲ್ಲಾ ಲಾಭವಿದೆ ಎಂಬ ಆರ್ಥಿಕ ವಿಚಾರಗಳ ಹಿನ್ನೆಲೆಯಲ್ಲಿ ನಿರಂಜನರವರು ಶ್ರೀಮಂತ ಬಂಡವಾಳಗಾರರಿಗೆ ತಮ್ಮ ಬಂಡವಾಳವನ್ನು ಉಪಯೋಗಿಸಿ ಹೊಸದಾಗಿ ಕೈಗಾರಿಕೆಗಳನ್ನು ನಿರ್ಮಿಸಲು ಅವರಿಗೆ ಅವಕಾಶ ದೊರೆಯುತ್ತದೆ. ನವ ಕರ್ನಾಟಕದಿಂದಾಗಿ ಹೊಸ ಉದ್ಯಮಗಳಿಂದ ಮಧ್ಯಮ ವರ್ಗದವರಿಗೆ ಉದ್ಯೋಗ ದೊರಕುತ್ತದೆ. ಮೈಸೂರಿಗೆ ಈಗ ಬಂದರಿಲ್ಲ. ಕರ್ನಾಟಕ ಪ್ರಾಂತ್ಯ ರಚನೆಯಾದರೆ ಬಂದರಿನ ಕೊರತೆ ಇರುವುದಿಲ್ಲ. ಮೈಸೂರಿನ ಹಲವೆಡೆ ಬರಗಾಲವಿದ್ದು ಕರ್ನಾಟಕದಲ್ಲಿ ಬೆಳೆದ ಆಹಾರ ಧಾನ್ಯವು ಲಭಿಸುತ್ತದೆ. ಎರಡು ಕೋಟಿ ಜನರ ರಾಜಕೀಯವು ಮಾರ್ಪಾಡಾಗದೇ ಸಾಹಿತ್ಯ, ಕಲೆ, ಸಂಸ್ಕೃತಿಗೆ ಮುನ್ನಡೆಯುಂಟಾಗುವುದಿಲ್ಲ. ಕರ್ನಾಟಕ ಏಕೀಕರಣ ಪ್ರಶ್ನೆ ಎಂಬುದು ಬರೀ ಭಾಷಾವಾರು ಪ್ರಾಂತ್ಯದ ಪ್ರಶ್ನೆಯಾಗಿಲ್ಲ ಅದು ಕರ್ನಾಟಕದ ಇಡೀ ಕನ್ನಡ ಜನಾಂಗಕ್ಕೆ ಆರ್ಥಿಕವಾಗಿ, ಭೌಗೋಳಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಲವನ್ನು ತಂದು ಕೊಡುತ್ತದೆ. ಈ ರೀತಿಯಾಗಿ ಕರ್ನಾಟಕ ಪ್ರಾಂತ್ಯ ರಚನೆಯ ಅಗತ್ಯತೆಗೆ ಒಂದು ತಾತ್ವಿಕ ನಿಲುವನ್ನು ನಿರಂಜನರು ವ್ಯಕ್ತಪಡಿಸುತ್ತಾರೆ.

'ಕರ್ನಾಟಕ ನಾಟಕ' ಎಂಬ ಲೇಖನದಲ್ಲಿ ಕರ್ನಾಟಕ ಏಕೀಕರಣದ ಮುಖಂಡರೊಬ್ಬರಾದ ಅಂದಾನೆಪ್ಪಾ ದೊಡ್ಡ ಮೇಟಿಯವರು ಕರ್ನಾಟಕ ರಾಜ್ಯ ನಿರ್ಮಾಣ ಶಿಬಿರದ ಬಗ್ಗೆ, ಹಿಂದೆ 'ಏಕೀಕರಣ ಮತ್ತು ಆಧ್ಯಾತ್ಮ' ಎಂಬ ಲೇಖನದಲ್ಲಿ ಆತ್ಮಶಕ್ತಿಯ ಮೂಲಕ ಏಕೀಕರಣ ಸಾಧಿಸುವ ದೃಷ್ಟಿ ಇದೆ. ಇವರು ಕರ್ನಾಟಕ ಏಕೀಕರಣ ಪ್ರಶ್ನೆಯನ್ನು ಆಧ್ಯಾತ್ಮಿಕ ಪ್ರಶ್ನೆಯಾಗಿ ನೋಡುತ್ತಾರೆ. ಇದಕ್ಕೆ ಬಹು ಮುಖ್ಯ ಕಾರಣವೆಂದರೆ ಅರವಿಂದರ ದರ್ಶನದಿಂದಾಗಿ ರಾಜಕೀಯ ಪ್ರಶ್ನೆಯಾದ ಏಕೀಕರಣವನ್ನು ಆಧ್ಯಾತ್ಮಿಕವಾಗಿ ನೋಡುವ ಕ್ರಮ ಹುಟ್ಟಿಕೊಂಡಿದೆ. ಕರ್ನಾಟಕ ಏಕೀಕರಣವನ್ನು ಆಧ್ಯಾತ್ಮಿಕ ಪ್ರಶ್ನೆಯಾಗಿ ನೋಡುವ ಬದಲು ಜನತೆಗೆ ಅನ್ನ, ಬಟ್ಟೆ, ಭಾಷೆ, ಸಾಹಿತ್ಯ, ಸಂಸ್ಕೃತಿ, ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದ ಪ್ರಶ್ನೆಯಾಗಿ ತೋರಿಸಬಾರದೆ ಎಂಬ ಸಲಹೆಯನ್ನು ನಿರಂಜನರು ನೀಡುತ್ತಾರೆ.

ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯಾಗುವ ಸಂದರ್ಭದಲ್ಲಿ ಅದಕ್ಕೊಂದು ಮುದ್ರೆಯನ್ನು ನೀಡುವ ಸಂದರ್ಭದಲ್ಲಿ ನಿರಂಜನರವರು ಕನ್ನಡ ನಾಡು, ಕರ್ನಾಟಕ ಎಂದು ಗುರುತಿಸಲು ಒಂದು ಸಂಕೇತ ಅಥವಾ ಮುದ್ರೆಯ ಅವಶ್ಯಕತೆ ಇದೆ. ಕರ್ನಾಟಕದ ಅಸ್ಮಿತೆಗಾಗಿ ಸಂಕೇತದ ಅವಶ್ಯಕತೆಯನ್ನು ತಿಳಿಸುತ್ತಾರೆ. ಒಂದು ವೇಳೆ ಕನ್ನಡಿಗರಲ್ಲಿಯೇ ಮುದ್ರೆಗೆ ಒಮ್ಮತವಿಲ್ಲದೇ ಹೋದರೆ ಕೇಂದ್ರ ಸರಕಾರದವರು ಮುದ್ರೆಗೆ ಸಂಬಂಧಿಸಿದಂತೆ ಕನ್ನಡಿಗರಲ್ಲಿ ಒಮ್ಮತವಿಲ್ಲವೆಂದು ಕರ್ನಾಟಕ ಪ್ರಾಂತ ರಚನೆಗೆ ಸಮ್ಮತಿಸಲಾಗುವುದಿಲ್ಲವೆಂದು ಹೇಳಿದರೂ ಹೇಳಬಹುದು ಎಂದು ನಿರಂಜನರು ಟೀಕಿಸುತ್ತಾರೆ. ಕೇಂದ್ರ ಸರಕಾರವು ಒಂದೊಂದು ಸಣ್ಣ ಸಣ್ಣ ಕಾರ್ಯವನ್ನು ಇಟ್ಟುಕೊಂಡು ಕನ್ನಡ ಪ್ರಾಂತ ರಚನೆಗೆ ಹೇಗೆಲ್ಲಾ ಅಡ್ಡಿಯನ್ನುಂಟು ಮಾಡಬಹುದು ಎಂಬುದನ್ನು ಇದರಿಂದ ತಿಳಿಯಬಹುದು. ಕರ್ನಾಟಕ ವಿಶ್ವವಿದ್ಯಾಲಯ ಮುದ್ರೆಯಿಂದ ಆರಂಭಗೊಂಡ ಲೇಖನದಲ್ಲಿ ಕರ್ನಾಟಕ ಪ್ರಾಂತ ರಚನೆಯ ಅಗತ್ಯತೆಯನ್ನು, ಕರ್ನಾಟಕ ಪ್ರಾಂತ ರಚನೆಗೆ ಕೇಂದ್ರ ಸರಕಾರದ ಧೋರಣೆ ಹೇಗೆ ಇರುತ್ತದೆ ಎಂಬುದನ್ನು ತಮ್ಮದೇಯಾದ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ.

ಕಾಲಕ್ಷೇಪ ಕೃತಿಯ 'ಅರ್ಥವಾಗದ ನಿಲುವು' ಎಂಬ ಲೇಖನದಲ್ಲಿ ನಿರಂಜನರು ಪ್ರಾಂತ ಪುನರ್ ವಿಂಗಡಣಾ ಸಮಿತಿಯವರು ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದಂತೆ ಮನವಿ ಪತ್ರಗಳನ್ನು ಕೇಳಲು ಬಂದಿದ್ದರು. ಡಿ.ವಿ.ಜಿಯವರು ಈ ಸಂದರ್ಭದಲ್ಲಿ ಕನ್ನಡ ಪ್ರಾಂತ್ಯದ ಅಗತ್ಯತೆಯನ್ನು ಕುರಿತಂತೆ ಮನವಿ ಸಲ್ಲಿಸಿದರು. ಅದರೆ ಈ ಸಮಿತಿಯ ಫಜಲ್ಆಲಿ, ಕೆ.ಎಂ. ಫಣಿಕ್ಕರ್, ಕುಂಜ್ರು ಇದನ್ನು ಫಜಲ್ಆಲಿ ಆಯೋಗ ಅಥವಾ ತ್ರಿಮೂರ್ತಿ ಆಯೋಗವೆಂದು ಕರೆಯುವರು. ಇದನ್ನು ೧೯೫೩ರಲ್ಲಿ ರಾಜ್ಯಗಳ ಪುನರ್ವಿಂಗಡನೆಗಾಗಿ ರಚಿಸಲಾಯಿತು. ಮೂವರು ಭಾಷಾವಾರು ಪ್ರಾಂತ್ಯಕ್ಕಿಂತ ಆಡಳಿತ ಸೌಕರ್ಯ ಮುಖ್ಯವೆಂಬ ಭಾವನೆಯನ್ನು ಪ್ರಾಂತ್ಯ ರಚನೆಗೆ ವ್ಯಕ್ತಪಡಿಸಿದರು. ಇದಕ್ಕೆ ನಿರಂಜನರವರು ಇದು ಆ ಸಮಿತಿಯವರ ಅರ್ಥವಾಗದ ನಿಲುವು ಆಗಿದೆ. ಆಂಧ್ರ ಪ್ರಾಂತ್ಯವನ್ನು ಭಾಷಾವಾರು ಪ್ರಾಂತ್ಯವೆಂದು ವಿಂಗಡಿಸಿ ಕರ್ನಾಟಕಕ್ಕೆ ಆಡಳಿತ ಸೌಕರ್ಯವೆಂದರೆ ಅದು ಸರಿಯಾದ ನಿರ್ಣಯವಲ್ಲ. ಆಡಳಿತ ಸೌಕರ್ಯಕ್ಕಿಂತ ಪ್ರಾಂತ ರಚನೆಯೂ ಭಾಷೆ, ಪ್ರಾಂತ್ಯ, ಕಲೆ, ಸಂಸ್ಕೃತಿ, ರಾಜಕೀಯ, ಆರ್ಥಿಕ ಇವುಗಳ ಹಿನ್ನೆಲೆಯಲ್ಲಿ ಬೇಕಾಗಿದೆಯೇ ಹೊರತು ಆಡಳಿತಕ್ಕಾಗಿ ಅಲ್ಲವೆಂದು ಈ ಕನಿಷ್ಟ ಪ್ರಜ್ಞೆಯ ಈ ಸಮಿತಿಯವರಿಗೆ ಇಲ್ಲವೆಂದು ಚರ್ಚಿಸುತ್ತಾರೆ.

'ರಾಜಧಾನಿಯಿಂದ' ಎಂಬ ಪತ್ರಿಕಾ ಅಂಕಣಗಳ ಕೃತಿಯಲ್ಲಿ ನಿರಂಜನರು ಕನ್ನಡ ಪ್ರಾಂತ ರಚನೆಗೆ ಸಂಬಂಧಿಸಿದಂತೆ ಕರ್ನಾಟಕದ ರಾಜ್ಯಪಾಲರಾದ ವಿ.ವಿ.ಗಿರಿಯವರು ಭಾಷಾವಾರು ಪ್ರಾಂತ್ಯಗಳ ರಚನೆಯನ್ನು ವಿರೋಧಿಸುವರು. ಆ ವಿರೋಧಕ್ಕೆ ಬಹಳ ಮುಖ್ಯವಾದ ಕಾರಣವೆಂದರೆ ರಾಷ್ಟ್ರದ ಒಗ್ಗಟ್ಟಿಗೆ ಧಕ್ಕೆಯಾಗುತ್ತದೆ ಎಂಬ ದೃಷ್ಟಿಯಿದೆ. ಇಡೀ ಭಾರತವೇ ಏಕಮಾನ ಆಡಳಿತ ಪದ್ದತಿ ಬೇಕೆಂದು, ದೇಶವನ್ನು ಐದು ವಲಯಗಳಾಗಿ ವಿಂಗಡಿಸಬೇಕು. ದಕ್ಷಿಣದ ನಾಲ್ಕೂ ರಾಜ್ಯಗಳು ಬಂದು ವಲಯ ಮಾಡಬೇಕೆಂದು ಆಹಾರದ ಸಮಸ್ಯೆ, ಹಸಿವಿನ ಸಮಸ್ಯೆಯನ್ನು ಇದರಿಂದ ಪರಿಹರಿಸಬಹುದೆಂದು ತಿಳಿಸುತ್ತಾರೆ. ಇದಕ್ಕೆ ನಿರಂಜನರು ಮತ್ತೊಂದು ಸೇರಿಸಿ ಪಂಚವಲಯಗಳನ್ನು ಸೇರಿಸಿದರೆ ಭಾರತದಲ್ಲಿ ರಾಜ್ಯಪಾಲರ ಸಂಖ್ಯೆ ಐದಕ್ಕೆ ಇಳಿಯುತ್ತದೆ ಎಂದು ವಿ. ವಿ. ಗಿರಿಯವರಿಗೆ ವ್ಯಂಗ್ಯದ ರೀತಿಯಲ್ಲಿಯೇ ಪ್ರತಿಕ್ರಿಯಿಸುತ್ತಾರೆ. ರಾಜಕೀಯ ವ್ಯಕ್ತಿಗಳ ಕರ್ನಾಟಕ ಪ್ರಾಂತ್ಯ ರಚನೆಯನ್ನು ಕುರಿತಂತೆ ತೋರುವ ಅವರ ಧೋರಣೆಯನ್ನು ತಿಳಿಸುತ್ತಾರೆ.

ಗಡಿ ಪ್ರದೇಶವಾದ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಮಹಾರಾಷ್ಟ್ರದವರು ಒತ್ತಾಯಿಸುವುದು, ಮೈಸೂರಿನವರು ಇದಕ್ಕೆ ತದ್ವಿರುದ್ದವಾಗಿ ವರ್ತಿಸುವುದು, ರಾಜ್ಯಪಾಲರಾದ ವಿ. ವಿ. ಗಿರಿಯವರು ರಾಷ್ಟ್ರೀಯ ಐಕ್ಯತೆಗಾಗಿ ಭಾಷಾವಾರು ಪ್ರಾಂತ್ಯಗಳ ರಚನೆ ತಡೆಯನ್ನುಂಟು ಮಾಡುತ್ತದೆ ಎಂಬ ದೃಷ್ಟಿಯಿದೆ. ಒಂದು ವೇಳೆ ಪ್ರತಿ ರಾಜ್ಯವು ತನ್ನದೊಂದು ಸೇನೆಯನ್ನು ಇಟ್ಟುಕೊಂಡರೆ ಮೈಸೂರು ಮಹಾರಾಷ್ಟ್ರದ ಮೇಲೂ, ಮಹಾರಾಷ್ಟ್ರ ಮೈಸೂರಿನ ಮೇಲೆ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತದೆ. ಭಾಷಾವಾರು ಪ್ರಾಂತ್ಯ ರಚನೆಯಿಂದ ಅನ್ಯೆಕ್ಯವು ಛಿದ್ರ ಪ್ರವೃತ್ತಿಯು ಹೆಚ್ಚುತ್ತದೆ. ವಿ. ವಿ. ಗಿರಿಯವರ ಮಾತಿನಂತೆ ಮುಂದೊಂದು ದಿನ ಆ ರೀತಿಯ ಘಟನೆಗಳು ನಡೆಯಬಹುದೇನೋ ಎಂಬ ರೀತಿಯಲ್ಲಿ ಸಂಶಯವನ್ನು ನಿರಂಜನರು 'ಕನಸು ಒಡೆಯಿತೆ' ಎಂಬ ಲೇಖನದಲ್ಲಿ ಚರ್ಚಿಸುತ್ತಾರೆ. ಪ್ರಾಂತ್ಯವಾರು ರಚನೆಗಳ ಮೂಲ ಉದ್ದೇಶದಿಂದಾಗಿ ಮುಂದೊಂದು ದಿನ ರಾಜ್ಯ ರಾಜ್ಯಗಳ ನಡುವೆ ನದಿನೀರು, ಗಡಿವಿವಾದ ಮೊದಲಾದವುಗಳು ಉಂಟಾಗಬಹುದು ಎಂದು ನಿರಂಜನರು ಭಾವಿಸುತ್ತಾರೆ. ಅವರ ಭಾವನೆ ಇಂದು ನಿಜವಾಗಿದೆ. ನದಿ ವಿವಾದ, ಗಡಿ

ವಿವಾದಗಳು ಉಂಟಾಗಿ ಅವು ಇಂದಿಗೂ ರಾಜ್ಯ ರಾಜ್ಯಗಳ ನಡುವಿನ ಜನರ ನಡುವೆ ಒಂದು ರೀತಿಯ ಕಂದಕವನ್ನು ಏರ್ಪಡಿಸಿವೆ.

ಭಾಷಾವಾರು ಪ್ರಾಂತ್ಯ ರಚನೆಯಾದ ನಂತರ ೨೫.೧೦.೧೯೬೬ರಲ್ಲಿ ಗಡಿ ಪ್ರದೇಶದ ಸಮಸ್ಯೆಗಳಿಗೆ ಉತ್ತರ ನೀಡಲು ಮಹರ್‌ಚಂದ್ ಮಹಾಜನ್‌ರನ್ನು ನೇಮಿಸಲಾಯಿತು. ಬೆಂಗಳೂರಿಗೆ ಒಮ್ಮೆ ಪತ್ನಿ ಸಮೇತರಾಗಿ ಬಂದಾಗ ಅವರಿಗೆ ಕೆಲವು ಕನ್ನಡ ಚಳುವಳಿಗಾರರು ಕಪ್ಪು ಬಾವುಟ ತೋರಿಸಿದರು. ಆಯೋಗವನ್ನು ಮೈಸೂರು ಬಹಿಷ್ಕರಿಸಬೇಕೆಂಬ ದೃಷ್ಟಿ ಅಲ್ಲಿತ್ತು. ಆದರೆ ನಿರಂಜನರು ಈ ವಿಚಾರಕ್ಕೆ ಸಂಬಂಧಿಸಿದಂತೆ ಭಾಷಾವಾರು ಪ್ರಾಂತ್ಯ ರಚನೆಯಿಂದಾಗಿ ಲಾಭವೆಷ್ಟು? ಎಂದು ಪ್ರಶ್ನಿಸುತ್ತಾರೆ. ಭಾಷಾವಾರು ಪ್ರಾಂತ್ಯಗಳ ಆಯೋಗದ ಅಧ್ಯಕ್ಷರಾದ ಎಸ್. ಕೆ. ಧಾರ್‌ರವರು ಭಾಷಾವಾರು ಪ್ರಾಂತ್ಯ ಉಪರಾಷ್ಟ್ರೀಯತೆ ಮತ್ತು ರಾಷ್ಟ್ರೀಯತೆಗಳ ನಡುವೆ ಸಂಘರ್ಷ ಉಂಟಾದಾಗ ರಾಷ್ಟ್ರೀಯತೆ ಎಂಬುದು ನಾಶವಾಗುತ್ತದೆ ಎಂಬ ಮಾತಿನಲ್ಲಿ ಸತ್ಯವಿದೆ. ಜೆ. ವಿ. ಪಿ. (ಜವಹಾರ್‌ಲಾಲ್ ನೆಹರೂ, ವಲ್ಲಭಬಾಯಿ ಪಟೇಲ್, ಪಟ್ಟಾಭಿ ಸೀತಾರಾಮಯ್ಯ) ಯವರು ಭಾಷಾ ಸಂಬಂಧಗಳಿಗಾಗಿ, ಸಾಂಸ್ಕೃತಿಕ ವಿಚಾರಗಳಿಗೆ ಮಹತ್ವವಾಗಿದ್ದರು, ಭಾಷಾವಾರು ಪ್ರಾಂತ್ಯ ರಚನೆ ಜೊತೆಗೆ ಆಡಳಿತ, ಆರ್ಥಿಕದಂತಹ ಇತರ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು ಇಲ್ಲವಾದಲ್ಲಿ ಪ್ರಾಂತ್ಯಗಳು ಹಿಂದುಳಿಯುತ್ತವೆ. ಭಾಷಾವಾರು ಪ್ರಾಂತ್ಯ ರಚನೆಯ ಬಗ್ಗೆ ದೊಡ್ಡವರು ತಮ್ಮದೆಯಾದ ದಾರಿಯನ್ನು ಕಂಡುಕೊಂಡಿರುವಾಗ, ದೇಶದ ಮಹಾಜನರು ಕೂಡ ಹಾಗೆಯೇ ಬೇರೆ ದಾರಿಯನ್ನು ನೋಡುತ್ತಾರೆ. ಯಾವುದೇ ಆಯೋಗವನ್ನು ಬಹಿಷ್ಕರಿಸಿದರೂ ಏನು ಪ್ರಯೋಜನವಿಲ್ಲವೆಂದು 'ದೊಡ್ಡವರ ದಾರಿ' ಎಂಬ ಲೇಖನದಲ್ಲಿ ತಿಳಿಸುತ್ತಾರೆ. ಭಾಷಾವಾರು ಪ್ರಾಂತ್ಯ ರಚನೆಗೆ ರಾಷ್ಟ್ರದ ಮಹಾನ್‌ನಾಯಕರು ತಮ್ಮದೇಯಾದ ರೀತಿಯಲ್ಲಿ ವ್ಯಾಖ್ಯಾನ ನೀಡಿದರೆ, ಜನತೆಯು ಕೂಡ ಭಾಷಾವಾರು ಪ್ರಾಂತ್ಯ ರಚನೆಯ ಅಗತ್ಯತೆಗೆ ಭಿನ್ನದಾರಿಯನ್ನು ಹಿಡಿಯುತ್ತಾರೆಂದು ಪ್ರತಿಕ್ರಿಯಿಸುತ್ತಾರೆ.

ಮಹಾರಾಷ್ಟ್ರ-ಮೈಸೂರು, ಮೈಸೂರು-ಕೇರಳ ಗಡಿಗಳಲ್ಲಿ ಉಂಟಾದ ವಿವಾದಗಳಿಗೆ ಕೇಂದ್ರ ಸರಕಾರ ನಿವೃತ್ತ ಮುಖ್ಯ ನ್ಯಾಯಾಧೀಶರಾದ ಮಹರ್‌ಚಂದ್ ಮಹಾಜನ್‌ರನ್ನು ನೇಮಕ ಮಾಡಿದಾಗ ಕರ್ನಾಟಕ ಕೆಲಪ್ರದೇಶಗಳಲ್ಲಿ ಒಂದು ರೀತಿಯ ಋಣಾತ್ಮಕ ಭಾವನೆ ಬೆಳೆದಿತ್ತು. ಇದಕ್ಕೆ ಬಹುಮುಖ್ಯ ಕಾರಣವೆಂದರೆ ಇದೊಂದು ಏಕ ಸದಸ್ಯ ಆಯೋಗವಾಗಿದ್ದರಿಂದ ಮಹಾರಾಷ್ಟ್ರದವರು ಇವರ ಮೇಲೆ ಪ್ರಭಾವವನ್ನು ಬೀರಬಹುದಾಗಿದೆ. ಆದರೆ ನಿರಂಜನರು ಮಹಾಜನ್ ರಾಷ್ಟ್ರದ ಇತಿಹಾಸದ ಹಲವು ತಿರುವುಗಳಲ್ಲಿ ಪ್ರಮುಖ ಪಾತ್ರವಹಿಸಿದವರಾಗಿದ್ದಾರೆ. ಅವರು ೧೯೪೬ರಲ್ಲಿ ನಾವಿಕ ಬಂಡಾಯ ನಡೆದಾಗ 'ಬಂಡಾಯ ಆಯೋಗ'ದ ಸದಸ್ಯರಾಗಿದ್ದರು. ೧೯೪೭ರಲ್ಲಿ ದೇಶ ವಿಭಜನೆಯಾದಾಗ ಪಂಜಾಬ್ ಗಡಿ ಆಯೋಗದ ಸದಸ್ಯರಾಗಿದ್ದರು. ೧೯೪೭ರಲ್ಲಿ ಕಾಶ್ಮೀರದಲ್ಲಿ ಹರಿಸಿಂಗ್‌ರವರು ಅಧಿಕಾರದಲ್ಲಿದಾಗ ಮಹಾಜನ್‌ರವರು ಮುಖ್ಯಮಂತ್ರಿಯಾಗಿದ್ದರು ಅವರ ಆಡಳಿತದಲ್ಲಿಯೇ ಕಾಶ್ಮೀರ ಭಾರತದೊಂದಿಗೆ ವಿಲೀನವಾಯಿತ್ತು. ನ್ಯಾಯಶಾಸ್ತ್ರವಲ್ಲದೆ ಶಿಕ್ಷಣ, ಬ್ಯಾಂಕಿಂಗ್, ತೋಟಗಾರಿಕೆ, ಮೊದಲಾದವುಗಳ ಬಗ್ಗೆ ಅಪಾರ ಜ್ಞಾನವನ್ನು ಹೊಂದಿದ್ದವರೆಂದು ಅವರಿಂದ ಯಾವುದೇ ರೀತಿಯಲ್ಲಿ ಮೈಸೂರಿನ ಪ್ರದೇಶಗಳಿಗೆ ಸಮಸ್ಯೆಯಾಗುವುದಿಲ್ಲವೆಂದು ಅವರ ವ್ಯಕ್ತಿತ್ವವನ್ನು ಪರಿಚಯಿಸುತ್ತಾರೆ. ಕೊನೆಗೆ ಗಡಿ ವಿವಾದ ಬಗ್ಗೆ ಅವರು ನೀಡಿದ ತೀರ್ಪುನ್ನು ಮಹಾರಾಷ್ಟ್ರ, ಕೇರಳದವರು ಒಪ್ಪದೇ ಕರ್ನಾಟಕದ ಪರವಾಗಿ ತೀರ್ಪು ಇದೆ ಎಂಬ ಕಾರಣದಿಂದ ಇಂದಿಗೂ

ನೆನೆಗುದಿಗೆ ಬಿದ್ದಿದೆ. ಈ ವಿಚಾರವನ್ನು 'ದಿನಚರಿಯಿಂದ' ಕೃತಿಯ 'ನನಗೆ ತಿಳಿಯದು' ಎಂಬ ಲೇಖನದಲ್ಲಿ ನಿರಂಜನರು ಚರ್ಚಿಸುತ್ತಾರೆ.

ಅ.ನ.ಕೃರವರು ಕರ್ನಾಟಕ ಪ್ರಾಂತ್ಯರಚನೆಯಾಗಲು ಇದ್ದಂತಹ ತೊಡಕುಗಳಲ್ಲಿ ಕರ್ನಾಟಕದಲ್ಲಿ ವೀರಶೈವರು ಪ್ರಭಾವರಾಗುತ್ತಾರೆ. ಮೈಸೂರು ಪ್ರಾಂತ್ಯ ಅಭಿವೃದ್ಧಿ ಹೊಂದಿರುವುದರಿಂದ ಮೈಸೂರಿನ ಜನತೆ ಒಪ್ಪುವುದಿಲ್ಲ. ಕೊಡಗಿನ ಸಮಸ್ಯೆ, ಬಳ್ಳಾರಿಯ ಸಮಸ್ಯೆ ಅದಕ್ಕೆ ಪರಿಹಾರವನ್ನು ಚರ್ಚಿಸುತ್ತಾರೆ. ಇದೇ ರೀತಿಯಲ್ಲಿ ನಿರಂಜನರು ಈ ಕೆಲವೊಂದು ಅಂಶಗಳನ್ನು ಚರ್ಚಿಸುವುದರೊಂದಿಗೆ ಕರ್ನಾಟಕ ಪ್ರಾಂತ್ಯ ರಚನೆ ತೊಡಕುಗಳಲ್ಲಿ ಭಿನ್ನವಾದ ಕಾರಣಗಳಾದ ವಲಯ ರಾಜ್ಯಗಳ ಸ್ಥಾಪನೆ, ಭಾಷಾವಾರು ಪ್ರಾಂತ್ಯಕ್ಕಿಂತ ಆಡಳಿತದ ಅನುಕೂಲಕ್ಕಾಗಿ ಎಂಬ ಕೇಂದ್ರದ ನಾಯಕರ ಮನಃಸ್ಥಿತಿ, ಗಡಿನಾಡ ಪ್ರದೇಶಗಳ ಸಮಸ್ಯೆಗೆ ಪರಿಹಾರವಾಗಿ ಮಹಾಜನ್ ವರದಿಗಳು ಮತ್ತು ಕರ್ನಾಟಕದ ಮುದ್ರೆಯ ಅಥವಾ ಸಂಕೇತದ ಅವಶ್ಯಕತೆಯೊಂದಿಗೆ, ಕರ್ನಾಟಕಗಿಂತಲೂ ಮೈಸೂರಿನ ಹೆಸರಲ್ಲಿ ಯಾವುದು ಮುಖ್ಯವೆಂಬುದನ್ನು ಚರ್ಚಿಸುತ್ತಾರೆ.

ವಲಯ ರಾಜ್ಯಗಳ ಸ್ಥಾಪನೆಯ ಬಗ್ಗೆ ಕೇಂದ್ರದ ಹಿರಿಯ ನಾಯಕರ ಮನಃಸ್ಥಿತಿ ಇತ್ತು. ೧೦-೧೧-೧೯೬೮ರ ಕನ್ನಡ ರಾಜ್ಯೋತ್ಸವದ ಸಂಭ್ರಮದ ಮುನ್ನ ಕರ್ನಾಟಕದ ರಾಜಕೀಯ ಶಿಲ್ಪಿಯಾದ ಸಿದ್ಧವನಹಳ್ಳಿ ನಿಜಲಿಂಗಪ್ಪನವರು ರಾಷ್ಟ್ರದ ಐಕ್ಯತೆಯ ದೃಷ್ಟಿಯಿಂದ ಪ್ರಾಂತರಹಿತ ಏಕಘಟಕ ಸರಕಾರಗಳನ್ನು ರಚಿಸಲು ಕಾಂಗ್ರೆಸ್ ಸಿದ್ದವಿದೆ ಎಂದು ಹೇಳಿದ ಮಾತಿಗೆ ನಿರಂಜನರು ಭಾಷೆಯ ತಳಹದಿಯ ಮೇಲೆ ರಾಜ್ಯಗಳ ಪುನರ್ ವಿಂಗಡಣೆಯನ್ನು ವಿರೋದಿಸುವರು ಇಂದು ವಲಯ ರಾಜ್ಯಗಳ ರಚನೆಗೆ ಮುಂದಾಗಿರುವುದು ಸರಿಯಲ್ಲ. ಪ್ರಾದೇಶಿಕ ಭಾಷೆಗಳ ಮಹತ್ವವನ್ನು ಎತ್ತಿಹಿಡಿದ್ದದರಿಂದಲೇ ಪ್ರಜಾಪ್ರಭುತ್ವ ಯಶಸ್ವಿಯಾಗಿರುವುದು, ಪ್ರಜಾಪ್ರಭುತ್ವ ಯಶಸ್ವಿಯಾಗಲು ಇದು ಕೂಡ ಕಾರಣವಾಗಿದೆ. ಹೊಸತೊಂದು ಪೀಳಿಗೆಗೆ ಈ ರೀತಿಯಿಂದ ಪ್ರಾಂತ್ಯಗಳು ರಚನೆಯಾದುದು ಅತ್ಯಂತ ತರ್ಕಬದ್ದ ಸಮಂಜಸವಾದುದು. ಭಾಷಾವಾರು ಪ್ರಾಂತ್ಯಗಳ ರಚನೆಯಿಂದ ಕೆಲವೊಂದು ಗಡಿ ಸಮಸ್ಯೆಗಳು, ಆರ್ಥಿಕವಾಗಿ ಹಿಂದುಳಿದಿರುವುದು, ನೆಲ-ಜಲ, ಅಣೆಕಟ್ಟು, ಕಾರ್ಖಾನೆ ಸ್ಥಾಪನೆ, ಬಂದರು ಇವುಗಳ ವಿಚಾರಗಳಲ್ಲಿ ಸಮಸ್ಯೆಗಳಿರುವುದು ಸಹಜವಾಗಿದೆ. ಆದರೆ ಪ್ರಜೆಗಳು ಮಾತನಾಡುವ ಭಾಷೆಯಲ್ಲಿ ಆಡಳಿತ ನಡೆಯದೇ ಬೇರೆ ಭಾಷೆಯಲ್ಲಿ ಆಡಳಿತ ನಡೆದರೆ ಪ್ರಜಾಪ್ರಭುತ್ವವು ಯಶಸ್ವಿಯಾಗುವುದಿಲ್ಲ. ಲೋಪ-ದೋಷಗಳನ್ನು ತಿದ್ದಿ ಸರಿಪಡಿಸಬೇಕಾದುದು ಸದ್ಯದ ದಾರಿಯಾಗಿದೆ. ಅದನ್ನು ಬಿಟ್ಟು ಬೇರೊಂದು ದಾರಿಯನ್ನು ಹಿಡಿದರೆ ಸರ್ವಾಧಿಕಾರಿ ಧೋರಣೆಯಾಗುತ್ತದೆ ಎಂದು 'ಇಲ್ಲಿಂದ ಇನ್ನೆಲಿಗೆ' ಲೇಖನದಲ್ಲಿ ಪ್ರಜಾಪ್ರಭುತ್ವದ ಯಶಸ್ವಿಯ ಹಿಂದೆ ಭಾಷಾವಾರು ಪ್ರಾಂತ್ಯ ವಿಂಗಡಣೆಯೇ ಸರಿಯಾದದ್ದು ಎಂಬ ನಿಲುವನ್ನು ನಿರಂಜನರು ಹೊಂದಿದ್ದಾರೆ.

ನೆಹರೂ, ಪಟ್ಟಾಭಿ ಸೀತಾರಾಮಯ್ಯ, ವಲ್ಲಭಬಾಯಿ ಪಟೇಲ್, ವಿ. ವಿ. ಗಿರಿ, ಎಸ್. ನಿಜಲಿಂಗಪ್ಪ ಮೊದಲಾದ ನಾಯಕರು ವಲಯ ರಾಜ್ಯಗಳ ಸ್ಥಾಪನೆಯಿಂದಾಗಿ ರಾಷ್ಟ್ರೀಯ ಐಕ್ಯತೆಯನ್ನುಂಟು ಮಾಡಬಹುದೆಂಬ ಮಹಾತ್ವಕಾಂಕ್ಷೆಯನ್ನು ಹೊಂದಿದ್ದವರಾಗಿದ್ದಾರೆ. ಆದರೆ ಭಾಷೆ, ಸಾಹಿತ್ಯ, ಸಂಸ್ಕೃತಿ ಮೊದಲಾದವುಗಳನ್ನು ಪ್ರಾದೇಶಿಕ ಮಟ್ಟದಲ್ಲಿ ಸಂಘಟಿಸದೇ ಭಾಷಾವಾರು ಪ್ರಾಂತ್ಯದಿಂದ ವಿಂಗಡಿಸದೇ ಇಡೀ ಭಾರತವನ್ನು ವಲಯಗಳಾಗಿ ವಿಂಗಡಿಸಿ, ವಲಯ ರಾಜ್ಯದ

ಮೂಲಕ ಆಡಳಿತ ನಡೆಸಿದರೆ ಪ್ರತಿಯೊಂದು ಭಾಷೆ, ಸಾಹಿತ್ಯ, ಸಂಸ್ಕೃತಿಗಳು ಕೂಡ ನಾಶಗೊಂಡು ದೇಶದಲ್ಲಿ ಆಂತರಿಕ ಯುದ್ದಗಳು ನಡೆಯುತ್ತಿದ್ದವು. ಭಾಷಾವಾರು ಪ್ರಾಂತ್ಯ ವಿಂಗಡಣೆಯಿಂದಾಗಿ ಇಂದು ಭಾರತದ ಪ್ರತಿಯೊಂದು ಭಾಷೆಯು ಸಂಘಟಿತವಾಗಿ ಸಾಹಿತ್ಯ, ಸಂಸ್ಕೃತಿ, ಆಡಳಿತದ ಮೂಲಕ ಒಗ್ಗಟ್ಟಾಗಿ ಉಳಿದುಕೊಂಡು ಪ್ರಜಾಪ್ರಭುತ್ವ ಯಶಸ್ವಿಯಾಗಲು ಸಾಧ್ಯವಾಯಿತು ಎಂಬ ನಿರಂಜನರ ದೃಷ್ಟಿ ಬಹಳ ಮಹತ್ವದಾಗಿದೆ. ಭಾಷಾವಾರು ಪ್ರಾಂತ್ಯ ರಚನೆಯಿಂದಾಗಿ ಪ್ರಜಾಪ್ರಭುತ್ವ ಇಂದೂ ಬಲಿಷ್ಠವಾಗಿ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಲು ಸಾಧ್ಯವಾದ ಅಂಶವನ್ನು ನಿರಂಜನರು ಗುರುತಿಸುತ್ತಾರೆ.

'ಈ ನೆಲಕ್ಕೊಂದು ಹೆಸರು: ಕನ್ನಡ ನಾಡು' ಎಂಬ ಅಂಕಣದಲ್ಲಿ ನೆಹರೂರವರು ಭಾಷಾವಾರು ಪ್ರಾಂತ್ಯ ರಚನೆಗೆ ಭೌಗೋಳಿಕ ಹೊಂದಾಣಿಕೆ, ಆಡಳಿತಾನುಕೂಲ, ಆರ್ಥಿಕ ಸಾಮಾರ್ಥ್ಯ ಇತ್ಯಾದಿಗಳನ್ನು ಏನೇ ಪಟ್ಟಿ ಮಾಡಿದರು ಹೊಸ ಪ್ರಾಂತ್ಯಗಳ ರಚನೆಗೆ ಭಾಷೆ ಅಧಾರವೆಂಬುದು ಬಹಳ ಮುಖ್ಯವಾಗಿದೆ. ಭಾಷಾವಾರು ಪ್ರಾಂತ್ಯ ರಚನೆ ತಳಹದಿಯೇ ಮುಖ್ಯವಾದ ಅಂಶವೆಂಬುದನ್ನು ನಿರಂಜನರು ಗುರುತಿಸುತ್ತಾರೆ. ಕುವೆಂಪು ಅಭಿನಂದನ ಗ್ರಂಥ 'ಗಂಗೋತ್ರಿ' ಬಿಡುಗಡೆಯ ಸಂದರ್ಭದಲ್ಲಿ ರಾಜ್ಯದ ಮಂತ್ರಿಯಾದ ರಾಮಕೃಷ್ಣ ಹೆಗಡೆಯವರು ರಾಜ್ಯಕ್ಕೆ ಕುವೆಂಪುರವರು ಕರ್ನಾಟಕ ಎಂದು ಹೆಸರಿಡಬೇಕೆಂದು ಸೂಚಿಸಿದ್ದಾರೆ. ಅದಕ್ಕೆ ಸಂಬಂಧಿಸಿದಂತೆ ಶಾಸನಸಭೆಯಲ್ಲಿ ಶ್ರೀಕಂಠಯ್ಯ ಎಂಬುವರು ಕನ್ನಡನಾಡು ಅಥವಾ ಕರ್ನಾಟಕ ಎಂದು ಹೆಸರಿಡಬೇಕೆಂದು ವಾದಿಸಿದರು.ಈ ನಾಡಿಗೆ ಕೆಲವರು ಮೈಸೂರು ಇರಲಿ ಎಂದು, ಮತ್ತೇ ಕೆಲವರು ಕರ್ನಾಟಕ ಎಂಬ ಹೆಸರು ಇರಲಿ ಎಂದು ಆ ದಿನಗಳಲ್ಲಿ ವಾದಗಳಿದ್ದವು. ಅದಕ್ಕೆ ಬಹುಮುಖ್ಯ ಕಾರಣವೆಂದರೆ ಹಳೆಯ ಮೈಸೂರಿನಲ್ಲಿ ಒಕ್ಕಲಿಗರ ಪ್ರಾಧಾನ್ಯತೆಯಿತ್ತು. ಹೊಸ ರಾಜ್ಯ ನಿರ್ಮಾಣವಾಗದಿದ್ದರೆ ಮೈಸೂರಿನ ಅಧಿಕಾರ ಅವರ ಕೈಯಲ್ಲಿ ಇರುತ್ತಿತ್ತು. ನೂತನ ರಾಜ್ಯದಿಂದ ಲಿಂಗಾಯಿತರಿಗೆ ಸಂಖ್ಯಾ ಬಲದಲ್ಲಿ ಹೆಚ್ಚು ಇರುವುದರಿಂದ ರಾಜಕಾರಣದ ಸೂತ್ರದಾರರೇ ಅವರೇ ಹೆಚ್ಚು. ಹಾಗಾಗಿ 'ಮೈಸೂರು' ಮತ್ತು 'ಕರ್ನಾಟಕ' ಎಂಬ ಹೆಸರಿನ ನಡುವೆ ವೈಮನಸ್ಸು ಉಂಟಾಗಿತ್ತು. ನಂತರ ಈ ಸಮಸ್ಯೆ ೧೯೭೩ ನವೆಂಬರ್ ೧ರಂದು ಕೊನೆಗೊಂಡು 'ಕರ್ನಾಟಕ' ಎಂಬ ಹೆಸರು ಪಡೆಯಿತು.

"ರಾಜಕೀಯ ವಲಯದ ಹೊರಗಿನ ವಿಷಯ ಬೇರೆ ಅರೆಸೂತ್ತಿಗೆಯ ಬಗೆಗೆ ಭಕ್ತಿ, ವ್ಯಾಮೋಹಗಳಿರುವವರು ಶ್ರೀಮನ್ಮಹಾರಾಜರು, ಕರ್ನಾಟಕ ರತ್ನ ಸಿಂಹಶನಾಧೀಶ್ವರರೆನ್ನಿಸಿದರು ಮೈಸೂರು ಎಂಬ ಹೆಸರಿಗೆ ಅಂಟಿಕೊಳ್ಳುತ್ತಾರೆ. ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮಾತಾನಾಡುವವರು 'ಕರ್ನಾಟಕ' ವನ್ನು ಒಪ್ಪಿಕೊಳ್ಳುತ್ತಾರೆ. ಇಲ್ಲಿ ಜಾತಿ ಮತಗಳ ಅಡ್ಡೆಗೋಡೆಗಳಿಲ್ಲ, ಈ ನಿಲುವುಗಳಿಗೆ ಅಧಿಕಾರದ ಆಸೆಯು ಹಿಮ್ಮೇಳವಿಲ್ಲ"[೨] ಎಂದು ನಿರಂಜನರು ಅಭಿಪ್ರಾಯಿಸುತ್ತಾರೆ. ಮೈಸೂರು ಮತ್ತು ಕರ್ನಾಟಕ ಎಂಬ ಹೆಸರು ಇಡಲು ಇರುವ ವಿವಿಧ ದೃಷ್ಟಿಕೋನವನ್ನು ನಿರಂಜನರ ಈ ಮಾತಿನಲ್ಲಿ ಕಾಣಬಹುದಾಗಿದೆ.

ಒಂದು ಕಡೆ ರಾಜಕೀಯ ನಿಲುವುಗಳು ಹೀಗೆ ಇದ್ದರೆ, ಇನ್ನೊಂದು ಕಡೆ ಈ ರೀತಿಯ ರಾಜಕೀಯ ಪಕ್ಷಗಳಾದ ಕಮೂನಿಸ್ಟ್ ಪಕ್ಷ, ಸಮಾಜವಾದಿ ಪಕ್ಷ, ಜನಸಂಘ ಮೊದಲಾದವುಗಳ 'ಕರ್ನಾಟಕ' ಎಂಬ ಹೆಸರಿನಿಂದಲೇ ರಾಜಕೀಯ ಚಟುವಟಿಕೆಗಳಿಗೆ ನಡೆಯುವುದನ್ನು ಕಾಣಬಹುದು.

ಕಾಂಗ್ರೇಸ್ ಕೂಡ ಗಾಂಧಿಯುಗ ಆರಂಭವಾದಾಗ ಭಾಷಾಪ್ರಾಂತ್ಯಗಳ ತಳಹದಿಯ ಮೇಲೆ ತನ್ನ ಸಂಘಟನೆಯನ್ನು ಕಟ್ಟಿಕೊಂಡಿದೆ. ಉದಾ, ಕರ್ನಾಟಕ ಕಾಂಗ್ರೇಸ್ ಸಮಿತಿ ಈಗಲೂ ಪ್ರದೇಶ ಕಾಂಗ್ರೇಸ್ ಸಮಿತಿ ಎಂಬುದನ್ನು ಈ ಹಿನ್ನೆಲೆಯಲ್ಲಿ ನೋಡಬಹುದು. ಕರ್ನಾಟಕ ಏಕೀಕರಣದ ವಿಚಾರವಾಗಿ ಅ.ನ.ಕೃ ಮತ್ತು ನಿರಂಜನರವರು ತಮ್ಮದೆಯಾದ ವಿಚಾರ ಸಾಹಿತ್ಯದಲ್ಲಿ ಕೆಲವೊಂದು ಸಾಮ್ಯತೆಗಳ ಹಿನ್ನೆಲೆಯಲ್ಲಿ ವಿರ್ಮಶಿಸಿದರೆ, ಮತ್ತೆ ಕೆಲವು ಕಡೆ ಭಿನ್ನವಾಗಿಯೇ ತಮ್ಮ ನಿಲುವುಗಳನ್ನು ಪ್ರತಿಪಾದಿಸುತ್ತಾರೆ. ಆ ಮೂಲಕ ಕನ್ನಡ ಮತ್ತು ಕರ್ನಾಟಕದ ಏಕೀಕರಣವನ್ನು ತಮ್ಮದೆಯಾದ ಚಾರಿತ್ರಿಕ ಹಿನ್ನೆಲೆಯಲ್ಲಿ ದಾಖಲಿಸುತ್ತಾರೆ.

ಕೊನೆ ಟಿಪ್ಪಣಿಗಳು

೧. ನಿರಂಜನ, ಅಂಕಣ, ಪುಟ ೫೦೮.

೨. ನಿರಂಜನ, ದಿನಚರಿಯಿಂದ, ಪುಟ ೧೭೭.

ಅಧ್ಯಾಯ ೭

ಅ. ನ. ಕೃ. ಮತ್ತು ನಿರಂಜನ ಅವರ ಸಂಕೀರ್ಣ ವಿಚಾರ ಸಾಹಿತ್ಯದ ತೌಲನಿಕ ವಿವೇಚನೆ

ಸಾಮಾನ್ಯವಾಗಿ ತೌಲನಿಕ ಸಾಹಿತ್ಯ ಎಂದರೆ ವಿವಿಧ ಸಾಹಿತ್ಯಗಳ ಒಂದು ತುಲನಾತ್ಮಕ ಅಧ್ಯಯನ ಎಂಬ ಅರ್ಥವು ಬರುತ್ತದೆ. ತುಲನೆ ಅಥವಾ ತೌಲನಿಕ ಎಂಬುದು ಹೋಲಿಕೆ ಎಂಬ ಅರ್ಥವನ್ನು ಹೊಂದಿದೆ. ತೌಲನಿಕ ಸಾಹಿತ್ಯದ ಪರಿಕಲ್ಪನೆಗೆ ಒಂದು ಅಂತರಾಷ್ಟ್ರೀಯವಾದದ ಆಯಾಮವಿದೆ. ಅಲ್ಲಿ ಭಾಷೆ, ಸಾಹಿತ್ಯ, ಕುಲ, ಧರ್ಮ ಇತ್ಯಾದಿಗಳಿಂದ ಬೇರೆ ಬೇರೆಯಾಗಿದ್ದರೂ, ಮಾನವ ಜಾತಿಯ ಏಕತೆಯನ್ನು ಪ್ರತಿಪಾದಿಸುವುದು ಆಗಿದೆ, ಯಾವುದೇ ಕಾಲಘಟ್ಟದಲ್ಲಿ ಭೌಗೋಳಿಕ ಪ್ರದೇಶದಲ್ಲಿ, ಯಾವುದೇ ಭಾಷೆಯಲ್ಲಿ ಏನೇ ಅಭಿವ್ಯಕ್ತಿ ಹೊಂದಿದ್ದರು ಅಲ್ಲಿ ಮನುಷ್ಯನ ಮೂಲಭೂತ ಅನುಭವಗಳು, ವಿಚಾರಗಳು, ಸಿದ್ಧಾಂತಗಳು ಒಂದೇ ಆಗಿಲ್ಲದಿದ್ದರು ಒಂದು ಸಮಾನತೆಯನ್ನು ನಾವು ಕಾಣಬಹುದು. ಇಂತಹ ಸಮಾನತೆಯನ್ನು ನಾವು ಸಾಹಿತ್ಯಗಳ ತೌಲನಿಕ ಅಧ್ಯಯನದಿಂದಲೂ ಗುರುತಿಸಬಹುದು.

ತೌಲನಿಕ ಸಾಹಿತ್ಯ ಅಧ್ಯಯನವೆಂದರೆ "ಎಲ್ಲಾ ಸಾಹಿತ್ಯಕ ಸೃಷ್ಟಿಯ ಮತ್ತು ಸಾಹಿತ್ಯನುಭವವೂ ಸಮಾನವಾಗಿರುತ್ತವೆ ಎಂಬ ಅರಿವಿನಿಂದ ಮಾಡುವ ಅಧ್ಯಯನ"[೧] ಎಂದು ರೆನೆವೆಲೆಕ್ ಅಭಿಪ್ರಾಯಿಸುತ್ತಾರೆ. ಅಂದರೆ ಎಲ್ಲಾ ಸಾಹಿತಿಕ ಸೃಷ್ಟಿಯ ಮತ್ತು ಸಾಹಿತ್ಯದ ಅನುಭವು ಒಂದೇ ಆಗಿರುತ್ತದೆ. ತೌಲನಿಕ ಸಾಹಿತ್ಯದಲ್ಲಿ ಸಾಮ್ಯತೆಯನ್ನು ಗುರುತಿಸುವುದಕ್ಕಿಂತ, ಭಿನ್ನ ಗುಣಗಳನ್ನು ಗುರುತಿಸುವುದು ಜೊತೆಗೆ ಒಂದು ಕೃತಿಯನ್ನು, ಸಾಹಿತ್ಯವನ್ನು ರೂಪಿಸಿದ ಒಂದು ಸಾಮಾಜಿಕ ಸಂದರ್ಭವನ್ನು ಕುರಿತು ಮಾಡುವ ಅಧ್ಯಯನವಾಗುತ್ತದೆ. ಹಾಗೆಯೇ ವಿವಿಧ ಕಾಲಘಟ್ಟದಲ್ಲಿ ರಚಿಸಲ್ಪಟ್ಟ ಅನೇಕ ಕೃತಿಗಳನ್ನು ಒಂದೆಡೆಗೆ ತಂದು ಅವುಗಳನ್ನು ವಿಶ್ಲೇಷಿಸಿ ಅವುಗಳಲ್ಲಿರುವ ಸಾಮ್ಯತೆ ಮತ್ತು ಭಿನ್ನತೆಗಳನ್ನು ಗುರುತಿಸುವುದು ಆಗಿದೆ.

ಸಂಕೀರ್ಣ ವಿಚಾರ ಸಾಹಿತ್ಯದ ತೌಲನಿಕ ವಿವೇಚನೆ ಎಂಬ ಈ ಅಧ್ಯಾಯದಲ್ಲಿ ಅ. ನ. ಕೃ. ಮತ್ತು ನಿರಂಜನ ಅವರ ವಿಚಾರ ಸಾಹಿತ್ಯದಲ್ಲಿ ಕಂಡು ಬರುವ ವ್ಯಕ್ತಿ ಚಿತ್ರಣ ಮತ್ತು ಜೀವನ ಚರಿತ್ರೆಗಳು ಹಾಗೂ ಸಂದರ್ಶನಗಳನ್ನು ತೌಲನಿಕವಾಗಿ ವಿವೇಚಿಸಲಾಗುವುದು. ಈ ಅಧ್ಯಾಯಕ್ಕೆ ಅನುಗುಣವಾಗಿ ಈ ಕೆಳಕಂಡ ಉಪಶೀರ್ಷಿಕೆಯ ಹಿನ್ನೆಲೆಯಲ್ಲಿ ಅವರ ಸಂಕೀರ್ಣ ವಿಚಾರ ಸಾಹಿತ್ಯವನ್ನು ತೌಲನಿಕವಾಗಿ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ.

- ವ್ಯಕ್ತಿಚಿತ್ರಣ ಮತ್ತು ಜೀವನ ಚರಿತ್ರೆಗಳು

- ಸಂದರ್ಶನಗಳು

೭.೧ ವ್ಯಕ್ತಿ ಚಿತ್ರಣ ಮತ್ತು ಜೀವನ ಚರಿತ್ರೆಗಳು

ಅ.ನ.ಕೃ ಮತ್ತು ನಿರಂಜನರವರು ಬರೆದ ವ್ಯಕ್ತಿ ಚಿತ್ರಣ ನೀಡುವ ಲೇಖನಗಳು ಹಲವಿವೆ. ಇದರಲ್ಲಿ ಅ.ನ.ಕೃರವರು 'ಕನ್ನಡ ಕುಲರಸಿಕರು' ಎಂಬ ಕೃತಿಯಲ್ಲಿ ಕನ್ನಡ ನಾಡು- ನುಡಿ- ಸಾಹಿತ್ಯಕ್ಕಾಗಿ ಸೇವೆ ಸಲ್ಲಿಸಿದ ಹಲವು ಮಹನೀಯರುಗಳ ವ್ಯಕ್ತಿತ್ವ ಮತ್ತು ಜೀವನ ಕೃತಿಪರಿಚಯವನ್ನು ಮಾಡುತ್ತಾರೆ. ಆದರೆ ನಿರಂಜನರವರು 'ನಡೆ ಚೆನ್ನ ನುಡಿ ಚೆನ್ನ' ಎಂಬ ಕೃತಿಯಲ್ಲಿ ಕನ್ನಡ ನಾಡಿಗೆ ದುಡಿದ ಸಾಹಿತಿಗಳ ಜೀವನ, ವ್ಯಕಿತ್ವ ಕೃತಿಯನ್ನು ಪರಿಚಯ ಮಾಡುತ್ತಾರೆ. ಅವರ ಅಂಕಣ ಬರಹಗಳಾದ ರಾಜಧಾನಿಯಿಂದ, ದಿನಚರಿಯಿಂದ, ಅಂಕಣ ಕೃತಿಗಳಲ್ಲಿ ಹಲವು ಲೇಖಕರ ವ್ಯಕಿತ್ವ ಚಿತ್ರಣವನ್ನು ನೀಡುತ್ತಾರೆ. ಈ ಭಾಗದಲ್ಲಿ ಅ.ನ.ಕೃ ಮತ್ತು ನಿರಂಜನರವರ ವ್ಯಕ್ತಿಚಿತ್ರಣವನ್ನು ಹಾಗೂ ಜೀವನ ಚರಿತ್ರೆಗಳಲ್ಲಿರುವ ಸಾಮ್ಯತೆ ಮತ್ತು ಭಿನ್ನತೆಗಳನ್ನು ತಿಳಿಸುವುದಾಗಿದೆ.

ಮಾಸ್ತಿಯವರ ವ್ಯಕಿತ್ವವನ್ನು ಚಿತ್ರಿಸುವ ಅ.ನ.ಕೃರವರು ಅದವಾನಿಯಲ್ಲಿ ಸಾಹಿತ್ಯ ಪರಿಷತ್ತಿನ ಅಧಿವೇಶನಕ್ಕೆ ಹೊರಟಾಗ ಗುಂತುಕಲ್ಲಿನ ನಿಲ್ದಾಣದಲ್ಲಿ ರೈಲಿನಲ್ಲಿ ಕುಳಿತು ಪ್ರಯಾಣ ಮಾಡಬೇಕಾದರೆ ಸೇಂದಿ ಕಂಟ್ರಾಕ್ಟರ್ ಇವರಿಗೆ ಗೌರವಿಸುವ ಸಂದರ್ಭದಲ್ಲಿ ಮಾಸ್ತಿಯವರು ಅ.ನ.ಕೃರವರಿಗೆ ಈತ ಗೌರವ ಕೊಡುತ್ತಿರುವುದು ನಿಮ್ಮ ಮಾಸ್ತಿಯವರಿಗಲ್ಲ ಅವರ ಎಕ್ಸೈಜ್ ಕಮೀಷನರಿಗೆ ಎಂದು ತಿಳಿಸುತ್ತಾರೆ. ಇದು ಮಾಸ್ತಿಯವರ ವ್ಯಕ್ತಿಗಳ ವ್ಯಕ್ತಿತ್ವವನ್ನು ಗುರುತಿಸುವ ಪ್ರವೃತ್ತಿ ಉಳ್ಳವರು ಎಂಬುದಕ್ಕೆ ಸಾಕ್ಷಿಯಾಗಿ ನೀಡುತ್ತಾರೆ. ಮತ್ತೊಂದು ಫ್ರಾನ್ಸಿನಿಂದ ಬಂದಿದ್ದ ಅ.ನ.ಕೃ ರವರ ನಾದಿನಿ ಫ್ರೆಂಚ್ ಹೆಣ್ಣು ಮಗಳನ್ನು ಭೇಟಿಯಾದಾಗ ಮಾಸ್ತಿಯವರು ತಮ್ಮ ಪತ್ನಿಗೆ ಫ್ರೆಂಚ್ ಸಹೋದರಿಯನ್ನು ಪರಿಚಯ ಮಾಡಿಕೋ ಎಂದು ಹೇಳುವುದು ಅವರಲ್ಲಿರುವ ಸ್ನೇಹಗುಣಕ್ಕೆ ಸಾಕ್ಷಿಯಾಗಿದೆ. ಕನ್ನಡಿಗರು ಕನ್ನಡಿಗರನ್ನು, ಕನ್ನಡ ಸಾಹಿತಿಗಳನ್ನು ಗೌರವಿಸುವ, ಪ್ರೀತಿಸುವ ರೀತಿಯನ್ನು ಮಾಸ್ತಿಯವರಿಂದ ಕಲಿಯಬೇಕು ಎಂಬ ಅ.ನ.ಕೃರವರ ಮಾತಿನಲ್ಲಿ ತಮ್ಮ ಎರಡು ಅನುಭವಗಳ ಹಿನ್ನಲೆಯಲ್ಲಿ ಮಾಸ್ತಿಯವರ ವ್ಯಕ್ತಿತ್ವವನ್ನು ಚಿತ್ರಿಸುತ್ತಾರೆ.

ಅಣ್ಣನಾಗಿ ಅ.ನ.ಕೃರವರು ಮಾಸ್ತಿಯವರನ್ನು ಗುರುತಿಸಿದರೆ ನಿರಂಜನರವರು ಮಾಸ್ತಿಯವರನ್ನು ಹಿರಿಯಣ್ಣನ್ನಾಗಿ ನೋಡುತ್ತಾರೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಾರ್ಗ ಪ್ರವರ್ತಕರಾಗಿ ಸಣ್ಣಕಥಾ ಲೋಕದಲ್ಲಿ ಹೊಸ ಮಾರ್ಗವನ್ನು ಹುಟ್ಟು ಹಾಕಿದವರು. ೧೯೧೦ರಲ್ಲಿ ಬರೆದ 'ರಂಗಪ್ಪನ ಮದುವೆ'ಯಿಂದ ಹಿಡಿದು ವಿಚಾರದ ಕೃತಿಯ ತನಕ ಅವರು ಹಿಡಿದ ಮಾರ್ಗ ಪಂಪನ ಹಾಗೇ ಬಂದು ಮಾರ್ಗವಾಗಿದೆ. ಅವರ ಎರಡು ಕಾದಂಬರಿಗಳು 'ಚೆನ್ನ ಬಸಪ್ಪ ನಾಯಕ', 'ಚಿಕ್ಕವೀರ ರಾಜೇಂದ್ರ', 'ಇಂದಿರೆಯೋ ಅಲ್ಲವೊ', 'ಮೊಸರಿನ ಮಂಗಮ್ಮ', 'ಹೇಮಕೂಟದಿಂದ', 'ವೆಂಕಟ ಸ್ವಾಮಿಯ ಪ್ರಣಯ', 'ಸುಬ್ಬಣ್ಣ' ಕತೆ ಕಾದಂಬರಿಗಳಲ್ಲಿ ಬದುಕಿನ ಸುಖ, ದುಃಖಗಳು ಮಾನವೀಯತೆ, ಅನುಕಂಪ ಮೊದಲಾದವು ಅವರ ಸಾಹಿತ್ಯದ ಮೌಲ್ಯಗಳಾಗಿವೆ. ಅವರ ಯಶೋಧರಾ, ತಿರುಪಾಣಿ, ಕಾಕನ ಕೋಟೆ ಮೊದಲಾದ ನಾಟಕಗಳನ್ನು ಹೆಸರಿಸುತ್ತಾರೆ. ಕನ್ನಡ ನಾಡನ್ನು ಕಟ್ಟುವ ಕನ್ನಡ ಜನಪದವನ್ನು ಒಟ್ಟಾಗಿ ಬೆಸೆಯಬೇಕೆಂಬಲ್ಲಿ ಸಾಹಿತ್ಯ ಪರಿಷತನ್ನು ಬಲಪಡಿಸುವ ನೆಲೆಯಲ್ಲಿ ಅವರ ಹೋರಾಟವನ್ನು ಪ್ರಸ್ತಾಪಿಸುತ್ತಾರೆ. ಸಾಹಿತ್ಯವಲ್ಲದೆ ಸಾಹಿತ್ಯವಲ್ಲದ ಅವರ ಎರಡು ಚಟುವಟಿಕೆಗಳನ್ನು ನಿರಂಜನರು ತಿಳಿಸುತ್ತಾರೆ. ಮೊದಲನೆಯದು ನಿತ್ಯ ಬದುಕಿನಲ್ಲಿ ಮಾತೃಭಾಷೆಗೆ ಇರಬೇಕಾದ ಪ್ರಾಶಸ್ತ್ಯ ಮತ್ತೊಂದು ರಾಷ್ಟ್ರ ನಿರ್ಮಾಣದಲ್ಲಿ ಪ್ರತಿಯೊಬ್ಬ ಪ್ರಜೆಯ

ಪಾತ್ರ ಹಾಗೂ ಆಡಳಿತ ಕನ್ನಡವಾಗಬೇಕು. ಹರಿದು ಹಂಚಿ ಹೋಗಿದ್ದ ಕನ್ನಡ ನಾಡು ಒಂದಾಗ ಬೇಕೆಂದು, ಶಿಕ್ಷಣ ಮಾತೃಭಾಷೆಯಲ್ಲಿ ದೊರೆಯಬೇಕೆಂಬ ದೃಷ್ಟಿ ಇವೆಲ್ಲವುಗಳ ವಿಚಾರವಾಗಿ ಹಿರಿಯಣ್ಣನಾಗಿ ಮಾಸ್ತಿಯವರನ್ನು ನಿರಂಜನರು ವಿಶ್ಲೇಷಿಸುತ್ತಾರೆ. 'ಸಾಧನಾ' ಎಂಬ ಪತ್ರ ಸಂಕಲನ ಕೃತಿಯಲ್ಲಿ ಆರವತ್ತು ವರ್ಷ ದಾಟಿದಾಗ ಮಾಸ್ತಿಯವರಿಗೆ ಸಾಹಿತ್ಯ ಪರಿಷತ್ತಿನಲ್ಲಿ ಸನ್ಮಾನಿಸುವುದು, ಸರಕಾರಿ ಕೆಲಸದಿಂದ ನಿವೃತ್ತಿಯಾದ ನಂತರ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡರು. ಹಿಂದಿ ಭಾಷೆಯ ಹೇರಿಕೆಯ ವಿರುದ್ಧವಾದ ಹೋರಾಟದ ಧ್ವನಿ ಅವರದ್ದಾಗಿತ್ತು ಎಂಬುದನ್ನು ತಿಳಿಸುತ್ತಾರೆ.

ಮಂಜೇಶ್ವರ ಗೋವಿಂದ ಪೈಗಳವರ ಬಗ್ಗೆ ಸಂಶೋಧನಾ ಕಾರ್ಯದಲ್ಲಿ ತೊಡಗಿಕೊಂಡವರು. ಕನ್ನಡ ಸಾಹಿತಿಗಳಲ್ಲಿ ಕಾಗದ ಬರೆದ ಕೂಡಲೇ ಉತ್ತರವನ್ನು ನೀಡುವ ಡಿ.ವಿ.ಜಿ. ಯನ್ನು ಬಿಟ್ಟರೆ ಗೋವಿಂದ ಪೈಗಳು ಒಬ್ಬರಾಗಿದ್ದಾರೆ. ಪತ್ರಗಳಲ್ಲಿಯೂ ಕೂಡ ಅನೇಕ ವಿಚಾರಗಳನ್ನು ವಿನಿಮಯ ಮಾಡುತ್ತಿದ್ದರು. ಉತ್ತಮ ಸಂಬಂಧವನ್ನು ಸಾಹಿತಿಗಳೊಂದಿಗೆ ಬೆಳೆಸಿಕೊಳ್ಳುವಲ್ಲಿ ಪ್ರಮುಖರಾದವರೆಂದು ಅ.ನ.ಕೃ ನೋಡುತ್ತಾರೆ. 'ನಂದಾದೀಪ' ಕವಿತೆಗಳನ್ನು ಅನಕೃ ಸಂಪಾದಕರಾಗಿದ್ದು 'ಕಥಾಂಜಲಿ' ಪತ್ರಿಕೆಗೆ ಕಳುಹಿಸಿ ಕೊಟ್ಟಂಗಿನಿಂದ ಅ.ನ.ಕೃ ಮತ್ತು ಗೋವಿಂದ ಪೈಗಳ ನಡುವೆ ಸ್ನೇಹ ಮೂಡಿತ್ತು. ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿಕೊಳ್ಳದ ಅವರ ಧೋರಣೆಗಳಿಗೆ ಅ.ನ.ಕೃರವರು ದೇಶ ಸ್ವತಂತ್ರವಾಯಿತಲ್ಲ ಇನ್ನಾದರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಬಹುದಲ್ಲ ಎಂಬುದಕ್ಕೆ ಗೋವಿಂದ ಪೈಗಳು ದೇಶ ಸ್ವತಂತ್ರವಾಯಿತೇ? ಎಂದು ಮರುಪ್ರಶ್ನಿಸುತ್ತಾರೆ. ಆ ಮೂಲಕ ಸ್ವತಂತ್ರವೆಂಬುದು ಬ್ರಿಟಿಷರಿಂದ ದೊರಕಿರಬಹುದು, ಸಾಮಾಜಿಕ ಸಮಸ್ಯೆಗಳಿಂದ ಬಿಡುಗಡೆ ಯಾವಾಗ ಎಂಬ ಧೋರಣೆಯನ್ನು ತಿಳಿಸುತ್ತದೆ. ಮದ್ರಾಸ್ ಸರಕಾರ 'ರಾಷ್ಟ್ರಕವಿ' ಪ್ರಶಸ್ತಿ ನೀಡಿದ ವಿಚಾರದೊಂದಿಗೆ ಧರ್ಮಸ್ಥಳ ಶ್ರೀ ಮಂಜಯ್ಯ ಹೆಗ್ಗಡೆಯವರು ಅವರನ್ನು ಸನ್ಮಾನಿಸಿದ್ದು, ಅ.ನ.ಕೃರವರು ಗೋವಿಂದ ಪೈಗಳ ಜೊತೆಗಿನ ಒಡನಾಟದ ಅನುಭವದೊಂದಿಗೆ ಅವರ ವ್ಯಕ್ತಿತ್ವ ಚಿತ್ರಣವನ್ನು ನೀಡುತ್ತಾರೆ.

ನಿರಂಜನರು ಅಂಕಣಕೃತಿಯ 'ನಂದಾದೀಪ' ಎಂಬ ಲೇಖನದಲ್ಲಿ ಮಂಜೇಶ್ವರ ಗೋವಿಂದ ಪೈಗಳು ಕನ್ನಡಕ್ಕೆ ತಮ್ಮದೇಯಾದ ಅನನ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಅವರನ್ನು ಅವರ ಕಾವ್ಯಗಳನ್ನು ಸ್ಮಾರಕ ಮಂದಿರ ರೂಪಿಸಲು ಅವರ ಕುಟುಂಬದವರು ಸರಕಾರಕ್ಕೆ ಹಸ್ತಾಂತರಿಸಿದ್ದಾರೆ. ಆ ನಿಟ್ಟಿನಲ್ಲಿ 'ಕಾವ್ಯವಿಧ್ರಾಮ' ನಿರ್ಮಾಣಕ್ಕೆ ಮೈಸೂರು ಸರಕಾರ ಮುಂದಾಗಬೇಕು. ಜೊತೆಗೆ ಸಂಶೋಧನಾ ಕೇಂದ್ರದ ಅಧಿಕಾರಿಗಳನ್ನು ನೇಮಕ ಮಾಡಿ ಅವರ ಕಾವ್ಯ ಕೃತಿಗಳನ್ನು ಸಾಮಾನ್ಯರಿಗೆ ತಿಳಿಯುವಂತಾಗಬೇಕು ಎಂದು ೧೯೬೨ರಲ್ಲಿ ಬರೆದ ಲೇಖನದಲ್ಲಿ ಚರ್ಚಿಸುತ್ತಾರೆ. 'ನಂದಾದೀಪ' ಎಂಬುದು ಅವರ ಕವನ ಸಂಕಲನದ ಹೆಸರು ಕೂಡ ಆಗಿದೆ. ೨೦೧೬ರಲ್ಲಿ 'ಗಿಳಿವಿಂಡು' ಎಂಬ ಯೋಜನೆಯ ಮೂಲಕ ಕರ್ನಾಟಕ ಮತ್ತು ಕೇರಳ ಎರಡು ಸರಕಾರಗಳು ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರ ನಾಯಕತ್ವದಲ್ಲಿ ಸ್ಮಾರಕಗೊಳಿಸಿರುವುದನ್ನು ಇಲ್ಲಿ ನೆನೆಯಬಹುದು. ಒಬ್ಬ ಕನ್ನಡ ಕವಿಯ, ಸಂಶೋಧಕರಾದ, ಅವರ ಖ್ಯಾತ ಕೃತಿ ಹುಟ್ಟೂರುಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ಸ್ಮಾರಕ ನಿರ್ಮಾಣ ಮಾಡಲು ೫೦ ವರ್ಷ ಬೇಕಾಯಿತು. ಇದನ್ನು ಗಮನಿಸಿದಾಗ ಕನ್ನಡಿಗರಿಗೆ ಮತ್ತು ಕನ್ನಡಕ್ಕಾಗಿ ಸಾಹಿತ್ಯ ಸೇವೆ ಮಾಡಿದ ಕವಿಗಳನ್ನು ಗುರುತಿಸದ ಮನಃಸ್ಥಿತಿಯನ್ನು ತಿಳಿಸುತ್ತಾರೆ. ರಾಷ್ಟ್ರಕವಿ ಗೋವಿಂದ ಪೈಗಳ 'ಗೋಲ್ಗಾಥ'ದ ಕಾವ್ಯವನ್ನು ಇಂಗ್ಲೀಷಿಗೆ ಭಾಷಾಂತರಿಸಿದ ಸಂದರ್ಭದಲ್ಲಿ ದಾಮೋದರ ಬಾಳಿಗರು ಮಾಡಿರುವುದು ಉತ್ತಮ ಕೆಲಸವಾಗಿದೆ. ಕ್ರಿಸ್ತನ ಮರಣವನ್ನು

ಕುರಿತು 'ಗೋಲ್ಗಾಥ'. ಬೌದ್ಧಧರ್ಮದ ಸ್ತುತಿ 'ವೈಶಾಖಿ', ಜೈನ ಧರ್ಮದ 'ಗೊಮ್ಮಟ' ಇವು ಮೂರನ್ನು ಬರೆದವರು ಗೋವಿಂದ ಪೈಗಳಾಗಿದ್ದಾರೆ. ಈ ಕೃತಿಗಳು ಕೂಡ ಬೇರೆ ಬೇರೆ ಭಾಷೆಗಳಿಗೆ ಭಾಷಾಂತರಗೊಳ್ಳಲಿ ಎಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ.

ವಿಜಾಪುರಕ್ಕೆ ಹೋದವರು ಗೋಳಗುಮ್ಮಟ, ಅಸಾರ್‌ಮಹಲ್, ಮೊದಲಾದ ಐತಿಹಾಸಿಕ ಸ್ಥಳಗಳನ್ನು ನೋಡಿ ಬರುವುದು ಸರ್ವೆಸಾಮಾನ್ಯವಾದುದು ಆದರೆ ಪ್ರವಾಸಿಗರು ಮರೆಯದೆ ನೋಡಬೇಕಾದ ಇನ್ನೊಬ್ಬರು ಎಂದರೆ ಫ.ಗು. ಹಳ್ಳಕಟ್ಟಿಯವರು ಎಂದು ಹಳ್ಳಕಟ್ಟಿಯವರ ವ್ಯಕ್ತಿತ್ವಕ್ಕೆ ವಿಜಯಪುರ ಅಂಟಿಕೊಂಡಿರುವುದನ್ನು ಅ.ನ.ಕೃರವರು ತಿಳಿಸುತ್ತಾರೆ. ವಚನ ಸಾಹಿತ್ಯ ಸೇವೆಯನ್ನು ೧೯೨೬ರಿಂದ ಆರಂಭಿಸಿದ ಇವರು ಬಸವೇಶ್ವರ ವಚನಗಳನ್ನು, ಅಲ್ಲಮಪ್ರಭು, ಸಿದ್ಧರಾಮ, ಚೆನ್ನ ಬಸವಣ್ಣ, ಅಕ್ಕ ಮಹಾದೇವಿ ಮೊದಲಾದ ನೂರಾರು ಶಿವಶರಣರ ವಚನಗಳನ್ನು ಸಂಪಾದಿಸಿ ಸಂಗ್ರಹಿಸಿ ನೀಡಿದವರು. ಅವರು ಪ್ರಕಟಿಸಿದ 'ಶೂನ್ಯ ಸಂಪಾದನೆ', 'ವಚನ ಶಾಸ್ತ್ರಸಾರ' ಎಂಬ ವಿಮರ್ಶ ಗ್ರಂಥಗಳು, ವಚನ ಸಾಹಿತ್ಯವನ್ನು ಅಭ್ಯಯಿಸಲು ಆಕರ ಗ್ರಂಥಗಳಾಗಿವೆ. ವಚನ ಸಾಹಿತ್ಯದ ಪುನರುದ್ಧಾರ ಕಾರ್ಯವನ್ನು ಮಾಡಿದವರು ಹಳಕಟ್ಟಿಯವರು. ಪ್ರಾಚೀನ ಹಸ್ತಪ್ರತಿಗಳನ್ನು ಜನ ಸಾಮಾನ್ಯರು ಮನೆಯಲ್ಲಿಟ್ಟು ಪೂಜೆ ಮಾಡುತ್ತಾರೆ. ನಂಬಿಕೆ, ಧರ್ಮಶ್ರದ್ಧೆಯ ಹೆಸರಿನಿಂದ ಈ ಜನ ಜ್ಞಾನ ಪ್ರಚಾರಕ್ಕೆ ಅಡ್ಡಿಯನ್ನುಂಟು ಮಾಡುತ್ತಾರೆ. ಈ ರೀತಿಯ ಜನರ ಧೋರಣೆಗಳೇ ನಮ್ಮ ಅನೇಕ ಉತ್ಕೃಷ್ಟ ಪ್ರಾಚೀನ ಕೃತಿಗಳು ನಾಶಗೊಳಲು ಕಾರಣವಾಯಿತ್ತೆಂಬುದು ಹಳಕಟ್ಟಿಯವರ ದೃಷ್ಟಿಕೋನ. ಶಿಕ್ಷಣ, ಸಾಹಿತ್ಯ ಮತ್ತು ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದವರಾಗಿ ಅ.ನ.ಕೃ ವಿಶ್ಲೇಷಿಸುತ್ತಾರೆ.

ನಿರಂಜನರವರು ಫ.ಗು.ಹಳಕಟ್ಟಿಯವರಿಗೆ ಸಂಬಂಧಿಸಿದಂತೆ ತಮ್ಮ ಅಂಕಣ ಕೃತಿಯಲ್ಲಿ ಗೋಳಗುಮ್ಮಟ ಎಂಬ ಲೇಖನದಲ್ಲಿ ೧೮೮೦ ಜುಲೈ ೨ ರಂದು ಧಾರವಾಡದಲ್ಲಿ ಜನಿಸಿದ ಇವರು ಬೆಳಗಾವಿಯಲ್ಲಿ ವಕೀಲರಾಗಿ ದುಡಿದು ಮುಂದೆ ತಮ್ಮ ಕಾರ್ಯ ಕ್ಷೇತ್ರವನ್ನು ಕನ್ನಡದ ವಚನ ಸಾಹಿತ್ಯ ಸಂಪಾದನೆಗಾಗಿ ಹಲವು ದಶಕಗಳ ಕಾಲ ದುಡಿದಿದ್ದಾರೆ. ಸಾಮಾಜಿಕ ಸಾಧನೆಗಾಗಿ 'ರಾವ್ ಬಹದ್ದೂರ್', ಮತ್ತು 'ವಚನ ಪಿತಾಮಹ' ಎಂಬ ಬಿರುದು ಪಡೆದವರು ಮನೆಗಳಲ್ಲಿ, ಮಠಗಳಲ್ಲಿ ಜನರ ಆಡುಮಾತಿನಲ್ಲಿ ತಾಳೆಗರಿಯಲ್ಲಿ ಲಭ್ಯವಾಗಿದ್ದ ಅಸಂಖ್ಯಾತ ವಚನಗಳನ್ನು ಪರಿಶೀಲಿಸಿ ಪ್ರಕಟಿಸಿದರು. ಇದರ ವೆಚ್ಚಕ್ಕಾಗಿ ಯಾವುದೇ ಕೇಂದ್ರ, ರಾಜ್ಯ, ಸಂಸ್ಥೆಗಳ, ವಿಶ್ವವಿದ್ಯಾಲಯಗಳ ಗ್ರಾಂಟ್‌ಗಳನ್ನು ಅವರು ಪಡೆಯದೇ 'ಶಿವಾನುಭವ' ಎಂಬ ತ್ರೈಮಾಸಿಕ ಪತ್ರಿಕೆ, 'ನವಕರ್ನಾಟಕ' ಎಂಬ ವಾರ ಪತ್ರಿಕೆಗಳ ಮೂಲಕ ವಚನ ಸಾಹಿತ್ಯವನ್ನು ಜನತೆಯ ಮನೆಬಾಗಿಲಿಗೆ ತಲುಪಿಸಿದ ಕೀರ್ತಿ ಇವರದ್ದಾಗಿದೆ. ಪುಸ್ತಕಗಳ ಪ್ರಕಟಣೆಗಾಗಿ ಪ್ರತ್ಯೇಕವಾದ ಗ್ರಂಥಮಾಲೆಯೊಂದನ್ನು ಮಾಡಿದರು. ಬಳ್ಳಾರಿಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದವರು, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸದಾ ಕಾಲ ಉಲ್ಲೇಖಿಸಲ್ಪಡುವವರೆಂದು. ಕನ್ನಡ ಸಾಹಿತ್ಯವನ್ನು ಅಭ್ಯಾಸ ಮಾಡುವವರಿಗೆ ಅವರು ಸದಾಕಾಲ ಸ್ಫೂರ್ತಿಯನ್ನು ನೀಡುವ ಬದುಕು ಅವರದಾಗಿತ್ತು ಎಂದು ಅವರ ವ್ಯಕ್ತಿತ್ವವನ್ನು ಸಾಹಿತಿಕವಾಗಿ ನೀಡಿದ ಕೊಡುಗೆಗಳನ್ನು ವಿಶ್ಲೇಷಿಸುತ್ತಾರೆ.

ದ.ರಾ.ಬೇಂದ್ರೆಯವರ ವ್ಯಕ್ತಿತ್ವಕ್ಕೆ ಸಂಬಂಧಿಸಿದಂತೆ ಅ.ನ.ಕೃರವರು ಅವರನ್ನು 'ಮಾಸ್ತರು' ಬೇಂದ್ರೆಯಾಗಿ ಗುರುತಿಸುತ್ತಾರೆ. ಮೈಸೂರು ಕರ್ನಾಟಕದಲ್ಲಿ ಬಿ.ಎಂ.ಶ್ರೀ ಮಾಡಿದ ಕೆಲಸವನ್ನು ಉತ್ತರ

ಕರ್ನಾಟಕದಲ್ಲಿ ಬೇಂದ್ರೆ ಮಾಡಿದವರು, 'ಗರಿ', 'ಉಯ್ಯಾಲೆ' ಮೊದಲಾದ ಪದ್ಯಗಳ ಜೊತೆಗೆ ಗದ್ಯ ಸಾಹಿತ್ಯಕ್ಕೂ ಸಂಬಂಧಿಸಿದ್ದಂತೆ ನಾಟಕ, ಕತೆ, ಪ್ರಬಂಧ, ವಿಮರ್ಶೆಗಳನ್ನು ಬರೆದಿದ್ದಾರೆ. ಕಾವ್ಯದಲ್ಲಿ ಬೇಂದ್ರೆಯವರು ಸಿದ್ಧ ಹಸ್ತವಾಗಿತ್ತು. ಕಾವ್ಯವನ್ನು ಅಳೆಯುವುದು ಮನಸ್ಸೆ ಹೊರತು ಛಂದಸ್ಸಲ್ಲ ಎಂದು ಜನಪದ ಧಾಟಿಯಲ್ಲಿ ಕಾವ್ಯವನ್ನು ಬರೆದರು. 'ತುತ್ತಿನಚೀಲ' ಕವಿತೆಗಳ ಮೂಲಕ ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಿದರು. ಕೊನೆಗೆ ಆಧ್ಯಾತ್ಮ ಕಡೆ ಸಾಗಿ ಭಿನ್ನ ಹಾದಿ ಹಿಡಿದರು. ಜಾತೀಯತೆ ಎಂಬುದು ಸಾಹಿತ್ಯಕ್ಕೂ ಕೂಡ ಅಂಟಿಕೊಂಡಿದ್ದು ಬೇಂದ್ರೆ ಮತ್ತು ಕುವೆಂಪುರವರ ಶಿಷ್ಯರು ಅವರನ್ನು ಭಿನ್ನಭಿನ್ನವಾಗಿ, ಶ್ರೇಷ್ಠವಾಗಿ ನೋಡಿದ್ದು ಸರಿಯಲ್ಲವೆಂದು ಈ ರೀತಿಯ ದೃಷ್ಟಿ ಬೆಳೆಯಬಾರದೆಂದು ಅ.ನ.ಕೃ ಕವಿಯ ವ್ಯಕ್ತಿತ್ವದೊಂದಿಗೆ ಆತನನ್ನು ಪ್ರದೇಶದ ಜಾತಿಯ ಹಿನ್ನಲೆಯಲ್ಲಿ ವಿಂಗಡಿಸುವ ಪ್ರಯತ್ನವನ್ನು ಖಂಡಿಸುತ್ತಾರೆ.

ನಿರಂಜನರು 'ಸಾಧನಾ' ಎಂಬ ಪತ್ರ ಸಂಕಲನದಲ್ಲಿ 'ಬೇಂದ್ರೆಯವರ ಹೊಸ ಪಾತ್ರ' ಎಂಬಲ್ಲಿ ಅವರ 'ತುತ್ತಿನಚೀಲ' 'ಭೃಂಗದ ಬೆನ್ನೇರಿ' ಮೊದಲಾದ ಕವಿತೆಗಳು ಜನಪದ ದಾಟಿಯಲ್ಲಿದ್ದು ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಇತ್ತು. ರಾಷ್ಟ್ರೀಯ ಚಳುವಳಿಯು ಕೆಲವೊಮ್ಮೆ ವಿಫಲವಾದಂತೆ ಸಾಹಿತ್ಯ ಚಳುವಳಿಯ ಕೂಡ ಅಲ್ಲಲ್ಲಿ ವಿಫಲವಾಯಿತು. ಹಾಗೆಯೇ ಜನತಾಮುಖಿಯಾದ ಬೇಂದ್ರೆಯವರು ಅರವಿಂದ ದರ್ಶನ ಪಡೆದು ಆ ವಾದವನ್ನು ಸಾಹಿತ್ಯದಲ್ಲಿ ಪ್ರತಿಪಾದಿಸಲು ಹೋಗಿ ಜನತೆಯಿಂದ ವಿಮುಖರಾದರು. ಬೇಂದ್ರೆಯವರ ಕಾವ್ಯದ ಧೋರಣೆಯು ಭಿನ್ನ ಹಾದಿ ತುಳಿದ ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ. ಅ.ನ.ಕೃ ಮತ್ತು ನಿರಂಜನರು ದ.ರಾ.ಬೇಂದ್ರೆಯವರ ಸಾಹಿತ್ಯದ ವಿಚಾರಗಳ ಹಿನ್ನಲೆಯಲ್ಲಿ ಅವರ ವ್ಯಕ್ತಿತ್ವವನ್ನು ವಿಶ್ಲೇಷಿಸುತ್ತಾರೆ.

ಅ.ನ.ಕೃರವರು ಕುವೆಂಪುರವರ ವ್ಯಕ್ತಿತ್ವ ಮತ್ತು ಕೃತಿಗೆ ಸಂಬಂಧಿಸಿದಂತೆ ಪ್ರಕೃತಿಯ ಮಡಿಲಲ್ಲಿ ಹುಟ್ಟಿ ಬೆಳೆದವರಾಗಿದ್ದರು ಆ ಪ್ರಕೃತಿಗೆ ಬೆರಗಾಗಲಿಲ್ಲ ಮತ್ತು ಅದನ್ನು ತಾತ್ಸಾರದಿಂದಲೂ ನೋಡಲಿಲ್ಲ. ಅವರ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಕೃತಿ ಮತ್ತು ಮೈಸೂರಿನ ರಾಮಕೃಷ್ಣ ಆಶ್ರಮದ ಪರಿಸರವು ಪ್ರಭಾವಿಸಿದೆ. ಮುಂದೆ ಬಿ.ಎಂ.ಶ್ರೀಯವರಂತಹ ಗುರುಗಳು ದೊರಕಿ ಕನ್ನಡ ಸಾಹಿತ್ಯಕ್ಕೆ ಹೊಸ ವಸಂತಕಾಲವೇ ಆರಂಭವಾಯಿತು. ಕೊಳಲು ಕವನಸಂಕಲನದಿಂದ ರಮ್ಯತೆಯನ್ನು ನೀಡಿ ಅದರೊಂದಿಗೆ ಪಾಂಚಜನ್ಯವನ್ನು ಸಾಹಿತ್ಯದಲ್ಲಿ ಮೊಳಗಿಸಿದವರಾಗಿದ್ದಾರೆ. ಕಾವ್ಯದಲ್ಲಿ ಅವರು ಸಾಧಿಸಿದ ಸಾಧನೆ ನಾಟಕದಲ್ಲಿ ಕ್ಲಿಷ್ಟವಾಗುತ್ತದೆ. ಅವರು ಹುಟ್ಟಿ ಬೆಳೆದ ಮಲೆನಾಡಿನ ಸಾರ್ಥಕತೆ ಅವರ ಕಾದಂಬರಿಗಳಲ್ಲಿ ಮೂಡಿದೆ. ಶೂದ್ರಕನ ಮೇಲೆ ಚಿಕ್ಕನಾಟಕ ಬರೆದಾಗ ಸಾಹಿತ್ಯದಲ್ಲಿನ ಕೋಮುವಾರು ವ್ಯಾಧಿಗೆ ತುತ್ತಾದವರು. ಕುವೆಂಪು ಬ್ರಾಹ್ಮಣರ ವಿರೋಧಿಯೆಂದು ಚರ್ಚೆ ನಡೆಯಿತು. ಆದರೂ ಅವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಸಾಹಿತ್ಯ ಕೃಷಿ ಮಾಡಿದವರಾಗಿದ್ದಾರೆ. ಕುವೆಂಪುರವರು ಸಭೆ ಸಮಾರಂಭಗಳಿಂದ ದೂರವಿದ್ದವರು. ಅವರು ವ್ಯಕ್ತಿಜೀವಿ, ಸಂಘ ಜೀವಿಯಾಗಿರಲಿಲ್ಲ. ಅವರ ವ್ಯಾಸಂಗದ ಕೋಣೆಯೇ ಅವರಿಗೆ ವಿಶ್ವವಾಗಿತ್ತು. ಜಗತ್ತಿನ ದಾರ್ಶನಿಕರು, ಮಹಾಕವಿಗಳು ಅವರ ಗೆಳೆಯರು, ಅವರ ಗೆಳೆಯರ ಬಳಗ ಬಹಳ ಚಿಕ್ಕದಾಗಿತ್ತು. ತಾನಾಗಿಯೇ ಅವರು ಯಾರೊಂದಿಗೂ ಪರಿಚಯ ಸ್ನೇಹ ಬೆಳೆಸುವ ವ್ಯಕ್ತಿತ್ವ ಅವರಾದಗಿರಲಿಲ್ಲ. ಕವಿ ಕುವೆಂಪುರವರನ್ನು ಸಾಹಿತ್ಯದ ಮೂಲಕ ಲಕ್ಷಾಂತರ ಜನರು ಕಂಡಿದ್ದಾರೆ ಆದರೆ ವ್ಯಕ್ತಿಯಾಗಿ ಪುಟ್ಟಪ್ಪನವರನ್ನು ಹೆಚ್ಚು ಕಂಡಿರುವವರು ಇಲ್ಲ. ಅವರು ಮಾತುಗಾರರು ಅಲ್ಲ ಮತ್ತು ಭಾಷಣಕಾರರು ಅಲ್ಲ ಆದರೆ ಅವರು ಮಾಡಿದ ಭಾಷಣಗಳಲ್ಲಿ ಬರೆದು ಓದಿದ ಪ್ರಬಂಧಗಳೇ ಆಗಿವೆ. ಆ

ಓದುಗಾರಿಕೆಯಲ್ಲಿ, ಕೇಳುಗರಿಗೆ ಬೇಸರ ಆಗದಂತೆ ಅವರು ಮನಸ್ಸನ್ನು ಸೆರೆ ಹಿಡಿಯುವ ಕಲೆ ಪುಟ್ಟಪ್ಪನವರಿಗೆ ಲಭಿಸಿದೆ ಎಂದು ಇಡೀ ಕುವೆಂಪುರವರ ವ್ಯಕ್ತಿತ್ವವನ್ನು ಅವರ ಬರವಣಿಗೆಯ ಶೈಲಿಯನ್ನು ವಿಶ್ಲೇಷಿಸುತ್ತಾರೆ.

ನಿರಂಜನರು ಕುವೆಂಪುರವರ ವಿಚಾರಕ್ಕೆ ಸಂಬಂಧಪಟ್ಟಂತೆ ಮಾತೃಭಾಷೆಯ ಮೂಲಕ ಶಿಕ್ಷಣ ನೀಡುವುದು, ಆಡಳಿತ ಭಾಷೆಯಾಗಿ ಶಿಕ್ಷಣವಿರಬೇಕು ಎಂಬ ಅವರ ದೃಷ್ಟಿಕೋನವನ್ನು ತಿಳಿಸುತ್ತಾರೆ. 'ದಿನಚರಿಯಿಂದ' ಪತ್ರಿಕಾ ಲೇಖನಗಳ ಸಂಕಲನದಲ್ಲಿ ಸಮಾಜಕ್ಕೆ ವಿವಾಹದಿಂದ ಆಗುತ್ತಿದ್ದ ದುಂದುವೆಚ್ಚವನ್ನು ತಪ್ಪಿಸಲು ಹಾಕಿಕೊಟ್ಟ ಮೇಲ್ತಂತಿಯ ವಿವಾಹ ಪದ್ಧತಿ 'ಮಂತ್ರ-ಮಾಂಗಲ್ಯ' ಅಥವಾ ಸರಳ ವಿವಾಹವಾಗಿದೆ. ಆಡಂಬರದವಿಲ್ಲದ, ವರದಕ್ಷಿಣೆ ರಹಿತವಾದ, ಕೆಲವೇ ಬಂಧುಮಿತ್ರರ ಸಮ್ಮುಖದಲ್ಲಿ ನಡೆಯುವ ವಿವಾಹ ಮಲೆನಾಡಿನಲ್ಲಿ ಹೆಚ್ಚು ಪ್ರಚಲಿತವಾಗಿದೆ. ಅದು ಕರ್ನಾಟಕದ ಇತರ ಕಡೆಯೂ ಪ್ರಭಾವಿಸಿರುವುದು ಸಮಾಜಕ್ಕೆ ಕುವೆಂಪು ನೀಡಿದ ಪ್ರಮುಖ ಕಾಣಿಕೆಯಾಗಿದೆ. ಇದೇ ಮಾದರಿಯಲ್ಲಿ ತಮಿಳುನಾಡಿನಲ್ಲಿ ಕಳಗಂ ಮಿತ್ರರು, ಕಮ್ಯುನಿಸ್ಟರ ಪ್ರಭಾವವಿರುವ ಕೇರಳ, ಆಂಧ್ರ, ಬಂಗಾಳದಲ್ಲಿ 'ಸುಲಗ್ನ', 'ಸಾವಾಧಾನ', 'ಸುಮೂಹೂರ್ತ'ಗಳು ಜಾರಿಗೆ ತಂದು ಸರಳವಾಗಿ ವಿವಾಹ ಆಚರಿಸುವ ಪದ್ಧತಿ ಚಾಲ್ತಿಗೆ ಬರುತ್ತಿದೆ. ಇದು ಹೀಗೆ ಮುಂದುವರಿದು ಜನತೆಯೂ ದುಂದುವೆಚ್ಚಗಳ ವಿವಾಹಕ್ಕೆ ಕಡಿವಾಣ ಬೀಳಲಿ ಎಂದು 'ಮದುವೆ ಮಾಡು ನೋಡು' ಎಂಬ ಲೇಖನದಲ್ಲಿ ನಿರಂಜನರು ಚರ್ಚಿಸುತ್ತಾರೆ.

ಕನ್ನಡದಲ್ಲಿ 'ಮದುವೆ ಮಾಡಿ ನೋಡು ಮನೆ ಕಟ್ಟಿ ನೋಡು' ಎಂಬ ಗಾದೆಯೊಂದಿದೆ. ಆ ಗಾದೆಯು ಒಬ್ಬ ಮದುವೆಯನ್ನು ಮಾಡುವುದು ಅಥವಾ ಮನೆ ಕಟ್ಟುವುದು ಅಷ್ಟು ಸುಲಭವಾದ ಕಾರ್ಯವಲ್ಲ. ಆ ಕಾರ್ಯ ಮಾಡಲು ಹೋದವನು ಅನೇಕ ತೊಂದರೆ, ಸಮಸ್ಯೆಗಳನ್ನು ಎದುರಿಸ ಬೇಕಾಗುತ್ತದೆ ಎಂಬ ವಿಚಾರವನ್ನು ಅದು ತಿಳಿಸುತ್ತದೆ. ಈ ಸಮಸ್ಯೆ ತೊಂದರೆಗಳಿಂದ ಮನುಷ್ಯ ಪಾರಾಗಲು ಕುವೆಂಪುರವರು ತಂದ 'ಮಂತ್ರ ಮಾಂಗಲ್ಯ' ಅಥವಾ ಸರಳ ವಿವಾಹದ ಮೂಲಕ ಹೊಸ ಹಾದಿಯನ್ನು ಕಾಣಬಹುದೆಂಬ ಅಂಶವಿದೆ. ಅ.ನ.ಕೃ ಕುವೆಂಪುರವರ ಸಾಹಿತ್ಯಗಳಲ್ಲಿನ ವಿಚಾರಗಳನ್ನು ಅವರ ವ್ಯಕ್ತಿತ್ವವನ್ನು ತಿಳಿಸಿದರೆ, ನಿರಂಜನರು ಸಮಾಜಕ್ಕೆ ಕುವೆಂಪುರವರು ಕಾಣಿಕೆಯಾಗಿ ನೀಡಿದ, ಹೆಣ್ಣು ಮಕ್ಕಳ ಬದುಕನ್ನು ಉತ್ತಮಗೊಳಿಸಲು ಅವರಿಗೆ ವರದಕ್ಷಿಣೆ ಮೊದಲಾದ ಸಮಸ್ಯೆಗಳಿಂದ ಬಿಡುಗಡೆ ಮಾಡಿದ 'ಮಂತ್ರ ಮಾಂಗಲ್ಯ'ದ ವಿಚಾರಗಳ ಹಿನ್ನಲೆಯಲ್ಲಿ ಚರ್ಚಿಸುತ್ತಾರೆ.

ಸುಬೋಧ ರಾಮರಾಯರನ್ನು ಕುರಿತಂತೆ ಅ.ನ.ಕೃರವರು ಬೆಂಗಳೂರಿನ ಸಿಟಿ ಮಾರ್ಕೆಟ್‌ನ ಮುಂಭಾಗದಲ್ಲಿ ೧೯೨೫ರಿಂದ ಸುಬೋಧ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಅವರಿಗೆ ಅಪಾರವಾದ ಧರ್ಮಶ್ರದ್ಧೆ, ಮಾನವ ಕಲ್ಯಾಣಾಕಾಂಕ್ಷೆ ಇತ್ತು. ಅವರ ಇಡೀ ಸಾಹಿತ್ಯ ಸೇವೆ ಮತವನ್ನು ಅವಲಂಬಿಸಿ ನಡೆದಿದೆ. 'ಸುಬೋಧ ಕುಸುಮಾಂಜಲಿ' ಗ್ರಂಥಮಾಲೆಯಲ್ಲಿ ೧೪೦ ಪುಸ್ತಕವನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಬಹುಪಾಲು ಭಕ್ತಶಿರೋಮಣಿಗಳ, ಮತೋದ್ಧಾರಕರು, ಧರ್ಮೋದ್ಧಾರಕರು, ಪೌರಾಣಿಕ ಮಹಾಪುರುಷರ ಪುಸ್ತಕಗಳು ಆಗಿವೆ. ೧೯೨೭ರಲ್ಲಿ 'ಹರಿದಾಸ ಕೀರ್ತನ ತರಂಗಿಣಿ' ಎಂಬ ಹೆಸರಿನಲ್ಲಿ ದಾಸಸಾಹಿತ್ಯವನ್ನು ಪ್ರಕಟಿಸಿದರು. ಪುರಂದರದಾಸರು, ಕನಕದಾಸರು, ಜಗನ್ನಾಥದಾಸರು, ವಿಜಯದಾಸರು ವಾದಿರಾಜರು, ವ್ಯಾಸರಾಯರು, ಗೋಪಾಲದಾಸ, ಮೋಹನ್‌ದಾಸ್ ಮೊದಲಾದ ದಾಸ ಸಾಹಿತ್ಯದ ಹಾಡುಗಬ್ಬಗಳನ್ನು ಮತ್ತು ಕೀರ್ತನೆಗಳನ್ನು ಪ್ರಕಟಿಸಿದರು. ಮೂವತ್ತೈದು ವರ್ಷಗಳ

ಕಾಲ ಸುಧೀರ್ಘ ಕನ್ನಡ ಸೇವೆಯನ್ನು ಮಾಡಿದವರು. ಅವರು ಯಾವುದೇ ಮಹಾಕಾವ್ಯವನ್ನು ಬರೆಯದೇ ಹೋದರು ಉತ್ತಮ ಗ್ರಂಥಗಳನ್ನು ರಚಿಸದೇ ಹೋದರು ಅರಿಯದವರ ಮನಸ್ಸಿನಲ್ಲಿ ಅರಿವು ಮೂಡಿಸುವ ಕೆಲಸವನ್ನು ಮಾಡಿದ್ದಾರೆ. ಸುಬೋಧ ರಾಮರಾಯರ ವ್ಯಕ್ತಿತ್ವ, ಕನ್ನಡ ಸಾಹಿತ್ಯ ಪುಸ್ತಕಗಳ ಪ್ರಕಟಣೆಯ ಮೂಲಕ ಅವರು ಮಾಡಿದ ಕಾರ್ಯಗಳನ್ನು ತಿಳಿಸುತ್ತಾರೆ.

ನಿರಂಜನರು 'ದಿನಚರಿಯಿಂದ' ಪತ್ರಿಕಾಲೇಖನ ಸಂಕಲನದಲ್ಲಿ ಸುಭೋದ ರಾಮರಾಯರನ್ನು ಕುರಿತಂತೆ ಸಾಹಿತ್ಯವನ್ನು ರಚಿಸುವ ಮೂಲಕ ರಾಷ್ಟ್ರ ನಿರ್ಮಾಣದ ಹಂಬಲ, ದಾಸ ಸಾಹಿತ್ಯದ ಸಂಪಾದನೆ, ಪರಿಷ್ಕರಣೆಯ ಜೊತೆಗೆ ೧೫೦ ಕೃತಿಗಳನ್ನು ೫೦ ವರ್ಷಗಳಲ್ಲಿ ಬರೆದಿದ್ದಾರೆ. ತತ್ವಜ್ಞಾನಿಗಳು, ಧೀರರ, ಧರ್ಮಗುರುಗಳ ಸಾಹಿತ್ಯವನ್ನು ಕುರಿತಂತೆ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಅವರ ಪುಸ್ತಕಗಳು ಶ್ರೀ ಸಾಮಾನ್ಯರ ಕೈಗೆ ಸಿಲುಕಿ ಹೆಸರನ್ನು ಗಳಿಸಿದರು. ಗುರುಗೋವಿಂದ ಸಿಂಗ್‌ರವರ ಬಗ್ಗೆ ಬರೆದ ಜೀವನ ಚರಿತ್ರೆಯನ್ನು ಓದಿ ಮಿಲಿಟರಿ ಅಧಿಕಾರಿ ಅವರನ್ನು ಪ್ರಶಂಸಿದ್ದು, ಮಿಲಿಟರಿ ಅತಿಥಿಯಾಗಿ ಶಿಬಿರಕ್ಕೆ ಹೋಗಿ ಗುರು ಗೋವಿಂದ ಸಿಂಗ್‌ರ ಬಗ್ಗೆ ಭಾಷಣ ಮಾಡಿದವರು. ಇವರ ದೃಷ್ಟಿಯಲ್ಲಿ ಮಹಮ್ಮದ್ ಪೈಗಂಬರ್, ಗುರುಗೋವಿಂದ್ ಸಿಂಗ್, ಯೇಸುಕ್ರಿಸ್ತ, ಬುದ್ಧ, ಮಹಾವೀರ, ಶ್ರೀಕೃಷ್ಣ ಎಲ್ಲರೂ ಅದ್ವೈತರೇ ಆಗಿದ್ದಾರೆಂದು ಭಾವಿಸುತ್ತಾರೆ. ಅವರ ವಿಚಾರಗಳಲ್ಲಿ ಸರ್ವಧರ್ಮ ಸಮನ್ವಯ ಮನಃಸ್ಥಿತಿಯ ಜೊತೆಗೆ ಅವರಿಗೆ ಆಳವಾದ ಧಾರ್ಮಿಕ ತತ್ವಜ್ಞಾನದ ಪರಿಚಯವಿತ್ತು. ಸಾಕ್ರಟೀಸ್, ನೆಪೋಲಿಯನ್ ಬೊನಾಪಾರ್ಟೆ, ಅಬ್ರಹಾಂ ಲಿಂಕನ್, ಹೈದರಾಲಿ, ಗಾಂಧೀಜಿ ಪುರಾಣಕಾಲದಿಂದ ಹಿಡಿದು ಇಂದಿನವರೆಗೂ ಮಹಾಪುರುಷರ ಜೀವನ ಚರಿತ್ರೆಗಳ ಮೂಲಕ ಜನರಿಗೆ ತಿಳುವಳಿಕೆಯನ್ನು ನೀಡಿದವರು ಎಂದು ವಿಶ್ಲೇಷಿಸುತ್ತಾರೆ.

ದೇವುಡು ನರಸಿಂಹ ಶಾಸ್ತ್ರಿಗಳ ವ್ಯಕ್ತಿತ್ವ ಮತ್ತು ಬರಹಕ್ಕೆ ಸಂಬಂಧಿಸಿದಂತೆ ಅ.ನ.ಕೃ ರವರು ಮೈಸೂರಿನಲ್ಲಿ ಹುಟ್ಟಿ ಬೆಳೆದು ಡಾ. ರಾಧಾಕೃಷ್ಣನ್ ಅವರು ಇವರ ಗುರುಗಳಾಗಿದ್ದರು. ಇವರಿಗಿದ್ದ ಸ್ವತಂತ್ರ ವಿಚಾರಧಾರೆ, ಪಾಂಡಿತ್ಯ ಕಂಡು ರಾಧಕೃಷ್ಣನ್‌ರವರೇ ಮೆಚ್ಚುಗೆ ವ್ಯಕ್ತಪಡಿಸಿದರು. ಮೈಸೂರು ಬಿಟ್ಟು ಬೆಂಗಳೂರಿಗೆ ಬಂದರು. ಪತ್ರಿಕಾವೃತ್ತಿ ಎಂಬುದು ಇವರ ಅಚ್ಚುಮೆಚ್ಚುಗಳಲ್ಲಿ ಒಂದಾಗಿತ್ತು. 'ನವಜೀವನ' ವಾರಪತ್ರಿಕೆಯ ಮೂಲಕ ಸಂಪಾದಕತ್ವವನ್ನು ವಹಿಸಿಕೊಂಡರು. ಮುಂದೆ ಸ್ವತಂತ್ರವಾದ ಮನೋವಿಶ್ಲೇಷಣಾತ್ಮಕವಾದ ಕಾದಂಬರಿಯನ್ನು ಬರೆದರು. ಕನ್ನಡ ಸಣ್ಣ ಕಥೆಗಳ ಬೆಳವಣೆಗೆಯಲ್ಲಿ ಇವರದು ಕೂಡ ಪ್ರಮುಖ ಪಾತ್ರವಿದೆ. ಮಕ್ಕಳ ಮನಸ್ಸನ್ನು ಅರಿತು ಕತೆಯನ್ನು ಬರೆಯುವುದರಲ್ಲಿ ದೇವುಡರು ಸಿದ್ಧಹಸ್ತರಾಗಿದ್ದರು. ನಾಟಕವೆಂದರೆ ಅಚ್ಚುಮೆಚ್ಚು ಆಗಿದ್ದು ಬಾಲ್ಯದಿಂದಲೂ ಅವರಿಗೆ ನಾಟಕವನ್ನು ಬರೆಯುವ, ಆಡಿಸುವ, ಆಡುವ ಹುಚ್ಚು ಇತ್ತು. ಬೆಂಗಳೂರು ಅಮೆಚೂರ್ ನಾಟಕ ಮಂಡಳಿಯವರು ಅಭಿನಯಿಸಿದ 'ನಚಿಕೇತನ' ನಾಟಕದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು. 'ಚಿರಂಜೀವಿ' ಚಲನಚಿತ್ರದಲ್ಲೂ ಕೂಡ ಪಾತ್ರ ವಹಿಸಿದ್ದಾರೆ. ಸಂಸ್ಕೃತ ಕವಿ ಕಾಳಿದಾಸನ ಮೇಲೆ ಅತಿಯಾದ ಆಸಕ್ತಿಯಿಂದ 'ಮೇಘ ಸಂದೇಶ' ದ ಮೇಲೆ ಬೃಹತ್ ಗ್ರಂಥವನ್ನು ಬರೆದಿದ್ದಾರೆ. ಅನೇಕ ಕೃತಿಗಳನ್ನು ಅನುವಾದಿಸಿದ್ದಾರೆ. 'ಮಹಾಬ್ರಾಹ್ಮಣ' ವಸಿಷ್ಠನನ್ನು ಕುರಿತು ಬೃಹತ್ ಕಾದಂಬರಿಯನ್ನು ಬರೆದರು. ಎಲ್ಲ ಧರ್ಮಗಳನ್ನು ಸಮಾನವಾಗಿ ಕಂಡವರೆಂದು ನೋಡುತ್ತಾರೆ.

ನಿರಂಜನರು ಅಂಕಣ ಕೃತಿಯಲ್ಲಿ ದೇವುಡು ನರಸಿಂಹ ಶಾಸ್ತ್ರಿಗಳ ಕೃತಿಯಾದ 'ಮಹಾಕ್ಷತ್ರಿಯ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಇವರು ಸರ್ವಪಲ್ಲಿ ರಾಧಾಕೃಷ್ಣನ್‌ರವರು ಶಿಷ್ಯರಾಗಿದ್ದರು. ದೇವುಡ ಮರಣಿಸಿದ ನಾಲ್ಕು ತಿಂಗಳ ನಂತರ ಅವರ ಕೃತಿಗೆ

ಪ್ರಶಸ್ತಿ ಲಭಿಸಿದೆ. ಮೊದಲು ಈ ಕಾದಂಬರಿಗೆ ಅವರು 'ಧರ್ಮಧ್ವಜ' ಎಂಬ ಹೆಸರಿಟ್ಟಿದ್ದರು ಎಂದು 'ಮಹಾಕ್ಷತ್ರಿಯಗೆ ನಮನ' ಎಂಬ ಲೇಖನದಲ್ಲಿ ಸಂಕ್ಷಿಪ್ತವಾಗಿ ಅವರಿಗೆ ಬಂದ ಪ್ರಶಸ್ತಿ, ಕಾದಂಬರಿಗೆ ಮೊದಲು ಇಟ್ಟ ಹೆಸರು ಇವುಗಳನ್ನು ಚರ್ಚಿಸುತ್ತಾರೆ. ಅ.ನ.ಕೃ ಸುದೀರ್ಘವಾಗಿ ಅವರ ಬರೆಯುವ ಶೈಲಿ, ವ್ಯಕ್ತಿತ್ವ, ಮೊದಲಾದವುಗಳು ಚರ್ಚಿಸಿದರೆ ನಿರಂಜನರು ಸಂಕ್ಷಿಪ್ತವಾಗಿ ದಾಖಲಿಸುತ್ತಾರೆ.

ಶಿವರಾಮ ಕಾರಂತರನ್ನು ಕುರಿತಂತೆ ಅ.ನ.ಕೃರವರು ಸಾಹಿತ್ಯವೆಂಬುದು ಕಾರಂತರ ಜೀವನ ಕ್ಷೇತ್ರದಲ್ಲಿ ಒಂದಾಗದೇ, ಅವರ ಜೀವನ ಲಹರಿಯ ಎಲ್ಲಾ ವಿಭಾಗಗಳಲ್ಲಿಯೂ ಹರಡಿಕೊಂಡಿದೆ. ಪುತ್ತೂರಿನಲ್ಲಿ 'ಬಾಲವನ' ಸ್ಥಾಪನೆಯ ಮೂಲಕ ಮಕ್ಕಳಿಗೆ ಆದರ್ಶ ಶಾಲೆಯನ್ನು ಸ್ಥಾಪಿಸಿ ಅವರ ಬದುಕನ್ನು ತಿದ್ದಬೇಕೆಂದು ಶ್ರಮಿಸಿದವರು. ಕಥೆ, ಕಾದಂಬರಿ, ನಾಟಕ, ಯಕ್ಷಗಾನ ಮೊದಲಾದವುಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. ವಿಶ್ವಸಾಹಿತ್ಯಕ್ಕೆ ಕಾರಂತರು ಕೊಟ್ಟ ಉಡುಗೊರೆಯೆಂದರೆ ಮರಳಿ ಮಣ್ಣಿಗೆ ಮತ್ತು ಚೋಮನ ದುಡಿ ಕಾದಂಬರಿಗಳಾಗಿವೆ. ನಿರ್ದೇಶಕರಾಗಿ, ಛಾಯಾಚಿತ್ರರಾಗಿ ಚಲನಚಿತ್ರವನ್ನು ಕೂಡ ತೆಗೆದರು ಆದರೆ ಅದು ಪ್ರದರ್ಶನಕ್ಕೆ ಬರಲಿಲ್ಲ. ಕಾರಂತರ ಜೀವನ ತುಂಬ ಕೌತುಕವಾದುದು ಅವರಲ್ಲಿ ಆಶಾವಾದಿತನವೆಂಬುದು ಇತ್ತು. ಬದುಕಿನಲ್ಲಿ ಗೆಲುವಿಗಿಂತ ಸೋಲನ್ನು ಹೆಚ್ಚು ಕಂಡವರು. ಪ್ರಗತಿಶೀಲತ್ವ ಎಂಬುದೇ ಅವರ ಬದುಕಿನ ರಹಸ್ಯವಾಗಿದೆ ಎಂಬುದಾಗಿ ಅವರ ವ್ಯಕ್ತಿತ್ವದ ಆಕರ್ಷಣೆಯ ಹವ್ಯಾಸಗಳು, ಪ್ರವೃತ್ತಿಗಳು ನಾನಾ ಬಗೆಯದಾಗಿತ್ತು ಎಂಬುದಾಗಿ ಸೂಚಿಸುತ್ತಾರೆ.

ನಿರಂಜನರು ತಮ್ಮ ವಿಚಾರ ಸಾಹಿತ್ಯದ ಹಲವು ಕೃತಿಗಳಲ್ಲಿ ಶಿವರಾಮಕಾರಂತರ ವ್ಯಕ್ತಿತ್ವ ಚಿತ್ರಣವನ್ನು ನೀಡುತ್ತಾರೆ. ತಮ್ಮ ಬಾಲ್ಯದಲ್ಲಿ ೮ನೇ ವಯಸ್ಸಿನಲ್ಲಿ ಪುತ್ತೂರಿನ ಬಾಲವನಕ್ಕೆ ಹೋಗಿದ್ದು, ಪುತ್ತೂರು ದಸರೆಯಲ್ಲಿ ಭಾಗವಹಿಸಿದ್ದು, ಶಿವರಾಮ ಕಾರಂತರು ಸಾಹಿತ್ಯದಲ್ಲಿ ಮತ್ತು ಬದುಕಿನಲ್ಲಿ ಒಂಟಿಯಾಗಿ ತಮ್ಮ ದಾರಿಯನ್ನು ತಾವು ಕಂಡುಕೊಂಡವರು. ಹುಚ್ಚು ಮನಸ್ಸಿನ ಹತ್ತು ಮುಖಗಳ ವ್ಯಕ್ತಿಯಾಗಿ, ಸಮಾಜ ಸುಧಾರಕರಾಗಿ, ಸ್ವಾತಂತ್ರ್ಯ ಹೋರಾಟ, ಗ್ರಾಮಗಳ ಪುನುರುತ್ಥಾನ, ಕಲೆಯಲ್ಲಿ ಹೊಸ ಪ್ರಯೋಗ, ಯಕ್ಷಗಾನಗಳಲ್ಲಿ ಆಸಕ್ತಿ ಮತ್ತು ಅಭ್ಯಾಸ, ವಿಜ್ಞಾನದ ಮನಃಸ್ಥಿತಿ ಇವೆಲ್ಲವುಗಳ ಅನುಭವದಿಂದ ವ್ಯರ್ಥವೆಂಬುದೇ ಬದುಕಿನಲ್ಲಿ ಇಲ್ಲವೆಂದು ಪರಿಭಾವಿಸಿದವರು. ಅವರ ಕತೆ, ಕಾದಂಬರಿಗಳಲ್ಲಿ ಸಮಾಜಕ್ಕೆ ಚಿಕಿತ್ಸಕ ದೃಷ್ಟಿಯಿಂದ ಕಂಡ ವಸ್ತುಗಳು ಇವೆ. ನಿರಂಜನರು ಕಾರಂತರನ್ನು ಅಲೆಮಾರಿಯಾಗಿ ನೋಡುತ್ತಾರೆ. ಕನ್ನಡ ಸಾಹಿತ್ಯದಲ್ಲಿ ಅವರನ್ನು ಮೀರಿಸುವ ಅಲೆಮಾರಿ ಇಲ್ಲವೆಂದು ಅದರ ಅನುಭವ ಫಲವೇ ಅವರ ಪ್ರವಾಸ ಸಾಹಿತ್ಯವಾಗಿದೆ. ಸ್ವಾತಂತ್ರ್ಯ ನಂತರ ಭ್ರಮ ನೀರಸಗೊಂಡ ವಿಚಾರದ ಬಗ್ಗೆ 'ಗೊಂಡಾರಣ್ಯ' ಕಾದಂಬರಿಯ ಕಥಾವಸ್ತು ಆಗಿದೆ. ರಾಜಕೀಯ ವ್ಯಕ್ತಿಯಾಗಿ ಚುನಾವಣೆಗೆ ನಿಂತು ಸೋತರು ಅದಕ್ಕೆ ಎದೆಗುಂದದೆ ಇದ್ದವರು. ಅವರ ಪ್ರಯೋಗಶೀಲತೆಯ ಗುಣ, ಪ್ರಯೋಗಶೀಲತೆಯ ಮನಃಸ್ಥಿತಿ ಮೊದಲಾದವುಗಳನ್ನು ನಿರಂಜನರು 'ನಡೆ ಚೆನ್ನ, ನುಡಿ ಚೆನ್ನ' ಕೃತಿಯ 'ಬಾಳದೇಗುಲದಲ್ಲಿ ಮಾನವನ ಅರ್ಚನೆ' ಎಂಬ ವ್ಯಕ್ತಿಚಿತ್ರಣದಲ್ಲಿ ಕಾರಂತರ ಕುರಿತಂತೆ ಚಿತ್ರಿಸುತ್ತಾರೆ.

ಅ.ನ.ಕೃರವರು ಜಿ.ಪಿ.ರಾಜರತ್ನಂರವರ ಕನ್ನಡ ಪದ್ಗೋಳ್ ಎಂಬ ಅವರ ಪದ್ಯವನ್ನು ಉದಾಹರಣೆಯಾಗಿ ನೀಡಿ ರತ್ನನ ಪದಗಳು ಎಂಬ ಹೆಸರಿನಲ್ಲಿ ಹಲವು ಭಾಷೆಯಲ್ಲಿ ಕೆಲವು ಪದ್ಯಗಳನ್ನು ಬರೆದು ಪ್ರಕಟಿಸಿದರು. ಬೇಂದ್ರೆಯವರ ಹಾಗೇ ಜನಪದ ಭಾಷೆಯನ್ನು ಬಳಸಿದವರು ರಾಜರತ್ನಂರವರು. ಶುದ್ಧ ಭಾಷೆಯಲ್ಲಿ ಹಲವು ಕವಿತೆಗಳನ್ನು ಬರೆದರು. ಅವುಗಳು 'ರತ್ನನ ಪದಗಳು'

ಮುಂದೆ ಪ್ರಸಿದ್ಧಿಯನ್ನು ಪಡೆಯಲಿಲ್ಲ. 'ಹನಿಗಳು' ಎಂಬ ಸಣ್ಣಕತೆ, 'ಗಂಡು ಕೂಡಲಿ' ಎಂಬ ಕಾಂತ್ರಿಕಾರಕ ಸರಳ ರಗಳೆಯ ನಾಟಕ ಮತ್ತು ಮಕ್ಕಳ ಸಾಹಿತ್ಯವನ್ನು ಕನ್ನಡದಲ್ಲಿ ಬೆಳೆಸಿದವರಲ್ಲಿ ಪ್ರಮುಖರು. ಚೀನಾ ದೇಶದ ಬೌದ್ಧ ಯಾಂತ್ರಿಕರನಿಂದ ಅರಂಭವಾದ ಬೌದ್ಧ ಸಾಹಿತ್ಯ ಸೇವೆಯು ಪಾಲಿ ಭಾಷೆಯನ್ನು ಕಲಿತು ಅಲ್ಲಿಂದಲೂ ಬುದ್ಧನ ವಚನಗಳನ್ನು ಸಂಗ್ರಹಿಸುತ್ತಾ ಬಂದಿದ್ದಾರೆ. ಪ್ರಾಚೀನ ಕವಿಗಳ ಬಗ್ಗೆ ಅಧ್ಯಯನ ಕೈಲಾಸಂ, ಮಾಸ್ತಿ, ಸಂಸ ಇವರುಗಳನ್ನು ಕುರಿತು ಲೇಖನಗಳನ್ನು ಬರೆದಿದ್ದಾರೆ ಎಂದು ಅವರ ಬರಹವನ್ನು ಕುರಿತಂತೆ ತಿಳಿಸುತ್ತಾರೆ.

ನಿರಂಜನರವರು 'ದಿನಚರಿಯಿಂದ' ಎಂಬ ಕೃತಿಯ 'ಮಹಾಭಿಕ್ಕು ರತ್ನ' ಎಂಬಲ್ಲಿ ಬುದ್ಧ, ಜೈನ, ಕ್ರಿಸ್ತ, ಹಳಗನ್ನಡ, ಹೊಸಗನ್ನಡ, ರತ್ನನ ಪದಗಳು, ನಾಗನ ಪದಗಳು, ಆತ್ಮವೃತ್ತಾಂತ ಯಾವುದಾದರೊಂದರಿಂದ ಅವರನ್ನು ಗುರುತಿಸಿದರೆ ಕುರುಡ ಆನೆಯನ್ನು ಗುರುತಿಸಿದ ಕತೆಯಂತೆ. ಜಿ.ಪಿ. ರಾಜರತ್ನಂರವರು ಕನ್ನಡ ಸಾಹಿತ್ಯದ ಹಲವು ವಿಚಾರಗಳಲ್ಲಿ ಪಾಂಡಿತ್ಯವನ್ನು ಪಡೆದಿರುವುದರ ಜೊತೆಗೆ ಜನತೆಗೆ ಸರಳವಾದ ಭಾಷೆ ಮುಖಾಂತರ ಸಾಹಿತ್ಯವನ್ನು ತಿಳಿಸಿಕೊಟ್ಟವರು. ಅವರನ್ನು ಒಂದೇ ಸೀಮಿತ ದೃಷ್ಟಿಯಲ್ಲಿ ನೋಡಬಾರದೆಂದು ತಿಳಿಸುತ್ತಾರೆ.

ವೀರಶೈವ ಸಾಹಿತ್ಯವನ್ನು ಕುರಿತಂತೆ ಅಧ್ಯಯನ ಮಾಡಿರುವ ಅ.ನ.ಕೃರವರು ಬಿ ಶಿವಮೂರ್ತಿ ಶಾಸ್ತ್ರಿಗಳು ಶರಣ ಸಾಹಿತ್ಯದ ಮೂಲಕ ಹೆಚ್ಚು ಪ್ರಸಿದ್ಧಿ ಪಡೆದವರು. ಇವರು ಶಾಲಾ-ಕಾಲೇಜು ಸೇರಿ ವಿದ್ಯಾಭ್ಯಾಸ ಪಡೆಯದೇ ಅರಮನೆಯಿಂದ 'ಪಂಡಿತ ರತ್ನ' ಪ್ರಶಸ್ತಿ ದೊರಕಿಸಿ ಕೊಂಡವರು. 'ಸ್ವತಂತ್ರ ಕರ್ನಾಟಕ' ಎಂಬ ಪತ್ರಿಕೆಯನ್ನು ನಡೆಸಿ, 'ಶರಣ ಸಾಹಿತ್ಯ' ಎಂಬ ಮಾಸ ಪತ್ರಿಕೆಯನ್ನು ೧೯೩೭ರಲ್ಲಿ ಆರಂಭಿಸಿ ವೀರಶೈವ ಸಾಹಿತ್ಯ, ವೀರಶೈವ ಚರಿತ್ರೆ, ವೀರಶೈವರ ಹೆಚ್ಚುಗಾರಿಕೆಯನ್ನು ಪ್ರಚಾರ ಮಾಡುವುದೇ ಈ ಪತ್ರಿಕೆಯ ಉದ್ದೇಶವಾಗಿತ್ತು. ಜೊತೆಗೆ ಸರ್ವಧರ್ಮಗಳ ಪರಿಚಯ ಮಾಡುವ ಕೆಲಸವನ್ನು ಈ ಪತ್ರಿಕೆ ಮಾಡಿದೆ. ಕನ್ನಡದ ಪ್ರಾಚೀನ ಗ್ರಂಥಗಳನ್ನು ಸಂಗ್ರಹಿಸಿ, ಸಂಶೋಧಿಸಿ ಪ್ರಕಟಿಸಿದರು. ಅದರಲ್ಲಿ ರಾಘವಾಂಕನ 'ವೀರೇಶ ಚರಿತೆ'ಯು ಕೂಡಾ ಒಂದಾಗಿದೆ. ಸರ್ವಜ್ಞಮೂರ್ತಿ ಮತ್ತು ಹಿಂದೂಧರ್ಮ ಎರಡು ಸ್ವತಂತ್ರ ಕೃತಿಗಳನ್ನು ಪ್ರಕಟಪಡಿಸಿದ್ದಾರೆ. ಕನ್ನಡ ನಾಡಿನ ಇತಿಹಾಸದ ರಚನೆಗೆ ಸಂಬಂಧಿಸಿದ ಪೊಟ್ಟಲಕೆರೆ, ಬೀಳಗಿ, ಶಿವಗಂಗೆ, ಸೇಲಂ, ಕೊಯಮತ್ತೂರು ಜಿಲ್ಲೆಗಳಲ್ಲಿ ದೊರಕುವ ಕನ್ನಡ ಶಾಸನವನ್ನು ಜೀರ್ಣೋದ್ದಾರ ಮಾಡಿದ್ದಾರೆ. ಕನ್ನಡ ನಾಡಿನ ಸಂಘಟನೆ ಮತ್ತು ಏಕೀಕರಣ ಪ್ರಚಾರಕ್ಕೆ ವಿಶೇಷ ಆಸಕ್ತಿ ವಹಿಸಿದರು ಎಂಬುದಾಗಿ ಅವರ ಸಾಹಿತ್ಯ ಸೇವೆಯ ಹಿನ್ನಲೆಯಲ್ಲಿ ವಿವರಿಸುತ್ತಾರೆ.

ನಿರಂಜನರು ಅಂಕಣ ಕೃತಿಯಲ್ಲಿ ಬಿ ಶಿವಮೂರ್ತಿ ಶಾಸ್ತ್ರಿಗಳು ಕನ್ನಡ ನಾಡು ನುಡಿಯ ಉಳಿಗೆಗಾಗಿ ೪೦ ವರ್ಷಗಳ ಸುಧೀರ್ಘ ಹೋರಾಟ ಮಾಡಿದವರು, ಶರಣ ಸಾಹಿತ್ಯದ ಮೂಲಕ ಶಿವ ಶರಣರ ಕೃತಿಗಳನ್ನು ಸಾಮಾನ್ಯ ಜನರಿಗೆ ತಲುಪಿಸಿದವರು. ೨೫ ವರ್ಷಗಳ ಶರಣ ಸಾಹಿತ್ಯ ಪ್ರತಿಕೆಯನ್ನು ನಡೆಸಿ, ಸಾಹಿತ್ಯ ಪರಿಷತ್ತಿನ 'ಕನ್ನಡ ನುಡಿ' ಪತ್ರಿಕೆಗಳ ಸಂಪಾದಕರಾಗಿಯೂ ಕೆಲಸ ಮಾಡಿದ್ದಾರೆ. ಆರು ವರ್ಷ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಅರಮನೆ ಮತ್ತು ಗುರುಮನೆಗಳಿಂದ ಪುರಸ್ಕಾರರಾದವರು. ತುಮಕೂರಿನ ಜಂಗಮ ಮನೆತನದ ಬಸವಯ್ಯ ಸ್ವಾಮಿಯವರ ಪುತ್ರನಾಗಿ ಜನಿಸಿ ಅಸ್ಥಾನ ವಿದ್ವಾಂಸರಾದ ಕರಿಬಸವ ಶಾಸ್ತ್ರಿಗಳಿಂದ ವಿದ್ಯಾಭ್ಯಾಸ ಪಡೆದು ಜ್ಞಾನವನ್ನು ಪಡೆದವರು. ತಾಳೆಗರಿಯನ್ನು ಸಂಪಾದಿಸಿ 'ಹರಿಶ್ಚಂದ್ರನ ರಗಳಾ ಕಾವ್ಯ' ಹೊರತಂದರು. ಅಖಂಡ ಕರ್ನಾಟಕದ ಕನಸು ಕಂಡ ಮಹಾನೀಯರುಗಳಲ್ಲಿ ಇವರು ಕೂಡ

ಒಬ್ಬರಾಗಿದ್ದಾರೆ. ಅವರ ಕಛೇರಿಯಲ್ಲಿ ಸರಸ್ವತಿ, ಲಕ್ಷ್ಮೀ, ಬಸವೇಶ್ವರ, ಬುದ್ಧ, ನೇತಾಜಿ, ಗುರು ನಾನಕ್, ಗೊಮ್ಮಟೇಶ್ವರ, ಲಿಂಕನ್, ಫೀಲ್ಡ್ ಮಾರ್ಷಲ್ ಕಾರಿಯಪ್ಪ, ವಿವೇಕಾನಂದ ಮೊದಲಾದ ರಾಷ್ಟ್ರ, ರಾಜ್ಯ ನಾಯಕರ ಫೋಟೋಗಳು ಇಟ್ಟಿದ್ದು ಅವರ ವರ್ಣರಂಜಿತ ಬದುಕಿಗೆ ಸಾಕ್ಷಿಯಾಗಿದೆ. ಅರ್ಚಕ ವೆಂಕಟೇಶ, ಕುಮಾರ ವೆಂಕಣ್ಣ, ಬಸವರಾಜ ಕಟ್ಟೀಮನಿ ಮೊದಲಾದವರಿಗೆ ಆಶ್ರಯ ನೀಡಿದವರು. ಅವರು ಮಾಡಿದ ಕೆಲಸವನ್ನು ಮುಂದಿನ ಕನ್ನಡ ಚರಿತ್ರೆಕಾರರು ಅವರನ್ನು ಸ್ಮರಿಸುತ್ತಾರೆ ಎಂದು ನಿರಂಜನರು ವ್ಯಕ್ತಿ ಚಿತ್ರಣವನ್ನು 'ನಿರಂತರ ಕಾಯಕದ ಕಲಿ' ಎಂಬ ಲೇಖನದಲ್ಲಿ ತಿಳಿಸುತ್ತಾರೆ.

ಎ.ಆರ್.ಕೃಷ್ಣಶಾಸ್ತ್ರಿಗಳು ಕನ್ನಡವೇ ತಮ್ಮ ಸರ್ವಸ್ವವೆಂದು ತಿಳಿದವರು ಕನ್ನಡ ನಾಡಿನ ಸಾಹಿತ್ಯ ಚರಿತ್ರೆಯಲ್ಲಿ ಕರ್ನಾಟಕ ಸಂಘ ಮತ್ತು ಪ್ರಬುದ್ಧ ಕರ್ಣಾಟಕ ಪ್ರಮುಖ ಪಾತ್ರ ವಹಿಸಿದೆ. ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಬಂದು ೧೯೧೮ರಲ್ಲಿ ಕರ್ನಾಟಕ ಸಂಘವನ್ನು ಸ್ಥಾಪಿಸಿ ಕನ್ನಡ ಪ್ರಚಾರಕ್ಕೆ ಒಂದು ವೇದಿಕೆಯನ್ನು ನಿರ್ಮಿಸಿದರು. ಪ್ರಬುದ್ಧ ಕರ್ಣಾಟಕದಲ್ಲಿ 'ಶ್ರೀಪತಿ' ಎಂಬ ಹೆಸರಿನಿಂದ ಬರೆಯುತ್ತಿದ್ದರೂ ಅದು ಜನತೆಗೂ ತುಂಬಾ ದಿನ ತಿಳಿದಿರಲಿಲ್ಲ. ನವಿರಾದ ಹಾಸ್ಯದ ಮೂಲಕ ಕನ್ನಡ ಸಾಹಿತ್ಯವನ್ನು ಪರಿಚಯಿಸುವ ಅವರ ಶೈಲಿ ಓದುಗರಿಗೂ ಇಷ್ಟವಾಗುತ್ತಿತ್ತು. ೧೯೫೦ರಲ್ಲಿ ವಚನ ಭಾರತ ಪ್ರಕಟಿಸಿ ಕನ್ನಡಿಗರಿಗೆ ಮಹಾಭಾರತದ ಕಥಾವಸ್ತು ಎಲ್ಲರಿಗೂ ಸರಳವಾಗಿ ಅರ್ಥವಾಗುವ ರೀತಿಯಲ್ಲಿ ತಿಳಿಸಿದರು. ಮಹಾಭಾರತದ ಸಾರಸರ್ವಸ್ವವನ್ನು ಕ್ರೋಢೀಕರಿಸಿ ವಚನ ಭಾರತ ಎಂಬ ಕೃತಿಯನ್ನು ಪ್ರಕಟಿಸಿದರು. ಮೂವತ್ತೆರಡು ವರ್ಷ ಕಾಲ ಅವಿಶ್ರಾಂತ ಕನ್ನಡ ಸೇವೆಯನ್ನು ಕನ್ನಡ ಗುರುಗಳಾಗಿ, ತಪಸ್ವಿಗಳಾಗಿ ಎ.ಆರ್,ಕೃಷ್ಣಶಾಸ್ತ್ರಿಗಳು ಇದ್ದರು ಎಂದು ಅ.ನ.ಕೃ ರವರು 'ಕನ್ನಡ ಕುಲರಸಿಕರು' ಕೃತಿಯಲ್ಲಿ ಇವರ ವ್ಯಕ್ತಿತ್ವವನ್ನು ಕನ್ನಡಕ್ಕೆ ನೀಡಿದ ಕೊಡುಗೆಯನ್ನು ವಿಶ್ಲೇಷಿಸುತ್ತಾರೆ.

ನಿರಂಜನರು ಅಂಕಣ ಕೃತಿಯಲ್ಲಿ ಎ.ಆರ್. ಕೃಷ್ಣಶಾಸ್ತ್ರಿಗಳು ಬರೆದ 'ಬಂಗಾಳೀ ಕಾದಂಬರಿಕಾರ ಬಂಕಿಮ ಚಂದ್ರ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದ ವಿಚಾರದೊಂದಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಸಂಸ್ಥೆಯಾಗಿದ್ದರೂ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವ ಸಲುವಾಗಿ ದೇಶದಲ್ಲಿ ಈ ರೀತಿಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕೃತಿಗಳನ್ನು ಬೇರೆ ಬೇರೆ ಭಾಷೆಗಳಿಗೆ ಅನುವಾದಿಸಿ ಪ್ರಕಟ ಪಡಿಸಬೇಕೆಂದು 'ಸುಂದರ ಚಿತ್ರಕ್ಕೊಂದು ಹೂಮಾಲೆ' ಎಂಬ ಲೇಖನವನ್ನು ಚರ್ಚಿಸುತ್ತಾರೆ.

ಕಲೆಯ ಮೂಲಕ ಕನ್ನಡ ನಾಡಿಗೆ ಸೇವೆ ಸಲ್ಲಿಸಿದ ಅನೇಕ ಕಲಾವಿದರ ವ್ಯಕ್ತಿತ್ವ ಚಿತ್ರಣವನ್ನು ಅ.ನ.ಕೃರವರು ನೀಡುತ್ತಾರೆ. ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕೆ.ವಾಸುದೇವಾಚಾರ್ಯರಿಗೆ ಏಳು ದಶಕಗಳ ಸಂಗೀತ ಕ್ಷೇತ್ರಕ್ಕೆ ನೀಡಿದ ಕೊಡುಗೆಯಿಂದ ಅವರಿಗೆ ರಾಷ್ಟ್ರಾಧ್ಯಕ್ಷ ಪ್ರಶಸ್ತಿ ಲಭಿಸಿತು. ಹಲವಾರು ಕೀರ್ತನೆಗಳನ್ನು ರಚಿಸಿರುವ ಇವರನ್ನು ಕೇಂದ್ರ ಸರಕಾರದ ಅಧಿಕಾರಿಗಳ ಗಮನಕ್ಕೆ ಬರದೇ ಹೋದವರು. ಸಂಗೀತ ಶಾಸ್ತ್ರದ ಬಗ್ಗೆ ಕನ್ನಡಿಗರ ಆಲಸ್ಯದಿಂದಾಗಿ ಈ ರೀತಿಯ ಸಂಗೀತ ದಿಗ್ಗಜರನ್ನು ಕೇಂದ್ರ ಸರಕಾರ ಗುರುತಿಸದಂತಾಗಿದೆ. ಸಂಸ್ಕೃತ, ತೆಲುಗು ಭಾಷೆಯಲ್ಲಿ ಕೂಡ ಕೀರ್ತನೆಗಳನ್ನು ರಚಿಸಿದ್ದಾರೆ. 'ವಾಸುದೇವ ಕೀರ್ತನ ಮಂಜರಿ' ಎಂಬುದು ಅವರ ಕ್ರಿಯಾಶಕ್ತಿಗೆ ಸಾಕ್ಷಿಯಾಗಿದೆ ಎಂದು ಪರಿಚಯಾತ್ಮಕವಾಗಿ ಅವರ ಸಾಧನೆಯನ್ನು ತಿಳಿಸುತ್ತಾರೆ.

ನಿರಂಜನರು ರಾಜಧಾನಿಯಿಂದ ಎಂಬ ಅಂಕಣದಲ್ಲಿ ಸಂಗೀತಗಾರರಾದ ಮೈಸೂರು ಕೆ. ವಾಸುದೇವಚಾರ್ಯರ ನೂರನೇ ಜನ್ಮದಿನವನ್ನು ಆಚರಿಸಿದ್ದು ಅವರ ಸ್ಮರಣೆಯ ನಿಮಿತ್ತ ಆಕಾಶವಾಣಿಯಲ್ಲಿ ವಿವಿಧ ಕಾರ್ಯಕ್ರಮಗಳು ನಡೆದು ಆ ಮೂಲಕ ನಾಡಿನ ಸಂಗೀತ ಕ್ಷೇತ್ರಕ್ಕೆ ಕಾಣಿಕೆ ನೀಡಿದವರನ್ನು ಸ್ಮರಿಸುವಂತದ್ದು ಆಗಬೇಕೆಂದು, ಚಿತ್ರಕಾರರಾದ ವೆಂಕಟಪ್ಪನವರು ಎಂಭತ್ತು ವರ್ಷ ದಾಟಿ ಹೋದರು ಯಾರ ಆಶ್ರಯದ ಮೋರೆ ಹೋಗದೇ, ಸಹಾಯಧನ ಬೇಡದೇ, ಕಲೆಯನ್ನು ನಂಬಿದವರು ಕನ್ನಡ ಚಿತ್ರಕಲೆ ಎಂಬುದಕ್ಕೆ ಬಂದು ರಾಷ್ಟ್ರೀಯ ವೇದಿಕೆಯನ್ನು ನಿರ್ಮಿಸಿದವರು. ಇಂತವರ ಜೀವನ ಕಲೆ ಬರೆಯುವರಿಗೆ ಒಂದು ವಸ್ತುವಿದೆ. ಅಂತವರ ಜೀವನ ಚರಿತ್ರೆಗಳಿಂದ ಮುಂದಿನ ಪೀಳಿಗೆಗೆ ಕನ್ನಡ ನಾಡಿನ ಚಿತ್ರಕಲೆ ಅಥವಾ ಕಲಾ ಪ್ರಪಂಚಕ್ಕೂ ನೀಡಿದ ಕಾಣಿಕೆ ಸ್ಮರಿಸಲಿ ಎಂಬ ಆಶಯದೊಂದಿಗೆ ಇಂತಹ ಮಹನೀಯರ ಕಲಾ ಸೇವೆಗೆ 'ಶರಣೆಂಬೆನು ಶರಣು' ಎಂದು ನಿರಂಜನರು ನಮಸ್ಕರಿಸುವ ಮೂಲಕ ತಮ್ಮ ಗೌರವವನ್ನು ಸೂಚಿಸುತ್ತಾರೆ.

'ಅಂಕಣ' ಕೃತಿಯಲ್ಲಿ ನಿರಂಜನರು 'ಬಾಗಿಲು ತೆರೆದ ಕಲಾ ದೇಗುಲ' ಎಂಬ ಲೇಖನದಲ್ಲಿ ಶಿಲ್ಪಿ ಸಂಗೀತ ಶಾಸ್ತ್ರಜ್ಞರಾದ ವೆಂಕಟಪ್ಪನವರನ್ನು ಮನೆಯಲ್ಲಿ ಗೌರವಿಸಿದ ರೀತಿಯನ್ನು ಕಂಡು ಕಲಾವಿದರಲ್ಲಿ ಒಗ್ಗಟ್ಟಿಲ್ಲದೇ ಇರುವುದು, ಪ್ರಾಮಾಣಿಕವಾದ ಕಲಾವಿದ ಸಂಘಟನೆಯೊಳಗೆ ಆತ ಸಿಲುಕಲಾರ, ಆತನ ವಿಶಿಷ್ಟ ವ್ಯಕ್ತಿತ್ವದಿಂದ ಕಲಾಕೃತಿ ಹೊರಬರುತ್ತದೆ. ಆದರೆ ಕಲಾವಿದರು ಅನುಕೂಲಕ್ಕಾಗಿ ಒಂದುಗೂಡುತ್ತಾರೆ. ಹೀಗೆ ಒಂದುಗೂಡುವ ಮೂಲಕ ಕಲಾ ಪೋಷಣೆ ಸಂಬಂಧಿಸಿದಂತೆ ಚರ್ಚೆ ನಡೆದು ಅದರ ರಕ್ಷಣೆಯು ಸಾಧ್ಯವಾಗುತ್ತದೆ ಎಂದು ವಿಶ್ಲೇಷಿಸುತ್ತಾರೆ.

ಕೃಷ್ಣರಾವ್ ಚಂದ್ರಭಾಗ್ ದಂಪತಿಗಳು ಹೊರ ದೇಶಗಳಲ್ಲಿ ಭಾರತೀಯ ನೃತ್ಯ ಕಲೆಯನ್ನು ಬೆಳೆಸುತ್ತಿದ್ದಾರೆ. ದೇವೇಂದ್ರಪ್ಪನವರು ಚೀನಾಕ್ಕೆ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಚೀನಾದಲ್ಲಿ ಕಲೆಯಲ್ಲಿ ಆಗಿರುವ ಕಾಂತ್ರಿಕಾರಕ ಬದಲಾವಣೆಗಳನ್ನು, ಕೃಷ್ಣ ಹೆಬ್ಬಾರ್‌ರವರು ರಷ್ಯಾದಲ್ಲಿ ನಡೆದ ಸಾಂಸ್ಕೃತಿಕ ಸಮ್ಮೇಳನದಲ್ಲಿ ಭಾಗವಹಿಸಿದ ಜೊತೆಗೆ ದೇಶ ದೇಶಗಳ ನಡುವೆ ಕಲೆಯ ಮೂಲಕ ಸಹಬಾಳ್ವೆ, ಉತ್ತಮ ಬಾಂಧವ್ಯವನ್ನು ಮೂಡಿಸಬಹುದೆಂದು ನಿರಂಜನರು ತಿಳಿಸುತ್ತಾರೆ.

ಅ.ನ.ಕೃರವರು ತಮ್ಮ ಕರ್ನಾಟಕದ ಕಲಾವಿದರು ಭಾಗ ೧ ಮತ್ತು ಭಾಗ ೨ರಲ್ಲಿ ಅನೇಕ ಕಲಾವಿದರ ವ್ಯಕ್ತಿತ್ವವನ್ನು ಚಿತ್ರಿಸುತ್ತಾರೆ. ನಿರಂಜನರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸೇವೆ ಮಾಡಿದ ದಿನಕರ ದೇಸಾಯಿ, ದೇ.ಜವರೇಗೌಡ, ತ.ರಾ.ಸು ಬಸವರಾಜ ಕಟ್ಟೀಮನಿ, ಕಡೆಂಗೋಡ್ಲು ಶಂಕರಭಟ್ಟ, ಭಾರತೀಸುತ, ಆರ್.ಎಲ್. ನರಸಿಂಹಯ್ಯ (ಆರ್.ಎಲ್.ಎನ್) ರಾಷ್ಟ್ರಧ್ಯಕ್ಷರಾದ ಜಾಕೀರ್ ಹುಸೇನ್, ಡಿ.ವಿ.ಜಿ, ಮುದ್ದಣ, ಮಲ್ಲಾಡಿಹಳ್ಳಿ ಶ್ರೀ ರಾಘವೇಂದ್ರ ಸ್ವಾಮಿ, ಟಿ.ಎಸ್.ಎಲಿಯಟ್, ಗಾಂಧೀಜಿ, ಗುಲವಾಡಿ ವೆಂಕಟರಾಯ, ಎಂ. ಮರಿಯಪ್ಪ ಭಟ್ಟ, ಬಿ. ಶಂಕರಭಟ್ಟ, ಜಿ ವೆಂಕಟಸುಬ್ಬಯ್ಯ, ಪುಟ್ಟಸ್ವಾಮಯ್ಯ, ತಿ.ತಾ. ಶರ್ಮ ಮೊದಲಾದ ಕನ್ನಡ ಸಾಹಿತಿಗಳು ನೀಡಿದ ಕೃತಿಗಳನ್ನು ಪಂಚಯಾತ್ಮವಾಗಿ ವಿಚಾರ ಸಾಹಿತ್ಯದಲ್ಲಿ ಅವರ ವ್ಯಕ್ತಿತ್ವದೊಂದಿಗೆ ತಿಳಿಸುತ್ತಾರೆ. ಆದರೆ ಅ.ನ.ಕೃ ರವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಾಹಿತಿಗಳನ್ನು ಪಂಚಯಾತ್ಮಕವಾಗಿ ತಿಳಿಸುವುದಕ್ಕಿಂತಲೂ ಅವರು ಕನ್ನಡ ನಾಡಿಗೆ ಕಲೆ, ಸಂಗೀತ, ನಾಟಕ ಮೊದಲಾದವುಗಳಲ್ಲಿ ಕನ್ನಡನಾಡಿಗೆ ನೀಡಿದ ಮಹನೀಯರುಗಳ ವ್ಯಕ್ತಿತ್ವವನ್ನು ಚರ್ಚಿಸುತ್ತಾರೆ.

ಮಲ್ಲಿಕಾರ್ಜುನ ಮನ್ಸೂರರು ಸಂಗೀತದ ಮೂಲಕ ಕನ್ನಡನಾಡಿಗೆ ನೀಡಿದ ಸೇವೆಯನ್ನು, ಚಿತ್ರಕಾರರಾದ ಕಮಡೋಳಿ ಅವರ ಚಿತ್ರಗಳಲ್ಲಿರುವ ಪ್ರಕೃತಿನೋಟ, ಇಬ್ರಾಹಿಂ, ಟಿಪ್ಪುವಿನ ಗುಂಬಜ್, ಲಂಬಾಣಿ ಮುದುಕಿ ಚಿತ್ರಗಳಲ್ಲಿ ಇರುವ ಅಂತಃಕರಣ, ಧಾರ್ಮಿಕ ಸಮನ್ವತೆಯ ದೃಷ್ಟಿಯನ್ನು ಗುರುತಿಸುತ್ತಾರೆ. ಆಸ್ಥಾನ ವಿದ್ವಾಂಸರಾದ ಬಿ. ದೇವೇಂದ್ರಪ್ಪ, ವೀಣೆಕೇಶವ ಮೂರ್ತಿ, ಕುಂದಗೋಳದ ರಾಮರಾಯರು (ಸವಾಯ್ ಗಂಧರ್ವ), ನಾಟಕ ನಟರಾದ ಎ.ವಿ. ವರದಾಚಾರ್ಯರು, ಜೆ.ಎಚ್.ವೀರಣ್ಣ ಮೊದಲಾದವರ ಬದುಕನ್ನು ಮತ್ತು ವ್ಯಕ್ತಿತ್ವವನ್ನು ತಿಳಿಸುತ್ತಾರೆ.

ಜಾತಿ, ಮತ, ಪಂಥಗಳಿಗಿಂತ ಕಲೆಯೇ ಮೇಲು ಎಂಬುದಕ್ಕೆ ಚಿತ್ರಗಾರ ಕಮಡೋಳಿ, ನಟಶೇಖರ್ ಮಹಮದ್ ಪೀರ್ ಅವರ ವ್ಯಕ್ತಿತ್ವಗಳ ಹಿನ್ನಲೆಯಲ್ಲಿ ವಿವರಿಸುತ್ತಾರೆ. ಗಾಂಧೀಜಿಯವರು ಕುಳಿತಿರುವ ಪುಸ್ತಕದಲ್ಲಿ ಬರೆಯುತ್ತಿರುವ ಚಿತ್ರವನ್ನು ದೇಶಕ್ಕೆ ನೀಡಿದ ಎಸ್.ಎನ್. ಸ್ವಾಮಿ, ವೀಣೆವಾದಕರಾದ ದೊರೆಸ್ವಾಮಿ ಅಯ್ಯಂಗಾರ್ಯ, ಚಿತ್ರಕಲೆಯ ಮೂಲಕ ಸೌಂದರ್ಯೋಪಾಸಕ ಮಿಣಜಿಗಿ, ಚಿತ್ರಕಾರರಾದ ಎಲವಟ್ಟಿ ಮೊದಲಾದವರನ್ನು ಪರಿಚಯಿಸುತ್ತಾರೆ. ನೃತ್ಯ ಎಂಬುದು ಕಲೆಯಾಗಿದ್ದು ಆ ಕಲೆಯು ಸಿನಿಮಾಕ್ಕೆ ಅಳವಡಿಸಿದ ಕೆಲವೊಂದು ನೃತ್ಯ ಶಾಲೆಗಳು ನೃತ್ಯ ಕಲೆಯನ್ನು ದುರುಪಯೋಗಪಡಿಸಿಕೊಂಡವು. ಕೆಳದರ್ಜೆಯ ಕಲಾವಿದರು ನೃತ್ಯ ಕಲೆಯನ್ನು ದುರುಪಯೋಗ ಮಾಡಿಕೊಂಡರೂ ಅದು ಇಂದಿಗೂ ಸಾಗಿ ಬರುತ್ತಿದೆ. ಆದರೆ ಕೃಷ್ಣರಾವ್ ಮತ್ತು ಚಂದ್ರಭಾಗಾ ದಂಪತಿಗಳು ಭಾರತೀಯ ನೃತ್ಯ ಕಲೆಯನ್ನು ಉಳಿಸಿದವರಾಗಿದ್ದಾರೆ. ಅವರು ಶ್ರೀ ಕೃಷ್ಣನ ಜೀವನ ಸಂದೇಶವನ್ನು ನೃತ್ಯ ರೂಪದಲ್ಲಿ ತೋರಿರುವ ಶ್ರದ್ಧೆಯನ್ನು ಶಿವನ ಬಗ್ಗೆ ಶಿವಲಾಸ್ಯ, ತಾಂಡವಗಳಿಗೆ ನೀಡುವ ಮೂಲಕ ಭಾರತೀಯ ನೃತ್ಯ ಪರಂಪರೆಯ ಉಳಿವಿನಲ್ಲಿ ಕಾರ್ಯ ಪ್ರವೃತ್ತರಾಗಿದ್ದರೆಂದು ತಿಳಿಸುತ್ತಾರೆ.

ನಿರಂಜನರು ಕೆ. ಹಿರಣ್ಣಯ್ಯನವರು ಮಡಿಕೇರಿಯಲ್ಲಿ 'ಬ್ಲಾಕ್‌ಮಾರ್ಕೆಟ್' ನಾಟಕದಲ್ಲಿ ಅಭಿನಯಿಸುತ್ತಿರುವಾಗಲೇ ಅವರು ತೀರಿಕೊಂಡರು. ಈ ವಿಚಾರವನ್ನು ಪ್ರತಿಕೆಗಳು ಭಿನ್ನವಾಗಿ ಪ್ರಕಟಿಸಿದವು. ಅವರು ನಾಟಕದಲ್ಲಿ ಅಭಿನಯಿಸಿದ ನಂತರ ತೀರಿಕೊಂಡಿದು ಎಂದು ವರದಿಗಳು ಪ್ರಕಟವಾದ ಹಿನ್ನಲೆಯಲ್ಲಿ ತಿಳಿಸುತ್ತಾರೆ. ಅ.ನ.ಕೃರವರು ನಾಟಕ ಸಾಹಿತ್ಯದಲ್ಲಿ ಹಾಸ್ಯವನ್ನು ಲಕ್ಷ್ಮೀಪತಿ ಶಾಸ್ತ್ರಿಗಳು, ಸಿದ್ದಪ್ಪಾಜಿ, ಹುಲಿಮನೆ ರಾಮ ಶಾಸ್ತ್ರಿ, ಪಾವಂಜೆ ಮಹಾಬಲರಾಯರು ಮಾಡಿದ ವಿವಿಧ ಪ್ರಯತ್ನಗಳ ಹಾಗೇ ಕೆ. ಹಿರಣಯ್ಯನವರು ರಂಗದ ಮೇಲೆ ತಂದವರೆಂದು, ಕನ್ನಡನಾಡಿಗೆ ನೃತ್ಯ, ಸಂಗೀತ, ಚಿತ್ರಕಲೆ ಮೊದಲಾದವುಗಳಲ್ಲಿ ಸೇವೆ ಸಲ್ಲಿಸಿದವರ ವ್ಯಕ್ತಿತ್ವ ಚಿತ್ರಣ ನೀಡುತ್ತಾರೆ.

ನಿರಂಜನರವರು ಯಾವುದೇ ಜೀವನ ಚರಿತ್ರೆಗಳನ್ನು ಬರೆದಿಲ್ಲ. ಅ.ನ.ಕೃ ರವರು ಕೈಲಾಸಂ, ಭಾರತೀಯ ಚಿತ್ರಕಲೆಯಲ್ಲಿ ರಾಜರವಿವರ್ಮನ ಸ್ಥಾನ, ನಿಡಿಮಾಮಿಡಿ ಸನ್ನಿಧಿಯವರು ಎಂಬ ಮೂರು ಕೃತಿಗಳನ್ನು ಬರೆದಿದ್ದಾರೆ. ಇಲ್ಲಿ ಅವರ ಬದುಕಿಗಿಂತ ಹೆಚ್ಚು ಕೃತಿಗಳ ಬಗ್ಗೆ ವಿಮರ್ಶೆಯನ್ನು ಮಾಡಿರುವುದನ್ನು ಕಾಣಬಹುದು. 'ಕೈಲಾಸಂ' ಎಂಬ ಕೃತಿಯಲ್ಲಿ ಅವರ ಬದುಕಿಗಿಂತ ಕನ್ನಡ ನಾಟಕಗಳ ಪ್ರಾಚೀನತೆ ಹಾಗೂ ಅದು ಬೆಳೆದು ಬಂದ ಬಗೆ ಮತ್ತು ಕೈಲಾಸಂರವರ ನಾಟಕಗಳನ್ನು ದೊಡ್ಡ ನಾಟಕಗಳು ಮತ್ತು ಸಣ್ಣನಾಟಕಗಳು (ಏಕಾಂಕ) ಎಂದು ವಿಂಗಡಿಸಿ ದೊಡ್ಡ ನಾಟಕಗಳಾದ ಟ್ಪೊಳ್ಳುಗಟ್ಟಿ, ಅಮ್ಮಾವ್ರ ಗಂಡ, ಬಂಡವಾಳಿಲ್ಲದ ಬಡಾಯಿ, ಹೋಂ ರೂಲು, ಸತ್ತವನ ಸಂತಾಪ, ಹುತ್ತದಲ್ಲಿ ಹುತ್ತ, ಸೂಳೆ ನಾಟಕವನ್ನು ವಿಮರ್ಶಿಸುತ್ತಾರೆ. ಅದೇ ಮಾದರಿಯಲ್ಲಿ ಅವರ ಏಕಾಂತ ನಾಟಕಗಳಾದ ನಮ್ ಬ್ರಾಹ್ಮಣಕ್ಕೆ, ಬಹಿಷ್ಕಾರ, ನಮ್ ಕಂಪನಿ, ವೈದ್ಯನ ವ್ಯಾಧಿ ಮೊದಲಾದವುಗಳನ್ನು

ವಿಮರ್ಶಿಸುತ್ತಾರೆ. ನಗೆಗಾರಿಕೆ ಎಂಬ ಅಧ್ಯಾಯದಲ್ಲಿ ಅವರ ನಾಟಕಗಳಲ್ಲಿ ಹಾಸ್ಯದ ಸಂಭಾಷಣೆಯನ್ನು ಪ್ರಸ್ತಾವಿಸುತ್ತಾರೆ. ವಿಚಾರ ಲಹರಿ ಎಂಬ ಅಧ್ಯಾಯನದಲ್ಲಿ ಕೈಲಾಸಂರವರ ವಿಚಾರಗಳಲ್ಲಿ ಭಾರತೀಯ ಸಾಮಾಜಿಕ, ಧಾರ್ಮಿಕ ಸಮಸ್ಯೆಗಳಿಗೆ ಉತ್ತರವನ್ನು ನೀಡದೇ ಜಾತೀಯತೆಯನ್ನು ಮತ್ತು ಪುರುಷ ಪ್ರಧಾನ ವ್ಯವಸ್ಥೆಯನ್ನು ಮತ್ತೆ ಮತ್ತೆ ಎತ್ತಿ ಹಿಡಿಯುವುದು ಆಗಿದೆ. ಕೈಲಾಸಂ ಅವರ ಒಟ್ಟಾರೆ ವಿಚಾರವನ್ನು ಈ ಕೈಲಾಸಂ ಕೃತಿಯಲ್ಲಿ ದಾಖಲಿಸುತ್ತಾರೆ.

'ಭಾರತೀಯ ಚಿತ್ರಕಲೆಯಲ್ಲಿ ರಾಜಾ ರಮಿವರ್ಮನ ಸ್ಥಾನ' ಎಂಬ ಕೃತಿಯು ಜೀವನ ಚರಿತ್ರೆಗಿಂತ ಭಾರತೀಯ ಚಿತ್ರಕಲೆಯಲ್ಲಿ ರಾಜಾರವಿವರ್ಮನ ಸ್ಥಾನವೇನು? ಎಂಬುದನ್ನು ವಿಮರ್ಶಕನಾಗಿ ನೋಡಿರುವ ಕೃತಿಯಾಗಿದೆ. ಇಲ್ಲಿ ಅ.ನ.ಕೃರವರು ರವಿವರ್ಮನ ಚಿತ್ರಕಲೆಯ ಸ್ವರೂಪ, ತಾತ್ವಿಕತೆಯನ್ನು ವಿಶ್ಲೇಷಿಸುತ್ತಾರೆ. ಇದನ್ನು ಈ ಕೃತಿಯನ್ನು ಪರಿಚಯಿಸುವಾಗಲೇ ಈ ಹಿಂದೆ ಚರ್ಚಿಸಲಾಗಿದೆ.

ನಿಡುಮಾಮಿಡಿ ಸನ್ನಿಧಿಯವರು ಎಂಬ ಕೃತಿಯನ್ನು ಅ.ನ.ಕೃ ಬರೆದಿದ್ದರು ಈ ಕೃತಿಯ ಮುನ್ನುಡಿಯಲ್ಲಿ ಶ್ರೀಗಳ ಚರಿತ್ರೆಗಿಂತ ಅವರ ಕೃತಿಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿದ್ದೇನೆ ಎಂದು ತಿಳಿಸುವ ಮೂಲಕ ಅವರ ಕೃತಿಗಳನ್ನು ವಿಶ್ಲೇಷಿಸುತ್ತಾರೆ. ಅವರು ೧೯೧೪ ರಲ್ಲಿ ಆನಂದ ಸಂವತ್ಸರದಲ್ಲಿ ಜನಿಸಿದವರು, ಚಂದ್ರಶೇಖರ ಎಂದು ಮೊದಲ ಹೆಸರು. ೧೯೧೨ ರಲ್ಲಿ ಅಡ್ನೂರಿನ ಮಲ್ಲಿಕಾರ್ಜುನ ಗೌಡರು ಅಡ್ನೂರಿನಲ್ಲಿ ಬಂದು ಮಠ ಕಟ್ಟಲು ತಾವೇ ಮಠದ ಉತ್ತರಾಧಿಕಾರಿಯಾಗಿ ನೇಮಿಸಲು ಮುಂದಾದರು. ಅಣ್ಣಿಗೆರಿಗೆ ಹೋಗಿದ್ದಾಗ ಹಾನಗಲ್ಲ ಶ್ರೀ ಕುಮಾರಸ್ವಾಮಿಗಳನ್ನು ಭೇಟಿ ಮಾಡಿದಾಗ ಬಾದಾಮಿಯ ಬನಶಂಕರಿ ದೇವಾಲಯದಿಂದ ಮೈಲು ದೂರದ ಶಿವಯೋಗ ಮಂದಿರದಲ್ಲಿ ಇವರಿಗೆ ಶಿಕ್ಷಣ ದೊರಕಿತ್ತು. ಮುಂದೆ ಸಂಸ್ಕೃತ ಕಲಿಯಲು ಕಾಶಿಗೆ ಹೋಗದೇ ಕನ್ನಡದ ಅಭಿಮಾನದಿಂದ ಬೆಂಗಳೂರಿಗೆ ಬಂದರು. ಅಜ್ಜಂಪುರದ ಗಿರಿಯಾಪುರ ಶ್ರೀ ಗುರು ಕುಮಾರಾಶ್ರಮಕ್ಕೆ ಹೋಗಿ ಶಿಕ್ಷಣ ಪಡೆದರು. ೧೯೩೮ ರ ಜೂನ್ ತಿಂಗಳವರೆಗೆ ಸರ್ಪಭೂಷಣ ಮಠದಲ್ಲಿಯೇ ಶಿಕ್ಷಣ ಪಡೆದರು. ಮುಂದೆ ಬಾಗೇಪಲ್ಲಿ ತಾಲೂಕಿನ ಗೂಳೂರಿನ ಪಂಡಿತಾರಾಧ್ಯ ಪರಂಪರೆಯ ಮಠಕ್ಕೆ ಪೀಠಾಧಿಕಾರಿಯಾಗಿ ನೇಮಕಗೊಂಡರು. ಪಟ್ಟಾಧಿಕಾರ ಮಹೋತ್ಸವ ಜೂನ್ ೨೦ ೧೯೩೯ ರಲ್ಲಿ ನಡೆಯಿತು.

ಅ.ನ.ಕೃ 'ಶ್ರೀಗಳ ಕೃತಿ ವಿಸ್ತಾರ' ಎಂಬ ಅಧ್ಯಾಯನದಲ್ಲಿ ಪ್ರಮುಖವಾಗಿ ಅವರ ಕೃತಿಗಳಾದ 'ಅಕ್ಕಮಹಾದೇವಿ'ಯಲ್ಲಿ ಅವರ ವ್ಯಕ್ತಿತ್ವ ಅಜ್ಞಾನದ ಸಂಸಾರದಲ್ಲಿ ಸಿಲುಕಿದವರಿಗೆ ಅದರಿಂದ ಬಿಡುಗಡೆ ಪಡೆಯಲು ಗುರುವನ್ನು ಸ್ತುತಿಸುವುದು, ಅದರಿಂದ ಬಿಡುಗಡೆ ಮಾಡಿದ ಗುರು ಅಲ್ಲಮಪ್ರಭು ಇರಬಹುದು. ಅದಕ್ಕೆ ಉತ್ತರವಾಗಿ ಕಲ್ಯಾಣದಲ್ಲಿ ಕ್ರಾಂತಿ ಉಂಟಾದಾಗ ಶಿವಶರಣರು ಬೇರೆ ಬೇರೆ ಕಡೆ ಹೋದರು. ಆದರೆ ಅಕ್ಕಮಹಾದೇವಿ ಪ್ರಭುವನ್ನು ಅನುಸರಿಸಿ ಶ್ರೀ ಶೈಲಕ್ಕೆ ಹೋದಳು. ಹಾಗಾಗಿ ಅಲ್ಲಮಪ್ರಭುವೇ ಆಕೆಯ ಗುರು ಎಂದು ತಿಳಿಸಿದ ವಿಚಾರವನ್ನು ವಿಶ್ಲೇಷಿಸುತ್ತಾರೆ. ಅಕ್ಕಮಹಾದೇವಿಯ ಉಪಲಬ್ಧವಿಲ್ಲದ 'ಯೋಗಾಂಗ ತ್ರಿವಿಧಿ'ಯನ್ನು ಸಂಶೋಧಿಸಿ ಪರಿಷ್ಕರಿಸಿ ಪ್ರಕಟಿಸಿದರು. ಚೆನ್ನಬಸವಣ್ಣ ವಯಸ್ಸಿನಲ್ಲಿ, ಯೋಗ್ಯತೆಯಲ್ಲಿ ದೊಡ್ಡವರು ಎಂಬುದಕ್ಕೆ ಅಲ್ಲಮಪ್ರಭುವಿನ ವಚನಗಳ ಹಿನ್ನಲೆಯಲ್ಲಿ ಕಿರಿಯರಾದರೇನು ಹಿರಿಯರಾದರೇನು ಅರಿವು ಇದ್ದಂಗೆ ಹಿರಿಯದು ಕಿರಿಯದು ಎಂಬ ಭೇದವಿಲ್ಲ. ಗುಹೇಶ್ವರ ಲಿಂಗದಲ್ಲಿ ನೀನೊಬ್ಬನೆ ಮಹಾಜ್ಞಾನಿ ಚೆನ್ನ ಬಸವಣ್ಣ ಎಂದು ವಿಶ್ಲೇಷಿಸುತ್ತಾರೆ.

'ಅಣ್ಣನ ಬದುಕು' ಎಂಬ ಕೃತಿಯಲ್ಲಿ ಬಸವಣ್ಣನ ಬದುಕನ್ನು ಬಾಲ್ಯದ ಬದುಕಿನಲ್ಲಿ, ಯೌವ್ವನ ಬದುಕಿನಲ್ಲಿ, ಕೊನೆಯ ಚರಮ ಬದುಕಿನಲ್ಲಿ ಬಸವಣ್ಣನ ಭಕ್ತಿಯು, ಆತ್ಮ ನಿವೇದನೆ ಇವುಗಳನ್ನು ಶ್ರೀಗಳು ತಿಳಿಸಿದ ವಿಚಾರದಲ್ಲಿ ಚರ್ಚಿಸುತ್ತಾರೆ. ಆಯ್ದಕ್ಕಿ ಮಾರಯ್ಯನನ್ನು ಕುರಿತು ನಾಟಕ ರೂಪದಲ್ಲಿ ಆತನ ಜೀವನವನ್ನು ಬರೆದಿದ್ದಾರೆ. ವಚನ ನಿರ್ಮಾಣ ಎಂಬ ಭಾಗದಲ್ಲಿ ಅ.ನ.ಕೃರವರು ವಚನಾಂಜಲಿ ಮತ್ತು ವಚನ ಮಂಜರಿ ಎಂಬ ಗ್ರಂಥಗಳನ್ನು ಬರೆದಿರುವ ನಿಡುಮಾಮಿಡಿ ಸಂಸ್ಥಾನದ ಚನ್ನಬಸವ ದೇಶೀ ಕೇಂದ್ರರು, ವಚನಾಂಜಲಿ ಎಂಬ ಕೃತಿಯಲ್ಲಿ 'ಬಹಿರಂಗ' ಮತ್ತು 'ಅಂತರಂಗ' ಎಂದು ವಿಂಗಡಿಸಿ ಅಧ್ಯಾತ್ಮಿಕ ವಿಷಯಗಳನ್ನು ಕುರಿತು ಚರ್ಚಿಸಿದ್ದಾರೆ 'ವಚನ ಮಂಜರಿ' ಎಂಬುದು ಆರು ಅಧ್ಯಾಯಗಳಿಂದ ಕೂಡಿದ ಕೃತಿ ತಮ್ಮ ಅನುಭವಗಳನ್ನು ವಚನಗಳ ಮೂಲಕ ಚರ್ಚಿಸಿರುವ ವಿಚಾರವನ್ನು ವಿಶ್ಲೇಷಿಸುತ್ತಾರೆ. ಮುಪ್ಪಿನ ಷಡಕ್ಷರಿಯ ಬಗ್ಗೆ ಕಿರಿದಾದ ಪರಿಚಯದ ಜೊತೆಗೆ ಭಾಷಾವಾರು ಪ್ರಾಂತ್ಯದ ರಚನೆಯ ಅಗತ್ಯತೆಯ ಪ್ರತಿಪಾದಕರಾಗಿ ನಿಡುಮಾಮಿಡಿ ಸನ್ನಿಧಿಯವರು ಇದ್ದರೆಂದು ವಿವರಿಸುತ್ತಾರೆ.

ಅ.ನ.ಕೃ ರವರ ಕೈಲಾಸಂ, ನಿಡುಮಾಮಿಡಿ ಸನ್ನಿಧಿಯವರು, ಭಾರತೀಯ ಚಿತ್ರಕಲೆಯಲ್ಲಿ ರಾಜಾರವಿವರ್ಮನ ಸ್ಥಾನ ಎಂಬ ಕೃತಿಗಳು ಜೀವನ ಚರಿತ್ರೆಗಳಾಗುವುದಕ್ಕಿಂತಲೂ ಅವು ಅವರ ಕೃತಿಗಳನ್ನು ವಿಮರ್ಶಾತ್ಮಕವಾಗಿ ಪರಿಚಯಿಸುವ ಕೃತಿಗಳಾಗಿವೆ. ಜೀವನ ಚರಿತ್ರೆಗಿಂತ ಅವರ ವಿಚಾರ ಲಹರಿಗಳನ್ನು ಇದರಿಂದ ತಿಳಿಯಬಹುದು.

೭.೨ ಸಂದರ್ಶನಗಳು

ಅ.ನ.ಕೃರವರು 'ನನ್ನನ್ನ ನಾನೇ ಕಂಡೇ' ಎಂಬ ಸ್ವಸಂದರ್ಶನದ ಕೃತಿಯಲ್ಲಿ ಕೆಲವೊಂದು ವಿಚಾರಗಳನ್ನು ತಾನೇ ಸ್ವಸಂದರ್ಶನದ ಮೂಲಕ ವ್ಯಕ್ತಪಡಿಸುತ್ತಾರೆ. ಆದರೆ ನಿರಂಜನರವರು 'ಮುಖತಃ' ಎಂಬ ಕೃತಿಯಲ್ಲಿ ಬೇರೆಯವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವ ಸಂದರ್ಶನದ ಮೂಲಕ ತಮ್ಮ ಅನೇಕ ವಿಚಾರಗಳನ್ನು ಚರ್ಚಿಸುತ್ತಾರೆ. ಇವರ ವಿಚಾರ ಸಾಹಿತ್ಯದ ಭಿನ್ನತೆಗಳಲ್ಲಿ ಇದು ಕೂಡ ಒಂದಾಗಿದೆ. ಹಾಗಾಗಿ ಪ್ರತ್ಯೇಕವಾಗಿ ಈ ಎರಡು ಕೃತಿಗಳನ್ನು ತೌಲನಿಕವಾಗಿ ಅಭ್ಯಸಿಸಲಾಗಿದೆ.

ಸಾರ್ಥಕ ಸಾಹಿತ್ಯ ಕೃತಿಯ 'ಕಾದಂಬರಿ ಮತ್ತು ಕಾದಂಬರಿಕಾರ' ಎಂಬುದು ಸ್ವ ಸಂದರ್ಶನ ಲೇಖನವಾಗಿದೆ. ಇಲ್ಲಿ ಕಾದಂಬರಿಯ ಬಗ್ಗೆ ಸ್ವವಿಮರ್ಶೆಯನ್ನು ಅ.ನ.ಕೃರವರು ಮಾಡುತ್ತಾರೆ. ಕನ್ನಡದಲ್ಲಿ ಕಾದಂಬರಿಯ ಹುಟ್ಟು ಬೆಳವಣಿಗೆಯ ಬಗೆಗೆ ಅಧ್ಯಯನ ನಡೆಯಬೇಕೆಂಬ ದೃಷ್ಟಿಕೋನದೊಂದಿಗೆ ಕಾದಂಬರಿಯಲ್ಲಿ ಸಂಪ್ರದಾಯ ಬದ್ಧತೆ, ಪ್ರಗತಿಶೀಲ ಕಾಲಘಟ್ಟದಲ್ಲಿ ಸಂಪ್ರದಾಯತೀತತೆಯು ಕಾದಂಬರಿಯ ಎರಡು ಲಕ್ಷಣಗಳಾಗಿ ಕಂಡುಬಂದಿವೆ. ಎರಡನೇ ಮಹಾಯುದ್ಧದಿಂದಾಗಿ ೧೯೪೨ರ ಕ್ವಿಟ್ ಇಂಡಿಯಾ ಚಳುವಳಿ ಮತ್ತು ೧೯೪೭ರ ಸ್ವಾತಂತ್ರ ಲಭಿಸಿದ ಕಾರಣದಿಂದಾಗಿ ಅದಕ್ಕೂ ಹಿಂದೆ ಇದ್ದ ಕಾದಂಬರಿಯ ಸ್ವರೂಪವನ್ನು ಬದಲಾಯಿಸಿತು. ವೈಯುಕ್ತಿಕದಿಂದ ಸಮಷ್ಟಿಯ ಕಡೆಗೆ ಕಾದಂಬರಿಯ ಪ್ರಕಾರವು ನಡೆಯಿತ್ತು. 'ನನ್ನನ್ನು ನಾನೇ ಕಂಡೆ' ಎಂಬ ಸ್ವಸಂದರ್ಶನದ ೧ರಲ್ಲಿ ನವೋದಯ ಸಾಹಿತಿಗಳ ಧೋರಣೆಯನ್ನು ಕುರಿತಂತೆ ಕನ್ನಡ-ಹಿಂದಿ ವಾದವನ್ನು ಎತ್ತಿದವರೇ ಹಿರಿಯರೆಂದು, ಅವರು ಹಿಂದಿಯೊಡನೆ ಒಪ್ಪಂದ ಮಾಡಿಕೊಂಡಿದ್ದರಿಂದ ಅಖಿಲ ಭಾರತ ಮಟ್ಟದ ಸಾಹಿತಿಗಳಾದರು, ಆದರೆ ಕನ್ನಡದ ಗತಿ ಹಾಳಾಯಿತ್ತೇಂದು ಅ.ನ.ಕೃ

ಭಾವಿಸುತ್ತಾರೆ. ರಾಜಕೀಯಕ್ಕೂ ಮತ್ತು ಸಾಹಿತ್ಯಕ್ಕೂ ಸಂಬಂಧವಿದೆ. ರಾಜಕೀಯ ಗುರಿ ಜನತೆಯ ಹಿತವನ್ನು ಕಾಪಾಡುವುದು. ಸಾಹಿತ್ಯದ ಉದ್ದೇಶ, ಗುರಿಯೂ ಕೂಡ ಜನತೆಯ ಹಿತವನ್ನೇ ಬಯಸುವುದಾಗಿದೆ. ಆದರೆ ನವೋದಯ ಕಾಲಘಟ್ಟದ ಸಾಹಿತಿಗಳು ಜರತಾರಿ ಪೇಟ ತೆಗೆದು ಜನಸಾಮಾನ್ಯರ ಮನೆ ಬಾಗಿಲಿಗೆ ಹೋದಾಗ ವಾಸ್ತವ ಸಮಾಜ ಕಾಣಲು ಸಾಧ್ಯ. ಅದರಿಂದಾಗಿ ಜನತೆಗಾಗಿ ಸಾಹಿತ್ಯ ಬರೆಯಲು ಸಾಧ್ಯವಾಗುತ್ತದೆ. ಪದ್ಯಕ್ಕಿಂತ ಗದ್ಯ ಉತ್ತಮವೆಂದು ಡಿ.ವಿ.ಜಿ. ಆಲೂರು ವೆಂಕಟರಾಯರು ಮಾಸ್ತಿ, ಎಸ್.ವಿ. ರಂಗಣ್ಣನವರು, ಶಿವರಾಮ ಕಾರಂತರ ಗದ್ಯಗಳು ಉತ್ತಮವೆಂಬ ನಿಲುವನ್ನು ಪ್ರಕಟ ಪಡಿಸುತ್ತಾರೆ.

ಅ.ನ.ಕೃ ರಾಜಕೀಯಕ್ಕೂ ಮತ್ತು ಸಾಹಿತ್ಯಕ್ಕೂ ಸಂಬಂಧವಿದೆ ಅದು ಜನತೆಯ ಹಿತವನ್ನು ಕಾಪಾಡುವುದು ಆಗಿದೆ ಎಂದು ತಿಳಿಸಿದರೆ ಅದಕ್ಕೆ ಸಂಬಂಧಿಸಿದಂತೆ ನಿರಂಜನರು ತಮ್ಮ 'ಮುಖತಃ' ಕೃತಿಯ ಡಿ.ಆರ್.ನಾಗರಾಜ್‌ರವರು ಮಾಡಿದ ಸಂದರ್ಶನ 'ಒಕ್ಕೂಟ, ಪ್ರಗತಿಪಂಥ ಇತ್ಯಾದಿ ನಿರಂಜನರ ವಿಚಾರಗಳು' ಎಂಬಲ್ಲಿ ಯುವ ಬರಹಗಾರರು ರಾಜಕೀಯ ಕಡೆಗೆ ಹೆಚ್ಚಿನ ಗಮನ ಕೊಡುತ್ತಿದ್ದಾರೆ. ಯಾವ ರಾಜಕೀಯ ಪಕ್ಷ ಸೇರಿದರು ಅದರ ಉರಿಯಲ್ಲಿ ತಮ್ಮ ಸೃಜನಶೀಲತೆಯನ್ನು ನಾಶ ಮಾಡುತ್ತದೆ. ಇದು ತನಗೂ ಅನುಭವವಾಗಿದೆಯೆಂದು, ಯುವ ಲೇಖಕರು ಜೀವನದ ಮುಖ್ಯವಾಹಿನಿಯ ಜೊತೆ ನಿಕಟವಾದ ಸಂಪರ್ಕವನ್ನು ಹೊಂದಿರಬೇಕೆಂದು ಅದು ಅವನಿಗೆ ಬಹಳ ಮುಖ್ಯವಾದುದು ಏಕೆಂದರೆ ಅದು ಅವರ ಬರವಣಿಗೆಯ ಮೇಲೆ ಪ್ರಭಾವಿಸುವ ಅಂಶವಾಗಿದೆ.

ಅ.ನ.ಕೃ ರವರು ಸಂದರ್ಶನ ೧ರಲ್ಲಿ ಶೈಲಿಯನ್ನು ಕುರಿತಂತೆ ಪಾಂಡಿತ್ಯ, ಪ್ರವಚನಗಳಿಂದ ಉತ್ತಮಶೈಲಿ ಇರುವವರ ಕೃತಿಗಳನ್ನು ನೋಡಿದರು ಅದು ಬರುವುದಿಲ್ಲ. ಅದು ಸ್ವಯಂಸ್ಫೂರ್ತಿಯಿಂದ ಬರುವಂತದ್ದು, ವಿಷಯ ಮತ್ತು ಅದಕ್ಕೆ ಅನುಗುಣವಾದ ಶ್ರದ್ಧೆಯಿದ್ದರೆ ಶೈಲಿ ತಾನಾಗಿ ರೂಪುಗೊಳ್ಳುತ್ತದೆ. ಅನುಭವದಲ್ಲಿ ಎರಡು ವಿಧ ಒಂದು ಮಾನಸಿಕ ಮತ್ತೊಂದು ದೈಹಿಕ. ಉತ್ತಮ ಲೇಖಕನಾದವನು ಎರಡನ್ನು ಸಾಧಿಸಲು ಪ್ರಯತ್ನಿಸುತ್ತಾನೆ. ಎಲ್ಲರಿಗೂ ಎಲ್ಲ ಅನುಭವಗಳು ಲಭಿಸುವುದಿಲ್ಲ. ಅವರು ಅದನ್ನು ದೊರಕಿಸಿಕೊಳ್ಳಲು ಪ್ರಯತ್ನಿಸಬೇಕು ಅನುಭವ ಇಲ್ಲದ ಬರವಣಿಗೆ ಹೆಚ್ಚು ಮಹತ್ವ ಪಡೆಯುವುದಿಲ್ಲ ಎಂದು ಚರ್ಚಿಸುತ್ತಾರೆ.

ಬರಗೂರು ರಾಮಚಂದ್ರಪ್ಪನವರು ಸಂದರ್ಶಿಸುವ ಸಂಕಲನದ ಭಾಗ ೧೪೮೦ರಲ್ಲಿ ಸಾಹಿತಿ ರಾಜಕೀಯ ಪಕ್ಷದ ಸದಸ್ಯನಾದರು ತಪ್ಪಿಲ್ಲ. ಕಮಿಟ್‌ಮೆಂಟಿಗೆ ಸಂಬಂಧಿಸಿದಂತೆ ದೀನ ದಲಿತರ ಹೋರಾಟ, ಜಾತಿ ಕಲಹ, ವರ್ಗ ಹೋರಾಟ, ಸಮಗ್ರ ಬದುಕಿನ ನೋವು ನಲಿವುಗಳಿವೆ ಇವೆಲ್ಲಾ ಒಳಗೊಂಡ ಬದುಕಿಗೆ ಕಮಿಟ್‌ಮೆಂಟ್ ಎಂದು ಉತ್ತರಿಸುತ್ತಾರೆ. ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ತಾತಗುಣಿ ಎಸ್ಟೇಟ್ ಕಾರ್ಮಿಕರ ಬದುಕಿನ ಬಗ್ಗೆ ಬರಗೂರು ಮೊದಲಾದವರು ಅಲ್ಲಿನ ಪ್ರತಿಷ್ಠಿತ ಶಕ್ತಿಗಳ ವಿರುದ್ಧ ಹೋರಾಡಿದ್ದು ಕೂಡ ಕಮಿಟ್‌ಮೆಂಟ್ ಆಗಿದೆ. ಜನಹೋರಾಟದಲ್ಲಿ ಸಾಹಿತಿ ಭಾಗಿಯಾಗಬೇಕೆಂದು ಆತ ಹೋರಾಟದಲ್ಲಿ ಭಾಗಿಯಾಗಿದ್ದರೆ ಅವನನ್ನು ಅಸಾಹಿತ್ಯಕ ಎಂದು ಕರೆಯುವರು. ಆದರೆ ಜನ ಹೋರಾಟದಲ್ಲಿ ಸಾಹಿತಿಯ ಭಾಗವಹಿಸುವುದರಿಂದ ಸಾಹಿತ್ಯ ಕೃತಿಗಳನ್ನು ಬರೆಯಲು ಹೊಸ ಹೊಸ ವಸ್ತು, ಅನುಭವ ರೂಪುಗೊಳ್ಳುತ್ತದೆ. ಹಳೆಯ ಮಾನದಂಡದಿಂದಲೇ ಸಾಹಿತ್ಯಕ ಮತ್ತು ಅಸಾಹಿತ್ಯಕ ಮೊದಲಾದವನ್ನು ಅಳೆಯಲಾಗುವುದಿಲ್ಲವೆಂದು ವಿಮರ್ಶೆಯ ಮಾನದಂಡ ಎನ್ನುವುದು ಜನತೆಯ ಹೋರಾಟಗಳ ಮಾನದಂಡವು ಆಗುತ್ತದೆ.

ಯಾರು ಜನಪರ ಹೋರಾಟಗಳಲ್ಲಿ ಭಾಗವಹಿಸಿ ಜನರ ಆಶಯಗಳನ್ನು ಹೊಂದಿದ್ದವರು ಅಂಥ ಸಾಹಿತಿಗಳಿಂದ, ವಿಮರ್ಶಕರಿಂದ ಹೊಸ ಮಾನದಂಡಗಳೇ ಸೃಷ್ಟಿಯಾಗುತ್ತವೆ.

ಅ.ನ.ಕೃರವರು ಕಾದಂಬರಿ ಮತ್ತು ಕಾದಂಬರಿಕಾರ ಎಂಬ ಸ್ವಸಂದರ್ಶನದಲ್ಲಿ ವಿಮರ್ಶಕರಾದವರು ಕಾದಂಬರಿಯನ್ನು ವಿಮರ್ಶಿಸುವುದಕ್ಕಿಂತ ಕಾದಂಬರಿಕಾರನನ್ನು ವಿಮರ್ಶಿಸುತ್ತಾರೆ ಎಂಬುದು ಅದು ಹಳೆಯ ಮಾನದಂಡವಾಗಿದೆ. ವಿಮರ್ಶೆಯ ಮಾನದಂಡ ಹೊಸದಾಗಿ ರೂಪು ಪಡೆಯಬೇಕಾದರೆ ಜನಪರ ಹೋರಾಟವನ್ನು ಭಾಗವಹಿಸಿದವರಿಂದ ಸಾಧ್ಯವೆಂದು ನಿರಂಜನರು ತಿಳಿಸುತ್ತಾರೆ. ಸಾಮಾಜಿಕ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಯಾರು ದಲಿತರು, ಶೋಷಿತರು, ತುಳಿತಕ್ಕೆ ಒಳಗಾದವರ ಬದುಕಿಗೋಸ್ಕರ ಹೋರಾಡುವುದೇ ಸಾಮಾಜಿಕ ಹೊಣೆಗಾರಿಕೆಯಾಗಿದೆ. ಹೀಗೆ ಅ.ನ.ಕೃ ಮತ್ತು ನಿರಂಜನರ ಸಂದರ್ಶನಗಳಲ್ಲಿ ಭಿನ್ನ ಭಿನ್ನ ವಿಚಾರಗಳನ್ನು ಪ್ರತಿಪಾದಿಸುತ್ತಾರೆ.

ಅ.ನ.ಕೃರವರ ಸಂದರ್ಶನ ೨ ಹಿಂದಿ ಸಮಸ್ಯೆ ಎಂಬಲ್ಲಿ ಇತರ ವಿಚಾರಗಳಲ್ಲಿ ಸ್ವಲ್ಪ ಮಾರ್ಪಾಟ್ಟಾಗಿದೆ. ಅನುಭವ, ವ್ಯಾಸಂಗ, ಕಾಲ ಪರಿವರ್ತನೆಗಳಿಂದ ನನ್ನ ವಿಚಾರಗಳಲ್ಲಿ ಬದಲಾವಣೆಯಾಗಿದೆ ಎಂದು ಒಪ್ಪುತ್ತಾರೆ. ರಾಜಕೀಯ ದೃಷ್ಟಿಯಿಂದ ಹಿಂದೂಸ್ಥಾನ ಒಂದು ರಾಷ್ಟ್ರವಾಗಿದೆ. ಆದರೆ ಸಾಂಸ್ಕೃತಿಕವಾಗಿ ಅದು ಸಾಧ್ಯವಿಲ್ಲ. ಆದ್ದರಿಂದ ಹಿಂದಿ ರಾಷ್ಟ್ರಕ್ಕೆ ಒಂದೇ ಭಾಷೆಯಾಗಲು ಸಾಧ್ಯವಿಲ್ಲ. ಸ್ವತಂತ್ರವಾಗಿರುವ ಅಮೇರಿಕಾ, ಇಂಗ್ಲೆಂಡ್, ರಷ್ಯಾ ಮೊದಲಾದ ದೇಶಗಳಲ್ಲಿ ಹಲವಾರು ಭಾಷೆಗಳಿವೆ. ಹಿಂದಿ ಪ್ರಚಾರ ಸಂಸ್ಥೆಗಳು ಬಂಡವಾಳಗಾರರ ಸಂಸ್ಥೆಗಳಾಗಿವೆ. ಕನ್ನಡ, ಹಿಂದಿ ನಡುವೆ ಸಾಂಸ್ಕೃತಿಕ ಬಾಂಧವ್ಯಗಳಾಗಬೇಕೇ ಹೊರತು ಹಿಂದಿಯನ್ನು ಒತ್ತಾಯಪೂರ್ವಕವಾಗಿ ಹೇರುವ ಪ್ರವೃತ್ತಿಯು ಸರಿಯಾದ ಕ್ರಮವಲ್ಲವೆಂದು, ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ರಂಗನಾಥ ದಿವಾಕರ್ ರಾವ್‌ರವರೇ ಹಿಂದಿ ಪ್ರಚಾರದಲ್ಲಿ ತೊಡಗಿದ್ದು ಎಷ್ಟರಮಟ್ಟಿಗೆ ಸರಿ ಎಂದು ಪ್ರಶ್ನಿಸುತ್ತಾರೆ.

ಸ್ವಾತಂತ್ರ್ಯ ಬಂದ ನಂತರ ಭಾರತಕ್ಕೆ ಹಿಂದಿ ಭಾಷೆಯೋ, ಕನ್ನಡವೋ ಅಥವಾ ಇಂಗ್ಲೀಷ್ ಎಂಬುದು ನಿರ್ಧಾರವಾಗುತ್ತದೆ ಏಕೆಂದರೆ ರಾಷ್ಟ್ರೀಯತೆ ಸಾಧಿಸಿದ ಮೇಲೆ ಭಾರತ ಜಗತ್ತಿನೊಂದಿಗೆ ನಿಕಟ ಸಂಬಂಧ ಹೊಂದಬೇಕು. ಆಗ ಜಗತ್ತಿನ ಭಾಷೆಯನ್ನು ಅಂದರೆ ಇಂಗ್ಲೀಷನ್ನು ನಾವು ಅವಲಂಬಿಸ ಬೇಕಾಗುತ್ತದೆ ಎಂದು ಭಾಷೆಯನ್ನ ಕುರಿತಂತೆ ದೂರದೃಷ್ಟಿತನದಲ್ಲಿ ಅ.ನ.ಕೃ ವಿವರಿಸುತ್ತಾರೆ.

ನಿರಂಜನರು ಸುಧಾ ಸಾಪ್ತಾಹಿಕ ಪ್ರಶ್ನಾವಳಿಗೆ ಉತ್ತರವಾಗಿ ೧೯೮೩ರಲ್ಲಿ ನೀಡಿದ ಸಂದರ್ಶನದಲ್ಲಿ ೧೯೮೦ ಈಚೆಗೆ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಎಡಪಂಥೀಯವನ್ನು ಕಾಣಬಹುದು. ಶಿಕ್ಷಣ, ಆಡಳಿತ, ವ್ಯವಹಾರಗಳಲ್ಲಿ ಭಾಷ ಪ್ರಶ್ನೆಗೆ ಮಾರ್ಕ್ಸ್‌ವಾದಿಗಳ ನಿಲುವಿಗಿಂತ ತನ್ನದೇಯಾದ ನಿಲುವಿದೆ. ಚಿಕ್ಕ ವಯಸ್ಸಿನಲ್ಲಿ ಸುಲಭವಾಗಿ ಭಾಷೆಗಳನ್ನು ಕಲಿಯುತ್ತಾರೆ. ಸಂವಹನಕ್ಕಾಗಿ ಎರಡು ಅಥವಾ ಮೂರು ಭಾಷೆಗಳನ್ನು ಕಲಿಯಬಹುದೆಂದು ಕರ್ನಾಟಕದಲ್ಲಿ ಕನ್ನಡ, ವಿಶಾಲವಾದ ಬಹು ಜನಾಂಗೀಯ ದೇಶವಾದ ಭಾರತದಲ್ಲಿ ಸಂಪರ್ಕಕ್ಕಾಗಿ ಹಿಂದೂಸ್ಥಾನಿ ಮತ್ತು ಅಂತರಾಷ್ಟ್ರೀಯದಲ್ಲಿ ಅಗತ್ಯವಾಗಿ ಇಂಗ್ಲೀಷನ್ನು ಕಲಿಯಬೇಕು. ಇವು ಮೂರು ಭಾಷೆಗಳು ಬೇಕೆಂದು ಪ್ರತಿಕ್ರಿಯಿಸುತ್ತಾರೆ. ಅ.ನ.ಕೃರವರ

ಧೋರಣೆಯಂತೆ ನಿರಂಜನರವರು ಸಂಪರ್ಕಕ್ಕಾಗಿ ಮೂರು ಭಾಷೆಗಳನ್ನು ಕಲಿಯಬೇಕೆಂದು ತಿಳಿಸುತ್ತಾರೆ.

ಅ.ನ.ಕೃರವರು ಸ್ವ ಸಂದರ್ಶನ ೪ರಲ್ಲಿ ಕೋಮುವಾರು ಭೂತ ಎಂಬ ಸ್ವಸಂದರ್ಶನದಲ್ಲಿ ಸರಕಾರವು ಎಲ್ಲ ಕೋಮುಗಳಿಗೆ ಸಮಾನ ಅವಕಾಶ ಕೊಡಬೇಕು. ಆದರೆ ಇಂದೂ ಒಂದೊಂದು ಜಾತಿಯವರು ತಾವು ಮೇಲಕ್ಕೆ ಬರಬೇಕೆಂದು ಉಳಿದವರನ್ನು ತುಳಿಯುವುದು ಕೋಮುವಾರು ಭೂತವಾಗಿದೆ. ಬ್ರಾಹ್ಮಣರು ಎಂದರೆ ಗಂಧಾಕ್ಷತೆ, ಮೂರು ನಾಮ, ದ್ವಾದಶ ಮುದ್ರೆಗಳನ್ನು ಹಾಕುವವರು ಬ್ರಾಹ್ಮಣರಾಗುವುದಿಲ್ಲ, ನಾಟಕದಲ್ಲಿ ಬ್ರಾಹ್ಮಣನ ಪಾತ್ರವಹಿಸುವವನು ಹೇಗೆ ಬ್ರಾಹ್ಮಣನಲ್ಲವೋ ಹಾಗೆಯೇ ಜೀವನ ನಾಟಕದಲ್ಲಿ ಪಾತ್ರವಹಿಸುವವರೆಲ್ಲ ಬ್ರಾಹ್ಮಣರಲ್ಲ. ಇಂದಿನ ಎಲ್ಲಾ ಜಾತಿಗಳು ವೈಶ್ಯ ಜಾತಿಯಾಗಿವೆ. ಏಕೆಂದರೆ ಎಲ್ಲ ಜಾತಿಗಳಲ್ಲಿ ಹಣ ಮಾಡುವ ಮನಃಸ್ಥಿತಿಯಿದೆ. ವೃತ್ತಿ ಪ್ರವೃತ್ತಿಗಳಿಂದ ಬ್ರಾಹ್ಮಣನಾಗಬೇಕೇ ಹೊರತು ಹುಟ್ಟಿನಿಂದಲ್ಲ ಎಂದು ಜಾತಿಯ ಬಗ್ಗೆ ಹೊಸ ಪರಿಕಲ್ಪನೆಯಲ್ಲಿ ಅ.ನ.ಕೃ ನೋಡುತ್ತಾರೆ. ಗಾಂಧೀ, ಚಂದ್ರಶೇಖರ್ ಅಜಾದ್, ನೆಹರೂ, ಮದನ್ ಮೋಹನ್ ಮಾಳವಿಯ ಇವರು ನಿಜವಾದ ಬ್ರಾಹ್ಮಣರೆಂದು ತಿಳಿಸುತ್ತಾರೆ.

ಕೋಮುವಾರು ಭೂತ ಕನ್ನಡ ನಾಡಿನಲ್ಲಿ ಬೆಳೆದು ಬ್ರಾಹ್ಮಣರು ಬ್ರಾಹ್ಮಣೇತರರ ನಡುವೆ ಸಹನೆಯಿಲ್ಲದೆ ಇವರಿಬ್ಬರನ್ನು ಸುಲಿದು ಗುಜರಾತಿಗಳು, ಮಾರ್ವಾಡಿಗಳು ಕನ್ನಡನಾಡಿನಲ್ಲಿ ಅಭಿವೃದ್ಧಿ ಹೊಂದುತ್ತಿದ್ದಾರೆ. ಕನ್ನಡ ನಾಡಿನಲ್ಲಿ ಒಂದು ಕೋಮಿನವರು ಏಳಿಗೆಯಾದರೆ ಇನ್ನೊಂದು ಕೋಮಿನವರು ಅದನ್ನು ಸಹಿಸುವುದಿಲ್ಲ. ಅದೇ ಹೊರಗಿನವರು ಬಂದು ಅಭಿವೃದ್ಧಿ ಹೊಂದಿದರೆ ಅದರ ಬಗ್ಗೆ ಏನು ಯೋಜಿಸುವುದಿಲ್ಲವೆಂದು ಚರ್ಚಿಸುತ್ತಾರೆ.

ವಿದ್ಯಾರ್ಥಿಗಳು ಎಂಬ ಸ್ವ-ಸಂದರ್ಶನದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ವಿದ್ಯಾರ್ಥಿ ಸಮೂಹವು ಪಾಲ್ಗೊಂಡಿದೆ. ಹಿಂದೆ ಶಾಲಾ-ಕಾಲೇಜುಗಳಲ್ಲಿ, ಸಂಘಗಳಲ್ಲಿ, ಕೋಮುವಾರು ಭೂತವಿತ್ತು. ಇಂದು ವಿದ್ಯಾರ್ಥಿಗಳು ಕಮ್ಯೂನಿಸ್ಟ್, ಮುಸ್ಲಿಂ ಲೀಗ್, ಹಿಂದೂ ಮಹಾಸಭಾ, ಕಾಂಗ್ರೆಸ್ ಪಕ್ಷ ಎಂದು ಹೇಳಿಕೊಳ್ಳುತ್ತಾರೆ. ಇದರಿಂದ ಯುವ ಸಮಾಜ ಹೊರಬರಬೇಕು ಇದರಿಂದ ಹೊರ ಬಂದು ಸಾಹಿತ್ಯವನ್ನು ಓದಿ ಈ ದೇಶಕ್ಕೆ, ಜೀವನಕ್ಕೆ ಕಾರ್ಲ್ ಮಾರ್ಕ್ಸ್ ಮತ್ತು ಏಂಜಲ್‌ರವರ ತತ್ವಶಾಸ್ತ್ರ ಒಗ್ಗುವುದೋ ಇಲ್ಲವೋ ವಿಚಾರ ಮಾಡಬೇಕು ಎಂದು ಸಲಹೆಯಲ್ಲಿ ನೀಡುತ್ತಾರೆ.

ನಿರಂಜನರು ಜಾತಿ ವ್ಯವಸ್ಥೆಯನ್ನು ಕುರಿತಂತೆ ಸುಧಾ ಸಾಪ್ತಾಹಿಕ ಪ್ರಶ್ನಾವಳಿಗೆ 'ಮಾರ್ಕ್ಸ್‌ನ ಮರಣ ಶತಾಬ್ಧಿ' ಸಂದರ್ಭದಲ್ಲಿ ನೀಡಿದ ಸಂದರ್ಶನದಲ್ಲಿ ಕಾಲ್ ಮಾರ್ಕ್ಸ್‌ನ ವಿಚಾರಧಾರೆಗಳು ಮಾನವನ ಇತಿಹಾಸದಲ್ಲಿ ಒಂದು ಹೊಸ ತಿರುವನ್ನು ನೀಡಿತ್ತು. ಅಮೇರಿಕಾದ ಮುಂದಾಳುತನದಲ್ಲಿ ಬಂಡವಾಳಶಾಹಿ ಗುಂಪು ಮತ್ತು ಸಮಾಜವಾದಿ ಗುಂಪಿನಿಂದ ಜಾಗತಿಕ ಮಟ್ಟದಲ್ಲಿ ಯಾವ ಕ್ಷಣದಲ್ಲಾದರೂ ನಾಶವಾಗಬಹುದು. ಜಾತಿವ್ಯವಸ್ಥೆ ಇರುವ ಭಾರತಕ್ಕೆ ಮಾರ್ಕ್ಸ್‌ನ ವಿಚಾರಧಾರೆಗಳು ಸರಿ ಹೊಂದುವುದಿಲ್ಲ ಎಂಬ ವಾದವಿದೆ. ಆದರೆ ಒಂದಲ್ಲ ಒಂದು ರೀತಿಯಲ್ಲಿ ಎಲ್ಲಾ ದೇಶಗಳಲ್ಲಿಯೂ ಜಾತಿ ವ್ಯವಸ್ಥೆ ಇದೆ. ಬಂಡವಾಳ ಬೆಳೆದಂತೆ ಜಾಗತೀಕರಣ ಹೆಚ್ಚಾದಂತೆ ಜಾತಿ ಖಾಸಗಿಯಾಗಿ, ವರ್ಗ ರೂಪ ಪಡೆಯಬಹುದೆಂಬ ತಿಳಿಸುತ್ತಾರೆ. ರಾಜಕೀಯ ಕಾರಣಗಳಿಂದಾಗಿ ಜಾತಿ ಪದ್ಧತಿಯು ತೋರಿಕೆಯಾಗಿ ಉಗ್ರ ಸ್ವರೂಪವನ್ನು ಪಡೆದಿದೆ. ರಾಜಕೀಯ ಕಾರಣವೇ ಜಾತಿ ಪದ್ಧತಿಯನ್ನು ಮೊದಲಿನಿಂದಲೂ ಪೋಷಿಸಿಕೊಂಡು ಬೆಳೆಸಿಕೊಂಡು ಬರುತ್ತಿದೆ. ಭಾರತದಲ್ಲಿ

ಜಾತಿಪದ್ಧತಿಯ ಪೋಷಣೆಗೆ ರಾಜಕಾರಣವೇ ಕಾರಣವೆಂದು ನಿರಂಜನರು ಗುರುತಿಸುತ್ತಾರೆ. ಅ.ನ.ಕೃ ಕೋಮುವಾರು ಭೂತ ಹೇಗೆಲ್ಲಾ ಬೆಳೆಯುತ್ತಿದೆ ಎಂಬುದನ್ನು ತಿಳಿಸುತ್ತಾರೆ. ಇದು ಕೂಡ ಅವರ ವಿಚಾರ ಸಾಹಿತ್ಯದ ಸಾಮ್ಯತೆಗಳಲ್ಲಿ ಒಂದಾಗಿದೆ.

ಸಂದರ್ಶನ ೭ ಕನ್ನಡ ಮಾಧ್ಯಮ ಎಂಬ ಸ್ವಸಂದರ್ಶನದಲ್ಲಿ ಅ.ನ.ಕೃ ರವರು ವಿಶ್ವವಿದ್ಯಾಲಯದಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿಯುವಂತೆ ನಿರ್ಣಯ ತೆಗೆದುಕೊಳ್ಳಬೇಕು. ಕನ್ನಡ ನಾಡಿನಲ್ಲಿರುವ ಕ್ರೈಸ್ತ, ಮುಸಲ್ಮಾನ ಯಾವುದೇ ಧರ್ಮದವರಾದವರು ಧರ್ಮ ಅವರ ವೈಯಕ್ತಿಕವಾಗಿದೆ. ಕನ್ನಡ ಎಂಬುದು ಸಾಮಾಜಿಕ ವಿಚಾರವಾಗಿದೆ. ಎಲ್ಲರೂ ಕನ್ನಡದ ಮೂಲಕ ವ್ಯವಹರಿಸಬೇಕೆಂದು ಕನ್ನಡ ನಾಡಿನಲ್ಲಿ ನಮ್ಮನ್ನು ಒಂದು ಜನಾಂಗವನ್ನಾಗಿ ಕುಲವಾಗಿ ಬೆಸೆಯುವುದು ಕನ್ನಡವಾಗಿದೆ. ಹಾಗಾಗಿ ಕನ್ನಡ ಚಳುವಳಿ ಎಂಬುದು ಕೇವಲ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಮಾತ್ರ ಸಂಬಂಧಪಟ್ಟಿದಲ್ಲ ಅದು ನಮ್ಮ ಬದುಕು, ವ್ಯಾಪಾರ, ಕೈಗಾರಿಕೆ, ಕೃಷಿ, ಸಂಬಂಧ ಎಲ್ಲವೂ ಅದರಲ್ಲಿ ಅಡಗಿದೆ ಎಂದು ವಿಶ್ಲೇಷಿಸುತ್ತಾರೆ.

ನಿರಂಜನರವರು ಪ್ರಜಾವಾಣಿ ಪ್ರಶ್ನಾವಳಿಗೆ ಉತ್ತರವಾಗಿ ಬರೆದ ಸಂದರ್ಶನ ೧೯೮೪ರಲ್ಲಿ ಇಂದಿರಾ ಕೊಲೆಯಾದ ದಿನ ರಾಜ್ಯೋತ್ಸವಕ್ಕೆ ಸಂಬಂಧಿಸಿದಂತೆ ಏಕೀಕರಣದ ಕನಸು ಸ್ವಾತಂತ್ರ್ಯ ಭಾರತವಾಗುವ ಕನಸಿನಷ್ಟೆ ಹಳೆಯದಾಗಿದೆ. ಅದನ್ನು ೧೯೦೫ರ ಬಂಗಾಳದ ವಿಭಜನೆಯಿಂದ ರೂಪು ಪಡೆದು ಕರ್ನಾಟಕ ಅಸ್ತಿತ್ವಕ್ಕೆ ಬಂದಿದೆ. ಆದರೆ ಕರ್ನಾಟಕ ವೈಜ್ಞಾನಿಕವಾಗಿ ಹೇಗಿರಬೇಕೆಂದು ಯೋಚಿಸಿದವರಲ್ಲಿ ಇತಿಹಾಸ ತಜ್ಞರಾದ ಸಾಲೆತ್ತೂರು, ಸಾಹಿತಿಯಾದ ಕೃಷ್ಣಕುಮಾರ್ ಕಲ್ಲೂರರವರು ಮಾತ್ರ. ಕರ್ನಾಟಕ ಎಂಬುದು ಭಾವನಾತ್ಮಕ ವಿಷಯವಾಗಿತ್ತೇ ಹೊರತು ವೈಜ್ಞಾನಿಕವಾಗಿ ಹೇಗೆ ರೂಪಿಸುವುದು ಎಂಬುದು ಜನತೆಗೆ, ನಾಯಕರಿಗೆ ತಿಳಿಯದಾಯಿತು. ಕರ್ನಾಟಕ ಏಕೀಕರಣದ ಕನಸು ಈಡೇರಿದರೂ ಅದರ ಸಫಲತೆ ಕನಸಾಗಿ ಉಳಿದಿದೆ ಎಂಬ ನಿಲುವನ್ನು ಪ್ರಕಟಪಡಿಸುತ್ತಾರೆ.

೧೯೫೬ರಲ್ಲಿ ಕರ್ನಾಟಕ ನಿಸರ್ಗ ಸಂಪದ್ಭರಿತವಾದ ರಾಜ್ಯವಾಗಿತ್ತು. ಆದರೆ ಸಂಪತ್ತಿನ ಬಳಕೆ ಅಸಮರ್ಪಕತೆಯಿಂದ ಕರ್ನಾಟಕದ ನಾಯಕರು ಮತ್ತು ಮಂತ್ರಿಗಳು ಸಂಪತ್ತನ್ನು ತಮ್ಮದಾಗಿಸಿಕೊಂಡರು. ಕೇಂದ್ರದಿಂದ ಕರ್ನಾಟಕಕ್ಕೆ ನಿರಂತರವಾಗಿ ನೀರಾವರಿ, ವಿದ್ಯುಚ್ಛಕ್ತಿ, ಪರಮಾಣು ವಿದ್ಯುಚ್ಛಕ್ತಿ, ಹೆದ್ದಾರಿ ನಿರ್ಮಾಣ, ವರಮಾನದ ಪಾಲು ಮೊದಲಾದ ಎಲ್ಲದರಲ್ಲಿಯೂ ಅನ್ಯಾಯವಾಗಿದೆ. ೧೯೮೦ರ ದಶಕದಲ್ಲಿ ಕನ್ನಡನಾಡಿನ ಸ್ಥಿತಿಗತಿಗಳನ್ನು ನವ ಕರ್ನಾಟಕದ ಅಭಿವೃದ್ಧಿ ಹೊಂದಿದ ಕರ್ನಾಟಕದ ಕನಸು ನನಸಾಗಲಿಲ್ಲವೆಂದು ಕರ್ನಾಟಕದ ಹಿನ್ನಲೆಯಲ್ಲಿ ವಿವರಿಸುತ್ತಾರೆ. ಅ.ನ.ಕೃ ಸ್ವಾತಂತ್ರ್ಯ ಪೂರ್ವದಲ್ಲಿ ಕನ್ನಡಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ, ಪ್ರಬಲವಾದ ಕನ್ನಡ ಚಳುವಳಿಯ ಮೂಲಕ ಕನ್ನಡವೆಂಬುದು ಕರ್ನಾಟಕದ ಅಸ್ಮಿತೆಯಾಗಬೇಕೆಂದು ಸ್ವಸಂದರ್ಶನದಲ್ಲಿ ಉಲ್ಲೇಖಿಸುತ್ತಾರೆ. ಆದರೆ ನವ ಕರ್ನಾಟಕವನ್ನು ಕಟ್ಟುವ ವಿಚಾರವಾಗಿ ನಿರಂಜನರು ಮಾತನಾಡುತ್ತಾರೆ. ಇದು ಕೂಡಾ ಅವರ ವಿಚಾರ ಸಾಹಿತ್ಯದ ಭಿನ್ನತೆಗಳಲ್ಲಿ ಒಂದಾಗಿದೆ.

ಸಾಹಿತ್ಯರತ್ನ ಎಂಬ ಸಂದರ್ಶನ ೮ರಲ್ಲಿ 'ಸಾಹಿತ್ಯ ರತ್ನ' ಕಾದಂಬರಿ ಪ್ರಕಟಿಸಿದ ವಿಚಾರದೊಂದಿಗೆ ತಮ್ಮ ವೈಯಕ್ತಿಕ ವಿಚಾರಗಳನ್ನು ಕುರಿತಂತೆ ತಿಳಿಸುತ್ತಾರೆ. ಅ.ನ.ಕೃರವರ ಕೃತಿಗಳಾದ 'ಜೀವನಯಾತ್ರೆ', 'ಉದಯರಾಗ', 'ಆಹುತಿ', 'ರಾಜಾ ರವಿವರ್ಮ', ಇತ್ಯಾದಿ ಗ್ರಂಥಗಳ ಮೇಲೆ ಟೀಕೆ ಬಂದಿದ್ದು ಅದಕ್ಕೆ ಸ್ವಸಂದರ್ಶನದಲ್ಲಿ ಆ ನನ್ನ ಕೃತಿಗಳ ಮೇಲೆ ಟೀಕೆಗಳು ಬರಲು ಮಡಿ

ಮನೋಭಾವದ ಜನಗಳಿಗೆ ನನ್ನ ಪುಸ್ತಕಗಳು ಹಿಡಿಸುವುದಿಲ್ಲ, ನಾನು ಬರೆದಿರುವುದು, ವಿಚಾರವಂತರಿಗಾಗಿ ಅದಕ್ಕೆ ಸಂಪ್ರದಾಯದವರು ಶ್ರಮಜೀವಿಗಳ ಪರವಾಗಿ ಬರೆಯದೆ ಪ್ರಗತಿಶೀಲ ಸಾಹಿತ್ಯದ ಮೇಲೆ ಈ ರೀತಿಯಾಗಿ ಟೀಕೆಗಳು, ಖಂಡನೆಗಳನ್ನು ಮಾಡುತ್ತಿದ್ದಾರೆ ಎಂದು ತಿಳಿಸುತ್ತಾರೆ.

'ಮುಖತಃ' ಕೃತಿಯ 'ಕುಳಕುಂದ ಶಿವರಾಯ – ನಿರಂಜನ ಸಂವಾದ' ೧೯೮೫ರಲ್ಲಿ ಬರೆದ ಸ್ವ ಸಂದರ್ಶನದಲ್ಲಿ ನಿರಂಜನರು ಚಿಕ್ಕ ವಯಸ್ಸಿನಲ್ಲಿಯೂ ಕಮ್ಯುನಿಸಂಗೆ ಒಳಗಾಗಿದ್ದೆ, ೧೯೮೭ರಲ್ಲಿ ಕೆಲವೊಂದು ಸಂದರ್ಶನ ಮಾಡಿ ಪ್ರಶ್ನೆ ಕೇಳಿ ಇಕ್ಕಟ್ಟಿಗೆ ಸಿಲುಕಿಸಿ, ತನಗೆ ಬೇಕಾದ ರೀತಿಯಲ್ಲಿ ಉತ್ತರ ಪಡೆಯುತ್ತಿದೆ. ಅದೇ ಮಾದರಿಯಲ್ಲಿ ಇಂದಿನ ಸಂದರ್ಶನಗಳು ಇವೆ. ೧೯೪೦ರಿಂದ ಇಂದಿನವರೆಗೂ ಕಿಶೋರ, ಕುಳಕುಂದ ಶಿವರಾಯ ನಾಮಾಂತರವು ಆಗಿದೆ. ಪ್ರಗತಿಶೀಲ ಲೇಖಕರ ಸಂಘಕ್ಕಾಗಿ ದುಡಿದ ನಾವು ಮುಂದೊಂದು ದಿನ ಯಾರದೋ ಪಿಎಚ್‌ಡಿ ಪ್ರಬಂಧದಲ್ಲಿ ದಾಖಲೆಯಾಗುತ್ತೇವೆ ಎಂಬ ಮಾತಿನಲ್ಲಿ ಅ.ನ.ಕೃ ಮತ್ತು ನಿರಂಜನರವರ ಈ ಸಂಘದಿಂದ ಹೋರಾಟ ಮಾಡಿದ್ದು ಸಾಮಾಜಿಕ ಚಳುವಳಿಗಾಗಿ ದುಡಿದಿದ್ದು ಇವೆಲ್ಲವನ್ನು ಸಮಾಜ ಗುರುತಿಸದಿದ್ದರು ಮುಂದೊಂದು ದಿನ ದಾಖಲೆಯಾಗಿ ಉಳಿಯುವ ಕೆಲಸದಲ್ಲಿ ಇವೆ ಎಂದು ವಿಶ್ಲೇಷಿಸುತ್ತಾರೆ.

ಸಂದರ್ಶನ ೫ರಲ್ಲಿ ಪ್ರಗತಿಶೀಲ ಎಂಬ ಸ್ವ ಸಂದರ್ಶನದಲ್ಲಿ ಅ.ನ.ಕೃರವರು ಜನತೆಗಾಗಿ ಬರೆದ ಸಾಹಿತ್ಯವಾಗಿ ಪ್ರಗತಿಶೀಲ ಸಾಹಿತ್ಯವಿದೆ. ಕುಮಾರವೆಂಕಣ್ಣ, ಮೈಸೂರಿನ ಅನಂತನಾರಾಯಣ, ಅರ್ಚಕ ವೆಂಕಟೇಶ, ಬಸವರಾಜ ಕಟ್ಟಿಮನಿ, ಶ್ರೀಕಂಠೇಶ್ವರನ್, ತ.ರಾ.ಸು ಮೊದಲಾದವರು ಸಾಹಿತ್ಯ ಸೇವೆಯ ಮೂಲಕ ಪ್ರಗತಿ ಶೀಲ ಸಾಹಿತ್ಯ ಬೆಳೆಯುತ್ತಿದೆ ಎಂದು ತಿಳಿಸುತ್ತಾರೆ.

ನಿರಂಜನರು ಸ್ವಸಂದರ್ಶನದಲ್ಲಿ ಸಂದರ್ಶನ ಎಂಬುದು ಪಶ್ಚಿಮದಿಂದ ಬಂದ ಸಾಹಿತ್ಯ ಪ್ರಕಾರವಾಗಿದೆ. ಅದನ್ನು ಇಲ್ಲಿ ಹೆಚ್ಚು ಬಳಸಿದವರು ಪತ್ರಕರ್ತರು. ಆದರೆ ಕಲೆ, ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡಿದವರನ್ನು ಸಂದರ್ಶಿಸುತ್ತಾರೆ. ಆ ಸಂದರ್ಶನದ ಪಾತ್ರವನ್ನು ವಿಮರ್ಶಕರು ವಹಿಸಿಕೊಂಡಿದ್ದು ಮತ್ತೊಂದು ವಿಷಯವಾಗಿದೆ. ರಾಜಕೀಯ ನಾಯಕರ ಸಂದರ್ಶನದಲ್ಲಿ ಪತ್ರಕರ್ತರ ಕೈಮೇಲಾಗಿದೆ. ಸಂದರ್ಶನದಲ್ಲಿ ಮೂರು ಮಾದರಿಗಳಿವೆ. ಮೊದಲನೆಯದು ಖಚಿತ ಪ್ರಶ್ನೆಗಳನ್ನು ಕೊಟ್ಟು ಉತ್ತರ ಪಡೆಯುವುದು, ಎರಡನೇಯದು ಗಂಭೀರ ಮಾತುಕತೆ ನಡೆಸುವುದು, ಮೂರನೇಯದು ಸಂದರ್ಶಕರು ಸಂದರ್ಶಿಸುವವರೂ ಆಳವಾದ ಪ್ರಶ್ನೆಗಳ ಮೂಲಕ ಬಗೆ ಬಗೆಯ ಉತ್ತರಗಳನ್ನು ಪಡೆದುಕೊಳ್ಳುವುದು. ಸಂದರ್ಶಕರಿಗೆ ಇರಬೇಕಾದ ಗುಣಗಳಲ್ಲಿ ಸಂದರ್ಶನಕ್ಕೆ ಒಳಪಟ್ಟವನೇ ಸುಳ್ಳು ಹೇಳಬಾರದು, ಸಂದರ್ಶಕ ಪೂರ್ವಗ್ರಹ ಪೀಡಿತನಾಗಿರಬಾರದು, ಪರಸ್ಪರ ಪ್ರೀತಿ ಇರಬೇಕು, ಟೇಪ್ ರೆಕಾರ್ಡರ್ ಮೂಲಕ ಮುದ್ರಿಸುವುದು, ಇಬ್ಬರು ಒಳ್ಳೆಯ ಮಾತುಗಾರರಾಗಿರಬೇಕು ಎಂದು ತಿಳಿಸುತ್ತಾರೆ. ತಮ್ಮನ್ನು ತಾವೇ ವಿಮರ್ಶಿಸಿಕೊಳ್ಳುವ ಮೂಲಕ ಸಂದರ್ಶನ ಎಂದರೇನು? ಸಂದರ್ಶನದ ಮಾದರಿಗಳು ಮತ್ತು ಸಂದರ್ಶಕನಿಗಿರಬೇಕಾದ ಗುಣಗಳನ್ನು ತಿಳಿಸುತ್ತಾರೆ.

ಅ.ನ.ಕೃರವರು ಸ್ವಸಂದರ್ಶನ ೩ರಲ್ಲಿ 'ಪಾಕಿಸ್ತಾನ' ಎಂಬಲ್ಲಿ ಧರ್ಮಧಾರಿತ ದೇಶಗಳಾಗಿ ಭಾರತ, ಪಾಕಿಸ್ತಾನ ಎಂದು ವಿಂಗಡಿಸುವುದು ಸರಿಯಾದ ಕ್ರಮವಲ್ಲ. ಮುಸಲ್ಮಾನರಿಗೆ ಹೆಚ್ಚಿನ ಸೌಲಭ್ಯವನ್ನು ನೀಡಬೇಕು, ಕಾಂಗ್ರೇಸ್ ಸಂಸ್ಥೆಯಲ್ಲಿಯೇ ದೇಶ ವಿಭಜನೆಗೆ ಸಂಬಂಧಿಸಿದಂತೆ ದ್ವಂದ್ವ

ನಿಲುವಿದೆ. ಹಿಂದೂ ಮುಸ್ಲಿಂರಲ್ಲಿ ಐಕ್ಯತೆಯನ್ನು ಸಾಧಿಸುವಲ್ಲಿ ಗಾಂಧೀಜಿಯವರು ಪರಾಜಿತರಾದರು. ಇಂದಿನ ಕಾಲದಲ್ಲಿಯೂ ಕೂಡಾ ಬಹಳ ಚರ್ಚಿತ ವಿಷಯಗಳಲ್ಲಿ ಆಹಾರಕ್ಕೆ ಸಂಬಂಧಿಸಿದಂತೆ ಗೋಭಕ್ಷಣೆಯನ್ನು ಕುರಿತಂತೆ ಅಂದೇ ಅ.ನ.ಕೃರವರು ಭಾರತೀಯ ಸಂಸ್ಕೃತಿಯ ಪ್ರತಿಪಾದಕರಾದ ಅವರು ಆರ್ಥಿಕ, ಆರೋಗ್ಯ, ರಾಷ್ಟ್ರೀಯ ದೃಷ್ಟಿಯಿಂದ ಒಪ್ಪಿಗೆಯಿಲ್ಲ. ಆದರೆ ಗೊಡ್ಡು ದನಗಳನ್ನು ತಿಂದರೆ ಅದರಿಂದಾಗುವ ನಷ್ಟವೇನು? ಎಂದು ಪ್ರಶ್ನಿಸುತ್ತಾರೆ. ಗೋಭಕ್ಷಣೆಯೆಂಬುದು ಹಿಂದು-ಮುಸ್ಲಿಂ ಸಂಘರ್ಷಕ್ಕೆ ಒಂದು ಕ್ಷುಲ್ಲಕ ಕಾರಣವಾಗಿದೆ. ಅದನ್ನು ಹೆಚ್ಚು ವೈಭವೀಕರಿಸುವ ಅಗತ್ಯತೆಯಿಲ್ಲ ಎಂದು ತಮ್ಮ ನಿಲುವನ್ನು ವ್ಯಕ್ತಪಡಿಸುತ್ತಾರೆ. ಆ ಮೂಲಕ ಆಹಾರ ಪದ್ಧತಿಯಲ್ಲಿ ಗೋಭಕ್ಷಣೆಯನ್ನು ಕುರಿತಂತೆ ಸ್ಪಷ್ಟವಾಗಿ ತಮ್ಮ ದೃಷ್ಟಿಕೋನವನ್ನು ದಾಖಲಿಸುತ್ತಾರೆ. ಅ.ನ.ಕೃ ಮತ್ತು ನಿರಂಜನರ ವಿಚಾರಸಾಹಿತ್ಯಕ್ಕೆ ಅಥವಾ ವಿಚಾರಗಳಲ್ಲಿ ಬಹಳ ಮುಖ್ಯವಾದ ಭಿನ್ನತೆ ಇದೆ ಆಗಿದೆ ಎನ್ನಬಹುದು. ನಿರಂಜನರು ಧರ್ಮಧಾರಿತವಾಗಿ ರಚನೆಗೊಂಡ ಪಾಕಿಸ್ತಾನದ ವಿಚಾರವಾಗಲೀ ಅಥವಾ ಗೋಭಕ್ಷಣೆಯ ವಿಚಾರವಾಗಲೀ ಎಲ್ಲೂ ಪ್ರತಿಕ್ರಿಯೆಯನ್ನು ನೀಡಿಲ್ಲ. ಆದರೆ ಅ.ನ.ಕೃರವರು ಸ್ವ ಸಂದರ್ಶನದಲ್ಲಿ ತಮ್ಮ ನಿಲುವನ್ನು ಖಚಿತವಾಗಿ ತಿಳಿಸುತ್ತಾರೆ. ಇದು ಅ.ನ.ಕೃರವರ ವಿಚಾರಸಾಹಿತ್ಯದ ಭಿನ್ನತೆಗಳಲ್ಲಿ ಬಹಳ ಮಹತ್ವವಾದ ಅಂಶವಾಗಿದೆ.

ಆಕಾಶವಾಣಿಯಲ್ಲಿ ನಿರಂಜನರೊಡನೆ ಎನ್ ಗಾಯತ್ರಿಯೊಂದಿಗೆ ನಡೆಸಿದ ಸಂದರ್ಶನದಲ್ಲಿ ಒಬ್ಬ ಸಾಹಿತಿಯ ಸೃಷ್ಟಿಸುವ ಯಾವುದೇ ಪಾತ್ರವಾಗಲೀ ಅಥವಾ ಸ್ತ್ರೀಪಾತ್ರವಾಗಲೀ ಆತನ ಅನುಭವ ಜ್ಞಾನ, ತಿಳುವಳಿಕೆ ಮೊದಲಾದ ಪ್ರಭಾವಿಸುವ ಅಂಶಗಳಾಗಿವೆ. ನಿರಂಜನರವರ ಕೃತಿಗಳಿಗೆ ಪ್ರೇರಣೆಯಾಗುವುದು ಅವರ ಸುತ್ತಮುತ್ತಲಿನ ಪರಿಸರದ ಬದುಕು 'ಬಹಿಷ್ಕೃತೆ' ಕಥೆಗೆ ಸ್ವಂತ ತಾಯಿಯಿಂದ ಪ್ರೇರಣೆ ಪಡೆದಿದ್ದು, ಹೀಗೆ ಲೇಖಕ ವಸ್ತುವಿನಲ್ಲಿ ಭಿನ್ನತೆ ಬರಲು ಕಾರಣ ಆತ ಜೀವನವನ್ನು ನೋಡುವ ದೃಷ್ಟಿಯಾಗಿದೆ. 'ವಿಮೋಚನೆ' ಕಾದಂಬರಿಯಲ್ಲಿ ಎಲ್ಲಾ ಪಾತ್ರಗಳ ಮೇಲೆ ಅನುಕಂಪವಿದೆ, ಅನುಕಂಪ ಎಂಬುದು ಕರುಣೆಯಲ್ಲ ನಿರಂಜನರ ದೃಷ್ಟಿಯಲ್ಲಿ ರೋಷವನ್ನು ಉಕ್ಕಿಸುವುದು ಆಗಿದೆ.

ಮಾರ್ಕ್ಸ್‌ವಾದಿ ಎಂದು ಎಲ್ಲರು ನಿರಂಜನರವರನ್ನು ಕರೆಯುತ್ತಾರೆ. ಅದಕ್ಕೆ ಉತ್ತರವಾಗಿ ಈ ಸಂದರ್ಶನದಲ್ಲಿ ಇತರ ತತ್ವಗಳಂತೆ ಮಾರ್ಕ್ಸ್‌ವಾದವು ನನ್ನ ಮೇಲೆ ಪ್ರಭಾವ ಬೀರಿದೆ. ಗಾಂಧೀವಾದವು ಇದಕ್ಕಿಂತ ಮುಂಚೆ ಪ್ರಭಾವಿಸಿತ್ತು. ನಂತರ ನೆಹರೂರವರ ಸಮಾಜವಾದವು ಇತ್ತು. ಆದರೆ ಅದಕ್ಕೆ ಹಿಂದೆಯೇ ಕ್ರಾಂತಿಕಾರಿ ಮಾರ್ಕ್ಸ್‌ನ ಸಾಹಿತ್ಯ ಬಂದು ಸಮಾಜವನ್ನು ತಿಳಿಯಲು, ಆಂತರೀಕ ಸಂಘರ್ಷಗಳು ಮತ್ತು ಸಮಾಜದ ವಿವಿಧ ಜನರು ಏಕೆ ಹೀಗೆ ವರ್ತಿಸುತ್ತಾರೆ ಎಂದು ತಿಳಿಯಲು ಸಹಕಾರಿಯಾಗುತ್ತೆಂದು ತಮ್ಮ ಮಾರ್ಕ್ಸ್‌ವಾದಿ ನಿಲುವಿಗೆ ಸ್ಪಷ್ಟನೆಯನ್ನು ಕೊಡುತ್ತಾರೆ.

ಅ.ನ.ಕೃರವರು ತಮ್ಮ ವಿಚಾರ ಸಾಹಿತ್ಯದಲ್ಲಿ ಕಾದಂಬರಿಯಲ್ಲಿ ಆದರ್ಶವಾದ ಮತ್ತು ಸಾಹಿತ್ಯದಲ್ಲಿ ವಾಸ್ತವಿಕತೆಯನ್ನು ಚರ್ಚಿಸುತ್ತಾರೆ. ಆದರೆ ನಿರಂಜನರವರು ಆದರ್ಶವಾದ ಮತ್ತು ವಾಸ್ತವಿಕತೆಯನ್ನು ಸೃಜನಶೀಲ ಬರವಣಿಗೆಯಲ್ಲಿ ಹೇಗೆ ನಿರ್ವಹಿಸುತ್ತೀರಾ? ಎಂಬ ಪ್ರಶ್ನೆಗೆ ಆದರ್ಶವನ್ನು ವಾಸ್ತವಿಕತೆಯೊಂದಿಗೆ ಪಾತ್ರಗಳನ್ನು ಚಿತ್ರಿಸಲು ಪ್ರಯತ್ನಿಸುತ್ತೇನೆಂದು, ವಾಸ್ತವತೆಯನ್ನು ಬಿಡಲು ಸಾಧ್ಯವಿಲ್ಲ. ಆದರ್ಶವೆಂಬುದು ಸಾಧಿಸಲಾಗದು ಎಂದು ಅರ್ಥೈಸಬಾರದು. ಅದೊಂದು ರೀತಿಯ ಮಾದರಿಯಾಗಿದೆ. ಉದಾಹರಣೆಗೆ, 'ಮೃತ್ಯುಂಜಯ' ಕಾದಂಬರಿಯಲ್ಲಿ ಮಹಾರಾಣಿ ಪಾತ್ರವು ಮಗನಿಗೆ ಸಿಂಹಾಸನ ಕೊಡಿಸಲು ಗಂಡನನ್ನು ತ್ಯಾಗ ಮಾಡಲು, ಮಹಾ ಅರ್ಚಕನೊಂದಿಗೆ

ರಾಜಿಯಾಗಿ ತನ್ನ ಬಲಿಯನ್ನು ಕೊಡಲು ಸಿದ್ಧವಾದುದು ಕೂಡಾ ಆದರ್ಶದೊಂದಿಗೆ ವಾಸ್ತವಕತೆಯನ್ನು ಚಿತ್ರಿಸಿರುವುದನ್ನು ಚರ್ಚಿಸುತ್ತಾರೆ.

ವಾಸ್ತವಕ್ಕೆ ಸಂಬಂಧಿಸಿದಂತೆ ನಿರಂಜನರವರು 'ನಂದಗೋಕುಲ' ಕಾದಂಬರಿಯಲ್ಲಿ ಹುಡುಗರೆಲ್ಲ ಸೇರಿ ವೇಶ್ಯೆಯನ್ನು ಓಡಿಸುವುದು. ಇಂತಹ ಹೆಣ್ಣೊಂದು ತಮ್ಮ ನಡುವೆ ವಾಸಿಸಲು ಮಧ್ಯಮ ವರ್ಗದ ಜನರ ಮೌಲ್ಯ ಕುಸಿಯುತ್ತದೆ ಎಂಬ ವರ್ತನೆ ಇದು ಆದರ್ಶವಲ್ಲ, ವಾಸ್ತವವಾಗಿದೆ. ಹಾಗೆಯೇ ಬನಶಂಕರಿ ಕಾದಂಬರಿಯಲ್ಲಿ ಬರುವ ಕಥಾನಾಯಕಿ ಎಂಟು ವರ್ಷದ ಬಾಲವಿಧವೆ, ಅಂದು ಪುನರ್‌ವಿವಾಹದ ಸಂದರ್ಭವಿಲ್ಲದೇ ಇರುವುದು, ಆಗ ಕೆಲವರು ಅವಳನ್ನು ಕೂಡಿಕೆ ಮಾಡಿಕೊಳ್ಳುವುದು ನಂತರ ಬಿಟ್ಟು ಹೋಗುವವರು, ಮತ್ತೆ ಕಟ್ಟಿಕೊಳ್ಳುವವರು ಆದರೆ ಅದು ಮಧ್ಯಮ ವರ್ಗದಲ್ಲಿ ಸುಲಭವಾದುದಲ್ಲ, ಇವೆಲ್ಲಾ ವಾಸ್ತವ ಆಗಿದೆ ಹೊರತು ಆದರ್ಶವಲ್ಲ.

'ಸ್ಮರಣೆಯೊಂದೆ ಸಾಲದೇ' ಕಥೆಯಲ್ಲಿರುವ ಮೀನಾಕ್ಷಿ ಕೂಡಾ ಒಬ್ಬ ಹಾಡುಗಾರಿಕೆಯವರು, ಅವಳ ಸಂಗೀತವನ್ನು ಮೆಚ್ಚಿ ಆತ ಮದುವೆಯಾಗುತ್ತಾನೆ. ಮಕ್ಕಳು ಚಿಕ್ಕವಾಗಿರುವಾಗಲೇ ಆತ ಅಪಘಾತದಲ್ಲಿ ಸಾಯುತ್ತಾನೆ. ಆಗ ಬದುಕು ಒಡ್ಡಿದ ಸವಾಲನ್ನು ಎದುರಿಸಿ ತನ್ನಲ್ಲಿದ್ದ ಪ್ರತಿಭೆ, ವಿದ್ವತ್ತಿನಿಂದ ಸಂಗೀತದ ಶಿಕ್ಷಕಿಯಾಗುತ್ತಾಳೆ. ಆದರೆ ಎಲ್ಲರೂ ಭಾವಿಸಬಹುದು ಮದುವೆ ಮುಂಚೆಯೇ ಮಾಡಬಹುದಿತ್ತು. ಆದರೆ ಬದುಕು ಮದುವೆಯ ನಂತರ ನಿರ್ಧರಿಸುತ್ತದೆ ಎಂಬ ವಾಸ್ತವಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಸಾಹಿತ್ಯವು ಬದಲಾಗಬೇಕಾದರೆ ಮೊದಲು ಸಮಾಜವು ಬದಲಾಗಬೇಕು. ಜನರ ಅಭಿರುಚಿ ಬದಲಾಗಬೇಕು. ಹಾಗೇ ಬದಲಾದಾಗ ಸಾಹಿತ್ಯವು ಕೂಡಾ ಬದಲಾಗುತ್ತದೆ. ಆದರೆ ಇದು ಕಾಯಿಲೆ ಬಿದ್ದಿರುವ ಸಮಾಜವೆಂದು, ಇದಕ್ಕೆ ಪಾರ್ಶ್ವವಾಯು ಬಡಿದಿದೆ. ಇಂಥ ಸಮಾಜವಿರುವಾಗ ಉತ್ತಮ ಕಾದಂಬರಿಗಳು ಹೇಗೆ ಮೂಡಲು ಸಾಧ್ಯ. ಸಾಹಿತ್ಯಕ್ಕೆ ಪ್ರೇರಣೆ ನೀಡಿರುವುದೇ ಸಮಾಜ, ಸಮಾಜವೇ ಸ್ವಾಸ್ಥ್ಯವಿಲ್ಲದೆ ನರಳುವಾಗ ಸಾಹಿತ್ಯ ಹೇಗೆ ಸ್ವಾಸ್ಥ್ಯವನ್ನು ಬೆಳೆಸಲು ಸಾಧ್ಯ ಎಂದು ಸಾಹಿತ್ಯ ಮತ್ತು ಸಮಾಜದ ಧೋರಣೆಯಲ್ಲಿ ಸಂಬಂಧವಿದೆ ಎಂಬುದನ್ನು ಚರ್ಚಿಸುತ್ತಾರೆ.

ಅ.ನ.ಕೃ ಮತ್ತು ನಿರಂಜನರವರ ಸಂದರ್ಶನದ ವಿಭಾಗಗಳಲ್ಲಿಯೂ ಕೂಡಾ ಸಾಮ್ಯತೆಗಿಂತ ಭಿನ್ನತೆಯನ್ನು ಕಾಣಬಹುದು. ಅ.ನ.ಕೃರವರು ತಮ್ಮ ಸ್ವ ಸಂದರ್ಶನದಲ್ಲಿ ತಮ್ಮನ್ನು ತಾನೇ ಸಂದರ್ಶಿಸಿಕೊಂಡರೆ, ನಿರಂಜನರವರು ಬೇರೆ ಸಂದರ್ಶಕರ ಪ್ರಶ್ನೆಗಳಿಗೆ ತಮ್ಮದೆಯಾದ ವಿಚಾರಗಳನ್ನು ಮಂಡಿಸುತ್ತಾರೆ. ಪ್ರಗತಿಶೀಲ ಕಾಲಘಟ್ಟದ ಪ್ರಮುಖ ಬರಹಗಾರರಾದ ಅ.ನ.ಕೃ ಮತ್ತು ನಿರಂಜನರವರ ವಿಚಾರಸಾಹಿತ್ಯದಲ್ಲಿ ಸಾಮ್ಯತೆಗಿಂತ ಭಿನ್ನತೆಯೇ ಹೆಚ್ಚಾಗಿ ಗುರುತಿಸಬಹುದು.

ಕೊನೆ ಟಿಪ್ಪಣಿಗಳು

೧. ವೆಂಕಟೇಶ್ ಜಿ. ಮಲ್ಲೇಪುರಂ (ಸಂ), ತೌಲನಿಕ ಸಾಹಿತ್ಯಾಧ್ಯಯನ, ಪುಟ ೪ (ಲೇಖನ: ಸಿ. ಎನ್. ರಾಮಚಂದ್ರನ್, ಪ್ರವೇಶ: ತೌಲನಿಕ ಅಧ್ಯಯನ).

ಅಧ್ಯಾಯ ೮

ಸಮಾರೋಪ

ಇಲ್ಲಿಯವರೆಗೆ ಬೇರೆ ಬೇರೆ ಅಧ್ಯಾಯಗಳಲ್ಲಿ ಅ. ನ. ಕೃ. ಮತ್ತು ನಿರಂಜನವರ ವಿಚಾರ ಸಾಹಿತ್ಯ – ತೌಲನಿಕ ಅಧ್ಯಯನ ಎಂಬ ನಿಬಂಧದಲ್ಲಿ ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯದ ತಾತ್ವಿಕತೆ ಮತ್ತು ಸ್ವರೂಪದೊಂದಿಗೆ ವಿಚಾರ ಸಾಹಿತ್ಯ, ವಿಚಾರವಾದ ಬೆಳೆದು ಬಂದ ಬಗೆ, ವಿಚಾರ ಸಾಹಿತ್ಯದ ಸಾಮಾನ್ಯ ಸ್ವರೂಪವನ್ನು ಚರ್ಚಿಸಲಾಗಿದೆ. ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯದಲ್ಲಿ ವ್ಯಕ್ತವಾಗುವ ತಾತ್ವಿಕತೆ ಮತ್ತು ಸ್ವರೂಪವನ್ನು ಸುದೀರ್ಘವಾಗಿ ಚರ್ಚಿಸಲಾಗಿದೆ. ಇವರಿಬ್ಬರ ವಿಚಾರ ಸಾಹಿತ್ಯದಲ್ಲಿ ಸಾಹಿತ್ಯ ಮತ್ತು ಸಮಾಜ, ಶೀಲ–ಅಶ್ಲೀಲ ವಿವೇಚನೆ, ಸ್ತ್ರೀ ಮತ್ತು ಜಾತಿಯ ವಿಚಾರಗಳೊಂದಿಗೆ ಕಲೆ, ಸಂಸ್ಕೃತಿ ಹಾಗೂ ನಾಡು ನುಡಿಯ ಚಿಂತನೆಗಳು, ವ್ಯಕ್ತಿ ಚಿತ್ರಣ ಮತ್ತು ಜೀವನ ಚರಿತ್ರೆ ಹಾಗೂ ಸಂದರ್ಶನಗಳ ವಿಚಾರಗಳಲ್ಲಿ ಕಂಡು ಬರುವ ಸಾಮ್ಯತೆ ಮತ್ತು ಭಿನ್ನತೆಗಳನ್ನು ಚರ್ಚಿಸಲಾಗಿದೆ. ಈ ಎಲ್ಲಾ ಚರ್ಚೆಗಳನ್ನು ಪ್ರಸ್ತುತ ನಿಬಂಧದಲ್ಲಿ ವಿಷಯಕ್ಕೆ ಪೂರಕವಾಗಿ ಚರ್ಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಮಹಾಪ್ರಬಂಧದ ಪ್ರಮುಖ ಫಲಿತಗಳನ್ನು ಈ ಕೆಳಗಿನಂತೆ ನೋಡಬಹುದು.

ಅ. ನ. ಕೃ. ಮತ್ತು ನಿರಂಜನರವರ ಬಗೆಗಿನ ಎಲ್ಲಾ ಅಧ್ಯಯನಗಳನ್ನು ಗಮನಿಸಿದ ನಂತರ ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯದಲ್ಲಿ ಭಿನ್ನವಾದ ತಾತ್ವಿಕತೆ ಇವರಿಬ್ಬರು ಹೊಂದಿದವರಾಗಿದ್ದಾರೆ. ಅ. ನ. ಕೃ. ಮತು ನಿರಂಜನರವರ ವಿಚಾರ ಸಾಹಿತ್ಯದಲ್ಲಿ ಸೈದ್ಧಾಂತಿಕ ಭಿನ್ನತೆಯಿದೆ. ಅ. ನ. ಕೃ. ಗಾಂಧಿವಾದಿಯಾಗಿ, ಕಾಂಗ್ರೆಸ್ ಪಕ್ಷದ ಪರವಾಗಿ ಬೆಂಬಲಿಸಿದರೆ, ನಿರಂಜನರವರು ಕಮ್ಯೂನಿಸ್ಟ್ ಸೈದ್ಧಾಂತಿಕತೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾರೆ. ಅ. ನ. ಕೃ. ರವರಲ್ಲಿ ಕೆಲವೊಂದು ಸೈದ್ಧಾಂತಿಕ ಅಸಂಬದ್ಧತೆಯನ್ನು ನಿರಂಜನರವರು ಗುರುತಿಸಿ ಪ್ರಶ್ನಿಸುತ್ತಾರೆ. ಒಮ್ಮೆ ಅ. ನ. ಕೃ. ಕಾಂಗ್ರೆಸ್ ಪರವಾಗಿ ಮಾತನಾಡಿ ಮತ್ತೊಮ್ಮೆ ಕಾಂಗ್ರೆಸ್‌ಗೆ ವಿರುದ್ಧವಾದ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ. ಒಮ್ಮೆ ಚೀನಾದ ಕೋಮಿನ್ ಟಂಗ್‌ನ ಪಕ್ಷದ ರೀತಿಯಲ್ಲಿ ರೈತರು ಸಂಘಟಿತರಾಗಬೇಕು ಎಂದು ಹೇಳಿದರೆ, ಮತ್ತೊಮ್ಮೆ ಚೀನಾ ರಷ್ಯಾದ ಮಾದರಿಗಳೂ ಭಾರತಕ್ಕೆ ಬೇಡವೆಂದು ತಿಳಿಸುತ್ತಾರೆ. ನಿರಂಜನರವರು ಚೈನಾದಲ್ಲಿ ಕಮ್ಯೂನಿಸ್ಟ್ ಚಿಂತನೆಗಳಿಗಿಂತ ಮಾವೊ ತ್ಸೆ ತುಂಗನ ಚಿಂತನೆಗಳೇ ಹೆಚ್ಚು ಪ್ರಭಾವಿಸಿವೆ. ಆ ರೀತಿಯ ಚೀನಾದ ಮಾದರಿ ತಮಗೆ ಅವಶ್ಯಕವಿಲ್ಲವೆಂದು ಚರ್ಚಿಸುತ್ತಾರೆ. ಅ. ನ. ಕೃ. ವಿಚಾರಗಳಲ್ಲಿ ಸೈದ್ಧಾಂತಿಕ ಖಚಿತತೆ ಕಾಣುವುದಿಲ್ಲ. ಆದರೆ ನಿರಂಜನರವರ ವಿಚಾರ ಸಾಹಿತ್ಯದಲ್ಲಿ ಸೈದ್ಧಾಂತಿಕ ಖಚಿತತೆಯಿದೆ.

ನಿರಂಜನರು ನೆಹರೂರವರ ವಿಚಾರಧಾರೆಗಳಿಗೆ, ಗಾಂಧೀಜಿಯವರ ವಿಚಾರಗಳಿಗೆ ಮೊದಲು ಪ್ರಭಾವಿತರಾಗಿದ್ದರೂ ಕಮ್ಯೂನಿಸ್ಟ್ ಸಾಹಿತ್ಯ, ವಿಚಾರಗಳು ಸಮಾಜವನ್ನು ಗ್ರಹಿಸಲು ಸಾಧ್ಯವಾದ ಬಗೆಯನ್ನು ಚರ್ಚಿಸುತ್ತಾರೆ. ಕಮ್ಯೂನಿಸ್ಟ್ ಚಿಂತನೆಗಳನ್ನು ಅಲ್ಲಗಳೆಯುವ ಅ. ನ. ಕೃ. ರವರು ಈ ಚಿಂತನೆಗಳು ಭಾರತದ ಉಪನಿಷತ್ತು ಮತ್ತು ಅರಣ್ಯಕಗಳಲ್ಲಿ ಅಡಗಿದೆ. ಹಾಗಾಗಿಯೇ ನಮ್ಮ ಭಾರತೀಯ ಸಮಾಜದಲ್ಲಿ ಎಂದು ವರ್ಗ ಸಂಘರ್ಷಗಳು ನಡೆದಿಲ್ಲ ಎಂದು ಚರ್ಚಿಸುತ್ತಾರೆ.

ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯವನ್ನು ಅವಲೋಕಿಸಿದಾಗ ಸಾಮ್ಯತೆಗಿಂತ ಭಿನ್ನತೆಯನ್ನು ಹೆಚ್ಚು ಗುರುತಿಸಬಹುದು. ಅ. ನ. ಕೃ. ರವರಿಗೆ ಸ್ಥಾಪಿತ ಸಂಸ್ಕೃತಿಯ ಪರ ಒಲವು ಹೆಚ್ಚು ಇದೆ. ಆದರೆ ನಿರಂಜನರವರಲ್ಲಿ ಸ್ಥಾಪಿತ ಸಂಸ್ಕೃತಿಯ ವಿರೋಧದ ನಿಲುವು ಕಾಣಿಸುತ್ತದೆ. ಭಾರತೀಯ ಸಂಸ್ಕೃತಿಯ ಆರಾಧಕರಾಗಿ ಅ. ನ. ಕೃ. ಕಾಣುತ್ತಾರೆ. ಆದರೆ ನಿರಂಜನರವರು ಭಾರತೀಯ ಸಂಸ್ಕೃತಿಯ ಆರಾಧಕರಾಗಿರದೆ ಆ ಸಂಸ್ಕೃತಿಯ ಉದಾತ್ತ ಅಂಶಗಳಾದ ಸೋದರತೆ, ಪರಮತ ಸಹಿಷ್ಣುತೆ ಇವುಗಳು ಭಾರತ ಮಾತ್ರವಲ್ಲದೇ ಪ್ರಪಂಚದಾದ್ಯಂತ ಪಸರಿಸಲಿ ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಕಲೆ ಮತ್ತು ಸಂಸ್ಕೃತಿಯಲ್ಲಿ ಭಾರತೀಯ ಶ್ರೇಷ್ಠತೆಯನ್ನು ತಮ್ಮ ಸಾಹಿತ್ಯದಲ್ಲಿ ಅ. ನ. ಕೃ. ಪ್ರತಿಪಾದಿಸಿದರೆ ಶ್ರೇಷ್ಠವಾದ ಅಂಶಗಳು ಬದುಕಿಗೆ ಅಳವಡಿಸುವಂತಾಗಲಿ ಎಂಬ ಭಾವನೆ ನಿರಂಜನರಲ್ಲಿ ವ್ಯಕ್ತವಾಗುತ್ತದೆ. ಕಮ್ಯೂನಿಸ್ಟ್ ಚಿಂತನೆಯ ಸಮಾಜವಾದಿ ನೆಲೆಗಳಿಂದ ವರ್ಗರಹಿತ, ಜಾತಿಮುಕ್ತ ಸಮಾಜವನ್ನು ನಿರ್ಮಾಣ ಮಾಡಬಹುದೆಂಬ ನಿಲುವು ನಿರಂಜನರದ್ದು.

ಅ. ನ. ಕೃ. ರವರು ಕಮ್ಯೂನಿಸ್ಟ್ ಚಿಂತನೆಗೆ ಒಳಗಾದವರನ್ನು ವ್ಯಕ್ತಿವಾದಿಗಳು ಎಂದು ತಿಳಿಸುತ್ತಾರೆ. ಆದರೆ ಅವರ ವಿಚಾರ ಸಾಹಿತ್ಯವನ್ನು ಗಮನಿಸಿದಾಗ ಅ. ನ. ಕೃ. ರವರೇ ವ್ಯಕ್ತಿವಾದವನ್ನು ಒಪ್ಪುವವರಾಗಿದ್ದಾರೆ. ಕರ್ನಾಟಕ ಏಕೀಕರಣ ಸಾಧಿಸಲು ತಮಿಳುನಾಡಿನ ರಾಜಾಜಿ, ತೆಲುಗಿನ ಪ್ರಕಾಶಂ, ಮಹಾರಾಷ್ಟ್ರದ ಶಂಕರ್ ರಾವ್ ದೇವ್‌ರವರ ರೀತಿಯಲ್ಲಿ ನಾಯಕರು ಕನ್ನಡ ನಾಡಿಗೆ ಬೇಕಾಗಿದ್ದಾರೆ ಎಂದು ವ್ಯಕ್ತಿವಾದವನ್ನು ಬೆಂಬಲಿಸುತ್ತಾರೆ. ಆದರೆ ನಿರಂಜನರವರು ವ್ಯಕ್ತಿವಾದವನ್ನು ಒಪ್ಪದೇ ಸಮಷ್ಟಿವಾದವನ್ನು ಒಪ್ಪುತ್ತಾರೆ. ಪೊಟ್ಟಿ ಶ್ರೀ ರಾಮುಲುರವರಿಂದ ಆಂಧ್ರ ಪ್ರಾಂತ್ಯ ರಚನೆ ಆಗಿದೆ ಎಂಬ ವಿಚಾರವನ್ನು ತೆಗೆದುಕೊಂಡು ಇಡೀ ಸಮುದಾಯ ಮಾಡಿದ ಕೆಲಸವನ್ನು ಏಕ ವ್ಯಕ್ತಿಯಿಂದ ಆಗಿದೆ ಎಂಬುದನ್ನು ತಿರಸ್ಕರಿಸುತ್ತಾರೆ. ಪೊಟ್ಟಿ ಶ್ರೀ ರಾಮುಲುರವರ ತ್ಯಾಗವನ್ನು ಒಪ್ಪುತ್ತಾರೆ. ಚಳುವಳಿಗಳಿಂದ ಸಂಘಟಿತ ಪ್ರಯತ್ನದಿಂದ ಮಾತ್ರ ಸಾಧಿಸಬಹುದೆಂಬ ನಂಬಿಕೆ ನಿರಂಜನರದು. ವ್ಯಕ್ತಿವಾದಿಯಾಗಿ ಅ. ನ. ಕೃ. ರವರು ಇಡೀ ಪ್ರಗತಿಶೀಲ ಸಾಹಿತ್ಯ ಚಳುವಳಿಯನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿದ್ದು, ಹಿರಿಯೂರಿನ ಪ್ರಗತಿಶೀಲ ಸಾಹಿತ್ಯ ಸಮ್ಮೇಳನಕ್ಕೆ ನಿರಂಜನ, ಬಸವರಾಜ ಕಟ್ಟೀಮನಿ ಮೊದಲಾದವರನ್ನು ಬಿಟ್ಟು ತಮ್ಮ ಹಿತೈಷಿಗಳ ಗುಂಪನ್ನು ಕಟ್ಟಿಕೊಂಡದ್ದನ್ನು ನಿರಂಜನರು ಪ್ರಸ್ತಾಪಿಸುತ್ತಾರೆ.

ಸ್ತ್ರೀ ಮತ್ತು ಜಾತಿಯ ವಿಚಾರಗಳಿಗೆ ಸಂಬಂಧಿಸಿದಂತೆ ಅ. ನ. ಕೃ. ರವರು ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸುತ್ತಾರೆ. ವೇದಗಳ ಕಾಲಘಟ್ಟದಲ್ಲಿ ಸ್ತ್ರೀಯು ಉತ್ತಮ ಸ್ಥಾನಮಾನವನ್ನು ಪಡೆದವಳಾಗಿದ್ದಳೆಂದು, ಅದಕ್ಕೆ ಗಾರ್ಗಿ, ಮೈತ್ರೇಯಿಯವರನ್ನು ಉದಾಹರಿಸುತ್ತಾರೆ. ಭಾರತೀಯ ಪುರುಷ ಪ್ರಧಾನ ಸಮಾಜ ಹೆಣ್ಣನ್ನು ಅಡಿಯಾಳಾಗಿ ಮಾಡಿಕೊಂಡು ತನ್ನ ಏಳ್ಗೆಯನ್ನು ತಾನೇ ನಾಶ ಮಾಡಿಕೊಂಡಿದ್ದಾನೆ ಎಂದು ತಿಳಿಸುತ್ತಾರೆ. ನಿರಂಜನರವರು ಸ್ತ್ರೀ ಶೋಷಣೆ ಎಂಬುದು ಪ್ರಪಂಚದಾದ್ಯಂತ ಇದೆ, ಸ್ತ್ರೀಯನ್ನು ಎಂದೂ ಮನುಷ್ಯ ಸರಿಸಮಾನವಾಗಿ ಕಾಣುವುದಿಲ್ಲವೆಂದು, ಅಧಿಕಾರದ ಯಜಮಾನತನವನ್ನು ಎಂದಿಗೂ ಬಿಟ್ಟು ಕೊಡಲಾರನು ಎಂದು ಚರ್ಚಿಸುತ್ತಾರೆ. ಅದರಂತೆ ಜಾತಿಯ ವಿಚಾರಗಳಿಗೆ ಸಂಬಂಧಿಸಿದಂತೆ ಅಸ್ಪೃಶ್ಯತೆಯ ನಿರ್ಮೂಲನೆಗೆ ಸಂಬಂಧಿಸಿದಂತೆ ಮಹಿಳೆಯಿಂದ ಮಾತ್ರ ಈ ಸಮಸ್ಯೆಗೆ ಪರಿಹಾರವನ್ನು ಕೊಡಬಹುದು ಎಂದು ಅ. ನ. ಕೃ. ತಿಳಿಸಿದರೆ ನಿರಂಜನರು ದಕ್ಷಿಣ ಆಫ್ರಿಕಾದಲ್ಲಿರುವ ಕರಿಯ-ಬಿಳಿಯ ಎಂಬ ವರ್ಣಬೇಧ ನೀತಿಯನ್ನು ಚರ್ಚಿಸುವ ಮೂಲಕ ಭಾರತದಲ್ಲಿ ಮಾತ್ರವಲ್ಲದೆ ಈ ರೀತಿಯು ಪ್ರಪಂಚದಾದ್ಯಂತ

ಇದೆ. ಮನುಷ್ಯ ನಿಜವಾದ ಮಾನವೀಯತೆಯುಳ್ಳ ಮಾನವನಾಗುತ್ತಾನೋ ಅಂದೇ ಈ ಸಮಸ್ಯೆಗಳೆಲ್ಲಾ ಪರಿಹಾರವಾಗುತ್ತವೆ ಎಂದು ಭಾವಿಸುತ್ತಾರೆ. ಸ್ತ್ರೀ ಮತ್ತು ಜಾತಿಯ ವಿಚಾರಗಳಲ್ಲಿ ಅ. ನ. ಕೃ. ಭಾರತೀಯ ಸಾಮಾಜಿಕ ಹಿನ್ನೆಲೆಯಲ್ಲಿ ಸ್ತ್ರೀ ತತ್ವವನ್ನು ಪ್ರತಿಪಾದಿಸುತ್ತಾರೆ. ನಿರಂಜನರವರು ವಿಶ್ವದ ಸ್ತ್ರೀ ವಿಚಾರದೊಂದಿಗೆ ಪ್ರತಿಪಾದಿಸುತ್ತಾರೆ.

ಪ್ರಗತಿಶೀಲ ಕಾಲಘಟ್ಟದ ಮೇಲೆ ಎದ್ದ ದೊಡ್ಡ ಆರೋಪ ಆ ಸಾಹಿತ್ಯವೆಲ್ಲ ಅಶ್ಲೀಲ ಸಾಹಿತ್ಯವೆಂದು ಕರೆಯಲ್ಪಟ್ಟದ್ದು. ನವೋದಯ ಕಾಲಘಟ್ಟದ ಪ್ರಮುಖರು ಹೇಳಿದ ಸಂದರ್ಭದಲ್ಲಿ ಅ. ನ. ಕೃ. ತಮ್ಮ 'ಸಾಹಿತ್ಯ ಮತ್ತು ಕಾಮಪ್ರಚೋದನೆ' ಕೃತಿಯ ಮೂಲಕ, ನಿರಂಜನರವರು ತಮ್ಮ 'ಇದು ಕಾಮಪ್ರಚೋದಕವಲ್ಲ' ವಿಚಾರ ಸಾಹಿತ್ಯದ ಲೇಖನದಲ್ಲಿ ಅಕ್ಬರ್ ಪದ್ಮೂಮಿ ಎಂಬ ಚಿತ್ರಗಾರನ ಚಿತ್ರಗಳ ಹಿನ್ನೆಲೆಯಲ್ಲಿ, ತಿ. ತಾ. ಶರ್ಮರು ತಮ್ಮ 'ಅಶ್ಲೀಲ ಸಾಹಿತ್ಯ' ಲೇಖನದಲ್ಲಿ, ದೊಡ್ಡೇರಿ ವೆಂಕಟಗಿರಿ ರಾಯರು 'ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ಲೈಂಗಿಕ ಶಿಕ್ಷಣದ ಸ್ಥಾನ' ಎಂಬ ಲೇಖನದಲ್ಲಿ ಸಾಹಿತ್ಯದಲ್ಲಿ ಶೀಲ-ಅಶ್ಲೀಲ ವಿವೇಚನೆಗೆ ಸ್ಪಷ್ಟ ಉತ್ತರವನ್ನು ಕೊಡುತ್ತಾರೆ.

ಅ. ನ. ಕೃ. ರವರು ವೀರಶೈವ ಸಾಹಿತ್ಯದ ಪ್ರತಿಪಾದಕರಾದರೆ ನಿರಂಜನರು ವಿಶ್ವ ಸಾಹಿತ್ಯದ ಪ್ರತಿಪಾದಕರಾಗಿದ್ದಾರೆ. ಅ. ನ. ಕೃ. ವೀರಶೈವ ಸಾಹಿತ್ಯದ ಮೂಲಕ ಬಸವಣ್ಣನ ವಿಚಾರಗಳೊಂದಿಗೆ, ಅಲ್ಲಮಪ್ರಭುವಿನ ವಿಚಾರದೊಂದಿಗೆ, ಅಕ್ಕಮಹಾದೇವಿಯ ಆಧ್ಯಾತ್ಮಿಕ ಪ್ರಗತಿ ಮೊದಲಾದವುಗಳನ್ನು ಚರ್ಚಿಸುತ್ತಾರೆ. ನಿರಂಜನರು ವಿಶ್ವದ ವಿವಿಧ ದೇಶಗಳ ಉತ್ತಮ ಬರಹಗಾರರ ಸಾಹಿತ್ಯವೆಲ್ಲಾ ಭಾರತೀಯ ಭಾಷೆಗಳೊಂದಿಗೆ ದೊರೆತು ಆ ಮುಖಾಂತರ ಭಾರತೀಯರಲ್ಲಿ ವಿಶ್ವ ಪ್ರಜ್ಞೆ ಮೂಡಿ ವಿಶ್ವ ಭ್ರಾತೃತ್ವ ಬೆಳೆಯಲು ಸಾಧ್ಯ ಎಂಬ ಭಾವನೆ ವ್ಯಕ್ತಪಡಿಸುತ್ತಾರೆ.

ಸಾಹಿತ್ಯವೆಂಬುದು "ಕಲೆಗಾಗಿ ಕಲೆಯಲ್ಲ, ಬದುಕಿಗಾಗಿ ಕಲೆ" ಎಂಬ ಪ್ರಗತಿಶೀಲ ಪಂಥದ ವಿಚಾರಧಾರೆಗಳನ್ನು ಸ್ಪಷ್ಟಪಡಿಸುತ್ತಾರೆ. ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯದೊಂದಿಗೆ ಪ್ರಗತಿಶೀಲ ಕಾಲಘಟ್ಟದ ವಿಚಾರಸಾಹಿತ್ಯವು ಕೂಡಾ ಸಾಹಿತ್ಯವೆಂಬುದು ಮಾನವ ಬದುಕಿಗೆ ಸಂಬಂಧಿಸಿದ್ದು ಎಂಬ ಮಾತನ್ನು ಒಪ್ಪುತ್ತಾರೆ. ಆ ಮೂಲಕ ಕಲೆಗಾಗಿ ಕಲೆ ಎಂಬ ತತ್ವವನ್ನು ಪಾಲಿಸಿದ ನವ್ಯ ಸಾಹಿತ್ಯವನ್ನು ಜನತೆಯಿಂದ ವಿಮುಖವಾದ ಸಾಹಿತ್ಯವಾಗಿ ಇದೇ ಕಾರಣವಾಗಿ ಅ. ನ. ಕೃ. ಮತ್ತು ನಿರಂಜನರು ನೋಡುತ್ತಾರೆ.

ಪ್ರಗತಿಶೀಲ ಸಾಹಿತ್ಯ ಎಂಬುದು ಪಂಥವಲ್ಲ. ಅದೊಂದು ಮನೋಧರ್ಮವಾಗಿದೆ ಎಂಬ ವಿಚಾರವು ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯದ ಫಲಿತಗಳಲ್ಲಿ ಒಂದಾಗಿದೆ. ಅದೇ ನಿಲುವನ್ನು ಪ್ರಗತಿಶೀಲ ಕಾಲಘಟ್ಟದ ವಿಚಾರ ಸಾಹಿತ್ಯವು ಧ್ವನಿಸುತ್ತದೆ. ಬಸವರಾಜ ಕಟ್ಟೀಮನಿಯವರು ನವೋದಯದ ಸಾಹಿತಿಗಳಲ್ಲಿ ಒಬ್ಬರಾದ ಕುವೆಂಪುರವರನ್ನು ಪ್ರಗತಿಶೀಲರಾಗಿ ಗುರುತಿಸುವುದು. ನಿರಂಜನರು ಕೂಡಾ ಕುವೆಂಪುರವರು ಸರಳ ವಿವಾಹಕ್ಕಾಗಿ ತಂದ 'ಮಂತ್ರ ಮಾಂಗಲ್ಯ ಪದ್ಧತಿ' ಇದನ್ನು ಕೂಡಾ ಅವರ ಪ್ರಗತಿಶೀಲ ಧೋರಣೆಯಾಗಿ ನೋಡುತ್ತಾರೆ. ಬಂಡಾಯ ಸಾಹಿತ್ಯ ಚಳುವಳಿಯನ್ನು ನಿರಂಜನರು ಪ್ರಗತಿಶೀಲತೆಯ ಮತ್ತೊಂದು ಭಾಗವಾಗಿ ನೋಡುತ್ತಾರೆ.

ಅ. ನ. ಕೃ. ತಮ್ಮ ವಿಚಾರ ಸಾಹಿತ್ಯದಲ್ಲಿ ಆದರ್ಶವನ್ನು ಪ್ರತಿಪಾದಿಸಿದರೆ, ನಿರಂಜನರವರು ವಾಸ್ತವವನ್ನು ಪ್ರತಿಪಾದಿಸುತ್ತಾರೆ. ಅ. ನ. ಕೃ. ರವರು ಕಲೆ, ಚಿತ್ರಕಲೆ, ನಾಟಕ, ಸಂಗೀತ ಇವೆಲ್ಲವೂ ಆದರ್ಶವಾಗಿರಬೇಕೆಂದು ಮತ್ತು ಭಾರತೀಯ ಕಲೆಗಳು ಆದರ್ಶವಾಗಿಯೇ ಬೆಳೆದಿವೆ ಎಂದು ತಿಳಿಸುತ್ತಾರೆ. ನಿರಂಜನರು ಯಾವುದೇ ಕಲೆಯಾದರೂ ಅದು ವಾಸ್ತವ ಬದುಕಿನೊಂದಿಗೆ ಸಂಬಂಧವನ್ನು ಹೊಂದಿರಬೇಕು, ಯಾವ ಕಲೆಗಳು ವಾಸ್ತವ ಬದುಕಿನಿಂದ ದೂರವಾಗುತ್ತವೆಯೋ ಆ ಕಲೆಗಳು ಅವನತಿಯ ಹಾದಿಯನ್ನು ಹಿಡಿದವುಗಳಾಗಿ ನೋಡುತ್ತಾರೆ. ಹೀಗೆ ಯಾವುದೇ ಕಲೆಗಳು ವಾಸ್ತವ ಬದುಕಿನೊಂದಿಗೆ, ಜನತೆಯೊಂದಿಗೆ ಇರಬೇಕು. ಹೀಗೆ ಇರುವುದರಿಂದ ಅವು ಬಹುಕಾಲ ಉಳಿಯುತ್ತವೆ ಎಂಬ ದೃಷ್ಟಿ ನಿರಂಜನರದ್ದು.

ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯವು ಸೃಜನಶೀಲ ಸಾಹಿತ್ಯವನ್ನು ಸೃಷ್ಟಿಸಲು ಸಾಹಿತಿಗೆ ಜೀವನಾನುಭವ, ಸಾಮಾಜಿಕ ಹೊಣೆಗಾರಿಕೆ ಮತ್ತು ಖಚಿತವಾದ ಸೈದ್ಧಾಂತಿಕತೆಯೂ ಇರಬೇಕೆಂದು ಪ್ರತಿಪಾದಿಸುತ್ತದೆ. ಈ ಮೂರು ವಿಚಾರಗಳು ಯಾವ ಲೇಖಕನಲ್ಲಿ ಇರುತ್ತವೆಯೋ ಆತನ ಕೃತಿಗಳು ಜನತಾಮುಖಿಯಾಗಿರುತ್ತವೆ. ಇವು ಸಮಾಜವನ್ನು ಪ್ರಭಾವಿಸಿ ಅನೇಕ ಬದಲಾವಣೆಗಳನ್ನು ಸಮಾಜದಲ್ಲಿ ತರಲು ಸಾಧ್ಯವಾಗುತ್ತದೆ.

ಕರ್ನಾಟಕ ಏಕೀಕರಣ ಪರ ಒಲವು ಅ. ನ. ಕೃ. ಮತ್ತು ನಿರಂಜನರವರ ವಿಚಾರ ಸಾಹಿತ್ಯದಲ್ಲಿದೆ. ಏಕೀಕರಣಕ್ಕೆ ಇರುವ ಅಡ್ಡಿ ಆತಂಕಗಳನ್ನು, ಏಕೀಕರಣವಾಗುವ ಮೂಲಕ ಕರ್ನಾಟಕ ರಾಜ್ಯಕ್ಕೆ ಸಾಹಿತ್ಯ, ಕಲೆ, ಸಂಸ್ಕೃತಿ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮೊದಲಾದವುಗಳು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಏಕೀಕರಣ ವಿರೋಧಿ ಮನಃಸ್ಥಿತಿಗೆ ತಮ್ಮ ವಿಚಾರ ಸಾಹಿತ್ಯದ ಮೂಲಕ ಕರ್ನಾಟಕ ಏಕೀಕರಣದ ಅಗತ್ಯತೆಯನ್ನು ಬಿಡಿಬಿಡಿಯಾಗಿ ಉತ್ತರಿಸುತ್ತಾರೆ.

ವ್ಯಕ್ತಿ ಚಿತ್ರಣ ಮತ್ತು ಜೀವನ ಚರಿತ್ರೆಗಳನ್ನು ಬರೆಯುವಾಗ ಕೆಲವೊಮ್ಮೆ ವೈಭವೀಕರಿಸಿ ಬರೆಯುವ ಬರಹಗಾರರನ್ನು ಕಾಣಬಹುದು. ಆದರೆ ಅ. ನ. ಕೃ. ಮತ್ತು ನಿರಂಜನರ ವಿಚಾರಗಳಲ್ಲಿ ವ್ಯಕ್ತಿ ಚಿತ್ರಣವಿದೆಯೇ ಹೊರತು ವ್ಯಕ್ತಿ ಪೂಜೆಗಳಿಲ್ಲ. ಕನ್ನಡ ನಾಡಿನ ಸಾಹಿತ್ಯ, ಸಂಗೀತ, ನಾಟಕ, ಚಿತ್ರಕಲೆ ಮೊದಲಾದ ಕಲೆಗಳ ಮೂಲಕ ಕನ್ನಡ ನಾಡಿಗೆ ಸೇವೆ ಸಲ್ಲಿಸಿದ ಮಹನೀಯರುಗಳ ವ್ಯಕ್ತಿ ಚಿತ್ರಣವನ್ನು ನೀಡುತ್ತಾರೆ ಹೊರತು ವ್ಯಕ್ತಿ ಪೂಜೆಯನ್ನು ಮಾಡುವುದಿಲ್ಲ. ಹಾಗೆಯೇ ಸಂದರ್ಶನಗಳಲ್ಲಿ ತಮ್ಮ ವಿಚಾರಗಳನ್ನು, ತಾತ್ವಿಕತೆಯನ್ನು, ಸೈದ್ಧಾಂತಿಕತೆಯನ್ನು ಸ್ವ ವಿಮರ್ಶೆಗೆ ಅ. ನ. ಕೃ. ಮತ್ತು ನಿರಂಜನರವರು ಒಳಪಡಿಸಿದ್ದಾರೆ.

ಅನುಬಂಧಗಳು

೧. ಪ್ರಧಾನ ಆಕರಗಳು

೨. ಪರಾಮರ್ಶನ ಗ್ರಂಥಗಳು

೧. ಪ್ರಧಾನ ಆಕರಗಳು

ಅ. ನ. ಕೃ. ರವರ ವಿಚಾರ ಸಾಹಿತ್ಯ ಕೃತಿಗಳು

೧. ಶ್ರೀ ಬಸವಣ್ಣನವರ ಅಮೃತವಾಣಿ – ಪ್ರದೀಪ ಪ್ರಕಾಶನ, ಬೆಂಗಳೂರು, ೧೯೮೧ (ಮೊದಲ ಮುದ್ರಣ).

೨. ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ – ವಿಕ್ರಂ ಪ್ರಕಾಶನ, ಬೆಂಗಳೂರು, ೨೦೦೪ (ಮೊದಲ ಮುದ್ರಣ).

೩. ಸಾಹಿತ್ಯ ಮತ್ತು ಕಾಮಪ್ರಚೋದನೆ – ಸಾಗರ್ ಪ್ರಕಾಶನ, ಬೆಂಗಳೂರು, ೨೦೦೪ (ಮೊದಲ ಮುದ್ರಣ).

೪. ಸಜೀವ ಸಾಹಿತ್ಯ – ಸಾಗರ್ ಪ್ರಕಾಶನ, ಬೆಂಗಳೂರು, ೨೦೦೬ (ಎರಡನೇ ಮುದ್ರಣ).

೫. ಸಂಸ್ಕೃತಿಯ ವಿಶ್ವರೂಪ – ಸಾಗರ್ ಪ್ರಕಾಶನ, ಬೆಂಗಳೂರು, ೨೦೦೬ (ಎರಡನೇ ಮುದ್ರಣ).

೬. ಸಾಹಿತ್ಯ ಮತ್ತು ಜೀವನ – ಸಾಗರ್ ಪ್ರಕಾಶನ, ಬೆಂಗಳೂರು, ೨೦೦೬ (ಎರಡನೇ ಮುದ್ರಣ).

೭. ಚಿತ್ರಕಲೆ – ಸಾಗರ್ ಪ್ರಕಾಶನ, ಬೆಂಗಳೂರು, ೨೦೦೬ (ಎರಡನೇ ಮುದ್ರಣ).

೮. ಸಮದರ್ಶನ – ಸಾಗರ್ ಪ್ರಕಾಶನ, ಬೆಂಗಳೂರು, ೨೦೦೬ (ಎರಡನೇ ಮುದ್ರಣ).

೯. ನಾಟಕ ಕಲೆ – ಸಾಗರ್ ಪ್ರಕಾಶನ, ಬೆಂಗಳೂರು, ೨೦೦೬ (ಮೂರನೇ ಮುದ್ರಣ).

೧೦. ಕರ್ನಾಟಕದ ಹಿತಚಿಂತನೆ – ಸಾಗರ್ ಪ್ರಕಾಶನ, ಬೆಂಗಳೂರು, ೨೦೦೬ (ಎರಡನೇ ಮುದ್ರಣ).

೧೧. ಸಾಹಿತ್ಯ ಸಮಾರಾಧನೆ – ಸಾಗರ್ ಪ್ರಕಾಶನ, ಬೆಂಗಳೂರು, ೨೦೦೬ (ಎರಡನೇ ಮುದ್ರಣ).

೧೨. ಹೊಸಹುಟ್ಟು – ಸಾಗರ್ ಪ್ರಕಾಶನ, ಬೆಂಗಳೂರು, ೨೦೦೬ (ಎರಡನೇ ಮುದ್ರಣ).

೧೩.	ನಿಡುಮಾಮಿಡಿ ಸನ್ನಿಧಿಯವರು	–	ಸಾಗರ್ ಪ್ರಕಾಶನ, ಬೆಂಗಳೂರು, ೨೦೦೭ (ಎರಡನೇ ಮುದ್ರಣ).
೧೪.	ಭಾರತೀಯ ಚಿತ್ರ ಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ	–	ಸಾಗರ್ ಪ್ರಕಾಶನ, ಬೆಂಗಳೂರು, ೨೦೦೭ (ಎರಡನೇ ಮುದ್ರಣ)
೧೫.	ಕರ್ನಾಟಕದ ಕಲಾವಿದರು (ಭಾಗ ೧ ಮತ್ತು ಭಾಗ ೨)	–	ಸಾಗರ್ ಪ್ರಕಾಶನ, ಬೆಂಗಳೂರು, ೨೦೦೭ (ಎರಡನೇ ಮುದ್ರಣ).
೧೬.	ಸಾಹಿತ್ಯ ಮತ್ತು ಯುಗಧರ್ಮ	–	ಸಾಗರ್ ಪ್ರಕಾಶನ, ಬೆಂಗಳೂರು, ೨೦೦೭ (ಎರಡನೇ ಮುದ್ರಣ).
೧೭.	ಕೈಲಾಸಂ	–	ಸಾಗರ್ ಪ್ರಕಾಶನ, ಬೆಂಗಳೂರು, ೨೦೦೮ (ಮೂರನೇ ಮುದ್ರಣ).
೧೮.	ಸಾರ್ಥಕ ಸಾಹಿತ್ಯ	–	ಸಾಗರ್ ಪ್ರಕಾಶನ, ಬೆಂಗಳೂರು, ೨೦೦೮ (ಎರಡನೇ ಮುದ್ರಣ).
೧೯.	ಕನ್ನಡದ ದಾರಿ ಮತ್ತು ಅಖಂಡ ಕರ್ನಾಟಕ	–	ಸಾಗರ್ ಪ್ರಕಾಶನ, ಬೆಂಗಳೂರು, ೨೦೦೮ (ಎರಡನೇ ಮುದ್ರಣ).
೨೦.	ನನ್ನನ್ನು ನಾನೇ ಕಂಡೆ	–	ಸಾಗರ್ ಪ್ರಕಾಶನ, ಬೆಂಗಳೂರು, ೨೦೧೦ (ಮೂರನೇ ಮುದ್ರಣ).
೨೧.	ಅ. ನ. ಕೃಷ್ಣರಾಯ ಸಾಹಿತ್ಯ ಶ್ರೇಣಿ ಸಂಪುಟ ೭ (ವ್ಯಕ್ತಿಚಿತ್ರಗಳು, ಹರಟೆ)	–	(ಸಂ. ಕೃಷ್ಣರಾಯ, ಶಾ. ಮಂ.) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧ (ಮೊದಲ ಮುದ್ರಣ)
೨೨.	ಅ. ನ. ಕೃಷ್ಣರಾಯ ಸಾಹಿತ್ಯ ಶ್ರೇಣಿ ಸಂಪುಟ ೩ (ಬಳ್ಳಾರಿಯ ಸಮಸ್ಯೆ ಮತ್ತು ಕರ್ನಾಟಕ ಪ್ರಾಂತ್ಯ)	–	(ಸಂ. ಕೃಷ್ಣರಾಯ, ಶಾ. ಮಂ.) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧ (ಮೊದಲ ಮುದ್ರಣ)
೨೩.	ಕನ್ನಡ ಕುಲರಸಿಕರು	–	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೪ (ಮೊದಲ ಮುದ್ರಣ).

ನಿರಂಜನರವರ ವಿಚಾರ ಸಾಹಿತ್ಯ ಕೃತಿಗಳು

೧.	ಸಾಧನಾ	–	ಪುರೋಗಾಮಿ ಪ್ರಕಾಶನ, ಬೆಂಗಳೂರು, ೧೯೫೩ (ಮೊದಲ ಮುದ್ರಣ).
೨.	ಐದು ನಿಮಿಷ	–	ಪುರೋಗಾಮಿ ಪ್ರಕಾಶನ, ಬೆಂಗಳೂರು, ೧೯೫೩ (ಮೊದಲ ಮುದ್ರಣ).
೩.	ಪುಷ್ಪಹಾರ	–	ಯು. ಆರ್. ಶೆಣೈ ಆಂಡ್ ಸನ್ಸ್, ಮಂಗಳೂರು, ೧೯೫೭ (ಮೊದಲ ಮುದ್ರಣ).
೪.	ಕಾಲಕ್ಷೇಪ	–	ಯು. ಆರ್. ಶೆಣೈ ಆಂಡ್ ಸನ್ಸ್, ಮಂಗಳೂರು, ೧೯೫೭ (ಮೊದಲ ಮುದ್ರಣ).
೫.	ಹಿಮಾಲಯದ ದಳ್ಳುರಿ	–	ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೬೨ (ಮೊದಲ ಮುದ್ರಣ).
೬.	ಅಂಕಣ	–	ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೭೨ (ಮೊದಲ ಮುದ್ರಣ)
೭.	ರಾಜಧಾನಿಯಿಂದ	–	ರಶ್ಮಿ ಪ್ರಕಾಶನ, ಬೆಂಗಳೂರು, ೧೯೭೨ (ಮೊದಲ ಮುದ್ರಣ).
೮.	ದಿನಚರಿಯಿಂದ	–	ರಶ್ಮಿ ಪ್ರಕಾಶನ, ಬೆಂಗಳೂರು, ೧೯೭೨ (ಮೊದಲ ಮುದ್ರಣ).
೯.	ಮುಖತಃ	–	(ಸಂ. ಸೀಮಂತಿನೀ ನಿರಂಜನ) ಸ್ಪಂದನ ಪ್ರಕಾಶನ, ಬೆಂಗಳೂರು, ೧೯೮೫ ಮಾರ್ಚ್ (ಮೊದಲ ಮುದ್ರಣ).
೧೦.	ನಡೆ ಚೆನ್ನ – ನುಡಿ ಚೆನ್ನ (ವ್ಯಕ್ತಿ ಚಿತ್ರಗಳು)	–	ಲಲಿತ ಪ್ರಕಾಶನ, ಪುತ್ತೂರು, ದಕ್ಷಿಣ ಕನ್ನಡ, ೧೯೮೬ (ಮೊದಲ ಮುದ್ರಣ).

೧೧. ನಿರಂಜನ ವಾಚಿಕೆ ಪ್ರತಿಧ್ವನಿಯ ಈ ಪುಸ್ತಕ ಓದಿದ್ದೀರಾ? ಎಂಬ ಲೇಖನ – ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೭ ಅಕ್ಟೋಬರ್ (ಮೊದಲ ಮುದ್ರಣ).

೧೨. ನಾಡಿ: ನಿರಂಜನರ ಆಯ್ದ ಪತ್ರಗಳು – (ಸಂ. ಸೀಮಂತಿನೀ ನಿರಂಜನ, ತೇಜಸ್ವಿನಿ ನಿರಂಜನ), ಕರ್ನಾಟಕ ಸಂಘ, ಪುತ್ತೂರು, ದಕ್ಷಿಣ ಕನ್ನಡ, ೧೯೯೪ (ಮೊದಲ ಮುದ್ರಣ).

೧೩. ಬುದ್ಧಿ ಭಾವ ಬದುಕು – (ಸಂ. ಸೀಮಂತಿನೀ ನಿರಂಜನ), ಡಿ. ವಿ. ಕೆ. ಮೂರ್ತಿ ಪ್ರಕಾಶನ, ಮೈಸೂರು, ೨೦೦೯ (ಮೂರನೇ ಮುದ್ರಣ).

೨. ಪರಾಮರ್ಶನ ಗ್ರಂಥಗಳು

೧. ಅನುಪಮಾ ನಿರಂಜನ, ೨೦೧೧, ನೆನಪು : ಸಿಹಿಕಹಿ (ಆತ್ಮಕಥಾನಕ), ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

೨. ಅನುಪಮಾ ನಿರಂಜನ, ೨೦೦೮, ಸಾಹಿತ್ಯ ಮತ್ತು ಪ್ರಗತಿ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

೩. ಅನುರಾಧ ಕೆ.ಪಿ., ೨೦೧೫, ನಿರಂಜನ ಮತ್ತು ಪ್ರಗತಿಶೀಲ ಸಾಹಿತ್ಯ (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಅರ್ತಿಕಜೆ ವಿ.ಬಿ, ೨೦೦೩, ಹೀಂಗೊಂದು ವೃತ್ತಾಂತ, ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು.

೫. ಅಮೂರ, ಜಿ.ಎಸ್., ೧೯೮೭, ಅ.ನ.ಕೃಷ್ಣರಾಯ, ಸಾಹಿತ್ಯ ಅಕಾಡಮಿ, ನವದೆಹಲಿ.

೬. ಅಮೂರ, ಜಿ. ಎಸ್., ೨೦೦೮, ನಿಮಿತ್ತ – ಅನಿಮಿತ್ತ: ವ್ಯಕ್ತಿ ವಿಚಾರ ವಿಮರ್ಶೆ (ನೂರೊಂದು ಲೇಖನಗಳು), ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೭. ಅಮೂರ, ಜಿ.ಎಸ್. ೨೦೦೭, ಸಮಾರಾಧನ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೮. ಅಮೂರ ಜಿ.ಎಸ್. (ಸಂ), ೨೦೦೬, ಶ್ರೀರಂಗ ಸಾರಸ್ವತ ಸಂಪುಟ ೧೦ (ಸಾಹಿತ್ಯಚಿಂತನ), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೯. ಅಮೂರ ಜಿ.ಎಸ್. (ಸಂ), ೨೦೦೭, ಶ್ರೀರಂಗ ಸಾರಸ್ವತ ಸಂಪುಟ ೧೧, (ಚರಿತ್ರೆ, ಆತ್ಮಚರಿತ್ರೆ), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೦. ಅಮೂರ ಜಿ.ಎಸ್. (ಸಂ), ೨೦೦೭, ಶ್ರೀರಂಗ ಸಾರಸ್ವತ ಸಂಪುಟ ೧೨ (ವೈಚಾರಿಕ ಪ್ರಬಂಧ, ಅಂಕಣ ಬರಹ), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೧. ಈಶ್ವರ ಭಟ್ಟ ಬೋಳಂತಕೋಡಿ (ಸಂ), ೧೯೮೬, ನಿರಂಜನ ಅಭಿನಂದನ, ಕರ್ನಾಟಕ ಸಂಘ, ಪುತ್ತೂರು, ದಕ್ಷಿಣ ಕನ್ನಡ.

೧೨. ಉಮಾ ಎನ್. ೨೦೦೫, ನಿರಂಜನರ ಕಾದಂಬರಿಗಳಲ್ಲಿ ಸಾಮಾಜಿಕ ನಿಲುವು, ಕನಕ ಸಾಹಿತ್ಯ ಪ್ರತಿಷ್ಠಾನ (ರಿ), ಬೆಂಗಳೂರು.

೧೩. ಕೀರ್ತಿನಾಥ ಕುರ್ತುಕೋಟಿ, ೨೦೦೭, ಉರಿಯನಾಲಗೆ, ಕುರ್ತುಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ.

೧೪. ಕೃಷ್ಣರಾಯ, ಶಾ.ಮಂ. (ಸಂ), ೧೯೭೨, ಚಿರಚೇತನ, ವಿಶ್ವಭಾರತೀ ಪ್ರಕಾಶನ, ಸಾಹಿತ್ಯ ಮಂದಿರ, ಖಾತೆವಾಡ, ಗೋವಾ.

೧೫. ಕೃಷ್ಣರಾಯ, ಶಾ.ಮಂ. (ಸಂ), ೨೦೦೮, ಅಮರ ಚೇತನ, ಸಾಗರ್ ಪ್ರಕಾಶನ, ಬೆಂಗಳೂರು.

೧೬. ಕೃಷ್ಣರಾಯ, ಶಾ.ಮಂ. (ಸಂ), ೨೦೦೭, ರಸಚೇತನ, ಹೇಮಂತ ಸಾಹಿತ್ಯ, ಬೆಂಗಳೂರು.

೧೭. ಕೃಷ್ಣರಾಯ ಅ. ನ., ೧೯೯೪, ಬರಹಗಾರನ ಬದುಕು, ವಿಶ್ವಭಾರತಿ ಪ್ರಕಾಶನ, ಮಡಗಾಂವ್, ಗೋವಾ.

೧೮. ಕೃಷ್ಣರಾಯ ಅ. ನ. (ಸಂ), ೧೯೪೪, ಪ್ರಗತಿಶೀಲ ಸಾಹಿತ್ಯ, ಪ್ರಗತಿಶೀಲ ಲೇಖಕರ ಸಂಘ, ಬೆಂಗಳೂರು.

೧೯. ಕೃಷ್ಣರಾಯ ನಾಡಿಗೇರ, ೧೯೭೨, ರಾಷ್ಟ್ರಪತಿ ವಿ.ವಿ.ಗಿರಿ, ಹಂಸಧ್ವನಿ ಪ್ರಕಾಶನ, ಬೆಂಗಳೂರು.

೨೦. ಕೃಷ್ಣರಾಯ, ಶಾ.ಮಂ. ೨೦೧೦, ಅ.ನ.ಕೃ. ನಿರ್ಮಾಣ ಪ್ರಶಸ್ತಿ ಪುರಸ್ಕೃತ ಪ್ರತಿಭಾವಂತರು, ಸಾಗರ್ ಪ್ರಕಾಶನ, ಬೆಂಗಳೂರು.

೨೧. ಗಾಯತ್ರಿ ಎನ್. ೨೦೦೪, ಮುಖಾಮುಖಿ, ಸಿ.ಎ.ಜಿ. ಪಬ್ಲಿಕೇಷನ್ ಬೆಂಗಳೂರು.

೨೨. ಗುಂಡುರಾವ್ ವೈ.ಎನ್. ಕೃಷ್ಣ ಸುಬ್ಬರಾವ್ (ಸಂ), ೨೦೦೭, ಬೆಸ್ಟ್ ಆಫ್ ನಾಡಿಗೇರ್ ನಗೆ ಲೇಖನಗಳು, ಅಂಕಿತ ಪುಸ್ತಕ, ಬೆಂಗಳೂರು.

೨೩. ಗೋಕಾಕ್ ವಿ.ಕೃ, ೧೯೪೪, ಸಾಹಿತ್ಯದಲ್ಲಿ ಪ್ರಗತಿ, ಸಾಧನಾ ಮುದ್ರಣಾಲಯ ಧಾರವಾಡ.

೨೪. ಗೋವಿಂದರಾಜು ಗಿರಡ್ಡಿ (ಸಂ), ೧೯೯೯, ವಿಚಾರ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು.

೨೫. ಗೋವಿಂದರಾಜು ಗಿರಡ್ಡಿ, ೨೦೧೧, ಸಮಗ್ರ ಸೃಜನ (ಸಂಪುಟ ೨), ಸಪ್ನ ಬುಕ್ ಹೌಸ್, ಬೆಂಗಳೂರು.

೨೬. ಗೋವಿಂದರಾಜು ಸಿ.ಆರ್. ೨೦೦೬, ಕರ್ನಾಟಕ ಏಕೀಕರಣ ಚಳುವಳಿ ಮತ್ತು ಕನ್ನಡ ಸಾಹಿತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೨೭. ಗೌರಿ ಸುಂದರ್ (ಸಂ), ೨೦೧೫, ಅನಕೃ ಕಾದಂಬರಿಗಳ ಕುರಿತು, ಸುಂದರ ಪ್ರಕಾಶನ, ಬೆಂಗಳೂರು.

೨೮. ಗೌರೀಶ್ ಕಾಯ್ಕಿಣಿ, ೧೯೯೨, ಗೌರೀಶ್ ಕಾಯ್ಕಿಣಿ ಸಮಗ್ರ ಸಾಹಿತ್ಯ ಸಂಪುಟ ೧, ರಾಘವೇಂದ್ರ ಪ್ರಿಂಟರ್ಸ್, ಕಾರವಾರ.

೨೯. ಚಂದ್ರ ಪೂಜಾರಿ ಎ., ೨೦೦೯, ಸಂಶೋಧನೆ ಏನು? ಏಕೆ? ಹೇಗೆ?, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೦. ಚೆನ್ನವೀರ ಕಣವಿ, ೧೯೭೭, ಸಾಮಾಹಿತ, ವಿದ್ಯಾವಾಹಿನಿ ಪ್ರಕಾಶನ, ಗದಗ.

೩೧. ತರಾಸು, ೨೦೧೧, ಅನಕೃ, ಹೇಮಂತ ಸಾಹಿತ್ಯ, ಬೆಂಗಳೂರು.

೩೨. ತಾರಿಣಿ ಶುಭದಾಯಿನಿ ಆರ್., ೨೦೧೩, ಸಾಮಯಿಕ (ಸಾಹಿತ್ಯ-ಸಂಸ್ಕೃತಿಗಳ ಕುರಿತು ವಿಮರ್ಶೆ ಹಾಗೂ ವೈಚಾರಿಕ ಬರಹಗಳು), ಸಪ್ನ ಬುಕ್ ಹೌಸ್, ಬೆಂಗಳೂರು.

೩೩. ಧನಂಜಯ ಕುಂಬ್ಳೆ, ೨೦೧೫, ಪ್ರಗತಿಪಥ ತೋರಿದ ಸೃಜನಶೀಲ ಚಿಂತಕ ನಿರಂಜನ, ಕನ್ನಡ ಸಂಘ ಕಾಂತಾವರ (ರಿ), ಉಡುಪಿ.

೩೪. ನಂದಾ ಕುಮಾರಸ್ವಾಮಿ, ೨೦೧೬, ಇರುವುದೆಲ್ಲವ ಬಿಟ್ಟು, ಸಂವಹನ, ಶಿವರಾಂಪೇಟೆ, ಮೈಸೂರು.

೩೫. ನಾಯಕ ಹಾ.ಮಾ., ೧೯೯೯, ಭಾರತಧರ್ಮ, (ಸ್ವಾಗತ ಅಂಕಣ ಬರಹಗಳ ಸಂಪುಟ ೨) ತುಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ, ಮೈಸೂರು.

೩೬. ನಾಯಕ ಹಾ.ಮಾ. ೧೯೯೭, ಪುಸ್ತಕ ಸಂಸ್ಕೃತಿ, ಗೀತಾ ಬುಕ್ ಹೌಸ್, ಮೈಸೂರು.

೩೭. ಪಾಟೀಲ ಎಂ.ಎಸ್. ೨೦೦೮, ತ.ರಾ.ಸು. ಸಾಹಿತ್ಯ ಅಕಾಡಮಿ, ನವದೆಹಲಿ.

೩೮. ಪ್ರಭಾಕರ್, ನಾ (ಸಂ) ೧೯೯೭, ಅನಕೃ, ತರಾಸು ಪ್ರತಿಷ್ಠಾನ, ಮೈಸೂರು.

೩೯. ಪ್ರಭಾಕರ್ ನಾ, ೨೦೦೫, ತರಾಸು, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೪೦. ಪ್ರಭಾಕರ್ ನಾ. (ಸಂ), ೧೯೯೭, ತರಾಸು ಕುರಿತು..., ತರಾಸು ಪ್ರತಿಷ್ಠಾನ, ಮೈಸೂರು.

೪೧. ಪ್ರಭಾಕರ್ ನಾ (ಸಂ), ೨೦೦೯, ಸ್ನೇಹಸಮನ್ವಯ, ಹೇಮಂತ ಸಾಹಿತ್ಯ, ಬೆಂಗಳೂರು.

೪೨. ಬಸವರಾಜ ಸಬರದ, ೧೯೯೯, ನಿರಂಜನ, ಪ್ರಸರಾಂಗ, ಮೈಸೂರು ವಿಶ್ವ ವಿದ್ಯಾಲಯ, ಮೈಸೂರು.

೪೩. ಬಸವರಾಜ ಕಟ್ಟಿಮನಿ, ೨೦೧೪, ಬಸವರಾಜ ಕಟ್ಟಿಮನಿ ಸಮಗ್ರ ಸಂಪುಟ ೧೪, ಬಸವರಾಜ ಕಟ್ಟಿಮನಿ ಪ್ರತಿಷ್ಠಾನ, ಬೆಳಗಾವಿ.

೪೪. ಬಾಲಸುಬ್ರಹ್ಮಣ್ಯ ನರಹಳ್ಳಿ, ೨೦೦೬ ಅನಕೃ ಮತ್ತು ಕನ್ನಡ ಸಂಸ್ಕೃತಿ, ಅಂಕಿತ ಪುಸ್ತಕ, ಬೆಂಗಳೂರು.

೪೫. ಮಹಾದೇವಪ್ಪ ಕೊತ್ತಲ, ೨೦೧೧, ಬಸವರಾಜ ಕಟ್ಟಿಮನಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೪೬. ಮಂಜುನಾಥ ಹೆಚ್.ಎಸ್. ೧೯೯೬, ಬಸವರಾಜ ಕಟ್ಟಿಮನಿ, ನಿರಂಜನ ಹಾಗೂ ಚದುರಂಗದ ಕಥೆಗಳ ತೌಲನಿಕ ಅಧ್ಯಯನ (ಅಪ್ರಕಟಿತ), ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೪೭. ಮನೋಹರ ಗ್ರಂಥಾಲಯ (ಸಂ), ೨೦೦೪, ಸಾಹಿತ್ಯದಲ್ಲಿ ವೈಚಾರಿಕತೆ, ಮನೋಹರ ಗ್ರಂಥಾಲಯ, ಧಾರವಾಡ.

೪೮. ಮಹೇಶ್ ಎಂ.ಎನ್. ೨೦೦೯ ತರಾಸು ಸಾಹಿತ್ಯ ಬಂದು ಅಧ್ಯಯನ, ಹೇಮಂತ ಸಾಹಿತ್ಯ, ಬೆಂಗಳೂರು.

೪೯. ಮೂರ್ತಿ ಡಿ. ವಿ.ಕೆ., ೧೯೯೫, ಜೀವನ ಮೌಲ್ಯಗಳು ಮತ್ತು ಸಾಹಿತ್ಯ, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು.

೫೦. ಯಲ್ಲಪ್ಪ ಹಿಮ್ಮಡಿ, ೨೦೧೧, ವಿಚಾರಸಾಹಿತ್ಯ ಮೀಮಾಂಸೆ, ಸುಶಿಲ್ ಪ್ರಕಾಶನ, ತೇರೆದಾಳ.

೫೧. ರಘುಸುತ (ಸಂ), ೧೯೭೬, ನಾಡಿಗೇರ್ ಸಂಭಾವನಾ ಗ್ರಂಥ, ಹೇಮಂತ ಸಾಹಿತ್ಯ ಪ್ರಕಾಶನ, ಬೆಂಗಳೂರು.

೫೨. ರಹಮತ್ ತರೀಕೆರೆ (ಸಂ), ೨೦೧೪, ಸಂಶೋಧನಾ ಮೀಮಾಂಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೩. ರಹಮತ್ ತರೀಕೆರೆ, ೨೦೧೨, ಕನ್ನಡ ಸಾಹಿತ್ಯ ವಾಗ್ವಾದಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೪. ರಾಮಚಂದ್ರನ್ ಸಿ.ಎನ್., ೨೦೧೩, ವಸೋಹತ್ತೋತ್ತರ ಚಿಂತನೆ, ಅಂಕಿತ ಪುಸ್ತಕ, ಬೆಂಗಳೂರು.

೫೫. ರಾಘವೇಂದ್ರ ರಾವ್ ಎಚ್.ಎಸ್. ೧೯೯೦, ಪ್ರಗತಿಶೀಲತೆ, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು.

೫೬. ರಾಮಯ್ಯ, ೨೦೧೩, ಸ್ವಾತಂತ್ರ್ಯೋತ್ತರ ಕನ್ನಡ ವೈಚಾರಿಕ ಸಾಹಿತ್ಯ', ಪ್ರಾತಿನಿಧಿಕ ಮಾದರಿಗಳ ಅಧ್ಯಯನ (ಅಪ್ರಕಟಿತ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೫೭. ರಾಮಕೃಷ್ಣ ಡಿ.ಡಿ. ೨೦೧೧, ಕನ್ನಡದಲ್ಲಿ ವಿಚಾರ ಸಾಹಿತ್ಯ (ಅಪ್ರಕಟಿತ), ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೫೮. ರಾಮಕೃಷ್ಣ ಜಿ. ೧೯೮೦, ಮುನ್ನೋಟ, ಮಾಲೆ ಪ್ರಕಾಶನ, ಬೆಂಗಳೂರು.

೫೯. ವಜ್ರಮಟ್ಟ ಪಿ.ವಿ., ಎಮ್. ಎಮ್. ಬ್ಯಾಲಾಳ (ಸಂ), ೧೯೭೬, ಪ್ರಗತಿಪಂಥ, ಎಸ್. ಎಮ್. ಹುಂಡೇಕಾರ ಪ್ರಕಾಶಕರು, ಬಿಜಾಪುರ.

೬೦. ವನಿತ ಎಂ.ವಿ. ೨೦೧೫, ಎಚ್ಚೆಸ್ಕೆ ಅವರ ಅಂಕಣ ಸಾಹಿತ್ಯ (ಅಪ್ರಕಟಿತ), ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೬೧. ವಿರೂಪಾಕ್ಷಿ ಪೂಜಾರಹಳ್ಳಿ, ೨೦೧೪, ಏಕೀಕರಣ ಚಳವಳಿ ಮತ್ತು ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೨. ವಿವೇಕ ರೈ ಬಿ.ಎ., ೨೦೧೩, ಕನ್ನಡ ನುಡಿ ನಡೆಯ ಬರಹಗಳು, ಸಪ್ನ ಬುಕ್ ಹೌಸ್, ಬೆಂಗಳೂರು.

೬೩. ವಿದ್ಯಾಶಂಕರ ಎಸ್., ಜಿ.ಎಂ. ಹೆಗಡೆ (ಸಂ), ೨೦೦೫, ಸಹೃದಯ ಸಂವಾದ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೬೪. ವಿದ್ಯಾಶಂಕರ್ ಎಸ್., ೨೦೧೧, ಅನಕೃ ಬದುಕು–ಬರಹ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೬೫. ವಿವಿಧ ಲೇಖಕರು, ೧೯೮೭, ಅನಕೃ ಸಾಹಿತ್ಯ ಸಮೀಕ್ಷೆ ಏಳು ಉಪನ್ಯಾಸಗಳು, ಪ್ರಸಾರಾಂಗ, ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ.

೬೬. ವಿವಿಧ ಲೇಖಕರು, ೧೯೯೨, ನಿರಂಜನರ ಸಾಹಿತ್ಯ ಮತ್ತು ಸಮಕಾಲೀನತೆ, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು.

೬೭. ವೆಂಕಟೇಶ್ ಜಿ. ಮಲ್ಲೇಪುರಂ (ಸಂ), ೨೦೦೮, ತೌಲನಿಕ ಸಾಹಿತ್ಯಧ್ಯಯನ ತತ್ವ–ವ್ಯಾಪ್ತಿ–ಜಿಜ್ಞಾಸೆ, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು.

೬೮. ವೆಂಕಟೇಶ್ ಜಿ. ಮಲ್ಲೇಪುರಂ (ಸಂ), ೨೦೦೧, ದೇವುಡು ಲೇಖನ ಸಂಪುಟ, ಸಪ್ನ ಬುಕ್ ಹೌಸ್, ಬೆಂಗಳೂರು.

೬೯. ವೈಕುಂಠರಾಜು, ಬಿ.ವಿ., ೨೦೦೪, ಸಾಹಿತ್ಯ ಸಂವಾದ, ಸನತ್ ಪ್ರಕಾಶನ, ಬೆಂಗಳೂರು.

೭೦. ಶಿರೂರ ಬಿ.ವಿ., ೧೯೯೨, ಸಂಶೋಧನಾ ಸ್ವರೂಪ, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ.

೭೧. ಶಿವಾನಂದ ಎಸ್., ೨೦೧೧, ವಿಮರ್ಶೆಯ ಸವಾಲುಗಳು, ಚಿಂತನ ಪುಸ್ತಕ, ಬೆಂಗಳೂರು.

೭೨. ಶಿವರುದ್ರಪ್ಪ ಜಿ.ಎಸ್. ೧೯೭೭, ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು.

೭೩. ಶಿವರಾಮಕಾರಂತ ಕೆ., ೧೯೬೮, ವಿಚಾರ ಸಾಹಿತ್ಯ ನಿರ್ಮಾಣ, ಕರ್ನಾಟಕ ವಿದ್ಯಾಲಯ, ಧಾರವಾಡ.

೭೪. ಶಿವರುದ್ರಪ್ಪ ಜಿ.ಎಸ್. (ಪ್ರಧಾನ ಸಂಪಾದಕರು), ೧೯೭೭, ವಿಚಾರ ಸಾಹಿತ್ಯ (ಸಂಪುಟ ೧) ಪ್ರಸಾರಾಂಗ, ಜ್ಞಾನ ಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೭೫. ಶ್ರೀನಿವಾಸ ಮೂರ್ತಿ ಕಾ.ವೆಂ. ೨೦೦೩, ನೆಲದ ಕಣ್ಣು (ವಿಚಾರ – ವಿಮರ್ಶೆ) , ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು.

೭೬. ಶ್ರೀಶೈಲ ಆರಾಧ್ಯ ಎಚ್ (ಸಂ), ೧೯೮೫, ಗಿರಿಮಲ್ಲಿಗೆ, ತ.ರಾ.ಸು. ಸ್ಮರಣ ಸಂಪುಟ ಸಮಿತಿ, ಚಿತ್ರದುರ್ಗಾ.

೭೭. ಶರ್ಮ ತಿ.ತಾ., ೧೯೭೦, ವಿಚಾರ ಕರ್ನಾಟಕ, ಪುರೋಗಾಮಿ ಸಾಹಿತ್ಯ ಸಂಘ, ಮಲ್ಲೇಶ್ವರಂ, ಬೆಂಗಳೂರು.

೭೮. ಶರ್ಮ ತಿ.ತಾ., ೨೦೧೧, ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯ (ಜೀವನ ಸಾಧನೆ), ಅಂಕಿತ ಪುಸ್ತಕ, ಬೆಂಗಳೂರು.

೭೯. ಸೀತಾರಾಮಯ್ಯ ಎಂ.ವಿ., ೧೯೮೫, ಸಾಹಿತ್ಯ ಮತ್ತು ಚಿತ್ರಕಲೆ, ರಾಘವ ಪ್ರಕಾಶನ, ಬೆಂಗಳೂರು.

೮೦. ಸುದೀಪ್ ಬಿ.ಎಸ್. ೨೦೧೧, ಅನಕೃ ಕಾದಂಬರಿಗಳ ಸ್ತ್ರೀ ಅಧ್ಯಯನ, ರೂಪ ಪ್ರಕಾಶನ, ಮೈಸೂರು.